ದಾರಿದೀಪ

(ಪ್ರವಾದಿ ವಚನಗಳು ಮತ್ತು ವಿವರಣೆ)

ಡಾ. ಮೌ। ಜಲೀಲ್ ಅಹ್ಸನ್ ನದ್ವಿ

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಸಕಲ ಲೋಕಗಳ ಸೃಷ್ಟಿಕರ್ತನೂ ಒಡೆಯನೂ ಪರಿಪಾಲಕನೂ ಆಗಿರುವ ಅಲ್ಲಾಹನಿಗೆ ಅನನ್ಯ ವಂದನೆಗಳು. ಆತನ ಅಪಾರ ಅನುಗ್ರಹಗಳು ಮಾನವರ ಮಾರ್ಗದರ್ಶನಕ್ಕಾಗಿ ಬಂದ ಎಲ್ಲ ಪ್ರವಾದಿಗಳ ಮೇಲೂ ವಿಶೇಷವಾಗಿ ಅಂತಿಮ ದಿನದ ವರೆಗಿನ ಮಾನವಕೋಟಿಯ ಮಾರ್ಗದರ್ಶನಕ್ಕಾಗಿ ನಿಯೋಗಿಸಲ್ಪಟ್ಟ ಪ್ರವಾದಿ ಮುಹಮ್ಮದ್‌ರ(ಸ) ಮೇಲೂ ಸದಾ ವರ್ಷಿಸುತ್ತಿರಲಿ.

'ದಾರಿದೀಪ' ಎಂಬ ಹೆಸರಿನ ಈ ಹದೀಸ್ ಸಂಕಲನವು ಉಪಭೂಖಂಡದ ಪ್ರಸಿದ್ಧ ವಿದ್ವಾಂಸರಲ್ಲೋರ್ವರಾಗಿದ್ದ ದಿ| ಮೌಲಾನಾ ಜಲೀಲ್ ಅಹ್ಸನ್ ನದ್ವಿಯವರ 'ಸಫೀನಯೆ ನಜಾತ್' (ಮೋಕ್ಷದ ನಾವೆ) ಎಂಬ ಉರ್ದು ಗ್ರಂಥದ ಕನ್ನಡ ಅನುವಾದವಾಗಿದೆ.

ಜೀವನದ ಎಲ್ಲ ರಂಗಗಳಿಗೂ ಅನ್ವಯವಾಗುವಂತಹ ಮೂಲ ಅರಬಿ ಹದೀಸ್‌ಗಳನ್ನು ಆಯ್ದು ಕ್ರಮಬದ್ಧವಾಗಿ ಕ್ರೋಢೀಕರಿಸಿ ಅವುಗಳ ಅರ್ಥ ಹಾಗೂ ಟಿಪ್ಪಣಿಗಳನ್ನು ಗ್ರಂಥಕರ್ತರು ಉರ್ದು ಭಾಷೆಯಲ್ಲಿ ಬರೆದಿದ್ದಾರೆ. ಈ ಸಂಕಲನದಲ್ಲಿ 413 ಶೀರ್ಷಿಕೆಗಳಿಗೆ ಸಂಬಂಧಿಸಿದಂತೆ ಒಟ್ಟು 550 ಹದೀಸ್‌ಗಳನ್ನು ಕ್ರೋಢೀಕರಿಸಲಾಗಿದೆ.

ಇಸ್ಲಾಮ್, ಜಗದೊಡೆಯನಾದ ಅಲ್ಲಾಹನ ಧರ್ಮವಾಗಿದೆ. ಅದನ್ನು ಅಲ್ಲಾಹನು ಮಾನವರ ಮಾರ್ಗದರ್ಶನಕ್ಕಾಗಿ ಪ್ರವಾದಿಗಳ ಮೂಲಕ ಲೋಕಾರಂಭದಿಂದಲೇ ಸಮರ್ಪಿಸುತ್ತಾ ಅಂತಿಮ ಪ್ರವಾದಿ ಮುಹಮ್ಮದ್‌ರ(ಸ) ಮೂಲಕ ಅದನ್ನು ಪರಿಪೂರ್ಣಗೊಳಿಸಿದನು. ಇಸ್ಲಾಮ್ ಧರ್ಮದ ಅನುಸರಣೆಯಿಂದ ಮಾನವನಿಗೆ ಇಹಲೋಕದಲ್ಲಿ ಅತ್ಯುತ್ತಮ ಬದುಕೂ ಪರಲೋಕದ ಶಾಶ್ವತ ಸುಖ ಸೌಭಾಗ್ಯಗಳ ಸ್ವರ್ಗವೂ ಲಭಿಸುವುದು.

ಇಸ್ಲಾಮ್ ಧರ್ಮವನ್ನು ಸರಿಯಾಗಿ ಅರಿತು ಅದರಂತೆ ಬಾಳಬೇಕಾದರೆ ಅಲ್ಲಾಹನ ಅಂತಿಮ ಪ್ರವಾದಿ ಮುಹಮ್ಮದ್‌ರ(ಸ) ನಡೆ-ನುಡಿಗಳನ್ನು ಅರಿತಿರಬೇಕಾದುದು ಅಗತ್ಯ. ಅದನ್ನೇ ಪಾರಿಭಾಷಿಕದಲ್ಲಿ 'ಹದೀಸ್' ಎನ್ನಲಾಗುತ್ತದೆ. ಹದೀಸ್‌ನ ತಿಳುವಳಿಕೆಯಿಲ್ಲದಿದ್ದರೆ ಪವಿತ್ರ ಕುರ್‌ಆನನ್ನು ಗ್ರಹಿಸಲು ಸಾಧ್ಯವಿಲ್ಲ. ಏಕೆಂದರೆ ಪ್ರವಾದಿವರ್ಯರ(ಸ) ಸಂಪೂರ್ಣ ಜೀವನವು ಕುರ್‌ಆನಿನ ಅಧಿಕೃತ ವ್ಯಾಖ್ಯಾನವಾಗಿದೆ. 'ಅಲ್ಲಾಹನ ಸಂದೇಶವಾಹಕರಲ್ಲಿ ನಿಮಗೆ ಅತ್ಯುತ್ತಮ ಮಾದರಿಯಿದೆ' ಎಂಬ ಪವಿತ್ರ ಕುರ್‌ಆನಿನ ವಚನವು ಇದನ್ನೇ ಸೂಚಿಸುತ್ತದೆ.

'ದಾರಿದೀಪ' ಎಂಬ ಈ ಹದೀಸ್ ಸಂಕಲನ ಗ್ರಂಥದಲ್ಲಿ ಮಾನವನ ಮೂಲಭೂತ ವಿಶ್ವಾಸ- ನಂಬಿಕೆಗಳು, ಆರಾಧನಾ ಕ್ರಮಗಳು ಹಾಗೂ ಆತನ ಕೌಟುಂಬಿಕ, ಸಾಮಾಜಿಕ, ಆರ್ಥಿಕ, ರಾಜಕೀಯವೇ ಮೊದಲಾದ ಜೀವನದ ಸಕಲ ರಂಗಗಳಿಗೆ ಮಾರ್ಗದರ್ಶನವಾಗಬಲ್ಲಂತಹ ಹದೀಸ್‌ಗಳನ್ನು ಅಳವಡಿಸಲಾಗಿದೆ. ಜ್ಞಾನದಾಹಿಗಳಿಗೆ ಮತ್ತು ಪ್ರವಾದಿ ಜೀವನವನ್ನು ಅನುಸರಿಸಿ ಜೀವಿಸ ಬಯಸುವವರಿಗೆ ಈ ಗ್ರಂಥವು ಅತ್ಯುತ್ತಮ ಮಾರ್ಗದರ್ಶಿಯಾಗಿದೆ. ಕನ್ನಡ ಜನತೆ ಇದರ ಪೂರ್ಣ ಪ್ರಯೋಜನ ಪಡೆಯುವಂತಾಗಲೆಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

ಅನುಕ್ರಮಣಿಕೆ

1 ಸಂಕಲ್ಪ ಶುದ್ಧಿ. 19

ಮೂಲ ಭೂತ ವಿಶ್ವಾಸಗಳು

2. ಅಲ್ಲಾಹನ ಮೇಲೆ ವಿಶ್ವಾಸ. 25
3. ದೇವಚರರ ಮೇಲೆ ವಿಶ್ವಾಸ. 29
4. ಪ್ರವಾದಿಗಳ ಮೇಲೆ ವಿಶ್ವಾಸ. 29
5. ವಿಧಿಯ ಮೇಲೆ ವಿಶ್ವಾಸ. 34
6. ಅಲ್ಲಾಹನ ಗ್ರಂಥಗಳ ಮೇಲೆ ವಿಶ್ವಾಸ. 39
7. ಪರಲೋಕ ವಿಶ್ವಾಸ. 43
8. ಕಪಟ ವಿಶ್ವಾಸದ ದುಷ್ಪರಿಣಾಮ. 44

ಆರಾಧನೆಗಳು: ನಮಾಝ್

9. ಮಿಸ್ವಾಕ್ (ದಂತ ಮಜ್ಜನ) ಮತ್ತು ಅಲ್ಲಾಹನ ಸಂಪ್ರೀತಿ. 48
10. ವುಝೂ- ಮುಸ್ಲಿಮನ ಗುರುತು. 48
11. ಪೂರ್ಣ ನಮಾಝ್‌ನಿಂದ ಪಾಪ ಮುಕ್ತಿ. 49
12. ನಮಾಝ್‌ನ ಮಹತ್ವ. 50
13. ಪಾಪದ ಬೆಂಕಿಯನ್ನು ಆರಿಸುವ ಸಮಯ. 50
14. ಕಪಟ ನಮಾಝ್. 51
15. ನಮಾಝ್‌ನ ಕಳ್ಳತನ. 51
16. ನಮಾಝನ್ನು ನಾಶ ಪಡಿಸುವವನು. 52
17. ಮಸೀದಿಯೊಂದಿಗೆ ಆಸಕ್ತಿ. 52
18. ಸಾಮೂಹಿಕ ನಮಾಝ್‌ನ ಪುಣ್ಯ. 52
19. ಸಾಮೂಹಿಕ ನಮಾಝ್‌ನ ಪಾಲನೆ. 53
20. ನಮಾಝ್ ಸಂಸ್ಥಾಪಿಸದ ದೋಷ. 54
21. ಸಾಮೂಹಿಕ ನಮಾಝ್: ನಿರ್ಲಕ್ಷ್ಯದ ಪರಿಣಾಮ. 54
22. ಫಜ್ರ್ ಮತ್ತು ಅಸರ್ ನಮಾಝ್‌ಗಳ ಮಹತ್ವ. 55
23. ಇಸ್ಲಾಮೀ ವ್ಯವಸ್ಥೆಯ ಶೈಥಿಲ್ಯ. 56
24. ಮನೆಯಲ್ಲಿ ಐಚ್ಛಿಕ ನಮಾಝ್. 57
25. ಇಮಾಮ್‌ನ ಹೊಣೆ. 58
26. ಸಂಕ್ಷಿಪ್ತ ನಮಾಝ್. 59
27. ಸಂಕ್ಷಿಪ್ತ ಕುರ್‌ಆನ್ ಪಠಣ. 60

ಝುಕಾತ್

28. ಝುಕಾತ್-ಆರ್ಥಿಕ ಸಮತೋಲನಕ್ಕಾಗಿ. 62
29. ಝುಕಾತ್-ಪಾವತಿಸದಿರುವುದರ ದುಷ್ಪರಿಣಾಮ. 62
30. ಝುಕಾತ್-ಪಾವತಿಸದಿದ್ದರೆ ವಿನಾಶ. 63
31. ಧರ್ಮದಲ್ಲಿ ಝುಕಾತ್‌ನ ಮಹತ್ವ. 63
32. ಝುಕಾತ್-ಅಲ್ಲಾಹನ ಹಕ್ಕು. 64
33. ಫಿತ್ರ್ ಝುಕಾತ್. 64
34. ಉಶ್ರ್ ಅಥವಾ ಬೆಳೆಯ ಝುಕಾತ್. 65

ಉಪವಾಸ

35. ಉಪವಾಸ: ದೇಹದ ಝುಕಾತ್ ಆಗಿದೆ. 66
36. ಉಪವಾಸ ಮತ್ತು ತರಾವೀಹ್‌ಗಳ ಪ್ರತಿಫಲ. 66
37. ಉಪವಾಸವನ್ನು ಕೆಡಿಸುವ ವಿಷಯಗಳು. 67
38. ಉಪವಾಸದ ಸ್ಫೂರ್ತಿ. 68
39. ಉಪವಾಸದಲ್ಲಿ ತೋರಿಕೆ. 68
40. ಪ್ರಯಾಣದ ವೇಳೆ ವಿನಾಯಿತಿ. 69
41. ಸಹ್ರಿಯ ಆದೇಶ. 69
42. ಇಫ್ತಾರ್‌ನಲ್ಲಿ ವಿಳಂಬಿಸಬಾರದು. 70
43. ಉಪವಾಸದ ಶಿಫಾರಸು. 70
44. ಉಪವಾಸಗಳ್ಳರ ಗತಿ. 71
45. ರಮಝಾನ್ ಉಪವಾಸದ ಮಹತ್ವ. 72
46. ಪ್ರಾಯಶ್ಚಿತ್ತ. 72
47. ಉಪವಾಸ ಮತ್ತು ಐಚ್ಛಿಕ ಆರಾಧನೆಗಳಲ್ಲಿ ಸಮತೋಲನ. 73
48. ಐಚ್ಛಿಕ ಆರಾಧನೆಗಳಲ್ಲಿ ಸಮತೋಲನ. 75
49. ಈದುಲ್ ಫಿತ್ರ್: ಪುರಸ್ಕಾರದ ದಿನ. 77

ಹಜ್ಜ್

50. ಹಜ್ಜ್: ಕಡ್ಡಾಯ ಕರ್ಮ. 79
51. ಹಜ್ಜ್‌ಗೆ ತ್ವರೆ ಮಾಡಿರಿ. 79
52. ಅತ್ಯುತ್ತಮ ಕರ್ಮ. 80
53. ಯಥಾರ್ಥ ಹಜ್ಜ್. 80
54. ನಿರ್ಲಕ್ಷ್ಯ ಸಲ್ಲದು. 81
55. ಪ್ರಯಾಣ ಪ್ರಾರಂಭಿಸುವುದರೊಂದಿಗೆ ಹಜ್ಜ್‌ನ ಪುಣ್ಯ ಆರಂಭ. 82
56. ಸಮಾನ ಮಹತ್ವ. 82

ಸಾಮಾಜಿಕ ಹಕ್ಕುಗಳು

57. ಹೆತ್ತವರ ಸೇವೆ. 84
58. ತಾಯಿಯ ಹಕ್ಕು. 84
59. ಹೆತ್ತವರ ಮರಣೋತ್ತರ ಹಕ್ಕುಗಳು. 86
60. ಸ್ತನಪಾನ ಸಂಬಂಧಿ ತಾಯಿಯ ಹಕ್ಕು. 87
61. ಪರಧರ್ಮೀಯ ಹೆತ್ತವರು. 87
62. ಚಿಕ್ಕಮ್ಮನ ಸೇವೆ. 88
63. ಗುರುವಿನ ಆದರ. 89
64. ಏಕ ಪಕ್ಷೀಯ ಸದ್ವರ್ತನೆ. 89
65. ದುರ್ವರ್ತನೆಗೆ ಸದ್ವರ್ತನೆ. 90
66. ಮಕ್ಕಳ ತರಬೇತಿ. 90
67. ಉತ್ತಮ ಸಂತಾನ. 92
68. ಹೆಣ್ಮಕ್ಕಳೊಂದಿಗೆ ಸದ್ವರ್ತನೆ. 93
69. ಮಕ್ಕಳ ಮತ್ತು ಮನೆಮಂದಿಯ ತರಬೇತಿ. 94
70. ನಿರಾಶ್ರಿತ ಮಗಳ ಪೋಷಣೆ. 95
71. ಮಕ್ಕಳೊಂದಿಗೆ ಸಮಾನ ವರ್ತನೆ. 96
72. ದುರ್ಬಲರ ಹಕ್ಕು. 97
73. ಅನಾಥರ ಪೋಷಣೆಗೆ ಭವ್ಯ ಪುರಸ್ಕಾರ. 98
74. ಅನಾಥನ ಸೊತ್ತಿನಲ್ಲಿ ರಕ್ಷಕನ ಹಕ್ಕು. 98
75. ಅನಾಥನಿಗೆ ಶಿಕ್ಷೆ. 99
76. ಪತ್ನಿಯರ ಹಕ್ಕುಗಳು 99
77. ಗಯ್ಯಾಳಿ ಪತ್ನಿಯೊಂದಿಗಿನ ವರ್ತನೆ. 100
78. ಪತ್ನಿಯರ ನಡುವೆ ನ್ಯಾಯ ಪಾಲನೆ. 101
79. ಪತ್ನಿಗೆ ವೆಚ್ಚ ನೀಡುವುದು ಪುಣ್ಯದಾಯಕ. 102
80. ಸಂಬಂಧ ಸುಧಾರಣೆಯ ಪ್ರಯತ್ನ. 102

ಪತಿಯ ಹಕ್ಕುಗಳು

81. ಉತ್ತಮ ಪತ್ನಿಯ ಗುಣಗಳು. 103
82. ಐಚ್ಛಿಕ ಆರಾಧನೆಗೆ ಪತಿಯ ಅನುಮತಿ. 104
83. ಕೃತಘ್ನತೆ ಸಲ್ಲದು. 106
84. ಪತ್ನಿಯ ಹೊಣೆಗಾರಿಕೆ. 107
85. ಪತ್ನಿಯ ಹಕ್ಕು. 108
86. ಸ್ತ್ರೀ-ಪುರುಷರಿಗೆ ಸಮಾನ ಪ್ರತಿಫಲ. 109

ನೆರೆಕರೆಯವರ ಹಕ್ಕು

87. ನೆರೆಯವರಿಗೆ ಕಿರುಕುಳ. 112
88. ಹಸಿದ ನೆರೆಯವ. 112
89. ನೆರೆಹೊರೆಯವರಿಗೆ ಸಹಾಯ. 113
90. ನೆರೆಯವರಿಗೆ ಉಡುಗೊರೆ. 113
91. ಪರಲೋಕದಲ್ಲಿ ಪ್ರಥಮ ವಿಚಾರಣೆ. 114
92. ಸದ್ವರ್ತನೆಗೆ ಹೆಚ್ಚು ಅರ್ಹರು. 114
93. ಸ್ವರ್ಗ-ನರಕದ ತೀರ್ಮಾನದಲ್ಲಿ ನೆರೆಯವರ ಪಾತ್ರ. 115
94. ಅತಿಥಿಯ ಹಕ್ಕು. 116

ಬಡವರ ಹಕ್ಕುಗಳು

95. ಬಡವರೊಂದಿಗೆ ಅಲ್ಲಾಹನ ಸಂಬಂಧ. 117
96. ಸತ್ಯವಿಶ್ವಾಸಿ ಬಡವರಿಗೆ ನೆರವು. 118
97. ಸಹಾಯಕ್ಕೆ ಅರ್ಹನಾದ ಬಡವ ಯಾರು?. 118
98. ಸೇವಕರ ಹಕ್ಕು. 119
99. ಗುಲಾಮರನ್ನು ಹಿಂಸಿಸಬಾರದು. 121
100. ಸೇವಕರ ಜೊತೆ ಸೌಜನ್ಯ. 121

ಸಹಯಾತ್ರಿಕರ ಹಕ್ಕುಗಳು

101. ಸಹಯಾತ್ರಿಕರ ಸೇವೆ. 122
102. ಅಗತ್ಯಕ್ಕಿಂತ ಹೆಚ್ಚಿನ ವಸ್ತುಗಳನ್ನು ಸಹಯಾತ್ರಿಕರಿಗೆ ನೀಡುವುದು. 122
103. ಪೈಶಾಚಿಕ ಸವಾರಿ ಮತ್ತು ಮನೆಗಳು. 123
104. ರೋಗಿಯ ಹಕ್ಕು. 124
105. ರೋಗಿ, ಹಸಿದವ ಮತ್ತು ಕೈದಿಯ ಜೊತೆ ಸದ್ವರ್ತನೆ. 125
106. ಮುಸ್ಲಿಮೇತರರ ರೋಗ ಸಂದರ್ಶನ. 125
107. ರೋಗ ಸಂದರ್ಶನದ ಶಿಷ್ಟಾಚಾರಗಳು. 126

ಮುಸ್ಲಿಮರ ಪರಸ್ಪರ ಹಕ್ಕುಗಳು

108. ಜೀವ - ಸೊತ್ತುಗಳ ರಕ್ಷಣೆ. 127
109. ಮುಸ್ಲಿಮನು ಮುಸ್ಲಿಮನ ಕನ್ನಡಿಯಾಗಿರುತ್ತಾನೆ. 128
110. ಕರುಣೆ, ಪ್ರೀತಿ ಮತ್ತು ವಾತ್ಸಲ್ಯ. 129
111. ಬಲಿಷ್ಠ ಸಹೋದರತೆ. 129
112. ಅಕ್ರಮಿ ಮತ್ತು ಮರ್ದಿತನಿಗೆ ನೆರವು. 130
113. ಮಾರಾಟದ ವಸ್ತುವಿನ ಕುಂದುಕೊರತೆಗಳನ್ನು ತಿಳಿಸುವುದು. 130

114. ಸಂಬಂಧ ಮುರಿಯುವ ಗರಿಷ್ಠ ಅವಧಿ. 131
115. ಸಜ್ಜನ ವ್ಯಕ್ತಿಯ ತಪ್ಪು 131
116. ಸಾಮೂಹಿಕ ಚಾರಿತ್ರ್ಯ. 132
117. ಆರು ಹಕ್ಕುಗಳು. 132
118. ಮುಸ್ಲಿಮೇತರ ನಾಗರಿಕರ ಹಕ್ಕುಗಳು. 133
119. ಪ್ರಾಣಿಗಳ ಹಕ್ಕುಗಳು. 134
120. 'ದಿಬಹ್' ಮಾಡುವ ಕ್ರಮ. 135
121. ಪ್ರಾಣಿಗಳ ಮುಖಕ್ಕೆ ಹೊಡೆಯಬಾರದು. 136
122. ಪ್ರಾಣಿಗಳನ್ನು ಪರಸ್ಪರ ಕಾದಾಡಿಸಬಾರದು. 137
123. ಪ್ರಾಣಿಗಳಿಗೆ ಕಿರುಕುಳ ನೀಡಬಾರದು. 137
124. ಪ್ರಾಣಿಗಳನ್ನು ಮಲಗಿಸುವುದಕ್ಕೆ ಮುಂಚೆ ಚೂರಿ ಹರಿತಗೊಳಿಸಬೇಕು. 138
125. ಪ್ರಾಣಿಗಳನ್ನು ಇತರ ಪ್ರಾಣಿಗಳ ಮುಂದೆ 'ದಿಬಹ್' ಮಾಡಬಾರದು. 139
126. ಪ್ರಾಣಿಗಳನ್ನು ಗುರಿಯಾಗಿರಿಸ ಬಾರದು. 139
127. ಪ್ರಾಣಿಗಳ ಕುರಿತು ಸಮಗ್ರ ಬೋಧನೆ. 140

ವ್ಯವಹಾರ

128. ಸ್ವಸಂಪಾದನೆಯ ಮಹತ್ವ. 141
129. ಕಾರ್ಮಿಕನ ಸಂಪಾದನೆ. 141
130. ಪರಿಶ್ರಮದ ಸಂಪಾದನೆ. 141
131. ಪ್ರಾಮಾಣಿಕ ವ್ಯಾಪಾರ. 142
132. ಪ್ರಾಮಾಣಿಕ, ಸತ್ಯಸಂಧ ವ್ಯಾಪಾರಿಯ ಸ್ಥಾನ. 142
133. ವಂಚಕ ವ್ಯಾಪಾರಿಗಳ ದುರ್ಗತಿ. 143
134. ಕುಟಿಲೋಪಾಯದಿಂದ ಸಮೃದ್ಧಿ ನಷ್ಟವಾಗುವುದು. 143
135. ವ್ಯಾಪಾರದ ಲೋಪದೋಷಗಳ ಪ್ರಾಯಶ್ಚಿತ್ತ. 144
136. ಅಕ್ರಮ ದಾಸ್ತಾನು. 145
137. ಅಕ್ರಮ ದಾಸ್ತಾನುಗಾರನ ದುಃಸ್ವಭಾವ. 146
138. ಸರಕಿನ ದೋಷವನ್ನು ವ್ಯಕ್ತಪಡಿಸಬೇಕು. 146
139. ವ್ಯಾಪಾರದಲ್ಲಿ ಮೃದು ನೀತಿ. 147
140. ಕಬಳಿಸುವುದು. 147

ಅಲ್ಲಾಹನ ಕ್ರೋಧಕ್ಕೆ ಪಾತ್ರರಾದವರು

141. ಹೆಚ್ಚಿನ ನೀರನ್ನು ತಡೆದಿರಿಸುವುದು. 148
142. ಕಾರ್ಮಿಕನ ಮಜೂರಿ. 149
143. ಕಾರ್ಮಿಕನ ಪರವಾಗಿ ಅಲ್ಲಾಹನು ವಾದಿಸುವನು. 149

ಅನ್ಯಾಯದ ವಸಿಯ್ಯತ್

144. ಅನ್ಯಾಯದ ವಸಿಯ್ಯತ್‌ನ ದುಷ್ಪರಿಣಾಮ. 150
145. ವಾರೀಸು ಹಕ್ಕಿನ ವಂಚನೆಯ ದುಷ್ಪರಿಣಾಮ. 151
146. ಲೌಕಿಕ ದುಷ್ಪರಿಣಾಮ. 151
147. ವಾರೀಸುದಾರರಿಗೆ ವಸಿಯ್ಯತ್ ಮಾಡಬಾರದು. 152
148. ವಸಿಯ್ಯತ್‌ನ ಕೊನೆಯ ಗಡಿ. 153

ಬಡ್ಡಿ

149. ಬಡ್ಡಿ ವ್ಯವಹಾರ. 154
150. ಬಡ್ಡಿಕೋರನ ದುರ್ಗತಿ. 154
151. ಲಂಚ. 155
152. ಸಂದೇಹಾಸ್ಪದ ವಸ್ತುಗಳನ್ನು ವರ್ಜಿಸಿರಿ. 156
153. ಸಾಲ ನೀಡಲು ಪ್ರೇರಣೆ. 157
154. ಸಾಲ ಮನ್ನಾ. 158
155. ಸಾಲಗಾರನಿಗೆ ಕಾಲಾವಕಾಶ ನೀಡಿದುದರ ಪ್ರತಿಫಲ. 158
156. ಸಾಲ ಮರುಪಾವತಿಗೆ ಮೀನ - ಮೇಷ ಎಣಿಸಬಾರದು. 159
157. ಮೀನ - ಮೇಷ ಎಣಿಸುವವನ ಶಿಕ್ಷೆ. 159
158. ಸಾಲ ಮರುಪಾವತಿಯ ಉತ್ತಮ ರೀತಿ. 160
159. ವಂಚಕನನ್ನು ವಂಚಿಸಬಾರದು. 160
160. ಸಾಲ ಮರುಪಾವತಿಯ ಸಂಕಲ್ಪದ ಪ್ರಭಾವ. 161
161. ಸಾಲಗಾರನಿಗೆ ಕ್ಷಮೆಯಿಲ್ಲ. 161
162. ರೈತನ ದಾನ. 162

ವಿವಾಹ

163. ವಿವಾಹದ ಪ್ರೇರಣೆ. 163
164. ಧರ್ಮನಿಷ್ಠಳನ್ನು ಆರಿಸಿರಿ. 163
165. ಧರ್ಮನಿಷ್ಠರಾದ ಪುರುಷರನ್ನೇ ಆರಿಸಿರಿ. 164
166. ನಿಕಾಹ್‌ನ ಖುತ್ಬಾ (ಪ್ರವಚನ). 165
167. ಮಹ್ರ್ ಕಡ್ಡಾಯ. 167
168. ಸಾಮಾನ್ಯ ಮಹ್ರ್‌ನ ಮಹತ್ವ. 167
169. ಕೆಟ್ಟ ವಲೀಮ. 168
170. ಫಾಸಿಕ್‌ನ ಆಮಂತ್ರಣ. 169
171. ವಂಚನೆಯಲ್ಲಿ ಶೈತಾನನಿಗೆ ಆಕರ್ಷಣೆ. 169

172. ಸಂಪಾದನೆಯು ಇಬಾದತ್ ಆಗಿದೆ. 170
173. ಸಂಪತ್ತು: ನೈಜ ದೃಷ್ಟಿಕೋನ. 171

ಗುಣನಡತೆಗಳು: ದುರ್ಗುಣಗಳು

174. ಅಹಂಭಾವ. 172
175. ದುರಾಸೆ. 173
176. ಕೆಟ್ಟ ವಿಚಾರಗಳನ್ನು ಪ್ರೋಷಿಸಬಾರದು. 173
177. ರಹಸ್ಯವನ್ನು ಪಾಲಿಸಿರಿ. 174
178. ವ್ಯಭಿಚಾರ. 175
179. ವೇಷ ತೊಡಬಾರದು. 175
180. ಸಭೆಯ ಮರ್ಯಾದೆಗಳು. 176
181. ವಸ್ತ್ರಧಾರಣೆ. 177
182. ಅಹಂಭಾವದ ಲಕ್ಷಣ-ದರ್ಪದ ಉಡುಗೆ. 178
183. ನಿರ್ಣಾಯಕ ದಿನ ಮತ್ತು ಅನ್ಯಾಯದ ಕತ್ತಲು. 179
184. ಅಕ್ರಮಿಗೆ ಸಹಕಾರ. 179
185. ಅನ್ಯಾಯದ ದುಷ್ಪರಿಣಾಮ. 180
186. ಮರ್ದಿತನ ಗೋಳು. 181
187. ಕೋಪ 181
188. ಕೋಪಕ್ಕೆ ಮದ್ದು. 182
189. ನಕಲು ಹೊಡೆಯುವುದು. 182
190. ಇತರರ ಸಂಕಷ್ಟದಿಂದ ಸಂತೋಷ ಪಡುವುದು. 183
191. ಸತ್ಯವಿಶ್ವಾಸಿಯ ಚಾರಿತ್ರ್ಯ. 183

ಸುಳ್ಳು

192. ಕಾಪಟ್ಯದ ಲಕ್ಷಣ. 184
193. ಅತಿದೊಡ್ಡ ಸುಳ್ಳು. 184
194. ಅತಿದೊಡ್ಡ ವಂಚನೆ. 185
195. ಮಕ್ಕಳೊಂದಿಗೆ ಸುಳ್ಳು ಹೇಳುವುದು. 185
196. ಮಕ್ಕಳೊಂದಿಗೆ ಸುಳ್ಳು ಹೇಳಬಾರದು. 186
197. ತಮಾಷೆಗಾಗಿ ಸುಳ್ಳಾಡುವುದು. 186
198. ಗೋಮುಖ ವ್ಯಾಘ್ರತೆ. 187
199. ಅಶ್ಲೀಲ ಮಾತು ಮತ್ತು ಬೈಗುಳ. 187
200. ಬೆಂಕಿಯ ನಾಲಗೆಗಳು. 188
201. ಮೃತರನ್ನು ನಿಂದಿಸಬಾರದು. 188

202. ಪರನಿಂದೆ ಮತ್ತು ಅಪವಾದ. 189
203. ಪರನಿಂದೆ ವ್ಯಭಿಚಾರಕ್ಕಿಂತ ಘೋರ ಅಪರಾಧ. 189
204. ಪರನಿಂದೆಯ ಪ್ರಾಯಶ್ಚಿತ್ತ. 190
205. ಅತ್ಯಂತ ಕೆಟ್ಟ ಸ್ಥಿತಿಯಲ್ಲಿರುವವನು. 190
206. ಕೋಮು ಪಕ್ಷಪಾತ. 191
207. ಅಕ್ರಮ ಬೆಂಬಲ ವಿನಾಶಕಾರಿ. 191
208. ಮುಖಸ್ತುತಿಯ ಖಂಡನೆ. 192
209. ಫಾಸಿಕ್‌ನನ್ನು ಹೊಗಳುವುದು. 192
210. ಮುಖಸ್ತುತಿ. 193
211. ಸುಳ್ಳು ಸಾಕ್ಷ್ಯ. 194
212. ತರ್ಕ, ತಮಾಷೆ ಮತ್ತು ವಚನಭಂಗ. 194
213. ವಚನಪಾಲನೆಯ ಸಂಕಲ್ಪ 195
214. ದೋಷ ಹುಡುಕುವುದು. 195
215. ಪರಾಮರ್ಶಿಸಬೇಕು. 196
216. ಚಾಡಿ 197
217. ಚಾಡಿ ಮತ್ತು ಪರದೂಷಣೆ. 197
218. ಅಸೂಯೆ. 198
219. ಕೆಟ್ಟ ದೃಷ್ಟಿ 198

ಉತ್ತಮ ಗುಣಗಳು

220. ಪ್ರವಾದಿತ್ವದ ಉದ್ದೇಶ. 199
221. ಸಚ್ಚಾರಿತ್ರ್ಯದ ಉಪದೇಶ. 199
222. ಗಾಂಭೀರ್ಯ. 200
223. ಸರಳತೆ. 200
224. ಶುಚಿತ್ವ ಮತ್ತು ಅಚ್ಚುಕಟ್ಟು. 201
225. ಅಸ್ತವ್ಯಸ್ತ ಕೂದಲು. 201
226. ಸಂಪತ್ತು ಮತ್ತು ದಾರಿದ್ರ್ಯ ಪ್ರದರ್ಶನ. 202
227. ಸಲಾಮ್‌ನ ಆಧಿಕ್ಯ. 203
228. ನಾಲಗೆ ಮತ್ತು ಗುಪ್ತಾಂಗಗಳ ರಕ್ಷಣೆ. 204
229. ಮಾತಿನ ಹೊಣೆ. 204

ಇಸ್ಲಾಮೀ ಸಂದೇಶ ಪ್ರಚಾರ

230. ಇಸ್ಲಾಮಿನ ಅರ್ಥ. 205
231. ಪವಿತ್ರ ವಚನದ ವೈಶಾಲ್ಯ. 206

232. ಸಂದೇಶ ಪ್ರಚಾರದಿಂದ ಉಭಯ ಲೋಕಗಳಲ್ಲಿ ಸೌಭಾಗ್ಯ. 207
233. ಪರಿಚಯ ಭಾಷಣ. 208
234. ಸಂದೇಶ ಪ್ರಚಾರದ ಉದ್ದೇಶ. 210
235. ದಾಸರ ದಾಸ್ಯದಿಂದ ಹೊರ ಬನ್ನಿರಿ. 212
236. ಕುಟುಂಬ ಸಂಬಂಧದ ಬೇಡಿಕೆಗಳು. 212
237. ಸಂಘಟಿತ ಜೀವನ. 215
238. ಧರ್ಮಕ್ಕಾಗಿ ಒಟ್ಟು ಸೇರುವವರು. 217
239. ನಾಯಕನ ಹೊಣೆಗಾರಿಕೆ. 218
240. ಸಂಬಂಧಿಕರಿಗೆ ಆದ್ಯತೆ ನೀಡುವುದು. 219
241. ನಾಯಕನ ತ್ಯಾಗ. 219
242. ಸಹನ ಶೀಲ ನಾಯಕ. 220
243. ಅನುಯಾಯಿಗಳ ಹೊಣೆಗಾರಿಕೆ. 221
244. ಬೋಧನೆಯ ಪ್ರಮುಖ ತತ್ವ. 224
245. ಧರ್ಮದಲ್ಲಿ ಸೌಲಭ್ಯ. 226
246. ಯುಕ್ತಿ ಪೂರ್ಣ ಭಾಷಣ. 227
247. ಸಂದೇಶ ಮತ್ತು ಕರ್ಮದಲ್ಲಿ ಏಕ ರೂಪತೆ. 228
248. ಸಂದೇಶ ಪ್ರಚಾರದ ಆರಂಭ ತನ್ನಿಂದಾಗ ಬೇಕು. 230
249. ಮಾಡಬೇಕಾದ ಕಾರ್ಯ. 231

ಕರ್ಮರಹಿತ ಸಂದೇಶ

250. ಇತರರಿಗೆ ಉಪದೇಶ. 232
251. ಬೆಂಕಿಯ ಕತ್ತರಿ. 232
252. ಜ್ಞಾನ ಮತ್ತು ಕರ್ಮ. 233
253. ಬೋಧನೆ ಮತ್ತು ಪ್ರಚಾರದ ಮಹತ್ವ. 234
254. ಕೆಡುಕಿನಿಂದ ತಡೆಯುವುದು ಕಡ್ಡಾಯ. 236
255. ಸಂದೇಶ ಪ್ರಚಾರಕ್ಕೆ ಆಧುನಿಕ ಮಾಧ್ಯಮಗಳು. 237
256. ಸತ್ಯ ಪ್ರಚಾರಕ ಮತ್ತು ಸಹನೆ. 238
257. ಕೆಟ್ಟ ಭಾಷಣಕಾರರು. 239
258. ಸತ್ಯಪ್ರಚಾರಕನ ಅಸ್ತ್ರ. 239
259. ಧರ್ಮ ಪ್ರಚಾರದ ವಿಧಾನ. 240
260. ಧರ್ಮದ ಬಗ್ಗೆ ಮೃದು ನೀತಿ. 241
261. ಮಿಥ್ಯದ ಪ್ರಾಬಲ್ಯದ ವೇಳೆ ಸತ್ಯವಾಹಕರ ಕರ್ತವ್ಯ. 242
262. ಸತ್ಯನಿಷ್ಠೆಯ ಬೇಡಿಕೆ. 243
263. ಜಿಹಾದ್‌ನ ಬಗ್ಗೆ ನಿರ್ಲಕ್ಷ್ಯದ ಪರಿಣಾಮ. 246

ಸಂದೇಶ ಪ್ರಚಾರ ಕಾರ್ಯಕ್ಕೆ ಬಲ ನೀಡುವ ವಸ್ತುಗಳು

264. ಕುರ್‌ಆನ್ ಪಠಣ. 248
265. ತಹಜ್ಜುದ್ ಮತ್ತು ಐಚ್ಛಿಕ ಕರ್ಮಗಳು. 251
266. ಧನವೆಚ್ಚ. 258
267. ತೌಬಾ ಮತ್ತು ಇಸ್ತಿಗ್‌ಫಾರ್. 265
268. ತೌಬಾ ಸ್ವೀಕಾರ 267
269. ದೇವಸ್ಮರಣೆ ಮತ್ತು ಪ್ರಾರ್ಥನೆ 268
270. ದಿಕ್ರ್ ಜೀವನವಾಗಿದೆ. 269
271. ದಿಕ್ರ್‌ನ ಬೋಧನೆ. 269
272. ಫರ್ಝ್ ನಮಾಝ್‌ಗಳ ಬಳಿಕ. 270
273. ಅಲ್ಲಾಹನ ಸ್ಮರಣೆ ಎಂಬ ಭದ್ರಕೋಟೆ. 271
274. ಅಲ್ಲಾಹನನ್ನು ಸ್ಮರಿಸುವವನು. 271
275. ಅಲ್ಲಾಹ್ ಮತ್ತು ದೇವಚರರ ಮಾತುಕತೆ. 272
276. 'ದುಆ'ದ ಶಿಷ್ಟಾಚಾರ. 274
277. ಪ್ರಾರ್ಥನೆಯ ಲಾಭ. 274
278. ದುಃಖಿತಪ್ತ ವ್ಯಕ್ತಿಯ ಪ್ರಾರ್ಥನೆ. 275
279. ಅಲ್ಲಾಹನು ನಾಚುತ್ತಾನೆ!. 276
280. ನಮಾಝ್‌ನ ನಂತರದ ದುಆ. 276
281. ನಮಾಝ್‌ನಲ್ಲಿ ಪಠಿಸುವ ದುಆ. 277
282. ಸಂದೇಶ ಪ್ರಚಾರಕರಿಗಾಗಿ ಕೆಲವು ವಿಶಿಷ್ಟ ದುಆಗಳು. 278
283. ಅಬ್ದುಲ್ಲಾ ಬಿನ್ ಮಸ್‌ಊದ್‌(ರ) ದುಆ. 281

ವೈರಾಗ್ಯ ಮತ್ತು ಪರಲೋಕ ಚಿಂತೆ

284. ಲೋಕದ ಪ್ರೀತಿ ಮತ್ತು ಮರಣದ ಭಯ ಅಪಮಾನದ ಹೇತು. 283
285. ಆಡಂಬರ ಪ್ರಿಯತೆ. 284
286. ಅಪಾಯದ ಕರೆಗಂಟೆ. 284
287. ವೈರಾಗ್ಯದ ನೈಜ ಕಲ್ಪನೆ. 286
288. ಇಹಲೋಕ ಅಥವಾ ಪರಲೋಕ. 286
289. ಬುದ್ಧಿವಂತ ಮತ್ತು ಮೂರ್ಖ. 287
290. ಲಜ್ಜೆಯ ಸಮಗ್ರ ಕಲ್ಪನೆ. 288
291. ಗೋರಿಯು ಪರಲೋಕದ ಪ್ರಥಮ ಹಂತ. 289
292. ಕಿಯಾಮತ್ ಹಠಾತ್ತನೆ ಬಂದು ಬಿಡುವುದು. 290
293. ಹಶ್ರ್‌ನ ಮೈದಾನದಲ್ಲಿ ವಿಚಾರಣೆ. 291

294. ನಿಷ್ಠುರ ನ್ಯಾಯ. 292
295. ಜೀವನದ ಸಂಪೂರ್ಣ ವಿಚಾರಣೆ. 293
296. ಶಿಫಾರಸಿಗೆ ಯಾರು ಅರ್ಹರು?. 293
297. ಅಂಗಾಂಗಗಳ ಸಾಕ್ಷ್ಯ. 296
298. ಭೂಮಿಯ ಸಾಕ್ಷ್ಯ. 297
299. ಅತ್ಯಂತ ಕಡಿಮೆ ಶಿಕ್ಷೆ. 297
300. ಸ್ವರ್ಗವು ಅಲಕ್ಷ್ಯದ ತಾಣವಲ್ಲ. 300
301. ಹ. ಆಯಿಶಾ(ರ) ಮತ್ತು ಇಬ್ನು ಝುಬೈರ್‌ರ ಮಧ್ಯೆ ವಿರಸ. 302
302. ಅಲ್ಲಾಹ್ ಮತ್ತು ಪ್ರವಾದಿಯನ್ನು ಪ್ರೀತಿಸುವುದು. 304
303. ಸಣ್ಣ ಪಾಪಗಳು. 305
304. ಹುತಾತ್ಮನ ಪ್ರತಿಫಲ. 305
305. ನಮಾಝ್‌ನ ಆಧಿಕ್ಯ. 306
306. ಇಸ್ಲಾಮ್ ಸ್ವೀಕಾರಕ್ಕೆ ಮುಂಚಿನ ಪಾಪಗಳು. 307
307. ಶಿಕ್ಷೆಗೆ ಯಾರು ಅರ್ಹರು?. 308
308. ಗುಲಾಮರ ಮೇಲೆ ಅತಿರೇಕ. 310
309. ಖುಬೈಬ್‌ರ(ರ) ಕುರಿತು ವೈರಿಯ ಸಾಕ್ಷ್ಯ. 311
310. ಸುಪ್ಫದವರ ಸ್ಥಿತಿ. 312
311. ಹ. ಮುಸ್‌ಅಬ್ ಬಿನ್ ಉಮೈರ್‌ರ(ರ) ಪರಿಸ್ಥಿತಿ. 313
312. ಬಡತನದಲ್ಲೂ ಅತಿಥಿ ಸತ್ಕಾರ. 314
313. ಅಲ್ಲಾಹನ ಮಾರ್ಗದ ವೆಚ್ಚ ಮತ್ತು ದಿಕ್ರ್. 316
314. ಇಬ್ನು ಉಮರ್(ರ) ಮತ್ತು ತಹಜ್ಜುದ್. 317
315. ಪ್ರವಾದಿ(ಸ) ಅವರ ಅತ್ಯಂತ ಕಠಿಣ ದಿನ. 318
316. ವಿರೋಧಿಗಳಿಗಾಗಿ ಪ್ರಾರ್ಥನೆ. 319
317. ನವ ಮುಸ್ಲಿಮರ ತರಬೇತಿ. 320
318. ಊಟದಲ್ಲಿ ಪಾಲು. 320
319. ಜನರೊಂದಿಗೆ ಅನುಕಂಪ. 321
320. ನಮಾಝ್‌ನ ಶಿಷ್ಟಾಚಾರದ ಶಿಕ್ಷಣ. 323
321. ಬೋಧನೆಯ ವಿಧಾನ. 323
322. ಧರ್ಮದಲ್ಲಿ ಸೌಲಭ್ಯ. 324
323. ಭಾವನೆಗಳಿಗೆ ಮನ್ನಣೆ. 324
324. ಅಲ್ಲಾಹನ ಆದೇಶಗಳು: ಅವರ ದೃಷ್ಟಿಯಲ್ಲಿ. 325
325. ಕಾಪಟ್ಯವೆಂದರೇನು?. 326
326. ಸಹಾಬಿಗಳ(ರ) ಆದರ್ಶ ಪಾಲಿಸಿರಿ.. 326

327. ಸಂಘಟಿತ ನಮಾಝ್‌ಗಾಗಿ ಇಡುವ ಹೆಜ್ಜೆ. 327
328. ಫಜ್ರ್ ಮತ್ತು ಇಶಾ ನಮಾಝ್- ಸಹಾಬಿಗಳ ದೃಷ್ಟಿಯಲ್ಲಿ. 328

ಪ್ರವಾದಿವರ್ಯರ(ಸ) ಸಂಗಾತಿಗಳ ಜೀವನ

329. ಹಗಲಿನ ಯೋಧರು, ರಾತ್ರಿಯ ಆರಾಧಕರು!. 329
330. ಸತ್ಯದ ಬಗ್ಗೆ ನಿಷ್ಠುರತೆ. 330
331. ಪ್ರವಾದಿಯ(ಸ) ಅನುಕರಣೆ. 331
332. ಪ್ರವಾದಿಯ(ಸ) ಅನುಸರಣೆ. 333
333. ಮಕ್ಕಳಿಗೆ ಸಲಾಮ್. 334
334. ಪ್ರಾಮಾಣಿಕ ಅನುಕರಣೆ. 334
335. ಪ್ರಾಮಾಣಿಕ ಪ್ರೇಮ. 335
336. ಸಹಪ್ರಯಾಣಿಕನ ಸೇವೆ. 336
337. ಕೈದಿಯೊಂದಿಗೆ ಉತ್ತಮ ವರ್ತನೆ. 336
338. ಪ್ರವಾದಿವರ್ಯರ(ಸ) ಅನುಸರಣೆಯ ಮಹತ್ವ. 337
339. ಅರ್ಪಣಾ ಮನೋಭಾವ. 338
340. ಸಮಗ್ರ ಮತ್ತು ಸಾರ್ವಕಾಲಿಕ ಸಂದೇಶ. 340
341. ಧಾರ್ಮಿಕ ಸಭೆಗಳ ಮಹತ್ವ. 341
342. ಜ್ಞಾನದ ಗಳಿಕೆ ಮತ್ತು ಪ್ರಚಾರದ ಆಸಕ್ತಿ. 342
343. ಸಹಾಬಿಗಳು ಸುಳ್ಳು ಹೇಳುತ್ತಿರಲಿಲ್ಲ. 342
344. ನಾಲಗೆಯ ಸಂರಕ್ಷಣೆ. 343
345. ಕ್ಷಮೆ. 344
346. ತಾಳ್ಮೆ ಮತ್ತು ಸಾಂತ್ವನ. 345
347. ಸಭೆಯ ಮರ್ಯಾದೆಗಳು. 346
348. ವಚನ ಪಾಲನೆ. 346
349. ಸಾಮಾನ್ಯ ಕಟ್ಟಡ. 347
350. ಪ್ರಾಣಿ ದಯೆ. 348
351. ಅತಿಥಿ ಸತ್ಕಾರ. 349
352. ಸಾಮೂಹಿಕ ಹೊಣೆಗಾರಿಕೆ. 351
353. ಸಾಮೂಹಿಕ ಭೋಜನದ ಶಿಷ್ಟಾಚಾರಗಳು. 352
354. ಸಂಘಟನೆಯ ಶಿಸ್ತು. 353
355. ಪ್ರವಾದಿಯ(ಸ) ಅನುಸರಣೆ ಮತ್ತು ತುಷ್ಟೀಕರಣ. 355
356. ಔದಾರ್ಯ. 356
357. ಸಾಮೂಹಿಕ ಬಾಧ್ಯತೆ. 360
358. ತಬ್ಬಲಿಗಳ ಚಿಂತೆ. 360

359. ಗುಲಾಮರೊಂದಿಗೆ ಸದ್ವರ್ತನೆ. 361
360. ತ್ಯಾಗ. 362
361. ಹಲಾಲ್ ತುತ್ತು. 362
362. ಉತ್ತಮ ವ್ಯವಹಾರ. 363
363. ಸಾಲಗಾರನೊಂದಿಗೆ ಮೃದು ವರ್ತನೆ. 364
364. ಧರ್ಮ ಸಂಸ್ಥಾಪನೆಯ ಮಾರ್ಗದಲ್ಲಿ. 365
365. ಬಲಿದಾನಗಳ ಪ್ರಥಮ ಪುರಸ್ಕಾರ. 367
366. ಅಲ್ಲಾಹನ ಸಂಪ್ರೀತಿಯೇ ಪರಮ ಗುರಿ. 368
367. ಮುಸ್ಲಿಮರ ಔನ್ನತ್ಯದ ರಹಸ್ಯ ಮತ್ತು ಹ. ಉಮರ್‌ರ(ರ) ಆದರ್ಶ. 370
368. ಪರಲೋಕ ಚಿಂತೆ ಮತ್ತು ಪ್ರಭುವಿನ ಭೇಟಿಯ ಆಸಕ್ತಿ. 371
369. ನಮಾಝ್- ಪ್ರವಚನಗಳಲ್ಲಿ ಸಂತುಲಿತತೆ. 380
370. ನಮಾಝ್‌ನಲ್ಲಿ ಹಿಂಬಾಲಕರ ಪರಿಗಣನೆ. 381
371. ಫರ್ಝ್ ನಮಾಝ್‌ಗಾಗಿ ವ್ಯವಸ್ಥೆ. 381
372. ಪ್ರವಾದಿಯವರ(ಸ) ನಮಾಝ್. 382
373. ಆಧ್ಯಾತ್ಮಿಕ ಆಹಾರ. 382
374. ಭಯಭಕ್ತಿ. 383
375. ಪ್ರವಾದಿವರ್ಯರ(ಸ) ತಹಜ್ಜುದ್. 383
376. ಕುರ್‌ಆನ್‌ನ ಬೋಧನೆಗಳ ಪ್ರತ್ಯಕ್ಷ ಮಾದರಿ. 384
377. ಸೇವಕರೊಂದಿಗೆ ಪ್ರವಾದಿಯವರ(ಸ) ವರ್ತನೆ. 384
378. ಪ್ರವಾದಿಯವರ(ಸ) ಹಾಸ್ಯ ಪ್ರಜ್ಞೆ. 385
379. ಪ್ರವಾದಿಯವರ ಉನ್ನತ ಗುಣ. 386
380. ಮಕ್ಕಳನ್ನು ಪ್ರೀತಿಸುವುದು. 387
381. ಮಕ್ಕಳೊಂದಿಗೆ ತಮಾಷೆ. 387
382. ಮಕ್ಕಳನ್ನು ಮುದ್ದಿಸುವುದು. 388
383. ಹಾಸ್ಯ-ವಿನೋದ. 388
384. ಪ್ರವಾದಿವರ್ಯರು(ಸ) ತಮ್ಮ ಮನೆಯಲ್ಲಿ. 389
385. ಪತ್ನಿಯರ ಭಾವನೆಗಳನ್ನು ಗೌರವಿಸುವುದು. 390
386. ವಿಧೇಯ ಪತ್ನಿಯ ನೆನಪು. 391
387. ಪತ್ನಿಯರ ಹಕ್ಕುಗಳಲ್ಲಿ ಸಮಾನತೆ. 392
388. ಪತ್ನಿಯ ತಪ್ಪಿನ ವಿಚಾರಣೆ. 392
389. ಪ್ರವಾದಿಯವರ(ಸ) ಔದಾರ್ಯ. 393
390. ಶಿಫಾರಸಿಗೆ ಪ್ರೇರಣೆ. 393
391. ಪ್ರವಾದಿಯವರ(ಸ) ಮಂದಹಾಸ. 394

392. ಪ್ರವಾದಿಯವರ(ಸ) ತರಬೇತಿಯ ಶೈಲಿ. 394
393. ಪ್ರವಾದಿಯವರ(ಸ) ಆಹಾರ ಸೇವನೆ. 396
394. ದೀನ ಭಾವ. 397
395. ರೋಗಿಯ ಸಂದರ್ಶನ. 398
396. ಸಂತಾಪ ಸೂಚನೆ. 399
397. ಸಂತಾಪ ಸೂಚನೆಯ ಇನ್ನೊಂದು ರೂಪ. 400
398. ಸಹಯಾತ್ರಿಕರೊಂದಿಗೆ. 401
399. ಸೈನಿಕರೊಂದಿಗೆ. 402
400. ಸಹನೆ. 402
401. ಅಪಾಯದ ವೇಳೆ ಮುಂಚೂಣಿಯಲ್ಲಿ. 403
402. ದೋಷ ಪ್ರಕಟನೆ. 404
403. ಸಂಗಾತಿಗಳೊಂದಿಗೆ ಸಂಬಂಧ. 404
404. ಕರುಣೆಯ ವರ್ತನೆ. 405
405. ವ್ಯವಹಾರ. 405
406. ಪ್ರವಾದಿತ್ವಕ್ಕೆ ಮುಂಚಿನ ವ್ಯವಹಾರ. 406
407. ಪ್ರತೀಕಾರದ ಭಯ. 406
408. ಜನರ ಹಕ್ಕುಗಳ ಮಹತ್ವ. 407
409. ಸತ್ಯ ಪ್ರಚಾರಕನ ಆರ್ಥಿಕ ಜೀವನ. 408
410. ಸರಳ ಮಾದರಿ. 411
411. ಧರ್ಮ ಸಂಸ್ಥಾಪನೆಯ ಮಾರ್ಗದಲ್ಲಿ. 412
412. ನವ ಮುಸ್ಲಿಮರಿಗೆ ಕಲಿಸಿದ ದುಆ. 414
413. ಮಲಗುವಾಗಿನ ದುಆ. 414
414. ಪ್ರವಾದಿಯವರ(ಸ) ಅಭಯ ಯಾಚನೆ. 415

ಸಂಕಲ್ಪ ಶುದ್ಧಿ

(1) عَنْ عُمَرَ بْنِ الْخَطَّابِ قَالَ، قَالَ رَسُولُ اللَّهِ صَلَّى اللَّهُ عَلَيْهِ وَسَلَّمَ
إِنَّمَا الأَعْمَالُ بِالنِّيَّاتِ، وَإِنَّمَا لِامْرِئٍ مَا نَوَى، فَمَنْ كَانَتْ هِجْرَتُهُ إِلَى اللَّهِ وَرَسُولِهِ
فَهِجْرَتُهُ إِلَى اللَّهِ وَرَسُولِهِ، وَمَنْ كَانَتْ هِجْرَتُهُ إِلَى دُنْيَا يُصِيبُهَا أَوِ امْرَأَةٍ
يَتَزَوَّجُهَا فَهِجْرَتُهُ إِلَى مَا هَاجَرَ إِلَيْهِ (بخاری ومسلم)

ಹ. ಉಮರ್ ಬಿನ್ ಖತ್ತಾಬ್(ರ) ಹೇಳುತ್ತಾರೆ-

ಪ್ರವಾದಿ(ಸ) ಹೇಳಿದರು: ಕರ್ಮಗಳು ಸಂಕಲ್ಪವನ್ನು ಅವಲಂಬಿಸಿವೆ. ಮಾನವನಿಗೆ ಅವನು ಸಂಕಲ್ಪ ಮಾಡಿದುದು ಮಾತ್ರ ಸಿಗುವುದು. ಯಾರು ಅಲ್ಲಾಹ್ ಮತ್ತು ರಸೂಲರಿಗಾಗಿ ಹಿಜ್ರತ್ ಮಾಡಿದನೋ ಅವನ ಹಿಜ್ರತ್ ನೈಜ ಹಿಜ್ರತ್ ಆಗಿರುವುದು. ಯಾರು ಲೌಕಿಕ ಸಂಪತ್ತು ಗಳಿಸಲಿಕ್ಕಾಗಿ ಅಥವಾ ಯಾವುದೇ ಸ್ತ್ರೀಯೊಂದಿಗೆ ವಿವಾಹ ಮಾಡಲಿಕ್ಕಾಗಿ ಹಿಜ್ರತ್ ಮಾಡಿದನೋ ಅವನ ಹಿಜ್ರತ್ ಲೌಕಿಕ ಸಂಪತ್ತು ಅಥವಾ ಸ್ತ್ರೀಗಾಗಿರುವುದು.

[ಬುಖಾರಿ-ಮುಸ್ಲಿಮ್]

ಟಿಪ್ಪಣಿ: ಇದು ಸಂಸ್ಕರಣೆಯ ಬಾಬ್ತು ಇರುವ ಅತ್ಯಂತ ಮಹತ್ವದ ಹದೀಸ್ ಆಗಿದೆ. ಪ್ರವಾದಿವರ್ಯರ(ಸ) ಮಾತಿನ ಇಂಗಿತವೇನೆಂದರೆ ಸತ್ಕರ್ಮಗಳಿಗೆ ಪುಣ್ಯ ಸಿಗಬೇಕಾದರೆ ಅದಕ್ಕೆ ಸಂಕಲ್ಪಶುದ್ಧಿ ಅನಿವಾರ್ಯ. ಸಂಕಲ್ಪ ಸರಿಯಾಗಿದ್ದರೆ ಪುಣ್ಯ ಸಿಗುವುದು, ಅನ್ಯಥಾ ಸಿಗಲಾರದು. ಯಾವ ಕರ್ಮವೇ ಆಗಲಿ ಅದು ಎಷ್ಟೇ ಉತ್ತಮವಾಗಿದ್ದರೂ ಅದರ ಪ್ರೇರಕ ಶಕ್ತಿ ಅಲ್ಲಾಹನ ಸಂಪ್ರೀತಿಯ ಹೊರತು ಬೇರೇನಾದರೂ ಆದರೆ ಪರಲೋಕದ ಮಾರುಕಟ್ಟೆಯಲ್ಲಿ ಅದಕ್ಕೆ ಬೆಲೆಯೇ ಇರಲಾರದು. ಅಲ್ಲಿ ಅದು ಖೋಟಾ ನಾಣ್ಯವೆಂದು ಪರಿಗಣಿಸಲ್ಪಡುವುದು. ಈ ವಾಸ್ತವಿಕತೆಯನ್ನು ಪ್ರವಾದಿವರ್ಯರು(ಸ) ಹಿಜ್ರತ್‌ನ(ವಲಸೆ) ಉದಾಹರಣೆ ಕೊಟ್ಟು ಸ್ಪಷ್ಟಪಡಿಸಿದ್ದಾರೆ. ಹಿಜ್ರತ್ ಎಂಬುದು ಮಹಾ ಪುಣ್ಯಕಾರ್ಯವಾಗಿದೆ. ಆದರೆ ಅದರ ಪ್ರೇರಕ ಶಕ್ತಿ ಸರಿಯಾಗಿಲ್ಲದಿದ್ದರೆ, ಅಲ್ಲಾಹನ ಸಂಪ್ರೀತಿಯ ಹೊರತಾದ ಬೇರೆ ಯಾವುದೇ ಉದ್ದೇಶವಿದ್ದರೆ, ಆತನು ಪರಲೋಕದಲ್ಲಿ ಅದರ ಪುಣ್ಯದಿಂದ ವಂಚಿತನಾಗುವನು. ಮಾತ್ರವಲ್ಲ ಅವನ ವಿರುದ್ಧ ಮೋಸ, ವಂಚನೆಯ ಮೊಕದ್ದಮೆ ಹೂಡಿದರೂ ಅಚ್ಚರಿಯಿಲ್ಲ.

(2) عَنْ اَبِيْ هُرَيْرَةَ رض قَالَ، سَمِعْتُ رَسُوْلَ اللّٰهِ صَلَّى اللّٰهُ عَلَيْهِ وَسَلَّمَ يَقُوْلُ
اِنَّ اَوَّلَ النَّاسِ يُقْضٰى يَوْمَ الْقِيَامَةِ عَلَيْهِ رَجُلٌ اُسْتُشْهِدَ، فَاُتِيَ بِهٖ فَعَرَّفَهٗ نِعَمَهٗ
فَعَرَفَهَا، قَالَ فَمَا عَمِلْتَ فِيْهَا؟ قَالَ قَاتَلْتُ فِيْكَ حَتّٰى اسْتُشْهِدْتُ، قَالَ كَذَبْتَ وَ
وَلٰكِنَّكَ قَاتَلْتَ لِاَنْ يُّقَالَ جَرِيْءٌ فَقَدْ قِيْلَ، ثُمَّ اُمِرَ بِهٖ فَسُحِبَ عَلٰى وَجْهِهٖ حَتّٰى اُلْقِيَ فِي
النَّارِ، وَرَجُلٌ تَعَلَّمَ الْعِلْمَ وَعَلَّمَهٗ وَقَرَءَ الْقُرْاٰنَ، فَاُتِيَ بِهٖ فَعَرَّفَهٗ نِعَمَهٗ فَعَرَفَهَا، قَالَ
فَمَا عَمِلْتَ فِيْهَا؟ قَالَ تَعَلَّمْتُ الْعِلْمَ وَعَلَّمْتُهٗ وَقَرَأْتُ فِيْكَ الْقُرْاٰنَ، قَالَ كَذَبْتَ
وَلٰكِنَّكَ تَعَلَّمْتَ لِيُقَالَ هُوَ عَالِمٌ، وَقَرَأْتَ الْقُرْاٰنَ لِيُقَالَ هُوَ قَارِئٌ فَقَدْ قِيْلَ ثُمَّ
اُمِرَ بِهٖ فَسُحِبَ عَلٰى وَجْهِهٖ حَتّٰى اُلْقِيَ فِي النَّارِ، وَرَجُلٌ وَسَّعَ اللّٰهُ عَلَيْهِ وَاَعْطَاهُ
مِنْ اَصْنَافِ الْمَالِ فَاُتِيَ بِهٖ فَعَرَّفَهٗ نِعَمَهٗ فَعَرَفَهَا، قَالَ فَمَا عَمِلْتَ فِيْهَا؟ قَالَ
مَا تَرَكْتُ مِنْ سَبِيْلٍ تُحِبُّ اَنْ يُّنْفَقَ فِيْهَا اِلَّا اَنْفَقْتُ فِيْهَا، قَالَ كَذَبْتَ وَلٰكِنَّكَ
فَعَلْتَ لِيُقَالَ هُوَ جَوَادٌ فَقَدْ قِيْلَ، ثُمَّ اُمِرَ بِهٖ فَسُحِبَ عَلٰى وَجْهِهٖ ثُمَّ اُلْقِيَ
فِي النَّارِ (مسلم)

ಪ್ರವಾದಿ(ಸ) ಹೀಗೆ ಹೇಳಿರುವುದಾಗಿ ಅಬೂಹುರೈರಾ(ರ) ಹೇಳುತ್ತಾರೆ: ನಿರ್ಣಾಯಕ ದಿನದಂದು ಪ್ರಪ್ರಥಮವಾಗಿ ಜಿಹಾದ್‌ನಲ್ಲಿ ತನ್ನ ಪ್ರಾಣವನ್ನು ಅರ್ಪಿಸಿದ ಒಬ್ಬ ವ್ಯಕ್ತಿಯ ವಿರುದ್ಧ ತೀರ್ಪು ನೀಡಲಾಗುವುದು. ಅವನನ್ನು ನ್ಯಾಯಾಲಯದಲ್ಲಿ ಹಾಜರುಗೊಳಿಸಲಾಗುವುದು. ಅನಂತರ ಅಲ್ಲಾಹನು ಅವನಿಗೆ ತನ್ನ ಕೊಡುಗೆಗಳನ್ನು ನೆನಪಿಸಿಕೊಡುವನು. ಅವನು ಅದನ್ನೆಲ್ಲ ಒಪ್ಪಿಕೊಳ್ಳುವನು. ಆಗ ಅಲ್ಲಾಹನು ಅವನೊಂದಿಗೆ ಕೇಳುವನು- ನೀನು ನನ್ನ ಅನುಗ್ರಹಗಳನ್ನು ಪಡೆದು ಏನು ಮಾಡಿದೆ? ಅವನು ಹೇಳುವನು- ನಾನು ನಿನ್ನ ಸಂಪ್ರೀತಿಗಾಗಿ ನಿನ್ನ ಧರ್ಮದ ವೈರಿಗಳೊಂದಿಗೆ ಹೋರಾಡಿ ಕಟ್ಟಕಡೆಗೆ ಪ್ರಾಣಾರ್ಪಣೆಯನ್ನೇ ಮಾಡಿದೆ. ಆಗ ಅಲ್ಲಾಹನು ಹೇಳುವನು- ನೀನು ಸುಳ್ಳು ಹೇಳುತ್ತಿರುವೆ. ಜನರು ನಿನ್ನನ್ನು ಪರಾಕ್ರಮಿಯೆಂದು ಕರೆಯಲಿಕ್ಕಾಗಿ ನೀನು ಯುದ್ಧ ಮಾಡಿದೆ. ಆದುದರಿಂದ ನಿನಗೆ ನಿನ್ನ ಪ್ರತಿಫಲ ಭೂಲೋಕದಲ್ಲೇ ಸಿಕ್ಕಿತು. ಅನಂತರ ಇವನನ್ನು ಮೂತಿ ಹಿಡಿದೆಳೆದು ನರಕಕ್ಕೆ ಹಾಕಿರಿ ಎಂದು ಆಜ್ಞಾಪಿಸಲಾಗುವುದು. ಹಾಗೆಯೇ ಅವನನ್ನು ನರಕಕ್ಕೆ ಹಾಕಲಾಗುವುದು.

ತರುವಾಯ ಇನ್ನೊಬ್ಬ ವ್ಯಕ್ತಿಯನ್ನು ಅಲ್ಲಾಹನ ನ್ಯಾಯಾಲಯದ ಮುಂದೆ ತರಲಾಗುವುದು. ಅವನೊಬ್ಬ ಕುರ್‌ಆನಿನ ವಿದ್ವಾಂಸನಾಗಿರುವನು. ಅವನಿಗೂ ಅಲ್ಲಾಹನು ತನ್ನ ಕೊಡುಗೆಗಳನ್ನು ನೆನಪಿಸುವನು. ಅವನು ಅವುಗಳನ್ನು ಒಪ್ಪಿಕೊಳ್ಳುವನು. ಆಗ ಅಲ್ಲಾಹನು ಅವನೊಂದಿಗೆ ಕೇಳುವನು, ಈ ಅನುಗ್ರಹಗಳನ್ನು ಪಡೆದು ನೀನೇನು ಮಾಡಿದೆ? ಅವನು ಹೇಳುವನು- ದೇವಾ! ನಾನು ನಿನಗಾಗಿ ನಿನ್ನ ಧರ್ಮವನ್ನು ಕಲಿತೆ. ಪವಿತ್ರ ಕುರ್‌ಆನನ್ನು ಆಳವಾಗಿ ಅಭ್ಯಸಿಸಿದೆ ಮತ್ತು ಇತರರಿಗೆ ಅದನ್ನು ಕಲಿಸಿದೆ. ಆಗ ಅಲ್ಲಾಹನು ಹೇಳುವನು- ನೀನು ಸುಳ್ಳು ಹೇಳುತ್ತಿರುವೆ. ನೀನು ಧರ್ಮವನ್ನು ಕಲಿತದ್ದು, ಕಲಿಸಿದ್ದು ಮತ್ತು ಪವಿತ್ರ ಕುರ್‌ಆನನ್ನು ಅಭ್ಯಸಿಸಿದ್ದು ಜನರು ನಿನ್ನನ್ನು ವಿದ್ವಾಂಸನೆಂದೂ ವ್ಯಾಖ್ಯಾನಕಾರನೆಂದೂ ಹೇಳಬೇಕೆಂಬ ಉದ್ದೇಶದಿಂದಾಗಿತ್ತು. ನಿನ್ನ ಉದ್ದೇಶಿತ ಪ್ರತಿಫಲ ನಿನಗೆ ಭೂಲೋಕದಲ್ಲೇ ಸಿಕ್ಕಿತು. ಅನಂತರ, ಇವನನ್ನು ಮುಖ ಹಿಡಿದೆಳೆದು ನರಕಕ್ಕೆ ಹಾಕಿರಿ ಎಂದು ಆಜ್ಞಾಪಿಸಲಾಗುವುದು. ಹಾಗೆಯೇ ಅವನನ್ನು ಎಳೆದುಕೊಂಡು ನರಕಕ್ಕೆ ಹಾಕಲಾಗುವುದು.

ಇನ್ನು ಮೂರನೆಯದಾಗಿ, ಅಲ್ಲಾಹನು ಭೂಲೋಕದಲ್ಲಿ ಅಪಾರ ಸಿರಿಸಂಪತ್ತನ್ನು ನೀಡಿದ ವ್ಯಕ್ತಿಯನ್ನು ಹಾಜರು ಪಡಿಸಲಾಗುವುದು. ಅವನಿಗೂ ಅವನಿಗೆ ನೀಡಲಾದ ಅನುಗ್ರಹಗಳನ್ನು ನೆನಪಿಸಲಾಗುವುದು. ಅವನು ಅವುಗಳನ್ನು ಒಪ್ಪಿಕೊಳ್ಳುವನು. ಅನಂತರ ಅವನೊಂದಿಗೆ, ನೀನೇನು ಮಾಡಿ ಬಂದಿರುವೆ? ಎಂದು ಕೇಳಲಾಗುವುದು. ಅವನು ಹೇಳುವನು- ಯಾವ ವಿಷಯಗಳಲ್ಲಿ ನೀನು ಖರ್ಚು ಮಾಡಬೇಕೆಂದು ವಿಧಿಸಿದ್ದೆಯೋ ಅವುಗಳಲ್ಲಿ ನಿನ್ನ ಸಂಪ್ರೀತಿಗಾಗಿ ನಾನು ಖರ್ಚುಮಾಡಿದೆ. ಆಗ ಅಲ್ಲಾಹನು, ಅದನ್ನು ಅಲ್ಲಗಳೆಯುವನು ಮತ್ತು 'ಜನರು ನಿನ್ನನ್ನು ಕೊಡುಗೈ ದಾನಿ ಎನ್ನಬೇಕೆಂಬ ಉದ್ದೇಶದಿಂದ ನೀನು ಖರ್ಚುಮಾಡಿದೆ. ನಿನ್ನ ಉದ್ದೇಶದ ಪ್ರತಿಫಲ ನಿನಗೆ ಸಿಕ್ಕಿದೆ' ಎನ್ನುವನು. ತರುವಾಯ ಅಲ್ಲಾಹನ ಆಜ್ಞೆಯ ಮೇರೆಗೆ ಅವನನ್ನೂ ಮುಖ ಹಿಡಿದೆಳೆದು ನರಕಕ್ಕೆ ಹಾಕಲಾಗುವುದು.

[ಮುಸ್ಲಿಮ್]

ಟಿಪ್ಪಣಿ: ಈ ಹದೀಸ್ ಹಿಂದಿನ ಹದೀಸ್‌ನ ವಿವರಣೆಯಾಗಿದೆ. ಹಿಜ್ರತ್, ಜಿಹಾದ್, ಧಾರ್ಮಿಕ ವಿದ್ಯೆ ಕಲಿಯುವುದು ಮತ್ತು ಕಲಿಸುವುದು, ದೇವಮಾರ್ಗದಲ್ಲಿ ವೆಚ್ಚಮಾಡುವುದು ಇತ್ಯಾದಿಗಳು ಉನ್ನತ ಮಟ್ಟದ ಪುಣ್ಯ ಕಾರ್ಯಗಳಾಗಿವೆ. ಆದರೆ ಉದ್ದೇಶ ಶುದ್ಧಿ ಇಲ್ಲದಿದ್ದರೆ ಪರಲೋಕದಲ್ಲಿ ಪುಣ್ಯ ನಿಷ್ಫಲವಾಗುವುದು. ಮಾತ್ರವಲ್ಲ, ಅವುಗಳಿಂದಾಗಿಯೇ ನರಕದ ಬೆಂಕಿಯಲ್ಲಿ ಉರಿಯಬೇಕಾದೀತು.

عَنْ أَبِي أُمَامَةَ رض قَالَ: جَاءَ رَجُلٌ إِلَى رَسُولِ اللهِ صَلَّى اللهُ عَلَيْهِ وَسَلَّمَ فَقَالَ أَرَأَيْتَ رَجُلاً غَزَا يَلْتَمِسُ الْأَجْرَ وَالذِّكْرَ مَا لَهُ؟ قَالَ لَا شَيْءَ لَهُ، فَأَعَادَهَا ثَلَاثَ مَرَّاتٍ وَيَقُولُ رَسُولُ اللهِ صَلَّى اللهُ عَلَيْهِ وَسَلَّمَ لَا شَيْءَ لَهُ، ثُمَّ قَالَ إِنَّ اللهَ عَزَّ وَجَلَّ لَا يَقْبَلُ مِنَ الْعَمَلِ إِلَّا مَا كَانَ لَهُ خَالِصًا وَابْتُغِيَ وَجْهُهُ (ابوداود، نسائی)

ಅಬೂ ಉಮಾಮಾರಿಂದ(ರ) ವರದಿ: ಒಬ್ಬ ವ್ಯಕ್ತಿ ಪ್ರವಾದಿವರ್ಯರ(ಸ) ಬಳಿಗೆ ಬಂದು ಈ ರೀತಿ ಕೇಳಿದನು- ಒಬ್ಬನಿಗೆ ಪರಲೋಕದಲ್ಲಿ ಪುಣ್ಯ ದೊರಕಿಸಿಕೊಳ್ಳಲಿಕ್ಕಾಗಿ ಮತ್ತು ಈ ಲೋಕದಲ್ಲಿ ಹೆಸರು ಗಳಿಸಲಿಕ್ಕಾಗಿ ಜಿಹಾದ್ ಮಾಡಿದರೆ ಪುಣ್ಯ ಸಿಗುವುದೇ? ಪ್ರವಾದಿ(ಸ) ಹೇಳಿದರು- ಅವನಿಗೆ ಪರಲೋಕದಲ್ಲಿ ಏನೂ ದೊರೆಯಲಾರದು. ಅವನು ತನ್ನ ಪ್ರಶ್ನೆಯನ್ನು ಮೂರು ಬಾರಿ ಪುನರಾವರ್ತಿಸಿದನು. ಪ್ರವಾದಿ(ಸ) ಪ್ರತಿಯೊಂದು ಬಾರಿಯೂ ಅಂತಹ ವ್ಯಕ್ತಿಗೆ ಪರಲೋಕದಲ್ಲಿ ಯಾವುದೇ ಪುಣ್ಯ ಸಿಗಲಾರದು ಎಂದುತ್ತರಿಸಿದರು. ಕಟ್ಟಕಡೆಗೆ ಪ್ರವಾದಿವರ್ಯರು(ಸ) 'ಅಲ್ಲಾಹನು ಕೇವಲ ತನಗಾಗಿ ಮಾಡಿದ ಕರ್ಮವನ್ನಷ್ಟೆ ಸ್ವೀಕರಿಸುತ್ತಾನೆ ಮತ್ತು ಅವನ ಸಂಪ್ರೀತಿಯೇ ಅವನ ಕರ್ಮದ ಪ್ರೇರಣೆಯಾಗಿರಬೇಕು' ಎಂದರು. *[ಅಬೂ ದಾವೂದ್, ನಸಾಈ]*

عَنْ أَنَسِ بْنِ مَالِكٍ رض قَالَ رَجَعْنَا مِنْ غَزْوَةِ تَبُوكَ مَعَ النَّبِيِّ صَلَّى اللهُ عَلَيْهِ وَسَلَّمَ فَقَالَ إِنَّ أَقْوَامًا خَلْفَنَا مَا سَلَكْنَا شِعْبًا وَلَا وَادِيًا إِلَّا وَهُمْ مَعَنَا حَبَسَهُمُ الْعُذْرُ (بخاری)

ಅನಸ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ- ತಬೂಕ್ ಯುದ್ಧ ಮುಗಿದ ನಂತರ ನಾವು ಪ್ರವಾದಿ(ಸ) ಅವರೊಂದಿಗೆ ಮರಳಿದೆವು. (ಪ್ರಯಾಣದ ಮಧ್ಯೆ) ಪ್ರವಾದಿ(ಸ) ಹೀಗೆಂದರು- ನಮ್ಮ ಪೈಕಿ ಕೆಲವರು ಮದೀನಾದಲ್ಲಿ ಉಳಿದಿದ್ದಾರೆ. ಆದರೆ ವಾಸ್ತವದಲ್ಲಿ ಅವರು ಈ ಪ್ರಯಾಣದಲ್ಲಿ ನಮ್ಮೊಂದಿಗಿದ್ದಾರೆ. ನಾವು ಸಾಗುವ ಎಲ್ಲ ಬೆಟ್ಟ ಕಣಿವೆಗಳಲ್ಲೂ ಅವರು ನಮ್ಮೊಂದಿಗಿದ್ದಾರೆ. ಸೂಕ್ತ ಕಾರಣಗಳಿಂದಲೇ ಅವರು ತಡೆಹಿಡಿಯಲ್ಪಟ್ಟಿರುವರು. *[ಬುಖಾರಿ]*

ಟಿಪ್ಪಣಿ: ಯಾರಾದರೂ ಒಂದು ಪುಣ್ಯ ಕಾರ್ಯವನ್ನು ಮಾಡಬೇಕೆಂದು ಬಯಸಿದ್ದು ಯಾವುದೇ ಕಾರಣದಿಂದ ಅದನ್ನು ಮಾಡಲಾಗದಿದ್ದರೆ, ಆ ವ್ಯಕ್ತಿ ಪರಲೋಕದಲ್ಲಿ ಅಲ್ಲಾಹನ ಬಳಿ ತನ್ನ ಕರ್ಮದ ಪುಣ್ಯದಿಂದ ವಂಚಿತನಾಗಲಾರನು ಎಂದು ಈ ಹದೀಸ್‌ನಿಂದ ತಿಳಿದುಬರುತ್ತದೆ.

---

(5) عَنْ أَبِي الدَّرْدَاءِ يَبْلُغُ بِهِ النَّبِيَّ صَلَّى اللّٰهُ عَلَيْهِ وَسَلَّمَ قَالَ: مَنْ أَتَى فِرَاشَهُ وَهُوَ يَنْوِي أَنْ يَقُوْمَ يُصَلِّي مِنَ اللَّيْلِ فَغَلَبَتْهُ عَيْنَاهُ حَتَّى أَصْبَحَ، كُتِبَ لَهُ مَا نَوَى، وَكَانَ نَوْمُهُ صَدَقَةً عَلَيْهِ مِنْ رَبِّهِ (نسائی۔ ابن ماجہ)

ಅಬೂದ್ದರ್ದಾ(ರ) ಅವರು ಪ್ರವಾದಿ(ಸ) ಅವರಿಂದ ಈ ರೀತಿ ಉಲ್ಲೇಖಿಸುತ್ತಾರೆ- ಪ್ರವಾದಿ(ಸ) ಹೇಳಿದರು- ಒಬ್ಬನು ತಾನು ತಹಜ್ಜುದ್ ನಮಾಝ್‌ಗಾಗಿ ಏಳುವೆನು ಎಂಬ ಸಂಕಲ್ಪದೊಂದಿಗೆ ಮಲಗಿದ್ದು, ಅವನಿಗೆ ಗಾಢನಿದ್ರೆ ಬಂದು ಅವನು ಮುಂಜಾನೆಯಾದ ಬಳಿಕವೇ ಎಚ್ಚರಗೊಂಡಿದ್ದರೆ ಅಂತಹ ವ್ಯಕ್ತಿಯ ಕರ್ಮಪತ್ರದಲ್ಲಿ ಆ ರಾತ್ರಿಯ ತಹಜ್ಜುದ್ ನಮಾಝ್ ದಾಖಲಿಸಲ್ಪಡುವುದು ಮತ್ತು ಈ ನಿದ್ರೆಯು ಅವನಿಗೆ ಅವನ ಪ್ರಭುವಿನ ವತಿಯಿಂದ ಉಡುಗೊರೆಯಾಗಿ ಲಭಿಸಿತು. *[ನಸಾಈ, ಇಬ್ನು ಮಾಜಃ]*

---

(6) عَنِ ابْنِ مَسْعُوْدٍ رضی قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ مَنْ أَحْسَنَ الصَّلٰوةَ حَيْثُ يَرَاهُ النَّاسُ وَأَسَاءَهَا حَيْثُ يَخْلُو، فَتِلْكَ اسْتِهَانَةٌ اِسْتَهَانَ بِهَا رَبَّهُ تَبَارَكَ وَتَعَالٰى۔ (المنذری)

ಇಬ್ನು ಮಸ್‌ಊದ್‌ರಿಂದ(ರ) ವರದಿ: ಪ್ರವಾದಿ(ಸ) ಹೇಳಿದರು- ಒಬ್ಬನು ಜನರ ಮುಂದೆ ಸರಿಯಾಗಿ ನಮಾಝ್ ಮಾಡುತ್ತಾನೆ (ಅರ್ಥಾತ್ ಭಯಭಕ್ತಿಯಿಂದ ರುಕೂಅ್, ಸುಜೂದ್‌ಗಳನ್ನು ಸರಿಯಾಗಿ ಮಾಡುತ್ತಾನೆ) ಮತ್ತು ಏಕಾಂತದಲ್ಲಿ ನಮಾಝ್ ಮಾಡುವಾಗ ಸರಿಯಾಗಿ ಮಾಡುವುದಿಲ್ಲ. ಅಂತಹ ವ್ಯಕ್ತಿ ತನ್ನ ಪ್ರಭುವನ್ನು ಅಪಮಾನಿಸುತ್ತಾನೆ.

[ಅಲ್‌ಮುಂದಿರೀ]

---

(7) عَنْ مُعَاذِ بْنِ جَبَلٍ أَنَّهُ قَالَ حِيْنَ بُعِثَ إِلَى الْيَمَنِ: يَا رَسُوْلَ اللّٰهِ أَوْصِنِيْ قَالَ أَخْلِصْ دِيْنَكَ يَكْفِكَ الْعَمَلُ الْقَلِيْلُ (مستدرک، ترغیب وترہیب)

ಮುಆದ್ ಬಿನ್ ಜಬಲ್‌ರಿಂದ(ರ) ವರದಿ: ಪ್ರವಾದಿ(ಸ) ನನ್ನನ್ನು ಯಮನ್‌ನ ರಾಜ್ಯಪಾಲನಾಗಿ ನೇಮಿಸಿ ಕಳಿಸುವಾಗ, 'ನನಗೇನಾದರೂ ಉಪದೇಶಿಸಿರಿ' ಎಂದು ನಾನು

ಬಿನ್ನವಿಸಿದೆ. ಆಗ ಪ್ರವಾದಿ(ಸ) ಹೇಳಿದರು- ನಿಮ್ಮ ಉದ್ದೇಶವನ್ನು ಎಲ್ಲ ರೀತಿಯ ಕಲ್ಮಶದಿಂದ ನಿರ್ಮಲಗೊಳಿಸಿರಿ. ಯಾವುದೇ ಕರ್ಮವನ್ನು ಕೇವಲ ದೇವನ ಸಂಪ್ರೀತಿಗಾಗಿ ಮಾಡಿರಿ. ಅದು ಸ್ವಲ್ಪವಾದರೂ ಸರಿ, ಮೋಕ್ಷಕ್ಕೆ ಸಾಕಾಗುವುದು. *[ಮುಸ್ತದ್ರಿಕ್ ತರ್ಗೀಬ್ ವ ತರ್ಹೀಬ್]*

❖ ❖ ❖

ಮೂಲಭೂತ ವಿಶ್ವಾಸಗಳು

(8) عَنْ اَبِيْ هُرَيْرَةَ رض قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ سَلُوْنِيْ، فَهَابُوْهُ اَنْ يَسْئَلُوْهُ، فَجَاءَ رَجُلٌ فَجَلَسَ عِنْدَ رُكْبَتَيْهِ، فَقَالَ يَا رَسُوْلَ اللّٰهِ مَا الْاِسْلَامُ؟ قَالَ لَا تُشْرِكُ بِاللّٰهِ وَتُقِيْمُ الصَّلٰوةَ وَتُؤْتِي الزَّكٰوةَ وَتَصُوْمُ رَمَضَانَ قَالَ صَدَقْتَ، قَالَ يَا رَسُوْلَ اللّٰهِ مَا الْاِيْمَانُ؟ قَالَ اَنْ تُؤْمِنَ بِاللّٰهِ وَمَلَائِكَتِهٖ وَكُتُبِهٖ وَرُسُلِهٖ، وَتُؤْمِنَ بِالْبَعْثِ الْاٰخِرِ، وَتُؤْمِنَ بِالْقَدْرِ كُلِّهٖ، قَالَ صَدَقْتَ قَالَ يَا رَسُوْلَ اللّٰهِ مَا الْاِحْسَانُ؟ قَالَ اَنْ تَخْشَى اللّٰهَ كَاَنَّكَ تَرَاهُ، فَاِنَّكَ اِنْ لَا تَكُنْ تَرَاهُ فَاِنَّهٗ يَرَاكَ، قَالَ صَدَقْتَ، قَالَ يَا رَسُوْلَ اللّٰهِ مَتٰى تَقُوْمُ السَّاعَةُ؟ قَالَ مَا الْمَسْئُوْلُ عَنْهَا بِاَعْلَمَ مِنَ السَّائِلِ، وَسَاُحَدِّثُكَ عَنْ اَشْرَاطِهَا، اِذَا رَاَيْتَ الْمَرْءَةَ تَلِدُ رَبَّهَا فَذَاكَ مِنْ اَشْرَاطِهَا، وَاِذَا رَاَيْتَ الْحُفَاةَ الْعُرَاةَ الصُّمَّ الْبُكْمَ مُلُوْكَ الْاَرْضِ فَذَاكَ مِنْ اَشْرَاطِهَا، وَاِذَا رَاَيْتَ رِعَاءَ الْبُهْمِ يَتَطَاوَلُوْنَ فِي الْبُنْيَانِ فَذَاكَ مِنْ اَشْرَاطِهَا۔ (بخاری ومسلم)

ಅಬೂ ಹುರೈರಾ(ರ) ಹೇಳುತ್ತಾರೆ- ಪ್ರವಾದಿ(ಸ) ಜನರೊಂದಿಗೆ ಹೀಗೆಂದರು- 'ನೀವು ನನ್ನಲ್ಲಿ ಧರ್ಮದ ವಿಷಯಗಳನ್ನು ಕೇಳಿ ತಿಳಿಯಿರಿ.' ಆದರೆ ಜನರಿಗೆ ಪ್ರವಾದಿಯವರ(ಸ) ಮೇಲೆ ಇದ್ದ ಗೌರವಾದರಗಳಿಂದಾಗಿ, ಅವರು ಸಾಮಾನ್ಯವಾಗಿ ಏನೂ ಪ್ರಶ್ನಿಸುತ್ತಿರಲಿಲ್ಲ (ಹೊರಗಿನಿಂದ ಯಾರಾದರೂ ಬಂದು ಪ್ರಶ್ನೆ ಕೇಳಿದರೆ ತಮಗೂ ಅದರಿಂದ ಪ್ರಯೋಜನ ಪಡೆಯಬಹುದೆಂದು ಪ್ರತಿಯೊಬ್ಬನೂ ನಿರೀಕ್ಷಿಸುತ್ತಿದ್ದನು). ಹೀಗಿರುವಾಗ ಒಬ್ಬ ವ್ಯಕ್ತಿ ಬಂದು, ಪ್ರವಾದಿಯವರ(ಸ) ಸಮೀಪ ಕುಳಿತುಕೊಂಡು ಕೇಳಿದನು- ಅಲ್ಲಾಹನ ಸಂದೇಶ ವಾಹಕರೇ! ಇಸ್ಲಾಮ್ ಎಂದರೇನು? ಪ್ರವಾದಿ(ಸ) ಹೇಳಿದರು- ಯಾರನ್ನೂ ದೇವನ ಸಹಭಾಗಿ

ಯಾಗಿಸದಿರುವುದು, ನಮಾಝ್ ಸಂಸ್ಥಾಪಿಸುವುದು, ಅಲ್ಲಾಹನ ಮಾರ್ಗದಲ್ಲಿ ಸಂಪತ್ತನ್ನು ಖರ್ಚುಮಾಡುವುದು, ರಮಝಾನ್ ತಿಂಗಳಲ್ಲಿ ಉಪವಾಸವ್ರತ ಆಚರಿಸುವುದು. ಆಗ ಆ ವ್ಯಕ್ತಿ, 'ತಾವು ನಿಜ ಹೇಳಿದಿರಿ' ಎಂದನು. ತರುವಾಯ ಅವನು ಕೇಳಿದನು, ಅಲ್ಲಾಹನ ಸಂದೇಶವಾಹಕರೇ, ಈಮಾನ್ ಎಂದರೇನು? ಪ್ರವಾದಿ(ಸ) ಹೇಳಿದರು- ಅಲ್ಲಾಹನನ್ನು, ಮಲಕ್‌ಗಳನ್ನು, ಅಲ್ಲಾಹನ ಗ್ರಂಥಗಳನ್ನು, ಅವನ ಪ್ರವಾದಿಗಳನ್ನು ನಂಬುವುದು, ಮರಣದ ಬಳಿಕ ಜೀವಂತ ಎಬ್ಬಿಸಲ್ಪಡಲಿಕ್ಕಿದೆ ಹಾಗೂ ಈ ಲೋಕದಲ್ಲಿ ಸಂಭವಿಸುವುದೆಲ್ಲವೂ ಅಲ್ಲಾಹನ ವಿಧಿ ನಿಯಮಕ್ಕನುಗುಣವಾಗಿ ನಡೆಯುವುದೆಂದು ದೃಢವಾಗಿ ನಂಬುವುದು. ಆಗ ಅವನು, ತಾವು ಸತ್ಯ ಹೇಳಿದಿರಿ ಎಂದನು. ಆ ಬಳಿಕ ಆ ವ್ಯಕ್ತಿ 'ಇಹ್ಸಾನ್' ಎಂದರೇನು ಎಂದು ಕೇಳಿದನು. ಪ್ರವಾದಿ(ಸ) ಹೇಳಿದರು- 'ಇಹ್ಸಾನ್' ಎಂದರೆ ನೀನು ಅಲ್ಲಾಹನನ್ನು ನೋಡುತ್ತಿರುವೆಯೋ ಎಂಬಂತೆ ಅವನನ್ನು ಭಯಪಡುವುದು. ಒಂದು ವೇಳೆ ನೀನು ಅವನನ್ನು ನೋಡದಿದ್ದರೂ ಅವನಂತೂ ನಿನ್ನನ್ನು ನೋಡುತ್ತಿದ್ದಾನೆ. ಆಗ ಅವನು ಹೇಳಿದನು- ತಾವು ಸರಿಯಾದ ಉತ್ತರವನ್ನೇ ನೀಡಿದಿರಿ.

ತರುವಾಯ ಅವನು ಕಿಯಾಮತ್(ಅಂತಿಮದಿನ) ಯಾವಾಗ ಬರುವುದೆಂದು ಕೇಳಿದನು. ಪ್ರವಾದಿ(ಸ) ಹೇಳಿದರು- ನನಗೂ ನಿಮ್ಮಂತೆಯೇ ಅದು ಬರುವ ಸಮಯ ತಿಳಿದಿಲ್ಲ. ಆದರೆ ಅದು ಬರುವುದಕ್ಕಿಂತ ಮುಂಚೆ ಪ್ರಕಟವಾಗುವ ಕೆಲವು ಸೂಚನೆಗಳನ್ನು ನೀಡಬಲ್ಲೆ- (1) ಸ್ತ್ರೀಯು ತನ್ನ ಮಾಲಕನನ್ನು ಹಡೆಯುವುದನ್ನು ಕಂಡರೆ ಕಿಯಾಮತ್ ಹತ್ತಿರ ಬಂತೆಂದು ತಿಳಿಯಿರಿ. (2) ನಗ್ನ ಪಾದ ಮತ್ತು ನಗ್ನ ಶರೀರದ ಕಿವುಡರ ಮತ್ತು ಮೂಗರ ಕೈಯಲ್ಲಿ ಭೂಮಿಯ ಅಧಿಕಾರ ಬಂದರೆ ಅದೂ ಕಿಯಾಮತ್‌ನ ಕುರುಹುಗಳಲ್ಲೊಂದಾಗಿದೆ. (3) ಜಾನುವಾರುಗಳನ್ನು ಮೇಯಿಸುವವರು ಭವ್ಯ ಕಟ್ಟಡಗಳನ್ನು ನಿರ್ಮಿಸುವುದರಲ್ಲಿ ಪೈಪೋಟಿ ನಡೆಸುವುದನ್ನು ಕಂಡರೆ ಕಿಯಾಮತ್ ಹತ್ತಿರ ಬಂತೆಂದು ತಿಳಿಯಿರಿ.

[ಬುಖಾರಿ, ಮುಸ್ಲಿಮ್]

ಟಿಪ್ಪಣಿ: ಈಮಾನ್ ಎಂಬ ಪದದ ನೈಜ ಅರ್ಥ- ಯಾರನ್ನಾದರೂ ನಂಬುವುದು, ಅವನ ಮಾತನ್ನು ಸತ್ಯವೆಂದು ತಿಳಿದು ಒಪ್ಪಿಕೊಂಡು ಅದನ್ನು ತನ್ನದಾಗಿಸುವುದು. ಮನುಷ್ಯನಿಗೆ ಯಾವುದಾದರೊಂದು ವಿಷಯದ ಸತ್ಯಸಂಧತೆಯ ಬಗ್ಗೆ ಖಾತ್ರಿಯಾದಾಗ ಮಾತ್ರ ಆತನು ಅದನ್ನು ನಂಬಿ ಸ್ವೀಕರಿಸಿಕೊಳ್ಳುತ್ತಾನೆ. ಈಮಾನ್‌ನ ನೈಜ ಸ್ಫೂರ್ತಿ ಇದೇ ವಿಶ್ವಾಸ ಮತ್ತು ನಂಬಿಕೆಯಾಗಿದೆ. ಒಬ್ಬನು ಸತ್ಯ ವಿಶ್ವಾಸಿಯಾಗಲು ಅಲ್ಲಾಹನ ವತಿಯಿಂದ ಬಂದ ಎಲ್ಲ ವಿಷಯಗಳನ್ನು ಒಪ್ಪಿ ಅಂಗೀಕರಿಸಬೇಕಾದುದು ಅಗತ್ಯ.

ಈ ಹದೀಸ್‌ನಲ್ಲಿ ಮೂಲಭೂತ ವಿಶ್ವಾಸಗಳ ಪ್ರಸ್ತಾಪ ಬಂದಿದೆ. ಅವುಗಳ ಪ್ರತ್ಯಪ್ರತ್ಯೇಕ ವಿವರಣೆಯನ್ನು ಇಲ್ಲಿ ಕೊಡಲಾಗಿದೆ-

1) ಅಲ್ಲಾಹನ ಮೇಲೆ ವಿಶ್ವಾಸ

'ಈಮಾನ್ ಬಿಲ್ಲಾಹ್' ಅರ್ಥಾತ್ ಅಲ್ಲಾಹನ ಮೇಲೆ ವಿಶ್ವಾಸವಿರಿಸುವುದೆಂದರೆ, ಅಲ್ಲಾಹನನ್ನು ಸದಾ ಇರುವವನೆಂದು ನಂಬುವುದು. ಅವನೇ ಈ ಪ್ರಪಂಚದ ಸೃಷ್ಟಿಕರ್ತನೆಂದೂ

ಅದರ ವ್ಯವಸ್ಥೆಯನ್ನು ನೋಡಿಕೊಳ್ಳುವವನೆಂದೂ ಒಪ್ಪಿಕೊಳ್ಳುವುದು. ಅವನು ಎಲ್ಲ ರೀತಿಯ ನ್ಯೂನತೆ ಹಾಗೂ ದೌರ್ಬಲ್ಯಗಳಿಂದ ಮುಕ್ತನೆಂದೂ ಎಲ್ಲ ಒಳ್ಳೆಯ ಗುಣಗಳನ್ನು ಹೊಂದಿದವನೂ ಎಲ್ಲ ಒಳಿತುಗಳ ಮೂಲವೆಂದೂ ನಂಬುವುದು. ಅವನೇ ನೈಜ ಆರಾಧ್ಯ, ಜೀವನದ ನಿಯಮಗಳನ್ನು ನೀಡುವ ಆಜ್ಞಾಧಿಕಾರಿ ಮತ್ತು ಒಡೆಯನೆಂದು ಅಂಗೀಕರಿಸುವುದು.

ಈ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಹದೀಸ್‌ಗಳನ್ನು ನೀಡಲಾಗುತ್ತದೆ. ಅದರಿಂದ ಅಲ್ಲಾಹನ ಮೇಲೆ ವಿಶ್ವಾಸವಿರಿಸುವುದರ ತಾತ್ಪರ್ಯ ಮನವರಿಕೆಯಾಗುತ್ತದೆ.

(9) قَالَ أَتَدْرُوْنَ مَا الْإِيْمَانُ بِاللّٰهِ وَحْدَهٗ؟ قَالُوا اللّٰهُ وَرَسُوْلُهٗ أَعْلَمُ. قَالَ شَهَادَةُ أَنْ لَّا إِلٰهَ إِلَّا اللّٰهُ وَأَنَّ مُحَمَّدًا رَّسُوْلُ اللّٰهِ وَإِقَامُ الصَّلٰوةِ وَإِيْتَاءُ الزَّكٰوةِ وَصِيَامُ رَمَضَانَ۔ (بخاری ومسلم ۔ ابن عباس)

ಪ್ರವಾದಿ(ಸ) ಅವರು (ಅಬುಲ್‌ಕೈಸ್ ಗೋತ್ರದ ನಿಯೋಗದೊಂದಿಗೆ) ಹೇಳಿದರು- ಏಕ ಅಲ್ಲಾಹನ ಮೇಲೆ ವಿಶ್ವಾಸವಿರಿಸುವುದೆಂದರೆ ಏನೆಂದು ನಿಮಗೆ ತಿಳಿದಿದೆಯೆ? ಅವರು ಹೇಳಿದರು- ಅದನ್ನು ಅಲ್ಲಾಹ್ ಮತ್ತು ಅವನ ಸಂದೇಶವಾಹಕರೇ ಚೆನ್ನಾಗಿ ಬಲ್ಲರು. ಪ್ರವಾದಿ(ಸ) ಹೇಳಿದರು- ಈಮಾನ್(ವಿಶ್ವಾಸ) ಎಂದರೆ ಅಲ್ಲಾಹನ ಹೊರತು ಯಾವ ಆರಾಧ್ಯರೂ ಇಲ್ಲವೆಂದೂ ಮುಹಮ್ಮದ್(ಸ) ಆತನ ಸಂದೇಶವಾಹಕರೆಂದೂ ಸಾಕ್ಷ್ಯ ನುಡಿಯುವುದು (ಮತ್ತು ಘೋಷಿಸುವುದು), ನಮಾಝ್ ಸಂಸ್ಥಾಪಿಸುವುದು, ಝಕಾತ್ ಕೊಡುವುದು ಮತ್ತು ರಮಝಾನ್ ತಿಂಗಳಲ್ಲಿ ಉಪವಾಸ ವ್ರತ ಆಚರಿಸುವುದು.

[ಬುಖಾರಿ, ಮುಸ್ಲಿಮ್- ವರದಿ: ಇಬ್ನು ಅಬ್ಬಾಸ್(ರ)]

---

(10) عَنْ أَنَسٍ رض قَالَ قَلَّمَا خَطَبَنَا رَسُوْلُ اللّٰهِ صَلَّى اللّٰهُ عَلَيْهِ وَسَلَّمَ إِلَّا قَالَ لَا إِيْمَانَ لِمَنْ لَا أَمَانَةَ لَهٗ، وَلَا دِيْنَ لِمَنْ لَا عَهْدَ لَهٗ ۔ (مشکوٰۃ بحوالہ بیہقی)

ಅನಸ್(ರ) ಹೇಳುತ್ತಾರೆ- ಪ್ರವಾದಿಯವರು(ಸ) ಉಪನ್ಯಾಸ ನೀಡುತ್ತಿದ್ದಾಗಲೆಲ್ಲ 'ಯಾರಲ್ಲಿ ಅಮಾನತ್ ಇಲ್ಲವೋ ಆತನಲ್ಲಿ ಈಮಾನ್ ಇಲ್ಲ, ಯಾರು ವಚನ ಪಾಲನೆ ಮಾಡುವುದಿಲ್ಲವೋ ಅವನ ಬಳಿ ಧರ್ಮವಿಲ್ಲ' ಎಂಬ ಮಾತನ್ನು ಹೇಳದೆ ಇರುತ್ತಿರಲಿಲ್ಲ.

[ಮಿಶ್ಕಾತ್- ಬೈಹಕಿಯಿಂದ]

ಟಿಪ್ಪಣಿ: ಅಲ್ಲಾಹನ ಮತ್ತು ಜನರ ಹಕ್ಕುಗಳನ್ನು ಪೂರೈಸದವನ ವಿಶ್ವಾಸ ದೃಢವಾಗಿರುವುದಿಲ್ಲ. ಪ್ರವಾದಿಯವರ(ಸ) ಈ ಮಾತಿನ ಇಂಗಿತವೆಂಬುದು ಅದೇ ರೀತಿ ಒಬ್ಬನು ಯಾವುದಾದರೂ ಹೊಣೆ

ವಹಿಸುವ ವಾಗ್ದಾನ ಮಾಡಿದ್ದು ಅದನ್ನು ಪೂರೈಸದಿದ್ದರೆ ಅವನಲ್ಲಿ ಧರ್ಮನಿಷ್ಠೆಯಿಲ್ಲವೆಂದರ್ಥ. ಒಬ್ಬನ ಮನಸ್ಸಿನಲ್ಲಿ ವಿಶ್ವಾಸವು ದೃಢವಾಗಿ ಬೇರೂರಿದರೆ ಅವನು ಎಲ್ಲರ ಹಕ್ಕುಗಳನ್ನು ಪೂರೈಸುವಲ್ಲಿ ಪ್ರಾಮಾಣಿಕನಾಗಿರುತ್ತಾನೆ. ಯಾರ ಹಕ್ಕನ್ನೂ ವಂಚಿಸುವುದಿಲ್ಲ. ಅದೇ ರೀತಿ ಒಬ್ಬನಲ್ಲಿ ಧರ್ಮನಿಷ್ಠೆಯಿದ್ದರೆ ಅವನು ಮಾಡಿದ ವಾಗ್ದಾನಗಳನ್ನು ಜೀವನದಾದ್ಯಂತ ಪಾಲಿಸುವನು. ಇಲ್ಲಿ ನೆನಪಿಡಬೇಕಾದ ಅಂಶ ವೆಂದರೆ ಅತಿ ದೊಡ್ಡ ಹಕ್ಕು ಇರುವುದು ಅಲ್ಲಾಹನದ್ದು, ಆತನ ಪ್ರವಾದಿಯದ್ದು(ಸ) ಹಾಗೂ ಅವನ ಗ್ರಂಥ(ಕುರ್‌ಆನ್)ದ್ದಾಗಿದೆ. ಅನಂತರ ಜನರ ಹಕ್ಕುಗಳಾಗಿವೆ. ಅತಿದೊಡ್ಡ ವಾಗ್ದಾನ ಮನುಷ್ಯನು ಅಲ್ಲಾಹನೊಂದಿಗೆ, ಆತನು ಕಳಿಸಿದ ಪ್ರವಾದಿಯೊಂದಿಗೆ ಹಾಗೂ ಅವರು ತಂದ ಧರ್ಮದೊಂದಿಗೆ ಮಾಡುವ ವಾಗ್ದಾನವಾಗಿದೆ. ಪವಿತ್ರ ಕುರ್‌ಆನ್ ಮತ್ತು ಹದೀಸ್‌ಗಳಲ್ಲಿ 'ಅಮಾನತ್' ಮತ್ತು 'ಅಹ್ದ್' (ವಚನ) ಎಂಬ ಪದಗಳು ವಿಶಾಲಾರ್ಥಗಳಲ್ಲಿ ಪ್ರಯೋಗವಾಗಿವೆ.

---

(11) عَنْ عَمْرِو بْنِ عَبَسَةَ رضـ قَالَ قُلْتُ يَا رَسُوْلَ اللّٰهِ مَا الْاِيْمَانُ؟ قَالَ الصَّبْرُ وَالسَّمَاحَةُ (مسلم)

ಅಮ್ರ್ ಬಿನ್ ಅಬಸ(ರ) ಹೇಳುತ್ತಾರೆ- ನಾನು ಪ್ರವಾದಿಯವರೊಂದಿಗೆ(ಸ) 'ಈಮಾನ್' ಎಂದರೇನೆಂದು ಕೇಳಿದೆ. ಪ್ರವಾದಿ(ಸ) ಹೇಳಿದರು- 'ಸಬ್ರ್ ಮತ್ತು ಸಮಾಹತ್.'

[ಮುಸ್ಲಿಮ್]

ಟಿಪ್ಪಣಿ: ಈಮಾನ್ ಎಂದರೆ ಮನುಷ್ಯನು ಅಲ್ಲಾಹನ ಮಾರ್ಗವನ್ನು ಮೆಚ್ಚಿಕೊಂಡು ಈ ಮಾರ್ಗದಲ್ಲಿ ಬರುವ ಸಕಲ ಸಂಕಷ್ಟಗಳನ್ನು ಸಂತೋಷದಿಂದ ಸಹಿಸುವುದು ಮತ್ತು ಅಲ್ಲಾಹನ ಆಶ್ರಯ ಹಿಡಿದು ಮುಂದೆ ಸಾಗುವುದಾಗಿದೆ (ಇದುವೇ ಸಬ್ರ್). 'ಸಮಾಹತ್' ಎಂದರೆ ಮನುಷ್ಯನು ತಾನು ಸಂಪಾದಿಸಿದುದನ್ನು ಅಲ್ಲಾಹನ ಅಪೇಕ್ಷಿತ ದಾಸರ ಮೇಲೆ ಖರ್ಚು ಮಾಡಿ ಅದರಿಂದ ಸಂತೋಷ ಗೊಳ್ಳುವುದಾಗಿದೆ. ಈ ಪದಕ್ಕೆ ಮೃದುತ್ವ ಮತ್ತು ಹೃದಯ ವೈಶಾಲ್ಯ ಎಂಬ ಅರ್ಥಗಳೂ ಇವೆ.

---

(12) عَنْ اَبِيْ اُمَامَةَ رضـ قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ مَنْ اَحَبَّ لِلّٰهِ وَاَبْغَضَ لِلّٰهِ وَاَعْطٰى لِلّٰهِ وَمَنَعَ لِلّٰهِ فَقَدِ اسْتَكْمَلَ الْاِيْمَانَ۔ (بخاری)

ಅಬೂ ಉಮಾಮರಿಂದ(ರ) ವರದಿ: ಪ್ರವಾದಿ(ಸ) ಹೇಳಿದರು- ಯಾರು ಅಲ್ಲಾಹನಿಗಾಗಿ ಗೆಳೆತನ ಬೆಳೆಸಿದನೋ ಅಲ್ಲಾಹನಿಗಾಗಿ ಹಗೆತನ ಕಟ್ಟಿದನೋ ಅಲ್ಲಾಹನಿಗಾಗಿ ಕೊಟ್ಟನೋ ಹಾಗೂ ಅಲ್ಲಾಹನಿಗಾಗಿ ತಡೆಹಿಡಿದನೋ ಅವನು ತನ್ನ ವಿಶ್ವಾಸವನ್ನು ಪೂರ್ಣಗೊಳಿಸಿದನು.

[ಬುಖಾರಿ]

ಟಿಪ್ಪಣಿ: ಮನುಷ್ಯನು ತನ್ನನ್ನು ಸಂಸ್ಕರಿಸುತ್ತಾ ಎಲ್ಲಿಗೆ ತಲಪುತ್ತಾನೆಂದರೆ ಯಾರೊಂದಿಗಾದರೂ ಸ್ನೇಹ ಬೆಳೆಸುವುದಾದರೆ ಅಲ್ಲಾಹನಿಗಾಗಿ ಬೆಳೆಸುತ್ತಾನೆ ಮತ್ತು ಯಾರಿಂದಾದರೂ ಸ್ನೇಹ ಮುರಿಯುವುದಾದರೆ ಅಲ್ಲಾಹನಿಗಾಗಿ ಮುರಿಯುತ್ತಾನೆ. ಅದೇ ರೀತಿ ಯಾರಿಗಾದರೂ ನೀಡುವುದಿದ್ದರೂ ನೀಡದಿರುವುದಿದ್ದರೂ ಆಗಲೂ ಅದರಲ್ಲಿ ಅಲ್ಲಾಹನ ಸಂಪ್ರೀತಿಯಲ್ಲದೆ ಬೇರಾವ ಉದ್ದೇಶ ಅಥವಾ ಪ್ರೇರಣೆಯಿರುವುದಿಲ್ಲ. ಅವನ ಪ್ರೀತಿ ಮತ್ತು ದ್ವೇಷಕ್ಕೆ ಅಲ್ಲಾಹನ ಧರ್ಮವೇ ಮೂಲಾಧಾರವಾಗಿದ್ದು, ಅವನ ಮನಸ್ಸು ಲೌಕಿಕ ಹಿತಾಸಕ್ತಿಯಿಂದ ಸಂಪೂರ್ಣ ಮುಕ್ತವಾಗಿರುವುದು. ಒಬ್ಬ ಮನುಷ್ಯನು ಈ ಸ್ಥಿತಿಗೆ ತಲಪಿದ ನೆಂದರೆ ಅವನ ಈಮಾನ್ (ವಿಶ್ವಾಸ) ಪೂರ್ಣಗೊಂಡಿತೆಂದು ಭಾವಿಸಬೇಕು.

---

(13) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ ذَاقَ طَعْمَ الْاِيْمَانِ مَنْ رَضِيَ بِاللّٰهِ رَبًّا وَّبِالْاِسْلَامِ دِيْنًا وَّبِمُحَمَّدٍ رَّسُوْلًا۔ (بخاری ومسلم - عباسؓ)

ಅಬ್ಬಾಸ್(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು- ಅಲ್ಲಾಹನನ್ನು ತನ್ನ ಪ್ರಭು ವೆಂದೂ ಇಸ್ಲಾಮನ್ನು ತನ್ನ ಧರ್ಮವೆಂದೂ ಮುಹಮ್ಮದ್‌ರನ್ನು(ಸ) ತನ್ನ ಪ್ರವಾದಿಯೆಂದೂ ಒಪ್ಪಿ, ಅದರಲ್ಲಿ ಸಂತೃಪ್ತನಾದವನು ಈಮಾನಿನ (ಸತ್ಯವಿಶ್ವಾಸದ) ರುಚಿಯನ್ನು ಸವಿದನು.

[ಬುಖಾರಿ, ಮುಸ್ಲಿಮ್]

ಟಿಪ್ಪಣಿ: ಆತ ಅಲ್ಲಾಹನ ದಾಸ್ಯಕ್ಕೆ ತನ್ನನ್ನು ಸಮರ್ಪಿಸಿ, ಇಸ್ಲಾಮನ್ನು ತನ್ನ ಜೀವನ ಕ್ರಮವಾಗಿ ಅಂಗೀಕರಿಸಿ, ತನ್ನನ್ನು ಪ್ರವಾದಿ ಮುಹಮ್ಮದ್‌ರ(ಸ) ಮಾರ್ಗದರ್ಶನಕ್ಕೆ ಒಪ್ಪಿಸಿ ಸಂಪೂರ್ಣ ತೃಪ್ತ ನಾದನು. ತನಗೆ ಇನ್ನಾರ ದಾಸ್ಯವನ್ನೂ ಕೈಗೊಳ್ಳಲಿಕ್ಕಿಲ್ಲ, ಎಲ್ಲ ಸ್ಥಿತಿಯಲ್ಲೂ ಇಸ್ಲಾಮ್ ತೋರಿಸಿದ ಮಾರ್ಗದಲ್ಲಿ ನಡೆಯಬೇಕಾಗಿದೆ ಮತ್ತು ಪ್ರವಾದಿ ಮುಹಮ್ಮದ್‌ರ(ಸ) ಹೊರತು ಇನ್ನಾರ ಮಾರ್ಗದರ್ಶನ ದಂತೆಯೂ ತನಗೆ ಜೀವಿಸಬೇಕಾಗಿಲ್ಲ ಎಂಬ ಸ್ಥಿತಿಗೆ ಯಾರಾದರೂ ತಲಪಿದರೆ ಆ ಭಾಗ್ಯವಂತನು ಈಮಾನಿನ ರುಚಿಯನ್ನು ಪಡೆದನು ಎಂದು ಭಾವಿಸಬೇಕು.

---

(14) عَنْ زَيْدِ بْنِ اَرْقَمَ رضؓ قَالَ: قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ مَنْ قَالَ لَا اِلٰهَ اِلَّا اللّٰهُ مُخْلِصًا دَخَلَ الْجَنَّةَ، قِيْلَ وَمَا اِخْلَاصُهَا؟ قَالَ اَنْ تَحْجُزَهٗ عَنْ مَحَارِمِ اللّٰهِ وَفِيْ حَدِيْثِ رِفَاعَةَ الْجُهَنِيِّ عِنْدَ اَحْمَدَ لَا يَمُوْتُ عَبْدٌ يَّشْهَدُ اَنْ لَّا اِلٰهَ اِلَّا اللّٰهُ وَ اَنِّيْ رَسُوْلُ اللّٰهِ صِدْقًا مِّنْ قَلْبِهٖ ثُمَّ يُسَدِّدُ اِلَّا سَلَكَ فِي الْجَنَّةِ وَفِيْ رِوَايَةٍ عِنْدَ التِّرْمِذِيِّ مَا اجْتُنِبَتِ الْكَبَائِرُ۔ (مسند احمد)

ರ್ಖೈದ್ ಬಿನ್ ಅರ್ಕಮ್(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು- ಯಾರು 'ಪ್ರಾಮಾಣಿಕ'ವಾಗಿ 'ಲಾ ಇಲಾಹ ಇಲ್ಲಲ್ಲಾಹ್' (ಅಲ್ಲಾಹನ ಹೊರತು ಅನ್ಯ ಆರಾಧ್ಯರಿಲ್ಲ) ಎಂದು ಹೇಳುವನೋ ಅವನು ಸ್ವರ್ಗ ಪ್ರವೇಶಿಸುವನು. 'ಪ್ರಾಮಾಣಿಕವಾಗಿ ಲಾ ಇಲಾಹ ಇಲ್ಲಲ್ಲಾಹ್ ಹೇಳುವುದೆಂದರೆ ಏನೆಂದು ಜನರು ಕೇಳಿದರು. ಪ್ರವಾದಿ(ಸ) ಹೇಳಿದರು- ಅರ್ಥಾತ್: ಹಾಗೆ ಹೇಳುವವನು ಅಲ್ಲಾಹನು ನಿಷೇಧಿಸಿದ ಎಲ್ಲ ವಿಷಯಗಳಿಂದ ದೂರವಿರುತ್ತಾನೆಂದಾಗಿದೆ.

ಮುಸ್ನದ್ ಅಹ್ಮದ್‌ನಲ್ಲಿ ರಿಫಾಅ ಜುಹ್ನೀ ಉಲ್ಲೇಖಿಸಿದ ಪದಗಳು ಹೀಗಿವೆ- ಅಲ್ಲಾಹನ ಹೊರತು ಆರಾಧ್ಯರಾರೂ ಇಲ್ಲವೆಂದೂ, ನಾನು [ಮುಹಮ್ಮದ್(ಸ)] ಅಲ್ಲಾಹನ ಸಂದೇಶವಾಹಕನೆಂದೂ ಪ್ರಾಮಾಣಿಕವಾಗಿ ಹೇಳಿ ಸನ್ಮಾರ್ಗದಲ್ಲಿ ನಡೆಯುವ (ಅಂದರೆ ಈಮಾನಿನ ಬೇಡಿಕೆಗಳನ್ನು ಪೂರೈಸಿದರೆ, ಸತ್ಕರ್ಮಗಳನ್ನು ಮಾಡಿದರೆ ಮತ್ತು ಕೆಟ್ಟ ಕಾರ್ಯಗಳಿಂದ ದೂರವಿದ್ದರೆ) ಅಲ್ಲಾಹನ ದಾಸನು ಸ್ವರ್ಗ ಪ್ರವೇಶ ಮಾಡುವನು.

ತಿರ್ಮಿದಿಯ ವರದಿಯಲ್ಲಿ ಹೀಗಿದೆ- ತೌಹೀದ್‌ನ (ಏಕದೇವತ್ವ) ವಚನ ಉಚ್ಚರಿಸಿ ಮಹಾ ಪಾಪಗಳಿಂದ ದೂರವಿರುವ ಅಲ್ಲಾಹನ ದಾಸನು ಸ್ವರ್ಗಕ್ಕೆ ಹೋಗುವನು. *[ಮುಸ್ನದ್ ಅಹ್ಮದ್]*

ಟಿಪ್ಪಣಿ: ಪ್ರಸ್ತುತ ಮೂರೂ ಹದೀಸ್‌ಗಳನ್ನು ಗಮನಿಸಿದರೆ, ಕೇವಲ ಈಮಾನಿನ ಕಲಿಮ (ವಿಶ್ವಾಸದ ವಚನ) ಸ್ವರ್ಗ ಪ್ರವೇಶಕ್ಕೆ ಸಾಕಾಗಲಾರದು. ಬದಲಾಗಿ ಈ ಹದೀಸ್‌ಗಳಲ್ಲಿ ಪ್ರಸ್ತಾಪಿಸಲಾಗಿರುವ ಎಲ್ಲ ವಿಷಯಗಳನ್ನೂ ಪಾಲಿಸಬೇಕು ಎಂದು ತಿಳಿದು ಬರುತ್ತದೆ.

2) ದೇವಚರರ ಮೇಲೆ ವಿಶ್ವಾಸ

ದೇವಚರರ ಮೇಲೆ ವಿಶ್ವಾಸವಿರಿಸುವುದೆಂದರೆ ಅದರ ಅಸ್ತಿತ್ವವನ್ನು ಒಪ್ಪಿಕೊಳ್ಳುವುದು ಮತ್ತು ಅವರು ಅಲ್ಲಾಹನು ಪ್ರಕಾಶದಿಂದ ಸೃಷ್ಟಿಸಿದ ಪಾವನ ಸೃಷ್ಟಿಗಳು, ಅವರು ಅಲ್ಲಾಹನ ಆಜ್ಞೋಲ್ಲಂಘನೆ ಮಾಡುವುದಿಲ್ಲ, ಸದಾ ಅಲ್ಲಾಹನ ಆರಾಧನೆಯಲ್ಲಿ ತಲ್ಲೀನರಾಗಿರುತ್ತಾರೆ ಮತ್ತು ವಿಧೇಯ ದಾಸರಂತೆ ತಮ್ಮ ಒಡೆಯನ ಯಾವುದೇ ಆಜ್ಞೆಯನ್ನು ಪಾಲಿಸಲಿಕ್ಕಾಗಿ ಸದಾ ಸಿದ್ಧರಾಗಿ ನಿಂತಿರುತ್ತಾರೆ ಎಂದು ದೃಢವಾಗಿ ನಂಬುವುದಾಗಿದೆ.

3) ಪ್ರವಾದಿಗಳ ಮೇಲೆ ವಿಶ್ವಾಸ

ಪ್ರವಾದಿಗಳ ಮೇಲೆ ವಿಶ್ವಾಸವಿರಿಸುವುದರ ತಾತ್ಪರ್ಯವೇನೆಂದರೆ- ಅಲ್ಲಾಹನ ವತಿಯಿಂದ ಬಂದಿರುವ ಪ್ರವಾದಿಗಳೆಲ್ಲರೂ ಸತ್ಯವಂತರು. ಅವರೆಲ್ಲರೂ ಅಲ್ಲಾಹನ ವಾಣಿಯನ್ನು ಯಾವುದೇ ಹೆಚ್ಚು ಕಡಿಮೆ ಮಾಡದೆ ಜನರಿಗೆ ತಲಪಿಸಿದರು. ಈ ಪರಂಪರೆಯ ಕೊನೆಯ ಕೊಂಡಿ ಪ್ರವಾದಿ ಮುಹಮ್ಮದ್(ಸ) ಆಗಿದ್ದಾರೆ. ಇನ್ನು ಮಾನವರ ಮೋಕ್ಷವು ಕೇವಲ ಅವರನ್ನು ಅನುಸರಿಸುವುದರಲ್ಲಿದೆ ಎಂದು ನಂಬುವುದಾಗಿದೆ. ಈ ವಿಷಯಕ್ಕೆ ಸಂಬಂಧಿಸಿದ ಕೆಲವು ಹದೀಸ್‌ಗಳನ್ನು ಇಲ್ಲಿ ಕೊಡಲಾಗಿದೆ-

(15) عَنْ اَنَسٍ رض قَالَ، قَالَ لِيْ رَسُوْلُ اللّٰهِ صَلَّى اللّٰهُ عَلَيْهِ وَسَلَّمَ يَا بُنَيَّ اِنْ قَدَرْتَ
اَنْ تُصْبِحَ وَتُمْسِيَ وَلَيْسَ فِيْ قَلْبِكَ غِشٌّ لِاَحَدٍ فَافْعَلْ، ثُمَّ قَالَ يَا بُنَيَّ ذٰلِكَ مِنْ سُنَّتِيْ،
وَمَنْ اَحَبَّ سُنَّتِيْ فَقَدْ اَحَبَّنِيْ، وَمَنْ اَحَبَّنِيْ كَانَ مَعِيْ فِي الْجَنَّةِ (مسلم)

ಅನಸ್(ರ) ಹೇಳುತ್ತಾರೆ: ಪ್ರವಾದಿ(ಸ) ನನ್ನೊಂದಿಗೆ ಹೀಗೆಂದರು- ನನ್ನ ಪ್ರಿಯ ಪುತ್ರಾ! ನಿನಗೆ ನಿನ್ನ ಮನಸ್ಸಿನಲ್ಲಿ ಯಾರ ವಿರುದ್ಧವಾದರೂ ಅಹಿತ ಭಾವನೆಯಿಲ್ಲದಂತಹ ಅವಸ್ಥೆಯಲ್ಲಿ ಜೀವನ ಸಾಗಿಸಲು ಸಾಧ್ಯವಾದರೆ ಹಾಗೆಯೇ ಜೀವಿಸು. ಅನಂತರ ಹೇಳಿದರು- ಪ್ರಿಯ ಪುತ್ರಾ! ನನ್ನ ಕ್ರಮವೂ ಇದುವೇ ಆಗಿದೆ. ನನ್ನ ಮನಸ್ಸಿನಲ್ಲಿ ಯಾರ ವಿರುದ್ಧವೂ ಯಾವುದೇ ಮಾಲಿನ್ಯವಿಲ್ಲ. ಯಾರು ನನ್ನ ಚರ್ಯೆ (ಕ್ರಮ)ಯನ್ನು ಪ್ರೀತಿಸಿದನೋ ಅವನು ನನ್ನನ್ನು ಪ್ರೀತಿಸಿದನು. ಯಾರು ನನ್ನನ್ನು ಪ್ರೀತಿಸಿದನೋ ಅವನು ನನ್ನೊಂದಿಗೆ ಸ್ವರ್ಗದಲ್ಲಿರುವನು. *[ಮುಸ್ಲಿಮ್]*

---

(16) عَنْ اَنَسٍ رض قَالَ جَاءَ ثَلَاثَةُ رَهْطٍ اِلٰى اَزْوَاجِ النَّبِيِّ صَلَّى اللّٰهُ عَلَيْهِ وَسَلَّمَ
يَسْاَلُوْنَ عَنْ عِبَادَةِ النَّبِيِّ صَلَّى اللّٰهُ عَلَيْهِ وَسَلَّمَ، فَلَمَّا اُخْبِرُوْا بِهَا كَاَنَّهُمْ تَقَالُّوْهَا
فَقَالُوْا اَيْنَ نَحْنُ مِنَ النَّبِيِّ صَلَّى اللّٰهُ عَلَيْهِ وَسَلَّمَ وَقَدْ غَفَرَ اللّٰهُ مَا تَقَدَّمَ مِنْ ذَنْبِهٖ
وَمَا تَاَخَّرَ، فَقَالَ اَحَدُهُمْ اَمَّا اَنَا فَاُصَلِّي اللَّيْلَ اَبَدًا، وَقَالَ الْاٰخَرُ اَنَا اَصُوْمُ النَّهَارَ
اَبَدًا فَلَا اُفْطِرُ، وَقَالَ الْاٰخَرُ اَنَا اَعْتَزِلُ النِّسَاءَ فَلَا اَتَزَوَّجُ اَبَدًا، فَجَاءَ النَّبِيُّ
صَلَّى اللّٰهُ عَلَيْهِ وَسَلَّمَ اِلَيْهِمْ، فَقَالَ اَنْتُمُ الَّذِيْنَ قُلْتُمْ كَذَا وَكَذَا؟ اَمَا وَاللّٰهِ
اِنِّيْ لَاَخْشَاكُمْ لِلّٰهِ وَاَتْقَاكُمْ لَهٗ لٰكِنِّيْ اَصُوْمُ وَاُفْطِرُ وَاُصَلِّيْ وَاَرْقُدُ، وَاَتَزَوَّجُ
النِّسَاءَ فَمَنْ رَغِبَ عَنْ سُنَّتِيْ فَلَيْسَ مِنِّيْ۔ (مسلم)

ಅನಸ್(ರ) ಹೇಳುತ್ತಾರೆ: ಪ್ರವಾದಿಯವರ(ಸ) ಆರಾಧನೆಗಳ ಬಗ್ಗೆ ತಿಳಿಯಲು ಮೂರು ಮಂದಿಯ ನಿಯೋಗವೊಂದು ಪ್ರವಾದಿ ಪತ್ನಿಯರ(ರ) ಬಳಿಗೆ ಹೋದರು. ಅವರಿಗೆ ಆ

ಕುರಿತು ತಿಳಿಸಲಾಯಿತು. ಆಗ ಅವರಿಗೆ ಈ ಆರಾಧನೆಗಳ ಪ್ರಮಾಣ ಕಡಿಮೆ ಎನಿಸಿತು. ಅವರು ಹೀಗೆ ಹೇಳತೊಡಗಿದರು- ಪ್ರವಾದಿಯವರಿಗೆ(ಸ) ಹೋಲಿಸಿದರೆ ನಮ್ಮ ಸ್ಥಿತಿಯೇನು? ನಾವಂತೂ ಪ್ರವಾದಿಗೆ ಸಮಾನರಲ್ಲ. ಪ್ರವಾದಿವರ್ಯರ(ಸ) ಹಿಂದಿನ ಮತ್ತು ಮುಂದಿನ ಪಾಪಗಳೆಲ್ಲವೂ ಕ್ಷಮಿಸಲ್ಪಟ್ಟಿವೆಯಷ್ಟೆ. ಹಾಗೆ ಅವರಲ್ಲಿ ಒಬ್ಬನು, ನಾನು ರಾತ್ರಿಯಿಡೀ ನಫಿಲ್ ನಮಾಝ್ ಮಾಡುವೆನೆಂದು ನಿಶ್ಚಯಿಸಿಕೊಂಡನು. ಇನ್ನೊಬ್ಬನು, ನಾನು ಎಡೆಬಿಡದೆ ಉಪವಾಸ ಆಚರಿಸುವೆನೆಂದು ಹೇಳಿದನು. ಮತ್ತೊಬ್ಬನು, ನಾನು ಜೀವನದಾದ್ಯಂತ ಸ್ತ್ರೀಯರಿಂದ ದೂರವಿರುವೆ, ಎಂದೂ ವಿವಾಹ ಮಾಡಲಾರೆನೆಂದೂ ಹೇಳಿದನು. (ಪ್ರವಾದಿಯವರಿಗೆ(ಸ) ಇವರ ಈ ವೈರಾಗ್ಯದ ಮಾತುಗಳ ಸುದ್ದಿ ಸಿಕ್ಕಿದಾಗ) ಅವರು ಅವರ ಬಳಿಗೆ ಹೋಗಿ, ನೀವು ಈ ರೀತಿಯ ಭಾವನೆಗಳನ್ನು ವ್ಯಕ್ತಪಡಿಸಿದ್ದೀರಾ? ಎಂದು ಕೇಳಿದರು, ಅನಂತರ ಹೀಗೆಂದರು- ನೋಡಿ, ನಾನು ನಿಮ್ಮೆಲ್ಲರಿಗಿಂತಲೂ ಅಧಿಕ ಅಲ್ಲಾಹನನ್ನು ಭಯಪಡುವವನಾಗಿರುತ್ತೇನೆ ಮತ್ತು ಅವನ ಆಜ್ಞೋಲ್ಲಂಘನೆಯಿಂದ ದೂರವಿರುವವ ನಾಗಿರುತ್ತೇನೆ. ಆದರೆ ನೋಡಿ, ನಾನು ಉಪವಾಸ ಆಚರಿಸುತ್ತಲೂ ಇದ್ದೇನೆ, ಆಚರಿಸದೆಯೂ ಇರುತ್ತೇನೆ. ನಫಿಲ್ ನಮಾಝ್‌ಗಳನ್ನು ಮಾಡುತ್ತಲೂ ಇದ್ದೇನೆ. ನಿದ್ರಿಸುತ್ತಲೂ ಇದ್ದೇನೆ. ನಾನು ಸ್ತ್ರೀಯರೊಂದಿಗೆ ವಿವಾಹವನ್ನೂ ಮಾಡಿಕೊಳ್ಳುತ್ತೇನೆ. ಆದುದರಿಂದ ನನ್ನ ವಿಧಾನವನ್ನು ಅನುಸರಿಸುವುದರಲ್ಲೇ ನಿಮ್ಮ ಒಳಿತಿದೆ. ಯಾರ ದೃಷ್ಟಿಯಲ್ಲಿ ನನ್ನ ಚರ್ಯೆಗೆ ಬೆಲೆಯಿಲ್ಲವೋ ಯಾರು ನನ್ನ ಚರ್ಯೆಯನ್ನು ಧಿಕ್ಕರಿಸುತ್ತಾರೋ ಅವರು ನನ್ನವರಲ್ಲ. ನನಗೆ ಅವರೊಂದಿಗೆ ಯಾವ ಸಂಬಂಧವೂ ಇಲ್ಲ. *[ಮುಸ್ಲಿಮ್]*

(17) عَنْ عَائِشَةَ قَالَتْ صَنَعَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ شَيْئًا فَرَخَّصَ فِيْهِ فَتَنَزَّهَ عَنْهُ قَوْمٌ، فَبَلَغَ ذٰلِكَ رَسُوْلَ اللّٰهِ صَلَّى اللّٰهُ عَلَيْهِ وَسَلَّمَ، فَخَطَبَ فَحَمِدَ اللّٰهَ ثُمَّ قَالَ مَا بَالُ اَقْوَامٍ يَتَنَزَّهُوْنَ عَنِ الشَّيْءِ اَصْنَعُهُ؟ فَوَاللّٰهِ اِنِّيْ لَاَعْلَمُهُمْ بِاللّٰهِ وَاَشَدُّهُمْ لَهُ خَشْيَةً (بخاری ومسلم)

ಆಯಿಶಾ(ರ) ಹೇಳುತ್ತಾರೆ- ಪ್ರವಾದಿ(ಸ) ಒಂದು ಕೆಲಸ ಮಾಡಿದರು ಮತ್ತು ಜನರಿಗೆ ಅದರಲ್ಲಿ ಸೌಲಭ್ಯವುಂಟು ಮಾಡಿದರು. ಆದರೆ ಕೆಲವರು ಸೌಲಭ್ಯದ ಅಂಶವನ್ನು ಸ್ವೀಕರಿಸಲು ಹಿಂಜರಿದರು. ಪ್ರವಾದಿಯವರಿಗೆ(ಸ) ಜನರ ಈ ಮನೋಭಾವದ ಅರಿವಾದಾಗ ಅವರು ಒಂದು ಉಪನ್ಯಾಸವಿತ್ತರು. ಸ್ತುತಿ-ಸ್ತೋತ್ರಗಳ ಬಳಿಕ ಹೀಗೆಂದರು- ಕೆಲವರು ನಾನು ಮಾಡುವ ಕೆಲಸವನ್ನು ಮಾಡಲು ಏಕೆ ಹಿಂಜರಿಯುತ್ತಾರೆ? ಅಲ್ಲಾಹನಾಣೆ! ನಾನು

ಇವರೆಲ್ಲರಿಗಿಂತ ಹೆಚ್ಚು ಅಲ್ಲಾಹನನ್ನು ತಿಳಿದವನಾಗಿದ್ದೇನೆ (ಅವನ ಇಂಗಿತವೇನು ಮತ್ತು ಅವನಿಗೆ ಅಪ್ರಿಯವಾದುದೇನು ಎಂಬುದರ ಕುರಿತು) ಮತ್ತು ನಾನು ಇವರೆಲ್ಲರಿಗಿಂತ ಹೆಚ್ಚು ಅಲ್ಲಾಹನನ್ನು ಭಯಪಡುವವನಾಗಿದ್ದೇನೆ.

[ಬುಖಾರಿ, ಮುಸ್ಲಿಮ್]

---

(18) عَنْ جَابِرٍ رضي عَنِ النَّبِيِّ صَلَّى اللّٰهُ عَلَيْهِ وَسَلَّمَ حِيْنَ اَتَاهُ عُمَرُ فَقَالَ اِنَّا نَسْمَعُ اَحَادِيْثَ مِنْ يَهُوْدَ تُعْجِبُنَا أَفَتَرٰى اَنْ نَكْتُبَ بَعْضَهَا؟ قَالَ اَمُتَهَوِّكُوْنَ اَنْتُمْ كَمَا تَهَوَّكَتِ الْيَهُوْدُ وَالنَّصَارٰى؟ لَقَدْ جِئْتُكُمْ بِهَا بَيْضَاءَ نَقِيَّةً وَلَوْ كَانَ مُوْسٰى حَيًّا، مَا وَسِعَهُ اِلَّا اتِّبَاعِيْ (مسلم)

ಜಾಬಿರ್(ರ) ಪ್ರವಾದಿವರ್ಯರಿಂದ(ಸ) ವರದಿ ಮಾಡುತ್ತಾರೆ. ಹ. ಉಮರ್(ರ) ಪ್ರವಾದಿಯವರ(ಸ) ಬಳಿಗೆ ಹೋಗಿ ಹೀಗೆ ಕೇಳಿದರು- ನಮಗೆ ಯಹೂದಿಯರ ಕೆಲವು ವಿಷಯಗಳು ಒಳ್ಳೆಯದಾಗಿ ಕಾಣುತ್ತವೆ. ನಾವು ಅವುಗಳಿಂದ ಏನನ್ನಾದರೂ ಬರೆದಿಡುವ ಬಗ್ಗೆ ತಮ್ಮ ಅಭಿಪ್ರಾಯವೇನು? ಪ್ರವಾದಿ(ಸ) ಹೇಳಿದರು- ಯಹೂದಿ-ಕ್ರೈಸ್ತರು (ತಮ್ಮ ಗ್ರಂಥವನ್ನು ಬಿಟ್ಟು) ಪಥಭ್ರಷ್ಟತೆಯ ಕೂಪಕ್ಕೆ ಬಿದ್ದಂತೆ ನೀವೂ ಪಥಭ್ರಷ್ಟರಾಗ ಬಯಸುತ್ತೀರಾ? ನಾನು ನಿಮ್ಮ ಬಳಿಗೆ ಸೂರ್ಯನಿಗಿಂತಲೂ ಪ್ರಕಾಶಮಾನವಾದ ಹಾಗೂ ಕನ್ನಡಿಗಿಂತಲೂ ಶುಭ್ರವಾದ ಶರೀಅತ್ (ಧರ್ಮಶಾಸ್ತ್ರ) ತಂದಿದ್ದೇನೆ. ಈಗ ಒಂದು ವೇಳೆ ಮೂಸಾ(ಅ) ಜೀವಿಸಿರುತ್ತಿದ್ದರೆ ಅವರೂ ನನ್ನನ್ನು ಅನುಸರಿಸಬೇಕಾಗುತ್ತಿತ್ತು.

[ಮುಸ್ಲಿಮ್]

ಟಿಪ್ಪಣಿ: ಯಹೂದಿಯರು ಮತ್ತು ಕ್ರೈಸ್ತರು ತಮ್ಮ ಗ್ರಂಥಗಳಲ್ಲಿ ತಿದ್ದುಪಡಿಗಳನ್ನು ಮಾಡಿ ಅವುಗಳನ್ನು ವಿಕೃತಗೊಳಿಸಿದ್ದರು. ಆದರೆ ಅವರಲ್ಲಿ ಕೆಡುಕು ಮಾತ್ರ ಇದ್ದುದಲ್ಲ. ಬದಲಾಗಿ ಅವರ ಬಳಿ ಅಲ್ಲಾಹನ ಕೆಲವು ಒಳ್ಳೆಯ ವಿಷಯಗಳೂ ಇದ್ದುವು. ಅದನ್ನು ಮುಸ್ಲಿಮರು ಕೇಳುತ್ತಲೂ ಮೆಚ್ಚುತ್ತಲೂ ಇದ್ದರು. ಒಂದು ವೇಳೆ ಪ್ರವಾದಿ(ಸ) ಅದಕ್ಕೆ ಅನುಮತಿ ನೀಡುತ್ತಿದ್ದರೆ ಧರ್ಮದಲ್ಲಿ ಅನೇಕ ಕೆಡುಕುಗಳುಂಟಾಗುತ್ತಿತ್ತು. ಸತ್ಯ ಮತ್ತು ಉತ್ತಮ ಅಂಶಗಳಿಲ್ಲದ ಯಾವುದಾದರೂ ಧರ್ಮ ಈ ಲೋಕದಲ್ಲಿರಬಹುದೆ? ಪ್ರವಾದಿಯವರು(ಸ) ಉಮರ್‌ರಿಗೆ(ರ) ನೀಡಿದ ಉತ್ತರದಿಂದ

ಸ್ಪಷ್ಟವಾಗುವುದೇನೆಂದರೆ ಯಾರ ಮನೆಯಲ್ಲಿ ಶುದ್ಧ ಚಿಲುಮೆಯಿರುವುದೋ ಅವರು ಮಲಿನ ಕೊಳದಿಂದ ತಮ್ಮ ಬಾಯಾರಿಕೆ ನೀಗಿಸ ಬಯಸುವುದು ವಿಚಿತ್ರ!

---

(19) عَنْ عَبْدِ اللّٰهِ بْنِ عَمْرٍو رض قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ
لَا يُؤْمِنُ اَحَدُكُمْ حَتّٰى يَكُوْنَ هَوَاهُ تَبَعًا لِّمَا جِئْتُ بِهٖ (مشكوٰة)

ಅಬ್ದುಲ್ಲಾ ಬಿನ್ ಅಮ್ರ್(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು- ಒಬ್ಬ ವ್ಯಕ್ತಿಯ ಇಚ್ಛೆ ಮತ್ತು ಅವನ ಮಾನಸಿಕ ಒಲವುಗಳು ನಾನು ತಂದಿರುವ ಧರ್ಮಶಾಸ್ತ್ರಕ್ಕೆ ಅನುಗುಣ ವಾಗುವ ತನಕ ಆತ ವಿಶ್ವಾಸಿಯಾಗಲಾರ. *[ಮಿಶ್ಕಾತ್]*

ಟಿಪ್ಪಣಿ: ವ್ಯಕ್ತಿಯು ತನ್ನ ಇಚ್ಛೆ ಮತ್ತು ಮಾನಸಿಕ ಒಲವುಗಳನ್ನು ಅಲ್ಲಾಹನ ಪ್ರವಾದಿ(ಸ) ತಂದಿರುವ ಧರ್ಮಶಾಸ್ತ್ರಕ್ಕೆ ಅಧೀನಗೊಳಿಸಬೇಕಾದುದು ಹಾಗೂ ಕುರ್‌ಆನ್ ಮತ್ತು ಪ್ರವಾದಿ ಚರ್ಯೆಯ ಕೈಯಲ್ಲಿ ತನ್ನ ಅಭಿಲಾಷೆಗಳ ಲಗಾಮನ್ನು ನೀಡಬೇಕಾದುದು ಪ್ರವಾದಿಯವರ(ಸ) ಮೇಲೆ ವಿಶ್ವಾಸವಿರಿಸುವುದರ ಬೇಡಿಕೆಯಾಗಿದೆ. ಯಾರಾದರೂ ಈ ಬೇಡಿಕೆಗಳನ್ನು ಪೂರೈಸದಿದ್ದರೆ ಅವನ ವಿಶ್ವಾಸಕ್ಕೆ ಅಲ್ಲಾಹನ ಬಳಿ ಯಾವ ಬೆಲೆಯೂ ಇರಲಾರದು.

---

(20) عَنْ اَنَسٍ قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ لَا يُؤْمِنُ اَحَدُكُمْ
حَتّٰى اَكُوْنَ اَحَبَّ اِلَيْهِ مِنْ وَّالِدِهٖ وَوَلَدِهٖ وَالنَّاسِ اَجْمَعِيْنَ (بخاری ومسلم)

ಅನಸ್(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು- ಒಬ್ಬನಿಗೆ ಆತನ ತಂದೆ-ತಾಯಿಗಳು, ಅವನ ಸಂತಾನ ಮತ್ತು ಇತರ ಎಲ್ಲ ಮನುಷ್ಯರಿಗಿಂತಲೂ ನಾನು ಪ್ರಿಯ ವಾಗುವ ತನಕ ನಿಮ್ಮ ಪೈಕಿ ಯಾರೂ ವಿಶ್ವಾಸಿಯಾಗಲಾರ. *[ಬುಖಾರಿ, ಮುಸ್ಲಿಮ್]*

ಟಿಪ್ಪಣಿ: ಈ ವಚನದ ತಾತ್ಪರ್ಯವೇನೆಂದರೆ ಪ್ರವಾದಿ(ಸ) ಅವರ ಮೇಲಿನ ಪ್ರೀತಿ ಮಿಕ್ಕೆಲ್ಲ ಪ್ರೀತಿಗಳಿಗಿಂತ ಅಧಿಕವಾಗುವ ತನಕ ಒಬ್ಬನು ನೈಜ ವಿಶ್ವಾಸಿಯಾಗಲಾರ. ತಂದೆ-ತಾಯಿಗಳು, ಸಂತಾನ ಮತ್ತು ಸಮಾಜದ ಇತರ ವ್ಯಕ್ತಿಗಳು ಒಬ್ಬನನ್ನು ಒಂದು ಮಾರ್ಗದಲ್ಲಿ ನಡೆಸ ಬಯಸುತ್ತಿರುವಾಗ ಅಲ್ಲಾಹನ ಪ್ರವಾದಿ ಅವನನ್ನು ಇನ್ನೊಂದು ಮಾರ್ಗದತ್ತ ಕರೆದರೆ ಸತ್ಯವಿಶ್ವಾಸಿಯಾದವನು ಅವರೆಲ್ಲರ ಬೇಡಿಕೆಗಳನ್ನು ತಿರಸ್ಕರಿಸಿ ತನ್ನ ನೆಚ್ಚಿನ ಪ್ರವಾದಿಯವರ(ಸ) ಕರೆಗೆ ಓಗೊಡಬೇಕು.

---

(21) عَنْ عَبْدِ اللّٰهِ بْنِ مُغَفَّلٍ رضى قَالَ جَاءَ رَجُلٌ اِلَى النَّبِىِّ صَلَّى اللّٰهُ عَلَيْهِ وَسَلَّمَ فَقَالَ اِنِّىْ اُحِبُّكَ، قَالَ اُنْظُرْ مَا تَقُوْلُ، فَقَالَ وَاللّٰهِ اِنِّىْ لَاُحِبُّكَ ثَلَاثَ مَرَّاتٍ، قَالَ اِنْ كُنْتَ صَادِقًا فَاَعِدَّ لِلْفَقْرِ تِجْفَافًا لَلْفَقْرُ اَسْرَعُ اِلٰى مَنْ يُحِبُّنِىْ مِنَ السَّيْلِ اِلٰى مُنْتَهَاهُ (ترمذى)

ಅಬ್ದುಲ್ಲಾ ಬಿನ್ ಮುಗಫ್ಫಲ್(ರ) ಹೇಳುತ್ತಾರೆ: ಒಬ್ಬ ವ್ಯಕ್ತಿ ಪ್ರವಾದಿಯವರ(ಸ) ಬಳಿಗೆ ಬಂದು ಹೀಗೆಂದ- ನಾನು ತಮ್ಮನ್ನು ಪ್ರೀತಿಸುತ್ತೇನೆ. ಪ್ರವಾದಿ(ಸ) ಹೇಳಿದರು- ನೀನೇನು ಹೇಳುತ್ತಿರುವೆಯೆಂದು ಯೋಚಿಸು. ಅವನು ಮೂರು ಬಾರಿ ಆಣೆ ಹಾಕಿ 'ನಾನು ತಮ್ಮನ್ನು ಪ್ರೀತಿಸುತ್ತೇನೆ' ಎಂದನು. ಆಗ ಪ್ರವಾದಿ(ಸ) ಹೇಳಿದರು- ನೀನು ಸತ್ಯವಂತನಾಗಿದ್ದರೆ ಬಡತನ-ದಾರಿದ್ರ್ಯವನ್ನು ಎದುರಿಸಲು ಸಿದ್ಧನಾಗು. ಏಕೆಂದರೆ ನನ್ನನ್ನು ಪ್ರೀತಿಸುವವರ ಕಡೆಗೆ ಬಡತನವು, ನೆರೆ ನೀರು ಇಳಿಜಾರಿಗೆ ಹರಿಯುವುದಕ್ಕಿಂತಲೂ ವೇಗವಾಗಿ ಬರುತ್ತದೆ.

[ತಿರ್ಮಿದಿ]

ಟಿಪ್ಪಣಿ: ಪ್ರವಾದಿಯವರನ್ನು(ಸ) ಪ್ರೀತಿಸುವುದೆಂದರೆ ಅವರ ಒಂದೊಂದು ಹೆಜ್ಜೆಗುರುತುಗಳನ್ನೂ ಮಾರ್ಗ ಸಂಕೇತಗಳನ್ನೂ ಗುರುತಿಸಿ ಅದನ್ನು ಅನುಸರಿಸಿ ನಡೆಯುವುದಾಗಿದೆ. ಪ್ರವಾದಿ(ಸ) ಯಾವ ಮಾರ್ಗದಲ್ಲಿ ಸಂಕಷ್ಟಗಳನ್ನು ಅನುಭವಿಸಿದ್ದಾರೋ ಆ ಮಾರ್ಗದಲ್ಲಿ ಸಂಕಷ್ಟಗಳನ್ನು ಸಹಿಸುವ ಪಣ ತೊಡುವುದಾಗಿದೆ. ಪ್ರವಾದಿಯವರ(ಸ) ಮಾರ್ಗದಲ್ಲಿ ನಡೆಯುವ ಪಣ ತೊಡುವವನು ತನ್ನತ್ತ ಹರಿಯುವ ಬಡತನ- ದಾರಿದ್ರ್ಯವನ್ನು ಅಲ್ಲಾಹನ ಮೇಲೆ ಭರವಸೆ ಮತ್ತು ದೇವಪ್ರೇಮದ ಆಯುಧಗಳಿಂದ ತಡೆಯ ಬಲ್ಲನು. ಅವನು ತನ್ನ ಮನಸ್ಸಿನಲ್ಲಿ, ಅಲ್ಲಾಹನೇ ನನ್ನ ಸಂರಕ್ಷಕ, ನಾನೇನೂ ಅಸಹಾಯಕನಲ್ಲ ವೆಂದು ದೃಢ ಮಾಡಿಕೊಳ್ಳಬೇಕು. ನಾನು ಗುಲಾಮನಾಗಿದ್ದು ನನ್ನ ಯಜಮಾನನ ಇಚ್ಛೆಯನ್ನು ಪೂರೈಸಲೇ ಬೇಕಾಗಿದೆ ಮತ್ತು ನಾನು ಯಾರ ಕೆಲಸಕ್ಕಾಗಿ ನೇಮಿಸಲ್ಪಟ್ಟಿರುವೆನೋ ಅವನು ನ್ಯಾಯಪೂರ್ಣನೂ ಕರುಣಾಳುವೂ ಆಗಿದ್ದಾನೆ. ಆದುದರಿಂದ ನನ್ನ ಪರಿಶ್ರಮವೆಂದೂ ವ್ಯರ್ಥವಾಗದು ಎಂದು ನಂಬಿರಬೇಕು. ಅದೇ ರೀತಿ ನಾನು ಯಾರನ್ನು ಪ್ರೀತಿಸುತ್ತಿದ್ದೇನೆ ಎಂಬುದನ್ನು ಅವನು ಸದಾ ನೆನಪಿನಲ್ಲಿಡಬೇಕು.

---

4) ವಿಧಿಯ ಮೇಲೆ ವಿಶ್ವಾಸ

ವಿಧಿಯ ಮೇಲೆ ವಿಶ್ವಾಸವಿರಿಸುವುದೆಂದರೆ ಈ ಲೋಕದಲ್ಲಿ ನಡೆಯುವುದೆಲ್ಲವೂ ಅಲ್ಲಾಹನ ವತಿಯಿಂದಲೇ ನಡೆಯುತ್ತದೆ. ಇಲ್ಲಿ ಕೇವಲ ಅವನ ಆಜ್ಞೆ ನಡೆಯುತ್ತದೆ ಎಂದು ನಂಬುವುದು. ಅಲ್ಲಾಹನ ಇಚ್ಛೆಗೆ ವಿರುದ್ಧವಾಗಿ ಲೋಕದಲ್ಲಿ ಏನೂ ನಡೆಯುವುದಿಲ್ಲ. ಎಲ್ಲ ಒಳಿತು-ಕೆಡುಕು ಮತ್ತು ಸನ್ಮಾರ್ಗ-ದುರ್ಮಾರ್ಗಕ್ಕೆ ಒಂದು ನಿಯಮವಿದೆ. ಅದನ್ನು ಅವನು ಮುಂಚೆಯೇ ಮಾಡಿದ್ದಾನೆ. ಅಲ್ಲಾಹನ ಕೃತಜ್ಞ ದಾಸರ ಮೇಲೆ ಎರಗುವ ವಿಪತ್ತುಗಳು, ಅವರು ಎದುರಿಸುವ ಸಂಕಷ್ಟ ಮತ್ತು ಪರೀಕ್ಷೆಗಳೆಲ್ಲವೂ ಅವರ ಪ್ರಭುವಿನ ಆಜ್ಞೆ ಮತ್ತು

ಮೊದಲೇ ನಿಶ್ಚಯಿಸಲ್ಪಟ್ಟ ನಿಯಮಗಳಿಗೆ ಅನುಸಾರವಾಗಿ ಬರುತ್ತವೆ. ಅಲ್ಲಾಹನ ವಿಧಿಯನ್ನು ವ್ಯಕ್ತ ಪಡಿಸುವ ಕೆಲವು ಹದೀಸ್‌ಗಳನ್ನು ಇಲ್ಲಿ ಕೊಡಲಾಗಿದೆ-

---

(22) عَنْ عَلِيٍّ رض قَالَ، قَالَ رَسُوْلُ اللهِ صَلَّى اللهُ عَلَيْهِ وَسَلَّمَ مَا مِنْ اَحَدٍ اِلَّا وَقَدْ كُتِبَ مَقْعَدُهٗ مِنَ النَّارِ وَمَقْعَدُهٗ مِنَ الْجَنَّةِ، قَالُوْا يَا رَسُوْلَ اللهِ اَفَلَا نَتَّكِلُ عَلٰى كِتَابِنَا وَنَدَعُ الْعَمَلَ؟ قَالَ اعْمَلُوْا، فَكُلٌّ مُيَسَّرٌ لِمَا خُلِقَ لَهٗ اَمَّا مَنْ كَانَ مِنْ اَهْلِ السَّعَادَةِ فَسَيُيَسَّرُ لِعَمَلِ السَّعَادَةِ، وَاَمَّا مَنْ كَانَ مِنْ اَهْلِ الشَّقَاوَةِ فَسَيُيَسَّرُ لِعَمَلِ الشَّقَاوَةِ ثُمَّ قَرَأَ فَاَمَّا مَنْ اَعْطٰى وَاتَّقٰى وَصَدَّقَ بِالْحُسْنٰى، فَسَنُيَسِّرُهٗ لِلْيُسْرٰى، وَاَمَّا مَنْ بَخِلَ وَاسْتَغْنٰى وَكَذَّبَ بِالْحُسْنٰى فَسَنُيَسِّرُهٗ لِلْعُسْرٰى۔ (بخاری ومسلم)

ಅಲೀ(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು- ನಿಮ್ಮ ಪೈಕಿ ಪ್ರತಿಯೊಬ್ಬನ ಸ್ವರ್ಗ ಮತ್ತು ನರಕದ ತೀರ್ಮಾನವಾಗಿ ಬಿಟ್ಟಿದೆ. ಆಗ ಜನರು ಕೇಳಿದರು- ಅಲ್ಲಾಹನ ಸಂದೇಶ ವಾಹಕರೇ! ಹಾಗಾದರೆ ನಾವೇಕೆ ನಮ್ಮ ಬಗೆಗಿನ ತೀರ್ಮಾನವನ್ನು ಹೇತುವಾಗಿಸಿ ಕರ್ಮ ಮಾಡುವುದನ್ನು ಬಿಟ್ಟು ಬಿಡಬಾರದು? ಪ್ರವಾದಿ(ಸ) ಹೇಳಿದರು- ಇಲ್ಲ. ನೀವು ಕರ್ಮ ಮಾಡಿರಿ. ಏಕೆಂದರೆ ಪ್ರತಿಯೊಬ್ಬನಿಗೂ ಅವನು ಯಾವುದಕ್ಕಾಗಿ ಸೃಷ್ಟಿಸಲ್ಪಟ್ಟಿರುವನೋ ಅದರ ಅನುಗ್ರಹವೇ ಸಿಗುವುದು. ಸೌಭಾಗ್ಯವಂತನಿಗೆ ಸ್ವರ್ಗಕ್ಕೆ ಅರ್ಹವಾದ ಕೆಲಸಗಳನ್ನು ಮಾಡುವ ತೌಫೀಕ್ (ಅನುಗ್ರಹ) ಸಿಗುವುದು. ದುರದೃಷ್ಟವಂತನಿಗೆ ನರಕಕ್ಕೆ ಅರ್ಹವಾದ ಕೆಲಸಗಳನ್ನು ಮಾಡುವ ತೌಫೀಕ್ ಸಿಗುವುದು.

ಅನಂತರ ಪ್ರವಾದಿಯವರು(ಸ) ಹದೀಸ್‌ನಲ್ಲಿ ಪ್ರಸ್ತಾಪಿಸಲಾದ (ಸೂರಃ ಲೈಲ್‌ನ) ಎರಡು ಆಯತ್‌ಗಳನ್ನು ಪಠಿಸಿದರು. ಅದರ ಅರ್ಥ ಹೀಗಿದೆ: ಯಾರು ಅಲ್ಲಾಹನ ಮಾರ್ಗದಲ್ಲಿ ಖರ್ಚುಮಾಡಿದನೋ, ಪಾವಿತ್ರ್ಯದ ಮಾರ್ಗವನ್ನು ಅವಲಂಬಿಸಿದನೋ ಮತ್ತು ಅತ್ಯುತ್ತಮ ಮಾತನ್ನು ದೃಢೀಕರಿಸಿದನೋ (ಅರ್ಥಾತ್: ಇಸ್ಲಾಮ್ ಸ್ವೀಕರಿಸಿದನೋ) ನಾವು ಅವನಿಗೆ ಉತ್ತಮ ಜೀವನ(ಸ್ವರ್ಗ)ದ ಅನುಗ್ರಹ ನೀಡುವೆವು ಮತ್ತು ಯಾರು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವಲ್ಲಿ ಜಿಪುಣತೆ ತೋರಿದನೋ ಅಲ್ಲಾಹನ ಬಗ್ಗೆ ಅಲಕ್ಷ್ಯನಾದನೋ ಮತ್ತು ಉತ್ತಮ ಜೀವನವನ್ನು ನಿರಾಕರಿಸಿದನೋ ನಾವು ಅವನಿಗೆ ಕಷ್ಟದ ಜೀವನ (ನರಕ)ವನ್ನು ಅನುಗ್ರಹಿಸುವೆವು (ಅರ್ಥಾತ್: ಅವನಿಗೆ ನರಕದ ಮಾರ್ಗದಲ್ಲಿ ನಡೆಯುವುದನ್ನು ಸುಲಭಗೊಳಿಸುವೆವು). ತನ್ನ ಕೆಟ್ಟ ಕೆಲಸಗಳಿಂದಾಗಿ ಅವನು ನರಕಕ್ಕೆ ಹೋಗುವನು. *[ಬುಖಾರಿ, ಮುಸ್ಲಿಮ್]*

ಟಿಪ್ಪಣಿ: ಮನುಷ್ಯನು ಯಾವ ಕರ್ಮಗಳಿಂದಾಗಿ ನರಕಕ್ಕೆ ಅರ್ಹನಾಗುವನು ಮತ್ತು ಯಾವ ಕರ್ಮಗಳಿಂದಾಗಿ ಸ್ವರ್ಗಕ್ಕೆ ಹೋಗುವನು ಎಂಬುದನ್ನು ಅಲ್ಲಾಹನು ತೀರ್ಮಾನಿಸಿದ್ದಾನೆ. ಈ 'ವಿಧಿ'ಯ ಕುರಿತು ಕುರ್‌ಆನ್ ಮತ್ತು ಹದೀಸ್‌ಗಳಲ್ಲಿ ವಿವರವಾಗಿ ಪ್ರಸ್ತಾಪಿಸಲ್ಪಟ್ಟಿದೆ. ಇನ್ನು ತಾನು ನರಕದ ಮಾರ್ಗದಲ್ಲಿ ನಡೆಯಬೇಕೋ, ಸ್ವರ್ಗದ ಮಾರ್ಗದಲ್ಲಿ ನಡೆಯಬೇಕೋ ಎಂಬುದು ಮಾನವನಿಗೆ ಬಿಟ್ಟ ವಿಷಯ. ಎರಡರಲ್ಲೊಂದನ್ನು ಆಯ್ಕೆ ಮಾಡಬೇಕಾದುದು ಅವನ ಕರ್ತವ್ಯ. ಅಲ್ಲಾಹನು ಮಾನವನಿಗೆ ತಾನು ಬಯಸುವ ಮಾರ್ಗದ ಆಯ್ಕೆಯ ಸ್ವಾತಂತ್ರ್ಯವನ್ನು ನೀಡಿರುವನು. ಆದುದರಿಂದಲೇ ಈ ಹೊಣೆಗಾರಿಕೆಯನ್ನು ಅವನ ಮೇಲೆ ಹೊರಿಸಿರುವನು. ಅವನಿಗೆ ಎರಡೂ ಮಾರ್ಗಗಳನ್ನು ತೋರಿಸಲಾಗಿದೆ. ದಯಾಮಯನ ಮಾರ್ಗವನ್ನೂ ಶೈತಾನನ ಮಾರ್ಗವನ್ನೂ ಸ್ಪಷ್ಟಪಡಿಸಲಾಗಿದೆ. ಈ ಸ್ವಾತಂತ್ರ್ಯವೇ ಅವನಿಗೆ ಶಿಕ್ಷೆಯನ್ನು ವಿಧಿಸಬಲ್ಲುದು ಅಥವಾ ಅವನನ್ನು ಶಾಂತಿಗೇಹಕ್ಕೂ ತಲಪಿಸಬಲ್ಲುದು. ಆದರೆ ಬಹುತೇಕ ತಿಳಿಗೇಡಿಗಳು ತಮ್ಮ ಹೊಣೆಗಾರಿಕೆಯನ್ನು ಅಲ್ಲಾಹನ ಮೇಲೆ ಹಾಕಿ ತಾವು ಅಸಹಾಯಕರೆಂದು ಸಾರಿಬಿಡುತ್ತಾರೆ.

---

(23) عَنْ اَبِىْ خِزَامَةَ عَنْ اَبِيْهِ قَالَ قُلْتُ يَارَسُوْلَ اللهِ أَرَأَيْتَ رُقًى نَسْتَرْقِيْهَا وَدَوَاءً نَتَدَاوىٰ بِهٖ وَتُقَاةً نَتَّقِيْهَا هَلْ يَرُدُّ مِنْ قَدَرِ اللهِ شَيْئًا؟ قَالَ هِيَ مِنْ قَدَرِ اللهِ (ترمذى)

ಅಬೂ ಖಿಝಾಮರವರು ತನ್ನ ತಂದೆಯಿಂದ ಹೀಗೆ ವರದಿ ಮಾಡುತ್ತಾರೆ- ನನ್ನ ತಂದೆಯವರು ಪ್ರವಾದಿಯವರಲ್ಲಿ(ಸ) ಹೀಗೆ ವಿಚಾರಿಸಿದರು- ನಾವು ರೋಗ ಶಮನಕ್ಕಾಗಿ ಉಪಯೋಗಿಸುವ ತಾಯಿತ, ಔಷಧಿ ಮತ್ತು ಅವುಗಳಿಂದ ರಕ್ಷಣೆ ಪಡೆಯಲಿಕ್ಕಾಗಿ ನಾವು ಕೈಗೊಳ್ಳುವ ಉಪಾಯಗಳು ಅಲ್ಲಾಹನ ವಿಧಿಯನ್ನು ಬದಲಾಯಿಸಬಹುದೆ? ಪ್ರವಾದಿ(ಸ) ಹೇಳಿದರು- ಇದೆಲ್ಲವೂ ಅಲ್ಲಾಹನ ವಿಧಿಯೇ ಆಗಿವೆ. *[ತಿರ್ಮಿದಿ]*

ಟಿಪ್ಪಣಿ: ಪ್ರವಾದಿ(ಸ) ಅವರ ಮಾತಿನ ತಾತ್ಪರ್ಯವೇನೆಂದರೆ ನಮ್ಮ ವಿಧಿಯಲ್ಲಿ ರೋಗವನ್ನು ಬರೆದಿರುವ ಅಲ್ಲಾಹನೇ ಅದನ್ನು ಇಂತಿಂತಹ ಔಷಧಿ ಮತ್ತು ಉಪಾಯಗಳಿಂದ ದೂರಗೊಳಿಸಬಹುದೆಂಬುದನ್ನೂ ನಿಶ್ಚಯಿಸಿದ್ದಾನೆ. ರೋಗದ ಸೃಷ್ಟಿಕರ್ತನೂ ಅವನೇ, ಔಷಧಿಯ ಸೃಷ್ಟಿಕರ್ತನೂ ಅವನೇ. ಎಲ್ಲವೂ ಅವನು ನಿಶ್ಚಯಿಸಿದ ನಿಯಮ-ನಿಬಂಧನೆಗಳಿಗೆ ಒಳಪಟ್ಟಿವೆ.

---

(24) عَنِ ابْنِ عَبَّاسٍ رضي الله عنه قَالَ كُنْتُ خَلْفَ النَّبِيِّ صَلَّى اللهُ عَلَيْهِ وَسَلَّمَ يَوْمًا
فَقَالَ يَا غُلَامُ إِنِّي أُعَلِّمُكَ كَلِمَاتٍ، اِحْفَظِ اللهَ يَحْفَظْكَ، اِحْفَظِ اللهَ تَجِدْهُ
تُجَاهَكَ، إِذَا سَأَلْتَ فَاسْئَلِ اللهَ، وَإِذَا اسْتَعَنْتَ فَاسْتَعِنْ بِاللهِ، وَاعْلَمْ
أَنَّ الْأُمَّةَ لَوِ اجْتَمَعَتْ عَلَى أَنْ يَنْفَعُوكَ بِشَيْءٍ، لَمْ يَنْفَعُوكَ بِشَيْءٍ إِلَّا قَدْ
كَتَبَهُ اللهُ لَكَ، وَلَوِ اجْتَمَعُوا عَلَى أَنْ يَضُرُّوكَ بِشَيْءٍ لَمْ يَضُرُّوكَ إِلَّا بِشَيْءٍ
قَدْ كَتَبَهُ اللهُ عَلَيْكَ۔ (مشکوٰۃ)

ಇಬ್ನು ಅಬ್ಬಾಸ್(ರ) ಹೇಳುತ್ತಾರೆ: ಒಂದು ದಿನ ನಾನು ಪ್ರವಾದಿಯವರ(ಸ) ಹಿಂದೆ ಸವಾರಿಯಲ್ಲಿ ಕುಳಿತಿದ್ದೆ. ಪ್ರವಾದಿ(ಸ) ಹೇಳಿದರು- ಎಲೈ ಬಾಲಕನೇ! ನಾನು ನಿನಗೆ ಕೆಲವು ವಿಷಯಗಳನ್ನು ಹೇಳಿ ಕೊಡುತ್ತೇನೆ (ಗಮನ ಕೊಟ್ಟು ಕೇಳು), ನೀನು ಅಲ್ಲಾಹನನ್ನು ಸ್ಮರಿಸು; ಅವನು ನಿನ್ನನ್ನು ಸ್ಮರಿಸುವನು. ಅಲ್ಲಾಹನನ್ನು ಸ್ಮರಿಸಿದರೆ ಅವನನ್ನು ನಿನ್ನ ಮುಂದೆ ಕಾಣುವಿ. ನೀನು ಬೇಡುವಾಗ ಅಲ್ಲಾಹನಲ್ಲಿ ಬೇಡು. ಸಂಕಷ್ಟ ಎದುರಾಗಿ ನಿನಗೆ ಸಹಾಯದ ಅಗತ್ಯ ವಿರುವಾಗ ಅಲ್ಲಾಹನಿಂದ ಸಹಾಯ ಯಾಚಿಸು. ಎಲ್ಲರೂ ಸೇರಿ ನಿನಗೇನಾದರೂ ಲಾಭ ಉಂಟು ಮಾಡಬೇಕೆಂದು ಬಯಸಿದರೆ ಅಲ್ಲಾಹನು ನಿನಗಾಗಿ ಬರೆದಿರುವುದರ ಹೊರತು ಯಾವ ಲಾಭವನ್ನೂ ಅವರು ನಿನಗೆ ಉಂಟು ಮಾಡಲಾರರು. (ಅರ್ಥಾತ್: ಕೊಡಲಿಕ್ಕೆ ಯಾರ ಬಳಿಯಲ್ಲೂ ಏನೂ ಇಲ್ಲ. ಎಲ್ಲವೂ ಅಲ್ಲಾಹನದೇ ಆಗಿದ್ದು ಅವನು ಯಾರಿಗೆ ಎಷ್ಟು ನೀಡಲು ನಿರ್ಧರಿಸಿದ್ದಾನೋ ಅಷ್ಟು ಮಾತ್ರ ಅವನಿಗೆ ಸಿಗುವುದು) ಅದೇ ರೀತಿಯಲ್ಲಿ ಎಲ್ಲರೂ ಸೇರಿ ನಿನಗೆ ಏನಾದರೂ ನಷ್ಟವುಂಟು ಮಾಡಬೇಕೆಂದು ಬಯಸಿದರೆ ಅಲ್ಲಾಹನು ನಿನಗೆ ವಿಧಿಸಿದ್ದರ ಹೊರತು ಅವರು ಯಾವುದೇ ನಷ್ಟವುಂಟು ಮಾಡಲಾರರು ಎಂಬುದನ್ನು ದೃಢವಾಗಿ ನಂಬಿರಬೇಕು. [ಮಿಶ್ಕಾತ್]

(25) عَنْ أَبِيْ هُرَيْرَةَ قَالَ، قَالَ رَسُوْلُ اللهِ صلى الله عليه وسلم اَلْمُؤْمِنُ الْقَوِيُّ
خَيْرٌ مِنَ الْمُؤْمِنِ الضَّعِيْفِ، وَفِيْ كُلٍّ خَيْرٌ، اِحْرِصْ عَلٰى مَا يَنْفَعُكَ، وَاسْتَعِنْ
بِاللهِ وَلَا تَعْجِزْ وَإِنْ أَصَابَكَ شَيْءٌ فَلَا تَقُلْ لَوْ أَنِّيْ فَعَلْتُ كَانَ كَذَا وَكَذَا،
وَلٰكِنْ قُلْ قَدَّرَ اللهُ مَا شَاءَ فَعَلَ، فَإِنَّ لَوْ تَفْتَحُ عَمَلَ الشَّيْطَانِ

(مشكوة)

ಅಬೂಹುರೈರಾ(ರ) ವರದಿ ಮಾಡುತ್ತಾರೆ: ಪ್ರವಾದಿ(ಸ) ಹೇಳಿದರು- ಬಲಶಾಲಿಯಾದ ಸತ್ಯವಿಶ್ವಾಸಿಯು ದುರ್ಬಲ ಸತ್ಯವಿಶ್ವಾಸಿಗಿಂತ ಉತ್ತಮ ಹಾಗೂ ಅಲ್ಲಾಹನಿಗೆ ಪ್ರಿಯನಾಗಿರುತ್ತಾನೆ. ಇಬ್ಬರೂ ಒಳ್ಳೆಯವರೆ. ನೀನು (ಪರಲೋಕದಲ್ಲಿ) ಪ್ರಯೋಜನ ನೀಡುವಂತಹ ವಸ್ತುವಿನ ಆಶೆ ಪಡು. ಸಂಕಷ್ಟಗಳೆದುರಾದಾಗ ಅಲ್ಲಾಹನಿಂದ ಸಹಾಯ ಯಾಚಿಸು ಮತ್ತು ಧೈರ್ಯಗುಂದದಿರು. ಇನ್ನು ನಿನ್ನ ಮೇಲೆ ಏನಾದರೂ ವಿಪತ್ತೆರಗಿದರೆ, 'ನಾನು ಇಂತಹ ಉಪಾಯ ಕೈಗೊಳ್ಳುತ್ತಿದ್ದರೆ ಈ ವಿಪತ್ತು ಎದುರಾಗುತ್ತಿರಲಿಲ್ಲ'ವೆಂದು ಹೇಳಬೇಡ. ಬದಲಾಗಿ, ಅದನ್ನು ಅಲ್ಲಾಹನೇ ವಿಧಿಸಿದ್ದಾನೆ ಮತ್ತು ಅವನು ಬಯಸಿದ್ದು ಆಗಿಯೇ ತೀರುವುದು ಎಂದು ಹೇಳು. ಏಕೆಂದರೆ 'ಹಾಗಾಗುತ್ತಿದ್ದರೆ' ಎಂಬ ಮನೋಭಾವ ಪೈಶಾಚಿಕ ಕೃತ್ಯಗಳಿಗೆ ದಾರಿ ಮಾಡಿಕೊಡುತ್ತದೆ. *[ಮಿಶ್ಕಾತ್]*

ಟಿಪ್ಪಣಿ: ಈ ಹದೀಸ್‌ನ ಮೊದಲ ವಾಕ್ಯದ ಅರ್ಥವೇನೆಂದರೆ ಒಬ್ಬ ಶಾರೀರಿಕವಾಗಿ ಮಾನಸಿಕ ಹಾಗೂ ನಿರ್ಧಾರ ಶಕ್ತಿಯ ಬಲಶಾಲಿಯಾದ ಮೂಮಿನನು (ಸತ್ಯವಿಶ್ವಾಸಿಯು) ದುರ್ಬಲನಾದ ಮೂಮಿನನಿಗಿಂತ ಅಲ್ಲಾಹನಿಗೆ ಪ್ರಿಯನಾಗಿರುತ್ತಾನೆ. ಏಕೆಂದರೆ ಧರ್ಮದ ಸೇವೆಯು ಅವನಿಂದಲೇ ಹೆಚ್ಚು ಆಗಲು ಸಾಧ್ಯ. ಶಾರೀರಿಕವಾಗಿ ದುರ್ಬಲನಾಗಿರುವ, ಆರೋಗ್ಯ ಸರಿಯಿಲ್ಲದ ಹಾಗೂ ಆಲೋಚನೆ ಮತ್ತು ನಿರ್ಧಾರ ಶಕ್ತಿ ಕುಂದಿರುವ ಒಬ್ಬನಿಂದ ಅಂತಹ ಕಾರ್ಯ ಸಾಧ್ಯವಿಲ್ಲ. ಆದರೆ ಈ ಇಬ್ಬರೂ ಒಂದೇ ಸತ್ಯಮಾರ್ಗದ ಯಾತ್ರಿಕರಾಗಿರುವಾಗ ಪುರಸ್ಕಾರದಿಂದ ದುರ್ಬಲನನ್ನು ವಂಚಿತಗೊಳಿಸಲಾಗದು. ಇಲ್ಲಿ ಉದ್ದೇಶವು ಶಕ್ತಿಶಾಲಿ ಮೂಮಿನನಿಗೆ ಆದಷ್ಟು ಕೆಲಸ ಮಾಡಲು ಪ್ರೇರಣೆ ನೀಡುವುದೇ ಆಗಿದೆ.

ಕೊನೆಯ ವಾಕ್ಯದ ತಾತ್ಪರ್ಯವೇನೆಂದರೆ ಮೂಮಿನನು ತನ್ನ ಬುದ್ಧಿ ಶಕ್ತಿ, ಶಾರೀರಿಕ ಶಕ್ತಿ ಮತ್ತು ತನ್ನ ಕಾರ್ಯದಕ್ಷತೆಯ ಕುರಿತು ಜಂಭಕೊಚ್ಚಿಕೊಳ್ಳುವುದಿಲ್ಲ. ಅವನ ಮೇಲೆ ಏನಾದರೂ ವಿಪತ್ತು ಬಂದೆರಗಿದರೆ ನಾನು ಇಂತಹ ಉಪಾಯ ಕೈಗೊಂಡಿದ್ದರೆ ಇದರಿಂದ ಪಾರಾಗಬಹುದಿತ್ತು ಎಂದು ಯೋಚಿಸುವುದಿಲ್ಲ. ಬದಲಾಗಿ ಅವನ ಮನೋಭಾವ ಹೀಗಿರುತ್ತದೆ- ಇದು ನನ್ನ ಪ್ರಭು ನಿಶ್ಚಯಿಸಿದುದಾಗಿದೆ. ಅವನ ಈ ತೀರ್ಮಾನ ನನ್ನ ಮಟ್ಟಿಗೆ ಒಳಿತಾಗಿರಬಹುದು. ಅವನು ಈ ವಿಪತ್ತನ್ನು ನನ್ನ ಸಂಸ್ಕರಣೆಗಾಗಿ ಕಳಿಸಿರಬಹುದು.

5) ಅಲ್ಲಾಹನ ಗ್ರಂಥಗಳ ಮೇಲೆ ವಿಶ್ವಾಸ

ಗ್ರಂಥಗಳ ಮೇಲೆ ವಿಶ್ವಾಸವೆಂದರೆ ಅಲ್ಲಾಹನು ತನ್ನ ಸಂದೇಶವಾಹಕರ ಮೂಲಕ ಆಗಾಗ ಕಳಿಸುತ್ತಿದ್ದ ಎಲ್ಲ ಮಾರ್ಗದರ್ಶಕ ಗ್ರಂಥಗಳನ್ನು ಸತ್ಯವೆಂದು ನಂಬುವುದು. ಹಿಂದಿನ ಜನ ಸಮುದಾಯಗಳು ತಮ್ಮ ಬಳಿಗೆ ಬಂದಿದ್ದ ಗ್ರಂಥಗಳನ್ನು ಬದಲಾಯಿಸಿಬಿಟ್ಟಿದ್ದರು. ಅಲ್ಲಾಹನು ಕೊನೆಯದಾಗಿ ತನ್ನ ಅಂತಿಮ ಸಂದೇಶವಾಹಕರ(ಸ) ಮೂಲಕ ಸುಸ್ಪಷ್ಟವಾದ ಅಂತಿಮ ಗ್ರಂಥವನ್ನು ಕಳಿಸಿದನು. ಅದು ಎಲ್ಲ ನ್ಯೂನತೆಗಳಿಂದ ಮುಕ್ತವಾದ, ಎಲ್ಲ ರೀತಿಯ ಕೆಡುಕಿನಿಂದ ಸುರಕ್ಷಿತವಾದ ಗ್ರಂಥವಾಗಿದೆ. ಕೇವಲ ಮುಸ್ಲಿಮರಲ್ಲ, ಮುಸ್ಲಿಮೇತರ ಸಂಶೋಧಕರು ಕೂಡಾ ಅದನ್ನು ಸತ್ಯಗ್ರಂಥವೆಂದು ಒಪ್ಪಿದ್ದಾರೆ! ಅಲ್ಲಾಹನ ಕಡೆಗೆ ತಲಪಬಲ್ಲ ಬೇರಾವ ಗ್ರಂಥವೂ ಈ ಗ್ರಂಥದ ಹೊರತು ಈಗ ಲೋಕದಲ್ಲಿ ಅಸ್ತಿತ್ವದಲ್ಲಿಲ್ಲ. ಈ ವಿಷಯಕ್ಕೆ ಸಂಬಂಧಿಸಿದ ಕೆಲವು ಹದೀಸ್‌ಗಳನ್ನು ಇಲ್ಲಿ ಕೊಡಲಾಗಿದೆ. ಅದರಿಂದ ಕುರ್‌ಆನಿನ ಮೇಲೆ ವಿಶ್ವಾಸವಿರಿಸುವುದರ ತಾತ್ಪರ್ಯ ಮತ್ತು ಅದರ ಬೇಡಿಕೆಗಳೇನೆಂದು ಸ್ಪಷ್ಟವಾಗಿ ಮನದಟ್ಟಾಗುತ್ತದೆ.

(26) قَالَ ابْنُ عَبَّاسٍ مَنِ اقْتَدَى بِكِتَابِ اللّٰهِ لَا يَضِلُّ فِي الدُّنْيَا وَلَا يَشْقَى فِي الْآخِرَةِ ثُمَّ تَلَا هٰذِهِ الْآيَةَ مَنِ اتَّبَعَ هُدَايَ فَلَا يَضِلُّ وَلَا يَشْقَى۔
(مشكوة)

ಹ. ಇಬ್ನು ಅಬ್ಬಾಸ್(ರ) ಹೇಳುತ್ತಾರೆ- ಅಲ್ಲಾಹನ ಗ್ರಂಥವನ್ನು ಅನುಸರಿಸುವವನು ಈ ಲೋಕದಲ್ಲೂ ದಾರಿ ತಪ್ಪಲಾರನು. ಪರಲೋಕದಲ್ಲೂ ಪರಾಜಯ ಹೊಂದಲಾರನು. ತರುವಾಯ ಅವರು, "ಯಾರು ನನ್ನ ಸನ್ಮಾರ್ಗವನ್ನು ಅನುಸರಿಸುವನೋ ಅವನು ಇಹಲೋಕದಲ್ಲಿ ಪಥಭ್ರಷ್ಟನಾಗಲಾರನು, ಪರಲೋಕದಲ್ಲೂ ಪರಾಜಯ ಹೊಂದಲಾರನು" *(ಸೂರಃ ತಾಹಾ: 123)* ಎಂಬ ಕುರ್‌ಆನ್ ವಚನವನ್ನು ಪಠಿಸಿದರು. *[ಮಿಶ್ಕಾತ್]*

---

(27) عَنْ أَبِي هُرَيْرَةَ قَالَ، قَالَ رَسُولُ اللّٰهِ صَلَّى اللّٰهُ عَلَيْهِ وَسَلَّمَ أُنْزِلَ الْقُرْآنُ عَلَى خَمْسَةِ أَوْجُهٍ: حَلَالٍ وَحَرَامٍ وَمُحْكَمٍ وَمُتَشَابِهٍ وَأَمْثَالٍ فَأَحِلُّوا الْحَلَالَ وَحَرِّمُوا الْحَرَامَ وَاعْمَلُوا بِالْمُحْكَمِ وَآمِنُوا بِالْمُتَشَابِهِ وَاعْتَبِرُوا بِالْأَمْثَالِ (مشكوة)

ಅಬೂ ಹುರೈರಾ(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು- ಕುರ್‌ಆನ್‌ನಲ್ಲಿ ಐದು ವಸ್ತುಗಳ ಪ್ರಸ್ತಾಪವಿದೆ- 1) ಹಲಾಲ್. 2) ಹರಾಮ್. 3) ಮುಹ್ಕಮ್. 4) ಮುತಶಾಬಿಹ್. 5) ಅಮ್ಸಾಲ್. ನೀವು ಹಲಾಲನ್ನು ಹಲಾಲ್ (ಧರ್ಮಬದ್ಧ) ಎಂದು ಭಾವಿಸಿರಿ. ಹರಾಮನ್ನು ಹರಾಮ್ (ನಿಷಿದ್ಧ) ಎಂದು ಬಗೆಯಿರಿ, ಮುಹ್ಕಮ್‌ನಂತೆ (ನಿಯಮಗಳನ್ನು ವಿವರಿಸಲಾದ ಕುರ್‌ಆನ್ ಭಾಗಗಳು) ನಡೆಯಿರಿ, ಮುತಶಾಬಿಹ್ (ಪರಲೋಕದ ಕುರಿತು ಕುರ್‌ಆನಿನಲ್ಲಿ ಪ್ರಸ್ತಾಪಿಸಲಾದ ಭಾಗಗಳು ಅಂದರೆ ಸ್ವರ್ಗ, ನರಕ, ಅರ್ಶ್ (ದೇವ ಪೀಠ) ಕುರ್ಸಿ ಇತ್ಯಾದಿ)ಗಳ ಮೇಲೆ ವಿಶ್ವಾಸವಿರಿಸಿರಿ. (ಅದರ ಶೋಧನೆಗೆ ಹೋಗಬೇಡಿರಿ) ಅಮ್ಸಾಲ್‌ನಿಂದ (ಜನಾಂಗಗಳ ವಿನಾಶದ ಪಾಠಪ್ರದ ಪ್ರಸ್ತಾಪವಿರುವ ಕುರ್‌ಆನಿನ ಭಾಗಗಳು) ಪಾಠ ಬ ೋಧಕ ಅಂಶಗಳನ್ನು ಕಲಿಯಿರಿ. *[ಮಿಶ್ಕಾತ್]*

---

(28) عَنْ جَابِرٍ قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ إِنَّ اللّٰهَ فَرَضَ فَرَائِضَ فَلَا تُضَيِّعُوْهَا، وَحَرَّمَ حُرُمَاتٍ فَلَا تَنْتَهِكُوْهَا، وَحَدَّ حُدُوْدًا فَلَا تَعْتَدُوْهَا، وَسَكَتَ عَنْ أَشْيَاءَ مِنْ غَيْرِ نِسْيَانٍ فَلَا تَبْحَثُوْا عَنْهَا۔

(مشكوٰة)

ಜಾಬಿರ್(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು- ಅಲ್ಲಾಹನು ಕೆಲವು ವಿಷಯಗಳನ್ನು ಫರ್ಝ್(ಕಡ್ಡಾಯ) ಎಂದು ಸಾರಿದ್ದಾನೆ. ಅವುಗಳನ್ನು ನೆರವೇರಿಸಬೇಕು, ವ್ಯರ್ಥಗೊಳಿಸಬಾರದು. ಕೆಲವು ವಿಷಯಗಳನ್ನು ಹರಾಮ್ (ನಿಷಿದ್ಧ) ಎಂದು ಸಾರಿದ್ದಾನೆ. ಅವುಗಳನ್ನು ಮಾಡಬಾರದು. ಕೆಲವು ಮೇರೆಗಳನ್ನು ನಿಶ್ಚಯಿಸಿರುವನು. ಅವುಗಳನ್ನು ಉಲ್ಲಂಘಿಸಬಾರದು. ಕೆಲವು ವಿಷಯಗಳ ಬಗ್ಗೆ ಮೌನ ತಾಳಿದ್ದಾನೆ- ಇದು ಮರೆವಿನಿಂದಲ್ಲ- ಅವುಗಳನ್ನು ಕೆದಕಬಾರದು.

[ಮಿಶ್ಕಾತ್]

---

(29) عَنْ زِيَادِ بْنِ لَبِيْدٍ قَالَ ذَكَرَ النَّبِيُّ صَلَّى اللّٰهُ عَلَيْهِ وَسَلَّمَ شَيْئًا، فَقَالَ ذٰلِكَ عِنْدَ اَوَانِ ذَهَابِ الْعِلْمِ، قُلْتُ يَا رَسُوْلَ اللّٰهِ وَكَيْفَ يَذْهَبُ الْعِلْمُ وَنَحْنُ نَقْرَءُ الْقُرْاٰنَ وَنُقْرِئُهُ اَبْنَاءَنَا، وَيُقْرِئُهُ اَبْنَاءُنَا اَبْنَاءَهُمْ؟ فَقَالَ ثَكِلَتْكَ اُمُّكَ زِيَادُ اِنْ كُنْتُ لَاُرَاكَ مِنْ اَفْقَهِ رَجُلٍ بِالْمَدِيْنَةِ، اَوَلَيْسَ هٰذِهِ الْيَهُوْدُ وَالنَّصَارٰى يَقْرَءُوْنَ التَّوْرَاةَ وَالْاِنْجِيْلَ لَا يَعْمَلُوْنَ بِشَيْئٍ مِّمَّا فِيْهِمَا۔

(ابن ماجہ)

ಝಿಯಾದ್ ಬಿನ್ ಲಬೀದ್(ರ) ಹೇಳುತ್ತಾರೆ: ಪ್ರವಾದಿ(ಸ) ಒಂದು ವಿಷಯವನ್ನು ಪ್ರಸ್ತಾಪಿಸಿದರು- (ಬಹುಶಃ ಸಮುದಾಯಕ್ಕೆ ಮುಂದೆ ಬರಲಿರುವ 'ಅಪಾಯ'ದ ಕುರಿತಾಗಿರಬೇಕು) ಆ ಕಾಲವು 'ಇಲ್ಮ್' (ವಿದ್ಯೆ) ಎತ್ತಲ್ಪಡುವ ಕಾಲವಾಗಿರುವುದು. ಆಗ ನಾನು ಹೀಗೆ ಕೇಳಿದೆ- "ಅಲ್ಲಾಹನ ಸಂದೇಶವಾಹಕರೇ! ಅದು ಹೇಗೆ ಎತ್ತಲ್ಪಡುವುದು? ನಾವು ಕುರ್‌ಆನ್ ಓದುತ್ತಿರುವೆವು, ನಮ್ಮ ಮಕ್ಕಳಿಗೂ ಕಲಿಸುತ್ತಿರುವೆವು ಮತ್ತು ನಮ್ಮ ಮಕ್ಕಳು ಅವರ ಸಂತಾನಗಳಿಗೂ ಕಲಿಸುವರಲ್ಲವೆ?" ಪ್ರವಾದಿ(ಸ) ಹೇಳಿದರು- ಝಿಯಾದ್, ಭೇಷ್! ನಾನು ನಿಮ್ಮನ್ನು ಮದೀನಾದಲ್ಲಿ ದೊಡ್ಡ ಧರ್ಮಜ್ಞಾನಿಯೆಂದು ಭಾವಿಸಿದ್ದೆ! ಯಹೂದಿಯರೂ ಕ್ರೈಸ್ತರೂ ತೌರಾತ್ ಮತ್ತು ಇಂಜೀಲನ್ನು ಪಠಿಸುತ್ತಿಲ್ಲವೆ? ಆದರೆ ಅವುಗಳ ಬೋಧನೆಗಳಂತೆ ಅವರು ನಡೆಯುವುದಿಲ್ಲ. *[ಇಬ್ನುಮಾಜಃ]*

ಟಿಪ್ಪಣಿ: 'ಇಲ್ಮ್' ಎಂದರೆ ಪ್ರವಾದಿಗಳ ಮೂಲಕ ಬಂದ ವಿದ್ಯೆಯಾಗಿದೆ. ಈ ಹದೀಸ್‌ನಿಂದ ತಿಳಿದು ಬರುವುದೇನೆಂದರೆ ಸಹಾಬಿಗಳು ತಮ್ಮ ಮಕ್ಕಳಿಗೆ ಪ್ರವಾದಿಗಳ ಶಿಕ್ಷಣವನ್ನು ನೀಡುವ ಬಗ್ಗೆ ಆಸ್ಥೆ ವಹಿಸುತ್ತಿದ್ದರು. ಅವರು ಕುರ್‌ಆನ್ ಕಲಿಸದೆ ಕ್ರೈಸ್ತ ಮಿಶನರಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸುವ ಇಂದಿನ ಮುಸ್ಲಿಮರಂತೆ ಆಗಿರಲಿಲ್ಲ.

---

(30) عَنْ اَبِيْ شُرَيْحٍ الْخُزَاعِيِّ قَالَ خَرَجَ عَلَيْنَا رَسُوْلُ اللّٰهِ صَلَّى اللّٰهُ عَلَيْهِ وَسَلَّمَ فَقَالَ أَلَيْسَ تَشْهَدُوْنَ اَنْ لَا اِلٰهَ اِلَّا اللّٰهُ وَاَنِّيْ رَسُوْلُ اللّٰهِ؟ قَالُوْا بَلٰى قَالَ اِنَّ هٰذَا الْقُرْاٰنَ طَرَفُهٗ بِيَدِ اللّٰهِ وَطَرَفُهٗ بِاَيْدِيْكُمْ، فَتَمَسَّكُوْا بِهٖ، فَاِنَّكُمْ لَنْ تَضِلُّوْا وَلَنْ تَهْلِكُوْا بَعْدَهٗ اَبَدًا (الترغیب للمنذری)

ಅಬೂ ಶುರೈಹ್ ಖುಝಾಈ(ರ) ಹೇಳುತ್ತಾರೆ: ಪ್ರವಾದಿ(ಸ) ಒಂದು ದಿನ ತಮ್ಮ ನಿವಾಸದಿಂದ ಹೊರಟು ನಮ್ಮ ಬಳಿಗೆ ಬಂದು ಹೀಗೆಂದರು- ನೀವು ಅಲ್ಲಾಹನ ಹೊರತು ಬೇರೆ ಇಲಾಹ್ (ಆರಾಧ್ಯ, ಒಡೆಯ ಮತ್ತು ಆಜ್ಞಾಧಿಕಾರಿ) ಯಾರೂ ಇಲ್ಲವೆಂದೂ ನಾನು ಅಲ್ಲಾಹನ ಸಂದೇಶವಾಹಕನೆಂದೂ ಸಾಕ್ಷ್ಯವಹಿಸುವುದಿಲ್ಲವೆ? ಜನರು ಹೇಳಿದರು- ಖಂಡಿತ, ನಾವು ಈ ಎರಡೂ ವಿಷಯಗಳ ಸಾಕ್ಷ್ಯವಹಿಸುತ್ತೇವೆ. ತರುವಾಯ ಪ್ರವಾದಿ(ಸ) ಹೇಳಿದರು- ನೋಡಿರಿ, ಅಲ್ಲಾಹನ ಗ್ರಂಥದ (ಪವಿತ್ರ ಕುರ್‌ಆನ್) ಒಂದು ತುದಿಯು ಅಲ್ಲಾಹನ ಕೈಯಲ್ಲೂ ಇನ್ನೊಂದು ತುದಿಯು ನಿಮ್ಮ ಕೈಯಲ್ಲೂ ಇದೆ. ಆದುದರಿಂದ ನೀವು ಕುರ್‌ಆನನ್ನು ಬಿಗಿಯಾಗಿ ಹಿಡಿದರೆ ಎಂದೂ ದಾರಿ ತಪ್ಪಲಾರಿರಿ ಮತ್ತು ನಾಶವಾಗಲಾರಿರಿ.

[ತರ್ಗೀಬು ವತ್ತರ್‌ಹೀಬ್- ಅಲ್ ಮುಂದಿರಿ]

ಟಿಪ್ಪಣಿ: 'ಅಲ್ಲಾಹನ ಪಾಶವನ್ನು ಬಿಗಿಯಾಗಿ ಹಿಡಿಯಿರಿ' ಎಂಬ ಕುರ್‌ಆನಿನ ಸೂಕ್ತದ ಅತ್ಯುತ್ತಮ ವ್ಯಾಖ್ಯಾನವಾಗಿದೆ ಈ ಹದೀಸ್. ಕುರ್‌ಆನ್ ವಾಸ್ತವದಲ್ಲಿ ಒಂದು ಹಗ್ಗವಾಗಿದ್ದು ಅದರ ಒಂದು ತುದಿ ಅಲ್ಲಾಹನ ಕೈಯಲ್ಲೂ ಇನ್ನೊಂದು ತುದಿ ಸತ್ಯವಿಶ್ವಾಸಿಗಳ ಕೈಯಲ್ಲೂ ಇದೆ. ಮುಸ್ಲಿಮರು ಎಲ್ಲಿಯ ವರೆಗೆ ಈ ಹಗ್ಗವನ್ನು ಹಿಡಿದಿರುವರೋ ಅಲ್ಲಿಯ ವರೆಗೆ ಅಲ್ಲಾಹನ ಸಹಾಯ ಸಿಗುತ್ತಲಿರುವುದು. ಇಹಲೋಕದಲ್ಲೂ ಗೌರವ, ಪ್ರತಿಷ್ಠೆ ಹಾಗೂ ಪರಲೋಕದಲ್ಲೂ ಶಾಶ್ವತ ಸುಖ ಲಭಿಸುವುದು.

ಆಯತ್‌ನಲ್ಲಿರುವ 'ಹಬ್ಲ್' ಎಂಬ ಪದಕ್ಕೆ ಒಪ್ಪಂದ ಎಂಬ ಅರ್ಥವೂ ಇದೆ. ಒಪ್ಪಂದವು ಏಕಪಕ್ಷೀಯವಾಗಿರುವುದಿಲ್ಲ. ಪ್ರವಾದಿಯವರ(ಸ) ಈ ಮಾತಿನ ಇಂಗಿತವೇನೆಂದರೆ ಕುರ್‌ಆನ್ ಒಂದು ಒಡಂಬಡಿಕೆಯಾಗಿದೆ. ಮುಸ್ಲಿಮರ ಮತ್ತು ಸರ್ವಲೋಕಗಳ ಪಾಲಕನಾದ ಅಲ್ಲಾಹನ ನಡುವೆ ನಡೆದ ಒಡಂಬಡಿಕೆಯಿದು. ಇದರಲ್ಲಿ ಎರಡು ಪರಿಚ್ಛೇದಗಳಿವೆ. ಒಂದನೆಯದು ಮುಸ್ಲಿಮರಿಗೆ ಸಂಬಂಧಿಸಿದೆ. ಎರಡನೆಯದರ ಸಂಬಂಧ ಅಲ್ಲಾಹನೊಂದಿಗಿದೆ. ಮುಸ್ಲಿಮರಿಗೆ ಸಂಬಂಧಿಸಿದ ಪರಿಚ್ಛೇದದಲ್ಲಿ ಈ ವಾಕ್ಯವಿದೆ- ಅಲ್ಲಾಹನೇ! ನಾವು ನಿನ್ನ ಗ್ರಂಥದ ಬೆಳಕಿನಲ್ಲಿ ಜೀವನ ಸಾಗಿಸುವೆವು. ನಿನ್ನ ಎಲ್ಲಾ ಆಜ್ಞೆಗಳನ್ನು ಪಾಲಿಸುವೆವು. ನಿನ್ನ ದಾಸರಾಗಿ ಬಾಳುವೆವು ಮತ್ತು ನಿನ್ನ ದಾಸ್ಯ ಅನುಸರಣೆಯಲ್ಲೇ ಸಾಯುವೆವು. ಅಲ್ಲಾಹನಿಗೆ ಸಂಬಂಧಿಸಿದ ಪರಿಚ್ಛೇದದಲ್ಲಿ ಈ ರೀತಿ ಬರೆಯಲಾಗಿದೆ- ಮುಸ್ಲಿಮರೇ! ನೀವು ಎಲ್ಲಿಯ ವರೆಗೆ ನಿಮ್ಮ ಒಪ್ಪಂದವನ್ನು ಪಾಲಿಸುವಿರೋ ಅಲ್ಲಿಯವರೆಗೆ ಭೂಲೋಕದಲ್ಲಿ ನಾನು ನಿಮ್ಮ ಸಹಾಯಕನಾಗಿರುವೆನು. ವೈರಿಗಳ ವಿರುದ್ಧ ನಿಮ್ಮನ್ನು ಗೆಲ್ಲಿಸುವೆನು. ಆದರೆ ನೀವು ಈ ಒಪ್ಪಂದದಲ್ಲಿ ವಂಚನೆ ಮಾಡಿದರೆ ನನ್ನ ಸಹಾಯ ಸಹಕಾರಗಳಿಂದ ವಂಚಿತರಾಗುವಿರಿ. ಇನ್ನು ನೀವು ಒಪ್ಪಂದವನ್ನು ಮುರಿದರೆ ನನ್ನ ಸಹಾಯ ಸಹಕಾರಗಳು ಶಾಶ್ವತವಾಗಿ ನಿಮ್ಮಿಂದ ದೂರ ಸರಿಯುವುವು. ಈ ಒಪ್ಪಂದದ ಪ್ರಸ್ತಾಪವು ಕುರ್‌ಆನಿನ ಸೂರಃ ಅಲ್ ಮಾಇದಃದ 7ರಿಂದ 13ರವರೆಗಿನ ವಚನಗಳಲ್ಲಿದೆ. ಮುಂದಿನ ಅಧ್ಯಾಯಗಳಲ್ಲಿ ಪ್ರವಾದಿಯವರ(ಸ) ವಚನಗಳಿಂದ ಅಲ್ಲಾಹನೊಂದಿಗೆ ಮಾಡಿದ ಒಪ್ಪಂದವನ್ನು ಮುರಿಯುವುದರ ದುಷ್ಪರಿಣಾಮಗಳು ವಾಚಕರ ಮುಂದೆ ಬರಲಿವೆ. ಮುಸ್ಲಿಮ್ ಸಮುದಾಯಕ್ಕೆ ಈ ಒಪ್ಪಂದವನ್ನು ಪುನಶ್ಚೇತನಗೊಳಿಸುವ ಸೌಭಾಗ್ಯವನ್ನು ಅಲ್ಲಾಹನು ದಯಪಾಲಿಸಲಿ. ಒಪ್ಪಂದ ಭಂಗ ಮತ್ತು ಅದರ ದುಷ್ಪರಿಣಾಮಗಳಿಂದ ಸಮುದಾಯವನ್ನು ರಕ್ಷಿಸಲಿ.

6) ಪರಲೋಕ ವಿಶ್ವಾಸ

ಪರಲೋಕದ ಮೇಲೆ ವಿಶ್ವಾಸವಿರಿಸುವುದೆಂದರೆ, ಮಾನವನು ಈ ಕೆಳಗಿನ ವಾಸ್ತವಿಕತೆಗಳನ್ನು ನಂಬುವುದಾಗಿದೆ- ಒಂದು ದಿನ ಬರಲಿದೆ, ಅಂದು ಎಲ್ಲ ಮಾನವರ ಜೀವನದ ಕಡತಗಳ ವಿಚಾರಣೆ ನಡೆಯುವುದು. ಯಾರ ಕರ್ಮಗಳು ತೃಪ್ತಿಕರವಾಗಿರುವುವೋ ಅವರು ಪುರಸ್ಕಾರ ಪಡೆಯುವರು. ಯಾರ ಕರ್ಮಗಳು ಹಾಳಾಗಿರುವುವೋ ಅವರು ಶಿಕ್ಷೆ ಪಡೆಯುವರು. ಶಿಕ್ಷೆಯೂ ಅನಂತ, ಪುರಸ್ಕಾರವೂ ಶಾಶ್ವತ ಹಾಗೂ ಸುಖ-ಸಂತೋಷವೂ ಶಾಶ್ವತ, ಕಷ್ಟಕಾರ್ಪಣ್ಯವೂ ಶಾಶ್ವತ. ಪರಲೋಕದ ಕುರಿತು ಕೆಲವು ಹದೀಸ್‌ಗಳನ್ನು ಇಲ್ಲಿ ಕೊಡಲಾಗಿದೆ. ಅದರಿಂದ ಪರಲೋಕದ ಕುರಿತು ಸ್ಪಷ್ಟವಾಗುತ್ತದೆ-

(31) عَنِ ابْنِ عُمَرَ قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ مَنْ سَرَّهٗ اَنْ يَّنْظُرَ اِلٰى يَوْمِ الْقِيَامَةِ كَاَنَّهٗ رَأْيُ عَيْنٍ، فَلْيَقْرَءْ اِذَا الشَّمْسُ كُوِّرَتْ، اِذَا السَّمَاءُ انْفَطَرَتْ، اِذَا السَّمَاءُ انْشَقَّتْ۔ (ترمذی)

ಇಬ್ನು ಉಮರ್(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು- ಯಾರಾದರೂ ಈ ಲೋಕದಲ್ಲಿದ್ದುಕೊಂಡೇ ನಿರ್ಣಾಯಕ ದಿನವನ್ನು ಕಣ್ಣಾರೆ ನೋಡ ಬಯಸುವುದಾದರೆ 'ಇದಶ್ಶಂಸು ಕುವ್ವಿರತ್, ಇದಸ್ಸಮಾಉಂ ಫತರತ್ ಮತ್ತು ಇದಸ್ಸಮಾಉಂಶಕ್ಕತ್' ಎಂಬ ಮೂರು ಸೂರಃಗಳನ್ನು ಪಠಿಸಲಿ. (ಈ ಮೂರು ಅಧ್ಯಾಯಗಳಲ್ಲಿ ನಿರ್ಣಾಯಕ ದಿನದ ಚಿತ್ರಣವನ್ನು ಅತ್ಯಂತ ಪ್ರಭಾವಕಾರಿ ಶೈಲಿಯಲ್ಲಿ ಮಾಡಲಾಗಿದೆ) *[ತಿರ್ಮಿದಿ]*

---

(32) عَنْ اَبِیْ هُرَيْرَةَ رض قَالَ، قَرَءَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ هٰذِهِ الْاٰيَةَ "يَوْمَئِذٍ تُحَدِّثُ اَخْبَارَهَا" قَالَ اَتَدْرُوْنَ مَا اَخْبَارُهَا؟ قَالُوا اللّٰهُ وَرَسُوْلُهٗ اَعْلَمُ، قَالَ فَاِنَّ اَخْبَارَهَا اَنْ تَشْهَدَ عَلٰى كُلِّ عَبْدٍ وَّاَمَةٍ بِمَا عَمِلَ عَلٰى ظَهْرِهَا اَنْ تَقُوْلَ عَمِلَ عَلَيَّ كَذَا وَكَذَا يَوْمَ كَذَا وَكَذَا قَالَ فَهٰذِهٖ اَخْبَارُهَا۔ (ترمذی)

ಅಬೂ ಹುರೈರಾ(ರ) ಹೇಳುತ್ತಾರೆ: ಪ್ರವಾದಿಯವರು(ಸ) ಯೌಮಇದಿನ್ ತುಹದ್ದಿಸು ಅಖ್ಬಾರಹಾ ಅಂದು ಭೂಮಿಯು ತನ್ನ ವೃತ್ತಾಂತವನ್ನು ವಿವರಿಸುವುದು ಎಂಬ ಸೂರಃ ಝಿಲ್‌ಝಾಲ್‌ನ ವಚನವನ್ನು ಪಠಿಸಿದರು. ತರುವಾಯ, ಅದರ ಅರ್ಥವೇನೆಂದು ಬಲ್ಲಿರಾ? ಎಂದು

ಕೇಳಿದರು. ಜನರು ಹೇಳಿದರು- ಅಲ್ಲಾಹ್ ಮತ್ತು ಆತನ ಸಂದೇಶವಾಹಕರೇ ಚೆನ್ನಾಗಿಬಲ್ಲರು. ಆಗ ಪ್ರವಾದಿ(ಸ) ಹೇಳಿದರು- ನಿರ್ಣಾಯಕ ದಿನದಂದು ಭೂಮಿಯು, ಈ ನಿನ್ನ ದಾಸ ಮತ್ತು ದಾಸಿ ಇಂತಹ ದಿನ ಮತ್ತು ಇಂತಹ ಘಳಿಗೆಯಲ್ಲಿ ನನ್ನ ಬೆನ್ನ ಮೇಲೆ ಇಂತಿಂತಿಹ ಕೆಟ್ಟ ಅಥವಾ ಉತ್ತಮ ಕೆಲಸ ಮಾಡಿದನು(ಳು) ಎಂದು ಸಾಕ್ಷಿ ನುಡಿಯುವುದು. *[ತಿರ್ಮಿದಿ]*

❖ ❖ ❖

ಕಪಟ ವಿಶ್ವಾಸದ ದುಷ್ಪರಿಣಾಮ

(33) عَنْ أَبِي هُرَيْرَةَ رضي قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ.....
.....فَيَلْقَى الْعَبْدَ فَيَقُوْلُ أَيْ فُلْ أَلَمْ أُكْرِمْكَ وَأُسَوِّدْكَ وَأُزَوِّجْكَ وَأُسَخِّرْ
لَكَ الْخَيْلَ وَالْإِبِلَ وَأَذَرْكَ تَرْأَسُ وَتَرْبَعُ؟ فَيَقُوْلُ بَلَى، قَالَ فَيَقُوْلُ
أَفَظَنَنْتَ أَنَّكَ مُلَاقِيَّ؟ فَيَقُوْلُ لَا، فَيَقُوْلُ فَإِنِّي قَدْ أَنْسَاكَ كَمَا نَسِيْتَنِيْ ثُمَّ
يَلْقَى الثَّانِيَ فَذَكَرَ مِثْلَهُ، ثُمَّ يَلْقَى الثَّالِثَ فَيَقُوْلُ لَهُ مِثْلَ ذٰلِكَ فَيَقُوْلُ يَا رَبِّ
آمَنْتُ بِكَ وَبِكِتَابِكَ وَبِرُسُلِكَ وَصَلَّيْتُ وَصُمْتُ وَتَصَدَّقْتُ وَيُثْنِيْ بِخَيْرٍ مَا
اسْتَطَاعَ، فَيَقُوْلُ هٰهُنَا إِذًا، ثُمَّ يُقَالُ الْآنَ نَبْعَثُ شَاهِدًا عَلَيْكَ، فَيَتَفَكَّرُ فِيْ
نَفْسِهِ مَنْ ذَا الَّذِيْ يَشْهَدُ عَلَيَّ؟ فَيُخْتَمُ عَلَى فِيْهِ وَيُقَالُ لِفَخِذِهِ انْطِقِيْ، فَتَنْطِقُ
فَخِذُهُ وَلَحْمُهُ وَعِظَامُهُ بِعَمَلِهِ، وَذٰلِكَ لِيُعْذِرَ مِنْ نَفْسِهِ، فَذٰلِكَ الْمُنَافِقُ
وَذٰلِكَ الَّذِيْ سَخِطَ اللّٰهُ عَلَيْهِ - (مسلم)

ಅಬೂಹುರೈರಾ(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು..... (ನಿರ್ಣಾಯಕ ದಿನ ದಂದು) ಒಬ್ಬ ದಾಸನು ಅಲ್ಲಾಹನ ಮುಂದೆ ಬರುವನು. ಅವನೊಂದಿಗೆ ಅಲ್ಲಾಹನು ಹೀಗೆನ್ನುವನು- ಓ ಇಂಥವನೇ! ನಾನು ನಿನಗೆ ಗೌರವಾದರಗಳನ್ನು ದಯಪಾಲಿಸಿರಲಿಲ್ಲವೆ? ನಾನು ನಿನ್ನನ್ನು ನಾಯಕನಾಗಿ ಮಾಡಿರಲಿಲ್ಲವೆ? ನಾನು ನಿನಗೆ ಪತ್ನಿಯನ್ನು ನೀಡಿರಲಿಲ್ಲವೆ? ನಿನ್ನ ಸ್ವಾಧೀನಕ್ಕೆ ಕುದುರೆ-ಒಂಟೆಗಳನ್ನು ಕೊಟ್ಟಿರಲಿಲ್ಲವೆ? ನೀನು ಆಡಳಿತವನ್ನು ನಡೆಸಿ ಜನರಿಂದ ಕಂದಾಯ ವಸೂಲು ಮಾಡಲು ನಿನಗೆ ನಾನು ಅವಕಾಶ ನೀಡಿರಲಿಲ್ಲವೇ? ಅವನು ಆ ಎಲ್ಲಾ ಕೊಡುಗೆಗಳನ್ನು ಒಪ್ಪಿಕೊಳ್ಳುವನು. ತರುವಾಯ ಅವನೊಂದಿಗೆ ಅಲ್ಲಾಹನು ಪುನಃ

ಕೇಳುವನು- ನೀನು ಒಂದು ದಿನ ನನ್ನೆದುರು ಹಾಜರುಗೊಳಿಸಲ್ಪಡುವಿ ಎಂಬ ವಿಶ್ವಾಸ ವಿರಿಸಿದ್ದೆಯಾ? ಅವನು ಹೇಳುವನು- ಇಲ್ಲ, ನಾನು ಈ ದಿನದ ಬಗ್ಗೆ ವಿಶ್ವಾಸವಿರಿಸಿರಲಿಲ್ಲ. ಆಗ ಅಲ್ಲಾಹನು ಹೇಳುವನು- ಭೂಲೋಕದಲ್ಲಿ ನೀನು ನನ್ನನ್ನು ಮರೆತಂತೆಯೇ ಈ ದಿನ ನಾನೂ ನಿನ್ನನ್ನು ಮರೆತು ಬಿಡುವೆನು. (ನಿನ್ನನ್ನು ಕಡೆಗಣಿಸುವೆನು. ನನ್ನ ಅನುಗ್ರಹದಿಂದ ದೂರವಿರಿಸುವೆನು)

ಅನಂತರ ಇನ್ನೋರ್ವನು (ನಿರ್ಣಾಯಕ ದಿನವನ್ನು ನಿರಾಕರಿಸುವ) ಅಲ್ಲಾಹನ ಮುಂದೆ ಬರುವನು. ಅವನಲ್ಲೂ ಇದೇ ರೀತಿಯ ಪ್ರಶ್ನೋತ್ತರ ನಡೆಯುವುದು. ಆ ಬಳಿಕ ಮತ್ತೊಬ್ಬ ವ್ಯಕ್ತಿ ಬರುವನು. ಈ ಇಬ್ಬರೊಡನೆ ಕೇಳಿದ ಪ್ರಶ್ನೆಗಳನ್ನೇ ಅವನಿಗೂ ಹಾಕಲಾಗುವುದು. ಆಗ ಅವನು ಹೀಗೆ ಉತ್ತರಿಸುವನು- ನನ್ನ ಪ್ರಭೂ! ನಾನು ನಿನ್ನ ಮೇಲೆ ವಿಶ್ವಾಸವಿರಿಸಿದ್ದೆ. ನಮಾಝ್ ಮಾಡುತ್ತಿದ್ದೆ. ಉಪವಾಸ ವ್ರತ ಆಚರಿಸುತ್ತಿದ್ದೆ. ನಿನ್ನ ಮಾರ್ಗದಲ್ಲಿ ನನ್ನ ಸಂಪತ್ತನ್ನು ವ್ಯಯಿಸುತ್ತಿದ್ದೆ. ಅದೇ ರೀತಿ ತಾನು ಮಾಡಿದ ಸತ್ಕರ್ಮಗಳನ್ನೆಲ್ಲ ಸರಸರನೆ ಹೇಳುತ್ತಾ ಹೋಗುವನು. ಆಗ ಅಲ್ಲಾಹನು ಅವನೊಂದಿಗೆ ಹೀಗೆನ್ನುವನು- ಸಾಕು ಮಾಡು, ನಿಲ್ಲಿಸು, ನಿನ್ನ ಕುರಿತು ಇತರ ಸಾಕ್ಷಿದಾರರನ್ನು ಕರೆಯುತ್ತೇನೆ. ಆಗ ಅವನು ಮನದಲ್ಲೇ ತನ್ನ ಬಗ್ಗೆ ಸಾಕ್ಷಿ ನುಡಿಯುವವರು ಯಾರಿರಬಹುದು ಎಂದು ಅಂದುಕೊಳ್ಳುವನು. ಹಾಗೆ ಅವನ ಸುಳ್ಳು ಹೇಳುವ ಬಾಯಿಯನ್ನು ಮುಚ್ಚಲಾಗುವುದು ಮತ್ತು ಅವನ ತೊಡೆ, ಮಾಂಸ ಮತ್ತು ಮೂಳೆಗಳೊಂದಿಗೆ ವಿಚಾರಿಸ ಲಾಗುವುದು. ಆಗ ಅವು ಅವನ ಪ್ರತಿಯೊಂದು ಮೋಸಗಾರಿಕೆಯ ಮತ್ತು ತೋರಿಕೆಯ ಕರ್ಮಗಳನ್ನು ಸ್ಪಷ್ಟವಾಗಿ ವಿವರಿಸುವುವು. ಈ ರೀತಿ ಅವನು ಸುಳ್ಳು ಹೇಳುವ ಬಾಗಿಲನ್ನೇ ಮುಚ್ಚಿ ಬಿಡಲಾಗುವುದು.

ಪ್ರವಾದಿ(ಸ) ಹೇಳಿದರು- ಇದು ಭೂಲೋಕದಲ್ಲಿ ಕಾಪಟ್ಯ ತೋರಿದ ಮತ್ತು ಅಲ್ಲಾಹನ ಕ್ರೋಧಕ್ಕೆ ಪಾತ್ರನಾದ ವ್ಯಕ್ತಿಯಾಗಿರುವನು. *[ಮುಸ್ಲಿಮ್]*

---

(34) عَنْ عَائِشَةَ قَالَتْ سَمِعْتُ رَسُولَ اللهِ صَلَّى اللهُ عَلَيْهِ وَسَلَّمَ يَقُولُ فِي بَعْضِ صَلَوَاتِهِ اَللّٰهُمَّ حَاسِبْنِي حِسَابًا يَسِيرًا قُلْتُ يَا نَبِيَّ اللهِ مَا الْحِسَابُ الْيَسِيرُ؟ قَالَ اَنْ يَنْظُرَ فِي كِتَابِهِ فَيَتَجَاوَزَ عَنْهُ، اِنَّهُ مَنْ نُوقِشَ الْحِسَابَ يَا عَائِشَةُ هَلَكَ

(مسند احمد)

ಆಯಿಶಾ(ರ) ಹೇಳುತ್ತಾರೆ- ಪ್ರವಾದಿ(ಸ) ಕೆಲವು ನಮಾಝ್‌ಗಳಲ್ಲಿ ಈ ರೀತಿ ಪ್ರಾರ್ಥಿಸುವುದನ್ನು ಕೇಳಿದ್ದೇನೆ- ಓ ಅಲ್ಲಾಹ್! ನನ್ನನ್ನು ಸರಳ ವಿಚಾರಣೆಗೆ ಒಳಪಡಿಸು. ನಾನು ಕೇಳಿದೆ- ಅಲ್ಲಾಹನ ಸಂದೇಶವಾಹಕರೇ! ಸರಳ ವಿಚಾರಣೆಯೆಂದರೇನು? ಪ್ರವಾದಿ(ಸ)

ಹೇಳಿದರು- ಸರಳ ವಿಚಾರಣೆಯೆಂದರೆ ಅಲ್ಲಾಹನು ತನ್ನ ದಾಸನ ಕರ್ಮಪತ್ರವನ್ನು ನೋಡಿ, ಅವನ ಲೋಪದೋಷಗಳನ್ನು ಕ್ಷಮಿಸಿಬಿಡುವುದು. ಅನಂತರ ಹೀಗೆಂದರು- ಆಯಿಶಾ! ವಿಚಾರಣೆ ನಡೆಸುವಾಗ ಯಾರ ಒಂದೊಂದು ಕರ್ಮವನ್ನೂ ಸೂಕ್ಷ್ಮವಾಗಿ ಪರಿಶೀಲಿಸ ಲಾಗುವುದೋ ಅವನು ನಾಶವಾಗಿ ಹೋದನು. *[ಅಹ್ಮದ್]*

ಟಿಪ್ಪಣಿ: ಯಾರು ಅಲ್ಲಾಹನ ಮಾರ್ಗದಲ್ಲಿ ನಡೆಯುವ, ಅವರಿಗೆ ನೀಡಲಾದ ಆದೇಶಗಳನ್ನು ಪಾಲಿಸುತ್ತಾರೋ, ತಮಗೆ ನಿಷೇಧಿಸಲಾದ ವಿಷಯಗಳ ಹತ್ತಿರವೂ ಸುಳಿಯುವುದಿಲ್ಲವೋ ವಿಚಾರಣೆಯ ದಿನ ಅಲ್ಲಾಹನು ಅವರ ಮೇಲೆ ಕೃಪೆದೋರುವನು, ಅವರ ಚಿಕ್ಕ ಪುಟ್ಟ ದೋಷಗಳನ್ನು ಕಡೆಗಣಿಸುವನು, ಅವರನ್ನು ಸ್ವರ್ಗದಲ್ಲಿ ಪ್ರವೇಶಗೊಳಿಸುವನು ಎಂದು ಕುರ್‌ಆನ್ ಮತ್ತು ಅನೇಕ ಹದೀಸ್‌ಗಳಿಂದ ತಿಳಿದುಬರುತ್ತದೆ. ಅದಕ್ಕೆ ವ್ಯತಿರಿಕ್ತವಾಗಿ ಯಾರು ಕಡ್ಡಾಯ ಆದೇಶಗಳನ್ನು ಉದ್ದೇಶಪೂರ್ವಕವಾಗಿ ಮುರಿಯುತ್ತಾರೋ ಅವರನ್ನು ತಡೆಯಲಾದ ಪಾಪಗಳನ್ನು ಅರಿತೂ ಅರಿತೂ ಮಾಡುತ್ತಾರೋ ಅಂತಹ ಜನರೊಂದಿಗೆ ವಿಚಾರಣೆಯ ವೇಳೆ ಕಠಿಣವಾಗಿ ವರ್ತಿಸಲಾಗುವುದು. ಅವರ ಒಂದೊಂದು ತಪ್ಪನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗುವುದು. ಇಂತಹ ವ್ಯಕ್ತಿ ಕೆಟ್ಟ ಪರಿಣಾಮದಿಂದ ಪಾರಾಗುವುದಾದರೂ ಹೇಗೆ?

---

(35) عَنْ اَبِيْ سَعِيْدِنِ الْخُدْرِيِّ رض اَنَّهُ اَتٰى رَسُوْلَ اللّٰهِ صَلَّى اللّٰهُ عَلَيْهِ وَسَلَّمَ فَقَالَ اَخْبِرْنِيْ مَنْ يَقْوٰى عَلَى الْقِيَامِ يَوْمَ الْقِيَامَةِ الَّذِيْ قَالَ اللّٰهُ عَزَّ وَجَلَّ يَوْمَ يَقُوْمُ النَّاسُ لِرَبِّ الْعٰلَمِيْنَ ، فَقَالَ يُخَفَّفُ عَلَى الْمُؤْمِنِ حَتّٰى يَكُوْنَ عَلَيْهِ كَالصَّلٰوةِ الْمَكْتُوْبَةِ ۔ (مشكوٰة)

ಅಬೂ ಸಈದ್ ಖುದ್ರೀ(ರ) ಹೇಳುತ್ತಾರೆ: ನಾನು ಪ್ರವಾದಿಯವರ(ಸ) ಬಳಿಗೆ ಹೋಗಿ 'ಯೌಮ ಯಕೂಮು' ಎಂಬ ವಚನ ಬಂದಿರುವ (ಒಂದು ದಿನವು ಒಂದು ಸಾವಿರ ವರ್ಷ ಗಳಿಗೆ ಸಮಾನವಾಗಿರುವ) ಆ ದಿನ ಅಲ್ಲಾಹನ ಸನ್ನಿಧಿಯಲ್ಲಿ ನಿಲ್ಲಬಲ್ಲವನು ಯಾರು ಎಂದು ಕೇಳಿದೆ. ಆಗ ಪ್ರವಾದಿ(ಸ) ಹೇಳಿದರು- ಆ ದಿನವು ಸತ್ಯವಿಶ್ವಾಸಿಯ ಮಟ್ಟಿಗೆ ಫರ್ಳ್ ನಮಾಝ್‌ನಂತೆ ಕನಿಷ್ಠವೂ ಹಗುರವೂ ಆಗಿರುವುದು. *[ಮಿಶ್ಕಾತ್]*

ಟಿಪ್ಪಣಿ: ಹ.ಅಬೂ ಸಈದ್ ಖುದ್ರೀ ಅವರಿಗೆ ಪರಲೋಕದ ಚಿಂತೆ ಎಷ್ಟಿತ್ತೆಂದು ಈ ಹದೀಸ್‌ನಿಂದ ತಿಳಿದು ಬರುತ್ತದೆ. ಅವರಿಗೆ ಪ್ರವಾದಿ(ಸ) ಹೀಗೆಂದರು- ಆ ದಿನದ ಸಂಕಷ್ಟವು ಅಪರಾಧಿಗಳಿಗೂ ಬಂಡುಕೋರರಿಗೂ ಇರುವುದು. ಅವರಿಗೆ ಆ ದಿನವು ಒಂದು ಸಾವಿರ ವರ್ಷದಷ್ಟು ದೀರ್ಘವಾಗಿ ತೋರುವುದು. ಸಂಕಷ್ಟದಲ್ಲಿ ಸಿಲುಕಿದ ವ್ಯಕ್ತಿಯ ದಿನವು ದೀರ್ಘವಾಗಿರುತ್ತದೆ. ಹೊತ್ತು ಹೋಗುವುದೇ ಇಲ್ಲ. ಆದರೆ ಸದಾಚಾರಿ ಮುಸ್ಲಿಮನಿಗೆ ಆ ದಿನವು ಹಗುರವಾಗಿರುವುದು, ಸುಖದಾಯಕ

ವಾಗಿರುವುದು. ಆ ದಿನದ ಸುಖ ಸಂತೋಷಗಳಿಗಾಗಿಯೇ ಅವರು ಈ ಲೋಕದ ಎಲ್ಲ ಸಂಕಷ್ಟಗಳನ್ನು ಸಹಿಸಿದ್ದರಲ್ಲವೆ!

---

(36) عَنْ اَنَسٍ رضـ قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ يُؤْتَى بِاَنْعَمِ اَهْلِ الدُّنْيَا مِنْ اَهْلِ النَّارِ يَوْمَ الْقِيَامَةِ فَيُصْبَغُ فِى النَّارِ صَبْغَةً، ثُمَّ يُقَالُ يَا ابْنَ آدَمَ هَلْ رَأَيْتَ خَيْرًا قَطُّ؟ هَلْ مَرَّ بِكَ نَعِيْمٌ قَطُّ؟ فَيَقُوْلُ لَا وَاللّٰهِ يَا رَبِّ، وَيُؤْتَى بِاَشَدِّ النَّاسِ بُؤْسًا فِى الدُّنْيَا مِنْ اَهْلِ الْجَنَّةِ فَيُصْبَغُ فِى الْجَنَّةِ فَيُقَالُ لَهٗ يَا ابْنَ آدَمَ، هَلْ رَأَيْتَ بُؤْسًا قَطُّ؟ هَلْ مَرَّ بِكَ شِدَّةٌ قَطُّ؟ فَيَقُوْلُ لَا وَاللّٰهِ مَا مَرَّ بِىْ بُؤْسٌ وَلَا رَأَيْتُ شِدَّةً قَطُّ (مسلم)

ಅನಸ್(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು- ಲೋಕದಲ್ಲಿ ನರಕಕ್ಕೆ ಅರ್ಹನಾದ ಅತ್ಯಂತ ಸಂಪನ್ನ ವ್ಯಕ್ತಿಯೊಬ್ಬನನ್ನು ತಂದು ನರಕಕ್ಕೆ ಹಾಕಲಾಗುವುದು. ಆ ಬೆಂಕಿಯು ತನ್ನ ಪ್ರಭಾವವನ್ನು ಅವನ ಮೇಲೆ ಬೀರಿದಾಗ ಅವನೊಂದಿಗೆ ಕೇಳಲಾಗುವುದು- ಓ ಮಾನವಾ! ನೀನೆಂದಾದರೂ ಸುಖ ಸಂತೋಷವನ್ನು ಕಂಡಿರುವೆಯಾ? ನಿನಗೆಂದಾದರೂ ಸಿರಿವಂತಿಕೆಯ ದಿನಗಳು ಬಂದಿವೆಯೇ? ಅವನು ಹೇಳುವನು- ನನ್ನ ಪ್ರಭೂ! ಖಂಡಿತ ಕಂಡಿಲ್ಲ.

ಅನಂತರ ಅತ್ಯಂತ ದಾರಿದ್ರ್ಯದಲ್ಲಿ ಜೀವಿಸುತ್ತಿದ್ದ ಸ್ವರ್ಗಕ್ಕೆ ಅರ್ಹನಾದ ವ್ಯಕ್ತಿಯನ್ನು ತಂದು ಸ್ವರ್ಗದಲ್ಲಿರಿಸಲಾಗುವುದು. ಅವನು ಸ್ವರ್ಗದ ಸುಖಭೋಗಗಳನ್ನು ಚೆನ್ನಾಗಿ ಅನುಭವಿಸಿದಾಗ ಅವನೊಂದಿಗೆ ಕೇಳಲಾಗುವುದು- ಓ ಮಾನವಾ! ಲೋಕದಲ್ಲಿ ನೀನೆಂದಾದರೂ ಬಡತನವನ್ನು ಅನುಭವಿಸಿದ್ದುಂಟೆ? ನಿನಗೆಂದಾದರೂ ಸಂಕಷ್ಟದ ದಿನಗಳು ಬಂದಿವೆಯೆ? ಅವನು ಹೇಳುವನು- ಪ್ರಭೂ, ನಾನೆಂದೂ ಬಡತನ-ದಾರಿದ್ರ್ಯಕ್ಕೆ ಸಿಲುಕಲಿಲ್ಲ. ನನಗೆಂದೂ ಸಂಕಷ್ಟದ ದಿನಗಳು ಬಂದಿರಲಿಲ್ಲ. *[ಮುಸ್ಲಿಮ್]*

❖ ❖ ❖

ಆರಾಧನೆಗಳು

ನಮಾಝ್

ಮಿಸ್ವಾಕ್ (ದಂತ ಮಜ್ಜನ) ಮತ್ತು ಅಲ್ಲಾಹನ ಸಂಪ್ರೀತಿ

(37) عَنْ عَائِشَةَ رض اَنَّ النَّبِيَّ صَلَّى اللّٰهُ عَلَيْهِ وَسَلَّمَ قَالَ اَلسِّوَاكُ مَطْهَرَةٌ لِلْفَمِ مَرْضَاةٌ لِلرَّبِّ وَفِيْ رِوَايَةٍ مَجْلَاةٌ لِلْبَصَرِ (المنذری)

ಆಯಿಶಾ(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು- ದಂತ ಮಜ್ಜನದಿಂದ ಬಾಯಿ ಶುದ್ಧಗೊಳ್ಳುತ್ತದೆ, (ಕ್ರಿಮಿಗಳು ನಾಶವಾಗುತ್ತವೆ) ಅಲ್ಲಾಹನ ಸಂಪ್ರೀತಿ ಪ್ರಾಪ್ತವಾಗುತ್ತದೆ. (ಇನ್ನೊಂದು ಉಲ್ಲೇಖದ ಪ್ರಕಾರ) ಅದರಿಂದ ದೃಷ್ಟಿಯು ತೀಕ್ಷ್ಣವಾಗುತ್ತದೆ.

[ಅಲ್ ಮುಂದಿರೀ]

ವುಝೂ- ಮುಸ್ಲಿಮನ ಗುರುತು

(38) عَنِ ابْنِ عُمَرَ رض عَنِ النَّبِيِّ صَلَّى اللّٰهُ عَلَيْهِ وَسَلَّمَ فِيْ سُؤَالِ جِبْرَائِيْلَ عَنِ الْاِسْلَامِ فَقَالَ اَلْاِسْلَامُ اَنْ تَشْهَدَ اَنْ لَا اِلٰهَ اِلَّا اللّٰهُ وَاَنَّ مُحَمَّدًا رَّسُوْلُ اللّٰهِ وَاَنْ تُقِيْمَ الصَّلٰوةَ وَتُؤْتِيَ الزَّكٰوةَ وَتَحُجَّ وَتَعْتَمِرَ وَتَغْتَسِلَ مِنَ الْجَنَابَةِ وَاَنْ تُتِمَّ الْوُضُوْءَ وَتَصُوْمَ رَمَضَانَ، قَالَ فَاِذَا فَعَلْتُ ذٰلِكَ فَاَنَا مُسْلِمٌ؟ قَالَ نَعَمْ (المنذری بحوالہ صحیح ابن خزیمہ)

ಇಬ್ನು ಉಮರ್(ರ) ಪ್ರವಾದಿ(ಸ) ಅವರಿಂದ ಹೀಗೆ ಉಲ್ಲೇಖಿಸುತ್ತಾರೆ- ಜಿಬ್ರೀಲ್(ಅ) 'ಇಸ್ಲಾಮ್ ಎಂದರೇನು' ಎಂದು ಕೇಳಿದರು. ಪ್ರವಾದಿ(ಸ) ಹೇಳಿದರು- ನೀನು ಅಲ್ಲಾಹನ ಏಕತೆ ಮತ್ತು ಮುಹಮ್ಮದ್‌ರ(ಸ) ಪ್ರವಾದಿತ್ವದ ಸಾಕ್ಷ್ಯ ನುಡಿಯುವುದು, ನಮಾಝ್ ಸಂಸ್ಥಾಪಿಸುವುದು, ಝಕಾತ್ ನೀಡುವುದು, ಹಜ್ಜ್ ಮತ್ತು ಉಮ್ರಾ ನಿರ್ವಹಿಸುವುದು, ಸ್ನಾನದ ಆವಶ್ಯಕತೆ ಇದ್ದರೆ ಸ್ನಾನ ಮಾಡುವುದು, ಸರಿಯಾದ ಕ್ರಮದಲ್ಲಿ ವುಝೂ ಮಾಡುವುದು ಮತ್ತು ರಮಝಾನ್‌ನ ಉಪವಾಸ ವ್ರತ ಆಚರಿಸುವುದೇ ಇಸ್ಲಾಮ್ ಆಗಿದೆ.

ಜಿಬ್ರೀಲ್(ಅ) ಹೇಳಿದರು- ನಾನು ಇದೆಲ್ಲವನ್ನೂ ಮಾಡಿದರೆ 'ಮುಸ್ಲಿಮ್' ಆಗುವೆನೇ? ಪ್ರವಾದಿ(ಸ) ಹೇಳಿದರು- ಹೌದು.

[ಅಲ್‌ಮುಂದಿರೀ- ಸಹೀಹ್ ಇಬ್ನು ಖುಝೈಮ ಎಂಬ ಗ್ರಂಥದಿಂದ]

ಟಿಪ್ಪಣಿ: ಇದು 'ಹದೀಸ್ ಜಿಬ್ರೀಲ್' ಎಂಬ ಪ್ರಖ್ಯಾತವಾದ ದೀರ್ಘ ಹದೀಸೊಂದರ ತುಣುಕಾಗಿದೆ. ಇದನ್ನು ಇಲ್ಲಿ ಉಲ್ಲೇಖಿಸಿರುವ ಉದ್ದೇಶ, ಮಾನವನು ಒಳ್ಳೆಯ ರೀತಿಯಲ್ಲಿ ವುಝೂ ಮಾಡಬೇಕು. ಅಂದರೆ ಸುನ್ನತ್ ಪ್ರಕಾರ ವುಝೂ ಮಾಡಬೇಕೆಂದಾಗಿದೆ. ಸರಿಯಾಗಿ ವುಝೂ ಮಾಡಿದರೆ ನಮಾಝ್‌ನಲ್ಲಿ ಮನಸ್ಸು ಕೇಂದ್ರೀಕೃತವಾಗುತ್ತದೆ. ಭಯಭಕ್ತಿ ಹೆಚ್ಚಾಗುತ್ತದೆ ಮತ್ತು ಶೈತಾನನ ಆಕ್ರಮಣ ಕಡಿಮೆಯಾಗುತ್ತದೆ. ಇದು ಅತಿ ದೊಡ್ಡ ಪ್ರಯೋಜನವಾಗಿದೆ.

ಪೂರ್ಣ ನಮಾಝ್‌ನಿಂದ ಪಾಪ ಮುಕ್ತಿ

(39) عَنْ عُبَادَةَ بْنِ الصَّامِتِ قَالَ، قَالَ رَسُولُ اللهِ صَلَّى اللهُ عَلَيْهِ وَسَلَّمَ
خَمْسُ صَلَوَاتٍ اِفْتَرَضَهُنَّ اللهُ تَعَالَى، مَنْ أَحْسَنَ وُضُوءَهُنَّ وَصَلَّاهُنَّ
لِوَقْتِهِنَّ وَأَتَمَّ رُكُوعَهُنَّ وَسُجُودَهُنَّ، كَانَ لَهُ عَلَى اللهِ عَهْدٌ أَنْ يَغْفِرَ لَهُ
وَمَنْ لَمْ يَفْعَلْ فَلَيْسَ لَهُ عَلَى اللهِ عَهْدٌ، إِنْ شَاءَ غَفَرَ لَهُ وَإِنْ شَاءَ عَذَّبَهُ
(ابوداؤد)

ಉಬಾದಾ ಬಿನ್ ಸಾಮಿತ್(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು- ಐದು ನಮಾಝ್‌ಗಳನ್ನು ಅಲ್ಲಾಹನು ತನ್ನ ದಾಸರ ಮೇಲೆ ಕಡ್ಡಾಯಗೊಳಿಸಿರುವನು. ಅತ್ಯುತ್ತಮ ರೀತಿಯಲ್ಲಿ ವುಝೂ ಮಾಡಿ ಸಮಯಕ್ಕೆ ಸರಿಯಾಗಿ ನಮಾಝ್ ಮಾಡಿದನೋ ಹಾಗೂ ರುಕೂಅ್ ಮತ್ತು ಸಜ್ದಾಗಳನ್ನು ಸರಿಯಾಗಿ ನಿರ್ವಹಿಸಿದ ಮತ್ತು ಅಲ್ಲಾಹನ ಮುಂದೆ ನಮಾಝ್‌ನಲ್ಲಿ ಬಾಗಿದವನ ಪಾಪಮುಕ್ತಿ ಖಂಡಿತವೆಂದು ಅಲ್ಲಾಹನ ವಾಗ್ದಾನವಿದೆ. ಯಾರು ಇದನ್ನೆಲ್ಲ ಮಾಡುವುದಿಲ್ಲವೋ ಅವನೊಂದಿಗೆ ಅಲ್ಲಾಹನ ವಾಗ್ದಾನವಿಲ್ಲ. ಅವನು ಇಷ್ಟವಿದ್ದರೆ ಕ್ಷಮಿಸಿ ಬಿಡಬಹುದು ಅಥವಾ ಶಿಕ್ಷಿಸಬಹುದು. (ಕ್ಷಮೆ ಮತ್ತು ಶಿಕ್ಷೆಗಳ ಪೈಕಿ ಅರ್ಹವಾದುದು ಅವನಿಗೆ ಸಿಗುವುದು. ಅಲ್ಲಾಹನ ವಿಧಿಯು ಕುರುಡಾಗಿರುವುದಿಲ್ಲ. ಸರ್ವಜ್ಞನಾದ ಅಲ್ಲಾಹನು ಜನರೊಂದಿಗೆ ಅರ್ಹತೆಯ ಆಧಾರದಲ್ಲಿ ವ್ಯವಹರಿಸುತ್ತಾನೆ)

[ಅಬೂ ದಾವೂದ್]

ನಮಾಝ್‌ನ ಮಹತ್ವ

(40) عَنْ عَبْدِ اللّٰهِ بْنِ قُرْطٍ قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ أَوَّلُ مَا يُحَاسَبُ بِهِ الْعَبْدُ يَوْمَ الْقِيَامَةِ الصَّلٰوةُ، فَإِنْ صَلَحَتْ صَلَحَ سَائِرُ عَمَلِهِ، وَإِنْ فَسَدَتْ فَسَدَ سَائِرُ عَمَلِهِ (المنذري بحواله طبراني)

ಅಬ್ದುಲ್ಲಾ ಬಿನ್ ಕುರ್ತ್(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು- ನಿರ್ಣಾಯಕ ದಿನದಂದು ಪ್ರಪ್ರಥಮವಾಗಿ ನಮಾಝ್‌ನ ಕುರಿತು ವಿಚಾರಣೆ ನಡೆಯುವುದು. ದಾಸನು ಅದರಲ್ಲಿ ವಿಜಯಿಯಾದರೆ ಉಳಿದ ಕರ್ಮಗಳಲ್ಲೂ ವಿಜಯ ಹೊಂದುವನು. ಅವನ ನಮಾಝ್ ಸರಿಯಾಗಿಲ್ಲದಿದ್ದರೆ ಇತರ ಎಲ್ಲ ಕರ್ಮಗಳೂ ಹಾಳಾಗುವುವು.

[ಅಲ್ ಮುಂದಿರೀ- ತಬ್ರಾನಿಯಿಂದ]

ಟಿಪ್ಪಣಿ: ನಮಾಝ್ ಏಕದೇವ ವಿಶ್ವಾಸದ ಕ್ರಿಯಾರೂಪವಾಗಿದೆ. ಅದು ಧರ್ಮದ ಬುನಾದಿಯಾಗಿದೆ. ಬುನಾದಿ ಗಟ್ಟಿಯಾದರೆ ಕಟ್ಟಡವು ಭದ್ರವಾಗಿರುವುದು. ಬುನಾದಿ ದುರ್ಬಲವಾದರೆ ಕಟ್ಟಡವೂ ದುರ್ಬಲವಾಗಿರುವುದು.

ಪಾಪದ ಬೆಂಕಿಯನ್ನು ಆರಿಸುವ ಸಮಯ

(41) عَنْ أَنَسِ بْنِ مَالِكٍ قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ إِنَّ لِلّٰهِ مَلَكًا يُنَادِيْ عِنْدَ كُلِّ صَلٰوةٍ يَا بَنِيْ آدَمَ قُوْمُوْا إِلَى نِيْرَانِكُمُ الَّتِيْ أَوْقَدْتُمُوْهَا فَاطْفِئُوْهَا۔ (المنذري بحواله الطبراني)

ಅನಸ್ ಬಿನ್ ಮಾಲಿಕ್(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು- ಪ್ರತಿಯೊಂದು ನಮಾಝ್‌ನ ವೇಳೆ ಒಬ್ಬ ದೇವಚರನು ಹೀಗೆ ಘೋಷಿಸುತ್ತಾನೆ- ಮಾನವರೇ! ನೀವು ಹೊತ್ತಿಸಿರುವ ಪಾಪದ ಬೆಂಕಿಯನ್ನು ಆರಿಸಲಿಕ್ಕಾಗಿ ಎದ್ದೇಳಿರಿ.

[ಅಲ್ ಮುಂದಿರೀ- ತಬ್ರಾನಿಯಿಂದ]

ಟಿಪ್ಪಣಿ: ಎರಡು ನಮಾಝ್‌ಗಳ ನಡುವಿನ ಅವಧಿಯಲ್ಲಿ ಅನೇಕ ತಪ್ಪುಗಳು ಸಂಭವಿಸುತ್ತದೆ. ಈ ತಪ್ಪುಗಳೇ ಪರಲೋಕದಲ್ಲಿ ಬೆಂಕಿಯ ರೂಪ ತಾಳುವುದು. ಅದನ್ನು ಆರಿಸುವ ರೂಪ ಹೇಗೆಂದು ದೇವಚರನು ತಿಳಿಸುತ್ತಾನೆ- ನೀವು ಹೊತ್ತಿಸಿರುವ ಬೆಂಕಿಯನ್ನು ನಂದಿಸಲಿಕ್ಕಾಗಿ ಮಸೀದಿಗೆ ಬನ್ನಿರಿ, ನಮಾಝ್ ಮಾಡಿರಿ ಮತ್ತು ಅಲ್ಲಾಹನಿಂದ ಕ್ಷಮೆಯಾಚಿಸಿರಿ. ನಮಾಝ್ ಮತ್ತು ತೌಬಾಗಳೇ ಈ ಬೆಂಕಿಯನ್ನು ನಂದಿಸುವುವು. ಸಹೀಹ್ ಬುಖಾರಿಯಲ್ಲಿ ಹದೀಸ್‌ನ ಪದಗಳು ಹೀಗಿದೆ- "ಐದು ಹೊತ್ತಿನ

ನಮಾಝ್‌ನ ಮೂಲಕ ಅಲ್ಲಾಹನು ಪಾಪಗಳನ್ನು ಅಳಿಸುತ್ತಾನೆ". ನಮಾಝ್ ನೈಜ ನಮಾಝ್ ಆದರೆ ಅದು ಮಾನವನ ಜೀವನವನ್ನು ಕೆಡುಕಿನಿಂದ ಮುಕ್ತಗೊಳಿಸುವುದು.

ಕಪಟಿಯ ನಮಾಝ್

(42) عَنْ أَنَسٍ قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ تِلْكَ صَلٰوةُ الْمُنَافِقِ يَجْلِسُ يَرْقُبُ الشَّمْسَ حَتّٰى إِذَا اصْفَرَّتْ وَكَانَتْ بَيْنَ قَرْنَيِ الشَّيْطَانِ قَامَ فَنَقَرَ أَرْبَعًا لَا يَذْكُرُ اللّٰهَ فِيْهَا إِلَّا قَلِيْلًا (مسلم)

ಅನಸ್(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು- ಇದು ಮುನಾಫಿಕನ (ಕಪಟ ವಿಶ್ವಾಸಿಯ) ನಮಾಝ್ ಆಗಿದೆ. ಅವನು ಕುಳಿತು ಸೂರ್ಯನನ್ನು ನೋಡುತ್ತಿರುತ್ತಾನೆ. ಅದರ ಕಿರಣಗಳು ಹಳದಿ ವರ್ಣ ತಾಳಿದಾಗ ಮತ್ತು ಬಹುದೇವಾರಾಧಕರ ಸೂರ್ಯ ನಮಸ್ಕಾರದ ಸಮಯವಾದಾಗ ಲಗುಬಗನೆ ನಾಲ್ಕು ರಕಅತ್ ನಿರ್ವಹಿಸಿ ಬಿಡುತ್ತಾನೆ. ಅವನು ತನ್ನ ನಮಾಝ್‌ನಲ್ಲಿ ಅಲ್ಲಾಹನನ್ನು ಕಿಂಚಿತ್ತೂ ಸ್ಮರಿಸುವುದಿಲ್ಲ. *[ಮುಸ್ಲಿಮ್]*

ನಮಾಝ್‌ನ ಕಳ್ಳತನ

(43) عَنْ أَبِيْ قَتَادَةَ رض قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ أَسْوَءُ النَّاسِ سَرِقَةً الَّذِيْ يَسْرِقُ مِنْ صَلٰوتِهٖ، قَالُوْا يَا رَسُوْلَ اللّٰهِ كَيْفَ يَسْرِقُ مِنَ الصَّلٰوةِ؟ قَالَ لَا يُتِمُّ رُكُوْعَهَا وَلَا سُجُوْدَهَا (المنذری بحوالہ طبرانی وصحیح ابن خزیمہ)

ಅಬೂ ಕತಾದಃ(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು- ತನ್ನ ನಮಾಝ್‌ನಲ್ಲಿ ಕಳ್ಳತನ ಮಾಡುವವನೇ ಅತ್ಯಂತ ಕೆಟ್ಟ ಕಳ್ಳ. ಜನರು ಕೇಳಿದರು- ಅಲ್ಲಾಹನ ಸಂದೇಶವಾಹಕರೇ! ನಮಾಝ್‌ನಲ್ಲಿ ಕಳ್ಳತನ ಮಾಡುವುದೆಂದರೇನು? ಪ್ರವಾದಿ(ಸ) ಹೇಳಿದರು- ರುಕೂಅ್ ಮತ್ತು ಸುಜೂದ್‌ಗಳನ್ನು ಸರಿಯಾಗಿ ಮಾಡದಿರುವುದೇ ನಮಾಝ್‌ನ ಕಳ್ಳತನವಾಗಿದೆ.

[ಅಲ್ ಮುಂದಿರೀ- ತಬ್ರಾನಿ ಮತ್ತು ಇಬ್ನು ಖುಝೈಮರಿಂದ]

ನಮಾಝ್‌ನ್ನು ನಾಶ ಪಡಿಸುವವನು

(44) عَنْ عُمَرَ بْنِ الْخَطَّابِ رض اَنَّهٗ كَتَبَ اِلٰى عُمَّالِهٖ اَنَّ اَهَمَّ اُمُوْرِكُمْ عِنْدِي الصَّلٰوةُ فَمَنْ حَفِظَهَا وَحَافَظَ عَلَيْهَا حَفِظَ دِيْنَهٗ، وَمَنْ ضَيَّعَهَا فَهُوَ لِمَا سِوَاهَا اَضْيَعُ (مشكوة)

ಹ. ಉಮರ್(ರ) ಅವರು ಇಸ್ಲಾಮೀ ಸಾಮ್ರಾಜ್ಯದ ರಾಜ್ಯಪಾಲರುಗಳಿಗೆ ಈ ರೀತಿ ಆಜ್ಞೆ ಬರೆದು ಕಳುಹಿಸುತ್ತಿದ್ದರು- ನಿಮ್ಮ ಎಲ್ಲ ಕರ್ತವ್ಯಗಳ ಪೈಕಿ ನನ್ನ ದೃಷ್ಟಿಯಲ್ಲಿ ಅತ್ಯಂತ ಮಹತ್ವ ಪಡೆದಿರುವುದು ನಮಾಝ್ ಆಗಿದೆ. ಆದುದರಿಂದ ಯಾರು ತನ್ನ ನಮಾಝ್‌ನ್ನು ಸಂರಕ್ಷಿಸಿದನೋ (ಅರ್ಥಾತ್ ಸರಿಯಾದ ರೀತಿಯಲ್ಲಿ ನಮಾಝ್ ಮಾಡಿದನೋ ಮತ್ತು ನಿಷ್ಠೆಯಿಂದ ಅದನ್ನು ಪಾಲಿಸಿದನೋ) ಅವನು ತನ್ನ ಸಂಪೂರ್ಣ ಧರ್ಮವನ್ನು ರಕ್ಷಿಸಿದನು. ಯಾರು ತನ್ನ ನಮಾಝ್‌ನ್ನು ಹಾಳುಗೆಡಹಿದನೋ ಅವನು ಇತರ ವ್ಯವಹಾರಗಳನ್ನೂ ಹೊಣೆಗಾರಿಕೆಗಳನ್ನೂ ನಾಶ ಮಾಡುವವನಾಗಿರುವನು. *[ಮಿಶ್ಕಾತ್]*

ಮಸೀದಿಯೊಂದಿಗೆ ಆಸಕ್ತಿ

(45) عَنْ اَبِيْ سَعِيْدِ نِ الْخُدْرِيِّ عَنِ النَّبِيِّ صَلَّى اللّٰهُ عَلَيْهِ وَسَلَّمَ قَالَ اِذَا رَأَيْتُمُ الرَّجُلَ يَعْتَادُ الْمَسَاجِدَ فَاشْهَدُوْا لَهٗ بِالْاِيْمَانِ (ترمذی، ابن ماجہ)

ಅಬೂ ಸಈದ್ ಖುದ್ರೀ(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು- ನೀವು ಯಾರನ್ನಾದರೂ ಮಸೀದಿಗಳಲ್ಲಿ ನಿತ್ಯ ಹಾಜರಾಗುವುದನ್ನು (ಅರ್ಥಾತ್ ಸಾಮೂಹಿಕ ನಮಾಝ್‌ನ್ನು ಪಾಲಿಸುವವನಾಗಿ) ಕಂಡರೆ ಅವನು ಸತ್ಯವಿಶ್ವಾಸಿಯಾಗಿರುವ ಬಗ್ಗೆ ಸಾಕ್ಷಿ ಹೇಳಿರಿ. *[ತಿರ್ಮಿದಿ, ಇಬ್ನು ಮಾಜಃ]*

ಸಾಮೂಹಿಕ ನಮಾಝ್‌ನ ಪುಣ್ಯ

(46) عَنْ عَبْدِ اللّٰهِ بْنِ عُمَرَ رض قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ صَلٰوةُ الْجَمَاعَةِ تَفْضُلُ صَلٰوةَ الْفَذِّ بِسَبْعٍ وَّعِشْرِيْنَ دَرَجَةً (بخاری ومسلم)

ಅಬ್ದುಲ್ಲಾ ಬಿನ್ ಉಮರ್(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು- ಒಬ್ಬಂಟಿಗನಾಗಿ ಮಾಡುವವನ ನಮಾಝ್‌ಗಿಂತ ಸಾಮೂಹಿಕ ನಮಾಝ್‌ಗೆ ಇಪ್ಪತ್ತೇಳು ಪಟ್ಟು ಅಧಿಕ ಪುಣ್ಯ ಸಿಗುತ್ತದೆ. *[ಬುಖಾರಿ, ಮುಸ್ಲಿಮ್]*

ಸಾಮೂಹಿಕ ನಮಾಝ್‌ನ ಪಾಲನೆ

(47) عَنْ عَبْدِ اللهِ بْنِ مَسْعُوْدٍ قَالَ: رَأَيْتُنَا وَمَا يَتَخَلَّفُ عَنِ الصَّلٰوةِ إِلَّا
مُنَافِقٌ قَدْ عُلِمَ نِفَاقُهُ أَوْ مَرِيْضٌ، إِنْ كَانَ الْمَرِيْضُ لَيَمْشِيْ بَيْنَ رَجُلَيْنِ حَتّٰى يَأْتِيَ
الصَّلٰوةَ، وَقَالَ إِنَّ رَسُوْلَ اللهِ صَلَّى اللهُ عَلَيْهِ وَسَلَّمَ عَلَّمَنَا سُنَنَ الْهُدٰى،
وَإِنَّ مِنْ سُنَنِ الْهُدٰى الصَّلٰوةَ فِي الْمَسْجِدِ الَّذِيْ يُؤَذَّنُ فِيْهِ، (وَفِيْ رِوَايَةٍ)
قَالَ مَنْ سَرَّهُ أَنْ يَلْقَى اللهَ غَدًا مُسْلِمًا فَلْيُحَافِظْ عَلٰى هٰذِهِ الصَّلَوَاتِ الْخَمْسِ
حَيْثُ يُنَادٰى بِهِنَّ، فَإِنَّ اللهَ شَرَعَ لِنَبِيِّكُمْ سُنَنَ الْهُدٰى وَإِنَّهُنَّ مِنْ سُنَنِ
الْهُدٰى، وَلَوْ أَنَّكُمْ صَلَّيْتُمْ فِيْ بُيُوْتِكُمْ كَمَا يُصَلِّيْ هٰذَا الْمُتَخَلِّفُ فِيْ بَيْتِهِ لَتَرَكْتُمْ
سُنَّةَ نَبِيِّكُمْ وَلَوْ تَرَكْتُمْ سُنَّةَ نَبِيِّكُمْ لَضَلَلْتُمْ (مسلم)

ಅಬ್ದುಲ್ಲಾ ಬಿನ್ ಮಸ್‌ಊದ್(ರ) ಹೇಳುತ್ತಾರೆ- ಪ್ರವಾದಿ(ಸ) ಅವರ ಕಾಲದಲ್ಲಿ ನಮ್ಮ ಪೈಕಿ ಯಾರೂ ಸಾಮೂಹಿಕ ನಮಾಝ್‌ನಲ್ಲಿ ಭಾಗವಹಿಸದೆ ಇರುತ್ತಿರಲಿಲ್ಲ. ಮುನಾಫಿಕ್‌ಗಳ (ನಿಫಾಕ್‌ನ ಬಗ್ಗೆ ಎಲ್ಲರಿಗೂ ತಿಳಿದಿತ್ತು) ಮತ್ತು ರೋಗಿಗಳ ಹೊರತು. ಅಷ್ಟೇ ಅಲ್ಲ, ಆಗಿನ ಜನರು ರೋಗ ಪೀಡಿತರಾಗಿದ್ದರೂ ಇಬ್ಬರು ವ್ಯಕ್ತಿಗಳ ಸಹಾಯ ದಿಂದ ಮಸೀದಿಗೆ ತಲುಪಿ ಸಾಮೂಹಿಕ ನಮಾಝ್‌ನಲ್ಲಿ ಭಾಗವಹಿಸುತ್ತಿದ್ದರು.

ಅಬ್ದುಲ್ಲಾ ಬಿನ್ ಮಸ್‌ಊದ್(ರ) ಹೇಳುತ್ತಾರೆ- ಪ್ರವಾದಿ(ಸ) ಅವರು ನಮಗೆ 'ಸುನನುಲ್ ಹುದಾ' ಕಲಿಸಿದರು (ಸುನನುಲ್ ಹುದಾ ಎಂದರೆ ಕಾನೂನಿನ ಸ್ಥಾನಮಾನವಿರುವ ಮತ್ತು ಮುಸ್ಲಿಮ್ ಸಮುದಾಯಕ್ಕೆ ಪಾಲಿಸಲು ಆದೇಶಿಸಲಾದ ಸುನ್ನತ್‌ಗಳಾಗಿವೆ). ಸುನನುಲ್ ಹುದಾದಲ್ಲಿ ಅದಾನ್ ಕೊಡಲಾಗುವ ಮಸೀದಿಯಲ್ಲಿ ಮಾಡಲಾಗುವ ಸಾಮೂಹಿಕ ನಮಾಝ್ ಕೂಡಾ ಸೇರಿದೆ.

ಇನ್ನೊಂದು ವರದಿಯಲ್ಲಿ ಅಬ್ದುಲ್ಲಾ ಬಿನ್ ಮಸ್‌ಊದ್(ರ) ಹೇಳುತ್ತಾರೆ- ತಾನು ವಿಧೇಯ ದಾಸನಾಗಿ ನಾಳೆ ಪರಲೋಕದಲ್ಲಿ ಅಲ್ಲಾಹನನ್ನು ಭೇಟಿಯಾಗಬೇಕೆಂದು ಯಾರಾದರೂ

ಬಯಸುವುದಾದರೆ ಅವನು ಐದು ಹೊತ್ತಿನ ನಮಾಝನ್ನು ಮಸೀದಿಯಲ್ಲಿ ತಪ್ಪದೆ ನಿರ್ವಹಿಸಲಿ. ಏಕೆಂದರೆ ಅಲ್ಲಾಹನು ನಿಮ್ಮ ಪ್ರವಾದಿಗೆ ಕಾನೂನು ಪರ ಸುನ್ನತ್‌ಗಳ ಶಿಕ್ಷಣ ನೀಡಿದ್ದಾನೆ. ಸಾಮೂಹಿಕ ನಮಾಝ್‌ಗಳು ಅಂತಹ ಸುನ್ನತ್‌ಗಳಲ್ಲಿ ಸೇರಿವೆ. ಈ ಮುನಾಫಿಕರು ಮಾಡುವಂತೆ ನೀವು ನಿಮ್ಮ ಮನೆಗಳಲ್ಲಿ ನಮಾಝ್ ಮಾಡಿದರೆ ನೀವು ನಿಮ್ಮ ಪ್ರವಾದಿಯ ಮಾರ್ಗವನ್ನು ಬಿಟ್ಟಂತಾಗುವುದು. ಪ್ರವಾದಿಯವರ(ಸ) ಮಾರ್ಗವನ್ನು ತೊರೆದರೆ ನೀವು ಪಥಭ್ರಷ್ಟರಾಗುವಿರಿ. *[ಮುಸ್ಲಿಮ್]*

ನಮಾಝ್ ಸಂಸ್ಥಾಪಿಸದ ದೋಷ

(48) عَنْ اَبِي الدَّرْدَاءِ قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ مَا مِنْ ثَلَاثَةٍ فِيْ قَرْيَةٍ وَلَا بَدْوٍ لَا تُقَامُ فِيْهِمُ الصَّلٰوةُ اِلَّا قَدِ اسْتَحْوَذَ عَلَيْهِمُ الشَّيْطَانُ فَعَلَيْكَ بِالْجَمَاعَةِ، فَاِنَّمَا يَاْكُلُ الذِّئْبُ الْقَاصِيَةَ (ابوداؤد)

ಅಬೂ ದರ್ದಾ(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು- ಒಂದು ಊರು ಅಥವಾ ಒಂದು ಗ್ರಾಮದಲ್ಲಿ ಮೂರು ಮಂದಿ ಮುಸ್ಲಿಮರಿದ್ದು ಅಲ್ಲಿ ಸಾಮೂಹಿಕ ನಮಾಝ್ ನಡೆಯದಿದ್ದರೆ ಅವರ ಮೇಲೆ ಶೈತಾನನು ಪ್ರಾಬಲ್ಯ ಪಡೆಯುತ್ತಾನೆ. ಆದುದರಿಂದ ಜನರೇ! ಸಾಮೂಹಿಕ ನಮಾಝ್‌ನ ಪಾಲನೆ ಮಾಡಿರಿ. ಏಕೆಂದರೆ ತೋಳವು ಮಂದೆಯಿಂದ ದೂರವಾದ ಮತ್ತು ಕುರುಬನ ಆಶ್ರಯದಿಂದ ತಪ್ಪಿ ಹೋದ ಕುರಿಯನ್ನು ಮಾತ್ರ ತಿನ್ನುತ್ತದೆ. *[ಅಬೂ ದಾವೂದ್]*

ಸಾಮೂಹಿಕ ನಮಾಝ್: ನಿರ್ಲಕ್ಷ್ಯದ ಪರಿಣಾಮ

(49) عَنِ ابْنِ عَبَّاسٍ رض عَنِ النَّبِيِّ صَلَّى اللّٰهُ عَلَيْهِ وَسَلَّمَ قَالَ مَنْ سَمِعَ الْمُنَادِيَ فَلَمْ يَمْنَعْهُ مِنِ اتِّبَاعِهِ عُذْرٌ قَالُوْا وَمَا الْعُذْرُ؟ قَالَ خَوْفٌ اَوْ مَرَضٌ لَمْ تُقْبَلْ مِنْهُ الصَّلٰوةُ الَّتِيْ صَلّٰى (ابوداؤد)

ಇಬ್ನು ಅಬ್ಬಾಸ್(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು, "ಅಲ್ಲಾಹನೆಡೆಗೆ ಕರೆಯುವಾತನ ಅದಾನ್‌ನ ಧ್ವನಿಯನ್ನು ಆಲಿಸಿದ್ದೂ ಒಬ್ಬನಿಗೆ ಅನಿವಾರ್ಯವಾದ ಯಾವುದಾದರೂ ಸಮಸ್ಯೆ ಇಲ್ಲದಿರುವಾಗ, ಅವನು ಒಬ್ಬಂಟಿಯಾಗಿ ತನ್ನ ಮನೆಯಲ್ಲೇ ನಮಾಝ್ ನಿರ್ವಹಿಸಿದರೆ ಅವನ ಈ ನಮಾಝ್ ಪುನರುತ್ಥಾನ ದಿನ ಸ್ವೀಕೃತವಾಗಲಾರದು."

"ಅನಿವಾರ್ಯವಾದ ಸಮಸ್ಯೆ ಅಂದರೇನು?" ಎಂದು ಜನರು ವಿಚಾರಿಸಿದರು. ಆಗ ಪ್ರವಾದಿ(ಸ) ಹೇಳಿದರು, "ಭಯ ಅಥವಾ ಅನಾರೋಗ್ಯ."

[ಅಬೂ ದಾವೂದ್]

ಟಿಪ್ಪಣಿ: ಇಲ್ಲಿ ಭಯವೆಂದರೆ, ಮಸೀದಿಗೆ ಹೋಗುವ ದಾರಿಯಲ್ಲಿ ಯಾವುದಾದರೂ ವಿಷಜಂತು ಅಥವಾ ಕ್ರೂರ ಪ್ರಾಣಿಯಿಂದ ಪ್ರಾಣಾಪಾಯವಿರುವಂತಹ ಸ್ಥಿತಿ. ಹಾಗೆಯೇ ಅನಾರೋಗ್ಯವೆಂದರೆ ಮಸೀದಿಗೆ ಹೋಗಲು ಶಾರೀರಿಕವಾಗಿ ಅನರ್ಹವಾಗಿ ಬಿಡುವಂತಹ ಸ್ಥಿತಿ. ನಿಜಕ್ಕೂ ಅಂತಹ ಸ್ಥಿತಿ ಇದೆಯೇ ಎಂಬುದನ್ನು ಸ್ವತಃ ರೋಗಿಯೇ ನಿರ್ಧರಿಸಬೇಕು. ಏಕೆಂದರೆ ಇದು ಅವನ ಹಾಗೂ ಅಲ್ಲಾಹನ ನಡುವಿನ ವ್ಯವಹಾರ. ಏನಿದ್ದರೂ ಈ ವಿಷಯದಲ್ಲಿ ಜನರು ತಾವೇ ತಮಗೆ ಅಗತ್ಯಕ್ಕಿಂತ ಹೆಚ್ಚು ರಿಯಾಯಿತಿಗಳನ್ನು ಕೊಟ್ಟುಕೊಳ್ಳುವುದು ಅಪಾಯಕಾರಿ. ವಿಪರೀತ ಚಳಿ, ಭಾರೀ ಮಳೆ, ಬಿರುಗಾಳಿ ಇತ್ಯಾದಿಗಳನ್ನೂ ಮಸೀದಿಗೆ ಹೋಗದೆ ಇರಲು ಸೂಕ್ತ ಕಾರಣಗಳೆಂದು ಪರಿಗಣಿಸಬಹುದು. ಕೊನೆಯ ಘಳಿಗೆಯಲ್ಲಿ ಮಲಮೂತ್ರ ವಿಸರ್ಜನೆಯ ಅಗತ್ಯ ಹಠಾತ್ತನೆ ತಲೆದೋರಿದರೆ ಇದನ್ನು ಕೂಡಾ ಧರ್ಮಬದ್ಧ ಕಾರಣವೆಂದು ಪರಿಗಣಿಸಬಹುದು.

ಫಜ್ರ್ ಮತ್ತು ಅಸರ್ ನಮಾಝ್‌ಗಳ ಮಹತ್ವ

(50) عَنْ أَبِي هُرَيْرَةَ رضـ قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ
يَتَعَاقَبُوْنَ فِيْكُمْ مَلَائِكَةٌ بِاللَّيْلِ وَمَلَائِكَةٌ بِالنَّهَارِ، وَيَجْتَمِعُوْنَ فِيْ صَلٰوةِ الْفَجْرِ
وَصَلٰوةِ الْعَصْرِ ثُمَّ يَعْرُجُ الَّذِيْنَ بَاتُوْا فِيْكُمْ فَيَسْئَلُهُمْ رَبُّهُمْ وَهُوَ اَعْلَمُ بِهِمْ
كَيْفَ تَرَكْتُمْ عِبَادِيْ؟ فَيَقُوْلُوْنَ تَرَكْنَاهُمْ وَهُمْ يُصَلُّوْنَ وَاَتَيْنَاهُمْ وَهُمْ يُصَلُّوْنَ
(بخاری ومسلم)

ಅಬೂ ಹುರೈರಾ(ರ) ಹೇಳುತ್ತಾರೆ: ಪ್ರವಾದಿ ಮುಹಮ್ಮದ್(ಸ) ಹೇಳಿದರು, "ಕೆಲವು ದೇವಚರರು ರಾತ್ರಿಯ ವೇಳೆ ಕರ್ತವ್ಯ ನಿರ್ವಹಿಸುತ್ತಾರೆ, ಕೆಲವು ದೇವಚರರು ಹಗಲಲ್ಲಿ ನಿರ್ವಹಿಸುತ್ತಾರೆ. ಅವರು ಸರದಿ ಪ್ರಕಾರ ನಿಮ್ಮ ನಡುವೆ ಬರುತ್ತಾರೆ. ಫಜ್ರ್ ಮತ್ತು ಅಸರ್

ನಮಾಝ್‌ಗಳ ಸಮಯದಲ್ಲಿ ಅವರು ಒಟ್ಟು ಸೇರುತ್ತಾರೆ. ಫಜ್ರ್ ನಮಾಝ್ ಮುಗಿಸಿದ ಬಳಿಕ ರಾತ್ರಿಯವರು ಹೊರಟು ಹೋಗುತ್ತಾರೆ. ಇದೇ ರೀತಿ ಹಗಲಿನವರು ಅಸರ್ ನಮಾಝನ್ನು ನಿಮ್ಮ ಜೊತೆಗೆ ನಿರ್ವಹಿಸಿದ ನಂತರ ಹೊರಟು ಹೋಗುತ್ತಾರೆ. ರಾತ್ರಿ ಕರ್ತವ್ಯದವರು ಉಳಿಯುತ್ತಾರೆ. ಇವರು ತಮ್ಮ ಪ್ರಭುವಿನ ಬಳಿಗೆ ಹೋದಾಗ ಅವನು, "ನೀವು ನನ್ನ ದಾಸರನ್ನು ಯಾವ ಸ್ಥಿತಿಯಲ್ಲಿ ಬಿಟ್ಟು ಬಂದಿರುವಿರಿ?" ಎಂದು ವಿಚಾರಿಸುತ್ತಾನೆ. "ದೇವಾ! ನಾವು ಅವರನ್ನು ನಮಾಝ್ ನಿರ್ವಹಿಸುತ್ತಿದ್ದ ಸ್ಥಿತಿಯಲ್ಲಿ ಬಿಟ್ಟು ಬಂದಿರುವೆವು. ನಾವು ನಮ್ಮ ಕರ್ತವ್ಯ ನಿರ್ವಹಿಸಲು ಅವರ ಬಳಿಗೆ ಹೋದಾಗ ಆಗಲೂ ಅವರು ನಮಾಝ್ ನಿರ್ವಹಿಸುತ್ತಲೇ ಇದ್ದುದನ್ನು ಕಂಡೆವು" ಎಂದು ಅವರು ಹೇಳುತ್ತಾರೆ.

[ಬುಖಾರಿ ಮತ್ತು ಮುಸ್ಲಿಮ್]

ಟಿಪ್ಪಣಿ: ಈ ಹದೀಸ್‌ನಿಂದ ಫಜ್ರ್ ಮತ್ತು ಅಸರ್ ನಮಾಝ್‌ಗಳ ಮಹತ್ವವು ಸ್ಪಷ್ಟವಾಗುತ್ತದೆ. ಅಸರ್ ಮತ್ತು ಫಜ್ರ್‌ಗಳಲ್ಲಿ ನಮಗೆ ದೇವಚರರ ಜೊತೆಗೆ ನಮಾಝ್ ನಿರ್ವಹಿಸುವ ಅವಕಾಶ ಪ್ರಾಪ್ತವಾದರೆ ನಮ್ಮಂತಹ ಪಾಪಿಗಳ ಪಾಲಿಗೆ ಅದಕ್ಕಿಂತ ದೊಡ್ಡ ಸೌಭಾಗ್ಯ ಬೇರೇನಿದೆ! ಫಜ್ರ್ ನಮಾಝ್‌ನ ಸಮಯವು ಮಧುರವಾದ ನಿದ್ದೆಯ ಸಮಯವಾಗಿರುತ್ತದೆ. ಅಸರ್ ನಮಾಝ್‌ನ ಸಮಯವು ನಾವು ತುಂಬಾ ಕಾರ್ಯ ನಿಬಿಡರಾಗಿರುವ ಸಮಯವಾಗಿರುತ್ತದೆ. ಅಲ್ಲಾಹನ (ನಿಷ್ಠಾವಂತ) ದಾಸರು ಆತನ ಕರೆ ಬಂದಾಗ ತಮ್ಮ ಮಧುರ ನಿದ್ರೆಯನ್ನು ತ್ಯಾಗ ಮಾಡಿ ಹಾಗೂ ತಮ್ಮೆಲ್ಲಾ ವ್ಯಾಪಾರ ವಹಿವಾಟುಗಳನ್ನು ಬಿಟ್ಟು ಫಜ್ರ್ ಮತ್ತು ಅಸರ್ ನಮಾಝ್‌ಗಳನ್ನು ನಿರ್ವಹಿಸುವ ಜಮಾಅತ್‌ಗಳಲ್ಲಿ ಸೇರಿಕೊಳ್ಳುತ್ತಾರೆ. ಇಂತಹ ದಾಸರನ್ನೇ ಪವಿತ್ರ ಕುರ್‌ಆನಿನ ಅನ್ನೂರ್ ಅಧ್ಯಾಯದಲ್ಲಿ "ಅವರ ವ್ಯಾಪಾರವಾಗಲಿ, ವ್ಯವಹಾರಗಳಾಗಲಿ ಅವರನ್ನು ಅಲ್ಲಾಹನ ಸ್ಮರಣೆ ಮತ್ತು ನಮಾಝ್‌ನಿಂದ ನಿರ್ಲಕ್ಷ್ಯಗೊಳಿಸುವುದಿಲ್ಲ" ಎಂದು ಪ್ರಶಂಸಿಸಲಾಗಿದೆ. ಮೈಮರೆಸುವಂತಹ ವಸ್ತುಗಳೆಲ್ಲಾ ಅವರು ನಮಾಝನ್ನು ಮರೆಯುವಂತೆ ಮಾಡಲು ವಿಫಲವಾಗುವುದೇಕೆ? ಇದನ್ನು ಅದರ ಮುಂದಿನ ನುಡಿಯಲ್ಲಿ ತಿಳಿಸಲಾಗಿದೆ: ಅವರಿಗೆ ಯಾವಾಗಲೂ ಪುನರುತ್ಥಾನ ದಿನ ಅಥವಾ ವಿಚಾರಣೆಯ ದಿನದ ಭಯವಿರುತ್ತದೆ. ನಾವು ಅಲ್ಲಾಹನ ಸ್ಮರಣೆಯನ್ನು ಕಡೆಗಣಿಸಿ ಬಿಟ್ಟರೆ ನಾಳೆ ಅವನಿಗೆ ಮುಖ ತೋರಿಸುವುದು ಹೇಗೆ ಎಂಬ ಚಿಂತೆ ಅವರನ್ನು ಕಾಡುತ್ತದೆ. ಈ ಚಿಂತೆಯಿಂದಾಗಿಯೇ ಅವರೆಂದೂ ಅಲ್ಲಾಹನ ಸ್ಮರಣೆಯಿಂದ ವಿಮುಖರಾಗುವುದಿಲ್ಲ.

ಇಸ್ಲಾಮೀ ವ್ಯವಸ್ಥೆಯ ಶೈಥಿಲ್ಯ

(51) عَنْ اَبِىْ اُمَامَةَ رضi قَالَ قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ لَتُنْقَضَنَّ
عُرَى الْاِسْلَامِ عُرْوَةً عُرْوَةً، فَكُلَّمَا انْتُقِضَتْ عُرْوَةٌ تَشَبَّثَ النَّاسُ بِالَّتِىْ تَلِيْهَا
فَاَوَّلُهُنَّ نَقْضًا الْحُكْمُ وَآخِرُهُنَّ الصَّلٰوةُ (ترغیب بحوالہ صحیح ابن حبان)

ಅಬೂ ಉಮಾಮರ ಹೇಳುತ್ತಾರೆ: ಪ್ರವಾದಿ ಮುಹಮ್ಮದ್(ಸ) ಹೇಳಿದರು, "ಒಂದು ಕಾಲ ಬರಲಿದೆ. ಅಂದು ಇಸ್ಲಾಮಿನ (ಇಸ್ಲಾಮೀ ವ್ಯವಸ್ಥೆಯ) ಸರಪಣಿಯ ಕೊಂಡಿಗಳು ಒಂದೊಂದಾಗಿ ಕಳಚಲಾರಂಭಿಸುವುವು. ಹೀಗೆ ಯಾವುದಾದರೂ ಕೊಂಡಿ ಕಳಚಿ ಬಿದ್ದಾಗ ಜನರು ಅದನ್ನು ಪುನಃ ಸ್ಥಾಪಿಸಲು ಪ್ರಯತ್ನಿಸುವ ಬದಲು ಉಳಿದದ್ದರಲ್ಲೇ ತೃಪ್ತರಾಗಿ ಬಿಡುವರು. ಪ್ರಥಮವಾಗಿ ನ್ಯಾಯದ ಆಡಳಿತ (ಖಿಲಾಫತ್ ವ್ಯವಸ್ಥೆ) ಕುಸಿದು ಬೀಳುವುದು. ಕೊನೆಗೆ ನಮಾಝ್‌ನ ಕೊಂಡಿಯೂ ಕಳಚಿ ಬೀಳುವುದು."

[ತರ್‌ಗೀಬ್: ಸಹೀಹ್ ಇಬ್ನು ಹಿಬ್ಬಾನ್‌ನಿಂದ]

ಟಿಪ್ಪಣಿ: ಅಂದರೆ ಕಾಲಕ್ರಮೇಣ ಧರ್ಮದ ಬುನಾದಿಗಳು ಒಂದೊಂದಾಗಿ ಶಿಥಿಲವಾಗುತ್ತಾ ಹೋಗುವುವು. ಪ್ರಥಮವಾಗಿ ಮುಸ್ಲಿಮ್ ಸಮಾಜದ ಸಂರಕ್ಷಕ ಸಂಸ್ಥೆಯಾಗಿರುವ ದಿವ್ಯ ಖಿಲಾಫತ್ ಅಥವಾ ಇಸ್ಲಾಮಿನ ರಾಜಕೀಯ ವ್ಯವಸ್ಥೆ ಕೊನೆಗೊಳ್ಳುವುದು. ತರುವಾಯ ಪತನದ ವೇಗ ವೃದ್ಧಿಸುತ್ತಾ ಹೋಗಿ ಕೊನೆಗೆ ಇಸ್ಲಾಮೀ ವ್ಯವಸ್ಥೆಯೆಂಬ ಸರಪಣಿಯ ಅಂತಿಮ ಕೊಂಡಿ ಎನ್ನಬಹುದಾದ ನಮಾಝ್‌ನ ವ್ಯವಸ್ಥೆಯೂ ಶಿಥಿಲವಾಗುವುದು. ಸಮುದಾಯದ ಹೆಚ್ಚಿನ ಸದಸ್ಯರು ನಮಾಝನ್ನು ತೊರೆಯುವರು. ಇದು ಸಮುದಾಯದ ಅವನತಿಯ ಅಂತಿಮ ಬಿಂದುವಾಗಿರುವುದು. ಇದೀಗ ಮುಸ್ಲಿಮ್ ಸಮುದಾಯವು ತನ್ನ ಪ್ರವಾದಿ ಒದಗಿಸಿರುವ ಈ ದರ್ಪಣದಲ್ಲಿ ತನ್ನ ಮುಖ ನೋಡಿ ಕೊಂಡು ತನ್ನ ಸ್ಥಿತಿಯನ್ನು ಸರಿಪಡಿಸಿಕೊಳ್ಳಲು ಶ್ರಮಿಸಬೇಕು. ಈ ಸುಧಾರಣಾ ಕಾರ್ಯ ನಮಾಝ್‌ನಿಂದ ಆರಂಭವಾಗಬೇಕು ಮತ್ತು ಇದರ ಅಂತಿಮ ಗುರಿ ಭೂಮಿಯಲ್ಲಿ ಅಲ್ಲಾಹನ ಆದೇಶಗಳನ್ನು ಜಾರಿಗೊಳಿಸುವ ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸುವುದಾಗಿರಬೇಕು.

ಮನೆಯಲ್ಲಿ ಐಚ್ಛಿಕ ನಮಾಝ್

(52) عَنْ عَبْدِ اللّٰهِ بْنِ مَسْعُوْدٍ رض قَالَ، سَأَلْتُ رَسُوْلَ اللّٰهِ صَلَّى اللّٰهُ عَلَيْهِ وَسَلَّمَ أَيُّمَا اَفْضَلُ اَلصَّلٰوةُ فِىْ بَيْتِىْ اَوِ الصَّلٰوةُ فِى الْمَسْجِدِ؟ قَالَ اَلَا تَرٰى اِلٰى بَيْتِىْ مَا اَقْرَبَهٗ مِنَ الْمَسْجِدِ، فَلَاَنْ اُصَلِّىَ فِىْ بَيْتِىْ اَحَبُّ اِلَىَّ مِنْ اَنْ اُصَلِّىَ فِى الْمَسْجِدِ اِلَّا اَنْ تَكُوْنَ صَلٰوةً مَكْتُوْبَةً (مسند احمد، ابن ماجہ)

ಅಬ್ದುಲ್ಲಾ ಬಿನ್ ಮಸ್‌ವೂದ್(ರ) ಹೇಳುತ್ತಾರೆ: ನಾನು ಪ್ರವಾದಿವರ್ಯರೊಡನೆ(ಸ), "ಐಚ್ಛಿಕ ನಮಾಝ್‌ಗಳನ್ನು ಮನೆಯಲ್ಲಿ ನಿರ್ವಹಿಸುವುದು ಶ್ರೇಷ್ಠವೋ ಮಸೀದಿಯಲ್ಲಿ ನಿರ್ವಹಿಸುವುದು ಶ್ರೇಷ್ಠವೋ?" ಎಂದು ವಿಚಾರಿಸಿದೆ. ಪ್ರವಾದಿ(ಸ) ಹೇಳಿದರು, "ನನ್ನ ಮನೆ ಮಸೀದಿಗೆ ಎಷ್ಟು ನಿಕಟವಾಗಿದೆಯೆಂಬುದನ್ನು ನೀವು ನೋಡುತ್ತಿಲ್ಲವೇ? (ಆದರೂ ನಾನು

ನಫಿಲ್ ನಮಾಝ್‌ಗಳನ್ನು ಮನೆಯಲ್ಲೇ ನಿರ್ವಹಿಸುತ್ತೇನೆ). ಐಚ್ಛಿಕ ನಮಾಝ್‌ಗಳನ್ನು ಮಸೀದಿಯಲ್ಲಿ ನಿರ್ವಹಿಸುವುದಕ್ಕಿಂತ ಮನೆಯಲ್ಲಿ ನಿರ್ವಹಿಸುವುದೇ ನನಗೆ ಹೆಚ್ಚು ಪ್ರಿಯವಾಗಿದೆ. ಆದರೆ ಕಡ್ಡಾಯ ನಮಾಝ್‌ಗಳನ್ನು (ಸಾಮೂಹಿಕವಾಗಿ) ಮಸೀದಿಯಲ್ಲೇ ನಿರ್ವಹಿಸಬೇಕು."

[ಮುಸ್ನದ್ ಅಹ್ಮದ್, ಇಬ್ನುಮಾಜಃ]

ಇಮಾಮ್‌ನ ಹೊಣೆ

(53) عَنْ عَبْدِ اللهِ بْنِ عُمَرَ رض اَنَّ رَسُوْلَ اللهِ صَلَّى اللهُ عَلَيْهِ وَسَلَّمَ قَالَ مَنْ اَمَّ قَوْمًا فَلْيَتَّقِ اللهَ وَلْيَعْلَمْ اَنَّهُ ضَامِنٌ مَسْئُوْلٌ لِمَا ضَمِنَ، وَاِنْ اَحْسَنَ كَانَ لَهُ مِنَ الْاَجْرِ مِثْلُ اَجْرِ مَنْ صَلّٰى خَلْفَهُ مِنْ غَيْرِ اَنْ يَنْقُصَ مِنْ اُجُوْرِهِمْ شَيْئًا. وَمَا كَانَ مِنْ نَقْصٍ فَهُوَ عَلَيْهِ (المنذری بحوالہ طبرانی)

ಅಬ್ದುಲ್ಲಾ ಬಿನ್ ಉಮರ್(ರ) ಹೇಳುತ್ತಾರೆ: ಪ್ರವಾದಿ ಮುಹಮ್ಮದ್(ಸ) ಹೇಳಿದರು, "(ನಮಾಝ್‌ನಲ್ಲಿ) ಜನರ ನೇತೃತ್ವ ವಹಿಸುವ ವ್ಯಕ್ತಿ ದೇವಭಕ್ತಿಯ ನೀತಿಯನ್ನು ಅನುಸರಿಸಬೇಕು. (ಸತ್ಕರ್ಮಗಳನ್ನು ಮಾತ್ರ ಮಾಡಬೇಕು. ಪಾಪಕೃತ್ಯಗಳಿಂದ ದೂರವಿರಬೇಕು) ಇತರ ಜನರ ನಮಾಝ್‌ಗಳ ಹೊಣೆಗಾರಿಕೆ ತನ್ನ ಮೇಲಿದೆ ಮತ್ತು ಆ ಕುರಿತು ಪುನರುತ್ಥಾನ ದಿನ ತಾನು ವಿಚಾರಣೆ ಎದುರಿಸಬೇಕಾದೀತು ಎಂಬುದನ್ನು ಅವನು ತಿಳಿದುಕೊಂಡಿರಬೇಕು. ಅವನು ನಮಾಝ್‌ನ ನೇತೃತ್ವವನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಿದ್ದರೆ ಆತನ ಹಿಂದೆ ನಮಾಝ್ ನಿರ್ವಹಿಸುವವರಿಗೆ ಸಿಗುವಷ್ಟೇ ಪುಣ್ಯ ಆತನಿಗೂ ಸಿಗುವುದು. ಆದರೆ ಇದರಿಂದ ಅವರ ಪುಣ್ಯವೇನೂ ಕಡಿಮೆಯಾಗದು. ಇನ್ನು ಅವನಿಂದೇನಾದರೂ ತಪ್ಪು ಸಂಭವಿಸಿದರೆ ಅದರ ಪಾಪ ಅವನ ಮೇಲೆಯೇ ಇರುವುದು. (ಅವನ ಹಿಂದೆ ನಮಾಝ್ ನಿರ್ವಹಿಸಿದವರಿಗೆ ಆ ತಪ್ಪಿನ ಪಾಪಬಾಧೆ ತಟ್ಟದು)

[ಅಲ್ ಮುಂದಿರೀ, ತಬ್ರಾನಿಯಿಂದ]

ಸಂಕ್ಷಿಪ್ತ ನಮಾಝ್

(54) عَنْ اَبِیْ هُرَیْرَةَ رضی قَالَ اِنَّ النَّبِیَّ صَلَّی اللّٰهُ عَلَیْهِ وَسَلَّمَ قَالَ اِذَا صَلّٰی اَحَدُکُمْ لِلنَّاسِ فَلْیُخَفِّفْ، فَاِنَّ فِیْهِمُ الضَّعِیْفَ وَالسَّقِیْمَ وَالْکَبِیْرَ، وَاِذَا صَلّٰی اَحَدُکُمْ لِنَفْسِهٖ فَلْیُطَوِّلْ مَا شَاءَ (بخاری، ریاض الصالحین وغیرہ)

ಅಬೂ ಹುರೈರಾ(ರ) ಹೇಳುತ್ತಾರೆ: ಪ್ರವಾದಿವರ್ಯರು(ಸ) ಹೇಳಿದರು,

"ನಿಮ್ಮ ಪೈಕಿ ಯಾರಾದರೂ ನಮಾಝ್‌ನ ನೇತೃತ್ವ ವಹಿಸುವಾಗ (ಸನ್ನಿವೇಶವನ್ನು ಗಮನಿಸಿ, ನಮಾಝ್ ನಿರ್ವಹಿಸುವವರ ಹಿತವನ್ನು ಪರಿಗಣಿಸಿ) ಹಗುರವಾದ (ಸಂಕ್ಷಿಪ್ತವಾದ) ನಮಾಝನ್ನು ನಿರ್ವಹಿಸಬೇಕು. ಏಕೆಂದರೆ ನಿಮ್ಮ ಹಿಂದೆ ನಮಾಝ್ ನಿರ್ವಹಿಸುವವರ ಪೈಕಿ ದುರ್ಬಲರು, ಅನಾರೋಗ್ಯ ಪೀಡಿತರು ಮತ್ತು ವಯೋವೃದ್ಧರೂ ಇರಬಹುದು. ಆದರೆ ಯಾರಾದರೂ ಏಕಾಂಗಿಯಾಗಿರುವಾಗ ನಮಾಝನ್ನು ತಾನಿಚ್ಛಿಸುವಷ್ಟು ದೀರ್ಘವಾಗಿ ನಿರ್ವಹಿಸಬಹುದು. *[ಬುಖಾರಿ, ರಿಯಾದುಸ್ಸಾಲಿಹೀನ್ ಇತ್ಯಾದಿ]*

---

(55) عَنِ ابْنِ مَسْعُوْدٍ رضی قَالَ جَاءَ رَجُلٌ اِلٰی رَسُوْلِ اللّٰهِ صَلَّی اللّٰهُ عَلَیْهِ وَسَلَّمَ فَقَالَ اِنِّیْ لَاَتَاَخَّرُ عَنْ صَلٰوةِ الصُّبْحِ مِنْ اَجْلِ فُلَانٍ مِمَّا یُطِیْلُ بِنَا، فَمَا رَاَیْتُ النَّبِیَّ صَلَّی اللّٰهُ عَلَیْهِ وَسَلَّمَ غَضِبَ فِیْ مَوْعِظَةٍ اَشَدَّ مِمَّا غَضِبَ یَوْمَئِذٍ، فَقَالَ یَا اَیُّهَا النَّاسُ اِنَّ مِنْکُمْ مُنَفِّرِیْنَ فَاَیُّکُمْ اَمَّ النَّاسَ فَلْیُوْجِزْ، فَاِنَّ مِنْ وَرَائِهِ الْکَبِیْرَ وَالصَّغِیْرَ وَذَا الْحَاجَةِ۔

(بخاری ومسلم)

ಇಬ್ನು ಮಸ್‌ವೂದ್(ರ) ಹೇಳುತ್ತಾರೆ: ಒಮ್ಮೆ ಒಬ್ಬ ವ್ಯಕ್ತಿ ಪ್ರವಾದಿವರ್ಯರ(ಸ) ಬಳಿಗೆ ಬಂದು, ಇಂತಿಂತಹ ವ್ಯಕ್ತಿ (ಇಮಾಮ್) ಫಜ್ರ್ ನಮಾಝನ್ನು ಬಹಳ ದೀರ್ಘ ಗೊಳಿಸುತ್ತಾರೆ. ಆದ್ದರಿಂದ ನನಗೆ ಫಜ್ರ್ ನಮಾಝನ್ನು ಅವರ ಹಿಂದೆ ನಿರ್ವಹಿಸಲು ಸಾಧ್ಯ ವಾಗುವುದಿಲ್ಲ ಎಂದು ಹೇಳಿದರು. ಆ ದಿನ ಉಪದೇಶ ನೀಡುವ ವೇಳೆ ಪ್ರವಾದಿ

ವರ್ಯರು(ಸ) ಎಷ್ಟೊಂದು ಕೋಪಗೊಂಡಿದ್ದರೆಂದರೆ, ಅವರು ಅಷ್ಟು ಕೋಪಗೊಂಡದ್ದನ್ನು ನಾನು ಎಂದೂ ಕಂಡಿಲ್ಲ. ಅಂದಿನ ಉಪದೇಶದಲ್ಲಿ ಅವರು ಹೇಳಿದರು,

"ನಿಮ್ಮ ಪೈಕಿ ಇಮಾಮತ್ ಮಾಡುವ ಕೆಲವರು ಅಲ್ಲಾಹನ ದಾಸರಿಗೆ ಅಲ್ಲಾಹನ ಆರಾಧನೆಯ ಬಗ್ಗೆ ಜಿಗುಪ್ಸೆ ಮೂಡಿಸುತ್ತಾರೆ. (ಎಚ್ಚರಿಕೆ!) ನಿಮ್ಮ ಪೈಕಿ ಯಾರಾದರೂ ಇಮಾಮತ್ ಮಾಡುವುದಾದರೆ, ಸಂಕ್ಷಿಪ್ತವಾಗಿ ನಮಾಝ್ ನಿರ್ವಹಿಸಲಿ. ಏಕೆಂದರೆ ಅವರ ಹಿಂದೆ ವೃದ್ಧರೂ ಇರಬಹುದು, ಮಕ್ಕಳೂ ಇರಬಹುದು, ಕೆಲಸ ಕಾರ್ಯಗಳಿಗೆ ತೆರಳ ಬೇಕಾದವರೂ ಇರಬಹುದು." *[ಬುಖಾರಿ, ಮುಸ್ಲಿಮ್]*

ಟಿಪ್ಪಣಿ: ಸಂಕ್ಷಿಪ್ತವಾಗಿ ನಮಾಝ್ ನಿರ್ವಹಿಸುವುದೆಂದರೆ, ಅದರಲ್ಲಿ ರುಕೂಅ್, ಸುಜೂದ್‌ಗಳನ್ನು ಕ್ರಮಬದ್ಧವಾಗಿಯೇ ಮಾಡಬೇಕು. ಆದರೆ ಕಿರಾಅತ್ ಅಥವಾ ಕುರ್‌ಆನ್ ಪಠಣ ಹೆಚ್ಚು ದೀರ್ಘವಾಗಬಾರದು, ರುಕೂಅ್ ಮತ್ತು ಸುಜೂದ್‌ಗಳೂ ದೀರ್ಘವಾಗಬಾರದು. ರುಕೂಅ್, ಸುಜೂದ್‌ಗಳಲ್ಲಿ ತಲಾ ಮೂರು ಬಾರಿ, ಮೂರು ಉಸಿರುಗಳಲ್ಲಿ ತಸ್ಬೀಹ್‌ಗಳನ್ನು ಹೇಳಬೇಕು. ವಿಶೇಷತಃ ಹಳ್ಳಿಗಳಲ್ಲಿ, ಹೆಚ್ಚಾಗಿ ವ್ಯಾಪಾರ ನಿರತರು ಬರುವಂತಹ ಮಸೀದಿಗಳಲ್ಲಿ ಮತ್ತು ಬೇಸಿಗೆಯ ದಿನಗಳಲ್ಲಿ ಇಷ್ಟು ಮಾಡಿದರೆ ಸಾಕು.

ಪ್ರವಾದಿವರ್ಯರ(ಸ) ಕಾಲದಲ್ಲಿ ಎಳೆ ವಯಸ್ಸಿನ ಮಕ್ಕಳೂ ಮಸೀದಿಗೆ ಬರುತ್ತಿದ್ದರೆಂಬುದು ಈ ಹದೀಸ್‌ನಿಂದ ವ್ಯಕ್ತವಾಗುತ್ತದೆ.

ಸಂಕ್ಷಿಪ್ತ ಕುರ್‌ಆನ್ ಪಠಣ

(56) عن جابر قال: كان معاذ بن جبل يصلي مع النبي صلى الله عليه وسلم ثم يأتي فيؤم قومه، فصلى ليلة مع النبي صلى الله عليه وسلم العشاء ثم أتى قومه فافتتح سورة البقرة فانحرف رجل فسلم ثم صلى وحده وانصرف فقالوا له أنافقت يا فلان، قال لا، والله لآتين رسول الله صلى الله عليه وسلم فقال يا رسول الله إنا أصحاب نواضح نعمل بالنهار، وإن معاذا صلى معك العشاء ثم أتى قومه فافتتح بسورة البقرة، فأقبل رسول الله صلى الله عليه وسلم على معاذ فقال أفتان أنت، اقرأ والشمس وضحاها، والليل إذا يغشى، وسبح اسم ربك الأعلى (بخاري ومسلم)

ಜಾಬಿರ್(ರ) ಹೇಳುತ್ತಾರೆ: ಮುಆದ್ ಬಿನ್ ಜಬಲ್(ರ) ಪ್ರವಾದಿವರ್ಯರ(ಸ) ನೇತೃತ್ವದಲ್ಲಿ ನಮಾಝ್ ನಿರ್ವಹಿಸಿದ ಬಳಿಕ ತಮ್ಮ ಜನಾಂಗದವರ ಬಳಿಗೆ ಹೋಗಿ ಅಲ್ಲಿ ಇಮಾಮತ್ (ನಮಾಝ್‌ನ) ನೇತೃತ್ವ ಮಾಡುತ್ತಿದ್ದರು. ಹೀಗೆ ಒಂದು ರಾತ್ರಿ ಇಶಾ ನಮಾಝನ್ನು ಪ್ರವಾದಿವರ್ಯರ(ಸ) ಜೊತೆ ನಿರ್ವಹಿಸಿದ ಅವರು ತಮ್ಮ ಜನರ ಬಳಿಗೆ ಹೋಗಿ ಇಮಾಮತ್ ಮಾಡಿದರು. ನಮಾಝ್‌ನಲ್ಲಿ ಅವರು ಅಲ್‌ಬಕರಃ ಅಧ್ಯಾಯವನ್ನು ಪಠಿಸಲಾರಂಭಿಸಿದರು. ಆಗ ಒಬ್ಬ ವ್ಯಕ್ತಿ ಸಲಾಮ್ ಹೇಳಿ ಆ ನಮಾಝನ್ನು ಅಲ್ಲಿಗೇ ಬಿಟ್ಟು, ತನ್ನ ನಮಾಝನ್ನು ಪ್ರತ್ಯೇಕವಾಗಿ ನಿರ್ವಹಿಸಿ ಮನೆಗೆ ಹೋಗಿ ಬಿಟ್ಟನು. ನಮಾಝ್ ಮಾಡುತ್ತಿದ್ದ ಇತರರು ನಮ್ಮ ನಮಾಝ್ ಮುಗಿದ ಬಳಿಕ ಅವನೊಡನೆ, "ನೀನು ಮುನಾಫಿಕ್ ಆಗಿರುವೆಯಾ?" ಎಂದರು. ಆತನು, "ನಾನು ಖಂಡಿತ ಮುನಾಫಿಕ್ ಆಗಿಲ್ಲ. ಆದರೆ ಅಲ್ಲಾಹನಾಣೆ, ನಾನು ಪ್ರವಾದಿವರ್ಯರ(ಸ) ಬಳಿ ಹೋಗಿ ಮುಆದ್‌ರ(ರ) ಸುದೀರ್ಘ ನಮಾಝ್‌ನ ಕುರಿತು ಅವರಿಗೆ ತಿಳಿಸಲಿದ್ದೇನೆ" ಎಂದನು. ಹಾಗೆಯೇ ಅವನು ಪ್ರವಾದಿವರ್ಯರ(ಸ) ಬಳಿ ಹೋಗಿ ಹೇಳಿದನು:

"ಅಲ್ಲಾಹನ ಸಂದೇಶವಾಹಕರೇ! ನಾವು ನೀರಾವರಿಯ(ಏತದ) ಒಂಟೆಗಳನ್ನು ಸಾಕುವವರು. ಹಗಲಿಡೀ ಜನರ ಹೊಲ, ತೋಟಗಳಲ್ಲಿ ದುಡಿದು ನೀರು ಸರಬರಾಜು ಮಾಡುತ್ತೇವೆ. ಅತ್ತ ಮುಆದ್(ರ) ನಮ್ಮ ಜೊತೆಗೆ ಇಶಾ ನಮಾಝ್ ನಿರ್ವಹಿಸಿ ಆ ಬಳಿಕ ನಮ್ಮ ಮಸೀದಿಯಲ್ಲಿ ನಮಾಝ್ ಮಾಡಿಸುವಾಗ ಅಲ್‌ಬಕರಃ ಅಧ್ಯಾಯ ಓದಲು ಆರಂಭಿಸುತ್ತಾರೆ." (ನಾವು ಹಗಲಿಡೀ ದುಡಿದು ದಣಿದಿರುತ್ತೇವೆ. ಹೀಗಿರುವಾಗ ನಮಗೆ ಅಷ್ಟು ದೀರ್ಘಕಾಲ ನಮಾಝ್‌ನಲ್ಲಿ ನಿಂತಿರಲು ಹೇಗೆ ಸಾಧ್ಯ?)

ಇದನ್ನು ಕೇಳಿದ ಪ್ರವಾದಿ ಮುಹಮ್ಮದ್(ಸ) ಮುಆದ್‌ರ(ರ) ಕಡೆ ತಿರುಗಿ "ನೀವೇನು ಜನರನ್ನು ಸತ್ವ ಪರೀಕ್ಷೆಗೊಳಪಡಿಸುತ್ತೀರಾ? ನೀವು 'ವಶ್ಶಮ್ಸಿ ವದುಹಾ', 'ವಲ್ಲೈಲಿ ಇದಾ ಯಗ್ ಶಾ' ಅಥವಾ 'ಸಬ್ಬಿಹಿಸ್ಮ ರಬ್ಬಿಕಲ್ ಅಲ್‌ಲಾ' ಅಧ್ಯಾಯಗಳನ್ನು ಓದಿರಿ" ಎಂದರು.

[ಬುಖಾರಿ, ಮುಸ್ಲಿಮ್]

❖ ❖ ❖

ಝಕಾತ್

ಝಕಾತ್-ಆರ್ಥಿಕ ಸಮತೋಲನಕ್ಕಾಗಿ

(57) عَنِ ابْنِ عَبَّاسٍ قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اِنَّ اللّٰهَ قَدْ فَرَضَ عَلَيْهِمْ صَدَقَةً تُؤْخَذُ مِنْ اَغْنِيَاءِهِمْ وَتُرَدُّ عَلٰى فُقَرَاءِهِمْ (بخاری، مسلم)

ಇಬ್ನು ಅಬ್ಬಾಸ್(ರ) ವರದಿ ಮಾಡುತ್ತಾರೆ: ಪ್ರವಾದಿ ಮುಹಮ್ಮದ್(ಸ) ಹೇಳಿದರು: "ನಿಸ್ಸಂದೇಹವಾಗಿ ಅಲ್ಲಾಹನು ಮುಸ್ಲಿಮ್ ಸಮಾಜದ ಮೇಲೆ ಝಕಾತನ್ನು ಕಡ್ಡಾಯಗೊಳಿಸಿರುವನು. ಅದನ್ನು ಅವರಲ್ಲಿನ ಶ್ರೀಮಂತರಿಂದ ಸಂಗ್ರಹಿಸಲಾಗುವುದು ಮತ್ತು ಅವರಲ್ಲಿನ ಬಡವರಿಗೆ ಮರಳಿಸಲಾಗುವುದು." *[ಬುಖಾರಿ, ಮುಸ್ಲಿಮ್]*

ಟಿಪ್ಪಣಿ: 'ಸದಕಾ' ಎಂಬ ಪದವು ಕಾನೂನು ಪ್ರಕಾರ ಕಡ್ಡಾಯವಾಗಿರುವ 'ಝಕಾತ್' ಎಂಬ ಅರ್ಥದಲ್ಲೂ ಬಳಸಲ್ಪಡುತ್ತದೆ. ಈ ಹದೀಸ್‌ನಲ್ಲಿ ಈ ಅರ್ಥವನ್ನೇ ಉದ್ದೇಶಿಸಲಾಗಿದೆ. ಜನರು ತಮ್ಮ ಸ್ವಂತ ಇಚ್ಛೆಯಿಂದ ಅಲ್ಲಾಹನ ಮಾರ್ಗದಲ್ಲಿ ವ್ಯಯಿಸುವ ಸಂಪತ್ತಿಗೂ ಇದು ಅನ್ವಯವಾಗುತ್ತದೆ.

'ಮರಳಿಸಲಾಗುವುದು' ಎಂಬ ಪದವು ವಾಸ್ತವದಲ್ಲಿ ಝಕಾತ್, ಮುಸ್ಲಿಮ್ ಸಮಾಜದ ಬಡವರ ಹಕ್ಕಾಗಿದ್ದು ಆ ಹಕ್ಕನ್ನು ಅವರಿಗೆ ಕೊಡಿಸುವುದು ಸರಕಾರದ ಕರ್ತವ್ಯ ಎಂಬುದನ್ನು ಸೂಚಿಸುತ್ತದೆ.

ಝಕಾತ್ ಪಾವತಿಸದಿರುವುದರ ದುಷ್ಪರಿಣಾಮ

(58) عَنْ اَبِيْ هُرَيْرَةَ قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ مَنْ آتَاهُ اللّٰهُ مَالًا فَلَمْ يُؤَدِّ زَكٰوتَهُ مُثِّلَ لَهُ مَالُهُ يَوْمَ الْقِيَامَةِ شُجَاعًا اَقْرَعَ لَهُ زَبِيْبَتَانِ يُطَوَّقُهُ يَوْمَ الْقِيَامَةِ ثُمَّ يَاْخُذُ بِلِهْزِمَتَيْهِ يَعْنِيْ شِدْقَيْهِ ثُمَّ يَقُوْلُ اَنَا مَالُكَ اَنَا كَنْزُكَ ثُمَّ تَلَا وَلَا يَحْسَبَنَّ الَّذِيْنَ يَبْخَلُوْنَ الْآيَةَ (صحیح بخاری)

ಅಬೂ ಹುರೈರಾ(ರ) ಹೇಳುತ್ತಾರೆ: ಪ್ರವಾದಿವರ್ಯರು(ಸ) ಹೇಳಿದರು- "ಅಲ್ಲಾಹನು ಒಬ್ಬನಿಗೆ (ಅವನ ಅಗತ್ಯಕ್ಕಿಂತ ಹೆಚ್ಚು) ಸಂಪತ್ತನ್ನು ಕೊಟ್ಟಿದ್ದು ಆತನು ಅದರ ಝಕಾತನ್ನು ಪಾವತಿಸಿಲ್ಲ ಎಂದಾದರೆ ಪುನರುತ್ಥಾನ ದಿನ ಆತನ ಸಂಪತ್ತು ಅತ್ಯಂತ ವಿಷಪೂರಿತ ಸರ್ಪದ ರೂಪ ತಾಳುವುದು. (ತೀವ್ರ ವಿಷದ ದ್ಯೋತಕವಾಗಿ) ಅದರ ತಲೆಯಲ್ಲಿ ಎರಡು ಕಪ್ಪು

ಕಲೆಗಳಿರುವುವು. ಅದು ಆತನ ಕೊರಳಿಗೆ ನೊಗವಾಗಿ ಬಿಡುವುದು. ಅದು ಅವನ ಎರಡೂ ದವಡೆಗಳನ್ನು ಹಿಡಿದುಕೊಂಡು 'ನಾನು ನಿನ್ನ ನೆಚ್ಚಿನ ಸಂಪತ್ತು, ನಿನ್ನ ಖಜಾನೆ (ನೀನು ಝಕಾತ್ ಪಾವತಿಸದೆ ಸಂಗ್ರಹಿಸಿಟ್ಟ ಖಜಾನೆ)' ಎಂದು ಹೇಳುವುದು."

ಆ ಬಳಿಕ ಅವರು ಪವಿತ್ರ ಕುರ್‌ಆನಿನ ಈ ಕೆಳಗಿನ ವಚನವನ್ನು ಪಠಿಸಿದರು:

ಅರ್ಥ- "ತಮ್ಮ ಸಂಪತ್ತನ್ನು ವ್ಯಯಿಸುವ ವಿಷಯದಲ್ಲಿ ಜಿಪುಣತೆ ತೋರುವವರು ಆ ಸಂಪತ್ತು ತಮಗೆ ಹಿತಕರವಾಗಿರುವುದೆಂದು ಭಾವಿಸದಿರಲಿ. ನಿಜವಾಗಿ ಅದು ಅವರ ಕೊರಳಿನ ನೊಗವಾಗುವುದು. (ಅರ್ಥಾತ್ ಅವರ ವಿನಾಶಕ್ಕೆ ಕಾರಣವಾಗುವುದು)" (3:180) *[ಬುಖಾರಿ]*

ಝಕಾತ್ ಪಾವತಿಸದಿದ್ದರೆ ವಿನಾಶ

(59) عَنْ عَائِشَةَ رض قَالَتْ سَمِعْتُ رَسُوْلَ اللّٰهِ صَلَّى اللّٰهُ عَلَيْهِ وَسَلَّمَ يَقُوْلُ مَا خَالَطَتِ الزَّكٰوةُ مَالًا قَطُّ اِلَّا اَهْلَكَتْهُ (مشكوٰة)

ಪ್ರವಾದಿವರ್ಯರು(ಸ) ಹೀಗೆ ಹೇಳಿರುವುದಾಗಿ ಆಯಿಶಾ(ರ) ಹೇಳುತ್ತಾರೆ:

"ಯಾವ ಸಂಪತ್ತಿನಿಂದ ಝಕಾತನ್ನು ಪ್ರತ್ಯೇಕಿಸಲಾಗಿಲ್ಲವೋ ಆ ಸಂಪತ್ತಿನಲ್ಲಿ ಮಿಶ್ರಿತವಾಗಿರುವ ಝಕಾತ್, ಅದನ್ನು ನಾಶ ಮಾಡಿ ಬಿಡುವುದು." *[ಮಿಶ್ಕಾತ್]*

ಧರ್ಮದಲ್ಲಿ ಝಕಾತ್‌ನ ಮಹತ್ವ

(60) عَنْ عَبْدِ اللّٰهِ بْنِ مَسْعُوْدٍ رض قَالَ اُمِرْنَا بِاِقَامِ الصَّلٰوةِ وَاِيْتَاءِ الزَّكٰوةِ وَمَنْ لَّمْ يُزَكِّ فَلَا صَلٰوةَ لَهٗ ، وَفِيْ رِوَايَةٍ فَلَيْسَ بِمُسْلِمٍ يَنْفَعُهٗ عَمَلُهٗ (ترغيب بحوالہ طبرانی)

ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ವೂದ್(ರ) ಹೇಳುತ್ತಾರೆ:

"ನಮಗೆ ನಮಾಝನ್ನು ಸಂಸ್ಥಾಪಿಸಬೇಕು ಮತ್ತು ಝಕಾತನ್ನು ಪಾವತಿಸಬೇಕು ಎಂದು ಆದೇಶಿಸಲಾಗಿದೆ. ಒಬ್ಬ ವ್ಯಕ್ತಿ ನಮಾಝ್ ನಿರ್ವಹಿಸುತ್ತಾನೆ, ಆದರೆ ಝಕಾತ್ ಪಾವತಿಸುವುದಿಲ್ಲ ಎಂದಾದರೆ ಅಲ್ಲಾಹನು ಆತನ ನಮಾಝನ್ನು ಸ್ವೀಕರಿಸಲಾರನು."

ಇನ್ನೊಂದು ವರದಿಯಲ್ಲಿ ಹೀಗಿದೆ:

ಉಪವಾಸ

ಉಪವಾಸ: ದೇಹದ ಝುಕಾತ್ ಆಗಿದೆ

(64) عَنْ أَبِي هُرَيْرَةَ رَضِ قَالَ، قَالَ رَسُوْلُ اللهِ صَلَّى اللهُ عَلَيْهِ وَسَلَّمَ لِكُلِّ شَيْءٍ زَكٰوةٌ
وَزَكٰوةُ الْجَسَدِ الصَّوْمُ، وَالصِّيَامُ نِصْفُ الصَّبْرِ (ابن ماجه)

ಅಬೂ ಹುರೈರಾ(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು, "ಪ್ರತಿಯೊಂದು ಕೊಳಕನ್ನು ನಿವಾರಿಸಲು ಅಲ್ಲಾಹನು ಒಂದಲ್ಲೊಂದು ವಸ್ತುವನ್ನು ಸೃಷ್ಟಿಸಿದ್ದಾನೆ. ದೇಹವನ್ನು (ಆಧ್ಯಾತ್ಮಿಕ ಕೊಳಕು ಮತ್ತು ರೋಗಗಳಿಂದ) ಶುದ್ಧಗೊಳಿಸಲು ಇರುವ ಸಾಧನ ಉಪವಾಸವಾಗಿದೆ. ಉಪವಾಸ ತಾಳ್ಮೆಯ ಅರ್ಧಾಂಶವಾಗಿದೆ." *[ಇಬ್ನ್ ಮಾಜಃ]*

ಟಿಪ್ಪಣಿ: ಇಸ್ಲಾಮೀ ವಿಧಾನದಂತೆ ಉಪವಾಸ ಆಚರಿಸುವುದರಿಂದ ಹೃದಯದ ರೋಗಗಳು ನಿವಾರಣೆಯಾಗುತ್ತವೆ ಎಂದು ಸಾಮಾನ್ಯ ಎಲ್ಲ ಮುಸ್ಲಿಮ್ ಮತ್ತು ಮುಸ್ಲಿಮೇತರ ವೈದ್ಯರುಗಳೆಲ್ಲರೂ ಆಧುನಿಕ ವೈದ್ಯಕೀಯ ಸಂಶೋಧನೆಗಳ ಆಧಾರದಲ್ಲಿ ಒಮ್ಮತಾಭಿಪ್ರಾಯ ಹೊಂದಿದ್ದಾರೆ. ಕೇವಲ ಉಪವಾಸದಿಂದಲೇ ಮಾರಕ ರೋಗಗಳ ನಿವಾರಣೆ ಮಾಡುವಂತಹ ಚಿಕಿತ್ಸಾಲಯಗಳು ಜರ್ಮನಿ ಮತ್ತು ಅಮೇರಿಕಾಗಳಲ್ಲಿವೆ.

ಉಪವಾಸ ತಾಳ್ಮೆಯ ಅರ್ಧಾಂಶವಾಗಿದೆ ಎಂದರೆ-ಉಪವಾಸ ಇತರ ಆರಾಧನೆ (ಇಬಾದತ್) ಗಳಿಗಿಂತಲೂ ಹೆಚ್ಚು ನಿಸ್ಪೃಹ ಮತ್ತು ತೋರಿಕೆಯಿಂದ ಮುಕ್ತವಾದುದಾಗಿದೆ. ಮನಸ್ಸಿನ ಮೇಲೆ ನಿಯಂತ್ರಣ ಸಾಧಿಸಲು ಉಪವಾಸದಿಂದ ದೊರೆಯುವ ಶಕ್ತಿ ಇತರ ಆರಾಧನೆ (ಇಬಾದತ್) ಗಳಿಂದ ಪ್ರಾಪ್ತವಾಗುವ ಶಕ್ತಿಯ ಅರ್ಧಕ್ಕೆ ಸಮಾನವಾಗಿದೆ. ಹೆಚ್ಚಿನ ವಿಷಯ ಅಲ್ಲಾಹನೇ ಬಲ್ಲ.

ಉಪವಾಸ ಮತ್ತು ತರಾವೀಹ್‌ಗಳ ಪ್ರತಿಫಲ

(65) قَالَ رَسُوْلُ اللهِ صَلَّى اللهُ عَلَيْهِ وَسَلَّمَ مَنْ صَامَ رَمَضَانَ إِيْمَانًا وَّاحْتِسَابًا غُفِرَ لَهٗ مَا تَقَدَّمَ مِنْ ذَنْبِهٖ
وَمَنْ قَامَ رَمَضَانَ إِيْمَانًا وَّاحْتِسَابًا غُفِرَ لَهٗ مَا تَقَدَّمَ مِنْ ذَنْبِهٖ (بخاری و مسلم)

ಪ್ರವಾದಿ(ಸ) ಹೇಳಿದರು- ಒಬ್ಬನು ಸತ್ಯವಿಶ್ವಾಸ ಸಹಿತ ಪರಲೋಕದ ಪುಣ್ಯದ ಸಂಕಲ್ಪದೊಂದಿಗೆ ರಮಝಾನ್ ತಿಂಗಳ ಉಪವಾಸ ಆಚರಿಸಿದರೆ ಅಲ್ಲಾಹನು ಆತನ ಗತ ಪಾಪಗಳನ್ನು ಕ್ಷಮಿಸಿಬಿಡುವನು. ಅದೇ ರೀತಿ ಒಬ್ಬನು ಸತ್ಯವಿಶ್ವಾಸ ಸಹಿತ ಪರಲೋಕದ ಪುಣ್ಯದ

ಸಂಕಲ್ಪದೊಂದಿಗೆ ರಮಝಾನ್ ತಿಂಗಳಲ್ಲಿ ತರಾವೀಹ್ ನಮಾಝ್ ನಿರ್ವಹಿಸಿದರೆ ಅಲ್ಲಾಹನು ಆತನ ಗತಪಾಪಗಳನ್ನು ಮನ್ನಿಸುವನು. *[ಬುಖಾರಿ, ಮುಸ್ಲಿಮ್]*

ಟಿಪ್ಪಣಿ: ಈ ಹದೀಸ್‌ನಲ್ಲಿ ಕ್ಷಮೆಯು ಎರಡು ಶರ್ತಗಳನ್ನು ಅವಲಂಬಿಸಿದೆಯೆಂದು ತಿಳಿದು ಬರುತ್ತದೆ. ಒಂದನೆಯದು ಆತ ಸತ್ಯವಿಶ್ವಾಸಿಯಾಗಿರಬೇಕು. ಅರ್ಥಾತ್ ಸತ್ಯವಿಶ್ವಾಸ ಸ್ವೀಕರಿಸದೆ ಯಾರಾದರೂ ರಮಝಾನ್ ತಿಂಗಳ ಉಪವಾಸ ಆಚರಿಸಿದರೆ ಅದು ಸ್ವೀಕೃತವಾಗಲಾರದು. ಎರಡನೆಯದು ಆತ ಅಲ್ಲಾಹನ ಸಂಪ್ರೀತಿ ಮತ್ತು ಪರಲೋಕದ ಪುಣ್ಯ ಫಲವನ್ನು ಬಯಸಿ ಉಪವಾಸ ಆಚರಿಸಬೇಕು. ಸಂಕಲ್ಪ ಬೇರೆಯೇ ಆದರೆ ಅಂತಹ ಮುಸ್ಲಿಮನ ಉಪವಾಸ ವ್ರತಗಳಿಗೆ ಅಲ್ಲಾಹನ ಬಳಿ ಬೆಲೆಯೇ ಇಲ್ಲ. ಸಂಕಲ್ಪ ಶುದ್ಧಿ ಎಂಬ ಅಧ್ಯಾಯದ ಹದೀಸ್‌ಗಳನ್ನೊಮ್ಮೆ ನೋಡಿರಿ.

ಈ ಹದೀಸ್‌ನಲ್ಲಿ ಕ್ಷಮಿಸಲಾಗುವುದು ಎಂದು ವಾಗ್ದಾನ ಮಾಡಲಾಗಿರುವ ಪಾಪಗಳು ಅಲ್ಲಾಹನಿಗೆ ಸಂಬಂಧಿಸಿದ್ದಾಗಿವೆ. ಮನುಷ್ಯರ ಹಕ್ಕುಗಳಿಗೆ ಸಂಬಂಧಿಸಿದ ಪಾಪಗಳು ಕ್ಷಮಿಸಲ್ಪಡಲಾರವು. ಅವು ಕ್ಷಮಿಸಲ್ಪಡಬೇಕಾದರೆ ಹಕ್ಕುದಾರನಿಗೆ ಅವನ ಹಕ್ಕನ್ನು ನೀಡಬೇಕು ಅಥವಾ ಅವನು ಈ ಲೋಕದಲ್ಲೇ ಅದನ್ನು ಮನ್ನಾ ಮಾಡಬೇಕು. ಹೆಚ್ಚಿನ ವಿವರಗಳು ಮುಂದಿನ ಅಧ್ಯಾಯಗಳಲ್ಲಿ ಕೆಲವು ಹದೀಸ್‌ಗಳ ವಿವರಣೆಯಲ್ಲಿ ಬರಲಿವೆ.

ಉಪವಾಸವನ್ನು ಕೆಡಿಸುವ ವಿಷಯಗಳು

(66) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ: اَلصِّيَامُ جُنَّةٌ، وَاِذَا كَانَ يَوْمُ صَوْمِ اَحَدِكُمْ فَلَا يَرْفُثْ وَلَا يَصْخَبْ، فَاِنْ سَابَّهُ اَحَدٌ اَوْ قَاتَلَهُ فَلْيَقُلْ اِنِّي امْرُءٌ صَائِمٌ

(بخاری ومسلم)

ಪ್ರವಾದಿವರ್ಯರು(ಸ) ಹೇಳಿದರು: ಉಪವಾಸವು (ಪಿಶಾಚಿ ಮತ್ತು ಪೈಶಾಚಿಕ ಕೆಲಸಗಳಿಂದ ತಡೆಯುವ) ಗುರಾಣಿಯಾಗಿದೆ. ನಿಮ್ಮಲ್ಲಿ ಯಾರಾದರೂ ಉಪವಾಸದಿಂದಿದ್ದರೆ ಅಶ್ಲೀಲ ಮಾತು ಆಡದಿರಲಿ. ಸದ್ದುಗದ್ದಲ ಮಾಡದಿರಲಿ. ಯಾರಾದರೂ ಅವನನ್ನು ಬೈದರೆ ಅಥವಾ ಅವನೊಂದಿಗೆ ಜಗಳಾಡಿದರೆ ಉಪವಾಸಿಗನು ತಾನು ಉಪವಾಸದಿಂದಿದ್ದೇನೆ. (ಆದ್ದರಿಂದ ಬೈಗುಳ ಅಥವಾ ಜಗಳಕ್ಕೆ ನಾನು ತಯಾರಿಲ್ಲ) ಎಂದು ಹೇಳಲಿ.

[ಬುಖಾರಿ, ಮುಸ್ಲಿಮ್]

ಯಹೂದ್ಯರು ಸಹ್ರಿ ಉಣ್ಣುವುದಿಲ್ಲ. ಇಂದಿಗೂ ಅವರಲ್ಲಿ ಆ ಪರಿಪಾಠವಿಲ್ಲ. ಇದು ಅವರ ವಿದ್ವಾಂಸರುಗಳು ಹುಟ್ಟು ಹಾಕಿದ ನವೀನಾಚಾರವಾಗಿದೆ. ಅಲ್ಲಾಹನು ತನ್ನ ಅನುಗ್ರಹದ ಮೂಲಕ ಸಮುದಾಯವನ್ನು ಇಂತಹ ನವೀನಾಚಾರ ಮತ್ತು ಅಸಮರ್ಪಕ ನಿರ್ಬಂಧಗಳಿಂದ ಮುಕ್ತಗೊಳಿಸಿದನು. ಅನೇಕ ಸೌಲಭ್ಯಗಳನ್ನು ಅವನು ಒದಗಿಸಿದನು. ಅದರಲ್ಲಿ ಸಹ್ರಿ ಕೂಡ ಒಂದಾಗಿದೆ. ಲೋಕಾನುಗ್ರಹಿಗೆ(ಸ) ಸ್ವಸ್ತಿವಚನಗಳಿರಲಿ.

ಇಫ್ತಾರ್‌ನಲ್ಲಿ ವಿಳಂಬಿಸಬಾರದು

(71) عَنْ سَهْلِ بْنِ سَعْدٍ رضی اَنَّ رَسُوْلَ اللّٰہِ صَلَّى اللّٰہُ عَلَیْہِ وَسَلَّمَ قَالَ لَا یَزَالُ النَّاسُ بِخَیْرٍ مَّا عَجَّلُوا الْفِطْرَ (بخاری)

ಸಹ್ಲ್ ಬಿನ್ ಸಅದ್‌ರಿಂದ(ರ) ವರದಿ: ಪ್ರವಾದಿವರ್ಯರು(ಸ) ಹೇಳಿದರು: "ಜನರು ಇಫ್ತಾರ್‌ನ ವಿಷಯದಲ್ಲಿ ಅವಸರಪಡುತ್ತಾ ಇರುವ ತನಕ ಒಳ್ಳೆಯ ಸ್ಥಿತಿಯಲ್ಲಿ ಇರುವರು."

[ಬುಖಾರಿ]

ಟಿಪ್ಪಣಿ: ಯಹೂದಿಗಳು ತಮ್ಮ ಧರ್ಮದಲ್ಲಿ ಅನೇಕ ನವೀನಾಚಾರಗಳನ್ನು ಆರಂಭಿಸಿದ್ದರು. ಇಫ್ತಾರ್ ಅಥವಾ ಉಪವಾಸ ಮುರಿಯುವ ವಿಷಯದಲ್ಲಿ ವಿಪರೀತ ವಿಳಂಬ ಮಾಡುವುದು ಅಂತಹ ನವೀನಾಚಾರಗಳಲ್ಲಿ ಒಂದಾಗಿತ್ತು. ಅವರು, ರಾತ್ರಿಯ ಕತ್ತಲು ಕವಿಯುವವರೆಗೂ ಉಪವಾಸ ತೊರೆಯುತ್ತಿರಲಿಲ್ಲ. ಮುಸ್ಲಿಮರು ಯಹೂದಿಗಳ ಇಂತಹ ತಪ್ಪನ್ನು ಮಾಡಬಾರದೆಂದು ಪ್ರವಾದಿ(ಸ) ಆದೇಶಿಸಿದ್ದಾರೆ.

ಉಪವಾಸದ ಶಿಫಾರಸು

(72) عَنْ عَبْدِ اللّٰہِ بْنِ عُمَرَ رضی قَالَ، قَالَ رَسُوْلُ اللّٰہِ صَلَّى اللّٰہُ عَلَیْہِ وَسَلَّمَ اَلصِّیَامُ وَالْقُرْاٰنُ یَشْفَعَانِ لِلْعَبْدِ یَقُوْلُ الصِّیَامُ اَیْ رَبِّ اِنِّیْ مَنَعْتُہُ الطَّعَامَ وَالشَّھَوَاتِ فَشَفِّعْنِیْ فِیْہِ، وَیَقُوْلُ الْقُرْاٰنُ مَنَعْتُہُ النَّوْمَ بِاللَّیْلِ فَشَفِّعْنِیْ فِیْہِ فَیُشَفَّعَانِ۔ (مشکوٰۃ)

ಅಬ್ದುಲ್ಲಾ ಬಿನ್ ಉಮರ್(ರ) ಹೇಳುತ್ತಾರೆ: ಪ್ರವಾದಿ ಮುಹಮ್ಮದ್(ಸ) ಹೇಳಿದರು: (ಪುನರುತ್ಥಾನ ದಿನ) ಉಪವಾಸ ಮತ್ತು ಕುರ್‌ಆನ್ ಸತ್ಯವಿಶ್ವಾಸಿಯ ಪರವಾಗಿ ಶಿಫಾರಸು

ಮಾಡುವವು. ಉಪವಾಸವು, "ದೇವಾ! ನಾನು ಈ ವ್ಯಕ್ತಿಯನ್ನು ಆಹಾರ ಮತ್ತು ಇತರ ಸುಖಗಳಿಂದ ತಡೆದಾಗ ಈತನು ತಡೆದು ನಿಂತನು. ಈತನ ಪರವಾಗಿ ನನ್ನ ಶಿಫಾರಸನ್ನು ಸ್ವೀಕರಿಸು" ಎಂದು ಹೇಳುವುದು. ಹಾಗೆಯೇ ಕುರ್‌ಆನ್, "ದೇವಾ! ನಾನು ಈತನನ್ನು ರಾತ್ರಿ ನಿದ್ದೆಯಿಂದ ತಡೆದೆ. (ಅಂತೆಯೇ ಇವನು ಸವಿ ನಿದ್ದೆ ಬಿಟ್ಟು ತರಾವೀಹ್‌ನಲ್ಲಿ ಕುರ್‌ಆನ್ ಓದುವುದರಲ್ಲಿ ತಲ್ಲೀನನಾಗಿದ್ದನು.) ಈತನ ಪರವಾಗಿ ನನ್ನ ಶಿಫಾರಸನ್ನು ಸ್ವೀಕರಿಸು" ಎಂದು ಹೇಳುವುದು. ಅಲ್ಲಾಹನು ಆ ಎರಡರ ಶಿಫಾರಸನ್ನೂ ಸ್ವೀಕರಿಸುವನು. [ಮಿಶ್ಕಾತ್]

ಉಪವಾಸಗಳ್ಳರ ದುರ್ಗತಿ

(73) عَنْ أَبِي أُمَامَةَ الْبَاهِلِيِّ رضي الله عنه قَالَ سَمِعْتُ رَسُولَ اللهِ صَلَّى اللهُ عَلَيْهِ وَسَلَّمَ يَقُولُ بَيْنَا أَنَا نَائِمٌ أَتَانِي رَجُلَانِ فَأَخَذَا بِضَبْعَيَّ فَأَتَيَا بِي جَبَلًا وَعْرًا، فَقَالَا اِصْعَدْ فَقُلْتُ إِنِّي لَا أُطِيقُهُ، فَقَالَا إِنَّا سَنُسَهِّلُهُ لَكَ، فَصَعِدْتُ حَتَّى إِذَا كُنْتُ فِي سَوَاءِ الْجَبَلِ إِذَا بِأَصْوَاتٍ شَدِيدَةٍ، قُلْتُ مَا هٰذِهِ الْأَصْوَاتُ؟ قَالُوْا هٰذَا عُوَاءُ أَهْلِ النَّارِ، ثُمَّ انْطَلَقَ بِي فَإِذَا أَنَا بِقَوْمٍ مُعَلَّقِيْنَ بِعَرَاقِيْبِهِمْ مُشَقَّقَةٌ أَشْدَاقُهُمْ قَالَ قُلْتُ مَنْ هٰؤُلَاءِ؟ قَالَ الَّذِيْنَ يُفْطِرُوْنَ قَبْلَ تَحِلَّةِ صَوْمِهِمْ

(المنذری بحوالہ صحیح ابن خزیمہ وابن حبان)

ಅಬೂ ಉಮಾಮಃ ಬಾಹಿಲೀ(ರ) ಹೇಳುತ್ತಾರೆ- ಪ್ರವಾದಿ(ಸ) ಹೀಗೆ ಹೇಳುವುದನ್ನು ನಾನು ಕೇಳಿದೆ:

"ನಾನು ನಿದ್ದೆ ಹೋಗಿದ್ದೆ. ನನ್ನ ಬಳಿಗೆ ಇಬ್ಬರು ಬಂದರು. ಅವರು ನನ್ನ ಭುಜಗಳನ್ನು ಹಿಡಿದುಕೊಂಡು ಒಂದು ದುರ್ಗಮ ಬೆಟ್ಟದ ಬಳಿಗೆ ಕರೆದೊಯ್ದರು. ಅವರು ನನಗೆ ಆ ಬೆಟ್ಟವನ್ನು ಹತ್ತಲು ಹೇಳಿದರು. ಆ ಬೆಟ್ಟ ಹತ್ತುವುದು ನನ್ನಿಂದ ಸಾಧ್ಯವಿಲ್ಲವೆಂದು ನಾನು ಹೇಳಿದೆ. ಅವರು ನಾವು ಸಹಾಯ ಮಾಡುತ್ತೇವೆ, ನೀವು ಹತ್ತಿರಿ ಎಂದರು. ನಾನು ಹತ್ತಿದೆ. ನಾನು ಬೆಟ್ಟದ ಮಧ್ಯಭಾಗವನ್ನು ತಲುಪಿದಾಗ ಅತ್ಯಂತ ತೀವ್ರವಾದ ಚೀತ್ಕಾರಗಳು ಕೇಳ ತೊಡಗಿದವು. ಇದೆಂತಹ ಚೀತ್ಕಾರ ಎಂದು ನಾನು ವಿಚಾರಿಸಿದೆ. ಇದು ನರಕವಾಸಿಗಳ ಚೀತ್ಕಾರ ಎಂದು ಅವರು ತಿಳಿಸಿದರು. ತರುವಾಯ ನನ್ನನ್ನು ಇನ್ನಷ್ಟು ಮುಂದಕ್ಕೆ ಕರೆದೊಯ್ಯಲಾಯಿತು. ಅಲ್ಲಿ ಕೆಲವರನ್ನು ತಲೆಕೆಳಗಾಗಿ ತೂಗು ಹಾಕಲಾಗಿತ್ತು. ಅವರ ದವಡೆಗಳು

(77) عَنْ مُجِيْبَةَ الْبَاهِلِيَّةِ عَنْ اَبِيْهَا اَوْ عَمِّهَا اَنَّهُ اَتٰى رَسُوْلَ اللّٰهِ صَلَّى اللّٰهُ عَلَيْهِ وَسَلَّمَ
ثُمَّ انْطَلَقَ فَاَتَاهُ بَعْدَ سَنَةٍ وَقَدْ تَغَيَّرَتْ حَالَتُهُ، فَقَالَ يَا رَسُوْلَ اللّٰهِ اَمَا تَعْرِفُنِيْ؟
قَالَ مَنْ اَنْتَ؟ قَالَ اَنَا الْبَاهِلِيُّ الَّذِيْ جِئْتُكَ عَامَ الْاَوَّلِ، قَالَ فَمَا غَيَّرَكَ
وَقَدْ كُنْتَ حَسَنَ الْهَيْئَةِ؟ قَالَ مَا اَكَلْتُ طَعَامًا مُنْذُ فَارَقْتُكَ اِلَّا بِلَيْلٍ، فَقَالَ رَسُوْلُ
اللّٰهِ صَلَّى اللّٰهُ عَلَيْهِ وَسَلَّمَ عَذَّبْتَ نَفْسَكَ ثُمَّ قَالَ صُمْ شَهْرَ الصَّبْرِ وَيَوْمًا مِنْ كُلِّ
شَهْرٍ، قَالَ زِدْنِيْ فَاِنَّ بِيْ قُوَّةً، قَالَ صُمْ يَوْمَيْنِ، قَالَ زِدْنِيْ، قَالَ صُمْ ثَلَاثَةَ اَيَّامٍ،
قَالَ زِدْنِيْ، قَالَ صُمْ مِنَ الْحُرُمِ وَاتْرُكْ، صُمْ مِنَ الْحُرُمِ وَاتْرُكْ، صُمْ مِنَ الْحُرُمِ
وَاتْرُكْ، وَقَالَ بِاَصَابِعِهِ الثَّلَاثِ فَضَمَّهَا ثُمَّ اَرْسَلَهَا ۔ (ابوداؤد)

ಬಾಹಿಲಾ ಗೋತ್ರದ ಮಹಿಳೆ ಹ. ಮುಜೀಬಾ(ರ) ಅವರು ತಮ್ಮ ತಂದೆ ಅಥವಾ ಚಿಕ್ಕಪ್ಪನ ಕುರಿತು ಹೀಗೆ ವರದಿ ಮಾಡಿರುವರು:

ಅವರು ಧರ್ಮದ ಕುರಿತು ಕಲಿಯಲು ಪ್ರವಾದಿವರ್ಯರ(ಸ) ಬಳಿಗೆ ಹೋದರು. ಮರಳಿ ಬಂದು ಒಂದು ವರ್ಷದ ನಂತರ ಅವರು ಪುನಃ ಪ್ರವಾದಿವರ್ಯರ(ಸ) ಬಳಿಗೆ ಹೋದರು. ಈ ಸಲ ಅವರು ತೀರಾ ಬದಲಾಗಿದ್ದರು. ಪ್ರವಾದಿವರ್ಯರೊಡನೆ(ಸ) "ಅಲ್ಲಾಹನ ಸಂದೇಶವಾಹಕರೇ! ತಮಗೆ ನನ್ನ ಗುರುತು ಸಿಗಲಿಲ್ಲವೇ?" ಎಂದು ಕೇಳಿದರು. ಪ್ರವಾದಿ(ಸ), "ನೀವು ಯಾರೆಂದು ನೀವೇ ಪರಿಚಯಿಸಿ" ಎಂದರು. ಆಗ ಅವರು, "ನಾನು ಬಾಹಿಲಾ ಗೋತ್ರದವನು. ಕಳೆದ ವರ್ಷ ನಾನು ತಮ್ಮ ಬಳಿಗೆ ಬಂದಿದ್ದೆ" ಎಂದರು. ಪ್ರವಾದಿ(ಸ) ಹೇಳಿದರು: "ನಿಮ್ಮ ಸ್ಥಿತಿ ಹೀಗೇಕಾಯಿತು? ಹಿಂದೆ ನೀವು ಆರೋಗ್ಯವಂತ ಹಾಗೂ ಸುಂದರ ಮೈಕಟ್ಟಿನವರಾಗಿದ್ದಿರಲ್ಲಾ?" ಆ ವ್ಯಕ್ತಿ ಹೇಳಿದರು: "ನಾನು ತಮ್ಮಲ್ಲಿಂದ ಹೊರಟು ಹೋದಂದಿನಿಂದ ಇಂದಿನವರೆಗೂ ಎಡೆಬಿಡದೆ ನಿತ್ಯ ಉಪವಾಸ ಆಚರಿಸುತ್ತಿದ್ದೇನೆ. ಪ್ರವಾದಿ(ಸ) ಹೇಳಿದರು: "ಈ ರೀತಿ ನೀವು ಸ್ವತಃ ನಿಮ್ಮನ್ನೇ ಹಿಂಸೆಗೆ ಒಳಪಡಿಸಿದಿರಿ (ಅಂದರೆ ನಿರಂತರ ಉಪವಾಸವಿದ್ದು ಆರೋಗ್ಯ ಕೆಡಿಸಿಕೊಂಡಿರಿ)" ಆ ಬಳಿಕ ಪ್ರವಾದಿ(ಸ) ಹೇಳಿದರು: "ನೀವು ರಮಝಾನ್ ತಿಂಗಳಲ್ಲಿ ನಿತ್ಯ ಉಪವಾಸ ಆಚರಿಸಿರಿ. ಉಳಿದ ತಿಂಗಳುಗಳಲ್ಲಿ ತಲಾ ಒಂದು ಉಪವಾಸವನ್ನು ಆಚರಿಸಿರಿ." ಆಗ ಆ ವ್ಯಕ್ತಿ, "ಪ್ರವಾದಿವರ್ಯರೇ(ಸ) ಸ್ವಲ್ಪ ಹೆಚ್ಚಿಸಿ ಹೇಳಿರಿ. ನನಗೆ ಅದಕ್ಕಿಂತ ಹೆಚ್ಚು ಉಪವಾಸ ಆಚರಿಸುವ ಸಾಮರ್ಥ್ಯ ಇದೆ" ಎಂದರು. ಪ್ರವಾದಿ(ಸ), "ಸರಿ! ಹಾಗಾದರೆ ಪ್ರತಿ ತಿಂಗಳು ಎರಡು ಉಪವಾಸ ಆಚರಿಸಿರಿ" ಎಂದರು.

ಆ ವ್ಯಕ್ತಿ, "ಇನ್ನೂ ಸ್ವಲ್ಪ ಹೆಚ್ಚಿಸಿ" ಎಂದು ಮನವಿ ಮಾಡಿದರು. ಪ್ರವಾದಿ(ಸ), "ಸರಿ! ಮೂರು ದಿನ ಉಪವಾಸ ಆಚರಿಸಿರಿ" ಎಂದರು. ಆ ವ್ಯಕ್ತಿ ಪುನಃ ಹೆಚ್ಚಿಸಲು ಹೇಳಿದಾಗ ಪ್ರವಾದಿ(ಸ), "ಸರಿ! ಪ್ರತಿವರ್ಷ ಪವಿತ್ರ ಮಾಸಗಳಲ್ಲಿ ಉಪವಾಸ ಆಚರಿಸಿರಿ ಮತ್ತು ಬಿಟ್ಟು ಬಿಡಿರಿ. ಪ್ರತಿ ವರ್ಷವೂ ಹೀಗೆಯೇ ಮಾಡಿರಿ" ಎಂದರು. ಹೀಗೆ ಹೇಳುತ್ತಾ ಪ್ರವಾದಿ ವರ್ಯರು(ಸ) ತಮ್ಮ ಮೂರು ಬೆರಳುಗಳನ್ನು ಜೋಡಿಸಿದರು ಮತ್ತು ಬಿಟ್ಟು ಬಿಟ್ಟರು.
[ಅಬೂ ದಾವೂದ್]

ಟಿಪ್ಪಣಿ: ಪವಿತ್ರ ತಿಂಗಳುಗಳೆಂದರೆ, ದುಲ್ ಕಅದಃ, ದುಲ್‌ಹಜ್ಜ್, ಮುಹರ್ರಮ್, ರಜಬ್. ಈ ಪವಿತ್ರ ತಿಂಗಳುಗಳಲ್ಲಿ ಕೆಲವು ದಿನ ಉಪವಾಸ ಆಚರಿಸಿ ಮತ್ತು ಕೆಲವು ದಿನ ಉಪವಾಸ ಆಚರಿಸದೆ ಇರಬೇಕು ಎಂಬುದು ಈ ಹದೀಸ್‌ನ ತಾತ್ಪರ್ಯವಾಗಿದೆ.

ಐಚ್ಛಿಕ ಆರಾಧನೆಗಳಲ್ಲಿ ಸಮತೋಲನ

(78) عَنْ أَبِي جُحَيْفَةَ قَالَ : آخَى النَّبِيُّ صَلَّى اللهُ عَلَيْهِ وَسَلَّمَ بَيْنَ سَلْمَانَ وَأَبِي الدَّرْدَاءِ فَزَارَ سَلْمَانُ أَبَا الدَّرْدَاءِ فَرَأَى أُمَّ الدَّرْدَاءِ مُتَبَذِّلَةً، فَقَالَ مَا شَأْنُكِ؟ قَالَتْ أَخُوكَ أَبُو الدَّرْدَاءِ لَيْسَ لَهُ حَاجَةٌ فِي الدُّنْيَا فَجَاءَ أَبُو الدَّرْدَاءِ فَصَنَعَ لَهُ طَعَامًا، فَقَالَ لَهُ كُلْ فَإِنِّي صَائِمٌ قَالَ مَا أَنَا بِآكِلٍ حَتَّى تَأْكُلَ، فَأَكَلَ، فَلَمَّا كَانَ اللَّيْلُ ذَهَبَ أَبُو الدَّرْدَاءِ يَقُومُ فَقَالَ لَهُ نَمْ، فَنَامَ ثُمَّ ذَهَبَ يَقُومُ، فَقَالَ لَهُ نَمْ، فَلَمَّا كَانَ مِنْ آخِرِ اللَّيْلِ قَالَ سَلْمَانُ قُمِ الْآنَ، فَصَلَّيَا جَمِيعًا فَقَالَ لَهُ سَلْمَانُ إِنَّ لِرَبِّكَ عَلَيْكَ حَقًّا، وَإِنَّ لِنَفْسِكَ عَلَيْكَ حَقًّا، وَإِنَّ لِأَهْلِكَ عَلَيْكَ حَقًّا فَأَعْطِ كُلَّ ذِي حَقٍّ حَقَّهُ، فَأَتَى النَّبِيَّ صَلَّى اللهُ عَلَيْهِ وَسَلَّمَ فَذَكَرَ ذَلِكَ لَهُ، فَقَالَ النَّبِيُّ صَلَّى اللهُ عَلَيْهِ وَسَلَّمَ صَدَقَ سَلْمَانُ (بخاری)

ಅಬೂ ಜುಹೈಫಾ(ರ) ಹೇಳುತ್ತಾರೆ: ಪ್ರವಾದಿವರ್ಯರು(ಸ) ಸಲ್ಮಾನ್‌ಫಾರ್ಸಿ(ರ) ಮತ್ತು ಅಬೂದ್ದರ್ದಾರನ್ನು(ರ) ಪರಸ್ಪರ ಸಹೋದರರಾಗಿ ಮಾಡಿದ್ದರು. ಒಮ್ಮೆ ಸಲ್ಮಾನ್(ರ) ಅಬೂದ್ದರ್ದಾರನ್ನು(ರ) ಭೇಟಿಯಾಗಲೆಂದು ಹೋದರು. ಅಲ್ಲಿ ಉಮ್ಮುದರ್ದಾ(ಅಬೂದ್ದರ್ದಾರ ಪತ್ನಿ)ರನ್ನು ತೀರಾ ಸಾಮಾನ್ಯ ಉಡುಗೆಯಲ್ಲಿ ಕಂಡರು. ಸಲ್ಮಾನ್ ಆಕೆಯೊಡನೆ "ನಿಮ್ಮ

ಟಿಪ್ಪಣಿ: ಸಾಮಾನ್ಯವಾಗಿ ಇಹಲೋಕದಲ್ಲಿ ಜನರು, ನಶ್ವರವಾದ ಹಾಗೂ ಕೊನೆಗೊಂದು ದಿನ ಕಿತ್ತುಕೊಳ್ಳಲ್ಪಡುವ ಅಥವಾ ನಾಶವಾಗಿ ಹೋಗುವಂತಹ ವಸ್ತುಗಳನ್ನು ಬಹುಮಾನ ಅಥವಾ ಪುರಸ್ಕಾರ ವೆಂದು ಪರಿಗಣಿಸುತ್ತಾರೆ. ಆದರೆ ಸತ್ಯದ ಅರಿವುಳ್ಳ ಹಾಗೂ ಶಾಶ್ವತ ಸುಖವನ್ನು ತಮ್ಮ ಧ್ಯೇಯವಾಗಿ ಮಾಡಿಕೊಂಡಿರುವ ಜನರ ದೃಷ್ಟಿಯಲ್ಲಿ ಲೌಕಿಕ ಬಹುಮಾನಗಳು ಬಹುಮಾನವೆಂದು ಕರೆಸಿಕೊಳ್ಳಲು ಯೋಗ್ಯವಲ್ಲ. ಪರಲೋಕದ ಬಹುಮಾನವೇ ಅವರ ದೃಷ್ಟಿಯಲ್ಲಿ ಶಾಶ್ವತ ಹಾಗೂ ಅನಂತ ಬಹುಮಾನ ವಾಗಿರುತ್ತದೆ. ನರಕಾಗ್ನಿಯಿಂದ ರಕ್ಷಿಸಲ್ಪಟ್ಟು, ಎಲ್ಲ ಬಗೆಯ ಪಾಪ ಹಾಗೂ ಮಾಲಿನ್ಯಗಳಿಂದ ಮುಕ್ತ ಗೊಳಿಸಲ್ಪಟ್ಟು, ಸರ್ವ ಸುಖ ಸಂಪನ್ನತೆಗಳಿಂದ ಕೂಡಿದ ಸ್ವರ್ಗದೊಳಗೆ ಪ್ರವೇಶಿಸಲ್ಪಡುವುದೇ ಆ ಶಾಶ್ವತ ಹಾಗೂ ಅನಂತ ಬಹುಮಾನವಾಗಿದೆ.

❖ ❖ ❖

ಹಜ್ಜ್

ಹಜ್ಜ್: ಕಡ್ಡಾಯ ಕರ್ಮ

(80) عَنْ أَبِي هُرَيْرَةَ رض قَالَ خَطَبَنَا رَسُولُ اللهِ صَلَّى اللهُ عَلَيْهِ وَسَلَّمَ فَقَالَ يَا أَيُّهَا النَّاسُ فَرَضَ اللهُ عَلَيْكُمُ الْحَجَّ فَحُجُّوا (المنتقى)

ಅಬೂ ಹುರೈರಾ(ರ) ಹೇಳುತ್ತಾರೆ- ಒಮ್ಮೆ ಪ್ರವಾದಿ(ಸ) ಭಾಷಣ ಮಾಡುತ್ತಾ ಹೇಳಿದರು: "ಜನರೇ! ಅಲ್ಲಾಹನು ಹಜ್ಜ್ ಯಾತ್ರೆಯನ್ನು ನಿಮಗೆ ಕಡ್ಡಾಯಗೊಳಿಸಿರುವನು, ಆದ್ದರಿಂದ ಹಜ್ಜ್ ಮಾಡಿರಿ." *[ಅಲ್ ಮುಂತಕಾ]*

ಹಜ್ಜ್‌ಗೆ ತ್ವರೆ ಮಾಡಿರಿ

(81) عَنِ ابْنِ عَبَّاسٍ قَالَ، قَالَ رَسُولُ اللهِ صَلَّى اللهُ عَلَيْهِ وَسَلَّمَ مَنْ أَرَادَ الْحَجَّ فَلْيَتَعَجَّلْ فَإِنَّهُ قَدْ يَمْرَضُ الْمَرِيضُ وَتَضِلُّ الرَّاحِلَةُ وَتَعْرِضُ الْحَاجَةُ (ابن ماجه)

ಇಬ್ನು ಅಬ್ಬಾಸ್(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು: ಕಡ್ಡಾಯ ಹಜ್ಜ್‌ನ ಸಂಕಲ್ಪ ಮಾಡಿದವನು ಅದಕ್ಕಾಗಿ ತ್ವರೆ ಮಾಡಬೇಕು. ಏಕೆಂದರೆ ಅವನು ಕಾಯಿಲೆ ಬೀಳಬಹುದು, ಅವನ ಒಂಟೆ ಕಾಣೆಯಾಗಬಹುದು (ಅಂದರೆ ಪ್ರಯಾಣದ ಸಾಮಗ್ರಿಗಳು ಇಲ್ಲವಾಗಬಹುದು, ಪ್ರಯಾಣದ ದಾರಿ ಅಪಾಯಕಾರಿಯಾಗಬಹುದು, ಅಕ್ರಮಿ ಆಡಳಿತಗಾರರಿಂದ ಅಡ್ಡಿಯುಂಟಾಗಬಹುದು ಅಥವಾ ಪ್ರಯಾಣವೆಚ್ಚ ಉಳಿಯದಿರಬಹುದು) ಮತ್ತು ಮುಂದೆ ಪ್ರಯಾಣ ಸಾಧ್ಯವಾಗದಂತಹ ಯಾವುದಾದರೂ ಅವಶ್ಯಕತೆ ಉಂಟಾಗಿ ಬಿಡಬಹುದು. *[ಇಬ್ನು ಮಾಜಃ]*

ಅತ್ಯುತ್ತಮ ಕರ್ಮ

(82) عَنْ اَبِيْ هُرَيْرَةَ قَالَ سُئِلَ رَسُوْلُ اللهِ صَلَّى اللهُ عَلَيْهِ وَسَلَّمَ اَىُّ الْاَعْمَالِ اَفْضَلُ؟ قَالَ اِيْمَانٌ بِاللهِ وَبِرَسُوْلِهِ، قِيْلَ ثُمَّ مَاذَا؟ قَالَ اَلْجِهَادُ فِيْ سَبِيْلِ اللهِ قِيْلَ ثُمَّ مَاذَا؟ قَالَ ثُمَّ حَجٌّ مَبْرُوْرٌ (المنتقى) (بخاری، مسلم)

ಅಬೂ ಹುರೈರಾ(ರ) ಹೇಳುತ್ತಾರೆ- ಪ್ರವಾದಿವರ್ಯರೊಡನೆ(ಸ), "ಅತ್ಯುತ್ತಮ ಕರ್ಮ ಯಾವುದು?" ಎಂದು ಪ್ರಶ್ನಿಸಲಾಯಿತು. ಪ್ರವಾದಿವರ್ಯರು(ಸ) ಹೇಳಿದರು:

"ಅಲ್ಲಾಹನ ಮೇಲೆ ಮತ್ತು ಅವನ ಸಂದೇಶವಾಹಕನ ಮೇಲೆ ವಿಶ್ವಾಸವಿರಿಸುವುದು."

"ಆ ಬಳಿಕ ಯಾವುದು?" ಎಂದು ವಿಚಾರಿಸಲಾಯಿತು.

"ಅಲ್ಲಾಹನ ಮಾರ್ಗದಲ್ಲಿ ಜಿಹಾದ್ (ಧರ್ಮ ಯುದ್ಧ) ಮಾಡುವುದು" ಎಂದು ಪ್ರವಾದಿ(ಸ) ಉತ್ತರಿಸಿದರು.

"ಅನಂತರ ಯಾವುದು?" ಎಂದು ಕೇಳಲಾಯಿತು: ಪ್ರವಾದಿವರ್ಯರು(ಸ) ಹೇಳಿದರು:

"ಮಬ್ರೂರ್ ಹಜ್ಜ್ (ಯಾವುದೇ ರೀತಿಯಲ್ಲಿ ಅಲ್ಲಾಹನ ಆಜ್ಞೋಲ್ಲಂಘನೆ ಮಾಡದೆ ನಿರ್ವಹಿಸಲಾಗುವ ಹಜ್ಜ್)" *[ಬುಖಾರಿ, ಮುಸ್ಲಿಮ್, ಅಲ್ ಮುನ್ತಕಾ]*

ಯಥಾರ್ಥ ಹಜ್ಜ್

(83) عَنِ ابْنِ عُمَرَ اَنَّ رَجُلًا قَالَ لِرَسُوْلِ اللهِ صَلَّى اللهُ عَلَيْهِ وَسَلَّمَ مَنِ الْحَاجُّ قَالَ الشَّعِثُ التَّفِلُ قَالَ فَاَىُّ الْحَجِّ اَفْضَلُ؟ قَالَ الْعَجُّ وَالثَّجُّ، قَالَ مَا السَّبِيْلُ؟ قَالَ اَلزَّادُ وَالرَّاحِلَةُ (ابن ماجہ)

ಇಬ್ನು ಉಮರ್(ರ) ಹೇಳುತ್ತಾರೆ- ಒಮ್ಮೆ ಒಬ್ಬ ವ್ಯಕ್ತಿ ಪ್ರವಾದಿವರ್ಯರೊಡನೆ(ಸ), "ಹಾಜಿ ಎಂದರೆ ಯಾರು?" (ಅಂದರೆ ಹಜ್ಜ್ ಮಾಡುವವನಲ್ಲಿ ಎಂತಹ ವಿಶೇಷತೆಗಳಿರಬೇಕು) ಎಂದು ಪ್ರಶ್ನಿಸಿದನು. ಪ್ರವಾದಿವರ್ಯರು(ಸ), "ಕೂದಲು ಕೆದರಿಕೊಂಡಿರುವವನು ಮತ್ತು ಬಟ್ಟೆ ಧೂಳು ಮುಕ್ಕಿರುವವನು" ಎಂದು ಹೇಳಿದರು. "ಹಜ್ಜ್‌ನಲ್ಲಿ ಮಾಡಲಾಗುವ ಕರ್ಮಗಳ ಪೈಕಿ ಪುಣ್ಯ ಮತ್ತು ಪ್ರತಿಫಲದ ದೃಷ್ಟಿಯಿಂದ ಅತ್ಯಂತ ಶ್ರೇಷ್ಠ ಕರ್ಮ ಯಾವುದು?" ಎಂದು ಆ ವ್ಯಕ್ತಿ ಕೇಳಿದನು. ಪ್ರವಾದಿ(ಸ)" ಉಚ್ಚ ಧ್ವನಿಯಲ್ಲಿ 'ಲಬ್ಬೈಕ್'

ಹೇಳುವುದು ಮತ್ತು ಪ್ರಾಣಿ ಬಲಿ ನೀಡುವುದು" ಎಂದು ಉತ್ತರಿಸಿದರು. ಆ ವ್ಯಕ್ತಿ (ಪವಿತ್ರ ಕುರ್‌ಆನಿನ ಆಲಿ ಇಮ್ರಾನ್ ಅಧ್ಯಾಯದಲ್ಲಿ ಹಜ್ಜ್‌ಗೆ ಸಂಬಂಧಿಸಿದ ವಾಕ್ಯದಲ್ಲಿರುವ) 'ಸಬೀಲನ್' ಎಂಬ ಪದದ ತಾತ್ಪರ್ಯವೇನು" ಎಂದು ವಿಚಾರಿಸಿದನು. "ಅಲ್ಲಾಹನ ಭವನಕ್ಕೆ ತಲುಪಲು ಬೇಕಾದ ವಾಹನ ಮತ್ತು ಪ್ರಯಾಣ ವೆಚ್ಚ ಇರಬೇಕು" ಎಂದು ಪ್ರವಾದಿ(ಸ) ಹೇಳಿದರು. *[ಇಬ್ನುಮಾಜ]*

ಟಿಪ್ಪಣಿ: ಈ ಪ್ರವಾದಿ ವಚನದಿಂದ ನಮಗೆ ತಿಳಿಯುವಂತೆ, ಹಜ್ಜ್ ಅಪಾರವಾದ ಪ್ರೇಮಭಾವ ದೊಂದಿಗೆ ಮಾಡಲಾಗುವ ಒಂದು ಆರಾಧನೆಯಾಗಿದೆ. ತನ್ನ ಪ್ರೀತಿ ಪಾತ್ರನ ಭವನದ ದರ್ಶನಕ್ಕೆ ಹೊರಟವನಿಗೆ ಅನ್ನ, ಪಾನೀಯ, ಸ್ನಾನ ಇತ್ಯಾದಿಗಳ ಪರಿವೆಯೇ ಇರುವುದಿಲ್ಲ. ಅವನು ತನಗೆ ದೊರೆತ ಸಮಯವನ್ನೆಲ್ಲಾ ತನ್ನ ಪ್ರೀತಿ ಪಾತ್ರನ ಜೊತೆ ಸಂಭಾಷಿಸುವುದರಲ್ಲಿ, ದಿಕ್ರ್, ತಸ್ಬೀಹ್, ದುಆ ಮತ್ತು ಇಸ್ತಿಗ್ಫಾರ್(ಸ್ಮರಣೆ, ದೇವಸ್ತುತಿ, ಪ್ರಾರ್ಥನೆ ಮತ್ತು ಕ್ಷಮಾಯಾಚನೆ)ಗಳಲ್ಲೇ ಕಳೆಯುತ್ತಾನೆ. ನಿಜವಾದ ಹಜ್ಜ್ ಇಂತಹವರದ್ದೇ ಆಗಿದೆ. ಈ ಕುರಿತು ಒಂದು ಪ್ರವಾದಿ ವಚನ ಹೀಗಿದೆ:

"ಹಜ್ಜ್ ಮಾಡುವವರು ಅರಫಾತ್ ಮೈದಾನದಲ್ಲಿ ನಿಂತು ದೇವಸ್ಮರಣೆ, ಪ್ರಾರ್ಥನೆ ಇತ್ಯಾದಿ ಗಳಲ್ಲಿ ತಲ್ಲೀನರಾದಾಗ ಅಲ್ಲಾಹನು ನಮಗೆ ಕಾಣುವ ಆಕಾಶದವರೆಗೆ ಬರುತ್ತಾನೆ ಮತ್ತು ದೇವಚರ ರೊಡನೆ, "ನನ್ನ ಈ ದಾಸರನ್ನು ನೋಡಿರಿ. ಇವರು ತಮ್ಮ ಕೂದಲು ಕೆದರಿರುವ ಮತ್ತು ಧೂಳು ಮುಕ್ಕಿರುವ ಸ್ಥಿತಿಯಲ್ಲಿ ನನ್ನ ಬಳಿಗೆ ಬಂದಿದ್ದಾರೆ" ಎಂದು ಹೇಳುತ್ತಾನೆ."

ನಿರ್ಲಕ್ಷ್ಯ ಸಲ್ಲದು

(84) عَنِ الْحَسَنِ قَالَ، قَالَ عُمَرُ بْنُ الْخَطَّابِ هَمَمْتُ اَنْ اَبْعَثَ رِجَالًا اِلٰى هٰذِهِ الْاَمْصَارِ فَيَنْظُرُوْا كُلَّ مَنْ كَانَ لَهٗ جِدَةٌ وَلَمْ يَحُجَّ فَيَضْرِبُوْا عَلَيْهِمُ الْجِزْيَةَ مَا هُمْ بِمُسْلِمِيْنَ مَا هُمْ بِمُسْلِمِيْنَ - (المنتقى)

ಪ್ರಸಿದ್ಧ ತಾಬಈ ಹಸನ್ ಬಸರೀ(ರ) ಅವರು ಉಮರ್ ಬಿನ್ ಖತ್ತಾಬ್(ರ) ಅವರಿಂದ ಹೀಗೆ ವರದಿ ಮಾಡಿದ್ದಾರೆ:

"ನಾನು ಇಸ್ಲಾಮೀ ಆಡಳಿತಕ್ಕೆ ಅಧೀನವಾಗಿರುವ ಇಂತಿಂತಹ ನಗರಗಳಿಗೆ ಕೆಲವು ಜನರನ್ನು ಕಳುಹಿಸಿ, ಅಲ್ಲಿ ಹಜ್ಜ್ ಮಾಡುವ ಸಾಮರ್ಥ್ಯ ಇದ್ದರೂ ತಮ್ಮ ಈ ಕರ್ತವ್ಯವನ್ನು ನಿರ್ವಹಿಸದವರು ಯಾರೆಲ್ಲಾ ಇದ್ದಾರೆ ಎಂಬುದರ ಸಮೀಕ್ಷೆ ನಡೆಸಬೇಕೆಂದಿದ್ದೇನೆ. ಏಕೆಂದರೆ ಅಂತಹವರು ಮುಸ್ಲಿಮರಲ್ಲ, ಅಂತಹವರು ಮುಸ್ಲಿಮರಲ್ಲ." (ಮುಸ್ಲಿಮ್ ಎಂದರೆ ಅಲ್ಲಾಹನ ಆಜ್ಞಾಪಾಲನೆ ಮಾಡುವವರು ಎಂದರ್ಥ. ಅವರು ಮುಸ್ಲಿಮರಾಗಿದ್ದರೆ ತಮಗೆ ಸಾಮರ್ಥ್ಯ ವಿರುವಾಗ ಖಂಡಿತ ಹಜ್ಜ್ ಮಾಡುತ್ತಿದ್ದರು.) *[ಅಲ್‌ಮುನ್‌ತಕಾ]*

ಪ್ರಯಾಣ ಪ್ರಾರಂಭಿಸುವುದರೊಂದಿಗೆ ಹಜ್ಜ್‌ನ ಪುಣ್ಯ ಆರಂಭ

(85) عَنْ اَبِیْ هُرَیْرَةَ رض قَالَ، قَالَ رَسُوْلُ اللّٰهِ صَلَّی اللّٰهُ عَلَیْهِ وَسَلَّمَ مَنْ خَرَجَ حَاجًّا اَوْ مُعْتَمِرًا اَوْ غَازِیًا ثُمَّ مَاتَ فِیْ طَرِیْقِهٖ کَتَبَ اللّٰهُ لَهٗ اَجْرَ الْغَازِیْ وَالْحَاجِّ وَالْمُعْتَمِرِ (مشکوٰۃ)

ಅಬೂ ಹುರೈರಾ(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು- ಹಜ್ಜ್, ಉಮ್ರಾ ಅಥವಾ ಜಿಹಾದ್‌ನ ಸಂಕಲ್ಪದೊಂದಿಗೆ ಮನೆಯಿಂದ ಹೊರಟ ಒಬ್ಬ ವ್ಯಕ್ತಿ ಮಾರ್ಗ ಮಧ್ಯೆ ಮೃತ ಪಟ್ಟರೆ ಅವನಿಗೆ ಅಲ್ಲಾಹನು ಯೋಧರಿಗೆ, ಹಾಜಿಗಳಿಗೆ ಮತ್ತು ಉಮ್ರಾ ನಿರ್ವಹಿಸುವವರಿಗೆ ನೀಡುವ ಪುಣ್ಯವನ್ನೇ ನೀಡುವನು. *[ಮಿಶ್ಕಾತ್]*

ಸಮಾನ ಮಹತ್ವ

(86) عَنْ زِیَادِ بْنِ نُعَیْمِ الْحَضْرَمِیِّ رض قَالَ، قَالَ رَسُوْلُ اللّٰهِ صَلَّی اللّٰهُ عَلَیْهِ وَسَلَّمَ اَرْبَعٌ فَرَضَهُنَّ اللّٰهُ فِی الْاِسْلَامِ، فَمَنْ اَتٰی بِثَلَاثٍ لَمْ یُغْنِیْنَ عَنْهُ شَیْئًا حَتّٰی یَاْتِیَ بِهِنَّ جَمِیْعًا، اَلصَّلٰوةُ وَالزَّکٰوةُ وَصِیَامُ رَمَضَانَ وَحَجُّ الْبَیْتِ (مسند احمد)

ಝಿಯಾದ್ ಬಿನ್ ನುಐಮ್ ಹಳ್ರುಮೀ(ರ) ಹೇಳುತ್ತಾರೆ- ಪ್ರವಾದಿ ಮುಹಮ್ಮದ್(ಸ) ಹೇಳಿದರು:

"ಇಸ್ಲಾಮಿನಲ್ಲಿ, ಅಲ್ಲಾಹನು ಕಡ್ಡಾಯಗೊಳಿಸಿರುವ ನಾಲ್ಕು ಕರ್ಮಗಳಿವೆ. ಒಬ್ಬ ವ್ಯಕ್ತಿ ಆ ಪೈಕಿ ಮೂರು ಕರ್ಮಗಳನ್ನು ಮಾಡಿ ನಾಲ್ಕನೆಯದನ್ನು ಮಾಡದೆ ಇದ್ದರೆ ಆ ಮೂರೂ ಕರ್ಮಗಳು ಅವನ ಪಾಲಿಗೆ ನಿಷ್ಪ್ರಯೋಜಕವಾಗುವುವು. ಅವು- ನಮಾಝ್, ಝಕಾತ್, ರಮಝಾನ್ ತಿಂಗಳ ಉಪವಾಸ ಮತ್ತು ಹಜ್ಜ್ ಕರ್ಮಗಳಾಗಿವೆ."

[ಮುಸ್ನದ್ ಅಹ್ಮದ್]

ಟಿಪ್ಪಣಿ: ಈ ಪ್ರವಾದಿ ವಚನ ಮತ್ತು ಇತರ ಪ್ರವಾದಿ ವಚನಗಳಿಂದ ನಮಗೆ ನಮಾಝ್, ಝಕಾತ್, ಉಪವಾಸ ಮತ್ತು ಹಜ್ಜ್‌ಗಳಿಗೆ ಧರ್ಮದಲ್ಲಿ ಬಹಳ ಮಹತ್ವವಿದೆಯೆಂಬುದು ಮನವರಿಕೆ ಯಾಗುತ್ತದೆ. ಇಂದು ನಮ್ಮ ಮುಸ್ಲಿಮರಲ್ಲಿ ಹೆಚ್ಚಿನವರು ನಮಾಝನ್ನು ತೊರೆದಿದ್ದಾರೆ. ನಮಾಝ್ ಮಾಡುವವರ ಪೈಕಿಯೂ ಅನೇಕರು ಝಕಾತ್ ಕೊಡುವುದಿಲ್ಲ. ಕೆಲವರು ಉಪವಾಸ ಮಾತ್ರ ಆಚರಿಸುತ್ತಾರೆ. ಆದರೆ ನಮಾಝ್‌ನ ಹತ್ತಿರವೂ ಸುಳಿಯುವುದಿಲ್ಲ. ಝಕಾತನ್ನೂ ಪಾವತಿಸುವುದಿಲ್ಲ. ಕೆಲವರು ನಮಾಝ್, ಝಕಾತ್ ಮತ್ತು ಉಪವಾಸಗಳ ಬಗ್ಗೆ ಗಮನ ಕೊಡುತ್ತಾರೆ. ಆದರೆ ಹಜ್ಜ್‌ನ ಬಗ್ಗೆ ತೀರಾ ಅಸಡ್ಡೆ ತೋರುತ್ತಾರೆ. ಇಂತಹವರು ಪರಲೋಕದಲ್ಲಿ ಅಂತಿಮ ವಿಚಾರಣೆಯ ದಿನ ಭಾರೀ ಕಷ್ಟದಲ್ಲಿ ಸಿಲುಕಿಕೊಳ್ಳುವರು. ನಾನು ನಿಮ್ಮ ಮೇಲೆ ನಾಲ್ಕು ಕರ್ಮಗಳನ್ನು ಕಡ್ಡಾಯಗೊಳಿಸಿದ್ದೆ, ಕೇವಲ ಒಂದು, ಎರಡು ಅಥವಾ ಮೂರು ಕರ್ಮಗಳನ್ನಲ್ಲ ಹೀಗಿರುತ್ತಾ ನೀವು ಒಂದನ್ನು ಹಿಡಿದು ಇನ್ನೊಂದನ್ನು ಬಿಟ್ಟು ಬಿಡುವ ನೀತಿಯನ್ನು ಅನುಸರಿಸಲು ನಿಮಗೆ ಅಧಿಕಾರ ಕೊಟ್ಟವರು ಯಾರು? ನೀವು ನನ್ನ ದಾಸ್ಯವನ್ನು ಸ್ವೀಕರಿಸಿ, ಪವಿತ್ರ ವಚನವನ್ನು ಘೋಷಿಸಿ, ಮುಸ್ಲಿಮರಾಗಿ ಪ್ರವಾದಿ ಮುಹಮ್ಮದ್‌ರ(ಸ) ಸಮುದಾಯದ ಸದಸ್ಯರಾದ ಬಳಿಕ ಈ ರೀತಿಯ ಬಂಡಾಯದ ಧೋರಣೆಯನ್ನು ಅನುಸರಿಸಿದ್ದೇಕೆ? ಎಂದು ಅಲ್ಲಾಹನು ಇಂತಹ ಜನರೊಡನೆ ವಿಚಾರಿಸುವುದು ಖಂಡಿತ. ಆಗ ಈ ಜನರು ಏನು ಉತ್ತರ ಕೊಡಬಲ್ಲರು? ಅಂದು ಅವರ ಅವಸ್ಥೆ ಏನಾದೀತು?

❖ ❖ ❖

ಸಾಮಾಜಿಕ ಹಕ್ಕುಗಳು

ಹೆತ್ತವರ ಸೇವೆ

(87) عَنْ اَبِي هُرَيْرَةَ رض قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ رَغِمَ اَنْفُهُ
رَغِمَ اَنْفُهُ رَغِمَ اَنْفُهُ قِيْلَ مَنْ يَا رَسُوْلَ اللّٰهِ؟ قَالَ مَنْ اَدْرَكَ وَالِدَيْهِ عِنْدَ الْكِبَرِ
اَحَدَهُمَا اَوْ كِلَاهُمَا ثُمَّ لَمْ يَدْخُلِ الْجَنَّةَ (مسلم)

ಅಬೂ ಹುರೈರಾ(ರ) ಹೇಳುತ್ತಾರೆ- ಒಮ್ಮೆ ಪ್ರವಾದಿವರ್ಯರು(ಸ), "ಅವನು ನಿಂದ್ಯನಾಗಲಿ" ಎಂದು ಮೂರು ಬಾರಿ ಹೇಳಿದರು. ಜನರು 'ಯಾರು?' ಎಂದು ವಿಚಾರಿಸಿದರು. ಆಗ ಪ್ರವಾದಿ(ಸ) ಹೇಳಿದರು:

"ತನ್ನ ತಂದೆ-ತಾಯಿಯವರನ್ನು ಅಥವಾ ಅವರ ಪೈಕಿ ಒಬ್ಬರನ್ನು ವೃದ್ಧಾಪ್ಯದ ಸ್ಥಿತಿಯಲ್ಲಿ ಕಂಡ ಬಳಿಕವೂ (ಅವರ ಸೇವೆ ಮಾಡದೇ) ಸ್ವರ್ಗ ಅರ್ಹನಾಗದವನನ್ನು ನಾನು ಶಪಿಸುತ್ತಿದ್ದೇನೆ." *[ಮುಸ್ಲಿಮ್]*

ತಾಯಿಯ ಹಕ್ಕು

(88) عَنْ اَبِي هُرَيْرَةَ رض قَالَ، قَالَ رَجُلٌ يَا رَسُوْلَ اللّٰهِ مَنْ اَحَقُّ بِصَحَابَتِيْ؟
قَالَ اُمُّكَ، قَالَ ثُمَّ مَنْ؟ قَالَ اُمُّكَ، قَالَ ثُمَّ مَنْ؟ قَالَ اُمُّكَ، قَالَ ثُمَّ مَنْ؟
قَالَ ثُمَّ اَبُوْكَ (بخاری ومسلم)

ಅಬೂ ಹುರೈರಾ(ರ) ಹೇಳುತ್ತಾರೆ- ಒಮ್ಮೆ ಓರ್ವ ವ್ಯಕ್ತಿ ಪ್ರವಾದಿವರ್ಯರೊಡನೆ(ಸ), "ಅಲ್ಲಾಹನ ಸಂದೇಶವಾಹಕರೇ! ನನ್ನ ಬಂಧುಗಳ ಪೈಕಿ ಸದ್ವರ್ತನೆಗೆ ಅತಿ ಹೆಚ್ಚು ಅರ್ಹರಾಗಿರುವವರು ಯಾರು?" ಎಂದು ವಿಚಾರಿಸಿದನು. ಪ್ರವಾದಿ(ಸ) ಹೇಳಿದರು: "ನಿನ್ನ ತಾಯಿ."

ಆ ವ್ಯಕ್ತಿ "ಆ ಬಳಿಕ ಯಾರು?"
ಪ್ರವಾದಿ(ಸ) "ನಿನ್ನ ತಾಯಿ"
ಆ ವ್ಯಕ್ತಿ "ಆ ಬಳಿಕ ಯಾರು?"
ಪ್ರವಾದಿ(ಸ) "ನಿನ್ನ ತಾಯಿ"

"ಆ ಬಳಿಕ ಯಾರು?" ಎಂದು ಆ ವ್ಯಕ್ತಿ ಮತ್ತೆ ಕೇಳಿದಾಗ ಪ್ರವಾದಿ(ಸ) ಹೇಳಿದರು: "ನಿನ್ನ ತಂದೆ." [ಬುಖಾರಿ, ಮುಸ್ಲಿಮ್]

ಟಿಪ್ಪಣಿ: ತಾಯಿಯ ಸ್ಥಾನವು ತಂದೆಗಿಂತ ದೊಡ್ಡದೆಂಬುದು ಈ ಪ್ರವಾದಿವಚನದಿಂದ ಸ್ಪಷ್ಟವಾಗುತ್ತದೆ. ಈ ವಿಷಯ ಪವಿತ್ರ ಕುರ್‌ಆನ್‌ನಿಂದಲೂ ವ್ಯಕ್ತವಾಗುತ್ತದೆ. ಸೂರಃ ಲುಕ್ಮಾನ್‌ನಲ್ಲಿ, "ನಾವು ಮನುಷ್ಯನಿಗೆ, ತನ್ನ ಹೆತ್ತವರಿಗೆ ಕೃತಜ್ಞನಾಗಿರಬೇಕೆಂದು ಆದೇಶಿಸಿದ್ದೇವೆ" ಎಂದು ಹೇಳಿದ ಬೆನ್ನಿಗೇ "ಅವನ ಮಾತೆಯು ನಿರಂತರ ಕಷ್ಟ ಸಹಿಸುತ್ತಾ ಒಂಬತ್ತು ತಿಂಗಳ ಕಾಲ ಅವನನ್ನು ತನ್ನ ಉದರದಲ್ಲಿ ಪೋಷಿಸಿದಳು. ಆ ಬಳಿಕ ಅವನಿಗೆ ಎರಡು ವರ್ಷ ಸ್ತನಪಾನ ಮಾಡಿಸಿದಳು" ಎಂದು ಹೇಳಲಾಗಿದೆ. (31:14) ಈ ದೃಷ್ಟಿಯಿಂದಲೇ ವಿದ್ವಾಂಸರು, ಗೌರವದ ವಿಷಯದಲ್ಲಿ ತಂದೆಯ ಸ್ಥಾನ ಹಿರಿದೆಂದೂ, ಸೇವೆಯ ವಿಷಯದಲ್ಲಿ ತಾಯಿಯ ಸ್ಥಾನ ದೊಡ್ಡದೆಂದೂ ಹೇಳಿದ್ದಾರೆ.

ತಾಯಿಯ ಶ್ರೇಷ್ಠ ಹಕ್ಕುಗಳನ್ನು ಈ ಕೆಳಗಿನ ಹದೀಸ್‌ಗಳಿಂದ ಗ್ರಹಿಸಬಹುದು -

ಒಬ್ಬನು ಪ್ರವಾದಿಯವರ(ಸ) ಬಳಿಗೆ ಬಂದು ಹೀಗೆಂದನು: ಅಲ್ಲಾಹನ ಸಂದೇಶವಾಹಕರೇ! ನಾನು ನನ್ನ ಅಂಗವಿಕಲ ತಾಯಿಯನ್ನು ಬೆನ್ನ ಮೇಲೆ ಹೊತ್ತುಕೊಂಡು ಯಮನ್‌ನಿಂದ ಮಕ್ಕಾಕ್ಕೆ ಬಂದೆ. ಅದೇ ಅವಸ್ಥೆಯಲ್ಲಿ ಅಲ್ಲಾಹನ ಭವನದ ತವಾಫ್ ಮಾಡಿದೆ. ಸಫಾ-ಮರ್ವಾಗಳ ಮಧ್ಯೆ ಓಡಾಡಿದೆ. ಅದೇ ಸ್ಥಿತಿಯಲ್ಲಿ ಅರಫಾತ್‌ಗೆ ಕೊಂಡೊಯ್ದೆ. ತರುವಾಯ ಮುಝ್ದಲಿಫಕ್ಕೆ ಬಂದೆ. ಅನಂತರ ಮಿನಾ ತಲಪಿದೆ ಮತ್ತು ಕಲ್ಲೆಸೆದೆ. ಇದೆಲ್ಲವನ್ನೂ ನಾನು ತಾಯಿಯನ್ನು ಹೊತ್ತುಕೊಂಡೇ ಮಾಡಿದೆ. ಹಾಗಿರುವಾಗ ತಾಯಿಯ ಹಕ್ಕು ಪೂರ್ಣಗೊಂಡಿತೇ? ಪ್ರವಾದಿ(ಸ), 'ಇಲ್ಲ'ವೆಂದರು. ಏಕೆಂದು ಆತ ಪ್ರಶ್ನಿಸಿದಾಗ, ಪ್ರವಾದಿ(ಸ) ಹೇಳಿದರು- ಇನ್ನೂ ಆಕೆಯ ಹಕ್ಕು ಸಂದಾಯವಾಗಲಿಲ್ಲ. ಆಕೆ ನೀನು ಜೀವಂತವಾಗಿರಬೇಕೆಂಬ ನಿರೀಕ್ಷೆಯಿಂದ ಏನೆಲ್ಲಾ ಸಂಕಷ್ಟ ಸಹಿಸಿದಳು. ನೀನಾದರೋ ಆಕೆ ಸಾಯಬೇಕೆಂದು ಬಯಸಿ ಅವಳೊಂದಿಗೆ ಏನೆಲ್ಲ ಮಾಡಬೇಕೋ ಮಾಡಿದೆ.

ಅದೇ ರೀತಿ ಅಬ್ದುಲ್ಲಾ ಬಿನ್ ಉಮರ್‌ರಲ್ಲಿ(ರ) ಓರ್ವ ವ್ಯಕ್ತಿ ತಾಯಿಯ ಸುದೀರ್ಘ ಸೇವೆಯ ಬಗ್ಗೆ ಪ್ರಸ್ತಾಪಿಸುತ್ತಾ, ತಾಯಿಯ ಹಕ್ಕು ತೀರಿತೇ ಎಂದು ಕೇಳಿದಾಗ ಅವರು ಹೀಗೆಂದರು- ಇಲ್ಲ, ನಿನ್ನನ್ನು ಹಡೆಯುವ ಹೊತ್ತಿನಲ್ಲಿ ಆಕೆ ಮಾಡಿದ ಪ್ರಥಮ ಚೀತ್ಕಾರದ ಹಕ್ಕೂ ಸಂದಾಯವಾಗಲಿಲ್ಲ.

ಇಲ್ಲಿ, ಪ್ರವಾದಿಯವರ(ಸ) ಕಾಲದಲ್ಲಿ ನಡೆದ ಪಾಠ ಬೋಧಕ ಘಟನೆಯನ್ನು ಪ್ರಸ್ತಾಪಿಸುವುದು ಸೂಕ್ತವೆನಿಸುತ್ತದೆ. ಓರ್ವ ಯುವಕನಿಗೆ ಮರಣಾಸನ್ನವಾದಾಗ ಅವನ ಬಾಯಿಯಿಂದ ಪವಿತ್ರ ವಚನ (ಲಾ ಇಲಾಹ ಇಲ್ಲಲ್ಲಾಹ್) ಹೊರಡುತ್ತಿರಲಿಲ್ಲ. ಜನರಿಗೆ ಬಹಳ ಚಿಂತೆ ಹತ್ತಿತು. ವಿಷಯ ಪ್ರವಾದಿಯವರ(ಸ) ಬಳಿಗೂ ತಲಪಿತು. ಪ್ರವಾದಿ(ಸ) ಆತನ ಬಳಿಗೆ ಹೋದರು. ಅವನ ತಂದೆ ತಾಯಿಗಳಿದ್ದಾರೆಯೇ ಎಂದು ಕೇಳಿದಾಗ ತಾಯಿ ಮಾತ್ರ ಇದ್ದಾಳೆಂದು ತಿಳಿಯಿತು. ಆ ವಯೋವೃದ್ಧೆ ಮಾತೆಯನ್ನು ಕರೆಸಿ 'ನಿಮ್ಮ ಮಗ ಹೇಗೆ' ಎಂದು ಕೇಳಿದರು. ಆ ಮಾತೆ ಹೀಗೆ ಉತ್ತರಿಸಿದರು- 'ನನ್ನ ಮಗ ಬಹಳ ಒಳ್ಳೆಯವ. ಆದರೆ ಅವನ ಮದುವೆಯಾದಂದಿನಿಂದ ನನ್ನ ಕಡೆಗೆ ಗಮನ ಕೊಡುವುದಿಲ್ಲ. ನಾನು ಈ ಪ್ರಾಯದಲ್ಲೂ ದುಡಿದು ಸಂಪಾದಿಸಿ ದಿನ ದೂಡುತ್ತಿದ್ದೇನೆ.' ಪ್ರವಾದಿಯವರು(ಸ) ಆಕೆಯೊಡನೆ, ಅವನ ತಪ್ಪುಗಳನ್ನು ಕ್ಷಮಿಸಿಬಿಡುವಂತೆ ಹೇಳಿದಾಗ, ಆಕೆ ಖಡಾ ಖಂಡಿತ ನಿರಾಕರಿಸುತ್ತಾ ಖಂಡಿತ ಕ್ಷಮಿಸಲಾರೆ, ನನಗೆ ತುಂಬಾ ದುಃಖ ಕೊಟ್ಟಿದ್ದಾನೆಂದು ಹೇಳಿದರು. ಆಗ ಪ್ರವಾದಿ(ಸ) ತಮ್ಮ ಅನುಯಾಯಿಗಳಿಗೆ ಒಂದು ಅಗ್ನಿ ಕುಂಡ ತಯಾರಿಸಿ ಅದರಲ್ಲಿ ಆತನನ್ನು ಹಾಕಿ ಸುಟ್ಟು ಬಿಡುವಂತೆ

ಆಜ್ಞಾಪಿಸಿದರು. ಆಗ ಆ ವಯೋವೃದ್ಧೆ ಅವನು ಬೆಂಕಿಯಲ್ಲಿ ಸುಟ್ಟು ಹೋಗುವುದನ್ನು ನಾನು ಹೇಗೆ ನೋಡಲಿ ಎಂದು ಕೇಳಿದರು. ಪ್ರವಾದಿ(ಸ) ಹೇಳಿದರು- ಈಗ ಇಲ್ಲಿ ಕ್ಷಮಿಸದಿದ್ದರೆ ಅಲ್ಲಿಯ (ನರಕದ) ಬೆಂಕಿಯಲ್ಲಿ ಉರಿಯುವನು. ಆಗ ಆ ಮಾತೆ ಅವನ ತಪ್ಪನ್ನು ಕ್ಷಮಿಸಿ ಬಿಟ್ಟರು. ಆಕೆ ಕ್ಷಮಿಸಿದ್ದೇ ತಡ, ಮಗನ ಬಾಯಿಯಿಂದ ಪವಿತ್ರ ವಚನ ಹೊರಟಿತು. ಮರುಕ್ಷಣದಲ್ಲೇ ಆತ ಪ್ರಾಣ ಬಿಟ್ಟ. ಅಲ್ಲಾಹನು ತಮ್ಮೊಂದಿಗೂ ಹಾಗೆ ಮಾಡಬಲ್ಲನು ಎಂದು ಅವಿಧೇಯ ಮಕ್ಕಳಿಗೆ ತಿಳಿಸುವ ಸಲುವಾಗಿ ಇಂತಹ ಘಟನೆಗಳು ನಡೆಯುತ್ತಲೇ ಇರುತ್ತವೆ. ಅಲ್ಲಾಹನ ಸಹನೆಯ ದುರುಪಯೋಗ ಪಡೆಯಬಾರದು.

ಹೆತ್ತವರ ಮರಣೋತ್ತರ ಹಕ್ಕುಗಳು

(89) عَنْ أَبِي أُسَيْدٍ السَّاعِدِيِّ رض قَالَ بَيْنَا نَحْنُ عِنْدَ رَسُولِ اللهِ صَلَّى اللهُ عَلَيْهِ وَسَلَّمَ إِذْ جَاءَهُ رَجُلٌ مِنْ بَنِي سَلِمَةَ فَقَالَ يَا رَسُولَ اللهِ هَلْ بَقِيَ مِنْ أَبَوَيَّ شَيْءٌ أَبَرُّهُمَا بِهِ بَعْدَ مَوْتِهِمَا؟ قَالَ نَعَمْ الصَّلٰوةُ عَلَيْهِمَا وَالْاِسْتِغْفَارُ لَهُمَا وَإِنْفَاذُ عَهْدِهِمَا مِنْ بَعْدِهِمَا وَصِلَةُ الرَّحِمِ الَّتِي لَا تُوصَلُ إِلَّا بِهِمَا وَإِكْرَامُ صَدِيقِهِمَا

(ابوداؤد)

ಅಬೂ ಉಸೈದ್ ಸಾಇದೀ(ರ) ಹೇಳುತ್ತಾರೆ- ನಾವು ಪ್ರವಾದಿವರ್ಯರ(ಸ) ಬಳಿ ಕುಳಿತಿದ್ದೆವು. ಅಷ್ಟರಲ್ಲಿ ಬನೂ ಸಲ್ಮಾ ಗೋತ್ರದ ಓರ್ವ ವ್ಯಕ್ತಿ ಬಂದು, "ಅಲ್ಲಾಹನ ಸಂದೇಶವಾಹಕರೇ(ಸ)! ತಂದೆ- ತಾಯಿಗಳು ಸತ್ತ ಬಳಿಕ ನಾನು ಅವರಿಗೆ ಸಲ್ಲಿಸಬೇಕಾದ ಋಣವೇನಾದರೂ ಬಾಕಿ ಇರುತ್ತದೆಯೇ?" ಎಂದು ಪ್ರಶ್ನಿಸಿದರು.

ಪ್ರವಾದಿ(ಸ) ಹೇಳಿದರು:

"ಹೌದು, ನೀನು ಅವರಿಗಾಗಿ 'ದುಆ' ಮಾಡಬೇಕು. ಅವರ ಕ್ಷಮೆಗಾಗಿ ಪ್ರಾರ್ಥಿಸಬೇಕು. ಅವರು ತಮ್ಮ ವಸಿಯ್ಯತ್‌ನಲ್ಲಿ(ಉಯಿಲಿನಲ್ಲಿ) ಹೇಳಿದ ಅಂಶಗಳ ಪೈಕಿ ಧರ್ಮ ಸಮ್ಮತವಾದ ಎಲ್ಲ ಅಂಶಗಳನ್ನು ಪೂರ್ತಿಗೊಳಿಸಬೇಕು. ಅವರ ಬಂಧುಗಳೊಂದಿಗೆ ಅತ್ಯುತ್ತಮವಾಗಿ ವರ್ತಿಸಬೇಕು. ಅವರ ಗೆಳೆಯ-ಗೆಳತಿಯರನ್ನು ಗೌರವಿಸಬೇಕು."

[ಅಬೂ ದಾವೂದ್]

ಸ್ತನಪಾನ ಸಂಬಂಧಿ ತಾಯಿಯ ಹಕ್ಕು

(90) عَنْ أَبِي الطُّفَيْلِ قَالَ رَأَيْتُ النَّبِيَّ صَلَّى اللهُ عَلَيْهِ وَسَلَّمَ يَقْسِمُ لَحْمًا بِالْجِعْرَانَةِ
إِذْ أَقْبَلَتْ امْرَأَةٌ حَتَّى دَنَتْ إِلَى النَّبِيِّ صَلَّى اللهُ عَلَيْهِ وَسَلَّمَ فَبَسَطَ لَهَا رِدَاءَهُ
فَجَلَسَتْ عَلَيْهِ، فَقُلْتُ مَنْ هِيَ؟ قَالُوا هِيَ أُمُّهُ الَّتِي أَرْضَعَتْهُ (ابوداؤد)

ಅಬೂ ತುಫೈಲ್(ರ) ಹೇಳುತ್ತಾರೆ- ಪ್ರವಾದಿವರ್ಯರು(ಸ) ಜಿಲ್‌ರಾನಃ ಎಂಬಲ್ಲಿ ಜನರಿಗೆ ಮಾಂಸ ವಿತರಣೆ ಮಾಡುವುದರಲ್ಲಿ ನಿರತರಾಗಿದ್ದರು. ಅಷ್ಟರಲ್ಲಿ ಎಲ್ಲಿಂದಲೋ ಒಬ್ಬ ಸ್ತ್ರೀ ಬಂದರು. ಅವರು ಪ್ರವಾದಿವರ್ಯರ(ಸ) ಹತ್ತಿರ ಬಂದಾಗ ಪ್ರವಾದಿ(ಸ) ತಮ್ಮ ಶಾಲನ್ನು ನೆಲದಲ್ಲಿ ಹಾಸಿ ಆಕೆಯನ್ನು ಅದರಲ್ಲಿ ಕುಳ್ಳಿರಿಸಿದರು. (ಪ್ರವಾದಿಯಿಂದ ಇಷ್ಟು ದೊಡ್ಡ ಗೌರವಕ್ಕೆ ಪಾತ್ರರಾದ) ಈ ಮಹಿಳೆ ಯಾರು? ಎಂದು ನಾನು ಕೇಳಿದೆ. ಅವರು ಪ್ರವಾದಿ ವರ್ಯರಿಗೆ(ಸ) ಬಾಲ್ಯದಲ್ಲಿ ಎದೆ ಹಾಲುಣಿಸಿದ ಮಹಿಳೆ [ಬನೀಸಅದ್ ಗೋತ್ರದ ಹಲೀಮಾ(ರ)] ಎಂದು ನನಗೆ ತಿಳಿಸಲಾಯಿತು. *[ಅಬೂ ದಾವೂದ್]*

ಪರಧರ್ಮೀಯ ಹೆತ್ತವರು

(91) عَنْ أَسْمَاءَ بِنْتِ أَبِي بَكْرٍ قَالَتْ قَدِمَتْ عَلَيَّ أُمِّي وَهِيَ مُشْرِكَةٌ فِي عَهْدِ
قُرَيْشٍ قُلْتُ يَا رَسُولَ اللهِ إِنَّ أُمِّي قَدِمَتْ عَلَيَّ وَهِيَ رَاغِبَةٌ أَفَأَصِلُهَا؟ قَالَ نَعَمْ
صِلِيهَا (بخاری، مسلم)

ಅಬೂಬಕರ್‌ರ(ರ) ಪುತ್ರಿ ಅಸ್ಮಾ(ರ) ಹೇಳುತ್ತಾರೆ- ಹುದೈಬಿಯಾ ಸಂಧಿಯ ಕಾಲದಲ್ಲಿ ನನ್ನ ಮಾತೆ ನನ್ನ ಬಳಿಗೆ ಬಂದರು. ಆಗ ಆಕೆ ಬಹುದೇವಾರಾಧಕರಾಗಿದ್ದರು. ಆಗಿನ್ನೂ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿರಲಿಲ್ಲ. ನಾನು ಪ್ರವಾದಿವರ್ಯರೊಡನೆ(ಸ), "ಅಲ್ಲಾಹನ ಸಂದೇಶವಾಹಕರೇ! ನನ್ನ ಬಹುದೇವಾರಾಧಕ ತಾಯಿ ನನ್ನ ಬಳಿಗೆ ಬಂದಿರುವರು. ನಾನು ಅವರಿಗೇನಾದರೂ ಕೊಡಬೇಕೆಂದು ಆಕೆ ಅಪೇಕ್ಷಿಸುತ್ತಾರೆ. ನಾನು ಆಕೆಗೆ ಏನಾದರೂ ಕೊಡಬಹುದೇ?" ಎಂದು ವಿಚಾರಿಸಿದೆ. ಪ್ರವಾದಿ(ಸ) ಹೇಳಿದರು, "ಅವರೊಂದಿಗೆ ಅತ್ಯುತ್ತಮವಾದ ಬಂಧುತ್ವದ ವರ್ತನೆಯನ್ನು ತೋರಿಸು. ಅವರಿಗೆ ಏನೆಲ್ಲಾ ನೀಡಲು ಸಾಧ್ಯವೋ ಅದೆಲ್ಲವನ್ನೂ ನೀಡು." *[ಬುಖಾರಿ, ಮುಸ್ಲಿಮ್]*

ಟಿಪ್ಪಣಿ: ಮಕ್ಕಾದಲ್ಲಿ ಅವತೀರ್ಣವಾದ ಪವಿತ್ರ ಕುರ್‌ಆನಿನ ಅಧ್ಯಾಯಗಳಲ್ಲಿ ಹೆತ್ತವರೊಂದಿಗೆ ಅತ್ಯುತ್ತಮವಾಗಿ ವರ್ತಿಸಬೇಕೆಂದು ಆಜ್ಞಾಪಿಸಲಾಗಿದೆ. ಈ ವಿಷಯದಲ್ಲಿ ಮುಸ್ಲಿಮ್ ಹೆತ್ತವರು ಮತ್ತು ಮುಸ್ಲಿಮೇತರ ಹೆತ್ತವರ ನಡುವೆ ಯಾವುದೇ ರೀತಿಯ ತಾರತಮ್ಯ ಮಾಡಲಾಗಿಲ್ಲ. ಇಬ್ಬರೂ ಸಮಾನ ರೀತಿಯ ಸದ್ವರ್ತನೆಗೆ ಅರ್ಹರು. ಸೂರಃ ಲುಕ್ಮಾನ್‌ನಲ್ಲಿ ಹೀಗಿದೆ:

"ಅವರು (ಹೆತ್ತವರು) ಬಹುದೇವಾರಾಧನೆ ಮಾಡುವಂತೆ ನಿನ್ನ ಮೇಲೆ ಒತ್ತಡ ಹಾಕಿದರೆ (ಆ ವಿಷಯದಲ್ಲಿ) ಅವರ ಅನುಸರಣೆ ಮಾಡಬೇಡ. ಆದರೆ ಈ ಲೋಕದಲ್ಲಿ (ಇತರೆಲ್ಲ ವಿಷಯಗಳಲ್ಲಿ) ಅವರೊಂದಿಗೆ ಅತ್ಯುತ್ತಮ ರೀತಿಯಲ್ಲಿ ವ್ಯವಹರಿಸುತ್ತಲಿರು." (31:15)

ಚಿಕ್ಕಮ್ಮನ ಸೇವೆ

(92) عَنِ ابْنِ عُمَرَ رض قَالَ: اَتٰى رَسُوْلَ اللّٰهِ صَلَّى اللّٰهُ عَلَيْهِ وَسَلَّمَ رَجُلٌ فَقَالَ يَا رَسُوْلَ اللّٰهِ لَقَدْ اَذْنَبْتُ ذَنْبًا كَبِيْرًا فَهَلْ لِّيْ مِنْ تَوْبَةٍ؟ فَقَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اَلَكَ وَالِدَانِ؟ قَالَ لَا، قَالَ فَلَكَ خَالَةٌ؟ قَالَ نَعَمْ، قَالَ فَبِرَّهَا اِذًا

ಅಬ್ದುಲ್ಲಾ ಬಿನ್ ಉಮರ್(ರ) ಹೇಳುತ್ತಾರೆ- ಒಬ್ಬ ವ್ಯಕ್ತಿ ಪ್ರವಾದಿ ಮುಹಮ್ಮದ್‌ರ(ಸ) ಬಳಿ ಬಂದು, "ಅಲ್ಲಾಹನ ಸಂದೇಶ ವಾಹಕರೇ! ನನ್ನಿಂದ ಒಂದು ಮಹಾಪಾಪ ಸಂಭವಿಸಿ ಹೋಗಿದೆ. ಆ ಪಾಪ ಭಾರದಿಂದ ಹೊರ ಬರಲು ತೌಬಾ(ಪಶ್ಚಾತ್ತಾಪ ಹಾಗೂ ಪ್ರಾಯಶ್ಚಿತ್ತ)ದ ಪ್ರಾಯೋಗಿಕ ವಿಧಾನವೇನಾದರೂ ಉಂಟೇ" ಎಂದು ಕೇಳಿದನು.

ಪ್ರವಾದಿವರ್ಯರು(ಸ) ಆತನೊಡನೆ, "ನಿನ್ನ ತಂದೆ-ತಾಯಿ ಜೀವಂತ ಇದ್ದಾರೆಯೇ?" ಎಂದು ಕೇಳಿದರು. ಆತ 'ಇಲ್ಲ' ಎಂದಾಗ, "ನಿನ್ನ ಚಿಕ್ಕಮ್ಮ ಬದುಕಿದ್ದಾಳೆಯೇ?" ಎಂದು ಕೇಳಿದರು. ಆತ 'ಹೌದು' ಎಂದು ಉತ್ತರಿಸಿದಾಗ ಪ್ರವಾದಿ(ಸ) ಹೇಳಿದರು:

"ಹೋಗು, ಅವಳ ಸೇವೆ ಮಾಡು."

ಟಿಪ್ಪಣಿ: ಸಾಮಾನ್ಯವಾಗಿ ತೌಬಾದ ವಿಧಾನ ಹೇಗೆಂದರೆ, ಮನುಷ್ಯನು ತಾನು ಮಾಡಿದ ತಪ್ಪನ್ನು ತಪ್ಪೆಂದು ಒಪ್ಪಿಕೊಂಡು ಆ ಬಗ್ಗೆ ಮನಸಾರೆ ಪಶ್ಚಾತ್ತಾಪ ಪಟ್ಟು, ಪರಿತಪಿಸಿ ಅಲ್ಲಾಹನಿಂದ ಕ್ಷಮೆ ಯಾಚಿಸಬೇಕು. ಇಲ್ಲಿ ಪ್ರವಾದಿವರ್ಯರು(ಸ) ಹೆತ್ತವರ ಸೇವೆ ಅಥವಾ ಚಿಕ್ಕಮ್ಮನ ಸೇವೆ ಕೂಡಾ ಪಾಪ ವಿಮೋಚನೆಯ ದಾರಿಯೆಂದು ತಿಳಿಸಿರುವರು.

ಗುರುವಿಗೆ ಗೌರವ

(93) عَنْ أَبِي هُرَيْرَةَ قَالَ، قَالَ رَسُولُ اللّٰهِ صَلَّى اللّٰهُ عَلَيْهِ وَسَلَّمَ تَعَلَّمُوا الْعِلْمَ وَتَعَلَّمُوا لِلْعِلْمِ السَّكِينَةَ وَالْوَقَارَ (المنذري بحوالہ الطبرانی)

ಅಬೂ ಹುರೈರಾ(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು: "ಧರ್ಮ ಜ್ಞಾನವನ್ನು ಸಂಪಾದಿಸಿರಿ. ಜ್ಞಾನಕ್ಕಾಗಿ ಘನತೆ ಮತ್ತು ಗಾಂಭೀರ್ಯವನ್ನು ಕಲಿಯಿರಿ. ಯಾರಿಂದ ಜ್ಞಾನ ಕಲಿಯುವಿರೋ ಅವರೊಂದಿಗೆ ವಿನಯದಿಂದ ವರ್ತಿಸಿರಿ." *[ಅಲ್‌ಮುಂದಿರೀ, ತಬ್ರಾನಿ]*

ಟಿಪ್ಪಣಿ: ವಿದ್ವಾಂಸರ ಅಭಿಪ್ರಾಯದಂತೆ ಧರ್ಮದಲ್ಲಿ ಗೌರವದ ಪ್ರಥಮ ಸ್ಥಾನ ಅಲ್ಲಾಹನಿಗೆ. ಮಾನವರ ಪೈಕಿ ಅತಿ ಹೆಚ್ಚಿನ ಗೌರವಕ್ಕೆ ಅರ್ಹರಾದವರು ಪ್ರವಾದಿ ಮುಹಮ್ಮದ್(ಸ). ಅವರ ಬಳಿಕ ಹೆತ್ತವರು. ಹೆತ್ತವರ ಅನಂತರ ಅತ್ಯಂತ ಗೌರವಾರ್ಹರೆಂದರೆ ಶಿಕ್ಷಕರು. ಏಕೆಂದರೆ ಹೆತ್ತವರು ಶರೀರದ ನಿರ್ಮಾತೃಗಳಾದರೆ ಶಿಕ್ಷಕರು ಮನುಷ್ಯನ ಧರ್ಮ ಮತ್ತು ಚಾರಿತ್ರ್ಯದ ನಿರ್ಮಾತೃಗಳಾಗಿದ್ದಾರೆ.

ಏಕಪಕ್ಷೀಯ ಸದ್ವರ್ತನೆ

(94) عَنِ ابْنِ عُمَرَ قَالَ قَالَ رَسُولُ اللّٰهِ صلى الله عليه وسلم لَيْسَ الْوَاصِلُ بِالْمُكَافِئِ وَلٰكِنَّ الْوَاصِلَ الَّذِي إِذَا قُطِعَتْ وَصَلَهَا (بخاری)

ಅಬ್ದುಲ್ಲಾ ಬಿನ್ ಉಮರ್(ರ) ಹೇಳುತ್ತಾರೆ-

ಪ್ರವಾದಿ(ಸ) ಹೇಳಿದರು: "ಪ್ರತಿಯಾಗಿ ಸದ್ವರ್ತನೆ ತೋರುವವನು ನಿಜವಾದ ಸದ್ವರ್ತನೆ ತೋರುವವನಲ್ಲ. ತನ್ನ ಸಂಬಂಧಿಕರು ತನ್ನೊಂದಿಗೆ ಸದ್ವರ್ತನೆ ತೋರದೆ ಇರುವಾಗಲೂ ತಾನು ಅವರೊಂದಿಗೆ ಸದ್ವರ್ತನೆ ತೋರುವಾತನೇ ನಿಜವಾದ ಸದ್ವರ್ತನೆ ತೋರುವವನು." *[ಬುಖಾರಿ]*

ಟಿಪ್ಪಣಿ: ತನ್ನ ಸಂಬಂಧಿಕರು ತನ್ನೊಂದಿಗೆ ಚೆನ್ನಾಗಿ ವರ್ತಿಸಿದರೆ ಮಾತ್ರ ತಾನೂ ಅವರೊಂದಿಗೆ ಸರಿಯಾಗಿ ವರ್ತಿಸುತ್ತೇನೆ ಎಂಬ ನೀತಿಯಲ್ಲಿ ವಿಶೇಷತೆಯೇನೂ ಇಲ್ಲ. ತನ್ನ ಸಂಬಂಧಿಕರು ತನ್ನಿಂದ ದೂರವಾದಾಗ ತಾನು ಅವರಿಗೆ ನಿಕಟವಾಗುವುದು, ಅವರು ತನ್ನ ಹಕ್ಕುಗಳನ್ನು ನೀಡದೆ ಇರುವಾಗ ತಾನು ಅವರಿಗೆ ಅವರ ಹಕ್ಕುಗಳನ್ನು ನೀಡುವುದು ಉನ್ನತ ಮಟ್ಟದ ಸದ್ವರ್ತನೆಯಾಗಿದೆ. ಇದು ಅತ್ಯುನ್ನತ ಮಟ್ಟದ (ಧರ್ಮನಿಷ್ಠೆಯ) ಹೊರತು ಸಾಧ್ಯವಿಲ್ಲ.

ದುರ್ವರ್ತನೆಗೆ ಸದ್ವರ್ತನೆ

(95) عَنْ أَبِي هُرَيْرَةَ قَالَ إِنَّ رَجُلًا قَالَ يَا رَسُولَ اللّٰهِ إِنَّ لِي قَرَابَةً أَصِلُهُمْ وَيَقْطَعُونَنِي وَأُحْسِنُ إِلَيْهِمْ وَيُسِيئُونَ إِلَيَّ وَأَحْلُمُ عَنْهُمْ وَيَجْهَلُونَ عَلَيَّ، فَقَالَ لَئِنْ كُنْتَ كَمَا قُلْتَ فَكَأَنَّمَا تُسِفُّهُمُ الْمَلَّ، وَلَا يَزَالُ مَعَكَ مِنَ اللّٰهِ ظَهِيرٌ عَلَيْهِمْ مَا دُمْتَ عَلَى ذٰلِكَ (مسلم)

ಅಬೂ ಹುರೈರಾ(ರ) ಹೇಳುತ್ತಾರೆ- ಒಮ್ಮೆ ಒಬ್ಬ ವ್ಯಕ್ತಿ ಪ್ರವಾದಿವರ್ಯರ(ಸ) ಬಳಿ ಬಂದು ಹೀಗೆಂದನು:

"ಅಲ್ಲಾಹನ ಸಂದೇಶವಾಹಕರೇ(ಸ)! ನನಗೆ ಕೆಲವು ಸಂಬಂಧಿಕರು ಇದ್ದಾರೆ. ಅವರ ಬಗ್ಗೆ ನನಗಿರುವ ಬಾಧ್ಯತೆಯನ್ನು ನಾನು ತೀರಿಸುತ್ತೇನೆ. ಆದರೆ ಅವರು ತೀರಿಸುವುದಿಲ್ಲ. ನಾನು ಅವರೊಂದಿಗೆ ಸದ್ವರ್ತನೆ ತೋರುತ್ತೇನೆ. ಅವರು ನನ್ನೊಂದಿಗೆ ದುರ್ವರ್ತನೆ ತೋರುತ್ತಾರೆ. ನಾನು ಅವರೊಂದಿಗೆ ಅತ್ಯಂತ ಸಹನೆ ಸಂಯಮಯಿಂದ ವರ್ತಿಸುತ್ತೇನೆ. ಅವರು ನನ್ನ ಜೊತೆ ಬಹಳ ಒರಟಾಗಿ ಹಾಗೂ ಅಸಭ್ಯವಾಗಿ ವರ್ತಿಸುತ್ತಾರೆ.

ಇದನ್ನು ಕೇಳಿ ಪ್ರವಾದಿ(ಸ) ಹೇಳಿದರು:

"ಒಂದು ವೇಳೆ ನಿಜಕ್ಕೂ ನೀನೀಗ ವರ್ಣಿಸಿದಂತೆಯೇ ಇರುವೆಯೆಂದಾದರೆ ನಿನ್ನ ಈ ಸದ್ವರ್ತನೆಯ ಮೂಲಕ ನೀನು ಅವರ ಮುಖಕ್ಕೆ ಮಸಿ ಬಳಿಯುತ್ತಿರುವೆ ಮತ್ತು ನೀನು ನಿನ್ನ ಈ ನೀತಿಯನ್ನು ಪಾಲಿಸುತ್ತಿರುವಷ್ಟು ಕಾಲ ಅಲ್ಲಾಹನು ಆ ಜನರ ವಿರುದ್ಧ ನಿನಗೆ ಸಹಾಯ ಮಾಡುತ್ತಲೇ ಇರುವನು." [ಮುಸ್ಲಿಮ್]

ಮಕ್ಕಳ ತರಬೇತಿ

(96) عَنِ ابْنِ عَبَّاسٍ عَنِ النَّبِيِّ صَلَّى اللّٰهُ عَلَيْهِ وَسَلَّمَ قَالَ أَكْرِمُوا أَوْلَادَكُمْ وَأَحْسِنُوا أَدَبَهُمْ (ابن ماجه)

ಅಬ್ದುಲ್ಲಾ ಬಿನ್ ಅಬ್ಬಾಸ್(ರ) ವರದಿ ಮಾಡುತ್ತಾರೆ- ಪ್ರವಾದಿ(ಸ) ಹೇಳಿದರು: "ನಿಮ್ಮ ಮಕ್ಕಳ ಜೊತೆ ಬಹಳ ವಾತ್ಸಲ್ಯದಿಂದ ವರ್ತಿಸಿರಿ ಮತ್ತು ಅವರಿಗೆ ಅತ್ಯುತ್ತಮ ತರಬೇತಿ ನೀಡಿರಿ." [ಇಬ್ನು ಮಾಜಃ]

ಟಿಪ್ಪಣಿ: ಮುಸ್ಲಿಮ್ ಕುಟುಂಬದಲ್ಲಿ ಒಂದು ಮಗು ಜನಿಸಿದರೆ, ಅದರ ಕಿವಿಯಲ್ಲಿ ಅದಾನ್ ಹೇಳಬೇಕು. ಮಗುವಿನ ಕಿವಿಗೆ ಬೀಳುವ ಪ್ರಥಮ ಧ್ವನಿಯೇ ಏಕದೇವತ್ವ ಮತ್ತು ನಮಾಝ್‌ಗೆ ಸಂಬಂಧಿಸಿದ ಧ್ವನಿಯಾಗಿರಬೇಕು. ಇದು ಆ ಮಗುವಿನ ಪ್ರಥಮ ಹಕ್ಕು. ಎರಡನೆಯದಾಗಿ ಅದಕ್ಕೆ ಒಳ್ಳೆಯ ಹೆಸರಿಡಬೇಕು ಮತ್ತು ಸಾಧ್ಯವಿದ್ದರೆ 'ಅಕೀಕ' ಮಾಡಿಸಬೇಕು. ಮೂರನೆಯದಾಗಿ ಮಗುವು ತುಸು ಬೆಳೆದಾಗ ಅದಕ್ಕೆ ಅರ್ಥವಾಗುವಂತೆ ಸರಳವಾದ ಭಾಷೆ ಮತ್ತು ಶೈಲಿಯಲ್ಲಿ ಪ್ರವಾದಿಗಳ, ಸಹಾಬಿಗಳ, ಸತ್ಯಪ್ರಚಾರಕರ ಮತ್ತು ಇತರ ಸಜ್ಜನರ ಕಥೆಗಳನ್ನು ತಿಳಿಸಬೇಕು. ಇನ್ನೂ ಸ್ವಲ್ಪ ಬೆಳೆದಾಗ ನಿಮ್ಮ ಜೊತೆಯಲ್ಲಿ ಮಸೀದಿಗೆ ಕರೆದೊಯ್ಯಬೇಕು. ಮಸೀದಿಯಲ್ಲಿ ಮೌನವಾಗಿರುವಂತೆ ಬೋಧಿಸಬೇಕು. ಮಕ್ಕಳು ಮಸೀದಿಯಲ್ಲಿ ಏನಾದರೂ ತಪ್ಪು ಮಾಡಿದರೆ ಹಿರಿಯರು ಅವರನ್ನು ಗದರಿಸಬಾರದು. ಹಾಗೆ ಗದರಿಸಿದರೆ ಆ ಮಕ್ಕಳಿಗೆ ಮಸೀದಿಯ ಬಗ್ಗೆಯೇ ಜಿಗುಪ್ಸೆ ಉಂಟಾದೀತು. ಮಗುವಿಗೆ ಏಳು ವರ್ಷ ತುಂಬಿದಾಗ ಅವರಲ್ಲಿ ನಮಾಝ್‌ನ ಆಸಕ್ತಿ ಮೂಡಿಸಲು ಗರಿಷ್ಠ ಪ್ರಯತ್ನ ಮಾಡಬೇಕು. ವಿವಿಧ ರೀತಿಯಲ್ಲಿ ನಮಾಝ್‌ನ ಮಹತ್ವವನ್ನು ಮಗುವಿಗೆ ಮನವರಿಕೆ ಮಾಡಿಸಬೇಕು. ಹತ್ತು ವರ್ಷ ತುಂಬಿದ ಬಳಿಕವೂ ಮಗು ನಮಾಝ್ ನಿರ್ವಹಿಸದಿದ್ದರೆ ಲಘುವಾಗಿ ದಂಡಿಸಬೇಕು. ಗಾಯವಾಗುವಂತೆ ಹೊಡೆಯಬಾರದು. ಮುಖಕ್ಕಂತೂ ಯಾವ ಸ್ಥಿತಿಯಲ್ಲೂ ಹೊಡೆಯಬಾರದು. ಅದನ್ನು ಪ್ರವಾದಿ(ಸ) ವಿರೋಧಿಸಿರುವರು. ಹೀಗೆ ದಂಡಿಸುವುದರ ಉದ್ದೇಶ, ತಾನು ನಮಾಝ್ ನಿರ್ವಹಿಸದಿದ್ದರೆ ತನ್ನ ಹೆತ್ತವರ ಪ್ರೀತಿ, ವಾತ್ಸಲ್ಯ ತನಗೆ ಸಿಗಲಾರದು ಎಂದು ಮಗುವಿಗೆ ಮನವರಿಕೆ ಮಾಡಿಸುವುದು ಮಾತ್ರವಾಗಿದೆ.

(97) عَنْ سَعِيْدِ بْنِ الْعَاصِ اَنَّ رَسُوْلَ اللّٰهِ صَلَّى اللّٰهُ عَلَيْهِ وَسَلَّمَ قَالَ مَا نَحَلَ وَالِدٌ وَلَدَهٗ مِنْ نُحْلٍ اَفْضَلَ مِنْ اَدَبٍ حَسَنٍ (مشكوة جامع الاصول)

ಸಈದ್ ಬಿನ್ ಆಸ್(ರ) ಹೇಳುತ್ತಾರೆ- ಪ್ರವಾದಿ ಮುಹಮ್ಮದ್(ಸ) ಹೇಳಿದರು:

"ತಂದೆಯು ತನ್ನ ಮಕ್ಕಳಿಗೆ ಕೊಡುವ ಉಡುಗೊರೆಗಳ ಪೈಕಿ ಅತ್ಯುತ್ತಮ ಉಡುಗೊರೆ ಅವರಿಗೆ ಉತ್ತಮವಾದ ಶಿಕ್ಷಣ ಮತ್ತು ತರಬೇತಿಯಾಗಿದೆ."

[ಮಿಶ್ಕಾತ್, ಜಾಮಿಉಲ್ ಉಸೂಲ್. ಸಈದ್ ಬಿನ್ ಆಸ್(ರ)]

ಟಿಪ್ಪಣಿ: ಮೂಲದಲ್ಲಿ 'ವಾಲಿದ್' ಮತ್ತು 'ವಲದ್' ಎಂಬ ಪದಗಳಿದ್ದು ಅದನ್ನು ನಾವು ತಂದೆ ಮತ್ತು ಮಕ್ಕಳು ಎಂದು ಅನುವಾದಿಸಿದ್ದರೂ ಇಲ್ಲಿ 'ವಾಲಿದ್' ಎಂಬುದು ತಂದೆಯಂತೆ ತಾಯಿಗೂ ಅನ್ವಯಿಸುತ್ತದೆ ಮತ್ತು 'ವಲದ್' ಎಂಬುದು ಪುತ್ರರಿಗೂ ಪುತ್ರಿಗೂ ಅನ್ವಯವಾಗುತ್ತದೆ.

ಉತ್ತಮ ಸಂತಾನ

(98) عَنْ أَبِي هُرَيْرَةَ أَنَّ رَسُولَ اللّٰهِ صَلَّى اللّٰهُ عَلَيْهِ وَسَلَّمَ قَالَ إِذَا مَاتَ الْإِنْسَانُ انْقَطَعَ عَمَلُهُ إِلَّا مِنْ ثَلَاثٍ صَدَقَةٍ جَارِيَةٍ، أَوْ عِلْمٍ يُنْتَفَعُ بِهِ، أَوْ وَلَدٍ صَالِحٍ يَدْعُو لَهُ (مسلم)

ಅಬೂ ಹುರೈರಾ(ರ) ಹೇಳುತ್ತಾರೆ- ಪ್ರವಾದಿವರ್ಯರು(ಸ) ಹೇಳಿದರು:

"ಮನುಷ್ಯನು ಸಾಯುವಾಗ ಅವನ ಕರ್ಮಗಳ ಅವಧಿ ಮುಗಿದು ಬಿಡುತ್ತದೆ. ಆದರೆ ಮೂರು ವಿಧದ ಕರ್ಮಗಳ ಪುಣ್ಯ ಆತನ ಮರಣಾನಂತರವೂ ಆತನಿಗೆ ಸಿಗುತ್ತಲೇ ಇರುತ್ತದೆ. ಮೊದಲನೆಯದು ಅವನು ಮಾಡಿದ ಶಾಶ್ವತ ಸ್ವರೂಪದ ದಾನ, ಎರಡನೆಯದು ಅವನು ಜನರಿಗೆ ಬಿಟ್ಟು ಹೋದ ಉಪಯುಕ್ತವಾದ ವಿದ್ಯೆ, ಮೂರನೆಯದು ಅವನ ತರಬೇತಿಯ ಪರಿಣಾಮವಾಗಿ ಸಜ್ಜನರಾಗಿ ಬೆಳೆದು ತಮ್ಮ ಹೆತ್ತವರಿಗಾಗಿ ಪ್ರಾರ್ಥಿಸುವ ಮಕ್ಕಳು."

[ಮುಸ್ಲಿಮ್]

ಟಿಪ್ಪಣಿ: ಶಾಶ್ವತ ಸ್ವರೂಪದ ದಾನವೆಂದರೆ ಜನರಿಗೆ ಬಹಳ ದೀರ್ಘ ಕಾಲದವರೆಗೆ ಪ್ರಯೋಜನ ಒದಗಿಸುತ್ತಲಿರುವಂತಹ ದಾನ. ಉದಾ: ಕಾಲುವೆ ನಿರ್ಮಾಣ, ಪ್ರಯಾಣಿಕರಿಗಾಗಿ ತಂಗುದಾಣಗಳ ನಿರ್ಮಾಣ, ಜನರಿಗೆ ನೆರಳೊದಗಿಸುವ ಮರಗಳನ್ನು ನೆಡುವುದು, ಮಸೀದಿ- ಮದ್ರಸಾಗಳ ನಿರ್ಮಾಣ, ಮಸೀದಿ- ಮದ್ರಸಾಗಳಿಗೆ ಕುರ್‌ಆನ್ ಮತ್ತು ಇತರ ಧಾರ್ಮಿಕ ಗ್ರಂಥಗಳನ್ನು ನಿತ್ಯ ಉಪಯೋಗಕ್ಕಾಗಿ ದಾನ ಮಾಡುವುದು, ವಿದ್ಯಾರ್ಥಿ ನಿಲಯಗಳ ನಿರ್ಮಾಣ ಇತ್ಯಾದಿ. ಇವುಗಳನ್ನು ದಾನ ಮಾಡಿದ ವ್ಯಕ್ತಿ ಮರಣ ಹೊಂದಿದ ಬಳಿಕವೂ ಈ ವಸ್ತುಗಳಿಂದ ಜನರಿಗೆ ಉಪಕಾರ ಆಗುತ್ತಿರುವ ತನಕ ಆತನಿಗೆ ಅದರ ಪುಣ್ಯವು ಸಿಗುತ್ತಲೇ ಇರುವುದು. ಇದೇ ರೀತಿ ಯಾರಿಗಾದರೂ ಧರ್ಮದ ವಿದ್ಯೆ ಕಲಿಸಿ ಆತನನ್ನು ವಿದ್ವಾಂಸನಾಗಿ ಮಾಡಿದರೆ ಅಥವಾ ಜನರಿಗೆ ಧರ್ಮದ ಜ್ಞಾನ ನೀಡುವ ಪುಸ್ತಕವನ್ನು ಬರೆದರೆ ಅದರ ಪುಣ್ಯವೂ ಮೃತ ದಾನಿಗೆ ಸಿಗುತ್ತಾ ಇರುವುದು. ಹಾಗೆಯೇ ಒಬ್ಬ ವ್ಯಕ್ತಿಯ ಪ್ರಯತ್ನಗಳಿಂದಾಗಿ ಅವನ ಮಕ್ಕಳು ಧರ್ಮನಿಷ್ಠರೂ ಸತ್ಯಸಂಧರೂ ಆದರೆ, ಅವರು ಸತ್ಕರ್ಮಗಳನ್ನು ಮಾಡುತ್ತಲಿರುವ ತನಕ ಆ ತಂದೆಗೆ ಪುಣ್ಯ ಸಿಗುತ್ತಲಿರುವುದು. ಅಲ್ಲದೆ ಅವರು, "ನಮ್ಮ ಪ್ರಭೂ! ಪುನರುತ್ಥಾನ ದಿನ ನನಗೂ ನನ್ನ ಹೆತ್ತವರಿಗೂ ಕ್ಷಮಾದಾನ ನೀಡು." ಅರ್ಥಾತ್ ಪುನರುತ್ಥಾನ ದಿನದಂದು ನನ್ನನ್ನೂ ನನ್ನ ಮಾತಾಪಿತರನ್ನೂ ನರಕಾಗ್ನಿಯಿಂದ ರಕ್ಷಿಸು ಎಂದು ಅಲ್ಲಾಹನೊಡನೆ ಪ್ರಾರ್ಥಿಸುತ್ತಲೂ ಇರುವರು.

ತಮ್ಮ ಮಕ್ಕಳ ಧಾರ್ಮಿಕ ತರಬೇತಿಯ ಬಗ್ಗೆ ನಿಶ್ಚಿಂತರಾಗಿರುವವರ ಮಟ್ಟಿಗೆ ಈ ಹದೀಸ್ ಒಂದು ಎಚ್ಚರಿಕೆಯಾಗಿದೆ. ಅವರು ತಮ್ಮ ಮಕ್ಕಳ ದುಆಗಳಿಂದ ವಂಚಿತರಾಗುವರು. ಅಲ್ಲದೆ, ಅವರ ಮಕ್ಕಳು ನಾಳೆ ಪರಲೋಕದಲ್ಲಿ ಅಲ್ಲಾಹನ ಮುಂದೆ, ನಮ್ಮ ತಂದೆ ನಮಗೆ ಸರಿಯಾದ ವಿದ್ಯೆಯನ್ನಾಗಲಿ ತರಬೇತಿಯನ್ನಾಗಲಿ ನೀಡದೆ ಇದ್ದುದರಿಂದಾಗಿ ನಾವು ದುಷ್ಟರಾಗಿ ಬೆಳೆದೆವು. ಆದ್ದರಿಂದ ನಮ್ಮ ದುಷ್ಟತೆಯ ಹೊಣೆಯನ್ನು ನಮ್ಮ ತಂದೆಯ ಮೇಲೆ ಹೊರಿಸಬೇಕು ಎಂದು ವಾದಿಸಬಹುದು.

ಹೆಣ್ಮಕ್ಕಳೊಂದಿಗೆ ಸದ್ವರ್ತನೆ

(99) عَنْ عَائِشَةَ قَالَتْ جَاءَتْنِي امْرَأَةٌ وَمَعَهَا ابْنَتَانِ لَهَا تَسْأَلُنِي، فَلَمْ تَجِدْ عِنْدِي غَيْرَ تَمْرَةٍ وَاحِدَةٍ، فَقَسَمَتْهَا بَيْنَ ابْنَتَيْهَا وَلَمْ تَأْكُلْ مِنْهَا، ثُمَّ قَامَتْ فَخَرَجَتْ فَدَخَلَ النَّبِيُّ صَلَّى اللهُ عَلَيْهِ وَسَلَّمَ فَحَدَّثْتُهُ، فَقَالَ مَنِ ابْتُلِيَ مِنْ هٰذِهِ الْبَنَاتِ بِشَيْءٍ فَأَحْسَنَ إِلَيْهِنَّ كُنَّ لَهُ سِتْرًا مِنَ النَّارِ (بخاری ومسلم)

ಆಯಿಶಾ(ರ) ಹೇಳುತ್ತಾರೆ:

"ಒಮ್ಮೆ ಓರ್ವ ಮಹಿಳೆ ತನ್ನ ಇಬ್ಬರು ಹೆಣ್ಣು ಮಕ್ಕಳೊಂದಿಗೆ ನನ್ನ ಬಳಿ ಏನನ್ನೋ ಬೇಡಲು ಬಂದರು (ಅವರು ಹಸಿದಿದ್ದರು). ಆಗ ನನ್ನ ಬಳಿ ಒಂದು ಖರ್ಜೂರದ ಹೊರತು ಬೇರೇನೂ ಇರಲಿಲ್ಲ. ನಾನು ಅದನ್ನೇ ಆಕೆಗೆ ಕೊಟ್ಟು ಬಿಟ್ಟೆ. ಆಕೆ ಅದನ್ನು ಎರಡು ಪಾಲು ಮಾಡಿ ತನ್ನಿಬ್ಬರು ಹೆಣ್ಮಕ್ಕಳಿಗೆ ತಿನ್ನಿಸಿದಳು. ಆಕೆ ಏನನ್ನೂ ತಿನ್ನಲಿಲ್ಲ. ಹೊರಟು ಹೋದ ಬಳಿಕ ಪ್ರವಾದಿವರ್ಯರು(ಸ) ಆಗಮಿಸಿದರು. ನಾನು ಅವರಿಗೆ ಈ ಘಟನೆಯನ್ನು ತಿಳಿಸಿದಾಗ ಅವರು ಹೇಳಿದರು:

"ಯಾರು ಈ ಹೆಣ್ಣು ಮಕ್ಕಳ ಮೂಲಕ ಪರೀಕ್ಷೆಗೆ ಒಳಗಾದನೋ ಮತ್ತು ಅವರೊಂದಿಗೆ ಅತ್ಯುತ್ತಮವಾಗಿ ವರ್ತಿಸಿದನೋ ಅವನ ಪಾಲಿಗೆ ಈ ಹೆಣ್ಣುಮಕ್ಕಳು ಅವನನ್ನು ನರಕಾಗ್ನಿಯಿಂದ ರಕ್ಷಿಸುವ ಕವಚಗಳಾಗುವರು." *[ಬುಖಾರಿ, ಮುಸ್ಲಿಮ್]*

ಟಿಪ್ಪಣಿ: ಮಿಶ್ಕಾತ್‌ನಲ್ಲಿ, ಅಬ್ದುಲ್ಲಾ ಬಿನ್ ಅಬ್ಬಾಸ್‌ರಿಂದ(ರ) ವರದಿ ಮಾಡಲಾದ ಒಂದು ಪ್ರವಾದಿ ವಚನದಲ್ಲಿ ಹೀಗಿದೆ:

"ಒಬ್ಬ ವ್ಯಕ್ತಿ ಮೂರು ಮಂದಿ ಹೆಣ್ಮಕ್ಕಳನ್ನು ಅಥವಾ ಮೂವರು ಸಹೋದರಿಯರನ್ನು ಸರಿಯಾಗಿ ಪೋಷಿಸಿ, ಅವರಿಗೆ ವಿದ್ಯೆ ಬುದ್ಧಿ ನೀಡಿ ಬೆಳೆಸಿ ಅವರು ವಯಸ್ಕರಾದಾಗ ಅವರಿಗೆ ವಿವಾಹ ಮಾಡಿಸಿದರೆ ಅಂತಹ ವ್ಯಕ್ತಿಗೆ ಸ್ವರ್ಗ ನೀಡುವುದನ್ನು ಅಲ್ಲಾಹನು ತನ್ನ ಮೇಲೆ ಕಡ್ಡಾಯಗೊಳಿಸಿರುವನು" ಎಂದು ಪ್ರವಾದಿ(ಸ) ಹೇಳಿದರು. ಆಗ ಒಬ್ಬ ವ್ಯಕ್ತಿ, "ಒಬ್ಬನಿಗೆ ಕೇವಲ ಇಬ್ಬರು ಹೆಣ್ಮಕ್ಕಳಿದ್ದರೆ ಹೇಗೆ?" ಎಂದು ಕೇಳಿದನು. "ಇಬ್ಬರು ಹೆಣ್ಮಕ್ಕಳನ್ನು ಪೋಷಿಸಿ, ಬೆಳೆಸಿ ಅವರಿಗೆ ಶಿಕ್ಷಣ ತರಬೇತಿ ನೀಡಿ ವಿವಾಹ ಮಾಡಿಸಿದರೂ ಇಷ್ಟೇ ಪುಣ್ಯ ಸಿಗುವುದು" ಎಂದು ಪ್ರವಾದಿ(ಸ) ಹೇಳಿದರು.

ಇಬ್ನು ಅಬ್ಬಾಸ್(ರ) ಹೇಳುತ್ತಾರೆ, "ಒಂದು ವೇಳೆ ಕೇವಲ ಒಂದು ಹೆಣ್ಣಿನ ಕುರಿತು ಕೇಳಿದ್ದರೆ ಪ್ರವಾದಿವರ್ಯರು(ಸ) ಇದೇ ಉತ್ತರ ಕೊಡುತ್ತಿದ್ದರು."

ಇದೇ ಹದೀಸ್‌ನಲ್ಲಿ ಮುಂದೆ ಹೀಗೆ ಹೇಳಲಾಗಿದೆ:

"ಅಲ್ಲಾಹನು ಯಾರಿಂದ ಎರಡು ಉತ್ತಮ ವಸ್ತುಗಳನ್ನು ಕಿತ್ತುಕೊಂಡನೋ ಆತನಿಗೆ ಸ್ವರ್ಗ ಕೊಡುವುದನ್ನು ಅಲ್ಲಾಹನು ತನ್ನ ಮೇಲೆ ಕಡ್ಡಾಯಗೊಳಿಸಿರುವನು" ಎಂದು ಪ್ರವಾದಿ(ಸ) ಹೇಳಿದರು. "ಎರಡು ಉತ್ತಮ ವಸ್ತುಗಳೆಂದರೇನು" ಎಂದು ಜನರು ವಿಚಾರಿಸಿದಾಗ, ಪ್ರವಾದಿ(ಸ) "ಎರಡು ಕಣ್ಣುಗಳು" ಎಂದು ಉತ್ತರಿಸಿದರು.

ಮಕ್ಕಳ ಮತ್ತು ಮನೆಮಂದಿಯ ತರಬೇತಿ

(100) عَنِ ابْنِ عُمَرَ أَنَّ النَّبِيَّ صَلَّى اللّٰهُ عَلَيْهِ وَسَلَّمَ قَالَ لَا يَسْتَرْعِي اللّٰهُ تَبَارَكَ وَتَعَالَى عَبْدًا رَعِيَّةً قَلَّتْ أَوْ كَثُرَتْ إِلَّا سَأَلَهُ اللّٰهُ تَبَارَكَ وَتَعَالَى عَنْهَا يَوْمَ الْقِيَامَةِ أَقَامَ فِيهَا أَمْرَ اللّٰهِ تَبَارَكَ وَتَعَالَى أَمْ أَضَاعَهُ حَتَّى يَسْأَلَهُ عَنْ أَهْلِ بَيْتِهِ خَاصَّةً (مسند احمد)

ಇಬ್ನು ಉಮರ್(ರ) ಹೇಳುತ್ತಾರೆ- ಪ್ರವಾದಿ ಮುಹಮ್ಮದ್(ಸ) ಹೇಳಿದರು:

"ಅಲ್ಲಾಹನು ಒಬ್ಬ ದಾಸನಿಗೆ ಕೆಲವರ ಮೇಲೆ ಅಧಿಕಾರ ಕೊಟ್ಟರೆ- ಅವನ ಅಧಿಕಾರಕ್ಕೆ ಅಧೀನವಾಗಿರುವವರು ಕಡಿಮೆ ಸಂಖ್ಯೆಯಲ್ಲಿದ್ದರೂ ಹೆಚ್ಚಿದ್ದರೂ- ಅವನು ಅವರ ಮೇಲೆ ಅಲ್ಲಾಹನ ಆದೇಶಗಳನ್ನು ಜಾರಿಗೊಳಿಸಿದ್ದನೋ ಅಥವಾ ನಿರ್ಲಕ್ಷ್ಯ ತೋರಿದ್ದನೋ ಎಂದು ಪರಲೋಕದಲ್ಲಿ ಅಲ್ಲಾಹನು ಅವನೊಡನೆ ವಿಚಾರಣೆ ಮಾಡದೆ ಇರಲಾರನು. ವಿಶೇಷವಾಗಿ ಅಲ್ಲಾಹನು ಅವನೊಡನೆ ಅವನ ಸ್ವಂತ ಕುಟುಂಬದ (ಪತ್ನಿ, ಮಕ್ಕಳು ಮತ್ತು ಆತನಿಂದ ಪೋಷಿಸಲ್ಪಡುವ ಇತರರ) ಕುರಿತು ವಿಚಾರಣೆ ನಡೆಸುವನು." *[ಮುಸ್ನದ್ ಅಹ್ಮದ್]*

ಟಿಪ್ಪಣಿ: ಮನುಷ್ಯನು ತನ್ನ ಮಡದಿ ಮಕ್ಕಳಿಗೆ ಮತ್ತು ತನ್ನ ಅಧೀನವಿರುವ ಇತರ ಬಂಧುಗಳಿಗೆ ಧರ್ಮವನ್ನು ಕಲಿಸಲು ಮತ್ತು ಅವರನ್ನು ಧರ್ಮನಿಷ್ಠರಾಗಿ ಮಾಡಲು ತನಗೆ ಸಾಧ್ಯವಿದ್ದಷ್ಟು ಪ್ರಯತ್ನ ಮಾಡಿದ್ದರೆ ಅವನು ಅಲ್ಲಾಹನ ನ್ಯಾಯಾಲಯದಲ್ಲಿ ವಿಜಯಿಯಾಗಬಹುದು. ಆದರೆ ಅವನು ಈ ವಿಷಯದಲ್ಲಿ ಅಸಡ್ಡೆ ತೋರಿದ್ದರೆ ಮತ್ತು ಅವರ ಸುಧಾರಣೆಯ ಬಗ್ಗೆ ಚಿಂತಿಸದೆ ಇದ್ದರೆ ಅಲ್ಲಿ ಭಾರೀ ಸಂಕಷ್ಟಕ್ಕೆ ಸಿಲುಕಿಕೊಳ್ಳುವನು. ವೈಯಕ್ತಿಕವಾಗಿ ಅವನು ಎಷ್ಟೇ ದೊಡ್ಡ ದೇವಭಕ್ತ ಹಾಗೂ ಧರ್ಮನಿಷ್ಠನಾಗಿದ್ದರೂ ತನ್ನ ಪ್ರಸ್ತುತ ಕರ್ತವ್ಯವನ್ನು ನಿರ್ಲಕ್ಷಿಸಿದ್ದರಿಂದ ಅವನ ಧರ್ಮನಿಷ್ಠೆಯು ಅಪೂರ್ಣವೆನಿಸುವುದು. ಸೂರಃ ಅಲ್ ಮಾಇದಃದ 105ನೇ ಸೂಕ್ತ ಮತ್ತು ಪ್ರವಾದಿ ಮುಹಮ್ಮದ್‌ರ(ಸ) ಅನೇಕ ವಚನಗಳು ಇದನ್ನು ಸಮರ್ಥಿಸುತ್ತವೆ.

ಸುನನ್ ಅಬೂ ದಾವೂದ್‌ನಲ್ಲಿ ದಾಖಲಿಸಲಾಗಿರುವ, ಅಬ್ದುಲ್ಲಾ ಬಿನ್ ಅಬ್ಬಾಸ್‌ರಿಂದ(ರ) ವರದಿ ಮಾಡಲಾದ ಒಂದು ಪ್ರವಾದಿ ವಚನ ಹೀಗಿದೆ:

"ಒಬ್ಬ ವ್ಯಕ್ತಿಯ ಮನೆಯಲ್ಲಿ ಒಂದು ಹೆಣ್ಣು ಮಗು ಜನಿಸಿ ಅವನು ಆ ಮಗುವನ್ನು ಜೀವಂತ ದಫನ ಮಾಡದೆ, ತಾತ್ಸಾರದಿಂದ ಕಾಣದೆ, ಅದಕ್ಕಿಂತ ಹೆಚ್ಚಿನ ಪ್ರಾಶಸ್ತ್ಯವನ್ನು ಗಂಡು ಮಕ್ಕಳಿಗೆ ನೀಡದೆ ಅದನ್ನು ಪೋಷಿಸಿದರೆ, ಅಲ್ಲಾಹನು ಆತನಿಗೆ ಸ್ವರ್ಗ ಪ್ರವೇಶ ನೀಡುವನು."

ನಿರಾಶ್ರಿತ ಮಗಳ ಪೋಷಣೆ

(101) عَنْ سُرَاقَةَ بْنِ مَالِكٍ رض اَنَّ النَّبِيَّ صَلَّى اللهُ عَلَيْهِ وَسَلَّمَ قَالَ اَلَا اَدُلُّكُمْ عَلَى اَفْضَلِ الصَّدَقَةِ اِبْنَتُكَ مَرْدُوْدَةً اِلَيْكَ لَيْسَ لَهَا كَاسِبٌ غَيْرُكَ

(ابن ماجہ)

ಸುರಾಕಾ ಬಿನ್ ಮಾಲಿಕ್(ರ) ಹೇಳುತ್ತಾರೆ- ಪ್ರವಾದಿ ಮುಹಮ್ಮದ್‌ರು(ಸ) ಹೇಳಿದರು: "ಅತ್ಯುತ್ತಮ ದಾನ ಯಾವುದೆಂದು ನಾನು ನಿಮಗೆ ತಿಳಿಸಲೇ? ನಿನ್ನ ಕಡೆಗೆ ಮರಳಿಸಲ್ಪಟ್ಟ ಮತ್ತು ನಿನ್ನ ಹೊರತು ಸಂಪಾದಿಸಿ ತರುವವರು ಯಾರೂ ಇಲ್ಲದಂತಹ ನಿನ್ನ ಮಗಳ ಪೋಷಣೆ ಮಾಡುವುದು ಅತ್ಯುತ್ತಮ ದಾನವಾಗಿದೆ."

[ಇಬ್ನು ಮಾಜಃ]

ಟಿಪ್ಪಣಿ: ತನ್ನ ರೂಪ ಅಥವಾ ಶರೀರದ ಯಾವುದಾದರೂ ದೋಷದ ಕಾರಣ ನಿಮ್ಮ ಮಗಳು ಅವಿವಾಹಿತಳಾಗಿಯೇ ಉಳಿದಿದ್ದರೆ ಅಥವಾ ವಿವಾಹದ ಬಳಿಕ ವಿಚ್ಛೇದಿತಳಾಗಿದ್ದರೆ ಮತ್ತು ಅವಳ ಖರ್ಚು ವೆಚ್ಚಗಳನ್ನು ಭರಿಸಲು ನಿಮ್ಮ ಹೊರತು ಬೇರಾರೂ ಇಲ್ಲದಿದ್ದರೆ ನೀವು ಅವಳಿಗಾಗಿ ಮಾಡುವ ಪ್ರತಿಯೊಂದು ಖರ್ಚನ್ನು ಅಲ್ಲಾಹನು ಅತ್ಯುತ್ತಮ ದಾನವೆಂದು ಪರಿಗಣಿಸುವನು. ಹದೀಸ್‌ನಲ್ಲಿ ಮಗಳ ಪ್ರಸ್ತಾಪವಿದೆ. ಆದರೆ ಸಹೋದರಿಯನ್ನು ಅವಳ ಸಹೋದರನು ಪೋಷಿಸುವುದಕ್ಕೂ ಇದೇ ನಿಯಮ ಅನ್ವಯವಾಗುತ್ತದೆ.

ಮಕ್ಕಳೊಂದಿಗೆ ಸಮಾನ ವರ್ತನೆ

(102) عَنِ النُّعْمَانِ بْنِ بَشِيْرٍ اَنَّ اَبَاهُ اَتٰى بِهٖ رَسُوْلَ اللّٰهِ صَلَّى اللّٰهُ عَلَيْهِ وَسَلَّمَ فَقَالَ اِنِّيْ نَحَلْتُ ابْنِيْ هٰذَا غُلَامًا كَانَ لِيْ، فَقَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اَكُلَّ وَلَدِكَ نَحَلْتَهُ مِثْلَ هٰذَا؟ فَقَالَ لَا، فَقَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ فَارْجِعْهُ، وَفِيْ رِوَايَةٍ فَقَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ أَفَعَلْتَ هٰذَا بِوَلَدِكَ كُلِّهِمْ؟ قَالَ لَا، قَالَ اِتَّقُوا اللّٰهَ وَاعْدِلُوْا فِيْ اَوْلَادِكُمْ فَرَجَعَ اَبِيْ فَرَدَّ تِلْكَ الصَّدَقَةَ، وَفِيْ رِوَايَةٍ قَالَ فَلَا تُشْهِدْنِيْ اِذًا، فَاِنِّيْ لَا اَشْهَدُ عَلٰى جَوْرٍ، وَفِيْ رِوَايَةٍ قَالَ اَيَسُرُّكَ اَنْ يَكُوْنُوْا اِلَيْكَ فِي الْبِرِّ سَوَاءً؟ قَالَ بَلٰى، قَالَ فَلَا اِذًا

(رياض الصالحين بحواله بخاري ومسلم)

ನುಅ್‌ಮಾನ್ ಬಿನ್ ಬಶೀರ್(ರ) ಹೇಳುತ್ತಾರೆ:

ಒಮ್ಮೆ ನನ್ನ ತಂದೆ (ಬಶೀರ್) ನನ್ನನ್ನು ಕರೆದುಕೊಂಡು ಪ್ರವಾದಿವರ್ಯರ(ಸ) ಬಳಿಗೆ ಹೋಗಿ, "ಅಲ್ಲಾಹನ ಸಂದೇಶವಾಹಕರೇ! ನನ್ನ ಬಳಿ ಒಬ್ಬ ಗುಲಾಮನಿದ್ದನು. ಆತನನ್ನು ನಾನು ಈ ನನ್ನ ಪುತ್ರ (ನುಅ್‌ಮಾನ್)ನಿಗೆ ಒಪ್ಪಿಸಿದ್ದೇನೆ. ಇದಕ್ಕೆ ತಾವು ಸಾಕ್ಷಿ" ಎಂದು ಹೇಳಿದರು.

"ನೀವು ನಿಮ್ಮ ಎಲ್ಲ ಪುತ್ರರಿಗೂ ಹೀಗೆ ಗುಲಾಮರನ್ನು ಕೊಟ್ಟಿದ್ದೀರಾ?" ಎಂದು ಪ್ರವಾದಿ(ಸ) ವಿಚಾರಿಸಿದರು. 'ಇಲ್ಲ' ಎಂದು ನನ್ನ ತಂದೆ ಉತ್ತರಿಸಿದಾಗ "ಹಾಗಾದರೆ ಗುಲಾಮನನ್ನು ಹಿಂದಕ್ಕೆ ಪಡೆದುಕೊಳ್ಳಿರಿ" ಎಂದು ಪ್ರವಾದಿಯವರು(ಸ) ಆದೇಶಿಸಿದರು.

ಇನ್ನೊಂದು ವರದಿಯ ಪ್ರಕಾರ ಆಗ ಪ್ರವಾದಿವರ್ಯರು(ಸ), "ನೀವು ನಿಮ್ಮ ಎಲ್ಲ ಪುತ್ರರೊಂದಿಗೂ ಇದೇ ರೀತಿಯ ವ್ಯವಹಾರ ಮಾಡಿದ್ದೀರಾ?" ಎಂದು ಕೇಳಿದರು. ಬಶೀರ್ 'ಇಲ್ಲ' ಎಂದು ಉತ್ತರಿಸಿದಾಗ- ಪ್ರವಾದಿ(ಸ) ಹೇಳಿದರು: "ಅಲ್ಲಾಹನನ್ನು ಭಯಪಡಿರಿ ಮತ್ತು ನಿಮ್ಮ ಎಲ್ಲ ಮಕ್ಕಳ ಜೊತೆ ಸಮಾನವಾಗಿ ವ್ಯವಹರಿಸಿರಿ." ಆ ಬಳಿಕ ನನ್ನ ತಂದೆ ಮನೆಗೆ ಬಂದು ಆ ಗುಲಾಮನನ್ನು ಹಿಂದಕ್ಕೆ ಪಡೆದುಕೊಂಡರು.

ಮತ್ತೊಂದು ವರದಿಯ ಪ್ರಕಾರ, "ಹಾಗಾದರೆ ನೀವು ನನ್ನನ್ನು ಸಾಕ್ಷಿಯಾಗಿ ಮಾಡಬೇಡಿ. ನಾನು ಅನ್ಯಾಯಕ್ಕೆ ಸಾಕ್ಷಿಯಾಗಲಾರೆ" ಎಂದು ಪ್ರವಾದಿ(ಸ) ಹೇಳಿದರು.

ಒಂದು ವರದಿಯಲ್ಲಿ ಹೀಗಿದೆ: "ನಿಮ್ಮ ಎಲ್ಲ ಮಕ್ಕಳೂ ನಿಮ್ಮೊಂದಿಗೆ ಸದ್ವರ್ತನೆ ತೋರಬೇಕೆಂದು ನೀವು ಅಪೇಕ್ಷಿಸುತ್ತೀರಾ?" ಎಂದು ಪ್ರವಾದಿ(ಸ) ವಿಚಾರಿಸಿದರು. 'ಹೌದು' ಎಂದು ಬಶೀರ್(ರ) ಉತ್ತರಿಸಿದರು. "ಹಾಗಾದರೆ ನೀವು ಈ ರೀತಿ ಮಾಡಬೇಡಿ" ಎಂದು ಪ್ರವಾದಿ(ಸ) ಹೇಳಿದರು.

[ರಿಯಾದುಸ್ಸಾಲಿಹೀನ್‌ನಲ್ಲಿ ಬುಖಾರಿ ಮತ್ತು ಮುಸ್ಲಿಮ್ ಗ್ರಂಥಗಳಿಂದ ಉದ್ಧೃತ]

ಟಿಪ್ಪಣಿ: ಈ ಹದೀಸ್‌ನಿಂದ ತಿಳಿಯುವುದೇನೆಂದರೆ, ತಮ್ಮ ಎಲ್ಲ ಮಕ್ಕಳ ಜೊತೆ ಸಮಾನವಾಗಿ ವ್ಯವಹರಿಸಬೇಕಾದುದು ಹೆತ್ತವರ ಕರ್ತವ್ಯವಾಗಿದೆ. ಮಕ್ಕಳ ಮಧ್ಯೆ ಪಕ್ಷಪಾತ ತೋರಿದರೆ ಮಕ್ಕಳ ಮನದಲ್ಲಿ ಪರಸ್ಪರರ ಬಗ್ಗೆ ದ್ವೇಷ, ಅಸೂಯೆಗಳು ಬೆಳೆಯುವ ಸಾಧ್ಯತೆಯಿರುತ್ತದೆ. ಹಾಗೆಯೇ ಹೆತ್ತವರು ಯಾವ ಮಕ್ಕಳ ವಿರುದ್ಧ ಪಕ್ಷಪಾತ ತೋರುವರೋ ಅವರ ಬಗ್ಗೆ ಮಕ್ಕಳ ಮನದಲ್ಲಿ ಜಿಗುಪ್ಸೆ ಹಾಗೂ ಹಗೆತನದ ಮನೋಭಾವ ಬೆಳೆಯಬಹುದು. ಮಕ್ಕಳ ಪೈಕಿ ಒಬ್ಬನು ಅಂಗವಿಕಲ ನಾಗಿದ್ದರೆ ಅಥವಾ ಇತರರಿಗಿಂತ ದುರ್ಬಲನಾಗಿದ್ದರೆ ಅವನೊಂದಿಗೆ ವಿಶೇಷ ರಿಯಾಯಿತಿಯ ವ್ಯವಹಾರ ಮಾಡಬಹುದು. ಹಾಗೆಯೇ ಒಬ್ಬ ಮಗನನ್ನು ಧಾರ್ಮಿಕ ಜ್ಞಾನಾರ್ಜನೆ ಅಥವಾ ಧರ್ಮ ಸೇವೆಗೆಂದೇ ಮೀಸಲು ಗೊಳಿಸಿದ್ದರೆ ಅವನೊಂದಿಗೆ ರಿಯಾಯಿತಿಯ ಧೋರಣೆ ಅನುಸರಿಸಬಹುದು.

ದುರ್ಬಲರ ಹಕ್ಕು

(103) عَنْ خُوَيْلِدِ بْنِ عَمْرٍو قَالَ: قَالَ رَسُولُ اللهِ صَلَّى اللهُ عَلَيْهِ وَسَلَّمَ
اَللّٰهُمَّ إِنِّي أُحَرِّجُ حَقَّ الضَّعِيفَيْنِ الْيَتِيمِ وَالْمَرْأَةِ (رياض الصالحين بحوالہ النسائی)

ಖುವೈಲಿದ್ ಬಿನ್ ಅಮ್ರ್(ರ) ಹೇಳುತ್ತಾರೆ- ಪ್ರವಾದಿ ಮುಹಮ್ಮದ್(ಸ) ಹೇಳಿದರು:

"ಓ ಅಲ್ಲಾಹ್! ನಾನು ಈ ಇಬ್ಬರು ದುರ್ಬಲರ (ಅನಾಥರು ಮತ್ತು ಸ್ತ್ರೀಯರು) ಹಕ್ಕುಗಳನ್ನು ಪವಿತ್ರವೆಂದು ಘೋಷಿಸುತ್ತೇನೆ."

[ರಿಯಾದುಸ್ಸಾಲಿಹೀನ್‌ನಲ್ಲಿ ನಸಾಈಯಿಂದ ಉದ್ಧೃತ]

ಟಿಪ್ಪಣಿ: ಪ್ರವಾದಿವರ್ಯರ(ಸ) ಮಾತಿನ ಈ ಶೈಲಿ ಎಷ್ಟೊಂದು ಪರಿಣಾಮಕಾರಿಯಾಗಿದೆ. ಪ್ರವಾದಿವರ್ಯರು(ಸ) ಈ ವಿಧಾನದಿಂದ ಅನಾಥರು ಮತ್ತು ಪತ್ನಿಯರ ಹಕ್ಕುಗಳು ಎಷ್ಟು ಪವಿತ್ರ ವೆಂಬುದನ್ನು ಜನರಿಗೆ ಮನವರಿಕೆ ಮಾಡಿಸುತ್ತಿದ್ದಾರೆ. ಅವರ ಹಕ್ಕುಗಳಿಗೆ ಚ್ಯುತಿಯುಂಟು ಮಾಡಿದರೆ, ಆ ಹಕ್ಕುಗಳನ್ನು ಪವಿತ್ರವೆಂದು ಸಾರಿದ ಪ್ರವಾದಿವರ್ಯರಿಗೆ(ಸ) ಅಪಮಾನ ಬಗೆದಂತಾದೀತು.

ಅನಾಥರ ಪೋಷಣೆಗೆ ಭವ್ಯ ಪುರಸ್ಕಾರ

(104) عَنْ سَهْلِ بْنِ سَعْدٍ قَالَ، قَالَ رَسُوْلُ اللهِ صَلَّى اللهُ عَلَيْهِ وَسَلَّمَ اَنَا وَكَافِلُ الْيَتِيْمِ لَهُ وَلِغَيْرِهٖ فِي الْجَنَّةِ هٰكَذَا، وَاَشَارَ بِالسَّبَّابَةِ وَالْوُسْطٰى وَفَرَّجَ بَيْنَهُمَا (بخاری)

ಸೆಹ್ಲ್ ಬಿನ್ ಸಅದ್(ರ) ಹೇಳುತ್ತಾರೆ- ಪ್ರವಾದಿವರ್ಯರು(ಸ) ಹೇಳಿದರು: "ಅನಾಥರ ಮತ್ತು ಇತರ ನಿರ್ಗತಿಕರ ಪೋಷಕ ಹಾಗೂ ನಾನು ಸ್ವರ್ಗದಲ್ಲಿ ಈ ರೀತಿ ಪರಸ್ಪರ ನಿಕಟ ವಾಗಿರುವೆವು." ಹೀಗೆ ಹೇಳಿ ಪ್ರವಾದಿ(ಸ) ತಮ್ಮ ತೋರುಬೆರಳು ಮತ್ತು ನಡುಬೆರಳು ಗಳನ್ನೆತ್ತಿ ತೋರಿಸಿದರು. ಅವೆರಡರ ನಡುವೆ ಸ್ವಲ್ಪ ಮಾತ್ರ ಅಂತರವಿತ್ತು. *[ಬುಖಾರಿ]*

ಟಿಪ್ಪಣಿ: ಈ ಪ್ರವಾದಿ ವಚನದ ತಾತ್ಪರ್ಯ ಬಹಳ ಸ್ಪಷ್ಟವಾಗಿದೆ. ಅನಾಥರು ಹಾಗೂ ನಿರ್ಗತಿಕರ ಪೋಷಣೆ ಮಾಡುವವರು ಸ್ವರ್ಗದಲ್ಲಿ ಪ್ರವಾದಿವರ್ಯರ(ಸ) ಸನಿಹದಲ್ಲೇ ಸ್ಥಾನ ಪಡೆಯುವರು. ಸ್ವರ್ಗ ಪ್ರವೇಶದ ಭಾಗ್ಯ, ಅದರಲ್ಲೂ ಪ್ರವಾದಿವರ್ಯರ(ಸ) ಸಾಮೀಪ್ಯದ ಭಾಗ್ಯ! ಇದಕ್ಕಿಂತ ದೊಡ್ಡ ಸೌಭಾಗ್ಯವನ್ನು ಊಹಿಸಲಾದೀತೇ?

ಅನಾಥನ ಸೊತ್ತಿನಲ್ಲಿ ರಕ್ಷಕನ ಹಕ್ಕು

(105) اِنَّ رَجُلًا اَتَى النَّبِيَّ صَلَّى اللهُ عَلَيْهِ وَسَلَّمَ فَقَالَ اِنِّيْ فَقِيْرٌ لَيْسَ لِيْ شَيْءٌ وَلِيْ يَتِيْمٌ، فَقَالَ كُلْ مِنْ مَالِ يَتِيْمِكَ غَيْرَ مُسْرِفٍ وَلَا مُبَادِرٍ وَلَا مُتَاثِّلٍ (ابوداؤد)

ಒಮ್ಮೆ ಒಬ್ಬ ವ್ಯಕ್ತಿ ಪ್ರವಾದಿವರ್ಯರ(ಸ) ಬಳಿ ಬಂದು ಹೀಗೆ ಹೇಳಿದರು: "ನಾನೊಬ್ಬ ಬಡವ, ನನ್ನ ಬಳಿ ಏನೂ ಇಲ್ಲ. ಈ ಒಬ್ಬ(ಆಸ್ತಿವಂತ) ಅನಾಥ ಮಾತ್ರ ನನ್ನ ರಕ್ಷಣೆಯಲ್ಲಿದ್ದಾನೆ" (ಅರ್ಥಾತ್, ನಾನು ಅವನ ಸಂಪತ್ತನ್ನು ಬಳಸಿಕೊಳ್ಳಬಹುದೇ?)
ಪ್ರವಾದಿವರ್ಯರು(ಸ) ಹೇಳಿದರು: "ನೀನು ನಿನ್ನ ರಕ್ಷಣೆಯಲ್ಲಿರುವ ಅನಾಥನ ಸೊತ್ತಿನಿಂದ ನಿನ್ನ ನೈಜ ಅವಶ್ಯಕತೆಗಳಿಗಾಗಿ ಖರ್ಚು ಮಾಡಬಹುದು. ಆದರೆ ಅಪವ್ಯಯ ಮಾಡಬಾರದು. ಅವನು ಪ್ರಬುದ್ಧನಾಗುವುದರೊಳಗೆ ಆತುರ ಪಟ್ಟು ಅವನ ಸಂಪತ್ತನ್ನು ಮುಗಿಸಬಾರದು ಮತ್ತು ಸ್ವಂತ ಆಸ್ತಿ ಮಾಡಿಕೊಳ್ಳುವ ಚಿಂತೆ ಮಾಡಬಾರದು."

[ಅಬೂ ದಾವೂದ್]

ಟಿಪ್ಪಣಿ: ಈ ಪ್ರವಾದಿ ವಚನವು ಅನಾಥರ ವಿಷಯದಲ್ಲಿ ಪವಿತ್ರ ಕುರ್‌ಆನಿನ 'ಅನ್ನಿಸಾ' ಅಧ್ಯಾಯದಲ್ಲಿರುವ ಈ ಕೆಳಗಿನ ಸೂಕ್ತದ ಅತ್ಯುತ್ತಮ ವ್ಯಾಖ್ಯಾನವಾಗಿದೆ.

"...ಅವರು (ಅನಾಥರು) ದೊಡ್ಡವರಾಗಿ ತಮ್ಮ ಹಕ್ಕನ್ನು ಕೇಳುವರೆಂದು ಹೆದರಿ ನ್ಯಾಯದ ಮೇರೆಯನ್ನು ಮೀರಿ, ಅವರ ಸಂಪತ್ತನ್ನು ಲಗುಬಗೆಯಿಂದ ಕಬಳಿಸಬಾರದು. ಅನಾಥರ ರಕ್ಷಕನು ಧನಿಕನಾಗಿದ್ದರೆ ಅವನು ಸಂಯಮದಿಂದ ವರ್ತಿಸಲಿ (ಅನಾಥನ ಸೊತ್ತನ್ನು ಮುಟ್ಟದಿರಲಿ) ಮತ್ತು ಅವನು ಬಡವನಾಗಿದ್ದರೆ ನ್ಯಾಯೋಚಿತ ರೀತಿಯಿಂದ ತಿನ್ನಲಿ..." (4:6)

ಅನಾಥನಿಗೆ ಶಿಕ್ಷೆ

(106) عَنْ جَابِرٍ قَالَ قُلْتُ يَا رَسُوْلَ اللهِ مِمَّا أَضْرِبُ يَتِيْمِيْ؟ قَالَ مِمَّا كُنْتَ ضَارِبًا مِنْهُ وَلَدَكَ، غَيْرَ وَاقٍ مَالَكَ بِمَالِهِ وَلَا مُتَأَثِّلًا مِنْ مَالِهِ مَالًا

(معجم طبرانی)

ಜಾಬಿರ್(ರ) ಹೇಳುತ್ತಾರೆ- ನಾನು ಪ್ರವಾದಿವರ್ಯರೊಡನೆ(ಸ), "ಅಲ್ಲಾಹನ ಸಂದೇಶವಾಹಕರೇ! ನಾನು ನನ್ನ ಅಧೀನವಿರುವ ಅನಾಥನಿಗೆ ಯಾವೆಲ್ಲ ಕಾರಣಗಳಿಂದ ಹೊಡೆಯಬಹುದು" ಎಂದು ವಿಚಾರಿಸಿದೆ. ಪ್ರವಾದಿ(ಸ) ಹೀಗೆಂದರು:

"ನೀವು ಯಾವ ಕಾರಣಗಳಿಗಾಗಿ ನಿಮ್ಮ ಸ್ವಂತ ಮಕ್ಕಳಿಗೆ ಹೊಡೆಯುತ್ತೀರೋ ಅದೇ ಕಾರಣಗಳಿಗಾಗಿ ಅನಾಥನಿಗೂ ಹೊಡೆಯಬಹುದು. ಆದರೆ ಎಚ್ಚರಿಕೆ ವಹಿಸಿರಿ. ನಿಮ್ಮ ಸಂಪತ್ತನ್ನು ಉಳಿತಾಯ ಮಾಡಲಿಕ್ಕಾಗಿ ಅನಾಥನ ಸಂಪತ್ತನ್ನು ಖರ್ಚು ಮಾಡಬೇಡಿರಿ ಮತ್ತು ಅವನ ಸಂಪತ್ತನ್ನು ನಿಮ್ಮ ಸ್ವಂತ ಆಸ್ತಿಯಾಗಿ ಮಾಡಿಕೊಳ್ಳಬೇಡಿ."

[ಮುಅ್‌ಜಮ್ ತಬರಾನೀ]

ಪತ್ನಿಯರ ಹಕ್ಕುಗಳು

(107) عَنْ حَكِيْمِ بْنِ مُعَاوِيَةَ الْقُشَيْرِيِّ عَنْ أَبِيْهِ قَالَ قُلْتُ يَا رَسُوْلَ اللهِ مَا حَقُّ زَوْجَةِ أَحَدِنَا عَلَيْهِ؟ قَالَ أَنْ تُطْعِمَهَا إِذَا طَعِمْتَ، وَتَكْسُوْهَا إِذَا اكْتَسَيْتَ وَلَا تَضْرِبِ الْوَجْهَ وَلَا تُقَبِّحْ، وَلَا تَهْجُرْ إِلَّا فِي الْبَيْتِ (ابوداؤد)

ಮುಆವಿಯಾ ಅಲ್ ಕುಶೈರಿ ಅವರಿಂದ ಅವರ ಪುತ್ರ ಹಕೀಮ್ ವರದಿ ಮಾಡುತ್ತಾರೆ- ನಾನು ಪ್ರವಾದಿವರ್ಯರೊಡನೆ(ಸ) "ಅಲ್ಲಾಹನ ಸಂದೇಶವಾಹಕರೇ! ಪತ್ನಿಯ ವಿಷಯದಲ್ಲಿ ಒಬ್ಬ ಪತಿಯ ಹೊಣೆಗಾರಿಕೆಗಳೇನು?" ಎಂದು ವಿಚಾರಿಸಿದೆ. ಪ್ರವಾದಿ(ಸ) ಹೇಳಿದರು:

"ನೀನು ಉಣ್ಣುವಾಗ ಆಕೆಗೆ ಉಣಿಸಬೇಕು. ನೀನು ಉಡುವಾಗ ಆಕೆಗೂ ಉಡಿಸಬೇಕು. ಆಕೆಯ ಮುಖಕ್ಕೆ ಹೊಡೆಯಬಾರದು. ಆಕೆಯನ್ನು ಶಪಿಸಬಾರದು. ಉದಾ: 'ಅಲ್ಲಾಹನು ನಿನ್ನನ್ನು ವಿರೂಪಗೊಳಿಸಲಿ' ಇತ್ಯಾದಿ. ಅವಳು ನಿನ್ನ ನ್ಯಾಯಬದ್ಧ ಆದೇಶಗಳನ್ನು ಪಾಲಿಸದೆ ಇದ್ದು ಅವಳನ್ನು ತಿದ್ದಲಿಕ್ಕಾಗಿ ತಾತ್ಕಾಲಿಕವಾಗಿ ಅವಳಿಂದ ದೈಹಿಕ ಸಂಬಂಧ ಕಡಿದುಕೊಳ್ಳ ಬೇಕಾದುದು ಅನಿವಾರ್ಯವಾದರೆ ಮನೆಯ ಹೊರತು ಬೇರೆಲ್ಲೂ ಅವಳಿಂದ 'ಬೇರ್ಪಟ್ಟು' ಇರಬಾರದು."

[ಅಬೂ ದಾವೂದ್]

ಟಿಪ್ಪಣಿ: ಪ್ರಾಣಿಗಳಿಗೆ ಕೂಡಾ ಮುಖಕ್ಕೆ ಹೊಡೆಯುವುದು ಧರ್ಮಸಮ್ಮತವಲ್ಲ. ಹೀಗಿರುವಾಗ ಜೀವನ ಸಂಗಾತಿಯಾದ ಪತ್ನಿಯ ಮುಖಕ್ಕೆ ಹೊಡೆಯುವುದು ಧರ್ಮಸಮ್ಮತವಾಗಲು ಸಾಧ್ಯವಿಲ್ಲ. ಉಪದೇಶ-ಬೋಧನೆ ಮತ್ತಿತರ ಯಾವುದೇ ವಿಧಾನದಿಂದ ಪತ್ನಿಯು ಸರಿಯಾಗದಿದ್ದಾಗ ಆಕೆಯ ಶರೀರದ ಬೇರೆ ಭಾಗಗಳಿಗೆ ಹೊಡೆಯುವ ಅನುಮತಿ ಇದೆ. ಆದರೆ ಗಾಯವಾಗುವಂತೆ ಅಥವಾ ಮೂಳೆ ಮುರಿಯುವಂತೆ ಹೊಡೆಯಬಾರದೆಂದು ಪ್ರವಾದಿ(ಸ) ಆದೇಶಿಸಿದ್ದಾರೆ.

ಗಯ್ಯಾಳಿ ಪತ್ನಿಯೊಂದಿಗಿನ ವರ್ತನೆ

(108) عَنْ لَقِيْطِ بْنِ صَبْرَةَ قَالَ قُلْتُ يَا رَسُوْلَ اللهِ إِنَّ لِيْ امْرَءَةً فِيْ لِسَانِهَا شَيْءٌ يَعْنِي الْبَذَاءَ، قَالَ طَلِّقْهَا، قُلْتُ إِنَّ لِيْ مِنْهَا وَلَدًا وَلَهَا صُحْبَةٌ قَالَ فَمُرْهَا يَقُوْلُ عِظْهَا، فَإِنْ يَكُ فِيْهَا خَيْرٌ فَسَتَقْبَلُ، وَلَا تَضْرِبَنَّ ظَعِيْنَتَكَ ضَرْبَكَ أُمَيَّتَكَ

(ابوداؤد)

ಲಕೀತ್ ಬಿನ್ ಸಬ್ರಃ ಹೇಳುತ್ತಾರೆ:

ನಾನು ಪ್ರವಾದಿವರ್ಯರೊಡನೆ(ಸ), "ಅಲ್ಲಾಹನ ಸಂದೇಶವಾಹಕರೇ! ನನ್ನ ಹೆಂಡತಿ ಬಹಳ ಜಗಳಗಂಟಿ (ನಾನೇನು ಮಾಡಲಿ)" ಎಂದು ವಿಚಾರಿಸಿದೆ. "ಆಕೆಯನ್ನು ವಿಚ್ಛೇದಿಸು" ಎಂದು ಪ್ರವಾದಿ(ಸ) ಉತ್ತರಿಸಿದರು. "ಆಕೆಯಿಂದ ನನಗೆ ಮಕ್ಕಳು ಹುಟ್ಟಿದ್ದಾರೆ. ಅಲ್ಲದೆ ನಾವು ಬಹಳ ಕಾಲದಿಂದ ಜೊತೆಯಾಗಿ ಬಾಳಿದ್ದೇವೆ, ತಲಾಕ್ ಕೊಡಲು ಮನಸ್ಸು ಒಪ್ಪುವುದಿಲ್ಲ. ನಂತರ ಮಕ್ಕಳ ಅವಸ್ಥೆ ಏನಾಗುವುದೋ!" ಎಂದು ಹೇಳಿದೆ. ಆಗ

ಪ್ರವಾದಿ(ಸ) ಹೇಳಿದರು, "ಹಾಗಾದರೆ ನೀನು ಆಕೆಗೆ ಉಪದೇಶಿಸು. ಅವಳಲ್ಲಿ ಏನಾದರೂ ಒಳಿತು ಇದ್ದರೆ ಅವಳು ನಿನ್ನ ಉಪದೇಶವನ್ನು ಸ್ವೀಕರಿಸುವಳು. ಆದರೆ, ಎಚ್ಚರಿಕೆ! ದಾಸಿಯರಿಗೆ ಹೊಡೆಯುವಂತೆ ನೀನು ನಿನ್ನ ಜೀವನ ಸಂಗಾತಿಗೆ ಹೊಡೆಯಬಾರದು".

[ಅಬೂ ದಾವೂದ್]

ಟಿಪ್ಪಣಿ: ಈ ಹದೀಸ್‌ನ ಕೊನೆಯ ಭಾಗದ ಅರ್ಥ ಪತ್ನಿಯರಿಗೆ ಹೊಡೆಯಬಾರದು- ಆದರೆ ದಾಸಿಯರಿಗೆ ಹೊಡೆಯಬಹುದು ಎಂದಲ್ಲ. ನಿಜವಾಗಿ ಇದರ ಅರ್ಥ ಜೀವನ ಸಂಗಾತಿಯೊಂದಿಗೆ ಬಹಳ ಪ್ರೀತ್ಯಾದರದಿಂದ ವರ್ತಿಸಬೇಕು. ದಾಸಿಯರೊಂದಿಗೆ ವರ್ತಿಸುವ ರೀತಿಯಲ್ಲಿ ವರ್ತಿಸಬಾರದು ಎಂದಾಗಿದೆ.

ಪತ್ನಿಯರ ನಡುವೆ ನ್ಯಾಯ ಪಾಲನೆ

(109) عَنْ اَبِىْ هُرَيْرَةَ رضـ عَنِ النَّبِيِّ صَلَّى اللهُ عَلَيْهِ وَسَلَّمَ قَالَ اِذَا كَانَتْ عِنْدَ الرَّجُلِ اِمْرَأَتَانِ فَلَمْ يَعْدِلْ بَيْنَهُمَا جَاءَ يَوْمَ الْقِيَامَةِ وَشِقُّهُ سَاقِطٌ (ترمذى)

ಅಬೂ ಹುರೈರಾ(ರ) ಹೇಳುತ್ತಾರೆ- ಪ್ರವಾದಿ ಮುಹಮ್ಮದ್(ಸ) ಹೇಳಿದರು:

"ಒಬ್ಬ ವ್ಯಕ್ತಿಗೆ ಇಬ್ಬರು ಪತ್ನಿಯರಿದ್ದು ಅವನು ಅವರ ನಡುವೆ ನ್ಯಾಯ ಮತ್ತು ಸಮಾನತೆಯ ಧೋರಣೆ ಪಾಲಿಸದೆ ಇದ್ದರೆ ಪುನರುತ್ಥಾನ ದಿನ ಆ ವ್ಯಕ್ತಿ ಪಕ್ಷಪಾತ ಪೀಡಿತ ಸ್ಥಿತಿಯಲ್ಲಿ ಹಾಜರಾಗುವನು."

[ತಿರ್ಮಿದಿ]

ಟಿಪ್ಪಣಿ: ಆತನು ತನ್ನ ಯಾವ ಪತ್ನಿಯ ಹಕ್ಕುಗಳನ್ನು ನಿರ್ಲಕ್ಷಿಸಿ ಬಿಟ್ಟಿದ್ದನೋ ಆಕೆ ಆತನ ಅರ್ಧಾಂಗಿಯಾಗಿದ್ದಳು. ಅವನು ತನ್ನ ಇಹಲೋಕ ಜೀವನದಲ್ಲಿ ತನ್ನ ಶರೀರದ ಅರ್ಧಾಂಶವನ್ನು ಕಡೆಗಣಿಸಿದ್ದರಿಂದ ಪರಲೋಕದಲ್ಲಿ ಅವನ ಶರೀರದ ಅರ್ಧಾಂಶವು ಅವನ ಪಾಲಿಗೆ ನಿರುಪಯುಕ್ತವಾಗಿ ಬಿಡುವುದು.

ಪತ್ನಿಗೆ ವೆಚ್ಚನೀಡುವುದು ಪುಣ್ಯದಾಯಕ

(110) عَنْ أَبِي مَسْعُودٍ رض قَالَ، قَالَ رَسُولُ اللّٰهِ ﷺ إِذَا أَنْفَقَ الرَّجُلُ عَلَى أَهْلِهِ يَحْتَسِبُهَا فَهُوَ لَهُ صَدَقَةٌ (بخاري، مسلم)

ಅಬೂ ಮಸ್‌ವೂದ್(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು:

"ಒಬ್ಬ ವ್ಯಕ್ತಿ ಪರಲೋಕದ ಪುಣ್ಯವನ್ನು ಬಯಸಿ ತನ್ನ ಮನೆಯವರಿಗಾಗಿ ಖರ್ಚು ಮಾಡಿದರೆ ಅದನ್ನು 'ಸದಕಾ' (ಪುಣ್ಯದಾಯಕ ಸತ್ಕರ್ಮ) ಎಂದು ಪರಿಗಣಿಸಲಾಗುವುದು"

[ಬುಖಾರಿ, ಮುಸ್ಲಿಮ್]

ಸಂಬಂಧ ಸುಧಾರಣೆಯ ಪ್ರಯತ್ನ

(111) عَنْ أَبِي هُرَيْرَةَ قَالَ، قَالَ رَسُولُ اللّٰهِ ﷺ لَا يَفْرَكْ مُؤْمِنٌ مُؤْمِنَةً إِنْ كَرِهَ مِنْهَا خُلُقًا رَضِيَ مِنْهَا آخَرَ (مسلم)

ಅಬೂ ಹುರೈರಾ(ರ) ಹೇಳುತ್ತಾರೆ:

ಪ್ರವಾದಿ(ಸ) ಹೇಳಿದರು: "ಸತ್ಯವಿಶ್ವಾಸಿಯಾದ ಯಾವ ಪತಿಯೂ ತನ್ನ ಸತ್ಯವಿಶ್ವಾಸಿ ಪತ್ನಿಯನ್ನು ದ್ವೇಷಿಸಬಾರದು. ಅವನಿಗೆ ಆಕೆಯ ಒಂದು ಗುಣ ಇಷ್ಟವಾಗದಿದ್ದರೆ ಇನ್ನೊಂದು ಗುಣ ಇಷ್ಟವಾಗಬಹುದು. *[ಮುಸ್ಲಿಮ್]*

ಟಿಪ್ಪಣಿ: ಅಂದರೆ ನಿಮ್ಮ ಪತ್ನಿಯ ಸೌಂದರ್ಯ ನೀವು ನಿರೀಕ್ಷಿಸಿದ ಮಟ್ಟದಲ್ಲಿ ಇಲ್ಲವೆಂಬ ಕಾರಣಕ್ಕಾಗಿ ಅಥವಾ ಆಕೆಯ ಬೇರಾವುದಾದರೂ ದೋಷವನ್ನು ಕಂಡೊಡನೆ ಆತುರಪಟ್ಟು ಅವಳನ್ನು ದ್ವೇಷಿಸಲಾರಂಭಿಸಬೇಡಿ. ಅವಳ ಉತ್ತಮ ಗುಣಗಳು ಪ್ರಕಟವಾಗಲು ಕಾಲಾವಕಾಶ ಕೊಡಿರಿ. ಈ ರೀತಿ ಕಾಲಾವಕಾಶ ಕೊಟ್ಟಾಗ ಅವಳ ಇತರ ವಿಶೇಷತೆಗಳು ನಿಮಗೆ ಇಷ್ಟವಾಗಬಹುದು. ಅವಳು ನಿಮ್ಮ ಮನಸ್ಸನ್ನು ಗೆಲ್ಲಬಹುದು. ಮೈಬಣ್ಣ ಅಥವಾ ಬಾಹ್ಯ ಸೌಂದರ್ಯವೇ ಸರ್ವಸ್ವವಲ್ಲ. ಹೆಣ್ಣಿನ ಸೇವಾ ಗುಣ ಆಕೆಯ ಸೌಂದರ್ಯಕ್ಕಿಂತ ಹೆಚ್ಚು ಆಕರ್ಷಕ ಮತ್ತು ಪರಿಣಾಮಕಾರಿಯಾಗಿರುತ್ತದೆ.

❖ ❖ ❖

ಪತಿಯ ಹಕ್ಕುಗಳು

ಉತ್ತಮ ಪತ್ನಿಯ ಗುಣಗಳು

(112) عَنْ اَبِىْ هُرَيْرَةَ رضى الله عنه قَالَ، قِيْلَ لِرَسُوْلِ اللهِ صَلَّى اللهُ عَلَيْهِ وَسَلَّمَ اَىُّ النِّسَاءِ خَيْرٌ؟ قَالَ اَلَّتِىْ تَسُرُّهُ اِذَا نَظَرَ، وَتُطِيْعُهُ اِذَا اَمَرَ، وَلَا تُخَالِفُهُ فِىْ نَفْسِهَا وَمَالِهَا بِمَا يَكْرَهُ (نسائى)

ಅಬೂ ಹುರೈರಾ(ರ) ಹೇಳುತ್ತಾರೆ:

'ಅತ್ಯುತ್ತಮ ಪತ್ನಿ ಯಾರು' ಎಂದು ಪ್ರವಾದಿವರ್ಯರೊಡನೆ(ಸ) ವಿಚಾರಿಸಲಾಯಿತು. ಅವರು ಹೇಳಿದರು:

"ಅತ್ಯುತ್ತಮ ಪತ್ನಿ ಹೇಗಿರುತ್ತಾಳೆಂದರೆ- ಅವಳನ್ನು ಕಂಡರೆ ಅವಳ ಪತಿ ಸಂತುಷ್ಟನಾಗುತ್ತಾನೆ. ಅವನು ಏನಾದರೂ ಆದೇಶಿಸಿದಾಗ ಅವಳು ಅದನ್ನು ಪಾಲಿಸುತ್ತಾಳೆ ಮತ್ತು ತನ್ನ ಹಾಗೂ ತನ್ನ ಸಂಪತ್ತಿನ ವಿಷಯದಲ್ಲಿ ಅವಳು ಪತಿಗೆ ಇಷ್ಟವಿಲ್ಲದ ಯಾವುದೇ ಧೋರಣೆಯನ್ನು ಅನುಸರಿಸುವುದಿಲ್ಲ." *[ನಸಾಈ]*

ಟಿಪ್ಪಣಿ: ಇಲ್ಲಿ 'ತನ್ನ ಸಂಪತ್ತು' ಎಂದರೆ ಮನೆಯೊಡತಿ ಎಂಬ ನೆಲೆಯಲ್ಲಿ ಓರ್ವ ಪತಿಯು ತನ್ನ ಪತ್ನಿಯ ವಶಕ್ಕೆ ಕೊಟ್ಟಿರುವ ಸಂಪತ್ತು.

ಐಚ್ಛಿಕ ಆರಾಧನೆಗೆ ಪತಿಯ ಅನುಮತಿ

(113) عن أبي سعيد قال جاءت امرأة إلى رسول الله صلى الله عليه وسلم
ونحن عنده، فقالت زوجي صفوان بن المعطل يضربني إذا صليت، ويفطرني
إذا صمت، ولا يصلي الفجر حتى تطلع الشمس، قال وصفوان عنده، قال فسأله
عما قالت، فقال يا رسول الله أما قولها "يضربني إذا صليت" فإنها تقرأ بسورتين
وقد نهيتها، قال له رسول الله صلى الله عليه وسلم لو كانت سورة واحدة
لكفت الناس، قال وأما قولها "يفطرني إذا صمت" فإنها تنطلق تصوم وأنا
رجل شاب فلا أصبر، فقال رسول الله صلى الله عليه وسلم لا تصوم
امرأة إلا بإذن زوجها، قال وأما قولها "إني لا أصلي حتى تطلع الشمس"
فإنا أهل بيت قد عرف لنا ذاك لا نكاد نستيقظ حتى تطلع الشمس، قال فإذا
استيقظت فصل (ابوداود)

ಅಬೂ ಸಈದ್ ಖುದ್ರೀ(ರ) ಹೇಳುತ್ತಾರೆ-

ಒಮ್ಮೆ ಓರ್ವ ಮಹಿಳೆ ಪ್ರವಾದಿವರ್ಯರ(ಸ) ಬಳಿ ಬಂದು ಹೇಳಿದರು: "ನನ್ನ ಪತಿ ಸಫ್ವಾನ್ ಬಿನ್ ಮುಅತ್ತಲ್(ರ), ನಾನು ನಮಾಝ್ ನಿರ್ವಹಿಸಿದ್ದಕ್ಕಾಗಿ ನನಗೆ ಹೊಡೆಯುತ್ತಾರೆ. ಉಪವಾಸ ಆಚರಿಸಿದರೆ ಉಪವಾಸ ತೊರೆಯುವಂತೆ ಮಾಡುತ್ತಾರೆ. ಅವರು ಫರ್ಝ್ ನಮಾಝನ್ನು ಸೂರ್ಯೋದಯದ ಬಳಿಕ ನಿರ್ವಹಿಸುತ್ತಾರೆ." ಆ ಸಭೆಯಲ್ಲಿ ಸಫ್ವಾನ್(ರ) ನಮ್ಮ ಜೊತೆಗೇ ಇದ್ದರು. ಪ್ರವಾದಿ(ಸ) ಸಫ್ವಾನ್‌ರ(ರ) ಪತ್ನಿ ಸಲ್ಲಿಸಿದ ದೂರುಗಳ ಕುರಿತು ಸಫ್ವಾನ್‌ರನ್ನು(ರ) ವಿಚಾರಿಸಿದರು. ಸಫ್ವಾನ್ ಹೀಗೆ ಉತ್ತರಿಸಿದರು:

"ಅಲ್ಲಾಹನ ಸಂದೇಶವಾಹಕರೇ! ಆಕೆ ನಮಾಝ್ ನಿರ್ವಹಿಸಿದ್ದಕ್ಕಾಗಿ ಹೊಡೆಯುವುದರ ಹಿಂದಿರುವ ಕಾರಣವೇನೆಂದರೆ ಆಕೆ ನಮಾಝ್‌ನಲ್ಲಿ ಎರಡೆರಡು ಅಧ್ಯಾಯಗಳನ್ನು ಓದುತ್ತಾಳೆ. ನಾನು ಹಾಗೆ ಮಾಡಬಾರದೆಂದು ಈ ಹಿಂದೆ ಅನೇಕ ಸಲ ಆಕೆಗೆ ಸೂಚಿಸಿದ್ದೇನೆ."

ಇದನ್ನು ಕೇಳಿ ಪ್ರವಾದಿ(ಸ) ಆ ಮಹಿಳೆಯೊಡನೆ, "ಒಂದು ಅಧ್ಯಾಯದ ಪಠಣ ಸಾಕಾಗುತ್ತದೆ. ಎರಡೆರಡು ಅಧ್ಯಾಯಗಳೇಕೆ" ಎಂದು ಕೇಳಿದರು.

ಸಫ್ವಾನ್(ರ) ಮುಂದುವರಿದು, "ನಾನು ಆಕೆಗೆ ಉಪವಾಸ ತೊರೆಯಲು ಹೇಳುವುದೇಕೆಂದರೆ, ಆಕೆ ನಿತ್ಯವೂ ಉಪವಾಸ ಆಚರಿಸುತ್ತಾಳೆ. ನಾನಾದರೋ ಓರ್ವ ಯುವಕ. ನನಗೆ ಸಹನೆ ವಹಿಸಲು ಸಾಧ್ಯವಾಗುವುದಿಲ್ಲ" ಎಂದರು.

ಪ್ರವಾದಿ(ಸ) ಆ ಮಹಿಳೆಯೊಡನೆ ಹೇಳಿದರು:

"ಯಾವ ಸ್ತ್ರೀಯೂ ತನ್ನ ಪತಿಯ ಅನುಮತಿ ಇಲ್ಲದೆ ಐಚ್ಛಿಕ ಉಪವಾಸಗಳನ್ನು ಆಚರಿಸಬಾರದು."

ಸಫ್ವಾನ್(ರ) ಹೇಳಿದರು: "ಸೂರ್ಯೋದಯದ ಬಳಿಕ ಫಜ್ರ್ ನಮಾಝ್ ನಿರ್ವಹಿಸುವುದರ ಮರ್ಮವೇನೆಂದರೆ, ನಾನು, ಸೂರ್ಯೋದಯಕ್ಕೆ ಮುಂಚೆ ನಿದ್ದೆಯಿಂದ ಎದ್ದೇಳದವರು ಎಂದೇ ಪ್ರಸಿದ್ಧವಾಗಿರುವವರ ವಂಶಕ್ಕೆ ಸೇರಿದವನು."

ಇದನ್ನು ಕೇಳಿ ಪ್ರವಾದಿ(ಸ) ಹೇಳಿದರು:

"ಸಫ್ವಾನ್! ನಿದ್ದೆಯಿಂದ ಎದ್ದ ತಕ್ಷಣ ನಮಾಝ್ ನಿರ್ವಹಿಸಿರಿ."

[ಅಬೂ ದಾವೂದ್]

ಟಿಪ್ಪಣಿ: ತನ್ನ ಪತ್ನಿ ಯಾವುದಾದರೂ ಕಡ್ಡಾಯ ಕರ್ಮವನ್ನು ನಿರ್ವಹಿಸದಂತೆ ತಡೆಯುವ ಹಕ್ಕು ಆಕೆಯ ಪತಿಗೆ ಇಲ್ಲ. ಆದರೆ ಕಡ್ಡಾಯ ಕರ್ಮಗಳನ್ನು ನಿರ್ವಹಿಸುವಾಗ ಪತ್ನಿಯು, ಪತಿಗೆ ತೊಂದರೆ ಯಾಗದಂತೆ ನೋಡಿಕೊಳ್ಳಬೇಕು. ಸುದೀರ್ಘ ಅಧ್ಯಾಯಗಳನ್ನು ಓದಿ ನಮಾಝ್‌ಗಳನ್ನು ತುಂಬಾ ದೀರ್ಘಗೊಳಿಸಬಾರದು. ಇನ್ನು ನಫಿಲ್ ಅಥವಾ ಐಚ್ಛಿಕ ನಮಾಝ್‌ಗಳನ್ನು ನಿರ್ವಹಿಸುವುದಿದ್ದರೆ, ಪತಿಯಿಂದ ಅನುಮತಿ ಪಡೆದುಕೊಳ್ಳಬೇಕು.

ಸಫ್ವಾನ್ ಬಿನ್ ಮುಅತ್ತಲ್(ರ) ಪ್ರವಾದಿವರ್ಯರ(ಸ) ಸಂಗಾತಿಗಳಲ್ಲೊಬ್ಬರು. ಅಂತಹ ವ್ಯಕ್ತಿ ಫಜ್ರ್ ನಮಾಝ್‌ನ ವಿಷಯದಲ್ಲಿ ನಿರ್ಲಕ್ಷ್ಯ ತೋರುತ್ತಿದ್ದರೆಂದು ಊಹಿಸಲಿಕ್ಕೂ ಸಾಧ್ಯವಿಲ್ಲ. ವಾಸ್ತವದಲ್ಲಿ ಅವರು ನಿತ್ಯವೂ ಫಜ್ರ್ ವಿಳಂಬಿಸುತ್ತಿರಲಿಲ್ಲ. ಹಾಗಿರುತ್ತಿದ್ದರೆ ಪ್ರವಾದಿ(ಸ) ಖಂಡಿತ ಅದನ್ನು ಖಂಡಿಸುತ್ತಿದ್ದರು. ನಿಜವಾಗಿ ಅವರು ಕೆಲವೊಮ್ಮೆ ಮಾತ್ರ ವಿಳಂಬವಾಗಿ ನಿದ್ದೆಯಿಂದೇಳು ತ್ತಿದ್ದರು. ಇದಕ್ಕೂ ಎರಡು ಕಾರಣಗಳಿದ್ದವು. ಆ ಪೈಕಿ ಒಂದು ಕಾರಣವನ್ನಂತೂ ಈ ಹದೀಸ್‌ನಲ್ಲೇ ತಿಳಿಸಲಾಗಿದೆ. ಕೆಲವರ ನಿದ್ದೆ ಸಹಜವಾಗಿಯೇ ಬಹಳ ಗಾಢ ಸ್ವರೂಪದ್ದಾಗಿರುತ್ತದೆ. ಸುತ್ತಮುತ್ತ ಪ್ರಳಯದಂತಹ ಗದ್ದಲವಾದರೂ ಅವರ ನಿದ್ರೆಗೆ ಭಂಗವುಂಟಾಗುವುದಿಲ್ಲ. ಎರಡನೆಯ ಕಾರಣವೇ ನೆಂದರೆ ಸಫ್ವಾನ್(ರ) ರಾತ್ರಿಯ ವೇಳೆ ತೋಟಗಳಿಗೆ ನೀರು ಹಾಯಿಸುವ ಕೆಲಸ ಮಾಡುತ್ತಿದ್ದರು. ಈ ರೀತಿ ರಾತ್ರಿಯ ಬಹುಭಾಗವನ್ನು ದೈಹಿಕ ಶ್ರಮದಲ್ಲಿ ಕಳೆದು, ದಣಿದು ಮಲಗಿದ ವ್ಯಕ್ತಿಗೆ ಫಜ್ರ್ ನಮಾಝ್‌ಗೆ ಏಳಲು ಕಷ್ಟವೆನಿಸುವುದು ಸ್ವಾಭಾವಿಕ.

ಪ್ರವಾದಿವರ್ಯರ(ಸ) ಕಾಲದಲ್ಲಿ ದೇವಾರಾಧನೆಯ ಬಗ್ಗೆ ಮಹಿಳೆಯರಿಗೂ ಎಂತಹ ಆಸಕ್ತಿ ಹಾಗೂ ಉತ್ಸಾಹವಿತ್ತು ಎಂಬುದನ್ನೂ ನಾವು ಈ ಹದೀಸ್‌ನಿಂದ ಗ್ರಹಿಸಬಹುದು.

ಕೃತಘ್ನತೆ ಸಲ್ಲದು

(114) عَنْ أَسْمَاءَ بِنْتِ يَزِيْدَ الأَنْصَارِيَّةِ قَالَتْ: مَرَّ بِيَ النَّبِيُّ صَلَّى اللهُ عَلَيْهِ وَسَلَّمَ
وَأَنَا فِي جَوَارٍ أَتْرَابٍ لِيْ، فَسَلَّمَ عَلَيْنَا وَقَالَ إِيَّاكُنَّ وَكُفْرَ الْمُنْعِمِيْنَ، قَالَ وَلَعَلَّ إِحْدَاكُنَّ
تَطُوْلُ أَيْمَتُهَا مِنْ أَبَوَيْهَا. ثُمَّ يَرْزُقُهَا اللهُ زَوْجًا وَيَرْزُقُهَا مِنْهُ وَلَدًا، فَتَغْضَبُ
الْغَضْبَةَ فَتَكْفُرُ فَتَقُوْلُ مَا رَأَيْتُ مِنْكَ خَيْرًا قَطُّ (الادب المفرد للبخارى)

ಅಸ್ಮಾ ಬಿನ್ತಿ ಯಝೀದ್ ಅನ್ಸಾರಿಯ್ಯ(ರ) ಹೇಳುತ್ತಾರೆ- ನಾನು ನನ್ನ ಕೆಲವು ಸಮವಯಸ್ಕ ಗೆಳತಿಯರ ಜೊತೆ ಕುಳಿತಿದ್ದೆ. ಪ್ರವಾದಿವರ್ಯರು(ಸ) ನಮ್ಮ ಸಮೀಪದಿಂದ ಹಾದು ಹೋದರು. ಅವರು ನಮಗೆ ಸಲಾಮ್ ಹೇಳಿದರು. ಆ ಬಳಿಕ ಹೇಳಿದರು:

"ನೀವು, ನಿಮ್ಮೊಂದಿಗೆ ಉತ್ತಮವಾಗಿ ವರ್ತಿಸುವ ಪತಿಗೆ ಕೃತಘ್ನತೆ ತೋರಬೇಡಿ." ಆ ಬಳಿಕ ಪ್ರವಾದಿ(ಸ) ಹೇಳಿದರು:

"ಮಹಿಳೆಯರಲ್ಲಿ ಕೆಲವರು, ಬಹಳ ದೀರ್ಘಕಾಲ ತಮ್ಮ ಹೆತ್ತವರ ಮನೆಯಲ್ಲೇ ಇರುತ್ತಾರೆ. ಅಲ್ಲಾಹನು ಅವರಿಗೆ ಒಬ್ಬ ಪತಿಯನ್ನು ದಯಪಾಲಿಸುತ್ತಾನೆ ಮತ್ತು ಅವನ ಮೂಲಕ ಮಕ್ಕಳನ್ನೂ ಕೊಡುತ್ತಾನೆ. ಆದರೆ ಆ ಬಳಿಕ ಯಾವುದಾದರೂ ವಿಷಯದಲ್ಲಿ ಅವರಿಗೆ ಕೋಪ ಬಂದರೆ ಅವರು ತಮ್ಮ ಪತಿಯೊಡನೆ, "ನಿಮ್ಮಿಂದ ನನಗೆಂದೂ ಸುಖ ಸಿಕ್ಕಿದ್ದೇ ಇಲ್ಲ. ನೀವು ನನ್ನೊಂದಿಗೆ ಎಂದೂ ಸದ್ವರ್ತನೆ ತೋರಿಲ್ಲ" ಎಂದು ಹೇಳುತ್ತಾರೆ.

[ಅಲ್ ಅದಬುಲ್ ಮುಫ್ರದ್ -ಬುಖಾರಿ]

ಪತ್ನಿಯ ಹೊಣೆಗಾರಿಕೆ

(115) عَنِ ابْنِ عُمَرَ قَالَ النَّبِيُّ صَلَّى اللّٰهُ عَلَيْهِ وَسَلَّمَ كُلُّكُمْ رَاعٍ وَكُلُّكُمْ مَسْئُولٌ عَنْ رَعِيَّتِهِ، وَالْأَمِيرُ رَاعٍ وَهُوَ مَسْئُولٌ عَنْ رَعِيَّتِهِ وَالرَّجُلُ رَاعٍ عَلَى أَهْلِ بَيْتِهِ وَالْمَرْأَةُ رَاعِيَةٌ عَلَى بَيْتِ زَوْجِهَا وَوَلَدِهِ، فَكُلُّكُمْ رَاعٍ وَكُلُّكُمْ مَسْئُولٌ عَنْ رَعِيَّتِهِ

(رياض الصالحين)

ಇಬ್ನು ಉಮರ್(ರ) ವರದಿ ಮಾಡುತ್ತಾರೆ- ಪ್ರವಾದಿ ಮುಹಮ್ಮದ್(ಸ) ಹೇಳಿದರು: "ನಿಮ್ಮ ಪೈಕಿ ಪ್ರತಿಯೊಬ್ಬನೂ ಹೊಣೆಗಾರ ಹಾಗೂ ಸಂರಕ್ಷಕನಾಗಿದ್ದಾನೆ. ನಿಮ್ಮ ಪೈಕಿ ಪ್ರತಿಯೊಬ್ಬನೊಡನೆ ಅವನ ಅಧೀನದಲ್ಲಿ ಹಾಗೂ ಮೇಲ್ವಿಚಾರಣೆಯಲ್ಲಿ ಇದ್ದವರ ಬಗ್ಗೆ ವಿಚಾರಣೆ ನಡೆಸಲಾಗುವುದು. ನಾಯಕನೂ ಹೊಣೆಗಾರನಾಗಿದ್ದಾನೆ. ಅವನ ಆಡಳಿತಕ್ಕೆ ಅಧೀನವಾಗಿದ್ದವರ ಕುರಿತು ಅವನೊಡನೆ ವಿಚಾರಿಸಲಾಗುವುದು. ಪತಿ ತನ್ನ ಮನೆಯವರ (ಪತಿ ಮತ್ತು ಮಕ್ಕಳ) ಬಗ್ಗೆ ಹೊಣೆಗಾರನಾಗಿದ್ದಾನೆ ಮತ್ತು ಪತ್ನಿಯು ತನ್ನ ಪತಿಯ ಮನೆ ಹಾಗೂ ಅವನ ಮಕ್ಕಳ ಬಗ್ಗೆ ಹೊಣೆಗಾರಳಾಗಿದ್ದಾಳೆ. ನಿಮ್ಮ ಪೈಕಿ ಪ್ರತಿಯೊಬ್ಬನೂ ಹೊಣೆಗಾರನಾಗಿದ್ದಾನೆ ಮತ್ತು ನಿಮ್ಮಲ್ಲಿ ಪ್ರತಿಯೊಬ್ಬನೊಡನೆಯೂ ಅವನ ಅಧೀನ ದಲ್ಲಿದ್ದವರ ಕುರಿತು ಪ್ರಶ್ನಿಸಲಾಗುವುದು." *[ರಿಯಾದುಸ್ಸಾಲಿಹೀನ್]*

ಟಿಪ್ಪಣಿ: ನಮಗೆ ಈ ಹದೀಸ್‌ನಿಂದ ತಿಳಿಯುವುದೇನೆಂದರೆ, ಪತ್ನಿಗೆ ಅನ್ನ-ವಸ್ತ್ರಾದಿಗಳನ್ನು ಒದಗಿಸುವುದು ಮಾತ್ರ ಪತಿಯ ಹೊಣೆಗಾರಿಕೆ ಅಲ್ಲ. ಅವಳ ಧರ್ಮ- ಚಾರಿತ್ರ್ಯಗಳ ಸಂರಕ್ಷಣೆಯೂ ಪತಿಯ ಕರ್ತವ್ಯವಾಗಿದೆ. ಅತ್ತ ಪತ್ನಿಯ ಮೇಲಿನ ಹೊಣೆಗಾರಿಕೆಯು ದುಪ್ಪಟ್ಟಾಗಿದೆ. ಪತಿಯ ಮನೆ ಮತ್ತು ಸಂಪತ್ತಿನ ಸಂರಕ್ಷಣೆಯ ಹೊಣೆಯಂತೂ ಅವಳ ಮೇಲೆ ಇದ್ದೇ ಇದೆ. ಜೊತೆಗೆ, ಅವನ ಮಕ್ಕಳಿಗೆ ಸರಿಯಾದ ಶಿಕ್ಷಣ ಮತ್ತು ತರಬೇತಿ ಒದಗಿಸಬೇಕಾದುದು ಕೂಡಾ ಅವಳ ಕರ್ತವ್ಯವಾಗಿದೆ. ಏಕೆಂದರೆ ಸಾಮಾನ್ಯವಾಗಿ ಪತಿಯು ಸಂಪಾದನೆಗಾಗಿ ಮನೆಯಿಂದ ಹೊರಗೆ ಇರುತ್ತಾನೆ. ಮಕ್ಕಳು ಹೆಚ್ಚಾಗಿ ತಮ್ಮ ತಾಯಂದಿರ ಜೊತೆಗೇ ಇರುತ್ತಾರೆ. ಅಲ್ಲದೆ ಮಕ್ಕಳು ತಂದೆಗಿಂತ ತಾಯಿಗೆ ಅಧಿಕ ನಿಕಟವಾಗಿರುತ್ತಾರೆ. ಪ್ರವಾದಿವರ್ಯರು(ಸ) ಮಕ್ಕಳ ಮಾತಾಪಿತರಿಗೆ ಹೀಗೆ ಆದೇಶಿಸಿರುವರು- 'ಮಗುವಿಗೆ ಏಳು ವರ್ಷ ತುಂಬಿದಾಗ ಅದನ್ನು ನಮಾಝ್ ನಿರ್ವಹಿಸುವಂತೆ ಪ್ರೇರೇಪಿಸಬೇಕು, ಬೋಧಿಸಬೇಕು, ಸರ್ವ ವಿಧದಲ್ಲೂ ಆ ಕುರಿತು ಉಪದೇಶಿಸಬೇಕು. ಮಗುವಿಗೆ ಹತ್ತು ವರ್ಷ ತುಂಬಿದ ಬಳಿಕವೂ ಅದು ನಮಾಝ್ ನಿರ್ವಹಿಸದೆ ಇದ್ದರೆ ಅದಕ್ಕೆ ಶಿಕ್ಷೆ ಕೊಡಬೇಕು'. ಈ ಆದೇಶ ಪಾಲಿಸುವ ವಿಷಯದಲ್ಲಿ ತಾಯಿ, ತಂದೆ ಅಥವಾ ಅವರಿಬ್ಬರೂ ಯಾವುದೇ ಕುಂದು-ಕೊರತೆ ಮಾಡಿದರೆ ಆ ಕುರಿತು ಅವರು ಅಲ್ಲಾಹನ ವಿಚಾರಣೆಯನ್ನು ಎದುರಿಸಬೇಕಾಗುವುದು.

ಪತ್ನಿಯ ಹಕ್ಕು

(116) عَنْ سَمُرَةَ بْنِ جُنْدُبٍ رضـ قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ:
إِنَّ الْمَرْءَةَ خُلِقَتْ مِنْ ضِلَعٍ، فَإِنْ أَقَمْتَهَا كَسَرْتَهَا، فَدَارِهَا تَعِيْشْ بِهَا

(المنذری بحوالہ صحیح ابن حبان)

ಸಮ್ರಃ ಬಿನ್ ಜುಂದುಬ್(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು:

"ಸ್ತ್ರೀಯು ಪಕ್ಕೆಲುಬಿನಿಂದ ಸೃಷ್ಟಿಸಲ್ಪಟ್ಟಿರುವಳು. ನೀವು ಅವಳನ್ನು ನೇರಗೊಳಿಸ ಬಯಸಿದರೆ ಮುರಿದು ಹಾಕುವಿರಿ. ಅವಳೊಂದಿಗೆ ಉತ್ತಮ ರೀತಿಯಲ್ಲಿ ವ್ಯವಹರಿಸಿದರೆ ಜೀವನ ಸುಗಮವಾಗಿ ಸಾಗುವುದು."

[ಅಲ್ ಮುಂದಿರೀ, ಸಹೀಹ್ ಇಬ್ನು ಹಿಬ್ಬಾನ್‌ನಿಂದ ಉದ್ಧೃತ]

ಟಿಪ್ಪಣಿ: "ಸ್ತ್ರೀಯು ಪಕ್ಕೆಲುಬಿನಿಂದ ಸೃಷ್ಟಿಸಲ್ಪಟ್ಟಿರುವಳು" ಎಂಬುದು, "ಮನುಷ್ಯನು ದುಡುಕು ಸ್ವಭಾವದ ಸೃಷ್ಟಿ" ಎಂಬ ಪವಿತ್ರ ಕುರ್‌ಆನಿನಲ್ಲಿರುವ (21:37) ನುಡಿಗಟ್ಟಿನಂತೆಯೇ ಒಂದು ನುಡಿಗಟ್ಟಾಗಿದೆ. ಪಕ್ಕೆಲುಬು ಹೊರನೋಟಕ್ಕೆ ವಕ್ರವಾಗಿ ಕಾಣಿಸುತ್ತದೆ. ನಿಜವಾಗಿ ಈ ವಕ್ರತೆಯೇ ಅದರ ವಿಶೇಷತೆ. ಅಲ್ಲಾಹನು ಅದನ್ನು ಆ ರೀತಿ ವಕ್ರವಾಗಿ ಇಟ್ಟಿರುವುದರಿಂದಲೇ ನಮ್ಮ ಎದೆ ಮತ್ತು ಅದರೊಳಗಿನ ಸೂಕ್ಷ್ಮ ಅಂಗಗಳು ಸುರಕ್ಷಿತವಾಗಿರುತ್ತವೆ. ಪಕ್ಕೆಲುಬು ಒಂದು ವೇಳೆ ನೇರವಾಗಿರುತ್ತಿದ್ದರೆ ನಮ್ಮ ಎದೆ ಮತ್ತು ಅದರೊಳಗಿನ ಭಾಗಗಳು ಸುರಕ್ಷಿತವಾಗಿರಲು ಸಾಧ್ಯವಿತ್ತೇ?

ಪಕ್ಕೆಲುಬು ಎದೆಯನ್ನು ರಕ್ಷಿಸುವಂತೆ ಸ್ತ್ರೀಯು ತನ್ನ ಪತಿ ಮತ್ತು ಅವನ ಮನೆಯ ಸಂರಕ್ಷಕಿಯಾಗಿದ್ದಾಳೆ. ಸಾಮಾನ್ಯವಾಗಿ ಪುರುಷರಿಗೆ ಏನಾದರೂ ಉಳಿತಾಯ ಮಾಡುವ ಸ್ವಭಾವ ಇರುವುದಿಲ್ಲ. ಆದರೆ ಸ್ತ್ರೀಯರಲ್ಲಿ ಅಂತಹ ಗುಣ ಹೆಚ್ಚಾಗಿ ಕಂಡು ಬರುತ್ತದೆ. ಸ್ತ್ರೀಯಲ್ಲಿ ಒಂದು ವೇಳೆ ಅಂತಹ ಗುಣ ಇಲ್ಲದೆ ಇದ್ದಲ್ಲಿ ಕುಟುಂಬದ ವ್ಯವಸ್ಥೆಯೇ ಕೆಟ್ಟು ಹೋಗುತ್ತಿತ್ತು. ಪ್ರವಾದಿ ಮುಹಮ್ಮದ್‌ರವರು(ಸ) ಸ್ತ್ರೀಯನ್ನು ಪಕ್ಕೆಲುಬಿಗೆ ಹೋಲಿಸಿದ್ದಾರೆ ಮತ್ತು ಆಕೆಯ ವಿಶೇಷತೆಗಳತ್ತ ಗಮನ ಸೆಳೆದಿದ್ದಾರೆ. ವಚನದ ಅರ್ಥ, ಸ್ವಭಾವದಲ್ಲಿ ಸ್ತ್ರೀಯರು ವಕ್ರವಾಗಿರುತ್ತಾರೆ ಮತ್ತು ಪುರುಷರು ಬಹಳ ನೇರವಾಗಿರುತ್ತಾರೆ ಎಂದಲ್ಲ. ಈ ವಚನದ ತಾತ್ಪರ್ಯವೇನೆಂದರೆ ಸ್ತ್ರೀಯ ಗುಣ, ಸ್ವಭಾವ, ಆಲೋಚನಾ ವಿಧಾನ ಇತ್ಯಾದಿಗಳು ಪುರುಷನಿಗಿಂತ ಭಿನ್ನವಾಗಿರುತ್ತವೆ. ಕುಟುಂಬ ವ್ಯವಸ್ಥೆಯಲ್ಲಿ ಪುರುಷನಿಗೆ ನಾಯಕತ್ವದ ಸ್ಥಾನವನ್ನು ವಹಿಸಿಕೊಡಲಾಗಿದೆ. ಹೀಗಿರುತ್ತಾ ಒಬ್ಬ ಪತಿಯು ತನ್ನ ಪತ್ನಿಯ ಭಾವನೆ ಸಂವೇದನೆಗಳನ್ನೆಲ್ಲಾ ಲೆಕ್ಕಿಸದೆ ಕೇವಲ ತನ್ನ ಮಾತು ನಡೆಯಬೇಕೆಂದು ಹಠ ಹಿಡಿಯಲಾರಂಭಿಸಿದರೆ ಮನೆಯ ಶಾಂತಿ, ಸಂತಸಗಳೆಲ್ಲಾ ಕೆಟ್ಟು ಹೋಗುತ್ತವೆ. ಮನೆಯು ಯುದ್ಧ ರಂಗದಂತಾಗಿ ಬಿಡುತ್ತದೆ. ಆದ್ದರಿಂದಲೇ ಪ್ರವಾದಿ(ಸ), ಮನೆಯು ನರಕವಾಗಿ ಮಾರ್ಪಡದೆ ಸದಾ ಸುಖದಾಯಕವಾಗಿ ಇರಬೇಕಿದ್ದರೆ ಸ್ತ್ರೀಯರೊಂದಿಗೆ ಅತ್ಯಂತ ಮೃದುವಾಗಿ ಪ್ರೀತಿ- ವಾತ್ಸಲ್ಯದಿಂದ ವರ್ತಿಸಬೇಕೆಂದು ಪುರುಷರಿಗೆ

ಬೋಧಿಸಿರುವರು. ಇತರ ಕೆಲವು ವರದಿಗಳಲ್ಲಿ, "ಪತ್ನಿಯರೊಂದಿಗೆ ನೀವೂ ಉತ್ತಮವಾಗಿ ವರ್ತಿಸಿರಿ ಮತ್ತು ಅವರ ಜೊತೆ ಉತ್ತಮವಾಗಿ ವರ್ತಿಸಬೇಕೆಂದು ಇತರರನ್ನೂ ಒತ್ತಾಯಿಸಿರಿ" ಎಂದು ಪ್ರವಾದಿ(ಸ) ಹೇಳಿರುವುದಾಗಿ ಉಲ್ಲೇಖಿಸಲಾಗಿದೆ. ಇದು ಪ್ರವಾದಿ(ಸ) ತಮ್ಮ ಸಮುದಾಯಕ್ಕೆ ನೀಡಿರುವ ಆದೇಶ.

ಸ್ತ್ರೀ-ಪುರುಷರಿಗೆ ಸಮಾನ ಪ್ರತಿಫಲ

(117) عَنِ ابْنِ عَبَّاسٍ رض قَالَ: جَاءَتِ امْرَأَةٌ إِلَى النَّبِيِّ صَلَّى اللهُ عَلَيْهِ وَسَلَّمَ
فَقَالَتْ يَا رَسُوْلَ اللهِ إِنِّيْ وَافِدَةُ النِّسَاءِ إِلَيْكَ، هٰذَا الْجِهَادُ كَتَبَهُ اللهُ عَلَى الرِّجَالِ
فَإِنْ أُصِيْبُوْا أُجِرُوْا، وَإِنْ قُتِلُوْا كَانُوْا أَحْيَاءً عِنْدَ رَبِّهِمْ يُرْزَقُوْنَ، وَنَحْنُ مَعْشَرَ النِّسَاءِ
نَقُوْمُ عَلَيْهِمْ، فَمَا لَنَا مِنْ ذٰلِكَ؟ قَالَ، فَقَالَ رَسُوْلُ اللهِ صَلَّى اللهُ عَلَيْهِ وَسَلَّمَ
أَبْلِغِيْ مَنْ لَقِيْتِ مِنَ النِّسَاءِ أَنَّ طَاعَةَ الزَّوْجِ وَاعْتِرَافًا بِحَقِّهِ يَعْدِلُ ذٰلِكَ، وَقَلِيْلٌ
مِنْكُنَّ مَنْ يَفْعَلُهُ ـــ رَوَاهُ الْبَزَّارُ هٰكَذَا مُخْتَصَرًا، وَالطَّبَرَانِيُّ فِيْ حَدِيْثٍ قَالَ فِيْ
آخِرِهِ ـــ ثُمَّ جَاءَتْهُ يَعْنِي النَّبِيَّ صَلَّى اللهُ عَلَيْهِ وَسَلَّمَ امْرَأَةٌ، فَقَالَتْ إِنِّيْ رَسُوْلُ
النِّسَاءِ إِلَيْكَ، وَمَا مِنْهُنَّ امْرَأَةٌ عَلِمَتْ أَوْ لَمْ تَعْلَمْ إِلَّا وَهِيَ تَهْوَى مَخْرَجِيْ إِلَيْكَ، اَللّٰهُ
رَبُّ الرِّجَالِ وَالنِّسَاءِ وَإِلٰهُهُنَّ، وَأَنْتَ رَسُوْلُ اللهِ إِلَى الرِّجَالِ وَالنِّسَاءِ كَتَبَ اللهُ
الْجِهَادَ عَلَى الرِّجَالِ فَإِنْ أَصَابُوْا أُجِرُوْا، وَإِنِ اسْتُشْهِدُوْا كَانُوْا أَحْيَاءً عِنْدَ رَبِّهِمْ
يُرْزَقُوْنَ، فَمَا يَعْدِلُ ذٰلِكَ مِنْ أَعْمَالِهِمْ مِنَ الطَّاعَةِ؟ قَالَ طَاعَةُ أَزْوَاجِهِنَّ وَ
الْمَعْرِفَةُ بِحُقُوْقِهِمْ، وَقَلِيْلٌ مِنْكُنَّ مَنْ يَفْعَلُهُ (المنذري)

ಇಬ್ನು ಅಬ್ಬಾಸ್(ರ) ಹೇಳುತ್ತಾರೆ-

ಒಮ್ಮೆ ಓರ್ವ ಮಹಿಳೆ ಪ್ರವಾದಿವರ್ಯರ(ಸ) ಬಳಿಗೆ ಬಂದು, "ಅಲ್ಲಾಹನ ಸಂದೇಶ ವಾಹಕರೇ(ಸ)! ಮಹಿಳೆಯರು ನನ್ನನ್ನು ಅವರ ಪ್ರತಿನಿಧಿಯಾಗಿ ತಮ್ಮ ಬಳಿಗೆ ಕಳುಹಿಸಿದ್ದಾರೆ.

ಜಿಹಾದ್, ಪುರುಷರ ಮೇಲೆ ಮಾತ್ರ ಕಡ್ಡಾಯವಾಗಿದೆ. ಅವರು ಗಾಯಗೊಂಡರೆ ಅದಕ್ಕೆ ಪುಣ್ಯ ಸಿಗುತ್ತದೆ. ಹತರಾದರೆ, ಅವರು ಅಲ್ಲಾಹನ ಬಳಿ ಜೀವಂತವಿರುತ್ತಾರೆ ಮತ್ತು ಅವನ ಅನುಗ್ರಹ ಹಾಗೂ ಪುರಸ್ಕಾರಗಳಿಗೆ ಪಾತ್ರರಾಗುತ್ತಾರೆ. ಇತ್ತ ಮಹಿಳೆಯರಾದ ನಾವು ಪುರುಷರ ಅನುಪಸ್ಥಿತಿಯಲ್ಲಿ ಅವರ ಮನೆಗಳ ಸಂರಕ್ಷಣೆ ಮಾಡುತ್ತೇವೆ ಮತ್ತು ನಮ್ಮ ಧರ್ಮ ಯೋಧರಾದ ಪತಿಯಂದಿರ ಅಗತ್ಯಗಳನ್ನು ಪೂರೈಸುತ್ತೇವೆ. ನಮ್ಮ ಈ ಸೇವೆಗೆ ಎಂತಹ ಪ್ರತಿಫಲವಿದೆ (ಎಂದು ವಿಚಾರಿಸಲಿಕ್ಕಾಗಿ ನನ್ನನ್ನು ಕಳುಹಿಸಲಾಗಿದೆ)" ಎಂದರು.

ಪ್ರವಾದಿ(ಸ) ಹೇಳಿದರು: "ನಿಮಗೆ ಸಿಗುವ ಪ್ರತಿಯೊಬ್ಬ ಮಹಿಳೆಗೆ ನನ್ನ ಈ ಸಂದೇಶ ತಲುಪಿಸಿ: ಧರ್ಮಯೋಧನಾದ ಪತಿಯ ಅನುಸರಣೆ ಮಾಡುವುದು, ಅವನಿಗೆ ನಿಷ್ಠಳಾಗಿರುವುದು ಮತ್ತು ಅವನ ಹಕ್ಕುಗಳನ್ನು ಗುರುತಿಸಿ ಪಾಲಿಸುವುದು ಜಿಹಾದ್‌ಗೆ ಸಮಾನವಾಗಿದೆ. ಆದರೆ ನಿಮ್ಮ ಪೈಕಿ ಕೆಲವೇ ಮಂದಿ ಸ್ತ್ರೀಯರು ಮಾತ್ರ ಹಾಗೆ ಮಾಡುತ್ತಾರೆ."

(ಇದು ಮುಸ್ನದ್ ಬಝ್ಝಾರ್‌ನಲ್ಲಿರುವ ಸಂಕ್ಷಿಪ್ತ ವರದಿ. ತಬ್ರಾನಿಯಲ್ಲಿ ಈ ಪ್ರವಾದಿ ವಚನವು ಸಾಕಷ್ಟು ವಿವರವಾಗಿ ಉಲ್ಲೇಖಿಸಲ್ಪಟ್ಟಿದೆ. ಅದರ ಕೊನೆಯ ಭಾಗ ಹೀಗಿದೆ:)

ಓರ್ವ ಮಹಿಳೆ ಪ್ರವಾದಿವರ್ಯರ(ಸ) ಬಳಿ ಬಂದು, "ನಾನು ಮಹಿಳೆಯರ ಪ್ರತಿನಿಧಿಯಾಗಿ ತಮ್ಮ ಬಳಿಗೆ ಬಂದಿದ್ದೇನೆ. ಪ್ರತಿಯೊಬ್ಬ ಮಹಿಳೆ- ಆಕೆಗೆ ಈ ವಿಷಯ ತಿಳಿದಿದ್ದರೂ ತಿಳಿಯದಿದ್ದರೂ- ನಾನು ತಮ್ಮ ಬಳಿಗೆ ಬರುವುದನ್ನು ಮೆಚ್ಚುತ್ತಾಳೆ. ಅಲ್ಲಾಹನು ಸ್ತ್ರೀಯರ ಪಾಲಿಗೂ ಪುರುಷರ ಪಾಲಿಗೂ ಒಡೆಯ, ಆರಾಧ್ಯ ಹಾಗೂ ಆಜ್ಞಾಧಿಪತಿ ಯಾಗಿದ್ದಾನೆ. ಅಲ್ಲದೆ ತಾವು ಸ್ತ್ರೀ- ಪುರುಷರಿಬ್ಬರ ಕಡೆಗೂ ಸಂದೇಶವಾಹಕರಾಗಿ ಕಳುಹಿಸಲ್ಪಟ್ಟಿರುವಿರಿ. ಪುರುಷರ ಮೇಲೆ ಜಿಹಾದ್ ಕಡ್ಡಾಯವಾಗಿದೆ. ಅವರು ಧರ್ಮದ ಶತ್ರುಗಳಿಗೆ ಹೊಡೆದರೆ ಅವರಿಗೆ ಪುಣ್ಯ ಸಿಗುತ್ತದೆ. ಅವರು ಶಹೀದ್‌ಗಳಾದರೆ (ಹುತಾತ್ಮರಾದರೆ) ಅವರಿಗೆ ಇನ್ನೂ ಉತ್ತಮ ಜೀವನ ಪ್ರಾಪ್ತವಾಗುತ್ತದೆ. ಅವರು ಅಲ್ಲಾಹನ ಸಾಮೀಪ್ಯ ಮತ್ತು ಅವನ ಪುರಸ್ಕಾರಗಳಿಗೆ ಪಾತ್ರರಾಗುತ್ತಾರೆ. ಅವರಿಗೆ ಸಿಗುವುದಕ್ಕೆ ಸಮಾನವಾದ ಪುಣ್ಯ ಫಲವು ನಮಗೆ ಸಿಗುವಂತಾಗಲು ನಾವೇನು ಮಾಡಬೇಕು?" ಎಂದು ವಿಚಾರಿಸಿದಳು.

ಪ್ರವಾದಿ(ಸ) ಹೇಳಿದರು: "ನೀವು ಆ ಪತಿಯಂದಿರ ಆಜ್ಞಾಪಾಲನೆ ಮಾಡಿದರೆ ಮತ್ತು ಅವರ ಹಕ್ಕುಗಳನ್ನು ಗುರುತಿಸಿ ಪಾಲಿಸಿದರೆ, ಅದಕ್ಕೆ ಪುರುಷರು ಯುದ್ಧರಂಗದಲ್ಲಿ ಮಾಡುವ ಜಿಹಾದ್‌ನಷ್ಟು ಸ್ಥಾನಮಾನವಿದೆ." *[ಅಲ್ ಮುಂದಿರೀ]*

ಟಿಪ್ಪಣಿ: ಪ್ರತಿನಿಧಿಯಾಗಿ ಬಂದ ಆ ಮಹಿಳೆಯ ಹೆಸರು ಅಸ್ಮಾ ಬಿನ್ತಿ ಯಝೀದ್(ರ) ಎಂದಾಗಿತ್ತು. ಆಕೆ ಬಹಳ ವಿದ್ಯಾವಂತ ಮಹಿಳೆಯಾಗಿದ್ದರು. ಹಾಗೆಯೇ ಅತ್ಯುತ್ತಮ ಭಾಷಣ ಗಾರ್ತಿಯೂ ಆಗಿದ್ದರು. ತಮ್ಮ ಮನದಿಂಗಿತವನ್ನು ಬಹಳ ಸೊಗಸಾಗಿ ಪ್ರಕಟಿಸುವ ವಿಶೇಷ ಕೌಶಲ್ಯವನ್ನು ಅಲ್ಲಾಹನು ಅವರಿಗೆ ದಯಪಾಲಿಸಿದ್ದನು. ಅಂತೆಯೇ ಪ್ರವಾದಿ(ಸ) ಆ ಸಭೆಯಲ್ಲಿ ತಮ್ಮ

ಮುಂದಿದ್ದ ಜನರ ಸಮಕ್ಷಮ ಆಕೆಯ ಈ ವಿಶೇಷತೆಗಳನ್ನು ಪ್ರಶಂಸಿಸಿದರು. ಅಸ್ಮಾ, ಪ್ರವಾದಿ ವರ್ಯರ(ಸ) ಬಳಿಗೆ ಹೋಗಿದ್ದುದು 'ಸ್ತ್ರೀ-ಪುರುಷ ಸಮಾನತೆಯ ವಿಚಾರವನ್ನು ಚರ್ಚಿಸುವುದಕ್ಕಾಗಿರಲಿಲ್ಲ. ವಾಸ್ತವದಲ್ಲಿ ಆಕೆ ಮತ್ತು ಆ ಕಾಲದ ಇತರ ಮಹಿಳೆಯರು ಈ ಮೂಲಕ ಧರ್ಮ ಸಂಸ್ಥಾಪನಾ ಕಾರ್ಯದ ವಿವಿಧ ಹಂತಗಳಲ್ಲಿ ತೆರೆಮರೆಯಲ್ಲಿ ಸೇವೆ ಸಲ್ಲಿಸುವ ಮಹಿಳೆಯರು ಧರ್ಮ ಸಂಸ್ಥಾಪನೆಯ ಪುಣ್ಯದಿಂದ ವಂಚಿತರಾಗುವುದಿಲ್ಲ ಮಾತ್ರವಲ್ಲ, ಯುದ್ಧರಂಗದಲ್ಲಿ ಜಿಹಾದ್‌ನಲ್ಲಿ ನಿರತರಾಗಿರುವ ಪುರುಷರಿಗೆ ಸಿಗುವಷ್ಟೇ ಪುಣ್ಯಕ್ಕೆ ಅವರೂ ಅರ್ಹರಾಗಿರುವರು- ಎಂಬ ಶುಭವಾರ್ತೆಯನ್ನು ಪಡೆಯ ಬಯಸಿದ್ದರು.

❖ ❖ ❖

ನೆರೆಕರೆಯವರ ಹಕ್ಕು

ನೆರೆಯವರಿಗೆ ಕಿರುಕುಳ

(118) عَنْ أَبِي هُرَيْرَةَ قَالَ، قَالَ رَسُولُ اللهِ صَلَّى اللهُ عَلَيْهِ وَسَلَّمَ وَاللهِ لَا يُؤْمِنُ وَاللهِ لَا يُؤْمِنُ وَاللهِ لَا يُؤْمِنُ، قِيلَ مَنْ يَا رَسُولَ اللهِ؟ قَالَ الَّذِي لَا يَأْمَنُ جَارُهُ بَوَائِقَهُ

ಅಬೂಹುರೈರಾರಿಂದ(ರ) ವರದಿ: ಪ್ರವಾದಿ ಮುಹಮ್ಮದ್(ಸ) ಹೇಳಿದರು-

"ಅಲ್ಲಾಹನಾಣೆ, ಅವನಲ್ಲಿ ಧರ್ಮ ವಿಶ್ವಾಸವಿಲ್ಲ. ಅಲ್ಲಾಹನಾಣೆ, ಅವನಲ್ಲಿ ಧರ್ಮ ವಿಶ್ವಾಸವಿಲ್ಲ. ಅಲ್ಲಾಹನಾಣೆ, ಅವನಲ್ಲಿ ಧರ್ಮ ವಿಶ್ವಾಸವಿಲ್ಲ."

ಜನರು ಗಾಬರಿಗೊಂಡು, "ಅಲ್ಲಾಹನ ಸಂದೇಶವಾಹಕರೇ, ಯಾರಲ್ಲಿ?" ಎಂದು ವಿಚಾರಿಸಿದರು. ಪ್ರವಾದಿ(ಸ) ಹೇಳಿದರು:

"ಯಾರ ಕಿರುಕುಳಗಳಿಂದ ಅವನ ನೆರೆಕರೆಯವರು ಸುರಕ್ಷಿತರಲ್ಲವೋ ಅವನಲ್ಲಿ ಧರ್ಮ ವಿಶ್ವಾಸವಿಲ್ಲ."

ಹಸಿದ ನೆರೆಯವ

(119) عَنِ ابْنِ عَبَّاسٍ رض قَالَ سَمِعْتُ رَسُولَ اللهِ صَلَّى اللهُ عَلَيْهِ وَسَلَّمَ يَقُولُ لَيْسَ الْمُؤْمِنُ بِالَّذِي يَشْبَعُ وَجَارُهُ جَائِعٌ إِلَى جَنْبِهِ (مشكوٰة)

ಇಬ್ನು ಅಬ್ಬಾಸ್(ರ) ಹೇಳುತ್ತಾರೆ- ಪ್ರವಾದಿ(ಸ) ಹೀಗೆ ಹೇಳಿದ್ದನ್ನು ನಾನು ಕೇಳಿದ್ದೇನೆ:

"ತನ್ನ ನೆರೆಯವನು ಹಸಿದ ಹೊಟ್ಟೆಯಲ್ಲಿ ಮಲಗುವಾಗ ತಾನು ಹೊಟ್ಟೆ ತುಂಬಾ ಉಂಡು ಮಲಗುವವ ಸತ್ಯ ವಿಶ್ವಾಸಿ ಆಗಿರುವುದಿಲ್ಲ." [ಮಿಶ್ಕಾತ್]

ನೆರೆಹೊರೆಯವರಿಗೆ ಸಹಾಯ

(120) عَنْ أَبِي ذَرٍّ قَالَ، قَالَ رَسُولُ اللهِ صَلَّى اللهُ عَلَيْهِ وَسَلَّمَ يَا أَبَا ذَرٍّ إِذَا
طَبَخْتَ مَرَقَةً فَأَكْثِرْ مَاءَهَا وَتَعَاهَدْ جِيرَانَكَ (مسلم)

ಅಬೂದರ್ ಗಿಫ್ಫಾರಿ(ರ) ಹೇಳುತ್ತಾರೆ-

ಪ್ರವಾದಿ(ಸ) ಹೇಳಿದರು: "ಅಬೂದರ್‌! ನೀವು ಮಾಂಸ ಬೇಯಿಸುವಾಗ ಅದರ ಸಾರನ್ನು ಹೆಚ್ಚಿಸಿರಿ ಮತ್ತು ನೆರೆಯವರ ಕ್ಷೇಮ ವಿಚಾರಿಸಿರಿ. (ಅಂದರೆ ನೆರೆಹೊರೆಯವರ ಪೈಕಿ ಯಾರ ಮನೆಯಲ್ಲಿ ಸಾರು ಬೆಂದಿಲ್ಲ ಅಥವಾ ಯಾರ ಬಳಿ ಸಾರು ಕಡಿಮೆ ಇದೆ ಎಂಬುದನ್ನು ಅರಿತುಕೊಂಡು ಅವರಿಗೆ ಸಾರನ್ನು ತಲುಪಿಸಿರಿ) *[ಮುಸ್ಲಿಮ್]*

ನೆರೆಯವರಿಗೆ ಉಡುಗೊರೆ

(121) عَنْ أَبِي هُرَيْرَةَ قَالَ، قَالَ رَسُولُ اللهِ صَلَّى اللهُ عَلَيْهِ وَسَلَّمَ يَا نِسَاءَ الْمُسْلِمَاتِ
لَا تَحْقِرَنَّ جَارَةٌ لِجَارَتِهَا وَلَوْ فِرْسِنَ شَاةٍ (بخاري، مسلم)

ಅಬೂ ಹುರೈರಾ(ರ) ಹೇಳುತ್ತಾರೆ-

ಅಲ್ಲಾಹನ ಸಂದೇಶವಾಹಕರು(ಸ) ಮುಸ್ಲಿಮ್ ಮಹಿಳೆಯರನ್ನುದ್ದೇಶಿಸಿ ಮಾತನಾಡುತ್ತಾ ಹೇಳಿದರು:

"ಮುಸ್ಲಿಮ್ ಮಹಿಳೆಯರೇ! ನೆರೆಹೊರೆಯವರಿಗೆ ಸಣ್ಣ ಪುಟ್ಟ ವಸ್ತುಗಳ ಉಡುಗೊರೆ ಕಳುಹಿಸಿಕೊಡುವುದನ್ನು ಯಾವ ಮಹಿಳೆಯೂ ಹಗುರವಾಗಿ ಪರಿಗಣಿಸಬಾರದು- ಅದು ಕೇವಲ ಆಡಿನ ಒಂದು ಗೊರಸಾಗಿದ್ದರೂ ಸರಿ." *[ಬುಖಾರಿ, ಮುಸ್ಲಿಮ್]*

ಟಿಪ್ಪಣಿ: ಆಡಿನ ಗೊರಸು ಎಂಬುದು ಅರಬೀ ಭಾಷೆಯಲ್ಲಿ ತೀರಾ ಸಾಮಾನ್ಯ ವಸ್ತು ಎಂಬರ್ಥದಲ್ಲಿ ಬಳಕೆಯಾಗುವ ನುಡಿಗಟ್ಟು. ಸಾಮಾನ್ಯವಾಗಿ ಮಹಿಳೆಯರು ಸಣ್ಣ ಪ್ರಮಾಣದ ಅಥವಾ ಕಡಿಮೆ ಬೆಲೆಯ ವಸ್ತುಗಳನ್ನು ತಮ್ಮ ನೆರೆಹೊರೆಯವರಿಗೆ ಕಳುಹಿಸಿಕೊಡುವುದನ್ನು ಇಷ್ಟಪಡುವುದಿಲ್ಲ. ಕಳುಹಿಸುವುದಾದರೆ ಒಳ್ಳೆಯ ಹಾಗೂ ಬೆಲೆ ಬಾಳುವ ವಸ್ತುಗಳನ್ನೇ ಕಳುಹಿಸಬೇಕು ಎಂದು ಅವರು ಭಾವಿಸುತ್ತಾರೆ. ಆದರೆ ಪ್ರವಾದಿವರ್ಯರು(ಸ), ತೀರಾ ಸಾಮಾನ್ಯ ವಸ್ತುಗಳನ್ನು ಕೂಡಾ ನಿಸ್ಸಂಕೋಚವಾಗಿ ನೆರೆಯವರಿಗೆ ಕಳುಹಿಸಬಹುದೆಂದು ಮಹಿಳೆಯರಿಗೆ ತಿಳಿಸಿದ್ದಾರೆ. ಆದ್ದರಿಂದ, ಒಬ್ಬ ಮಹಿಳೆಗೆ ಆಕೆಯ ನೆರೆಯವಳು ಏನಾದರೂ ಉಡುಗೊರೆ ಕಳುಹಿಸಿದರೆ, ಆ ವಸ್ತು ಎಷ್ಟೇ ಕನಿಷ್ಠ ಬೆಲೆಯದ್ದಾಗಿದ್ದರೂ

ಆಕೆ ಅದನ್ನು ಪ್ರೀತಿ ಹಾಗೂ ಸಂತೋಷದಿಂದ ಸ್ವೀಕರಿಸಿ ಕೊಳ್ಳಬೇಕು. ಅಂತಹ ಉಡುಗೊರೆಗಳನ್ನು ತುಚ್ಛವಾಗಿ ಕಾಣಬಾರದು. ಅದರ ಬಗ್ಗೆ ಟೀಕೆಯ ಮಾತುಗಳನ್ನಾಡಬಾರದು.

ಪರಲೋಕದಲ್ಲಿ ಪ್ರಥಮ ವಿಚಾರಣೆ

(122) عَنْ عُقْبَةَ بْنِ عَامِرٍ قَالَ قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ أَوَّلُ خَصْمَيْنِ يَوْمَ الْقِيَامَةِ جَارَانِ

ಉಕ್ಬಾ ಬಿನ್ ಆಮಿರ್(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು: ಇಬ್ಬರು ನೆರೆಕರೆಯವರ ಮೊಕದ್ದಮೆಯನ್ನು ಪರಲೋಕದಲ್ಲಿ ಪ್ರಥಮವಾಗಿ ವಿಚಾರಣೆಗೆತ್ತಿಕೊಳ್ಳಲಾಗುವುದು.

[ಮಿಶ್ಕಾತ್]

ಟಿಪ್ಪಣಿ: ಅಂದರೆ ಪುನರುತ್ಥಾನ ದಿನ ಅಲ್ಲಾಹನು ಕೈಗೆತ್ತಿಕೊಳ್ಳಲಿರುವ, ಮಾನವೀಯ ಹಕ್ಕುಗಳಿಗೆ ಸಂಬಂಧಿಸಿದ ಮೊಕದ್ದಮೆಗಳ ಪೈಕಿ ಪ್ರಥಮ ಮೊಕದ್ದಮೆಯು ಪರಸ್ಪರ ನೆರೆಹೊರೆಯಲ್ಲಿ ವಾಸವಾಗಿದ್ದ ಇಬ್ಬರು ವ್ಯಕ್ತಿಗಳದ್ದಾಗಿರುವುದು. ಅವರು ನೆರೆಹೊರೆಯಲ್ಲಿ ವಾಸಿಸುವವರಾಗಿದ್ದರೂ ಪರಸ್ಪರ ಕಿರುಕುಳ ಕೊಟ್ಟರು, ವಂಚಿಸಿದರು ಅಥವಾ ಜಗಳಾಡಿಕೊಂಡರು ಎಂಬುದೇ ಮೊಕದ್ದಮೆಯ ವಿಷಯವಾಗಿರುವುದು. ಮುಸ್ಲಿಮರಿಗೆ ಸಂಬಂಧಿಸಿದ ಎಲ್ಲ ವಿವಾದಗಳ ವಿಚಾರಣೆಯು ಪ್ರವಾದಿ ಮುಹಮ್ಮದ್‌ರ(ಸ) ಸಮಕ್ಷಮವೇ ನಡೆಯುವುದು. ಈ ವಚನದಲ್ಲಿ ಸೂಚಿಸಿರುವಂತಹ ಮೊಕದ್ದಮೆಯ ವೇಳೆ ಪ್ರವಾದಿವರ್ಯರು(ಸ), ಮುಸ್ಲಿಮರಿಗೆ ಇತರ ಮುಸ್ಲಿಮರ ಬಗ್ಗೆ ಇರುವ ಬಾಧ್ಯತೆಗಳೇನು ಮತ್ತು ನೆರೆಯವರು ಪರಸ್ಪರ ಯಾವ ರೀತಿ ವ್ಯವಹರಿಸಬೇಕು ಎಂಬ ಕುರಿತು ತಾನು ಎಲ್ಲವನ್ನೂ ಸ್ಪಷ್ಟವಾಗಿ ಹಾಗೂ ವಿವರವಾಗಿ ಜನರಿಗೆ ತಿಳಿಸಿದ್ದೆ ಎಂದು ಸಾಕ್ಷ್ಯ ನುಡಿಯುವರು.

ಸದ್ವರ್ತನೆಗೆ ಹೆಚ್ಚು ಅರ್ಹರು

(123) عَنْ عَائِشَةَ قَالَتْ قُلْتُ يَا رَسُوْلَ اللّٰهِ إِنَّ لِيْ جَارَيْنِ فَإِلٰى أَيِّهِمَا أُهْدِيْ؟ قَالَ إِلٰى أَقْرَبِهِمَا مِنْكِ بَابًا (بخاری)

ಹಝ್ರತ್ ಆಯಿಶಾ(ರ) ಹೇಳುತ್ತಾರೆ: ನಾನು ಪ್ರವಾದಿ(ಸ) ಅವರೊಂದಿಗೆ "ಅಲ್ಲಾಹನ ಸಂದೇಶವಾಹಕರೇ(ಸ)! ನನಗೆ ಇಬ್ಬರು ನೆರೆಹೊರೆಯವರಿದ್ದಾರೆ. ನಾನು ಏನಾದರೂ ಉಡುಗೊರೆ ಕಳುಹಿಸುವುದಾದರೆ ಅವರ ಪೈಕಿ ಯಾರ ಬಳಿಗೆ ಕಳುಹಿಸಬೇಕು?' ಎಂದು ವಿಚಾರಿಸಿದೆ. ಪ್ರವಾದಿ(ಸ) ಹೇಳಿದರು:

"ಯಾರ ಮನೆಬಾಗಿಲು ನಿನ್ನ ಮನೆಬಾಗಿಲಿಗೆ ಅತಿ ಹೆಚ್ಚು ಹತ್ತಿರವಿದೆಯೋ ಅವರ ಬಳಿಗೆ."
[ಬುಖಾರಿ]

ಸ್ವರ್ಗ-ನರಕದ ತೀರ್ಮಾನದಲ್ಲಿ ನೆರೆಯವರ ಪಾತ್ರ

(124) عَنْ أَبِي هُرَيْرَةَ قَالَ: قَالَ رَجُلٌ يَا رَسُوْلَ اللهِ إِنَّ فُلَانَةَ
تُذْكَرُ مِنْ كَثْرَةِ صَلَاتِهَا وَصِيَامِهَا وَصَدَقَتِهَا غَيْرَ أَنَّهَا تُؤْذِيْ جِيْرَانَهَا
بِلِسَانِهَا، قَالَ هِيَ فِي النَّارِ، قَالَ يَا رَسُوْلَ اللهِ فَإِنَّ فُلَانَةَ تُذْكَرُ قِلَّةُ صِيَامِهَا
وَصَدَقَتِهَا وَصَلَاتِهَا وَإِنَّهَا تَصَدَّقُ بِالْأَثْوَارِ مِنَ الْأَقِطِ وَلَا تُؤْذِيْ
بِلِسَانِهَا جِيْرَانَهَا قَالَ هِيَ فِي الْجَنَّةِ (مشكوة)

ಅಬೂ ಹುರೈರಾ(ರ) ಹೇಳುತ್ತಾರೆ- ಒಬ್ಬ ವ್ಯಕ್ತಿ ಹೇಳಿದನು:

"ಅಲ್ಲಾಹನ ಸಂದೇಶವಾಹಕರೇ(ಸ)! ಓರ್ವ ಮಹಿಳೆ ಇದ್ದಾಳೆ. ಆಕೆ ಐಚ್ಛಿಕ ನಮಾಝ್‌ಗಳನ್ನು ಅತ್ಯಧಿಕವಾಗಿ ನೆರವೇರಿಸುವುದರಲ್ಲಿ, ಬಹಳಷ್ಟು ಐಚ್ಛಿಕ ಉಪವಾಸಗಳನ್ನು ಆಚರಿಸುವುದರಲ್ಲಿ ಮತ್ತು ಭಾರೀ ದಾನಧರ್ಮ ಮಾಡುವುದರಲ್ಲಿ ಪ್ರಸಿದ್ಧಳಾಗಿದ್ದಾಳೆ. ಆದರೆ ಅವಳು ತನ್ನ ಮಾತುಗಳಿಂದ ತನ್ನ ನೆರೆಹೊರೆಯವರಿಗೆ ಕಿರುಕುಳ ಕೊಡುತ್ತಾಳೆ."

ಪ್ರವಾದಿ(ಸ) ಹೇಳಿದರು- "ಆಕೆ ನರಕಕ್ಕೆ ಹೋಗುವಳು."

ಆ ವ್ಯಕ್ತಿ ಹೇಳಿದನು, "ಇನ್ನೋರ್ವ ಮಹಿಳೆ ಐಚ್ಛಿಕ ನಮಾಝ್‌ಗಳನ್ನು ನಿರ್ವಹಿಸುವುದು ಕಡಿಮೆ. ಐಚ್ಛಿಕ ಉಪವಾಸಗಳನ್ನು ಆಚರಿಸುವುದೂ ಕಡಿಮೆ. ದಾನಧರ್ಮಗಳನ್ನು ಕೂಡಾ ಕಡಿಮೆ ಪ್ರಮಾಣದಲ್ಲೇ ಮಾಡುತ್ತಾಳೆ. ಬಡವರಿಗೆ ಗಿಣ್ಣಿನ ಕೆಲವು ತುಂಡುಗಳನ್ನೂ ಹಂಚುತ್ತಾಳೆ. ಆದರೆ ಆಕೆ ಎಂದೂ ತನ್ನ ಮಾತುಗಳಿಂದ ನೆರೆಯವರಿಗೆ ಕಿರುಕುಳ ಕೊಡುವುದಿಲ್ಲ."

ಪ್ರವಾದಿ(ಸ) ಹೇಳಿದರು- "ಆಕೆ ಸ್ವರ್ಗಕ್ಕೆ ಹೋಗುವಳು." *[ಮಿಶ್ಕಾತ್]*

ಅತಿಥಿಯ ಹಕ್ಕು

(125) عَنْ خُوَيْلِدِ بْنِ عَمْرٍو أَنَّ رَسُولَ اللّٰهِ صَلَّى اللّٰهُ عَلَيْهِ وَسَلَّمَ قَالَ
مَنْ كَانَ يُؤْمِنُ بِاللّٰهِ وَالْيَوْمِ الْآخِرِ فَلْيُكْرِمْ ضَيْفَهُ، جَائِزَتُهُ يَوْمٌ وَلَيْلَةٌ، وَالضِّيَافَةُ
ثَلَاثَةُ أَيَّامٍ، فَمَا بَعْدَ ذٰلِكَ فَهُوَ لَهُ صَدَقَةٌ، وَلَا يَحِلُّ لَهُ أَنْ يَثْوِيَ عِنْدَهُ
حَتّٰى يُحْرِجَهُ (بخاری ومسلم)

ಖುವೈಲಿದ್(ರ) ಬಿನ್ ಅಮ್ರ್ ವರದಿ ಮಾಡುತ್ತಾರೆ- ಅಲ್ಲಾಹನ ಸಂದೇಶವಾಹಕರು(ಸ) ಹೇಳಿದರು:

"ಅಲ್ಲಾಹನಲ್ಲಿ ಹಾಗೂ ಪುನರುತ್ಥಾನ ದಿನದಲ್ಲಿ ವಿಶ್ವಾಸವುಳ್ಳವರು ತಮ್ಮ ಅತಿಥಿಯನ್ನು ಚೆನ್ನಾಗಿ ಸತ್ಕರಿಸಿ ಆದರಿಸಬೇಕು. ಪ್ರಥಮ ದಿನವು ಪುರಸ್ಕಾರದ ದಿನವಾಗಿದೆ. (ಆದ್ದರಿಂದ ಮೊದಲ ದಿನ ಅತಿಥಿಯನ್ನು ಬಹಳ ವಿಶೇಷವಾಗಿ ಸತ್ಕರಿಸಬೇಕು.) ಆತಿಥ್ಯವು ಮೂರು ದಿನಗಳವರೆಗೆ ಇರುತ್ತದೆ. ಆ ಬಳಿಕ ಅತಿಥೇಯನು ಏನು ಮಾಡಿದರೂ ಅದಕ್ಕೆ ಪುಣ್ಯಫಲವಿದೆ. ಆದರೆ ಅತಿಥಿಯು, ಅತಿಥೇಯನಿಗೆ ಕಷ್ಟ ಹಾಗೂ ಕಿರುಕುಳವಾಗುವ ರೀತಿಯಲ್ಲಿ ಮೂರು ದಿನಗಳಿಗಿಂತ ಹೆಚ್ಚು ಕಾಲ ತಂಗಬಾರದು." *[ಬುಖಾರಿ, ಮುಸ್ಲಿಮ್]*

ಟಿಪ್ಪಣಿ: ಈ ಪ್ರವಾದಿ ವಚನದಲ್ಲಿ ಅತಿಥಿ ಮತ್ತು ಅತಿಥೇಯರಿಬ್ಬರಿಗೂ ಸೂಕ್ತ ಬೋಧನೆ ಇದೆ. ಅತಿಥೇಯನು ತನ್ನ ಅತಿಥಿಗೆ ಸರಿಯಾದ ಸತ್ಕಾರ ನೀಡಬೇಕು ಮತ್ತು ಅತಿಥಿಯು ಮೂರು ದಿನಗಳಿಗಿಂತ ಹೆಚ್ಚು ಕಾಲ ಒಂದೆಡೆ ಅತಿಥಿಯಾಗಿ ನಿಲ್ಲಬಾರದು ಎಂದು ಬೋಧಿಸಲಾಗಿದೆ. ಸ್ವತಃ ಅತಿಥೇಯನೇ ಸಂತೋಷದಿಂದ ತನ್ನ ಅತಿಥಿಯನ್ನು ತನ್ನ ಬಳಿ ಹೆಚ್ಚು ಕಾಲ ತಂಗುವಂತೆ ಆಗ್ರಹಿಸಿದರೆ ಆ ವಿಷಯ ಬೇರೆ. ಸಹೀಹ್ ಮುಸ್ಲಿಮ್‌ನಲ್ಲಿ ಉಲ್ಲೇಖಿಸಲಾಗಿರುವ ಒಂದು ಪ್ರವಾದಿವಚನವು, ಈ ಹದೀಸ್‌ನ ಕೊನೆಯ ಭಾಗವನ್ನು ಸರಿಯಾಗಿ ವ್ಯಾಖ್ಯಾನಿಸುತ್ತದೆ. ಅದರಲ್ಲಿ ಹೀಗಿದೆ:

ತನ್ನ ಸಹೋದರನು(ಅತಿಥೇಯನು) ಕಿರುಕುಳಕ್ಕೆ ಒಳಗಾಗುವಷ್ಟು ಕಾಲ ಆತನ ಬಳಿ (ಅತಿಥಿಯಾಗಿ) ತಂಗುವುದು ಯಾವುದೇ ಮುಸ್ಲಿಮನ ಪಾಲಿಗೆ ಧರ್ಮಸಮ್ಮತವಲ್ಲ ಎಂದು ಪ್ರವಾದಿ(ಸ) ಹೇಳಿದರು. "ಅತಿಥಿಯಿಂದಾಗಿ ಆತನಿಗೆ ಕಿರುಕುಳವಾಗುವುದು ಹೇಗೆ?" ಎಂದು ಜನರು ಪ್ರಶ್ನಿಸಿದರು. ಆಗ ಪ್ರವಾದಿ(ಸ) ಹೇಳಿದರು: "ಅತಿಥೇಯನ ಬಳಿ ಆತಿಥ್ಯಕ್ಕೆ ಏನೂ ಉಳಿದಿಲ್ಲದಿರುವಾಗ ಅತಿಥಿಯಾಗಿ ಮುಂದುವರಿಯುವುದು."

❖ ❖ ❖

ಬಡವರ ಹಕ್ಕುಗಳು

ಬಡವರೊಂದಿಗೆ ಅಲ್ಲಾಹನ ಸಂಬಂಧ

(126) عَنْ أَبِي هُرَيْرَةَ قَالَ قَالَ رَسُولُ اللّٰهِ صَلَّى اللّٰهُ عَلَيْهِ وَسَلَّمَ إِنَّ اللّٰهَ عَزَّ وَجَلَّ يَقُولُ يَوْمَ الْقِيَامَةِ يَا ابْنَ آدَمَ اسْتَطْعَمْتُكَ فَلَمْ تُطْعِمْنِي، قَالَ يَا رَبِّ كَيْفَ أُطْعِمُكَ وَأَنْتَ رَبُّ الْعَالَمِينَ؟ قَالَ أَمَا عَلِمْتَ أَنَّهُ اسْتَطْعَمَكَ عَبْدِي فُلَانٌ فَلَمْ تُطْعِمْهُ؟ أَمَا عَلِمْتَ أَنَّكَ لَوْ أَطْعَمْتَهُ لَوَجَدْتَ ذٰلِكَ عِنْدِي، يَا ابْنَ آدَمَ اسْتَسْقَيْتُكَ فَلَمْ تَسْقِنِي، قَالَ يَا رَبِّ كَيْفَ أَسْقِيكَ وَأَنْتَ رَبُّ الْعَالَمِينَ؟ قَالَ اسْتَسْقَاكَ عَبْدِي فُلَانٌ فَلَمْ تَسْقِهِ، أَمَا إِنَّكَ لَوْ سَقَيْتَهُ لَوَجَدْتَ ذٰلِكَ عِنْدِي (مسلم)

ಅಬೂ ಹುರೈರಾರ(ರ) ಹೇಳುತ್ತಾರೆ-

ಪ್ರವಾದಿ ಮುಹಮ್ಮದ್(ಸ) ಹೇಳಿದರು: ಪುನರುತ್ಥಾನ ದಿನ ಅಲ್ಲಾಹನು (ಮಾನವ ರೊಡನೆ) ಹೇಳುವನು, "ಆದಮನ ಪುತ್ರನೇ! ನಾನು ನಿನ್ನೊಡನೆ ಆಹಾರ ಬೇಡಿದ್ದೆ. ಆದರೆ ನೀನು ನನಗೆ ಆಹಾರ ಕೊಡಲಿಲ್ಲ."

ಮಾನವನು ಹೇಳುವನು: "ನನ್ನ ಪ್ರಭುವೇ! ನಿನಗೆ ನಾನು ಆಹಾರ ಹೇಗೆ ನೀಡಲಿ? ನೀನಂತೂ ಜಗದೊಡೆಯನಾಗಿರುವೆ. (ನೀನೇ ಸಕಲ ಜನರಿಗೆ ಆಹಾರ ನೀಡುವವನು. ನಿನಗೆ ಆಹಾರದ ಅಗತ್ಯವಿದೆಯೇ?)" ಆಗ ಅಲ್ಲಾಹನು ಹೇಳುವನು: "ನನ್ನ ಇಂತಿಂತಹ ದಾಸನು (ಓರ್ವ ಮನುಷ್ಯನು) ಹಸಿದಿದ್ದನು. ಅವನು ನಿನ್ನೊಡನೆ ಆಹಾರ ಬೇಡಿದ್ದನು. ಆದರೆ (ನಿನ್ನ ಬಳಿ ಸಾಕಷ್ಟು ಆಹಾರವಿದ್ದರೂ) ನೀನು ಆತನಿಗೆ ಕೊಡಲಿಲ್ಲ. ಅಂದು ನೀನು ಅವನ ಹೊಟ್ಟೆಯ (ಹಸಿವಿನ) ಬೆಂಕಿಯನ್ನು ತಣಿಸಿರುತ್ತಿದ್ದರೆ ಆದರ ಪುಣ್ಯಫಲವನ್ನು ಇಂದು ನನ್ನ ಬಳಿ ಕಾಣುತ್ತಿದ್ದೆ. ಇದು ನಿನಗೆ ತಿಳಿದಿರಲಿಲ್ಲವೇ?"

ಆ ಬಳಿಕ ಅಲ್ಲಾಹನು ಹೇಳುವನು: "ಆದಮನ ಪುತ್ರನೇ! ನಾನು ನಿನ್ನೊಡನೆ ನೀರನ್ನು ಬೇಡಿದ್ದೆ. ಆದರೆ ನೀನು ನನ್ನ ದಾಹವನ್ನು ನೀಗಿಸಲಿಲ್ಲ." ಮಾನವನು ಹೇಳುವನು: "ನನ್ನ ಪ್ರಭುವೇ! ನಿನಗೆ ನಾನು ನೀರನ್ನು ಹೇಗೆ ಒದಗಿಸಲಿ? ನೀನಂತೂ ಜಗದೊಡೆಯನಾಗಿರುವೆ (ನೀನೇ ಸಕಲ ಜನರಿಗೆ ನೀರನ್ನು ಒದಗಿಸುವವನು. ನಿನಗೆ ಬಾಯಾರಿಕೆಯಾಗಲು ಸಾಧ್ಯವೇ?)" ಆಗ ಅಲ್ಲಾಹನು ಹೇಳುವನು: "ನಿನಗೆ ತಿಳಿದಿಲ್ಲವೇ? ನನ್ನ ಇಂತಿಂತಹ ದಾಸನು ನಿನ್ನಿಂದ

ನೀರನ್ನು ಬೇಡಿದ್ದನು. ಆದರೆ ನೀನು ಅವನ ದಾಹವನ್ನು ನೀಗಿಸಲಿಲ್ಲ. (ನಿಜವಾಗಿ ನಿನ್ನ ಬಳಿ ಹೆಚ್ಚು ನೀರು ಇತ್ತು.) ಅಂದು ನೀನು ಅವನ ದಾಹ ತೀರಿಸಿರುತ್ತಿದ್ದರೆ ಇಂದು ಅದರ ಪುರಸ್ಕಾರವನ್ನು ನನ್ನಿಂದ ಪಡೆಯುತ್ತಿದ್ದೆ." *[ಮುಸ್ಲಿಮ್]*

ಸತ್ಯವಿಶ್ವಾಸಿ ಬಡವರಿಗೆ ನೆರವು

(127) عَنْ أَبِي سَعِيدٍ الْخُدْرِيِّ ؓ قَالَ، قَالَ رَسُولُ اللهِ صَلَّى اللهُ عَلَيْهِ وَسَلَّمَ أَيُّمَا مُؤْمِنٍ أَطْعَمَ مُؤْمِنًا عَلَى جُوعٍ أَطْعَمَهُ اللهُ يَوْمَ الْقِيَامَةِ مِنْ ثِمَارِ الْجَنَّةِ، وَأَيُّمَا مُؤْمِنٍ سَقَى مُؤْمِنًا عَلَى ظَمَأٍ، سَقَاهُ اللهُ يَوْمَ الْقِيَامَةِ مِنَ الرَّحِيقِ الْمَخْتُومِ، وَأَيُّمَا مُؤْمِنٍ كَسَا مُؤْمِنًا عَلَى عُرْيٍ كَسَاهُ اللهُ مِنْ حُلَلِ الْجَنَّةِ (ترمذی)

ಅಬೂ ಸಈದ್ ಖುದ್ರೀ(ರ) ಹೇಳುತ್ತಾರೆ- ಪ್ರವಾದಿ ಮುಹಮ್ಮದ್(ಸ) ಹೇಳಿದರು:

"ಒಬ್ಬ ಸತ್ಯವಿಶ್ವಾಸಿಯು ಹಸಿದಿರುವ ಇನ್ನೊಬ್ಬ ಸತ್ಯವಿಶ್ವಾಸಿಗೆ ಉಣಬಡಿಸಿದರೆ ಅಲ್ಲಾಹನು ಪುನರುತ್ಥಾನ ದಿನ ಆತನಿಗೆ ಸ್ವರ್ಗದ ಆಹಾರವನ್ನು ಉಣಿಸುವನು. ಒಬ್ಬ ಸತ್ಯವಿಶ್ವಾಸಿಯು ದಾಹದಿಂದ ನರಳುತ್ತಿರುವ ಓರ್ವ ಸತ್ಯವಿಶ್ವಾಸಿಗೆ ನೀರು ಕುಡಿಸಿದರೆ ಅಲ್ಲಾಹನು ಪುನರುತ್ಥಾನ ದಿನ, ಆತನಿಗೆ ಮುದ್ರೆ ಹಾಕಿರುವ ಅತ್ಯುನ್ನತ ಮಟ್ಟದ ಪಾನೀಯವನ್ನು ಕುಡಿಸುವನು. ಓರ್ವ ಸತ್ಯವಿಶ್ವಾಸಿಯು ಉಡಲು ಬಟ್ಟೆಯಿಲ್ಲದ ಒಬ್ಬ ಸತ್ಯವಿಶ್ವಾಸಿಗೆ ಬಟ್ಟೆ ಉಡಿಸಿದರೆ, ಅಲ್ಲಾಹನು ಪುನರುತ್ಥಾನ ದಿನ ಆತನಿಗೆ ಸ್ವರ್ಗದ ಉಡುಪನ್ನು ಉಡಿಸುವನು." *[ತಿರ್ಮಿದೀ]*

ಸಹಾಯಕ್ಕೆ ಅರ್ಹನಾದ ಬಡವ ಯಾರು?

(128) قَالَ النَّبِيُّ صَلَّى اللهُ عَلَيْهِ وَسَلَّمَ لَيْسَ الْمِسْكِينُ الَّذِي يَطُوفُ عَلَى النَّاسِ تَرُدُّهُ اللُّقْمَةُ وَاللُّقْمَتَانِ وَالتَّمْرَةُ وَالتَّمْرَتَانِ وَلَكِنِ الْمِسْكِينُ الَّذِي لَا يَجِدُ غِنًى يُغْنِيهِ وَلَا يُفْطَنُ لَهُ فَيُتَصَدَّقَ عَلَيْهِ وَلَا يَقُومُ فَيَسْأَلُ النَّاسَ (بخاری، مسلم)

ಪ್ರವಾದಿ(ಸ) ಹೇಳಿದರು:

"ಭಿಕ್ಷುಕನಾಗಿ ಜನರ ಮುಂದೆ ಬಂದು ಒಂದೆರಡು ತುತ್ತು ಅನ್ನ ಅಥವಾ ಒಂದೆರಡು ಖರ್ಜೂರಗಳನ್ನು ಬೇಡಿಕೊಂಡು ಹೋಗುವವನು ನಿಜವಾದ ಮಿಸ್ಕೀನ್ (ಸಹಾಯಕ್ಕೆ ಅರ್ಹನಾದ ಬಡವ) ಅಲ್ಲ. ತನ್ನ ಅಗತ್ಯಗಳನ್ನು ಈಡೇರಿಸಲು ಏನೂ ಲಭ್ಯವಿಲ್ಲದವನೇ ನಿಜವಾದ ಮಿಸ್ಕೀನ್. ಅವನು ತನ್ನ ಸ್ವಾಭಿಮಾನ ಮತ್ತು ಸಂಕೋಚದಿಂದಾಗಿ ಜನರ ಮುಂದೆ ಕೈ ಚಾಚುವುದಿಲ್ಲ. ಅವನಿಗೇನಾದರೂ ನೀಡೋಣವೆಂದರೆ ಜನರಿಗೆ ಅವನ ನಿಜ ಸ್ಥಿತಿಯೂ ಗೊತ್ತಾಗಿರುವುದಿಲ್ಲ." *[ಬುಖಾರಿ, ಮುಸ್ಲಿಮ್]*

ಸೇವಕರ ಹಕ್ಕು

(129) عَنْ اَبِیْ هُرَیْرَةَ رض قَالَ: قَالَ رَسُوْلُ اللّٰهِ صَلَّی اللّٰهُ عَلَیْهِ وَسَلَّمَ لِلْمَمْلُوْكِ طَعَامُهٗ وَكِسْوَتُهٗ وَلَا یُكَلَّفُ مِنَ الْعَمَلِ اِلَّا مَا یُطِیْقُ (مسلم)

ಅಬೂ ಹುರೈರಾ(ರ) ಹೇಳುತ್ತಾರೆ- ಪ್ರವಾದಿ ಮುಹಮ್ಮದ್(ಸ) ಹೇಳಿದರು:

"ಗುಲಾಮ ಮತ್ತು ದಾಸಿಯರಿಗೆ ಉಣ್ಣಲು ಮತ್ತು ಉಡಲು ಕೊಡಬೇಕು. ಅವರಿಗೆ ಮಾಡಲು ಸಾಧ್ಯವಿರುವಷ್ಟು ಕೆಲಸದ ಭಾರವನ್ನು ಮಾತ್ರ ಅವರ ಮೇಲೆ ಹೊರಿಸಬೇಕು. ಇದು ಅವರ ಹಕ್ಕು." *[ಮುಸ್ಲಿಮ್]*

ಟಿಪ್ಪಣಿ: ಮೂಲದಲ್ಲಿ 'ಮಮ್ಲೂಕ್' ಎಂಬ ಪದ ಬಳಕೆಯಾಗಿದ್ದು ಇದು ಇಸ್ಲಾಮಿನ ಆಗಮನಕ್ಕೆ ಮುಂಚಿನಿಂದಲೇ ಅರೇಬಿಯಾದಲ್ಲಿದ್ದ ಗುಲಾಮರು ಮತ್ತು ದಾಸಿಯರನ್ನು ಸೂಚಿಸುತ್ತದೆ. ಹಿಂದೆ ಜನರು ಅವರನ್ನು 'ಪ್ರಾಣಿಗಳಿಗಿಂತಲೂ ಕೀಳಾಗಿ ಕಾಣುತ್ತಿದ್ದರು. ಅವರಿಗೆ ಸರಿಯಾದ ಆಹಾರವನ್ನಾಗಲಿ, ವಸ್ತ್ರಗಳನ್ನಾಗಲಿ ಕೊಡುತ್ತಿರಲಿಲ್ಲ. ಅವರ ಶಕ್ತಿಗೆ ಮೀರಿ ಅವರಿಂದ ಕೆಲಸ ಮಾಡಿಸುತ್ತಿದ್ದರು. ಪ್ರವಾದಿ ವರ್ಯರು(ಸ) ಈ ದುರ್ವರ್ತನೆಯನ್ನು ವಿರೋಧಿಸಿದರು. ಅವರಿಗೆ ಸೂಕ್ತ ಆಹಾರ, ಬಟ್ಟೆಬರೆ ಇತ್ಯಾದಿ ಗಳನ್ನು ಒದಗಿಸಬೇಕು ಮತ್ತು ಅವರಿಂದ ಲಘುವಾದ ಕೆಲಸಗಳನ್ನು ಮಾಡಿಸಬೇಕೆಂದು ಅವರು ಮುಸ್ಲಿಮ್ ಸಮಾಜಕ್ಕೆ ಆದೇಶಿಸಿದರು. ಶಾಶ್ವತವಾಗಿ ಹಗಲಿರುಳು ನೌಕರಿಯಲ್ಲಿರುವ ಸೇವಕರ ಮಟ್ಟಿಗೂ ಈ ಆದೇಶವು ಅನ್ವಯವಾಗುತ್ತದೆ. ಈ ನಿಟ್ಟಿನಲ್ಲಿ ಅಬೂ ಕಿಬಾಲರ(ರ) ಒಂದು ವರದಿ ಗಮನಾರ್ಹವಾಗಿದೆ. ಅವರು ಹೇಳುತ್ತಾರೆ:

ಸಲ್ಮಾನ್ ಫಾರ್ಸಿ(ರ) ರಾಜ್ಯಪಾಲರಾಗಿದ್ದ ಕಾಲದಲ್ಲಿ ಅವರ ಬಳಿಗೆ ಬಂದ ಓರ್ವ ವ್ಯಕ್ತಿ, ರಾಜ್ಯಪಾಲರೇ ಸ್ವತಃ ಹಿಟ್ಟು ರುಬ್ಬುತ್ತಿರುವುದನ್ನು ಕಂಡು 'ಇದೇನು' ತಾವೇ ರುಬ್ಬುತ್ತಿದ್ದೀರಿ ಎಂದು ಆಶ್ಚರ್ಯದಿಂದ ಕೇಳಿದರು. ಆಗ ಸಲ್ಮಾನ್ ಫಾರ್ಸಿ(ರ) ಹೇಳಿದರು: "ನಾನು ನನ್ನ ಸೇವಕನನ್ನು ಒಂದು ಕೆಲಸದ ನಿಮಿತ್ತ ಹೊರಗೆ ಕಳುಹಿಸಿದ್ದೇನೆ. ಅವನ ಮೇಲೆ ಎರಡೆರಡು ಕೆಲಸಗಳ ಭಾರ ಹೊರಿಸುವುದು ನನಗೆ ಇಷ್ಟವಿಲ್ಲ."

---

(130) عَنْ أَبِي هُرَيْرَةَ قَالَ، قَالَ رَسُولُ اللهِ صَلَّى اللهُ عَلَيْهِ وَسَلَّمَ: إِخْوَانُكُمْ خَوَلُكُمْ جَعَلَهُمُ اللهُ تَحْتَ أَيْدِيكُمْ، فَمَنْ جَعَلَ اللهُ أَخَاهُ تَحْتَ يَدَيْهِ فَلْيُطْعِمْهُ مِمَّا يَأْكُلُ، وَلْيُلْبِسْهُ مِمَّا يَلْبَسُ، وَلَا يُكَلِّفْهُ مِنَ الْعَمَلِ مَا يَغْلِبُهُ، فَإِنْ كَلَّفَهُ مَا يَغْلِبُهُ فَلْيُعِنْهُ عَلَيْهِ (بخاري ومسلم)

ಅಬೂ ಹುರೈರಾ(ರ) ಹೇಳುತ್ತಾರೆ- ಪ್ರವಾದಿ ಮುಹಮ್ಮದ್(ಸ) ಹೇಳಿದರು:

"ಈ ಗುಲಾಮರು ನಿಮ್ಮ ಸಹೋದರರು. ಅವರನ್ನು ಸದ್ಯ ಅಲ್ಲಾಹನು ನಿಮ್ಮ ಅಧೀನಕ್ಕೆ ಕೊಟ್ಟಿರುವನು. ಅಲ್ಲಾಹನು ಒಬ್ಬನ ಸಹೋದರನನ್ನು ಆತನ ನಿಯಂತ್ರಣಕ್ಕೆ ಕೊಟ್ಟಿದ್ದರೆ ಆತನು ತಾನು ಉಣ್ಣುವುದನ್ನೇ ಆ ಸಹೋದರನಿಗೆ ಉಣಿಸಬೇಕು. ತಾನು ಉಡುವುದನ್ನೇ ಅವನಿಗೆ ಉಡಿಸಬೇಕು. ಅವನಿಗೆ ಸಾಧ್ಯವಿಲ್ಲದ ಯಾವುದೇ ಕೆಲಸವನ್ನು ಅವನಿಂದ ಮಾಡಿಸಬಾರದು. ಎಂದಾದರೂ ಒಂದು ಕಷ್ಟದ ಕೆಲಸವನ್ನು ಅವನಿಗೆ ವಹಿಸಿಕೊಡುವುದಾದಲ್ಲಿ, ಆ ಕೆಲಸದಲ್ಲಿ ಅವನಿಗೆ ಸಹಾಯ ಮಾಡಬೇಕು."

[ಬುಖಾರಿ, ಮುಸ್ಲಿಮ್]

---

(131) عَنْ أَبِي هُرَيْرَةَ رضي الله عنه قَالَ، قَالَ رَسُولُ اللهِ صَلَّى اللهُ عَلَيْهِ وَسَلَّمَ: إِذَا صَنَعَ لِأَحَدِكُمْ خَادِمُهُ طَعَامَهُ ثُمَّ جَاءَهُ بِهِ وَقَدْ وَلِيَ حَرَّهُ وَدُخَانَهُ فَلْيُقْعِدْهُ مَعَهُ فَلْيَأْكُلْ، فَإِنْ كَانَ الطَّعَامُ مَشْفُوهًا قَلِيلًا فَلْيَضَعْ فِي يَدِهِ أُكْلَةً أَوْ أُكْلَتَيْنِ (مسلم)

ಅಬೂ ಹುರೈರಾ(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು:

"ನಿಮ್ಮಲ್ಲೊಬ್ಬನ ಸೇವಕನು ಅಡುಗೆ ಮಾಡಿ ಆಹಾರವನ್ನು ಆತನ ಮುಂದೆ ತರುವಾಗ ಅಡುಗೆಯ ವೇಳೆ ಅವನು ಸಹಿಸಿದ ಹಬೆ ಮತ್ತು ಹೊಗೆಯ ಲಕ್ಷಣಗಳು ಅವನ ಮುಖದಲ್ಲಿ ಕಂಡು ಬಂದರೆ, ಅವನು ಆ ತನ್ನ ಸೇವಕನನ್ನು ತನ್ನ ಪಕ್ಕದಲ್ಲೇ ಕುಳ್ಳಿರಿಸಿ ಅವನಿಗೆ ಊಟ ಮಾಡಿಸಬೇಕು. ಊಟ ಬಹಳ ಕಡಿಮೆಯಿದ್ದರೆ ಒಂದೆರಡು ತುತ್ತನ್ನಾದರೂ ಆ ಸೇವಕನ ಕೈಯಲ್ಲಿ ಇಡಬೇಕು."

[ಮುಸ್ಲಿಮ್]

ಗುಲಾಮರನ್ನು ಹಿಂಸಿಸಬಾರದು

(132) عَنْ اَبِيْ اُمَامَةَ رض اَنَّ رَسُوْلَ اللّٰهِ صَلَّى اللّٰهُ عَلَيْهِ وَسَلَّمَ وَهَبَ لِعَلِيٍّ
غُلَامًا فَقَالَ لَا تَضْرِبْهُ فَاِنِّيْ نُهِيْتُ عَنْ ضَرْبِ الْمُصَلِّيْنَ وَقَدْ رَاَيْتُهُ يُصَلِّيْ
(مشكوٰة)

ಅಬೂ ಉಮಾಮ(ರ) ಹೇಳುತ್ತಾರೆ- ಒಮ್ಮೆ ಪ್ರವಾದಿ(ಸ) ಓರ್ವ ಗುಲಾಮನನ್ನು ಹ. ಅಲೀ(ರ) ಅವರಿಗೆ ಉಡುಗೊರೆಯಾಗಿ ನೀಡುತ್ತಾ ಹೀಗೆ ಉಪದೇಶಿಸಿದರು:

"ಇವನಿಗೆ ಹೊಡೆಯಬೇಡ. ಏಕೆಂದರೆ ನಮಾಝ್ ಮಾಡುವವರಿಗೆ ಹೊಡೆಯಬಾರದೆಂದು ನನಗೆ ಆದೇಶಿಸಲಾಗಿದೆ. ಈ ವ್ಯಕ್ತಿ ನಮಾಝ್ ಮಾಡುವುದನ್ನು ನಾನು ಕಂಡಿದ್ದೇನೆ.

[ಮಿಶ್ಕಾತ್]

ಸೇವಕರ ಜೊತೆ ಸೌಜನ್ಯ

(133) عَنْ عَمْرِو بْنِ حُرَيْثٍ اَنَّ النَّبِيَّ صَلَّى اللّٰهُ عَلَيْهِ وَسَلَّمَ قَالَ مَا خَفَّفْتَ عَلٰى
خَادِمِكَ مِنْ عَمَلِهٖ كَانَ لَكَ اَجْرًا فِيْ مَوَازِيْنِكَ (المنذری بحوالہ مسند ابویعلی)

ಅಮ್ರ್ ಬಿನ್ ಹುರೈಸ್‌ರಿಂದ(ರ) ವರದಿ- ಪ್ರವಾದಿ(ಸ) ಹೇಳಿದರು:

"ನೀವು ನಿಮ್ಮ ಸೇವಕರಿಂದ ಎಷ್ಟು ಕಡಿಮೆ ಕೆಲಸ ಮಾಡಿಸುವಿರೋ ಅಷ್ಟೇ ಹೆಚ್ಚು ಪುಣ್ಯವನ್ನು ನಿಮ್ಮ ಕರ್ಮಪತ್ರದಲ್ಲಿ ಸೇರಿಸಲಾಗುವುದು."

[ಅಲ್ ಮುಂದಿರೀ, ಅಬೂಯಅ್‌ಲಾದ ಉದ್ಧರಣೆಯೊಂದಿಗೆ.]

❖ ❖ ❖

ಸಹ ಯಾತ್ರಿಕರ ಹಕ್ಕುಗಳು

ಸಹ ಯಾತ್ರಿಕರ ಸೇವೆ

(134) عَنْ سَهْلِ بْنِ سَعْدٍ قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ سَيِّدُ الْقَوْمِ خَادِمُهُمْ، فَمَنْ سَبَقَهُمْ بِخِدْمَةٍ لَمْ يَسْبِقُوْهُ بِعَمَلٍ إِلَّا الشَّهَادَةَ (مشكوٰة)

ಸಹ್ಲ್ ಬಿನ್ ಸಅದ್(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು: ಸಮುದಾಯದ ನಾಯಕನು (ಯಾತ್ರಾ ತಂಡದ ನಾಯಕ) ಅವರ ಸೇವಕನಾಗಿರುತ್ತಾನೆ. ಯಾತ್ರಾ ತಂಡದ ಸೇವೆಯಲ್ಲಿ ಮುಂಚೂಣಿಯಲ್ಲಿರುವ ನಾಯಕನನ್ನು ಯಾರೂ ತನ್ನ ಕರ್ಮಗಳ ಮೂಲಕ ಅತಿಜಯಿಸಲಾರರು - ಶಹಾದತ್‌ನ (ಹುತಾತ್ಮತೆ) ಹೊರತು. (ಇದು ಅತ್ಯುನ್ನತ ಸ್ಥಾನವಾಗಿದೆ.)

[ಮಿಶ್ಕಾತ್]

ಅಗತ್ಯಕ್ಕಿಂತ ಹೆಚ್ಚಿನ ವಸ್ತುಗಳನ್ನು ಸಹಯಾತ್ರಿಕರಿಗೆ ನೀಡುವುದು

(135) عَنْ أَبِي سَعِيْدٍ الْخُدْرِيِّ قَالَ بَيْنَمَا نَحْنُ فِي سَفَرٍ إِذْ جَاءَهُ رَجُلٌ عَلَى رَاحِلَةٍ فَجَعَلَ يَصْرِفُ وَجْهَهُ يَمِيْنًا وَشِمَالًا، فَقَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ مَنْ كَانَ مَعَهُ فَضْلُ ظَهْرٍ فَلْيَعُدْ بِهِ عَلَى مَنْ لَا ظَهْرَ لَهُ، وَمَنْ كَانَ مَعَهُ فَضْلُ زَادٍ فَلْيَعُدْ بِهِ عَلَى مَنْ لَا زَادَ لَهُ، قَالَ فَذَكَرَ مِنْ أَصْنَافِ الْمَالِ حَتّٰى رَأَيْنَا أَنَّهُ لَا حَقَّ لِأَحَدٍ مِنَّا فِي الْفَضْلِ (مسلم)

ಅಬೂ ಸಈದ್ ಖುದ್ರೀ(ರ) ಹೇಳುತ್ತಾರೆ- ಒಂದು ದಿನ ನಾವು ಪ್ರಯಾಣದಲ್ಲಿದ್ದೆವು. ಒಬ್ಬ ವ್ಯಕ್ತಿ ಪ್ರವಾದಿಯವರ(ಸ) ಬಳಿಗೆ ಸವಾರಿಯಲ್ಲಿ ಬಂದು ಅತ್ತಿತ್ತ ನೋಡತೊಡಗಿದ. (ಪ್ರವಾದಿ(ಸ) ಈ ವ್ಯಕ್ತಿ ಏನೋ ಅಗತ್ಯ ವಸ್ತುವಿಗಾಗಿ ನೋಡುತ್ತಿದ್ದಾನೆಂದು ಗ್ರಹಿಸಿ ಕೊಂಡರು) ಪ್ರವಾದಿ(ಸ) ಜನರೊಡನೆ ಹೀಗೆಂದರು: ಯಾರ ಬಳಿ ತನ್ನ ಅಗತ್ಯಕ್ಕಿಂತ ಹೆಚ್ಚಿನ ಸವಾರಿ ಇರುವುದೋ ಅವರು ಸವಾರಿಗೆ ಜಾನುವಾರು ಇಲ್ಲದವರಿಗೆ ಅದನ್ನು ನೀಡಬೇಕು.

ಯಾರ ಬಳಿ ಹೆಚ್ಚಿನ ಆಹಾರವಿರುವುದೋ ಅವರು ಆಹಾರ ಇಲ್ಲದವರಿಗೆ ಅದನ್ನು ನೀಡಬೇಕು. ಈ ರೀತಿ ಪ್ರವಾದಿ(ಸ) ಸಂಪತ್ತಿನ ಅನೇಕ ಪ್ರಕಾರಗಳ ಬಗ್ಗೆ ಪ್ರಸ್ತಾಪಿಸಿದರು. ಆಗ ನಾವು ಅಗತ್ಯಕ್ಕಿಂತ ಹೆಚ್ಚಿನ ವಸ್ತುಗಳ ಮೇಲೆ ನಮಗಾರಿಗೂ ಯಾವುದೇ ಹಕ್ಕು ಇಲ್ಲವೆಂದು ಭಾವಿಸಿದ್ದೆವು. *[ಮುಸ್ಲಿಮ್]*

ಪೈಶಾಚಿಕ ಸವಾರಿ ಮತ್ತು ಮನೆಗಳು

(136) عَنْ أَبِي هُرَيْرَةَ قَالَ، قَالَ رَسُولُ اللهِ صَلَّى اللهُ عَلَيْهِ وَسَلَّمَ تَكُونُ إِبِلٌ وَبُيُوتٌ لِلشَّيَاطِينِ أَمَّا إِبِلُ الشَّيَاطِينِ فَقَدْ رَأَيْتُهَا يَخْرُجُ أَحَدُكُمْ بِنَجِيبَاتٍ مَعَهُ قَدْ أَسْمَنَهَا فَلَا يَعْلُو بَعِيرًا مِنْهَا وَيَمُرُّ بِأَخِيهِ قَدِ انْقَطَعَ بِهِ فَلَا يَحْمِلُهُ، وَأَمَّا بُيُوتُ الشَّيَاطِينِ فَلَمْ أَرَهَا (ابوداؤد)

ಅಬೂ ಹುರೈರಾ(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು- ಕೆಲವು ಒಂಟೆಗಳು ಮತ್ತು ಕೆಲವು ಮನೆಗಳು ಪಿಶಾಚಿಗಳಿಗೆ ಸೇರಿದ್ದಾಗಿರುತ್ತವೆ. ಪಿಶಾಚಿಯ ಒಂಟೆಗಳನ್ನು ನಾನು ಕಂಡಿರುತ್ತೇನೆ. ನಿಮ್ಮಲ್ಲಿ ಕೆಲವರು ತಮ್ಮೊಂದಿಗೆ ಅನೇಕ ಸವಾರಿ(ಒಂಟೆ)ಗಳನ್ನು ಒಯ್ಯುತ್ತಾರೆ. ಅವುಗಳಿಗೆ ಮೇವು ನೀಡಿ ದಷ್ಟಪುಷ್ಟಗೊಳಿಸುತ್ತಾರೆ. ಅವುಗಳ ಮೇಲೆ ಅವರೆಂದೂ ಸವಾರಿ ಮಾಡುವುದಿಲ್ಲ. ತಮ್ಮ ಬಳಿ ಸವಾರಿಗಳಿಲ್ಲದ ತಮ್ಮ ಸಹೋದರರ ಬಳಿಯಿಂದ ಅವರು ಹಾದು ಹೋಗುತ್ತಾರಾದರೂ ತಮ್ಮ ಸಹೋದರರನ್ನು ಅವುಗಳ ಮೇಲೆ ಹತ್ತಿಸಿಕೊಳ್ಳುವುದಿಲ್ಲ. ಪಿಶಾಚಿಯ ಮನೆಗಳನ್ನಂತೂ ನಾನು ಕಂಡಿಲ್ಲ. *[ಅಬೂ ದಾವೂದ್]*

ಟಿಪ್ಪಣಿ: ಪೈಶಾಚಿಕ ಮನೆಗಳೆಂದರೆ ಜನರು ಅಗತ್ಯವಿಲ್ಲದೆ ಕೇವಲ ಡಂಬಾಚಾರ ಮತ್ತು ತಮ್ಮ ಸಂಪತ್ತಿನ ಪ್ರದರ್ಶನಕ್ಕಾಗಿ ನಿರ್ಮಿಸುವ ಮನೆಗಳು. ಅವುಗಳಲ್ಲಿ ಅವರು ವಾಸಿಸುವುದೂ ಇಲ್ಲ, ಇತರರಿಗೆ ವಾಸಿಸಲಿಕ್ಕೆ ಕೊಡುವುದೂ ಇಲ್ಲ. ಇಸ್ಲಾಮ್ ಇಂತಹ ಪ್ರದರ್ಶನವನ್ನು ಇಷ್ಟಪಡುವುದಿಲ್ಲ. ಪ್ರವಾದಿ(ಸ) ಇಂತಹ ಮನೆಗಳನ್ನು ಕಂಡಿಲ್ಲ. ಯಾಕೆಂದರೆ ಅಂದಿನ ಇಸ್ಲಾಮೀ ಸಮಾಜದಲ್ಲಿ ಇಂತಹ ಡಂಬಾಚಾರಿಗಳು ಇರಲಿಲ್ಲ. ಆದರೆ ಅನಂತರದ ಕಾಲಗಳಲ್ಲಿ ನಮ್ಮ ಹಿರಿಯರು ಇಂತಹ ಮನೆಗಳನ್ನು ನೋಡಿದ್ದಾರೆ. ನಾವೂ ಈ ಕಾಲದಲ್ಲಿ ಕೆಲವು ಸಿರಿವಂತ ಮುಸ್ಲಿಮರ ಬಳಿ ಇಂತಹ ಪ್ರದರ್ಶನಕ್ಕಿರುವ ಭವನಗಳನ್ನು ನೋಡುತ್ತಿದ್ದೇವೆ.

ರೋಗಿಯ ಹಕ್ಕು

(137) عَنْ اَبِىْ هُرَيْرَةَ قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اِنَّ اللّٰهَ عَزَّوَ جَلَّ يَقُوْلُ يَوْمَ الْقِيَامَةِ يَا ابْنَ آدَمَ مَرِضْتُ فَلَمْ تَعُدْنِىْ، قَالَ يَا رَبِّ كَيْفَ اَعُوْدُكَ وَ اَنْتَ رَبُّ الْعَالَمِيْنَ قَالَ اَمَا عَلِمْتَ اَنَّ عَبْدِىْ فُلَانًا مَرِضَ فَلَمْ تَعُدْهُ، اَمَا عَلِمْتَ اَنَّكَ لَوْ عُدْتَهُ لَوَجَدْتَنِىْ عِنْدَهُ (مسلم)

ಅಬೂ ಹುರೈರಾ(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು- ಮಹಾಮಹಿಮನಾದ ಅಲ್ಲಾಹನು ಪುನರುತ್ಥಾನ ದಿನದಂದು ಓರ್ವ ವ್ಯಕ್ತಿಯೊಡನೆ, 'ಓ ಆದಮನ ಪುತ್ರನೇ, ನಾನು ಕಾಯಿಲೆ ಬಿದ್ದಿದ್ದೆ. ನೀನು ನನ್ನನ್ನು ಸಂದರ್ಶಿಸಲು ಬಂದಿಲ್ಲ ಎನ್ನುವನು. ಆಗ ಅವನು ಹೇಳುವನು- ಓ ನನ್ನ ಪ್ರಭೂ! ನಿನ್ನ ಸಂದರ್ಶನವನ್ನು ನಾನು ಹೇಗೆ ಮಾಡಲಿ? ನೀನಂತೂ ಸರ್ವಲೋಕಗಳ ಪ್ರಭುವಾಗಿರುವೆ. (ಕಾಯಿಲೆ ಬೀಳುವುದು ನಿನ್ನ ಘನತೆಗೆ ತಕ್ಕುದಲ್ಲ) ಅಲ್ಲಾಹನು ಹೇಳುವನು, "ನನ್ನ ದಾಸನೊಬ್ಬನು ರೋಗಿಯಾಗಿದ್ದ, ನೀನು ಅವನ ಸಂದರ್ಶನಕ್ಕೆ ಹೋಗಲಿಲ್ಲ, ಸಂದರ್ಶನಕ್ಕೆ ಹೋಗಿದ್ದರೆ ಅವನ ಬಳಿ ನೀನು ನನ್ನನ್ನು ಕಾಣುತ್ತಿದ್ದೆ ಎಂಬುದು ನಿನಗೆ ತಿಳಿಯದೇ?"

[ಮುಸ್ಲಿಮ್]

ಟಿಪ್ಪಣಿ: ಅಲ್ಲಾಹನನ್ನು ರೋಗಿಯ ಬಳಿ ಕಾಣುವುದು ಎಂದರೆ ಅಲ್ಲಾಹನು ನಿಮ್ಮಿಂದ ಸಂತುಷ್ಟನಾಗುತ್ತಿದ್ದನು. ಅವನ ಸಾಮಿಪ್ಯ ನಿಮಗೆ ದೊರೆಯುತ್ತಿತ್ತು. ರೋಗಿಯು ಬಡವನಾಗಿದ್ದರೆ, ಔಷಧಿಗೆ ಅವನ ಬಳಿ ಹಣವಿಲ್ಲದಿದ್ದರೆ ನೀವು ಅವನಿಗೆ ಔಷಧಿಯನ್ನು ಒದಗಿಸಿರಿ. ಒಂದು ವೇಳೆ ಅವನ ಬಳಿ ಹಣವಿದ್ದರೂ ಔಷಧಿ ತರುವವರು ಯಾರೂ ಇಲ್ಲದಿದ್ದರೆ ನೀವು ಅವನಿಗೆ ಔಷಧಿ ತಂದು ಕೊಡಿರಿ ಅಥವಾ ಅದರ ವ್ಯವಸ್ಥೆ ಮಾಡಿರಿ.

ರೋಗಿ, ಹಸಿದವ ಮತ್ತು ಕೈದಿಯ ಜೊತೆ ಸದ್ವರ್ತನೆ

(138) عَنْ أَبِي مُوسَى الْأَشْعَرِيِّ قَالَ، قَالَ رَسُولُ اللهِ صَلَّى اللهُ عَلَيْهِ وَسَلَّمَ
عُودُوا الْمَرِيضَ وَأَطْعِمُوا الْجَائِعَ وَفُكُّوا الْعَانِيَ (بخاری)

ಅಬೂ ಮೂಸಾ ಅಶ್‌ಅರೀ(ರ) ಹೇಳುತ್ತಾರೆ-

ಪ್ರವಾದಿ(ಸ) ಹೇಳಿದರು- ನೀವು ರೋಗಿಯ ಸಂದರ್ಶನ ಮಾಡಿರಿ. ಹಸಿದವನಿಗೆ ಊಟ ನೀಡಿರಿ ಮತ್ತು ಕೈದಿಯ ವಿಮೋಚನೆಯ ವ್ಯವಸ್ಥೆ ಮಾಡಿರಿ. *[ಬುಖಾರಿ]*

ಮುಸ್ಲಿಮೇತರರ ರೋಗ ಸಂದರ್ಶನ

(139) عَنْ أَنَسٍ قَالَ: كَانَ غُلَامٌ يَهُودِيٌّ يَخْدِمُ النَّبِيَّ صَلَّى اللهُ عَلَيْهِ وَسَلَّمَ، فَمَرِضَ فَأَتَاهُ النَّبِيُّ صَلَّى اللهُ عَلَيْهِ وَسَلَّمَ يَعُودُهُ، فَقَعَدَ عِنْدَ رَأْسِهِ فَقَالَ لَهُ أَسْلِمْ، فَنَظَرَ إِلَى أَبِيهِ وَهُوَ عِنْدَهُ، فَقَالَ أَطِعْ أَبَا الْقَاسِمِ، فَأَسْلَمَ فَخَرَجَ النَّبِيُّ صَلَّى اللهُ عَلَيْهِ وَسَلَّمَ وَهُوَ يَقُولُ الْحَمْدُ لِلّٰهِ الَّذِي أَنْقَذَهُ مِنَ النَّارِ (بخاری)

ಅನಸ್(ರ) ಹೇಳುತ್ತಾರೆ-

ಓರ್ವ ಯಹೂದಿ ಬಾಲಕ ಪ್ರವಾದಿಯವರ(ಸ) ಸೇವೆಗೈಯುತ್ತಿದ್ದನು. ಒಮ್ಮೆ ಅವನು ಕಾಯಿಲೆ ಬಿದ್ದಾಗ ಪ್ರವಾದಿಯವರು(ಸ) ಆತನನ್ನು ನೋಡಲು ಹೋದರು. ಅವರು ಅವನ ತಲೆಯ ಹತ್ತಿರ ಕುಳಿತುಕೊಂಡು, 'ನೀನು ಇಸ್ಲಾಮ್ ಧರ್ಮಸ್ವೀಕಾರ ಮಾಡು' ಎಂದರು. ಆಗ ಆ ಹುಡುಗನು ತನ್ನ ತಂದೆಯ ಕಡೆಗೆ ನೋಡಿದನು. ಅವನ ತಂದೆಯು 'ನೀನು ಅಬುಲ್ ಕಾಸಿಮ್‌ರ(ಸ) ಮಾತನ್ನು ಒಪ್ಪಿಕೋ' ಎಂದರು. ಹೀಗೆ ಆ ಹುಡುಗನು ಇಸ್ಲಾಮ್ ಸ್ವೀಕರಿಸಿದನು. ತರುವಾಯ ಪ್ರವಾದಿ(ಸ) ಅಲ್ಲಿಂದೇಳುತ್ತಾ, 'ಇವನನ್ನು ನರಕಾಗ್ನಿಯಿಂದ ರಕ್ಷಿಸಿದ ಅಲ್ಲಾಹನಿಗೆ ಸ್ತುತಿ' ಎಂದರು. *[ಬುಖಾರಿ]*

ಟಿಪ್ಪಣಿ: ಪ್ರವಾದಿಯವರ(ಸ) ಸಚ್ಚಾರಿತ್ರ್ಯವನ್ನು ಅವರ ಗೆಳೆಯರೂ ವೈರಿಗಳೂ ಬಲ್ಲವರಾಗಿದ್ದರು. ಯಹೂದ್ಯರೆಲ್ಲರೂ ಅವರ ವೈರಿಗಳಾಗಿರಲಿಲ್ಲ. ಆ ಯಹೂದಿಗೆ ಪ್ರವಾದಿಯವರೊಂದಿಗೆ(ಸ) ಗೆಳೆತನವಿತ್ತು. ಅವರು ಪ್ರವಾದಿವರ್ಯರ(ಸ) ಸಂದೇಶದಿಂದ ಪ್ರಭಾವಿತರಾಗಿದ್ದರು. ಆದುದರಿಂದಲೇ ತನ್ನ ಪುತ್ರನನ್ನು ಅವರು ಪ್ರವಾದಿವರ್ಯರ(ಸ) ಸೇವೆಗೈಯಲು ಕಳುಹಿಸಿದ್ದರು.

ರೋಗ ಸಂದರ್ಶನದ ಶಿಷ್ಟಾಚಾರಗಳು

(140) قَالَ ابْنُ عَبَّاسٍ مِنَ السُّنَّةِ تَخْفِيفُ الْجُلُوسِ وَقِلَّةُ الصَّخَبِ فِي الْعِيَادَةِ عِنْدَ الْمَرِيضِ

ಅಬ್ದುಲ್ಲಾ ಬಿನ್ ಅಬ್ಬಾಸ್(ರ) ಹೇಳುತ್ತಾರೆ- ರೋಗಿಯ ಬಳಿ ಸ್ವಲ್ಪ ಹೊತ್ತು ಕುಳಿತುಕೊಳ್ಳುವುದು ಮತ್ತು ಸದ್ದುಗದ್ದಲ ಮಾಡದಿರುವುದು ಸುನ್ನತ್ (ಪ್ರವಾದಿಚರ್ಯೆ) ಆಗಿದೆ.

❖ ❖ ❖

ಮುಸ್ಲಿಮರ ಪರಸ್ಪರ ಹಕ್ಕುಗಳು

ಜೀವ - ಸೊತ್ತುಗಳ ರಕ್ಷಣೆ

(141) عَنْ عَبْدِ اللّٰهِ بْنِ عُمَرَ قَالَ، قَالَ النَّبِيُّ صَلَّى اللّٰهُ عَلَيْهِ وَسَلَّمَ فِي حَجَّةِ الْوَدَاعِ
أَلَا إِنَّ اللّٰهَ حَرَّمَ عَلَيْكُمْ دِمَاءَكُمْ وَأَمْوَالَكُمْ وَأَعْرَاضَكُمْ كَحُرْمَةِ يَوْمِكُمْ هٰذَا فِي بَلَدِكُمْ
هٰذَا فِي شَهْرِكُمْ هٰذَا أَلَا هَلْ بَلَّغْتُ؟ قَالُوا نَعَمْ قَالَ اللّٰهُمَّ اشْهَدْ ثَلَاثًا، وَيْلَكُمْ أَوْ وَيْحَكُمْ انْظُرُوا
لَا تَرْجِعُوا بَعْدِي كُفَّارًا يَضْرِبُ بَعْضُكُمْ رِقَابَ بَعْضٍ (بخاری)

ಅಬ್ದುಲ್ಲಾ ಬಿನ್ ಉಮರ್(ರ) ಹೇಳುತ್ತಾರೆ-

ಪ್ರವಾದಿಯವರು(ಸ) ಹಜ್ಜತುಲ್ ವಿದಾದ (ವಿದಾಯ ಹಜ್ಜ್) ವೇಳೆ ಹೇಳಿದರು- "ಕೇಳಿರಿ, ಅಲ್ಲಾಹನು ನಿಮ್ಮ ರಕ್ತ, ನಿಮ್ಮ ಸೊತ್ತು ಮತ್ತು ನಿಮ್ಮ ಮಾನವನ್ನು ಪವಿತ್ರಗೊಳಿಸಿರುತ್ತಾನೆ. ನಿಮ್ಮ ನಗರ ಮತ್ತು ನಿಮ್ಮ ಈ ಮಾಸದಲ್ಲಿ ನಿಮ್ಮ ಈ ದಿನ ಇರುವಂತೆ. ಹೇಳಿರಿ, ನಾನು ತಲಪಿಸಿರುವೆನೇ? ಜನರು ಹೇಳಿದರು- ಹೌದು, ತಾವು ನಮಗೆ ತಲಪಿಸಿರುವಿರಿ. ಪ್ರವಾದಿಯವರು(ಸ) ಈ ಪ್ರಶ್ನೆಯನ್ನು ಮೂರು ಬಾರಿ ಕೇಳಿದರು. ಜನರು ಮೂರು ಬಾರಿ ಹೌದೆಂದರು. ತರುವಾಯ ಪ್ರವಾದಿಯವರು(ಸ) ಆಕಾಶದತ್ತ ನೋಡಿ ಹೀಗೆಂದರು: ಓ ಅಲ್ಲಾಹ್! ನೀನು ಸಾಕ್ಷಿಯಾಗಿರು. ನಾನು ನನ್ನ ಸಮುದಾಯಕ್ಕೆ ಸಂದೇಶ ತಲಪಿಸಿರುವೆನು. ಆ ಬಳಿಕ ಪ್ರವಾದಿ(ಸ) ಹೇಳಿದರು- ಕೇಳಿರಿ, ನನ್ನ ನಂತರ ನೀವು ಪರಸ್ಪರ ಕತ್ತುಕೊಯ್ಯುವ ಮೂಲಕ ಸತ್ಯನಿಷೇಧಿಗಳಾಗಬೇಡಿರಿ. *[ಬುಖಾರಿ]*

ಟಿಪ್ಪಣಿ: ಹಜ್ಜತುಲ್ ವಿದಾ ಎಂಬುದು ಪ್ರವಾದಿಯವರ(ಸ) ಕೊನೆಯ ಹಜ್ಜ್ ಯಾತ್ರೆಯಾಗಿತ್ತು. ಅದರ ಎರಡು ಮೂರು ತಿಂಗಳಲ್ಲೇ ಅವರು ನಿಧನರಾದರು. ಈ ಹಜ್ಜ್‌ನ ವಿಶೇಷತೆಯೇನೆಂದರೆ ಅದರಲ್ಲಿ ಅಂದಿನ ಇಸ್ಲಾಮೀ ಜಗತ್ತಿನ ಒಂದು ಲಕ್ಷದ ಇಪ್ಪತ್ತನಾಲ್ಕು ಸಾವಿರ ಮುಸ್ಲಿಮರು ಭಾಗವಹಿಸಿದ್ದರು. ಅಲ್ಲಾಹನ ಕೊನೆಯ ಸಂದೇಶವಾಹಕರ(ಸ) ನೇತೃತ್ವದಲ್ಲಿ ಹಜ್ಜ್ ಕರ್ಮ ನಿರ್ವಹಿಸಲಾಗುತ್ತದೆಂದು ಇಸ್ಲಾಮೀ ಜಗತ್ತಿನಲ್ಲಿ ಪ್ರಚಾರಗೊಂಡಿತು. ಈ ಹಜ್ಜ್‌ನಲ್ಲಿ ಮಕ್ಕಾ, ಅರಫಾ ಮೈದಾನ, ಮುಝ್ದಲಿಫ ಮತ್ತು ಮಿನಾದಲ್ಲಿ ಪ್ರವಾದಿ(ಸ) ಮಾಡಿದ ಭಾಷಣಗಳು ಅವರೊಂದಿಗೆ ಅಂದು ಹಾಜರಿದ್ದ ಮತ್ತು ಅಲ್ಲಿ ಹಾಜರಿಲ್ಲದ ಹಾಗೂ ನಿರ್ಣಾಯಕ ದಿನದ ವರೆಗೆ ಬರುವ ಜನಸಮುದಾಯಕ್ಕೆ 'ವಸಿಯ್ಯತ್' (ಅಂತಿಮ ಉಪದೇಶ) ಆಗಿತ್ತು. ಈ ಹಜ್ಜ್‌ನ ವೇಳೆ ಪ್ರವಾದಿ(ಸ) ಹೇಳಿದರು- ಬಹುಶಃ ಈ ವರ್ಷದ ನಂತರ ನಾನು ನಿಮ್ಮನ್ನು ಭೇಟಿಯಾಗಲಾರೆನೇನೋ! ಅವರ ಭಾಷಣಗಳ ವೈಖರಿಯನ್ನು ಗಮನಿಸಿದರೆ ಅವರು ಇಡೀ ಸಮುದಾಯಕ್ಕೆ- ಲೋಕಕ್ಕೆ ವಿದಾಯ ಕೋರುವವರೆಂಬ ನೆಲೆಯಲ್ಲಿ

ಅಂತಿಮ ಉಪದೇಶ ಮಾಡುತ್ತಿದ್ದರೆಂದು ಭಾಸವಾಗುತ್ತಿತ್ತು. ಈ ಉಪದೇಶದಲ್ಲಿ ಎರಡು ವಿಷಯ ಗಳಿಗೆ ಅವರು ಒತ್ತುಕೊಟ್ಟರು. ಮೊದಲನೆಯದಾಗಿ ಯಾವನೇ ಮುಸ್ಲಿಮನು ಇನ್ನೋರ್ವ ಮುಸ್ಲಿಮನನ್ನು ವಧಿಸಬಾರದು, ಅವನ ಸೊತ್ತನ್ನು ಕಬಳಿಸಬಾರದು, ಅವನ ಮಾನ ಮರ್ಯಾದೆಗಳನ್ನು ಹರಣ ಮಾಡಬಾರದು ಮತ್ತು ಸಾಮಾಜಿಕವಾಗಿ ಅವನನ್ನು ಕೀಳಾಗಿಸಲು ಪ್ರಯತ್ನಿಸಬಾರದು. ಎರಡನೆಯದಾಗಿ ಪತಿ-ಪತ್ನಿಯರು ತಮ್ಮ ಹಕ್ಕು ಬಾಧ್ಯತೆಗಳನ್ನು ಗುರುತಿಸಬೇಕು, ನೆನಪಿಡಬೇಕು ಮತ್ತು ಅವುಗಳನ್ನು ಪೂರೈಸಬೇಕು.

ಒಬ್ಬ ಮಗನು ಎಷ್ಟೇ ಕೆಟ್ಟವನಾದರೂ ತನ್ನ ತಂದೆಯ ಅಂತಿಮ ಉಪದೇಶಗಳನ್ನು ನೆನಪಿಟ್ಟು ಅವುಗಳನ್ನು ಪಾಲಿಸುತ್ತಾನೆ. ಆದರೆ ಎಲ್ಲ ತಂದೆಯರಿಗಿಂತ ಮಿಗಿಲಾದ ವಾತ್ಸಲ್ಯಮಯಿ ತಂದೆ ಯಾಗಿರುವ ಪ್ರವಾದಿಯವರ(ಸ) ಉಪದೇಶವನ್ನು ಮುಸ್ಲಿಮ್ ಸಮುದಾಯದ ಬಹುದೊಡ್ಡ ವಿಭಾಗವು ಮರೆತುಬಿಟ್ಟಿರುವುದು ಎಂತಹ ದುರದೃಷ್ಟ!

ಮುಸ್ಲಿಮನು ಮುಸ್ಲಿಮನ ಕನ್ನಡಿಯಾಗಿರುತ್ತಾನೆ

(142) عَنْ أَبِي هُرَيْرَةَ قَالَ - قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ الْمُؤْمِنُ مِرْآةُ الْمُؤْمِنِ وَالْمُؤْمِنُ أَخُو الْمُؤْمِنِ يَكُفُّ عَنْهُ ضَيْعَتَهُ وَيَحُوْطُهُ مِنْ وَرَائِهِ (مشكوة)

ಅಬೂ ಹುರೈರಾ(ರ) ಹೇಳುತ್ತಾರೆ:

ಪ್ರವಾದಿ(ಸ) ಹೇಳಿದರು: ವಿಶ್ವಾಸಿಯು ವಿಶ್ವಾಸಿಯ ಕನ್ನಡಿಯಾಗಿರುತ್ತಾನೆ ಮತ್ತು ವಿಶ್ವಾಸಿಯು ವಿಶ್ವಾಸಿಯ ಸಹೋದರನಾಗಿರುತ್ತಾನೆ. ಅವನು ಅವನನ್ನು ವಿನಾಶದಿಂದ ರಕ್ಷಿಸುತ್ತಾನೆ, ಅವನ ಸಂರಕ್ಷಣೆ ಮಾಡುತ್ತಾನೆ ಮತ್ತು ಅವನ ಬೆಂಬಲಿಗನಾಗಿರುತ್ತಾನೆ.

[ಮಿಶ್ಕಾತ್]

ಟಿಪ್ಪಣಿ: 'ವಿಶ್ವಾಸಿಯು ವಿಶ್ವಾಸಿಯ ಕನ್ನಡಿಯಾಗಿರುತ್ತಾನೆ' ಎಂದರೆ ಅವನಿಗಾಗುವ ತೊಂದರೆ ಯನ್ನು ತನ್ನ ತೊಂದರೆಯೆಂದು ಭಾವಿಸುತ್ತಾನೆ. ಅವನು ತನ್ನ ತೊಂದರೆಗಳಿಗಾಗಿ ಚಡಪಡಿಸುವಂತೆಯೇ ತನ್ನ ಸಹೋದರನ ತೊಂದರೆಗಳಿಗಾಗಿಯೂ ಚಡಪಡಿಸುತ್ತಾನೆ ಮತ್ತು ಅದನ್ನು ದೂರೀಕರಿಸುವ ಬಗ್ಗೆ ಚಿಂತಿತನಾಗಿರುತ್ತಾನೆ. ಇನ್ನೊಂದು ಹದೀಸ್‌ನ ಪದಗಳು ಇದನ್ನು ಅತ್ಯುತ್ತಮವಾಗಿ ವ್ಯಾಖ್ಯಾನಿಸುತ್ತವೆ- "ನಿಮ್ಮಲ್ಲಿ ಪ್ರತಿಯೊಬ್ಬನು ತನ್ನ ಸಹೋದರನ ಕನ್ನಡಿಯಾಗಿರುತ್ತಾನೆ. ಆದುದರಿಂದ ತನ್ನ ಸಹೋದರನು ಯಾವುದಾದರೂ ಸಂಕಷ್ಟದಲ್ಲಿದ್ದರೆ ಅವನ ಸಂಕಷ್ಟವನ್ನು ದೂರೀಕರಿಸಬೇಕು. ಅದೇ ರೀತಿ ತನ್ನ ಸಹೋದರನಲ್ಲಿ ಏನಾದರೂ ಕುಂದು ಕೊರತೆ ಕಂಡರೆ ಅದನ್ನು ತನ್ನ ಕುಂದುಕೊರತೆಗಳೆಂದು ಭಾವಿಸಿ ನೀಗಿಸಬೇಕು."

ಕರುಣೆ, ಪ್ರೀತಿ ಮತ್ತು ವಾತ್ಸಲ್ಯ

(143) عَنْ نُعْمَانَ بْنِ بَشِيْرٍ قَالَ، قَالَ رَسُوْلُ اللهِ صَلَّى اللهُ عَلَيْهِ وَسَلَّمَ تَرَى الْمُؤْمِنِيْنَ فِي تَرَاحُمِهِمْ وَتَوَادِّهِمْ وَتَعَاطُفِهِمْ كَمَثَلِ الْجَسَدِ، إِذَا اشْتَكَى عُضْوٌ تَدَاعَى لَهُ سَائِرُ الْجَسَدِ بِالسَّهَرِ وَالْحُمَّى (بخاری و مسلم)

ನುಅ್‌ಮಾನ್ ಬಿನ್ ಬಶೀರ್(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು: ಪರಸ್ಪರ ಕರುಣೆ ತೋರುವುದರಲ್ಲಿ, ಪ್ರೀತಿಸುವುದರಲ್ಲಿ ಹಾಗೂ ವಾತ್ಸಲ್ಯದಿಂದ ವರ್ತಿಸುವುದರಲ್ಲಿ ವಿಶ್ವಾಸಿಗಳನ್ನು ನೀವು ಒಂದು ಶರೀರದಂತೆ ಕಾಣುವಿರಿ. ಶರೀರದ ಒಂದು ಅಂಗವು ಅಸ್ವಸ್ಥಗೊಂಡರೆ ಇತರ ಎಲ್ಲ ಅಂಗಗಳಿಗೂ ಅದರ ನೋವಿನ ಅನುಭವವಾಗುತ್ತದೆ, ಮನುಷ್ಯನ ನಿದ್ದೆಗೆಡುತ್ತದೆ ಮತ್ತು ಇಡೀ ದೇಹವೇ ಜ್ವರದಿಂದ ಬಿಸಿಯೇರ ತೊಡಗುತ್ತದೆ. *[ಬುಖಾರಿ, ಮುಸ್ಲಿಮ್]*

ಬಲಿಷ್ಠ ಸಹೋದರತೆ

(144) عَنْ أَبِي مُوْسَى الْأَشْعَرِيِّ قَالَ، قَالَ النَّبِيُّ صَلَّى اللهُ عَلَيْهِ وَسَلَّمَ الْمُؤْمِنُ لِلْمُؤْمِنِ كَالْبُنْيَانِ يَشُدُّ بَعْضُهُ بَعْضًا ثُمَّ شَبَّكَ بَيْنَ أَصَابِعِهِ (بخاری و مسلم)

ಅಬೂ ಮೂಸಾ ಅಶ್‌ಅರೀ(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು: ವಿಶ್ವಾಸಿಯು ವಿಶ್ವಾಸಿಯ ಮಟ್ಟಿಗೆ ಒಂದು ಕಟ್ಟಡದಂತೆ. ಅದರ ಒಂದು ಭಾಗವು ಇನ್ನೊಂದು ಭಾಗಕ್ಕೆ ಶಕ್ತಿ ನೀಡುತ್ತದೆ. ಇದನ್ನು ಮನದಟ್ಟು ಮಾಡಲು ಪ್ರವಾದಿಯವರು(ಸ) ತಮ್ಮ ಒಂದು ಕೈಯ ಬೆರಳುಗಳನ್ನು ಇನ್ನೊಂದು ಕೈಯ ಬೆರಳುಗಳಿಗೆ ಪೋಣಿಸಿದರು. *[ಬುಖಾರಿ, ಮುಸ್ಲಿಮ್]*

ಟಿಪ್ಪಣಿ: ಈ ಹದೀಸ್‌ನಲ್ಲಿ ಮುಸ್ಲಿಮ್ ಸಮಾಜವನ್ನು ಒಂದು ಬಲಿಷ್ಠ ಕಟ್ಟಡಕ್ಕೆ ಹೋಲಿಸಲಾಗಿದೆ. ಅದರ ಇಟ್ಟಿಗೆ ಪರಸ್ಪರ ಸೇರಿಕೊಂಡಿರುವಂತೆಯೇ ಮುಸ್ಲಿಮರೂ ಪರಸ್ಪರ ಒಗ್ಗಟ್ಟಿನಿಂದಿರಬೇಕಾಗಿದೆ. ಒಂದು ಇಟ್ಟಿಗೆ ಇನ್ನೊಂದು ಇಟ್ಟಿಗೆಗೆ ಶಕ್ತಿ ಮತ್ತು ಆಧಾರ ನೀಡುವಂತೆಯೇ ಮುಸ್ಲಿಮರೂ ಪರಸ್ಪರ ನೆರವಾಗಬೇಕು. ಅವರ ಶಕ್ತಿಯ ಒಳಗುಟ್ಟು ಅವರು ಪರಸ್ಪರ ಒಗ್ಗಟ್ಟಾಗಿರುವುದನ್ನು ಅವಲಂಬಿಸಿದೆ ಎಂಬುದು ಅವರ ಗಮನದಲ್ಲಿರಬೇಕು. ಅವರು ಬಿಡಿ ಇಟ್ಟಿಗೆಗಳಂತಾದರೆ ಅವರನ್ನು

ಗಾಳಿಯ ಪ್ರತಿಯೊಂದು ಹೊಡೆತವೂ ಹಾರಿಸಿಕೊಂಡು ಹೋಗಬಹುದು ಮತ್ತು ನೀರಿನ ಪ್ರತಿಯೊಂದು ಅಲೆಯೂ ತೇಲಿಸಿಕೊಂಡು ಹೋಗಬಹುದು.

ಅಕ್ರಮಿ ಮತ್ತು ಮರ್ದಿತನಿಗೆ ನೆರವು

(145) عَنْ اَنَسٍ قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اُنْصُرْ اَخَاكَ ظَالِمًا اَوْ مَظْلُوْمًا، فَقَالَ رَجُلٌ يَا رَسُوْلَ اللّٰهِ اَنْصُرُهٗ مَظْلُوْمًا فَكَيْفَ اَنْصُرُهٗ ظَالِمًا؟ قَالَ تَمْنَعُهٗ مِنَ الظُّلْمِ فَذَالِكَ نَصْرُكَ اِيَّاهُ (بخاری، مسلم)

ಅನಸ್(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು- ನಿನ್ನ ಸಹೋದರನಿಗೆ ನೆರವಾಗು- ಅವನು ಅಕ್ರಮಿಯಾಗಿರಲಿ ಮರ್ದಿತನಾಗಿರಲಿ. ಆಗ ಒಬ್ಬ ವ್ಯಕ್ತಿ ಕೇಳಿದರು- ಪ್ರವಾದಿ ವರ್ಯರೇ! ಮರ್ದಿತನಿಗೆ ನೆರವಾಗಬೇಕೆಂಬ ಮಾತು ಅರ್ಥವಾಗುತ್ತದೆ. ಆದರೆ ಅಕ್ರಮಿಗೆ ನೆರವಾಗುವುದು ಹೇಗೆಂದು ಅರ್ಥವಾಗುವುದಿಲ್ಲ. ಪ್ರವಾದಿ(ಸ) ಹೇಳಿದರು- ಅವನು ಅಕ್ರಮ ಮಾಡದಂತೆ ಅವನನ್ನು ತಡೆಯುವುದು. ಇದುವೇ ಅವನಿಗೆ ನೆರವಾಗುವುದಾಗಿದೆ.

[ಬುಖಾರಿ, ಮುಸ್ಲಿಮ್]

ಮಾರಾಟದ ವಸ್ತುವಿನ ಕುಂದುಕೊರತೆಗಳನ್ನು ತಿಳಿಸುವುದು

(146) عَنْ عُقْبَةَ بْنِ عَامِرٍ قَالَ سَمِعْتُ النَّبِيَّ صَلَّى اللّٰهُ عَلَيْهِ وَسَلَّمَ يَقُوْلُ اَلْمُسْلِمُ اَخُو الْمُسْلِمِ، لَا يَحِلُّ لِمُسْلِمٍ بَاعَ مِنْ اَخِيْهِ شَيْئًا وَفِيْهِ عَيْبٌ اِلَّا بَيَّنَهٗ لَهٗ (ابن ماجہ)

ಉಕ್ಬಾ ಬಿನ್ ಆಮಿರ್(ರ) ಹೇಳುತ್ತಾರೆ- ಪ್ರವಾದಿ(ಸ) ಹೀಗೆ ಹೇಳಿರುವುದಾಗಿ ನಾನು ಕೇಳಿದ್ದೇನೆ- ಮುಸ್ಲಿಮನು ಮುಸ್ಲಿಮನ ಸಹೋದರನಾಗಿದ್ದಾನೆ. ಓರ್ವ ಮುಸ್ಲಿಮನು ಇನ್ನೋರ್ವ ಮುಸ್ಲಿಮನಿಗೆ ಏನಾದರೂ ವಸ್ತುವನ್ನು ಮಾರುವಾಗ ಅದರಲ್ಲಿ ಏನಾದರೂ ಕುಂದು ಕೊರತೆಯಿದ್ದರೆ, ಅದನ್ನು ಅವನ ಮುಂದೆ ಸ್ಪಷ್ಟಪಡಿಸದೆ ಇರುವುದು ಧರ್ಮ ಸಮ್ಮತವಲ್ಲ. *[ಇಬ್ನು ಮಾಜಃ]*

ಟಿಪ್ಪಣಿ: ವ್ಯಾಪಾರಿಯು ಗ್ರಾಹಕನಿಗೆ ವಸ್ತುವಿನಲ್ಲಿರುವ ಕುಂದು ಕೊರತೆಗಳನ್ನು ಸ್ಪಷ್ಟವಾಗಿ ವಿವರಿಸಬೇಕು. ಗ್ರಾಹಕನು ಮುಸ್ಲಿಮನಾಗಿರಲಿ ಮುಸ್ಲಿಮೇತರನಾಗಿರಲಿ. ಈ ಕುರಿತು ಒಂದು ಹದೀಸ್ ಮುಂದೆ ಬರಲಿದೆ.

ಸಂಬಂಧ ಮುರಿಯುವ ಗರಿಷ್ಠ ಅವಧಿ

(147) عَنْ أَبِي أَيُّوبَ الْأَنْصَارِيِّ قَالَ، قَالَ رَسُولُ اللهِ صَلَّى اللهُ عَلَيْهِ وَسَلَّمَ
لَا يَحِلُّ لِرَجُلٍ أَنْ يَهْجُرَ أَخَاهُ فَوْقَ ثَلَاثِ لَيَالٍ، يَلْتَقِيَانِ فَيُعْرِضُ هٰذَا وَيُعْرِضُ هٰذَا
وَخَيْرُهُمَا الَّذِي يَبْدَأُ بِالسَّلَامِ ۔ (بخاری ومسلم)

ಅಬೂ ಅಯ್ಯೂಬ್ ಅನ್ಸಾರಿ(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು- ಒಬ್ಬನು ತನ್ನ ಮುಸ್ಲಿಮ್ ಸಹೋದರನೊಂದಿಗೆ ಮೂರು ದಿನಕ್ಕಿಂತ ಅಧಿಕ ಸಂಬಂಧ ಕಡಿದು ಕೊಳ್ಳುವುದು ಧರ್ಮಸಮ್ಮತವಲ್ಲ. ಇಬ್ಬರು ಪರಸ್ಪರ ಭೇಟಿಯಾದರೆ ಒಬ್ಬನ ಮುಖ ಒಂದು ಕಡೆಗೂ ಇನ್ನೊಬ್ಬನ ಮುಖ ಇನ್ನೊಂದು ಕಡೆಗೂ ತಿರುಗಿಸುವುದು ಸರಿಯಲ್ಲ. ಅವರ ಪೈಕಿ ಮೊದಲು ಸಲಾಮ್ ಹೇಳುವ ಮೂಲಕ, ಸಂಬಂಧ ಕಡಿಯುವಂತಹ ಪೈಶಾಚಿಕ ಧೋರಣೆ ಯನ್ನು ಕೊನೆಗೊಳಿಸುವವನೇ ಅತ್ಯುತ್ತಮನು. *[ಬುಖಾರಿ, ಮುಸ್ಲಿಮ್]*

ಸಜ್ಜನ ವ್ಯಕ್ತಿಯ ತಪ್ಪು

(148) عَنْ عَائِشَةَ أَنَّ النَّبِيَّ صَلَّى اللهُ عَلَيْهِ وَسَلَّمَ قَالَ أَقِيلُوا ذَوِي الْهَيْئَاتِ
عَثَرَاتِهِمْ إِلَّا الْحُدُودَ (ابوداود)

ಪ್ರವಾದಿ(ಸ) ಹೇಳಿದರು- ಉತ್ತಮ ನಡೆನುಡಿಯ ವ್ಯಕ್ತಿಗಳಿಂದ ಏನಾದರೂ ತಪ್ಪು ಸಂಭವಿಸಿದರೆ ಅದನ್ನು ಕ್ಷಮಿಸಿರಿ- ಆದರೆ ದಂಡನಾ ನಿಯಮವು ಇದಕ್ಕೆ ಹೊರತಾಗಿದೆ. *[ಅಬೂ ದಾವೂದ್- ಹ. ಆಯಿಶಾ(ರ)]*

ಟಿಪ್ಪಣಿ: ಓರ್ವ ಸಜ್ಜನ ಹಾಗೂ ಚಾರಿತ್ರ್ಯವಂತ ವ್ಯಕ್ತಿಯಿಂದ ಏನಾದರೂ ತಪ್ಪು ಸಂಭವಿಸಿ ಬಿಟ್ಟರೆ ಅವನ ಮೊದಲ ತಪ್ಪಿಗಾಗಿ ಅವನನ್ನು ಕೀಳಾಗಿ ಕಾಣಬಾರದು. ಅದನ್ನೊಂದು ಚರ್ಚಾ ವಿಷಯ ವಾಗಿಯೂ ಮಾಡಬಾರದು. ಬದಲಾಗಿ ಅದನ್ನು ಮುಚ್ಚಿಡಬೇಕು. ಆದರೆ ಅವನು ವ್ಯಭಿಚಾರವೆಸಗಿದರೆ ಅಥವಾ ಕಳ್ಳತನ ಮಾಡಿದರೆ ಅವನನ್ನು ಶಿಕ್ಷಿಸಬೇಕು. ಈ ಶಿಕ್ಷೆ ನೀಡುವುದು ಇಸ್ಲಾಮೀ ಆಡಳಿತ ವ್ಯವಸ್ಥೆಯಾಗಿದೆ. ಅಂತಹ ವ್ಯವಸ್ಥೆ ಇಲ್ಲದಿದ್ದರೆ ಅವನಿಂದ ತೌಬಾ (ಪಶ್ಚಾತ್ತಾಪ) ಮಾಡಿಸಿದರೆ ಸಾಕಾಗುವುದು.

ಸಾಮೂಹಿಕ ಚಾರಿತ್ರ್ಯ

(149) عَنْ أَبِي هُرَيْرَةَ قَالَ، قَالَ رَسُولُ اللّٰهِ صَلَّى اللّٰهُ عَلَيْهِ وَسَلَّمَ إِيَّاكُمْ وَالظَّنَّ فَإِنَّ الظَّنَّ أَكْذَبُ الْحَدِيثِ، وَلَا تَحَسَّسُوا وَلَا تَجَسَّسُوا وَلَا تَنَاجَشُوا وَلَا تَبَاغَضُوا، وَلَا تَدَابَرُوا وَكُونُوا عِبَادَ اللّٰهِ إِخْوَانًا

ಅಬೂ ಹುರೈರಾ(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು: ಅಪನಂಬಿಕೆಗಳಿಂದ ದೂರವಿರಿ. ಯಾಕೆಂದರೆ ಅಪನಂಬಿಕೆಗಳಿಂದ ಹೇಳುವ ಮಾತು ಅತಿ ದೊಡ್ಡ ಸುಳ್ಳಾಗಿರುವುದು. (ದುರುದ್ದೇಶದಿಂದ) ಇನ್ನೊಬ್ಬರ ತನಿಖೆ ನಡೆಸುತ್ತಾ ನಡೆಯದಿರಿ. (ಕುಂದು ಕೊರತೆಗಳ) ಹುಡುಕಾಟದಲ್ಲಿರಬೇಡಿರಿ. (ಗ್ರಾಹಕರನ್ನು ಸಿಲುಕಿಸಿ ಹಾಕಲು) ದಲ್ಲಾಳಿ ನಡೆಸದಿರಿ. ಪರಸ್ಪರ ದ್ವೇಷವಿರಿಸಬೇಡಿರಿ. ಒಬ್ಬನು ಇನ್ನೊಬ್ಬನ ತೇಜೋವಧೆಗೈಯದಿರಿ. ಅಲ್ಲಾಹನ ದಾಸರೇ, ಪರಸ್ಪರ ಸಹೋದರರಾಗಿ ಬಾಳಿರಿ.

ಆರು ಹಕ್ಕುಗಳು

(150) عَنْ أَبِي هُرَيْرَةَ قَالَ، قَالَ رَسُولُ اللّٰهِ صَلَّى اللّٰهُ عَلَيْهِ وَسَلَّمَ حَقُّ الْمُسْلِمِ عَلَى الْمُسْلِمِ سِتٌّ، قِيلَ مَا هُنَّ؟ قَالَ إِذَا لَقِيتَهُ فَسَلِّمْ عَلَيْهِ، وَإِذَا دَعَاكَ فَأَجِبْهُ، وَإِذَا اسْتَنْصَحَكَ فَانْصَحْ لَهُ، وَإِذَا عَطَسَ فَحَمِدَ اللّٰهَ فَشَمِّتْهُ وَإِذَا مَرِضَ فَعُدْهُ وَإِذَا مَاتَ فَاتَّبِعْهُ (مسلم)

ಅಬೂ ಹುರೈರಾ(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು: ಮುಸ್ಲಿಮನಿಗೆ ಇತರ ಮುಸ್ಲಿಮರ ಮೇಲೆ ಆರು ಹಕ್ಕುಗಳಿವೆ. ಅವು ಯಾವುವೆಂದು ಕೇಳಲಾದಾಗ, ಪ್ರವಾದಿ(ಸ) ಹೇಳಿದರು- 1) ಒಬ್ಬ ಮುಸ್ಲಿಮನನ್ನು ಭೇಟಿಯಾದರೆ ಅವನಿಗೆ 'ಸಲಾಮ್' ಹೇಳುವುದು. 2) ಅವನು ಆಮಂತ್ರಣ ನೀಡಿದರೆ ಅದನ್ನು ಸ್ವೀಕರಿಸುವುದು. 3) ಅವನು ನಿನ್ನ ಹಿತಚಿಂತನೆಯನ್ನು ಬಯಸಿದರೆ ಅವನಿಗೆ ಹಿತವನ್ನು ಮಾಡುವುದು. 4) ಅವನು ಸೀನಿದಾಗ 'ಅಲ್ ಹಮ್ದುಲಿಲ್ಲಾಹ್' ಎಂದು ಹೇಳಿದರೆ ಉತ್ತರ ನೀಡುವುದು. 5) ಅವನು ಕಾಯಿಲೆ ಬಿದ್ದಾಗ ಅವನ ಸಂದರ್ಶನಕ್ಕೆ ಹೋಗುವುದು. 6) ಅವನು ಮರಣ ಹೊಂದಿದರೆ ಅವನ ಜನಾಝಾ

ದೊಂದಿಗೆ ಕಬರಸ್ಥಾನಕ್ಕೆ ಹೋಗುವುದು. *[ಮುಸ್ಲಿಮ್]*

ಟಿಪ್ಪಣಿ: ಸಲಾಮ್ ಹೇಳುವುದೆಂದರೆ ಕೇವಲ ಬಾಯಿಯಿಂದ 'ಅಸ್ಸಲಾಮು ಅಲೈಕುಮ್' ಎಂದು ಹೇಳುವುದಲ್ಲ. ಬದಲಾಗಿ ಅದೊಂದು ಪ್ರಮಾಣವಾಗಿದೆ. ನನ್ನಿಂದ ನಿನ್ನ ಪ್ರಾಣ, ಸೊತ್ತು ಮತ್ತು ಮಾನ ಎಲ್ಲವೂ ಸುರಕ್ಷಿತವಾಗಿವೆ. ಅವುಗಳಿಗೆ ನನ್ನಿಂದ ಯಾವ ಅಪಾಯವೂ ಇರಲಾರದೆಂಬ ಪ್ರಮಾಣ. ಹಾಗೆಯೇ ಅದೊಂದು ಪ್ರಾರ್ಥನೆಯಾಗಿದೆ. ಅಲ್ಲಾಹನು ನಿನ್ನ ಧರ್ಮವನ್ನೂ ವಿಶ್ವಾಸವನ್ನೂ ಎಲ್ಲ ರೀತಿಯ ವಿಪತ್ತುಗಳಿಂದ ರಕ್ಷಿಸಲಿ ಮತ್ತು ನಿನ್ನ ಮೇಲೆ ಅವನು ಕರುಣೆಯ ಸುರಿಮಳೆಗೈಯಲಿ ಎಂಬ ಪ್ರಾರ್ಥನೆ. 'ಅಸ್ಸಲಾಮು ಅಲೈಕುಮ್' ಎಂಬ ಪದಗಳಿಗಿರುವ ಈ ಸ್ಫೂರ್ತಿಯು ಈಗ ಮಾಯವಾಗಿ ಈ ಕೆಲವು ಪದಗಳು ಮಾತ್ರ ಉಳಿದಿವೆ.

'ಉತ್ತರ ನೀಡುವುದು' ಎಂದರೆ ಸೀನಿದವನಿಗಾಗಿ ಪ್ರಾರ್ಥಿಸುವುದಾಗಿದೆ. ಉದಾ: 'ಯರ್ಹಮುಕಲ್ಲಾಹ್' ಎಂದು ಹೇಳುವುದು. ಅಂದರೆ 'ಅಲ್ಲಾಹನು ನಿನ್ನ ಮೇಲೆ ಕರುಣೆ ತೋರಲಿ, ನಿನ್ನ ವೈರಿಗಳಿಗೆ ನಗುವ ಸಂದರ್ಭ ಒದಗಿ ಬರುವಂತಹ ಯಾವುದಾದರೂ ತಪ್ಪು ನಿನ್ನಿಂದ ಸಂಭವಿಸದಿರಲಿ.'

ಮುಸ್ಲಿಮೇತರ ನಾಗರಿಕರ ಹಕ್ಕುಗಳು

(151)

(١٥١) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اَلَا مَنْ ظَلَمَ مُعَاهَدًا اَوِ انْتَقَصَهٗ اَوْ كَلَّفَهٗ فَوْقَ طَاقَتِهٖ اَوْ اَخَذَ مِنْهُ شَيْئًا بِغَيْرِ طِيْبِ نَفْسٍ، فَاَنَا حَجِيْجُهٗ يَوْمَ الْقِيَامَةِ (ابوداؤد)

ಪ್ರವಾದಿ(ಸ) ಹೇಳಿದರು- ಇಸ್ಲಾಮಿನ ವ್ಯವಸ್ಥೆಯಲ್ಲಿ ಯಾವ ಮುಸ್ಲಿಮೇತರ ಪ್ರಜೆಯೊಂದಿಗೆ ಅವನ ಪ್ರಾಣ, ಸೊತ್ತು ಮತ್ತು ಮಾನದ ರಕ್ಷಣೆಯ ಒಪ್ಪಂದವನ್ನು ಮುಸ್ಲಿಮರು ಮಾಡಿರುವರೋ ಅಂತಹ ವ್ಯಕ್ತಿಯೊಂದಿಗೆ ಅಕ್ರಮವೆಸಗುವ, ಅವನ ಹಕ್ಕನ್ನು ಕಬಳಿಸುವ, ಅವನ ಮೇಲೆ ಅವನ ಶಕ್ತಿಗೆ ಮೀರಿದ ಭಾರ ಹೊರಿಸುವ ಅಥವಾ ಅವನ ಯಾವುದಾದರೂ ವಸ್ತುವನ್ನು ಅವನ ಇಚ್ಛೆಗೆ ವಿರುದ್ಧವಾಗಿ ಕಸಿದುಕೊಳ್ಳುವ ಮುಸ್ಲಿಮನ ವಿರುದ್ಧ ನಿರ್ಣಾಯಕ ದಿನದಂದು ಅಲ್ಲಾಹನ ನ್ಯಾಯಾಲಯದಲ್ಲಿ ಹೂಡಲಾಗುವ ಮೊಕದ್ದಮೆಯಲ್ಲಿ ನಾನು ಆತನ ಪರವಾಗಿ ವಾದಿಸುವೆನು.

[ಅಬೂ ದಾವೂದ್]

ಟಿಪ್ಪಣಿ: ಈ ಮುಂಚೆ ತಂದೆ ತಾಯಿಗಳ, ನೆರೆಹೊರೆಯವರ, ಅತಿಥಿಗಳ, ರೋಗಿಗಳ, ಪ್ರಯಾಣದ ಸಂಗಾತಿಗಳ ಹಾಗೂ ಬಡವರ ಕುರಿತಾಗಿ ಬಂದ ಹದೀಸ್‌ಗಳಲ್ಲಿ ಮುಸ್ಲಿಮರೂ ಮುಸ್ಲಿಮೇತರರೂ ಸೇರಿದ್ದಾರೆ. ಆಗ ಇಸ್ಲಾಮೀ ಆಡಳಿತ ವ್ಯವಸ್ಥೆಯಿದ್ದರೂ ಇಸ್ಲಾಮೇತರ ವ್ಯವಸ್ಥೆ

ಪಡೆದಿದೆ. ಯಾವನೇ ಮುಸ್ಲಿಮೇತರನ ಮೊಕದ್ದಮೆಯಲ್ಲಿ ಅವನ ಪರವಾಗಿ ಪ್ರವಾದಿ(ಸ) ವಾದಿಸಲು ಬಂದರೆಂದರೆ ಆ ಮುಸ್ಲಿಮ್ ಪ್ರತಿವಾದಿಗೆ ಹೀನಾಯ ಸೋಲು ನಿಶ್ಚಿತ.

ಪ್ರಾಣಿಗಳ ಹಕ್ಕುಗಳು

(152) عَنْ سُهَيْلِ بْنِ الْحَنْظَلِيَّةِ قَالَ مَرَّ رَسُوْلُ اللّٰهِ صَلَّى اللّٰهُ عَلَيْهِ وَسَلَّمَ بِبَعِيْرٍ قَدْ لَحِقَ ظَهْرُهُ بِبَطْنِهِ، فَقَالَ اتَّقُوا اللّٰهَ فِيْ هٰذِهِ الْبَهَائِمِ الْمُعْجَمَةِ، فَارْكَبُوْهَا صَالِحَةً وَاتْرُكُوْهَا صَالِحَةً (ابوداود)

ಸುಹೈಲ್ ಬಿನ್ ಹಂಝಲಿಯ್ಯ(ರ) ವರದಿ ಮಾಡುತ್ತಾರೆ- ಪ್ರವಾದಿ(ಸ) ಒಮ್ಮೆ ಒಂದು ಒಂಟೆಯ ಬಳಿಯಿಂದ ಹಾದು ಹೋಗುತ್ತಿದ್ದರು. ಅದರ ಬೆನ್ನು ಅದರ ಹೊಟ್ಟೆಗೆ ತಾಗಿರುವುದನ್ನು ಕಂಡು ಹೀಗೆಂದರು- ಈ ಮೂಕಪ್ರಾಣಿಗಳ ಬಗ್ಗೆ ಅಲ್ಲಾಹನ ಕ್ರೋಧ ದಿಂದ ಪಾರಾಗಲು ನೋಡಿರಿ. ಅವು ಉತ್ತಮ ಸ್ಥಿತಿಯಲ್ಲಿರುವಾಗ ಅವುಗಳ ಮೇಲೆ ಸವಾರಿ ಮಾಡಿರಿ. ಪ್ರಯಾಣ ಕೊನೆಗೊಂಡ ಬಳಿಕ ಅವುಗಳನ್ನು ಉತ್ತಮ ಸ್ಥಿತಿಯಲ್ಲಿ ಬಿಡಿರಿ.

[ಅಬೂ ದಾವೂದ್]

ಟಿಪ್ಪಣಿ: ಅರ್ಥಾತ್ ಜಾನುವಾರುಗಳನ್ನು ಹಸಿವಿನಿಂದಿರಿಸುವುದು ದೇವನ ಕ್ರೋಧಕ್ಕೆ ಪಾತ್ರವಾಗುವ ವಿಷಯವಾಗಿದೆ. ಅವುಗಳಿಗೆ ಚೆನ್ನಾಗಿ ತಿನ್ನಿಸಿರಿ, ಕುಡಿಸಿರಿ ಮತ್ತು ಅವುಗಳಿಂದ ಸೇವೆ ಪಡೆಯಿರಿ. ಅವು ಕಿರಿಚಾಡುವಷ್ಟು ಅವುಗಳಿಂದ ಕೆಲಸ ಮಾಡಿಸದಿರಿ. ಮುಂದಿನ ಹದೀಸ್ ಇದನ್ನು ಇನ್ನಷ್ಟು ವಿಶದೀಕರಿಸುತ್ತದೆ.

---

(153) عَنْ عَبْدِ اللّٰهِ بْنِ جَعْفَرٍ .... فَدَخَلَ حَائِطًا لِرَجُلٍ مِنَ الْأَنْصَارِ فَإِذَا فِيْهِ جَمَلٌ، فَلَمَّا رَأَى الْجَمَلُ النَّبِيَّ صَلَّى اللّٰهُ عَلَيْهِ وَسَلَّمَ جَرْجَرَ وَذَرَفَتْ عَيْنَاهُ، فَأَتَاهُ النَّبِيُّ صَلَّى اللّٰهُ عَلَيْهِ وَسَلَّمَ فَمَسَحَ سَرَاتَهُ أَيْ سَنَامَهُ وَذِفْرَاهُ فَسَكَنَ فَقَالَ مَنْ رَبُّ هٰذَا الْجَمَلِ؟ لِمَنْ هٰذَا الْجَمَلُ؟ فَجَاءَ فَتًى مِنَ الْأَنْصَارِ فَقَالَ هٰذَا لِيْ يَا رَسُوْلَ اللّٰهِ، فَقَالَ أَفَلَا تَتَّقِي اللّٰهَ فِيْ هٰذِهِ الْبَهِيْمَةِ الَّتِيْ مَلَّكَكَ اللّٰهُ إِيَّاهَا؟ فَإِنَّهُ يَشْكُوْ إِلَيَّ أَنَّكَ تُجِيْعُهُ وَتُدْئِبُهُ (رياض الصالحين)

ಅಬ್ದುಲ್ಲಾ ಬಿನ್ ಜಾಫರ್(ರ) ಹೇಳುತ್ತಾರೆ- ಪ್ರವಾದಿ(ಸ) ಓರ್ವ ಅನ್ಸಾರಿ (ಮದೀನಾದ ನಿವಾಸಿ)ಯ ತೋಟದೊಳಗೆ (ಯಾವುದೋ ಅಗತ್ಯಕ್ಕಾಗಿ) ಪ್ರವೇಶಿಸಿದರು. ಅಲ್ಲಿ

ಒಂದು ಒಂಟೆ ಮಲಗಿತ್ತು. ಆ ಒಂಟೆಯು ಕರುಣಾಳುವಾದ ಪ್ರವಾದಿವರ್ಯರನ್ನು(ಸ) ನೋಡಿದಾಗ ವೇದನಾಜನಕ ಧ್ವನಿ ಹೊರಡಿಸಿತು ಮತ್ತು ಅದರ ಕಣ್ಣುಗಳಿಂದ ಅಶ್ರುಧಾರೆ ಹರಿಯತೊಡಗಿತು. ಪ್ರವಾದಿ(ಸ) ಅದರ ಬಳಿಗೆ ಹೋಗಿ ಅದರ ಡುಬ್ಬ ಮತ್ತು ಕೆನ್ನೆಗಳನ್ನು ನೇವರಿಸಿದರು. ಅದಕ್ಕೆ ಸ್ವಲ್ಪ ಸಮಾಧಾನವಾಯಿತು. ಪ್ರವಾದಿ(ಸ), "ಇದರ ಯಜಮಾನ ಯಾರು? ಇದು ಯಾರ ಒಂಟೆ" ಎಂದು ಕೇಳಿದರು. ಆಗ ಅನ್ಸಾರಿಗಳ ಪೈಕಿ ಓರ್ವ ತರುಣ ಮುಂದೆ ಬಂದು, "ಅಲ್ಲಾಹನ ಸಂದೇಶವಾಹಕರೇ ಇದು ನನ್ನ ಒಂಟೆ" ಎಂದನು. ಆಗ ಪ್ರವಾದಿ(ಸ) ಅವನೊಂದಿಗೆ ಹೀಗೆಂದರು, "ಈ ಬಡಪಾಯಿಯನ್ನು ನಿನ್ನ ವಶಕ್ಕೆ ಕೊಟ್ಟಿರುವ ಅಲ್ಲಾಹನ ಭಯ ನಿನಗಿಲ್ಲವೇ? (ಅಲ್ಲಾಹನು ನಿನ್ನಲ್ಲಿ ಎಂತಹ ಕಠಿಣ ವಿಚಾರಣೆ ನಡೆಸ ಬಹುದೆಂದರ್ಥ) ಈ ಒಂಟೆ 'ನೀನು ಅದಕ್ಕೆ ಮೇವು ನೀಡದೆ ನಿರಂತರ ದುಡಿಸುತ್ತಿರುವೆ' ಎಂದು ನನ್ನಲ್ಲಿ ದೂರಿಕೊಳ್ಳುತ್ತಿದೆ." *[ರಿಯಾದುಸ್ಸಾಲಿಹೀನ್]*

---

(154) عَنْ اَبِيْ هُرَيْرَةَ قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اِذَا سَافَرْتُمْ فِي الْخِصْبِ فَاَعْطُوا الْاِبِلَ حَقَّهَا مِنَ الْاَرْضِ، وَاِذَا سَافَرْتُمْ فِي السَّنَةِ فَاَسْرِعُوْا عَلَيْهَا السَّيْرَ (مسلم)

ಅಬೂ ಹುರೈರಾ(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು- ಭೂಮಿ ಹಸಿರು ಹಸಿರಾಗಿರುವ ಕಾಲದಲ್ಲಿ ನೀವು ಪ್ರಯಾಣಿಸುತ್ತೀರಾದರೆ ನಿಮ್ಮ ಒಂಟೆಗಳಿಗೆ ಭೂಮಿಯಿಂದ ಅವುಗಳ ಹಕ್ಕನ್ನು ನೀಡಿರಿ. (ಅರ್ಥಾತ್ ಹುಲ್ಲು ಮೇಯಲು ಬಿಡಿರಿ) ಭೂಮಿ ಒಣಗಿದ ಕಾಲದಲ್ಲಿ ಪ್ರಯಾಣಿಸುವುದಾದರೆ (ತಮ್ಮ ಗುರಿಯನ್ನು ಬೇಗ ತಲಪುವಂತಾಗಲು) ಅವುಗಳನ್ನು ವೇಗವಾಗಿ ಓಡಿಸಿರಿ. ಅವು ಹಸಿವು ದಾಹಗಳ ಸಂಕಷ್ಟದಿಂದ ರಕ್ಷಣೆ ಪಡೆಯುವಂತಾಗಲಿ. *[ಮುಸ್ಲಿಮ್]*

'ದಿಬಹ್' ಮಾಡುವ ಕ್ರಮ

(155) عَنْ شَدَّادِ بْنِ اَوْسٍ قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اِنَّ اللّٰهَ تَبَارَكَ وَتَعَالٰى كَتَبَ الْاِحْسَانَ عَلٰى كُلِّ شَيْءٍ، فَاِذَا قَتَلْتُمْ فَاَحْسِنُوا الْقِتْلَةَ، وَاِذَا ذَبَحْتُمْ فَاَحْسِنُوا الذَّبْحَ، وَلْيُحِدَّ اَحَدُكُمْ شَفْرَتَهُ وَلْيُرِحْ ذَبِيْحَتَهُ (مسلم)

ಶದ್ದಾದ್ ಬಿನ್ ಔಸ್(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು- ಮಹಾನನಾದ ಅಲ್ಲಾಹನು ಪ್ರತಿಯೊಂದು ಕಾರ್ಯವನ್ನು ಉತ್ತಮವಾಗಿ ನಿರ್ವಹಿಸುವುದನ್ನು ಕಡ್ಡಾಯ ಗೊಳಿಸಿರುವನು. ಆದುದರಿಂದ ಯಾರನ್ನಾದರೂ (ಕಾನೂನು ರೀತ್ಯಾ) ವಧಿಸುವುದಾದರೆ ಉತ್ತಮ ರೀತಿಯಲ್ಲಿ ವಧಿಸಿರಿ (ಅಂದರೆ ಕಣ್ಣು, ಕಿವಿ ಇತ್ಯಾದಿಗಳನ್ನು ಕೊಯ್ದು ವಿರೂಪ ಗೊಳಿಸದಿರಿ) ಮತ್ತು ಪ್ರಾಣಿಗಳನ್ನು 'ದಿಬಹ್' ಮಾಡುವಾಗ ಒಳ್ಳೆಯ ರೀತಿಯಲ್ಲಿ ಕೊಯ್ಯಿರಿ. ನಿಮ್ಮಲ್ಲೊಬ್ಬನು ಕೊಯ್ಯುವಾಗ ತನ್ನ ಚೂರಿಯನ್ನು ಚೆನ್ನಾಗಿ ಹರಿತಗೊಳಿಸಬೇಕು. ಪ್ರಾಣಿಯು ಹೆಚ್ಚು ಹೊತ್ತು ಚಡಪಡಿಸುವಂತೆ ಮಾಡಬಾರದು. ಅದರ ಪ್ರಾಣವು ಶೀಘ್ರ ಹೊರಟು ಹೋಗುವ ರೀತಿಯಲ್ಲಿ ಅದನ್ನು ಕೊಯ್ಯಬೇಕು. (ಇದರ ಅರ್ಥ 'ದಿಬಹ್' ಮಾಡಿದ ಬಳಿಕ ಪ್ರಾಣಿಯು ಚಡಪಡಿಸುವುದು ನಿಂತ ಬಳಿಕವೇ ಅದರ ಚರ್ಮ ಸುಲಿದು ಮಾಂಸ ತೆಗೆಯಬೇಕು ಎಂದೂ ಆಗಿದೆ.) *[ಮುಸ್ಲಿಮ್]*

ಪ್ರಾಣಿಗಳ ಮುಖಕ್ಕೆ ಹೊಡೆಯಬಾರದು

(156) عَنْ جَابِرِ بْنِ عَبْدِ اللهِ قَالَ مَرَّ حِمَارٌ بِرَسُوْلِ اللهِ صَلَّى اللهُ عَلَيْهِ وَسَلَّمَ وَقَدْ كُوِيَ فِيْ وَجْهِهِ يَفُوْرُ مَنْخِرَاهُ مِنْ دَمٍ، فَقَالَ رَسُوْلُ اللهِ صَلَّى اللهُ عَلَيْهِ وَسَلَّمَ لَعَنَ اللهُ مَنْ فَعَلَ هٰذَا، ثُمَّ نَهٰى عَنِ الْكَيِّ فِي الْوَجْهِ وَالضَّرْبِ فِي الْوَجْهِ. (مسلم، ابن حبان، ترمذی)

ಜಾಬಿರ್ ಬಿನ್ ಅಬ್ದುಲ್ಲಾರಿಂದ(ರ) ವರದಿ: ಒಮ್ಮೆ ಪ್ರವಾದಿ(ಸ) ಅವರ ಬಳಿಯಿಂದ ಒಂದು ಕತ್ತೆ ಹಾದು ಹೋಯಿತು. ಅದರ ಮುಖಕ್ಕೆ ಬರೆ ಎಳೆಯಲಾಗಿತ್ತು ಮತ್ತು ಅದರ ಮೂಗಿನ ದ್ವಾರಗಳಿಂದ ರಕ್ತ ಹರಿಯುತ್ತಿತ್ತು. ಪ್ರವಾದಿ(ಸ) ಈ ದೃಶ್ಯವನ್ನು ನೋಡಿ, ಈ ಕೃತ್ಯವನ್ನು ಎಸಗಿದವನ ಮೇಲೆ ಅಲ್ಲಾಹನ ಶಾಪವಿರಲಿ ಎಂದು ಹೇಳಿದರು. ತರುವಾಯ ಅವರು ಮುಖಕ್ಕೆ ಬರೆ ಎಳೆಯುವುದನ್ನೂ ಮುಖದ ಮೇಲೆ ಹೊಡೆಯುವುದನ್ನೂ ನಿಷೇಧಿಸಿದರು. *[ಮುಸ್ಲಿಮ್, ಇಬ್ನು ಹಿಬ್ಬಾನ್, ತಿರ್ಮಿದಿ]*

ಟಿಪ್ಪಣಿ: ಮಕ್ಕಳಿಗೆ ಕಲಿಸುವ ಅಧ್ಯಾಪಕರು ಕರುಣಾಮಯಿಯಾದ ಪ್ರವಾದಿಯವರ(ಸ) ಈ ಮಾತುಗಳನ್ನು ಸದಾ ನೆನಪಿನಲ್ಲಿಡಬೇಕು. ಮಕ್ಕಳ ಮುಖದ ಮೇಲೆ ಎಂದೂ ಹೊಡೆಯಬಾರದು. ಪ್ರಾಣಿಗಳ ಮುಖದ ಮೇಲೆ ಹೊಡೆಯುವುದು ಸರಿಯಲ್ಲವೆಂದಾದರೆ ಮಕ್ಕಳ ಮುಖದ ಮೇಲೆ ಹೊಡೆಯುವುದು ಹೇಗೆ?

ಪ್ರಾಣಿಗಳನ್ನು ಪರಸ್ಪರ ಕಾದಾಡಿಸಬಾರದು

(157) عَنِ ابْنِ عَبَّاسٍ قَالَ: نَهَى رَسُولُ اللهِ صَلَّى اللهُ عَلَيْهِ وَسَلَّمَ عَنِ التَّحْرِيشِ بَيْنَ الْبَهَائِمِ (ترمذی)

ಇಬ್ನು ಅಬ್ಬಾಸ್(ರ) ಹೇಳುತ್ತಾರೆ- ಪ್ರವಾದಿ(ಸ) ಅವರು ಪ್ರಾಣಿಗಳನ್ನು ಪರಸ್ಪರ ಕಾದಾಡಿಸುವುದನ್ನು ನಿಷೇಧಿಸಿರುವರು. *[ತಿರ್ಮಿದಿ]*

ಟಿಪ್ಪಣಿ: ಕೋಳಿ ಅಂಕ, ಪಾರಿವಾಳ ಸ್ಪರ್ಧೆ, ಹೋತಗಳ ಹೊಡೆದಾಟ ಇತ್ಯಾದಿ ಎಲ್ಲವೂ ನಿಷಿದ್ಧ ಎಂದು ಈ ಹದೀಸಿನ ಮೂಲಕ ತಿಳಿದು ಬರುತ್ತದೆ.

ಪ್ರಾಣಿಗಳಿಗೆ ಕಿರುಕುಳ ನೀಡಬಾರದು

(158) عَنْ عَبْدِ الرَّحْمٰنِ بْنِ عَبْدِ اللهِ عَنْ اَبِيْهِ قَالَ: كُنَّا مَعَ رَسُوْلِ اللهِ صَلَّى اللهُ عَلَيْهِ وَسَلَّمَ فِي سَفَرٍ فَانْطَلَقَ لِحَاجَتِهِ فَرَأَيْنَا حُمَرَةً مَعَهَا فَرْخَانِ، فَاَخَذْنَا فَرْخَيْهَا، فَجَاءَتِ الْحُمَرَةُ فَجَعَلَتْ تَفَرَّشُ، فَجَاءَ النَّبِيُّ صَلَّى اللهُ عَلَيْهِ وَسَلَّمَ فَقَالَ مَنْ فَجَعَ هٰذِهٖ بِوَلَدِهَا؟ رُدُّوْا وَلَدَهَا اِلَيْهَا، وَرَاٰى قَرْيَةَ نَمْلٍ قَدْ حَرَقْنَاهَا، قَالَ مَنْ حَرَقَ هٰذِهٖ فَقُلْنَا نَحْنُ، قَالَ اِنَّهٗ لَا يَنْبَغِيْ اَنْ يُّعَذِّبَ بِالنَّارِ اِلَّا رَبُّ النَّارِ (ابوداود)

ಅಬ್ದುರ್ರಹ್ಮಾನ್(ರ) ಅವರು ತನ್ನ ತಂದೆ ಅಬ್ದುಲ್ಲಾರಿಂದ ಹೀಗೆ ಉಲ್ಲೇಖಿಸುತ್ತಾರೆ- ನಾವು ಒಂದು ಪ್ರಯಾಣದಲ್ಲಿ ಪ್ರವಾದಿ(ಸ)ಯವರೊಂದಿಗಿದ್ದೆವು. ಪ್ರವಾದಿ(ಸ) ಶೌಚಕ್ಕಾಗಿ ಹೋದಾಗ ನಾವೊಂದು ಕೆಂಬಣ್ಣದ ಗುಬ್ಬಚ್ಚಿಯನ್ನು ಕಂಡೆವು. ಎರಡು ಮರಿಗಳು ಅದರ ಜೊತೆಗಿದ್ದುವು. ನಾವು ಆ ಎರಡೂ ಮರಿಗಳನ್ನು ಹಿಡಿದೆವು. ಆಗ ಆ ಗುಬ್ಬಚ್ಚಿ ಬಂದು ತನ್ನ ರೆಕ್ಕೆ ಬಿಚ್ಚಿ ಆ ಮರಿಗಳ ಮೇಲೆ ಹಾರಾಡತೊಡಗಿತು. ಅಷ್ಟರಲ್ಲಿ ಪ್ರವಾದಿ(ಸ) ಬಂದರು. ಅವರು ಆ ಪಕ್ಷಿಯ ಕಳವಳವನ್ನು ಕಂಡು, 'ಅದರ ಮರಿಗಳನ್ನು ಕಸಿದು ಅದನ್ನು ದುಃಖಕ್ಕೀಡು ಮಾಡಿದವರು ಯಾರು, ಅದರ ಮರಿಗಳನ್ನು ಮರಳಿಸಿರಿ' ಎಂದು ಹೇಳಿದರು.

ಅನಂತರ ಪ್ರವಾದಿಯವರು(ಸ) ನಾವು ಬೆಂಕಿ ಕೊಟ್ಟಿದ್ದ ಇರುವೆಗಳ ಗೂಡನ್ನು ನೋಡಿದರು. ಈ ಕುರಿತು ಅವರು ನಮ್ಮನ್ನು ವಿಚಾರಿಸಿದಾಗ ನಾವೇ ಬೆಂಕಿ ಹಚ್ಚಿದೆವು

ಎಂದು ಹೇಳಿದೆವು. ಆಗ ಪ್ರವಾದಿ(ಸ) ಹೀಗೆಂದರು- ಬೆಂಕಿಯ ಶಿಕ್ಷೆ ನೀಡುವ ಕೆಲಸ ಬೆಂಕಿಯ ಒಡೆಯ(ಅಲ್ಲಾಹನಿಗೆ)ನಿಗೆ ಸಲ್ಲುತ್ತದೆ.

[ಅಬೂ ದಾವೂದ್]

ಟಿಪ್ಪಣಿ: ಮಂಚದಲ್ಲಿರುವ ತಿಗಣೆಗಳನ್ನು ಬಿಸಿ ನೀರು ಹಾಕಿ ಕೊಲ್ಲಬಹುದೆಂದು ಇಮಾಮ್ ಅಹ್ಮದ್ ಬಿನ್ ಹಂಬಲ್(ರ) ಫತ್ವಾ ನೀಡಿದ್ದಾರೆ. ಇತರ ಔಷಧಿಗಳು ಸಿಗದಿದ್ದರೆ ಅಥವಾ ಅವು ಫಲಪ್ರದವಾಗದಿದ್ದರೆ ಬಿಸಿ ನೀರು ಹಾಕಬಹುದೆಂಬುದು ನನ್ನ ಅಭಿಪ್ರಾಯ.

ಪ್ರಾಣಿಗಳನ್ನು ಮಲಗಿಸುವುದಕ್ಕೆ ಮುಂಚೆ ಚೂರಿ ಹರಿತಗೊಳಿಸಬೇಕು

(159) عَنِ ابْنِ عَبَّاسٍ قَالَ مَرَّ رَسُوْلُ اللّٰهِ صَلَّى اللّٰهُ عَلَيْهِ وَسَلَّمَ عَلٰى رَجُلٍ وَاضِعٍ رِجْلَهُ عَلٰى صَفْحَةِ شَاةٍ وَهُوَ يُحِدُّ شَفْرَتَهُ وَهِيَ تَلْحَظُ إِلَيْهِ بِبَصَرِهَا، قَالَ أَفَلَا قَبْلَ هٰذَا؟ أَوْ تُرِيْدُ أَنْ تُمِيْتَهَا مَوْتَتَيْنِ؟ وَفِيْ رِوَايَةٍ أَتُرِيْدُ أَنْ تُمِيْتَهَا مَوْتَاتٍ؟ هَلَّا أَحْدَدْتَ شَفْرَتَكَ قَبْلَ أَنْ تُضْجِعَهَا؟ (ترغيب)

ಇಬ್ನು ಅಬ್ಬಾಸ್(ರ) ಹೇಳುತ್ತಾರೆ- ಪ್ರವಾದಿಯವರು(ಸ) ಓರ್ವ ವ್ಯಕ್ತಿಯ ಬಳಿಯಿಂದ ಹಾದು ಹೋಗುತ್ತಿದ್ದರು. ಆ ವ್ಯಕ್ತಿ ಒಂದು ಆಡನ್ನು ಮಲಗಿಸಿ ಅದರ ಮುಸುಡನ್ನು ಕಾಲಿನಿಂದ ಅದುಮಿಟ್ಟು ಚೂರಿ ಹರಿತಗೊಳಿಸುತ್ತಿದ್ದನು. ಆಡು ಈ ದೃಶ್ಯವನ್ನು ನೋಡುತ್ತಿತ್ತು. ಪ್ರವಾದಿ(ಸ) ಹೇಳಿದರು- ಈ ಆಡು 'ದಿಬಹ್' ಮಾಡುವುದಕ್ಕಿಂತ ಮುಂಚೆ ಸತ್ತು ಹೋಗುತ್ತದೆ, ನೀನೇನು ಅದಕ್ಕೆ ಇನ್ನೊಂದು ಮರಣವನ್ನು ನೀಡಬಯಸುವೆಯಾ?

ಇನ್ನೊಂದು ವರದಿಯಲ್ಲಿ ಹೀಗಿದೆ- ನೀನೇನು ಅದನ್ನು ಪದೇ ಪದೇ ಸಾಯಿಸುವೆಯಾ? ಅದನ್ನು ಮಲಗಿಸುವುದಕ್ಕಿಂತ ಮುಂಚೆಯೇ ಚೂರಿ ಹರಿತಗೊಳಿಸಲಿಲ್ಲವೇಕೆ?

[ತರ್ಗೀಬ್]

ಪ್ರಾಣಿಗಳನ್ನು ಇತರ ಪ್ರಾಣಿಗಳ ಮುಂದೆ 'ದಿಬಹ್' ಮಾಡಬಾರದು

(160) عَنِ ابْنِ عُمَرَ قَالَ اَمَرَ النَّبِيُّ صَلَّى اللهُ عَلَيْهِ وَسَلَّمَ بِحَدِّ الشِّفَارِ، وَاَنْ تُوَارٰى عَنِ الْبَهَائِمِ وَقَالَ اِذَا ذَبَحَ اَحَدُكُمْ فَلْيُجْهِزْ (المنذري)

ಇಬ್ನು ಉಮರ್(ರ) ಹೇಳುತ್ತಾರೆ- ಪ್ರವಾದಿ(ಸ) ಅವರು ಪ್ರಾಣಿಗಳನ್ನು ಹರಿತವಾದ ಚೂರಿಯಿಂದ 'ದಿಬಹ್' ಮಾಡುವಂತೆ ಮತ್ತು ಪ್ರಾಣಿಗಳನ್ನು ಇತರ ಪ್ರಾಣಿಗಳ ಮುಂದೆ 'ದಿಬಹ್' ಮಾಡದಂತೆ ಆದೇಶಿಸಿದ್ದಾರೆ. ಅಂತೆಯೇ ನಿಮ್ಮ ಪೈಕಿ ಯಾರಾದರೂ ಪ್ರಾಣಿ 'ದಿಬಹ್' ಮಾಡುವುದಾದರೆ ಬೇಗನೆ ಅದನ್ನು ಸಾಯಿಸಬೇಕು(ಅದನ್ನು ಹೆಚ್ಚು ಹೊತ್ತು ಚಡಪಡಿಸುವಂತೆ ಮಾಡಬಾರದು) ಎಂದು ಹೇಳಿದ್ದಾರೆ. *[ಅಲ್ ಮುಂದಿರಿ]*

ಪ್ರಾಣಿಗಳನ್ನು ಗುರಿಯಾಗಿರಿಸಬಾರದು

(161) عَنِ ابْنِ عُمَرَ اَنَّهُ مَرَّ بِفِتْيَانٍ مِنْ قُرَيْشٍ قَدْ نَصَبُوْا طَيْرًا اَوْ دَجَاجَةً يَتَرَامَوْنَهَا، وَقَدْ جَعَلُوْا لِصَاحِبِ الطَّيْرِ كُلَّ خَاطِئَةٍ مِنْ نَبْلِهِمْ، فَلَمَّا رَاَوْا ابْنَ عُمَرَ تَفَرَّقُوْا، فَقَالَ ابْنُ عُمَرَ مَنْ فَعَلَ هٰذَا؟ لَعَنَ اللهُ مَنْ فَعَلَ هٰذَا، اِنَّ رَسُوْلَ اللهِ صَلَّى اللهُ عَلَيْهِ وَسَلَّمَ لَعَنَ مَنِ اتَّخَذَ شَيْئًا فِيْهِ الرُّوْحُ غَرَضًا

ಇಬ್ನು ಉಮರ್(ರ) ಒಮ್ಮೆ ಕುರೈಶರ ಕೆಲವು ಯುವಕರ ಬಳಿಯಿಂದ ಹಾದು ಹೋಗುತ್ತಿದ್ದರು. ಆ ಯುವಕರು ಒಂದು ಪಕ್ಷಿ ಅಥವಾ ಕೋಳಿಯನ್ನು ಕಟ್ಟಿ ಹಾಕಿ ಅದರತ್ತ ಬಾಣ ಬಿಡುತ್ತಿದ್ದರು. (ಗುರಿಯಿಟ್ಟು ಹೊಡೆಯುವ ಅಭ್ಯಾಸ ಮಾಡುತ್ತಿದ್ದರು.) ಗುರಿತಪ್ಪುವ ಬಾಣಗಳು ಪಕ್ಷಿಯ ಮಾಲಿಕನಿಗೆ ಸೇರಿದ್ದೆಂದು ಅವನೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಇಬ್ನು ಉಮರ್‌ರನ್ನು(ರ) ನೋಡಿದಾಗ ಆ ಯುವಕರು ಅತ್ತಿತ್ತ ಸರಿದರು. ಇಬ್ನು ಉಮರ್(ರ) ಹೇಳಿದರು- "ಇದು ಯಾರ ಕೆಲಸ? ಇಂತಹ ಕೆಲಸ ಮಾಡಿದವರ ಮೇಲೆ

ಅಲ್ಲಾಹನ ಶಾಪವಿರಲಿ. ಪ್ರವಾದಿ(ಸ) ಕೂಡಾ ಯಾವುದೇ ಜೀವಿಗೆ ಗುರಿಯಿಡುವವನ ಮೇಲೆ ಶಾಪ ಹಾಕಿರುವರು." (ಅರ್ಥಾತ್ ಗುರಿಯಿಟ್ಟು ಹೊಡೆಯುವ ಅಭ್ಯಾಸ ಮಾಡುವವನನ್ನು)

ಪ್ರಾಣಿಗಳ ಕುರಿತು ಸಮಗ್ರ ಬೋಧನೆ

(162) عَنْ أَبِي هُرَيْرَةَ قَالَ: قَالَ رَسُولُ اللهِ صَلَّى اللهُ عَلَيْهِ وَسَلَّمَ بَيْنَمَا رَجُلٌ يَمْشِي بِطَرِيقٍ اشْتَدَّ عَلَيْهِ الْعَطَشُ فَوَجَدَ بِئْرًا فَنَزَلَ فِيهَا فَشَرِبَ ثُمَّ خَرَجَ، فَإِذَا كَلْبٌ يَلْهَثُ يَأْكُلُ الثَّرَى مِنَ الْعَطَشِ، فَقَالَ الرَّجُلُ لَقَدْ بَلَغَ هَذَا الْكَلْبَ مِنَ الْعَطَشِ مِثْلُ الَّذِي كَانَ بَلَغَ بِي، فَنَزَلَ الْبِئْرَ فَمَلَأَ خُفَّهُ ثُمَّ أَمْسَكَهُ بِفِيهِ فَسَقَى الْكَلْبَ فَشَكَرَ اللهُ لَهُ فَغَفَرَ لَهُ، فَقَالُوا يَا رَسُولَ اللهِ وَإِنَّ لَنَا فِي الْبَهَائِمِ أَجْرًا؟ فَقَالَ نَعَمْ فِي كُلِّ ذَاتِ كَبِدٍ رَطْبَةٍ أَجْرٌ. (بخاري ومسلم)

ಅಬೂ ಹುರೈರಾ(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು- ಒಬ್ಬನು ನಡೆಯುತ್ತಿದ್ದನು. ಅವನಿಗೆ ಅತೀವ ಬಾಯಾರಿಕೆಯಾಯಿತು. ಅಲ್ಲೊಂದು ಹೆಚ್ಚು ಆಳವಿಲ್ಲದ ಬಾವಿಯಿತ್ತು. ಅದರೊಳಗೆ ಇಳಿದು ನೀರು ಕುಡಿದು ಬಾಯಾರಿಕೆಯನ್ನು ನೀಗಿಸಿ ಹೊರಬಂದು ನೋಡುವಾಗ, ಒಂದು ನಾಯಿ ನಾಲಗೆ ಹೊರಚಾಚಿ ಏದುಸಿರು ಬಿಡುತ್ತಿತ್ತು. ಬಾಯಾರಿಕೆಯಿಂದಾಗಿ ಅದು ಹಸಿ ಮಣ್ಣನ್ನು ನೆಕ್ಕುತ್ತಿತ್ತು. ಆ ವ್ಯಕ್ತಿ ಈ ನಾಯಿಗೂ ತನ್ನಂತೆಯೇ ಅತೀವ ಬಾಯಾರಿಕೆಯಾಗಿದೆ ಎಂದು ಭಾವಿಸಿ, ಪುನಃ ಬಾವಿಗಿಳಿದನು. ತನ್ನ ಚರ್ಮದ ಪಾದರಕ್ಷೆಯಲ್ಲಿ ನೀರು ತುಂಬಿಸಿ ಅದನ್ನು ಬಾಯಲ್ಲಿ ಕಚ್ಚಿಕೊಂಡು ಮೇಲೆ ಬಂದು ನಾಯಿಗೆ ಕುಡಿಸಿದನು. ಅಲ್ಲಾಹನು ಅವನ ಈ ಕರ್ಮವನ್ನು ಮೆಚ್ಚಿದನು ಮತ್ತು ಅವನನ್ನು ಕ್ಷಮಿಸಿಬಿಟ್ಟನು. ಜನರು ಕೇಳಿದರು- ಪ್ರಾಣಿಗಳ ಮೇಲೆ ದಯೆ ತೋರಿದರೂ ಪುಣ್ಯ ಲಭಿಸುವುದೇ? ಪ್ರವಾದಿ(ಸ) ಹೇಳಿದರು- ಪ್ರತಿಯೊಂದು ಜೀವಿಯೊಂದಿಗೂ ದಯೆ ತೋರಿದರೆ ಪುಣ್ಯ ಲಭಿಸುವುದು. *[ಬುಖಾರಿ, ಮುಸ್ಲಿಮ್]*

❖ ❖ ❖

ವ್ಯವಹಾರ

ಸ್ವ ಸಂಪಾದನೆಯ ಮಹತ್ವ

(163) عَنِ الْمِقْدَامِ بْنِ مَعْدِيْ كَرِبَ قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ مَا أَكَلَ أَحَدٌ طَعَامًا قَطُّ خَيْرًا مِنْ أَنْ يَأْكُلَ مِنْ عَمَلِ يَدَيْهِ، وَإِنَّ نَبِيَّ اللّٰهِ دَاوُدَ عَلَيْهِ السَّلَامُ كَانَ يَأْكُلُ مِنْ عَمَلِ يَدَيْهِ (بخاری)

ಮಿಕ್ದಾಮ್ ಬಿನ್ ಮಅ್‌ದೀ ಕರಬ್(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು- ತನ್ನ ಕೈಯಿಂದ ಸಂಪಾದಿಸಿದುದಕ್ಕಿಂತ ಉತ್ತಮ ಆಹಾರವನ್ನು ಎಂದೂ ಯಾರೂ ತಿಂದಿಲ್ಲ. ಅಲ್ಲಾಹನ ಪ್ರವಾದಿ ದಾವೂದ್(ಅ) ಅವರು ತಮ್ಮ ಸ್ವಸಂಪಾದನೆಯಿಂದಲೇ ತಿನ್ನುತ್ತಿದ್ದರು. *[ಬುಖಾರಿ]*

ಕಾರ್ಮಿಕನ ಸಂಪಾದನೆ

(164) عَنْ أَبِيْ هُرَيْرَةَ عَنِ النَّبِيِّ صَلَّى اللّٰهُ عَلَيْهِ وَسَلَّمَ قَالَ خَيْرُ الْكَسْبِ كَسْبُ الْعَامِلِ إِذَا نَصَحَ (مسند احمد)

ಅಬೂ ಹುರೈರಾ(ರ) ವರದಿ ಮಾಡುತ್ತಾರೆ: ಪ್ರವಾದಿ(ಸ) ಹೇಳಿದರು- ಕಾರ್ಮಿಕನು ತನ್ನ ಯಜಮಾನನ ಕೆಲಸವನ್ನು ಹಿತ ಚಿಂತನೆಯಿಂದಲೂ ನಿಷ್ಠೆಯಿಂದಲೂ ಮಾಡಿದರೆ ಅವನ ಸಂಪಾದನೆ ಅತ್ಯುತ್ತಮ ಸಂಪಾದನೆಯಾಗಿದೆ. *[ಮುಸ್ನದ್ ಅಹ್ಮದ್]*

ಪರಿಶ್ರಮದ ಸಂಪಾದನೆ

(165) عَنِ ابْنِ عُمَرَ عَنِ النَّبِيِّ صَلَّى اللّٰهُ عَلَيْهِ وَسَلَّمَ قَالَ إِنَّ اللّٰهَ يُحِبُّ الْمُؤْمِنَ الْمُحْتَرِفَ (المنذری بحوالہ طبرانی)

ಇಬ್ನು ಉಮರ್(ರ) ವರದಿ ಮಾಡುತ್ತಾರೆ: ಪ್ರವಾದಿ(ಸ) ಹೇಳಿದರು- ದುಡಿದು ಸಂಪಾದಿಸುವ ಮುಸ್ಲಿಮನನ್ನು ಅಲ್ಲಾಹನು ಪ್ರೀತಿಸುತ್ತಾನೆ.

[ಅಲ್ ಮುಂದಿರೀ- ತಬ್ರಾನಿಯಿಂದ ಉದ್ಧೃತ]

ಪ್ರಾಮಾಣಿಕ ವ್ಯಾಪಾರ

(166) عَنْ رَافِعِ بْنِ خَدِيْجٍ قَالَ، قِيْلَ يَا رَسُوْلَ اللّٰهِ اَیُّ الْكَسْبِ اَطْيَبُ؟ قَالَ
عَمَلُ الرَّجُلِ بِيَدِهٖ وَكُلُّ بَيْعٍ مَبْرُوْرٍ (مشکوٰۃ)

ರಾಫಿಅ್ ಬಿನ್ ಖದೀಜ್(ರ) ಹೇಳುತ್ತಾರೆ- ಪ್ರವಾದಿವರ್ಯರಲ್ಲಿ(ಸ) ಯಾರೋ ಕೇಳಿದರು: ಅಲ್ಲಾಹನ ಸಂದೇಶವಾಹಕರೇ! ಸಂಪಾದನೆಯ ಮೂಲಗಳ ಪೈಕಿ ಹೆಚ್ಚು ಉತ್ತಮ ಮತ್ತು ಶುದ್ಧವಾದ ಮೂಲ ಯಾವುದು?

ಪ್ರವಾದಿ(ಸ) ಹೇಳಿದರು: ಮಾನವನ ಸ್ವಂತ ಕೈಯ ಸಂಪಾದನೆ ಮತ್ತು ಪ್ರಾಮಾಣಿಕ ವ್ಯಾಪಾರ. *[ಮಿಷ್ಕಾತ್]*

ಪ್ರಾಮಾಣಿಕ, ಸತ್ಯಸಂಧ ವ್ಯಾಪಾರಿಯ ಸ್ಥಾನ

(167) عَنْ اَبِیْ سَعِيْدِ نِ الْخُدْرِيِّ قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ
اَلتَّاجِرُ الصَّدُوْقُ الْاَمِيْنُ مَعَ النَّبِيِّيْنَ وَالصِّدِّيْقِيْنَ وَالشُّهَدَاءِ (ترمذی)

ಅಬೂ ಸಈದ್ ಖುದ್ರೀ(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು: ಸತ್ಯಸಂಧ ಹಾಗೂ ಪ್ರಾಮಾಣಿಕ ವ್ಯಾಪಾರಿಯು ಪ್ರವಾದಿಗಳ, ಸತ್ಯಸಂಧರ ಮತ್ತು ಹುತಾತ್ಮರ ಜೊತೆಯಲ್ಲಿರುವನು. *[ತಿರ್ಮಿದಿ]*

ವಂಚಕ ವ್ಯಾಪಾರಿಗಳ ದುರ್ಗತಿ

(168) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اَلتُّجَّارُ يُحْشَرُوْنَ يَوْمَ الْقِيَامَةِ فُجَّارًا اِلَّا مَنِ اتَّقٰى وَبَرَّ وَصَدَقَ (ترمذی ــــ رفاعہ)

ಪ್ರವಾದಿ(ಸ) ಹೇಳಿದರು: ವ್ಯಾಪಾರಿಗಳನ್ನು ನಿರ್ಣಾಯಕ ದಿನದಂದು ದುಷ್ಕರಂತೆ ತರಲಾಗುವುದು. ಆದರೆ ತಮ್ಮ ವ್ಯಾಪಾರದಲ್ಲಿ ದೇವಭಯವಿರಿಸುತ್ತಾ ಹಕ್ಕುಗಳನ್ನು ಪೂರ್ತಿಯಾಗಿ ನೀಡಿದ ಮತ್ತು ಸತ್ಯವನ್ನೇ ಹೇಳಿದ ವ್ಯಾಪಾರಿಗಳ ಹೊರತು.

[ತಿರ್ಮಿದಿ- ರಿಫಾಅ]

ಕುಟಿಲೋಪಾಯದಿಂದ ಸಮೃದ್ಧಿ ನಷ್ಟವಾಗುವುದು

(169) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اِيَّاكُمْ وَكَثْرَةَ الْحَلْفِ فِي الْبَيْعِ فَاِنَّهٗ يُنَفِّقُ ثُمَّ يَمْحَقُ (مسلم ــــ ابوقتادہ)

ಪ್ರವಾದಿ(ಸ) ವ್ಯಾಪಾರಿಗಳನ್ನುದ್ದೇಶಿಸಿ ಹೇಳಿದರು- ವ್ಯಾಪಾರದಲ್ಲಿ ಹೆಚ್ಚು ಆಣೆ ಹಾಕುವುದನ್ನು ವರ್ಜಿಸಿರಿ. ಇದು ತಾತ್ಕಾಲಿಕವಾಗಿ ವ್ಯಾಪಾರವನ್ನು ಹೆಚ್ಚಿಸಬಹುದು. ಆದರೆ ಕೊನೆಯಲ್ಲಿ ಬರ್ಕತ್(ಸಮೃದ್ಧಿ) ಹೊರಟು ಹೋಗುವುದು.

[ಮುಸ್ಲಿಮ್, ವರದಿ: ಅಬೂ ಕತಾದ(ರ)]

ಟಿಪ್ಪಣಿ: ಸುಳ್ಳು ಆಣೆಗಳನ್ನು ಹಾಕಿ ಸ್ವಲ್ಪ ಸಮಯದವರೆಗೆ ವ್ಯಾಪಾರವನ್ನು ಚೆನ್ನಾಗಿ ಮಾಡಬಹುದು. ಆದರೆ ಇದು ಕೂಡ ವ್ಯಾಪಾರ ಕುಸಿಯಲು ಕಾರಣವಾಗುವುದು. ಯಾವಾಗಲೂ ಜನರನ್ನು ಮೋಸ ಮಾಡಲು ಸಾಧ್ಯವಿಲ್ಲವಷ್ಟೇ.

---

(170) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ ثَلَاثَةٌ لَا يُكَلِّمُهُمُ اللّٰهُ يَوْمَ الْقِيَامَةِ وَلَا يَنْظُرُ إِلَيْهِمْ وَلَا يُزَكِّيْهِمْ وَلَهُمْ عَذَابٌ أَلِيْمٌ، قَالَ أَبُوْ ذَرٍّ خَابُوْا وَخَسِرُوْا مَنْ هُمْ يَا رَسُوْلَ اللّٰهِ؟ قَالَ الْمُسْبِلُ وَالْمَنَّانُ وَالْمُنَفِّقُ سِلْعَتَهُ بِالْحَلِفِ الْكَاذِبِ

(ترمذی ــــ ابوذر غفاری)

ಪ್ರವಾದಿ(ಸ) ಹೇಳಿದರು: ಮೂವರು ವ್ಯಕ್ತಿಗಳೊಂದಿಗೆ ನಿರ್ಣಾಯಕ ದಿನದಂದು ಅಲ್ಲಾಹನು ಮಾತನಾಡಲಾರನು, ಅವರತ್ತ ನೋಡಲಾರನು ಮತ್ತು ಅವರನ್ನು ಶುದ್ಧಗೊಳಿಸಿ ಸ್ವರ್ಗಕ್ಕೆ ಕಳಿಸಲಾರನು. ಅವರಿಗೆ ಕಠಿಣ ಶಿಕ್ಷೆ ನೀಡುವನು.

ಅಬೂದರ್(ರ) ಕೇಳಿದರು: ಅಲ್ಲಾಹನ ಸಂದೇಶವಾಹಕರೇ! ಈ ನತದೃಷ್ಟ ವ್ಯಕ್ತಿಗಳು ಯಾರಾಗಿರಬಹುದು?

ಪ್ರವಾದಿ(ಸ) ಹೇಳಿದರು: (ದುರಹಂಕಾರದಿಂದಾಗಿ) ಮಣಿಗಂಟಿನ ಕೆಳಗೆ ಲುಂಗಿಯನ್ನು ಇಳಿ ಬಿಡುವವನು, ಉಪಕಾರ ಮಾಡಿದ ನಂತರ ಉಪಕಾರ ಭಾರವಿರಿಸುವವನು ಮತ್ತು ಸುಳ್ಳು ಆಣೆ ಹಾಕುವ ಮೂಲಕ ತನ್ನ ವ್ಯಾಪಾರವನ್ನು ಬೆಳಗಿಸುವವನು.

[ತಿರ್ಮಿದಿ- ವರದಿ: ಅಬೂದರ್ ಗಿಫ್ಫಾರಿ(ರ)]

ವ್ಯಾಪಾರದ ಲೋಪದೋಷಗಳ ಪ್ರಾಯಶ್ಚಿತ್ತ

(171) عَنْ قَيْسِ بْنِ أَبِيْ غَرَزَةَ قَالَ كُنَّا نُسَمّٰى فِيْ عَهْدِ رَسُوْلِ اللّٰهِ صَلَّى اللّٰهُ عَلَيْهِ وَسَلَّمَ السَّمَاسِرَةَ فَمَرَّ بِنَا رَسُوْلُ اللّٰهِ صَلَّى اللّٰهُ عَلَيْهِ وَسَلَّمَ فَسَمَّانَا بِاسْمٍ هُوَ أَحْسَنُ، فَقَالَ يَا مَعْشَرَ التُّجَّارِ إِنَّ الْبَيْعَ يَحْضُرُهُ اللَّغْوُ وَالْحَلِفُ فَشُوْبُوْهُ بِالصَّدَقَةِ (ابوداؤد)

ಕೈಸ್ ಅಬೂಗರ್ಝ(ರ) ಹೇಳುತ್ತಾರೆ- ಪ್ರವಾದಿಯವರ(ಸ) ಕಾಲದಲ್ಲಿ ವ್ಯಾಪಾರಿಗಳಾದ ನಮ್ಮನ್ನು 'ಸಮಾಸಿರ:' ಎಂದು ಕರೆಯಲಾಗುತ್ತಿತ್ತು. ಒಂದು ದಿನ ಪ್ರವಾದಿವರ್ಯರು(ಸ) ನಮ್ಮ ಬಳಿಯಿಂದ ಹಾದು ಹೋಗುವಾಗ ನಮಗೆ ಅದಕ್ಕಿಂತ ಉತ್ತಮ ಹೆಸರನ್ನಿಟ್ಟರು. ಪ್ರವಾದಿ(ಸ) ಹೇಳಿದರು: ವ್ಯಾಪಾರಿಗಳೇ! ಸರಕು ಮಾರಾಟ ಮಾಡುವಾಗ ಅನೇಕ ಸಲ್ಲದ ಮಾತುಗಳನ್ನು ಹೇಳುವ ಮತ್ತು ಸುಳ್ಳು ಆಣೆ ಹಾಕುವ ಸಾಧ್ಯತೆ ಇರುತ್ತದೆ.

ಆದುದರಿಂದ ನಿಮ್ಮ ಲೋಪದೋಷಗಳಿಗೆ ಪ್ರಾಯಶ್ಚಿತ್ತವಾಗಿ ನೀವು ದಾನಧರ್ಮಗಳನ್ನು ಮಾಡಿರಿ. *[ಅಬೂ ದಾವೂದ್]*

ಅಕ್ರಮ ದಾಸ್ತಾನು

(172) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ مَنِ احْتَكَرَ فَهُوَ خَاطِئٌ (المنتقى)

ಪ್ರವಾದಿ(ಸ) ಹೇಳಿದರು: ಅಕ್ರಮ ದಾಸ್ತಾನು ಮಾಡುವ ವ್ಯಾಪಾರಿಯು ಪಾಪಿಯಾಗಿರುತ್ತಾನೆ. *[ಅಲ್ ಮುಂತಕಾ]*

ಟಿಪ್ಪಣಿ: ಮೂಲದಲ್ಲಿ 'ಇಹ್‌ತಿಕಾರ್' ಎಂಬ ಪದವಿದೆ. ಅದರ ಅರ್ಥ ಅಗತ್ಯ ವಸ್ತುಗಳನ್ನು ಮಾರುಕಟ್ಟೆಗೆ ತರದೆ ತಡೆದಿರಿಸುವುದು ಮತ್ತು ಬೆಲೆಯೇರುವುದನ್ನು ಕಾಯುವುದು. ಬೆಲೆಯೇರಿದಾಗ ಸರಕನ್ನು ಮಾರುಕಟ್ಟೆಗೆ ತಂದು ಭಾರೀ ಲಾಭ ಗಳಿಸುವುದು. ಈ ಮನೋವೃತ್ತಿ ವ್ಯಾಪಾರಿಗಳಲ್ಲಿರುತ್ತದೆ. ಆದುದರಿಂದ ಪ್ರವಾದಿ(ಸ) ಈ ಮನೋವೃತ್ತಿಯ ಮೇಲೆ ಪ್ರಹಾರ ಮಾಡಿದರು. ಏಕೆಂದರೆ ಈ ಮನೋವೃತ್ತಿಯು ಜನರನ್ನು ಕಠೋರ ಹೃದಯಿಗಳು ಮತ್ತು ನಿರ್ದಯಿಗಳಾಗಿ ಮಾಡುತ್ತದೆ. ಇಸ್ಲಾಮ್ ಮಾನವರೊಂದಿಗೆ ಪ್ರೀತಿ-ದಯೆಯಿಂದ ವರ್ತಿಸಬೇಕೆಂದು ಬೋಧಿಸುತ್ತದೆ.

ಕೆಲವರು ಹೇಳುವಂತೆ 'ಇಹ್‌ತಿಕಾರ್' ಧಾನ್ಯಗಳಿಗೆ ಮಾತ್ರ ಸೀಮಿತವಲ್ಲ. ಅದು ಎಲ್ಲ ಬಗೆಯ ಅಗತ್ಯದ ವಸ್ತುಗಳಿಗೂ ಅನ್ವಯಿಸುತ್ತದೆ: ಉದಾ: ಎಣ್ಣೆ, ತುಪ್ಪ, ವನಸ್ಪತಿ, ಸಕ್ಕರೆ ಇತ್ಯಾದಿ ಯಾವುದನ್ನು ಅಕ್ರಮ ದಾಸ್ತಾನು ಮಾಡಿದರೂ ವ್ಯಾಪಾರಿ ಪಾಪಿಯಾಗುವನು. ಇದೊಂದು ಧೂರ್ತ ಕೃತ್ಯವಾಗಿದೆ. ಮುಂದಿನ ಹದೀಸ್‌ನಲ್ಲಿ ಈ ವಿಷಯ ಬರಲಿದೆ.

(173) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اَلْجَالِبُ مَرْزُوْقٌ وَالْمُحْتَكِرُ مَلْعُوْنٌ

(ابن ماجه ـــ عمرؓ)

ಪ್ರವಾದಿ(ಸ) ಹೇಳಿದರು: ಅಗತ್ಯ ವಸ್ತುಗಳನ್ನು ತಡೆದಿರಿಸದೆ ಸೂಕ್ತ ಸಮಯದಲ್ಲಿ ಮಾರುಕಟ್ಟೆಗೆ ತರುವ ವ್ಯಾಪಾರಿ ಅಲ್ಲಾಹನ ಅನುಗ್ರಹಕ್ಕೆ ಪಾತ್ರನಾಗುತ್ತಾನೆ. ಅಲ್ಲಾಹನು ಅವನಿಗೆ ಜೀವನಾಧಾರವನ್ನು ನೀಡುವನು. ಆದರೆ ಅಗತ್ಯ ವಸ್ತುಗಳನ್ನು ತಡೆದಿರಿಸುವವನು ಶಾಪಕ್ಕೆ ಅರ್ಹನಾಗುತ್ತಾನೆ. (ಅವನು ಅಲ್ಲಾಹನ ಅನುಗ್ರಹದಿಂದ ವಂಚಿತನಾಗುವನು. ಯಾಕೆಂದರೆ ಅವನು ಶಾಪಕ್ಕೆ ಅರ್ಹವಾಗುವ ಕಾರ್ಯ ಮಾಡಿರುತ್ತಾನೆ.)

[ಇಬ್ನು ಮಾಜಃ, ವರದಿ: ಉಮರ್(ರ)]

ಅಕ್ರಮ ದಾಸ್ತಾನುಗಾರನ ದುಃಸ್ವಭಾವ

(174) عَنْ مُعَاذٍ قَالَ سَمِعْتُ رَسُوْلَ اللهِ صَلَّى اللهُ عَلَيْهِ وَسَلَّمَ يَقُوْلُ بِئْسَ الْعَبْدُ الْمُحْتَكِرُ، إِنْ أَرْخَصَ اللهُ الْأَسْعَارَ حَزِنَ، وَإِنْ أَغْلَاهَا فَرِحَ (مشكوٰة)

ಮುಆದ್ ಬಿನ್ ಜಬಲ್(ರ) ಹೇಳುತ್ತಾರೆ- ಪ್ರವಾದಿ(ಸ) ಹೀಗೆ ಹೇಳುವುದಾಗಿ ನಾನು ಕೇಳಿದ್ದೇನೆ: ಅಗತ್ಯ ವಸ್ತುಗಳನ್ನು ತಡೆದಿರಿಸುವವನು ಮಹಾ ದುಷ್ಟ! ವಸ್ತುಗಳ ಬೆಲೆ ಇಳಿಮುಖ ವಾಗುವಾಗ ಅವನಿಗೆ ದುಃಖವಾಗುತ್ತದೆ ಮತ್ತು ಬೆಲೆಯೇರುವಾಗ ಅವನು ಸಂತೋಷಪಡುತ್ತಾನೆ.

[ಮಿಷ್ಕಾತ್]

ಸರಕಿನ ದೋಷವನ್ನು ವ್ಯಕ್ತಪಡಿಸಬೇಕು

(175) قَالَ رَسُوْلُ اللهِ صَلَّى اللهُ عَلَيْهِ وَسَلَّمَ لَا يَحِلُّ لِأَحَدٍ أَنْ يَّبِيْعَ شَيْئًا إِلَّا بَيَّنَ مَا فِيْهِ، وَلَا يَحِلُّ لِأَحَدٍ يَعْلَمُ ذٰلِكَ إِلَّا بَيَّنَهُ (المنتقیٰ – واثلہ)

ಪ್ರವಾದಿ(ಸ) ಹೇಳಿದರು: ಯಾವುದೇ ವಸ್ತುವನ್ನು ಮಾರುವಾಗ ಅದರಲ್ಲಿರುವ ದೋಷಗಳನ್ನು ತಿಳಿಸದೆ ಮಾರಾಟ ಮಾಡುವುದು ಓರ್ವ ವ್ಯಾಪಾರಿಗೆ ಧರ್ಮಸಮ್ಮತವಲ್ಲ. ಆ ದೋಷವನ್ನು ತಿಳಿದಿರುವವನು ಅದನ್ನು ಗಿರಾಕಿಗೆ ತಿಳಿಸದಿರುವುದು ಧರ್ಮಸಮ್ಮತವಲ್ಲ.

[ಅಲ್ ಮುಂತಕಾ- ವರದಿ: ವಾಸಿಲ(ರ)]

ಟಿಪ್ಪಣಿ: ತನ್ನ ವಸ್ತುವಿನಲ್ಲಿರುವ ದೋಷವನ್ನು ಗಿರಾಕಿಗೆ ತಿಳಿಸದೆ ಬಚ್ಚಿಡುವುದು ವ್ಯಾಪಾರಿಗೆ ಧರ್ಮಸಮ್ಮತವಲ್ಲ. ಅದೇ ರೀತಿ ಒಬ್ಬನು ಸರಕನ್ನು ಕೊಳ್ಳುವಾಗ, ಅದರಲ್ಲಿರುವ ದೋಷವನ್ನು ತಿಳಿದಿರುವ ಯಾರಾದರೂ ಅವನ ಹತ್ತಿರವಿದ್ದರೆ, ಅದನ್ನು ಗ್ರಾಹಕನಿಗೆ ತಿಳಿಸಬೇಕಾದುದು ಅಗತ್ಯ. ತಾತ್ಪರ್ಯವೇನೆಂದರೆ ಗಿರಾಕಿಯನ್ನು ವಂಚಿಸುವುದು ಮುಸ್ಲಿಮ್ ವ್ಯಾಪಾರಿಗೆ ಧರ್ಮಸಮ್ಮತವಲ್ಲ.

ಪ್ರವಾದಿ(ಸ) ಓರ್ವ ವ್ಯಾಪಾರಿಯ ಬಳಿಯಿದ್ದ ಧಾನ್ಯದ ರಾಶಿಯೊಳಗೆ ಕೈ ಹಾಕಿದಾಗ ಒಳಗಿನ ಧಾನ್ಯ ಒದ್ದೆಯಾಗಿರುವುದನ್ನು ಕಂಡು ಇದೇನೆಂದು ವಿಚಾರಿಸಿದರು. ಆಗ ಅವನು ಅದು ಮಳೆಯಿಂದಾಗಿ ಒದ್ದೆಯಾಗಿತ್ತೆಂದು ಹೇಳಿದನು. ಪ್ರವಾದಿ(ಸ) ಅವನೊಂದಿಗೆ ಅದನ್ನು ಮೇಲೆ ಯಾಕೆ ಹಾಕಲಿಲ್ಲವೆಂದು ಕೇಳಿದರು. ತರುವಾಯ 'ನಮ್ಮನ್ನು ವಂಚಿಸುವವನು ನಮ್ಮವನಲ್ಲ' ಎಂದರು. *[ಮಿಷ್ಕಾತ್]*

ವ್ಯಾಪಾರದಲ್ಲಿ ಮೃದು ನೀತಿ

(176) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ رَحِمَ اللّٰهُ رَجُلًا سَمْحًا إِذَا
بَاعَ وَإِذَا اشْتَرٰى وَإِذَا اقْتَضٰى (بخاری — جابرؓ)

ಪ್ರವಾದಿ(ಸ) ಹೇಳಿದರು: ಕ್ರಯವಿಕ್ರಯದ ವೇಳೆ ಮತ್ತು ಸಾಲ ವಸೂಲಿ ಮಾಡುವ ವಿಷಯದಲ್ಲಿ ಮೃದುನೀತಿ ಮತ್ತು ಸದ್ವರ್ತನೆ ಕೈಗೊಂಡರೆ, ಅಂತಹ ವ್ಯಕ್ತಿಯೊಂದಿಗೆ ಅಲ್ಲಾಹನೂ ಕರುಣೆಯಿಂದ ವರ್ತಿಸುವನು. *[ಬುಖಾರಿ. ವರದಿ: ಜಾಬಿರ್(ರ)]*

ಕಬಳಿಸುವುದು

(177) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ مَنْ اَخَذَ شِبْرًا مِنَ الْاَرْضِ ظُلْمًا
فَاِنَّهٗ يُطَوَّقُهٗ يَوْمَ الْقِيَامَةِ مِنْ سَبْعِ اَرَضِيْنَ (بخاری ومسلم — سعید بن زید)

ಪ್ರವಾದಿ(ಸ) ಹೇಳಿದರು: ಒಬ್ಬನು ಯಾರದಾದರೂ ಗೇಣಗಲದಷ್ಟು ಭೂಮಿಯನ್ನು ಅಕ್ರಮವಾಗಿ ಕಬಳಿಸಿಕೊಂಡರೆ, ಕಿಯಾಮತ್‌ನಂದು ಏಳು ಭೂಮಿಗಳ ಉರುಳನ್ನು ಅವನ ಕೊರಳಿಗೆ ಹಾಕಲಾಗುವುದು. *[ಬುಖಾರಿ, ಮುಸ್ಲಿಮ್, ವರದಿ: ಸಈದ್ ಬಿನ್ ಝೈದ್]*

ಟಿಪ್ಪಣಿ: ಇನ್ನೊಂದು ಹದೀಸ್‌ನಲ್ಲಿ ವರದಿಯಾಗಿರುವ ಪ್ರಕಾರ, ಯಾರ ಮೇಲಾದರೂ ಅಕ್ರಮವೆಸಗುವುದು ಧರ್ಮಸಮ್ಮತವಲ್ಲ. ಸೊತ್ತಿನ ಮಾಲಕನು ಸಂತೋಷದಿಂದ ನೀಡಿದುದರ ಹೊರತು, ಯಾರದಾದರೂ ಸೊತ್ತನ್ನು ವಶಪಡಿಸಿಕೊಳ್ಳುವುದೂ ಧರ್ಮಸಮ್ಮತವಲ್ಲ.

---

(178) عَنْ اَبِيْ هُرَيْرَةَ قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ
يَأْتِيْ عَلَى النَّاسِ زَمَانٌ لَا يُبَالِي الْمَرْءُ مَا اَخَذَ مِنْهُ أَمِنَ الْحَلَالِ اَمْ مِنَ الْحَرَامِ
(بخاری)

ಅಬೂ ಹುರೈರಾ(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು: ಜನರ ಮೇಲೆ ಒಂದು ಕಾಲ ಬರಲಿದೆ. ಆಗ ತಾವು ಸಂಪಾದಿಸಿದ ಸೊತ್ತು ಧರ್ಮಸಮ್ಮತವೋ ಧರ್ಮಬಾಹಿರವೋ ಎಂಬ ಚಿಂತೆಯೇ ಅವರಿಗೆ ಇರಲಾರದು. *[ಬುಖಾರಿ]*

❖ ❖ ❖

ಅಲ್ಲಾಹನ ಕ್ರೋಧಕ್ಕೆ ಪಾತ್ರರಾದವರು

ಹೆಚ್ಚಿನ ನೀರನ್ನು ತಡೆದಿರಿಸುವುದು

(179) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ ثَلَاثَةٌ لَا يُكَلِّمُهُمُ اللّٰهُ يَوْمَ
الْقِيَامَةِ وَلَا يَنْظُرُ إِلَيْهِمْ، رَجُلٌ حَلَفَ عَلٰى سِلْعَةٍ لَقَدْ أُعْطِيَ بِهَا أَكْثَرَ مِمَّا أُعْطِيَ وَهُوَ كَاذِبٌ،
وَرَجُلٌ حَلَفَ عَلٰى يَمِيْنٍ كَاذِبَةٍ بَعْدَ الْعَصْرِ لِيَقْتَطِعَ بِهَا مَالَ رَجُلٍ مُسْلِمٍ، وَرَجُلٌ
مَنَعَ فَضْلَ مَاءٍ فَيَقُوْلُ اللّٰهُ الْيَوْمَ أَمْنَعُكَ فَضْلِي كَمَا مَنَعْتَ فَضْلَ مَا لَمْ تَعْمَلْ
يَدَاكَ (بخاری ومسلم)

ಪ್ರವಾದಿ(ಸ) ಹೇಳಿದರು: ಮೂರು ವಿಧದ ವ್ಯಕ್ತಿಗಳೊಂದಿಗೆ ಅಲ್ಲಾಹನು ನಿರ್ಣಾಯಕ ದಿನದಂದು ಮಾತನಾಡಲಾರನು, ಅವರೆಡೆಗೆ ಕಣ್ಣೆತ್ತಿಯೂ ನೋಡಲಾರನು. ಮೊದಲನೆಯ ವಿಧದ ಜನರು ತಮ್ಮ ಸರಕು ಮಾರಾಟ ಮಾಡುವಾಗ ಸುಳ್ಳು ಆಣೆ ಹಾಕಿ, ಅದರಿಂದ ಹೆಚ್ಚು ಬೆಲೆ ಪಡಕೊಂಡವರು. ಎರಡನೆಯ ವಿಧದ ಜನರು ಅಸರ್ ನಮಾಝ್‌ನ ಬಳಿಕ (ಕಾಬಾ ಭವನದಲ್ಲಿ) ಸುಳ್ಳು ಪ್ರಮಾಣ ಮಾಡಿ, ಅದರ ಮೂಲಕ ಒಬ್ಬ ಮುಸ್ಲಿಮನ ಸೊತ್ತನ್ನು ಕಬಳಿಸಿದವರು. ಮೂರನೆಯ ವಿಧದ ಜನರು ಹೆಚ್ಚಿನ ನೀರನ್ನು ಇತರರು ಪ್ರಯೋಜನ ಪಡೆಯಬಾರದೆಂದು ತಡೆದಿರಿಸಿದವರು. ನಿರ್ಣಾಯಕ ದಿನದಂದು ಅಲ್ಲಾಹನು ಈ ಮಂದಿಯೊಂದಿಗೆ ಹೀಗೆನ್ನುವನು- ಇಂದು ನನ್ನ ಅನುಗ್ರಹಗಳು ನಿಮಗೆ ದೊರೆಯಲಾರವು. ಏಕೆಂದರೆ ನೀವು ಹೆಚ್ಚಿನ ನೀರನ್ನು ನನ್ನ ದಾಸರಿಗೆ ಸಿಗದಂತೆ ಮಾಡಿದಿರಿ. ವಸ್ತುತಃ ಆ ನೀರನ್ನು ಸೃಷ್ಟಿಸಿದವರು ನೀವಾಗಿರಲಿಲ್ಲ. *[ಬುಖಾರಿ, ಮುಸ್ಲಿಮ್]*

ಟಿಪ್ಪಣಿ: ಸುಳ್ಳು ಆಣೆ ಹಾಕುವುದು ಯಾವಾಗಲೂ ಕೆಟ್ಟ ಚಾಳಿ. ಅದು ಎಲ್ಲಿಯಾದರೂ ಸರಿ. ಆದರೆ ಮಸೀದಿಯಲ್ಲಂತೂ ಅದು ಇನ್ನಷ್ಟು ಕೆಟ್ಟದಾಗಿದೆ. ವಿಶೇಷವಾಗಿ ಅಸರ್ ನಮಾಝ್‌ನ ನಂತರ ಮಸೀದಿಯಲ್ಲಿ ಸುಳ್ಳು ಹೇಳುವುದು ಮತ್ತಷ್ಟು ಕೆಟ್ಟದಾಗಿದೆ. ಯಾಕೆಂದರೆ ಅಸರ್ ನಮಾಝ್‌ನಲ್ಲಿ ದೇವಚರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ. ಅವರಲ್ಲಿ ಹಗಲಿನ ತಮ್ಮ ಕರ್ತವ್ಯವನ್ನು ಮಾಡುತ್ತಿರುವವರೂ ಇರುತ್ತಾರೆ. ರಾತ್ರಿ ಪಾಳಿಯವರೂ ಇರುತ್ತಾರೆ. ಎರಡೂ ವಿಧದ ದೇವಚರರು ಅಸರ್‌ನ ಸಾಮೂಹಿಕ ನಮಾಝ್‌ನಲ್ಲಿ ಭಾಗವಹಿಸುತ್ತಾರೆ. ಆದರಿಂದ ಅವರೆಲ್ಲರ ಮುಂದೆ ಸುಳ್ಳು ಆಣೆ ಹಾಕಿದಂತಾಗುತ್ತದೆ. ಅವರೆಲ್ಲರೂ ಒಬ್ಬ ಮುಸ್ಲಿಮನ ಸೊತ್ತು ಕಬಳಿಸಲಿಕ್ಕಾಗಿ ತಮ್ಮ ಮುಂದೆ ಸುಳ್ಳು ಆಣೆ ಹಾಕಲಾಗಿದೆ ಎಂದು ಸಾಕ್ಷಿ ಹೇಳುವರು.

ಕಾರ್ಮಿಕನ ಮಜೂರಿ

(180) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اَعْطُوا الْاَجِيْرَ اَجْرَهٗ قَبْلَ اَنْ يَّجِفَّ عَرَقُهٗ (ابن ماجه ــــ ابن عمرؓ)

ಪ್ರವಾದಿ(ಸ) ಹೇಳಿದರು- ಕಾರ್ಮಿಕನ ಬೆವರು ಆರುವುದಕ್ಕೆ ಮುಂಚೆ ಅವನ ಮಜೂರಿ ಕೊಟ್ಟು ಬಿಡಿರಿ. *[ಇಬ್ನು ಮಾಜಃ ವರದಿ: ಇಬ್ನು ಉಮರ್(ರ)]*

ಟಿಪ್ಪಣಿ: ತನ್ನ ಮತ್ತು ತನ್ನ ಮಡದಿ ಮಕ್ಕಳ ಹೊಟ್ಟೆ ಹೊರೆಯಲಿಕ್ಕಾಗಿ ದಿನವಿಡೀ ದುಡಿಯುವವನೇ ಕಾರ್ಮಿಕ. ಅವನಿಗೆ ಸಲ್ಲಬೇಕಾದ ಒಂದು ದಿನದ ಮಜೂರಿಯನ್ನು ಮುಂದೂಡಿದರೆ ಅವನು ಮತ್ತು ಅವನ ಮಡದಿ ಮಕ್ಕಳು ಉಪವಾಸ ಬೀಳುವ ಸಾಧ್ಯತೆಯಿದೆ.

ಕಾರ್ಮಿಕನ ಪರವಾಗಿ ಅಲ್ಲಾಹನು ವಾದಿಸುವನು

(181) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ قَالَ اللّٰهُ تَعَالٰى ثَلٰثَةٌ اَنَا خَصْمُهُمْ يَوْمَ الْقِيَامَةِ، رَجُلٌ اَعْطٰى بِيْ ثُمَّ غَدَرَ، وَرَجُلٌ بَاعَ حُرًّا فَاَكَلَ ثَمَنَهٗ، وَرَجُلٌ اِسْتَاْجَرَ اَجِيْرًا فَاسْتَوْفٰى مِنْهُ وَلَمْ يُعْطِهٖ اَجْرَهٗ (بخاری ــــ ابوہریرہؓ)

ಪ್ರವಾದಿ(ಸ) ಹೇಳಿದರು: ಮೂರು ವಿಧದ ಜನರ ವಿರುದ್ಧ ತಾನು ನಿರ್ಣಾಯಕ ದಿನದಂದು ಮೊಕದ್ದಮೆ ಹೂಡುವೆನೆಂದು ಅಲ್ಲಾಹನು ಹೇಳುತ್ತಾನೆ- ಒಂದು, ನನ್ನ ಹೆಸರಲ್ಲಿ ಯಾರಾದರೂ ಒಂದು ಒಪ್ಪಂದ ಮಾಡಿ ಅದನ್ನು ಯಾವುದೇ ಸೂಕ್ತ ಕಾರಣವಿಲ್ಲದೆ ಮುರಿಯುವವರು. ಇನ್ನೊಂದು, ಒಬ್ಬ ಸ್ವತಂತ್ರ ಸಜ್ಜನ ವ್ಯಕ್ತಿಯನ್ನು ಅಪಹರಿಸಿ ಅವನನ್ನು ಗುಲಾಮನಾಗಿ ಮಾಡಿ ಮಾರುವವರು. ಮತ್ತೊಂದು, ಕಾರ್ಮಿಕರನ್ನು ನೇಮಿಸಿ ಅವರಿಂದ ಪೂರ್ಣ ಸೇವೆ ಪಡೆದು ಮಜೂರಿ ನೀಡದವರು. *[ಬುಖಾರಿ - ಅಬೂ ಹುರೈರಾ(ರ)]*

❖ ❖ ❖

ಅನ್ಯಾಯದ ವಸಿಯ್ಯತ್

ಅನ್ಯಾಯದ ವಸಿಯ್ಯತ್‌ನ ದುಷ್ಪರಿಣಾಮ

(182) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ إِنَّ الرَّجُلَ لَيَعْمَلُ وَالْمَرْأَةُ بِطَاعَةِ اللّٰهِ سِتِّيْنَ سَنَةً ثُمَّ يَحْضُرُهُمَا الْمَوْتُ فَيُضَارَّانِ فِي الْوَصِيَّةِ فَتَجِبُ لَهُمَا النَّارُ ثُمَّ قَرَءَ اَبُوْهُرَيْرَةَ مِنْ بَعْدِ وَصِيَّةٍ يُّوْصٰى بِهَا اَوْ دَيْنٍ غَيْرَ مُضَارٍّ اِلٰى قَوْلِهٖ تَعَالٰى وَذٰلِكَ الْفَوْزُ الْعَظِيْمُ (مسند احمد — ابوہریرہ رض)

ಪ್ರವಾದಿ(ಸ) ಹೇಳಿದರು- ಒಬ್ಬ ಪುರುಷ ಮತ್ತು ಒಬ್ಬಳು ಸ್ತ್ರೀ ಅರ್ವತ್ತು ವರ್ಷಗಳ ಕಾಲ ಅಲ್ಲಾಹನ ಅನುಸರಣೆಯಲ್ಲಿ ಜೀವಿಸುತ್ತಾರೆ. ಆದರೆ ಅವರ ಮರಣ ಆಸನ್ನವಾಗುವಾಗ ಅವರ ಸೊತ್ತಿನ ಬಗ್ಗೆ ವಸಿಯ್ಯತ್ (ಉಯಿಲು) ಮಾಡಿ ಅದರ ನೈಜ ವಾರೀಸುದಾರರನ್ನು ಅದರಿಂದ ವಂಚಿತಗೊಳಿಸುತ್ತಾರೆ. ಈ ರೀತಿ ಅವರು ನರಕ ಯಾತನೆಗೆ ಗುರಿಯಾಗುತ್ತಾರೆ.

ಈ ಹದೀಸ್‌ನ ಉಲ್ಲೇಖಕಾರ ಹ.ಅಬೂ ಹುರೈರಾರು(ರ) ಈ ಹದೀಸ್‌ನ ವಿಷಯವನ್ನು ಸಮರ್ಥಿಸುವ ಸೂರಃ ಅನ್ನಿಸಾದ ವಾರೀಸು ಹಕ್ಕು ವಿತರಣೆಗೆ ಸಂಬಂಧಿಸಿದ ಆಯತ್‌ನ ಕೊನೆಯ ಭಾಗವನ್ನು ಪಠಿಸಿದರು- 'ಮಿನ್ ಬಅ್‌ದಿ ವಸಿಯ್ಯತಿನ್ ಯೂಸಾ ಬಿಹಾ'ದಿಂದ 'ದಾಲಿಕಲ್ ಫೌಝುಲ್ ಅಝೀಮ್' ತನಕ.

[ಮುಸ್ನದ್ ಅಹ್ಮದ್- ವರದಿ: ಹ. ಅಬೂ ಹುರೈರಾ(ರ)]

ಟಿಪ್ಪಣಿ: ಒಬ್ಬ ಒಳ್ಳೆಯ ವ್ಯಕ್ತಿ ಕೂಡಾ ತನ್ನ ಅಪ್ತರೊಂದಿಗೂ ಸಂಬಂಧಿಕರೊಂದಿಗೂ ಕೋಪಗೊಂಡು, ತನ್ನ ವಾರೀಸುದಾರರು ವಂಚಿತರಾಗುವ ರೀತಿಯಲ್ಲಿ ವಸಿಯ್ಯತ್ ಮಾಡುತ್ತಾನೆ. ವಸ್ತುತಃ ಅಲ್ಲಾಹನ ಗ್ರಂಥ ಮತ್ತು ಪ್ರವಾದಿವರ್ಯರ(ಸ) ವಿವರಣೆಗಳ ಪ್ರಕಾರ ಅವರಿಗೆ ಪಾಲು ದೊರೆಯಬೇಕಾಗಿತ್ತು. ಅಂತಹ ಪುರುಷ ಮತ್ತು ಸ್ತ್ರೀಯ ಬಗ್ಗೆ ಪ್ರವಾದಿ(ಸ) ಹೇಳಿರುವುದೇನೆಂದರೆ ಅರವತ್ತು ವರ್ಷಗಳ ಕಾಲ ಅಲ್ಲಾಹನ ಆರಾಧನೆ ಮತ್ತು ಅನುಸರಣೆ ಮಾಡಿಯೂ ಕೊನೆಗೆ ಇಂತಹ ತಪ್ಪು ವಸಿಯ್ಯತ್ ಮಾಡಿ ತಮ್ಮನ್ನು ತಾವೇ ನರಕ ಶಿಕ್ಷೆಗೆ ಗುರಿಪಡಿಸುತ್ತಾರೆ.

ಹ. ಅಬೂ ಹುರೈರಾ(ರ) ಓದಿದ ಸೂರಃ ಅನ್ನಿಸಾದ ಆಯತ್‌ನ ಭಾಗದ ತಾತ್ಪರ್ಯವೇನೆಂದರೆ, ಎಚ್ಚರಿಕೆ! ವಾರೀಸುದಾರರಿಗೆ ನಷ್ಟವುಂಟು ಮಾಡುವಂತಹ ಕೆಲಸ ಮಾಡಬಾರದು. ಅಲ್ಲಾಹನು ಮಾಡಿರುವ ವಾರೀಸು ಸೊತ್ತು ವಿತರಣೆಯ ಕಾನೂನು, ಜ್ಞಾನ ಮತ್ತು ಯುಕ್ತಿಯ ಆಧಾರದಲ್ಲಿದೆ. ಅದರಲ್ಲಿ ಅನ್ಯಾಯ ಮತ್ತು ಭಾವ- ವಿಕಾರಗಳಿಗೆ ಸ್ವಲ್ಪವೂ ಆಸ್ಪದವಿಲ್ಲ. ಅನಂತರ ಅವರು ಹೇಳುತ್ತಾರೆ: ಯಾರು ಅಲ್ಲಾಹನ ಮತ್ತು ರಸೂಲರ ಆಜ್ಞೋಲ್ಲಂಘನೆ ಮಾಡುವ ಮೂಲಕ ದೈವಿಕ ಕಾನೂನುಗಳನ್ನು ಮುರಿಯುವರೋ ಅವರನ್ನು ಅಲ್ಲಾಹನು ನರಕಕ್ಕೆ ಹಾಕುವನು. ಅಲ್ಲಿ ಅವರು ಕಠಿಣ ಶಿಕ್ಷೆ ಅನುಭವಿಸುವರು.

ವಾರೀಸು ಹಕ್ಕಿನ ವಂಚನೆಯ ದುಷ್ಪರಿಣಾಮ

(183) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ مَنْ قَطَعَ مِيْرَاثَ وَارِثِهٖ قَطَعَ اللّٰهُ مِيْرَاثَهٗ مِنَ الْجَنَّةِ يَوْمَ الْقِيَامَةِ (ابن ماجه — انس رضي)

ಪ್ರವಾದಿ(ಸ) ಹೇಳಿದರು: ಯಾರು ತನ್ನ ವಾರೀಸುದಾರರನ್ನು ಅವರ ವಾರೀಸು ಹಕ್ಕಿನಿಂದ ವಂಚಿತಗೊಳಿಸುವನೋ ಅವನನ್ನು ಅಲ್ಲಾಹನು ನಿರ್ಣಾಯಕ ದಿನದಂದು ಸ್ವರ್ಗದ ವಾರೀಸಿನಿಂದ ವಂಚಿತಗೊಳಿಸುವನು. *[ಇಬ್ನುಮಾಜ಼, ವರದಿ: ಹ. ಅನಸ್(ರ)]*

ಲೌಕಿಕ ದುಷ್ಪರಿಣಾಮ

(184) عَنْ سَالِمٍ عَنْ اَبِيْهِ اَنَّ غَيْلَانَ بْنَ سَلَمَةَ الثَّقَفِيَّ اَسْلَمَ وَتَحْتَهٗ عَشْرُ نِسْوَةٍ فَقَالَ النَّبِيُّ صَلَّى اللّٰهُ عَلَيْهِ وَسَلَّمَ اِخْتَرْ مِنْهُنَّ اَرْبَعَةً فَلَمَّا كَانَ فِيْ عَهْدِ عُمَرَ طَلَّقَ نِسَاءَهٗ وَقَسَمَ بَيْنَ اِخْوَةِ اَبِيْهِ، فَبَلَغَ ذٰلِكَ عُمَرَ فَقَالَ اِنِّيْ لَاَظُنُّ الشَّيْطَانَ فِيْمَا يَسْتَرِقُ مِنَ السَّمْعِ سَمِعَ بِمَوْتِكَ فَقَذَفَهٗ فِيْ نَفْسِكَ وَلَعَلَّكَ اَنْ لَا تَمْكُثَ اِلَّا قَلِيْلًا، وَاَيْمُ اللّٰهِ لَتُرَاجِعَنَّ نِسَاءَكَ وَلَتَرْجِعَنَّ فِيْ مَالِكَ، وَاِلَّا لَاُوَرِّثُهُنَّ مِنْكَ وَلَاٰمُرَنَّ بِقَبْرِكَ كَمَا رُجِمَ قَبْرُ اَبِيْ رِغَالٍ (مسند احمد — سالم بن عبد الله)

ಸಾಲಿಮ್(ರ) ತನ್ನ ತಂದೆಯಿಂದ ಹೀಗೆ ವರದಿ ಮಾಡುತ್ತಾರೆ- ಸಕೀಫ್ ಗೋತ್ರದ ಗೈಲಾನ್ ಬಿನ್ ಸಲಮ ಅವರು ಇಸ್ಲಾಮ್ ಸ್ವೀಕಾರ ಮಾಡಿದಾಗ ಅವರಿಗೆ ಹತ್ತು ಮಂದಿ ಪತ್ನಿಯರಿದ್ದರು. ಪ್ರವಾದಿಯವರು(ಸ) ಆ ಪೈಕಿ ನಾಲ್ವರನ್ನು ಇರಿಸಿ ಉಳಿದವರನ್ನು ವಿಚ್ಛೇದಿಸಿ ಬಿಡುವಂತೆ ಆಜ್ಞಾಪಿಸಿದರು. (ಆ ಬಳಿಕ ನಡೆದ ಘಟನೆಯೇನೆಂದರೆ)

ಗೈಲಾನ್‌ರು ಹ. ಉಮರ್‌ರ(ರ) ಖಿಲಾಫತ್ ಕಾಲದಲ್ಲಿ ತಮ್ಮ ನಾಲ್ವರು ಪತ್ನಿಯರಿಗೂ ತಲಾಕ್ ನೀಡಿ ತಮ್ಮ ಸೊತ್ತನ್ನೆಲ್ಲ ತಮ್ಮ ಸಹೋದರರಲ್ಲಿ ಹಂಚಿ ಬಿಟ್ಟರು. ಈ ವಿಷಯ ಹ. ಉಮರ್‌ರಿಗೆ(ರ) ತಿಳಿದಾಗ ಅವರು ಗೈಲಾನ್‌ರನ್ನು ಕರೆದು ಹೀಗೆಂದರು- ಪಿಶಾಚಿಯು

ಮೇಲೆ ಹೋಗಿ ನಿಮ್ಮ ಮರಣದ ಸುದ್ದಿಯನ್ನು ಆಲಿಸಿದಂತಿದೆ. ಅವನು ಮರಳಿ ಬಂದು ನೀವು ಇನ್ನು ಕೆಲವೇ ದಿನ ಬದುಕಲಿದ್ದೀರಿ ಎಂದು ನಿಮ್ಮೊಡನೆ ಹೇಳಿರುವನೆಂದು ಭಾಸವಾಗುತ್ತದೆ. (ಆದುದರಿಂದಲೇ ನೀವು ನಿಮ್ಮ ಪತ್ನಿಯರನ್ನು ವಾರೀಸು ಹಕ್ಕಿನಿಂದ ವಂಚಿತಗೊಳಿಸಲಿಕ್ಕಾಗಿ ಅವರಿಗೆ ತಲಾಕ್ ನೀಡಿದಿರಿ ಮತ್ತು ನಿಮ್ಮ ಸ್ವತ್ತನ್ನು ನಿಮ್ಮ ಸಹೋದರರಲ್ಲಿ ಹಂಚಿದಿರಿ) ನಾನು ಅಲ್ಲಾಹನ ಆಣೆ ಹಾಕಿ ಹೇಳುತ್ತೇನೆ, ನೀವು ನಿಮ್ಮ ಪತ್ನಿಯರನ್ನು ಮರಳಿ ಪಡೆಯಬೇಕು ಮತ್ತು ನಿಮ್ಮ ಸಹೋದರರಲ್ಲಿ ಹಂಚಲ್ಪಟ್ಟ ಸೊತ್ತನ್ನೂ ಮರಳಿ ಪಡೆಯಬೇಕು- ಅನ್ಯಥಾ (ಇಸ್ಲಾಮೀ ಸಾಮ್ರಾಜ್ಯದ ಆಡಳಿತಗಾರನೆಂಬ ನೆಲೆಯಲ್ಲಿ ನಾನು) ನಿಮ್ಮ ಪತ್ನಿಯರನ್ನು ನಿಮ್ಮ ವಾರೀಸುದಾರರಾಗಿ ಮಾಡುವೆನು ಮತ್ತು ಅಬೂರಿಗಾಲ್‌ರ ಸಮಾಧಿಗೆ ಕಲ್ಲೆಸೆದ ಹಾಗೆ ನಿಮ್ಮ ಸಮಾಧಿಗೂ ಕಲ್ಲೆಸೆಯುವಂತೆ ಜನರಿಗೆ ಅಪ್ಪಣೆ ಕೊಡುವೆನು. *[ಮುಸ್ನದ್ ಅಹ್ಮದ್]*

ಟಿಪ್ಪಣಿ: ಶಪಿಸಲ್ಪಟ್ಟವರಿಗೆ ಕಲ್ಲೆಸೆಯುವ ಶಿಕ್ಷೆ ನೀಡಲಾಗುತ್ತದೆ. ವಾರೀಸುದಾರರನ್ನು ಅವರ ಹಕ್ಕಿನಿಂದ ವಂಚಿತಗೊಳಿಸುವುದೂ ಒಂದು ಶಾಪಕ್ಕೆ ಅರ್ಹವಾದ ಕ್ರಿಯೆಯೆಂದು ಈ ಹದೀಸ್ ವ್ಯಕ್ತಪಡಿಸುತ್ತದೆ.

ಅಬೂರಿಗಾಲ್ ಎಂದರೆ ಅಜ್ಞಾನ ಕಾಲದ ಓರ್ವ ಅರಬನಾಗಿದ್ದನು. ಅವನು ಅಬ್ರಹನೊಂದಿಗೆ ಒಳಸಂಚು ನಡೆಸಿ ಕಅಬಾ ಭವನವನ್ನು ಕೆಡಹುವ ಉದ್ದೇಶದಿಂದ ಮುನ್ನುಗ್ಗುತ್ತಿದ್ದ ಸೇನೆಗೆ ದಾರಿತೋರಿಸಿದ್ದನು. ಆದುದರಿಂದ ಈ ಶಪಿತ ವ್ಯಕ್ತಿಯ ಸಮಾಧಿಗೆ ಜನರು ಕಲ್ಲೆಸೆಯುತ್ತಿದ್ದರು.

ವಾರೀಸುದಾರರಿಗೆ ವಸಿಯ್ಯತ್ ಮಾಡಬಾರದು

(185) قَالَ رَسُوْلُ اللهِ صَلَّى اللهُ عَلَيْهِ وَسَلَّمَ لَا تَجُوْزُ وَصِيَّةٌ لِوَارِثٍ إِلَّا أَنْ يَشَاءَ الْوَرَثَةُ (مشكوٰة)

ಪ್ರವಾದಿ(ಸ) ಹೇಳಿದರು: ಮರಣ ಹೊಂದುವವನ 'ವಸಿಯ್ಯತ್' ಅವನ ವಾರೀಸುದಾರರಿಗೆ ಅನ್ವಯವಾಗದು. ಆದರೆ ವಾರೀಸುದಾರರು ಒಪ್ಪಿದರೆ ಹಾಗೆ ಮಾಡಬಹುದು.

[ಮಿಷ್ಕಾತ್]

ವಸಿಯ್ಯತ್‌ನ ಕೊನೆಯ ಗಡಿ

(186) عَنْ سَعْدِ بْنِ اَبِيْ وَقَّاصٍ قَالَ عَادَنِيْ رَسُوْلُ اللّٰهِ صَلَّى اللّٰهُ عَلَيْهِ وَسَلَّمَ
وَاَنَا مَرِيْضٌ فَقَالَ اَوْصَيْتَ؟ قُلْتُ نَعَمْ، قَالَ بِكَمْ؟ قُلْتُ بِمَالِيْ كُلِّهٖ فِيْ سَبِيْلِ اللّٰهِ،
قَالَ فَمَا تَرَكْتَ لِوَلَدِكَ؟ قُلْتُ هُمْ اَغْنِيَاءُ بِخَيْرٍ فَقَالَ اَوْصِ بِالْعُشْرِ، قَالَ فَمَازِلْتُ
اُنَاقِصُهٗ حَتّٰى قَالَ اَوْصِ بِالثُّلُثِ وَالثُّلُثُ كَثِيْرٌ (ترمذی)

ಹ. ಸಅದ್ ಬಿನ್ ಅಬೀ ವಕ್ಕಾಸ್(ರ) ಹೇಳುತ್ತಾರೆ: ನಾನು ರೋಗಪೀಡಿತನಾಗಿದ್ದೆ. ಪ್ರವಾದಿ(ಸ) ನನ್ನನ್ನು ನೋಡಲು ಬಂದು, ನೀವೇನಾದರೂ 'ವಸಿಯ್ಯತ್' ಮಾಡಿದ್ದೀರಾ ಎಂದು ಕೇಳಿದರು. ನಾನು ಹೌದೆಂದೆ. ಅವರು ಕೇಳಿದರು- ಎಷ್ಟು 'ವಸಿಯ್ಯತ್' ಮಾಡಿದ್ದೀರಿ? ನಾನು ಹೇಳಿದೆ- ನನ್ನ ಸಂಪೂರ್ಣ ಸೊತ್ತನ್ನು ಅಲ್ಲಾಹನ ಮಾರ್ಗದಲ್ಲಿ ಅರ್ಪಿಸಿರುವೆನು. ಪ್ರವಾದಿ(ಸ) ಹೇಳಿದರು: ನಿಮ್ಮ ಸಂತಾನಕ್ಕೆ ಏನು ಬಿಟ್ಟಿದ್ದೀರಿ. ನಾನು ಹೇಳಿದೆ: 'ಅವರು ಶ್ರೀಮಂತರು, ಸುಸ್ಥಿತಿಯಲ್ಲಿದ್ದಾರೆ'. ಆಗ ಪ್ರವಾದಿ(ಸ) ಹೇಳಿದರು: ಸರಿ, ಹಾಗಾದರೆ ಹತ್ತನೇ ಒಂದಂಶವನ್ನು ದೇವಮಾರ್ಗದಲ್ಲಿ ನೀಡಿರಿ.

ಹ. ಸಅದ್(ರ) ಹೇಳುತ್ತಾರೆ- ಇದು ಬಹಳ ಕಡಿಮೆಯಾಯಿತು. ಸ್ವಲ್ಪ ಹೆಚ್ಚಿಸಿ ಹೇಳಿರಿ ಎಂದು ನಾನು ಪದೇ ಪದೇ ಒತ್ತಾಯಿಸ ತೊಡಗಿದೆ. ಕೊನೆಗೆ ಪ್ರವಾದಿ(ಸ) ಹೇಳಿದರು: ಸರಿ, ಹಾಗಾದರೆ ಮೂರನೆ ಒಂದಂಶವನ್ನು ದೇವಮಾರ್ಗದಲ್ಲಿ ನೀಡಿರಿ. ಈ ಮೂರನೆ ಒಂದಂಶವೂ ಬಹಳವಾಯಿತು. *[ತಿರ್ಮಿದಿ]*

ಟಿಪ್ಪಣಿ: ಮರಣ ಹೊಂದುವವನು ತನ್ನ ಸಂಪೂರ್ಣ ಸೊತ್ತಿನ ಮೂರನೆ ಒಂದಂಶ ಮಾತ್ರ ವಕ್ಫ್ ಮಾಡಬಹುದೆಂದು ಈ ಹದೀಸ್‌ನಿಂದ ತಿಳಿದು ಬರುತ್ತದೆ. ಅದನ್ನು ಯಾವುದಾದರೂ ಮದ್ರಸಾ, ಮಸೀದಿ ಅಥವಾ ಯಾರಾದರೂ ಬಡವರಿಗೆ ಕೊಡಬಹುದು. ಆದರೆ ತನ್ನ ಹತ್ತಿರದ ಸಂಬಂಧಿಕರ ಪೈಕಿ ಯಾರಿಗೆ ವಾರೀಸಿನಲ್ಲಿ ಹಕ್ಕಿಲ್ಲ, ಯಾರು ಹೆಚ್ಚು ಸಹಾಯಕ್ಕೆ ಅರ್ಹರು ಎಂಬುದನ್ನು ನೋಡಿ ಅವರಿಗೆ ನೀಡುವುದು ಹೆಚ್ಚು ಪುಣ್ಯದಾಯಕ.

ಬಡ್ಡಿ

ಬಡ್ಡಿ ವ್ಯವಹಾರ

(187) إِنَّ النَّبِيَّ صَلَّى اللّٰهُ عَلَيْهِ وَسَلَّمَ لَعَنَ آكِلَ الرِّبَا وَمُؤْكِلَهُ وَشَاهِدَيْهِ وَكَاتِبَهُ (بخاری ومسلم — عبداللہ بن مسعودؓ)

ಪ್ರವಾದಿಯವರು(ಸ) ಬಡ್ಡಿ ತಿನ್ನುವವನನ್ನು, ಬಡ್ಡಿ ತಿನ್ನಿಸುವವನನ್ನು, ಬಡ್ಡಿಗೆ ಸಾಕ್ಷಿ ನಿಲ್ಲುವ ಇಬ್ಬರನ್ನು ಮತ್ತು ಬಡ್ಡಿಯ ದಾಖಲೆ ಪತ್ರ ಬರೆಯುವವನನ್ನು ಶಪಿಸಿದ್ದಾರೆ.

[ಬುಖಾರಿ, ಮುಸ್ಲಿಮ್- ವರದಿ: ಅಬ್ದುಲ್ಲಾ ಬಿನ್ ಮಸ್‌ವೂದ್(ರ)]

ಟಿಪ್ಪಣಿ: ಇಮಾಮ್ ನಸಾಈಯವರು ಉಲ್ಲೇಖಿಸಿದ ಹದೀಸ್‌ನ ಅರ್ಥ ಹೀಗಿದೆ: "ಉದ್ದೇಶಪೂರ್ವಕವಾಗಿ ಬಡ್ಡಿ ತಿನ್ನುವ, ತಿನ್ನಿಸುವ, ಸಾಕ್ಷಿ ನಿಲ್ಲುವ ಮತ್ತು ಬಡ್ಡಿ ವ್ಯವಹಾರವನ್ನು ಬರೆಯುವ ಪ್ರತಿಯೊಬ್ಬನನ್ನೂ ನಿರ್ಣಾಯಕ ದಿನದಂದು ಪ್ರವಾದಿ(ಸ) ಶಪಿಸುವರು."

ಇದರ ತಾತ್ಪರ್ಯವೇನೆಂದರೆ ಪ್ರವಾದಿಯವರ(ಸ) ಶಫಾಅತ್‌ನಿಂದ ಅಂದು ಇಂತಹ ವ್ಯಕ್ತಿಗಳು ವಂಚಿತರಾಗುವರು. ಅವರಿಗೆ ಶಫಾಅತ್ ಲಭಿಸುವುದಿಲ್ಲ. ಮಾತ್ರವಲ್ಲ ಪ್ರವಾದಿವರ್ಯರ(ಸ) ಶಾಪವೂ ಅವರ ಮೇಲೆ ಬೀಳುವುದು. ಅಲ್ಲಾಹನು ರಕ್ಷಿಸಲಿ!

ಬಡ್ಡಿಕೋರನ ದುರ್ಗತಿ

(188) عَنْ سَمُرَةَ بْنِ جُنْدُبٍ قَالَ، قَالَ النَّبِيُّ صَلَّى اللّٰهُ عَلَيْهِ وَسَلَّمَ رَأَيْتُ اللَّيْلَةَ رَجُلَيْنِ أَتَيَانِيْ، فَأَخْرَجَانِيْ إِلَى أَرْضٍ مُقَدَّسَةٍ، فَانْطَلَقْنَا حَتّٰى أَتَيْنَا عَلٰى نَهْرٍ مِنْ دَمٍ فِيْهِ رَجُلٌ قَائِمٌ، وَعَلٰى شَطِّ النَّهْرِ رَجُلٌ بَيْنَ يَدَيْهِ حِجَارَةٌ، فَأَقْبَلَ الرَّجُلُ الَّذِيْ فِي النَّهْرِ، فَإِذَا أَرَادَ أَنْ يَخْرُجَ رَمَى الرَّجُلُ بِحَجَرٍ فِيْ فِيْهِ، فَرَدَّهُ حَيْثُ كَانَ، فَجَعَلَ كُلَّمَا جَاءَ لِيَخْرُجَ رَمٰى فِيْ فِيْهِ بِحَجَرٍ فَيَرْجِعُ كَمَا كَانَ، فَقُلْتُ مَا هٰذَا الَّذِيْ رَأَيْتُهُ فِي النَّهْرِ؟ قَالَ آكِلُ الرِّبَا (بخاری)

ಸಮುರಃ ಬಿನ್ ಜುಂದುಬ್(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು- ಇಂದು ರಾತ್ರಿ ನನ್ನ ಬಳಿಗೆ ಇಬ್ಬರು ಬಂದರು. ಅವರು ನನ್ನನ್ನು ಒಂದು ಪವಿತ್ರ ಸ್ಥಳಕ್ಕೆ ಕೊಂಡುಹೋದರು.

ಅಲ್ಲಿಂದ ಮುಂದೆ ನಾವು ಮೂವರು ನಡೆಯುತ್ತಾ ರಕ್ತ ಹರಿಯುವಂತಹ ಒಂದು ಕಾಲುವೆಯ ಬಳಿಗೆ ತಲಪಿದೆವು. ಅಲ್ಲಿ ಒಬ್ಬ ನಿಂತಿದ್ದ. ಕಾಲುವೆಯ ದಡದಲ್ಲಿ ಇನ್ನೊಬ್ಬನಿದ್ದ. ಅವನ ಮುಂದೆ ಅನೇಕ ಕಲ್ಲುಗಳಿದ್ದುವು. ಕಾಲುವೆಯಲ್ಲಿ ನಿಂತಿದ್ದ ವ್ಯಕ್ತಿ ಅಲ್ಲಿಂದ ಹೊರಬರಲು ಮುಂದಡಿಯಿಡುತ್ತಿದ್ದಾಗಲೆಲ್ಲ ದಡದಲ್ಲಿ ನಿಂತಿರುವ ವ್ಯಕ್ತಿ ಅವನ ಮುಖಕ್ಕೆ ಕಲ್ಲು ಹೊಡೆದು ಅವನು ಬಂದಲ್ಲಿಗೇ ಮರಳುವಂತೆ ಮಾಡುತ್ತಿದ್ದ. ಹೀಗೆ ನಿರಂತರ ನಡೆಯುತ್ತಿತ್ತು. ಅವನು ಹೊರಬರಲು ಪ್ರಯತ್ನಿಸುತ್ತಿದ್ದ, ಇವನು ಅವನ ಮುಖಕ್ಕೆ ಕಲ್ಲೆಸೆದು ಹಿಂದೆ ಕಳುಹಿಸುತ್ತಿದ್ದ. ನಾನು ಕೇಳಿದೆ- ಈ ರಕ್ತದ ಕಾಲುವೆಯಲ್ಲಿ ನಿಂತಿರುವ ವ್ಯಕ್ತಿ ಯಾರು? ಆಗ ಆ ಇಬ್ಬರ ಪೈಕಿ ಒಬ್ಬನು ಹೇಳಿದ: ಇವನು ಭೂಲೋಕದಲ್ಲಿ ಬಡ್ಡಿ ತಿನ್ನುತ್ತಿದ್ದವನು.

[ಬುಖಾರಿ]

ಟಿಪ್ಪಣಿ: ಬಡ್ಡಿಕೋರನ ಬಡ್ಡಿಯು ರಕ್ತದ ನದಿಯಾಗಿ ಹರಿಯುತ್ತಿದ್ದು ಅದರಲ್ಲಿ ಅವನನ್ನು ನಿಲ್ಲಿಸಲಾಗಿದೆ. ಅವನಿಗೆ ಬಡ್ಡಿಯೊಂದಿಗೆ ಪ್ರೇಮವಿತ್ತು. ಅದರ ಬಳಿಗೆ ಅವನನ್ನು ತಲಪಿಸಲಾಯಿತು. ದಡದಲ್ಲಿ ನಿಂತಿದ್ದ ವ್ಯಕ್ತಿ ಬಡವನೂ ಅಪೇಕ್ಷಿತನೂ ಆಗಿದ್ದ. ಅವನ ಬಡತನವನ್ನು ಶೋಷಿಸಿ ಈ ವ್ಯಕ್ತಿ ಅವನಿಂದ ಹೆಚ್ಚಿನ ಹಣವನ್ನು (ಬಡ್ಡಿ) ಸುಲಿದಿದ್ದ.

ಲಂಚ

(189) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ لَعْنَةُ اللّٰهِ عَلَى الرَّاشِيْ وَالْمُرْتَشِيْ

(بخاری ومسلم — عبداللہ بن عمرو بن العاص)

ಅಲ್ಲಾಹನ ಪ್ರವಾದಿ(ಸ) ಹೇಳಿದರು- ಲಂಚ ಕೊಡುವವನ ಮತ್ತು ಲಂಚ ಪಡೆಯುವವನ ಮೇಲೆ ಅಲ್ಲಾಹನ ಶಾಪವಿದೆ.

[ಬುಖಾರಿ, ಮುಸ್ಲಿಮ್: ಅಬ್ದುಲ್ಲಾ ಬಿನ್ ಅಮ್ರ್ ಬಿನ್ ಆಸ್.]

ಟಿಪ್ಪಣಿ: ಈ ಹದೀಸ್‌ನಲ್ಲಿ ಲಂಚದ ನಿಶ್ಶರ್ತ ಕೊಡುಕೊಳ್ಳುವಿಕೆಯ ಪ್ರಸ್ತಾಪವಿದೆ. ಅಬೂ ಹುರೈರಾರ(ರ) ಇನ್ನೊಂದು ವರದಿಯಲ್ಲಿ ಅಧಿಕಾರಿಗಳಿಗೆ ಲಂಚ ಕೊಡುವವನನ್ನೂ ಲಂಚ ಪಡೆಯುವ ಅಧಿಕಾರಿಯನ್ನೂ ಶಪಿಸಲಾಗಿದೆ. (ಅಲ್ ಮುಂತಕಾ) ಲಂಚವೆಂದರೇನು? ಇತರರ ಹಕ್ಕುಗಳನ್ನು ಕಬಳಿಸಲಿಕ್ಕಾಗಿ ಸರಕಾರಿ ನೌಕರರಿಗೆ ಮತ್ತು ಅಧಿಕಾರಿಗಳಿಗೆ ಕೊಡುವ ಹಣವನ್ನೇ ಲಂಚವೆಂದು ಕರೆಯುವುದು. ಆದರೆ ತನ್ನ ನಿಜವಾದ ಹಕ್ಕನ್ನು ಏನಾದರೂ ಕೊಡದೆ ಪಡೆಯಲು ಸಾಧ್ಯವಿಲ್ಲದಂತಹ ಅವಸ್ಥೆಯಲ್ಲಿ ಅದನ್ನು ಪಡೆಯಲಿಕ್ಕಾಗಿ ಭ್ರಷ್ಟ ಸರಕಾರಿ ಅಧಿಕಾರಿಗಳಿಗೆ ಒಲ್ಲದ ಮನಸ್ಸಿನಿಂದ ನೀಡುವ ಹಣವು ಖಂಡಿತ ಲಂಚವಲ್ಲ. ಶೇಖುಲ್ ಇಸ್ಲಾಮ್ ಹಾಫಿಝ್ ಇಬ್ನು ತೀಮಿಯ್ಯಾ ಅವರ ಅಭಿಪ್ರಾಯವೂ ಇದುವೇ ಆಗಿದೆ. ಪ್ರಸಿದ್ಧ ಹದೀಸ್ ತಜ್ಞ ಖತ್ತಾಬಿಯವರೂ 'ಮಾಲಿಮುಸ್ಸುನನ್' ಎಂಬ

ತನ್ನ ಗ್ರಂಥದಲ್ಲಿ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕುರ್‌ಆನಿನ ಅಲ್‌ಬಕರಃ ಅಧ್ಯಾಯದ 188 ನೇ ಸೂಕ್ತದಿಂದಲೂ ಈ ಅಭಿಪ್ರಾಯಕ್ಕೆ ಸಮರ್ಥನೆ ಸಿಗುತ್ತದೆ.

ಸಂದೇಹಾಸ್ಪದ ವಸ್ತುಗಳನ್ನು ವರ್ಜಿಸಿರಿ

(190) إِنَّ النَّبِيَّ صَلَّى اللهُ عَلَيْهِ وَسَلَّمَ قَالَ الْحَلَالُ بَيِّنٌ وَالْحَرَامُ بَيِّنٌ، وَبَيْنَهُمَا أُمُورٌ مُشْتَبِهَةٌ، فَإِنْ تَرَكَ مَا يَشْتَبِهُ عَلَيْهِ مِنَ الْإِثْمِ كَانَ لِمَا اسْتَبَانَ أَتْرَكَ، وَمَنِ اجْتَرَأَ عَلَى مَا يَشُكُّ فِيهِ مِنَ الْإِثْمِ أَوْشَكَ أَنْ يُوَاقِعَ مَا اسْتَبَانَ، وَالْمَعَاصِي حِمَى اللهِ مَنْ يَرْتَعْ حَوْلَ الْحِمَى يُوشِكُ أَنْ يُوَاقِعَهُ (بخاری ومسلم ــ نعمان بن بشیرؓ)

ಪ್ರವಾದಿ(ಸ) ಹೇಳಿದರು- ಹಲಾಲ್-ಹರಾಮ್(ಧರ್ಮಸಮ್ಮತ ಮತ್ತು ನಿಷಿದ್ಧ) ಗಳನ್ನು ವ್ಯಕ್ತಪಡಿಸಲಾಗಿದೆ. ಆದರೆ ಅವುಗಳ ಮಧ್ಯೆ ಕೆಲವು ಸಂದೇಹಾಸ್ಪದ ಸಂಗತಿಗಳಿವೆ. ಸಂದೇಹಾಸ್ಪದ ವಸ್ತುಗಳನ್ನು ವರ್ಜಿಸಿದವನು ದೊಡ್ಡ ಪಾಪಗಳಿಂದ ಸುರಕ್ಷಿತನಾಗುವನು. ಇನ್ನು ಯಾರು ಸಂದೇಹಾಸ್ಪದ ಪಾಪಗಳನ್ನು ಮಾಡುವ ಧೈರ್ಯ ತೋರುವನೋ ಅವನು ಸುವ್ಯಕ್ತ ಪಾಪಗಳಲ್ಲಿ ಸಿಲುಕುವ ಸಂಭವವಿದೆ. ಪಾಪಗಳು ಅಲ್ಲಾಹನ ನಿಷಿದ್ಧ ಮೇರೆಗಳಾಗಿವೆ (ಅದರೊಳಗೆ ನುಗ್ಗುವುದು ಅಪರಾಧ). ನಿಷಿದ್ಧ ಮೇರೆಯ ಅಂಚಿನಲ್ಲಿ ಮೇಯುವ ಪ್ರಾಣಿಯು ಅದರೊಳಗೆ ನುಗ್ಗುವ ಸಾಧ್ಯತೆ ಹೆಚ್ಚು.

[ಬುಖಾರಿ, ಮುಸ್ಲಿಮ್- ನುಅ್‌ಮಾನ್ ಬಿನ್ ಬಶೀರ್‌]

ಟಿಪ್ಪಣಿ: ಪ್ರವಾದಿಯವರ(ಸ) ಮಾತಿನ ಇಂಗಿತವೇನೆಂದರೆ, ಧರ್ಮಸಮ್ಮತವೆಂದೋ ನಿಷಿದ್ಧವೆಂದೋ ಸ್ಪಷ್ಟವಲ್ಲದ ಕೆಲವು ವಸ್ತುಗಳಿವೆ. ಮಾತ್ರವಲ್ಲ ಅವುಗಳ ಕೆಲವು ಅಂಶ ಧರ್ಮಸಮ್ಮತವೆಂಬಂತೆಯೂ ಕೆಲವು ನಿಷಿದ್ಧವೆಂಬಂತೆಯೂ ತೋರುತ್ತದೆ. ಈ ಸಂದರ್ಭದಲ್ಲಿ ಅವುಗಳ ಬಳಿಗೂ ಸುಳಿಯದಿರುವುದು ಸತ್ಯವಿಶ್ವಾಸಿಯ ಮಟ್ಟಿಗೆ ಶ್ರೇಯಸ್ಕರ. ಸಂದೇಹಾಸ್ಪದ ವಸ್ತುಗಳಿಂದ ದೂರವಿರುವವನು ಸ್ಪಷ್ಟ ಹರಾಮ್ ಕೆಲಸಗಳನ್ನು ಹೇಗೆ ತಾನೆ ಮಾಡಬಲ್ಲನು. ಅದಕ್ಕೆ ವ್ಯತಿರಿಕ್ತವಾಗಿ ಸಂದೇಹಾಸ್ಪದ ವಸ್ತುಗಳ ಧರ್ಮಬಾಹಿರ ಅಂಶಗಳನ್ನು ತಿಳಿದೂ ಅದನ್ನು ಕೈಗೊಳ್ಳುವವನು ಸ್ಪಷ್ಟ ಪಾಪಗಳನ್ನೆಸಗುವಲ್ಲಿ ಇನ್ನಷ್ಟು ಧೈರ್ಯ ತೋರಬಲ್ಲನು. ಇದು ಅಪಾಯಕಾರಿ ಮನೋಭಾವವಾಗಿದೆ. ಅದರ ಬಗ್ಗೆ ಎಚ್ಚರಿಕೆ ಅಗತ್ಯ. ಸಂದೇಹಾಸ್ಪದ ವಸ್ತುಗಳನ್ನು ವರ್ಜಿಸಬೇಕೆಂಬುದೇ ಈ ಹದೀಸ್‌ನ ಪಾಠವಾಗಿದೆ.

---

(191) إِنَّ النَّبِيَّ صَلَّى اللهُ عَلَيْهِ وَسَلَّمَ قَالَ لَا يَبْلُغُ الْعَبْدُ أَنْ يَكُونَ مِنَ الْمُتَّقِينَ حَتَّى يَدَعَ مَا لَا بَأْسَ بِهِ حَذَرًا لِمَا بِهِ الْبَأْسُ (ترمذی — عطیہ سعدیؓ)

ಪ್ರವಾದಿ(ಸ) ಹೇಳಿದರು: ಓರ್ವ ವ್ಯಕ್ತಿ ತಾನು ಪಾಪಕಾರ್ಯಗಳಲ್ಲಿ ಬಿದ್ದು ಬಿಡಬಹುದೆಂಬ ಭೀತಿಯಿಂದ ಪಾಪವಲ್ಲದ ವಸ್ತುವನ್ನು ವರ್ಜಿಸುವ ತನಕ ಒಬ್ಬನು ಮುತ್ತಕೀಗಳ (ಧರ್ಮನಿಷ್ಠರ) ಸಾಲಿಗೆ ಸೇರುವುದಿಲ್ಲ. *[ತಿರ್ಮಿದಿ- ಅತಿಯ್ಯ ಸಅದಿ(ರ)]*

ಟಿಪ್ಪಣಿ: ಒಂದು ವಿಷಯ ಧರ್ಮಸಮ್ಮತವಾಗಿರುತ್ತದೆ. ಅದನ್ನು ಮಾಡುವುದರಿಂದ ಯಾವುದೇ ಪಾಪವಿಲ್ಲ. ಆದರೆ ಅದರ ಮೇರೆಯು ಪಾಪದೊಂದಿಗೆ ಸೇರಿರುತ್ತದೆ. ಅಂತಹ ಕಾರ್ಯದಲ್ಲಿ ನಿರತ ರಾಗಿದ್ದರೆ ಕಾಲುಜಾರಿ ಬಿಡಬಹುದು. ತಾನು ಪಾಪಕಾರ್ಯಗಳಲ್ಲಿ ಬಿದ್ದು ಬಿಡುವೆನು ಎಂದು ಹೆದರಿ ಒಬ್ಬನು ಅದನ್ನು ತೊರೆಯುತ್ತಾನೆ. ಮನಸ್ಸಿನ ಈ ಸ್ಥಿತಿಯನ್ನೇ ಶರೀಅತ್ ಭಾಷೆಯಲ್ಲಿ 'ತಕ್ವಾ' ಎಂದು ಕರೆಯಲಾಗುತ್ತದೆ.

ಸಾಲ ನೀಡಲು ಪ್ರೇರಣೆ

(192) إِنَّ النَّبِيَّ صَلَّى اللهُ عَلَيْهِ وَسَلَّمَ قَالَ كُلُّ قَرْضٍ صَدَقَةٌ

(المنذری۔ عبداللہ ابن مسعودرضؓ)

ಪ್ರವಾದಿ(ಸ) ಹೇಳಿದರು: ಪ್ರತಿಯೊಂದು ಸಾಲವೂ ದಾನವಾಗಿದೆ.

[ಅಲ್‌ಮುಂದಿರೀ: ಅಬ್ದುಲ್ಲಾ ಬಿನ್ ಮಸ್‌ವೂದ್(ರ)]

ಟಿಪ್ಪಣಿ: ಅಲ್ಲಾಹನು ಯಾರಿಗೆ ಅಗತ್ಯಕ್ಕಿಂತ ಹೆಚ್ಚು ಸಂಪತ್ತು ದಯಪಾಲಿಸಿರುವನೋ ಅವರು ಅಪೇಕ್ಷಿತರಿಗೆ ಸಹಾಯ ಮಾಡಬೇಕು, ಸಾಲ ನೀಡುವುದೂ ಅದರ ಒಂದು ರೂಪವಾಗಿದೆ. ನಿರ್ದಿಷ್ಟ ಸಮಯಾವಕಾಶ ನೀಡಿದ್ದು ಆ ಸಮಯದಲ್ಲಿ ಸಾಲ ಮರುಪಾವತಿ ಮಾಡದಿದ್ದರೆ ಸಾಲಗಾರನಿಗೆ ಇನ್ನಷ್ಟು ಕಾಲಾವಕಾಶ ನೀಡಬೇಕು ಅಥವಾ ಅದನ್ನು ಮನ್ನಿಸಿ ಬಿಡಬೇಕು. ಸಾಲ ನೀಡುವುದು ಪುಣ್ಯ ಕಾರ್ಯ ವಾಗಿದೆ. ಇನ್ನಷ್ಟು ಕಾಲಾವಕಾಶ ನೀಡುವುದಕ್ಕೆ ಇಮ್ಮಡಿ ಪುಣ್ಯ ಲಭಿಸುವುದೆಂಬ ವಾಗ್ದಾನವಿದೆಯೆಂದು ಇಬ್ನು ಮಾಜದ ಒಂದು ಹದೀಸ್‌ನಲ್ಲಿದೆ.

ಸಾಲವನ್ನು ಮನ್ನಿಸಿ ಬಿಡುವುದು ಅಲ್ಲಾಹನಿಗೆ ಅತ್ಯಂತ ಪ್ರಿಯ ಕಾರ್ಯವಾಗಿದೆ. ಇದು ಸೂರಃ ಅಲ್‌ಬಕರದ 280ನೇ ಆಯತ್‌ನಲ್ಲಿದೆ. ಅರ್ಥಾತ್ ಬಡ ಸಾಲಗಾರನ ಸಾಲವನ್ನು ಮನ್ನಾ ಮಾಡಿದರೆ ಇದು ಅತ್ಯುತ್ತಮ ಕಾರ್ಯವಾಗಿದೆ. ಇದು ಎಷ್ಟು ದೊಡ್ಡ ಪುಣ್ಯ ಕಾರ್ಯವೆಂಬುದನ್ನು ನೀವು ಅರಿತಿದ್ದರೆ!

ಸಾಲ ಮನ್ನಾ

(193) إِنَّ النَّبِيَّ صَلَّى اللهُ عَلَيْهِ وَسَلَّمَ قَالَ كَانَ رَجُلٌ يُدَايِنُ النَّاسَ فَكَانَ يَقُولُ لِفَتَاهُ إِذَا أَتَيْتَ مُعْسِرًا تَجَاوَزْ عَنْهُ، لَعَلَّ اللهَ أَنْ يَتَجَاوَزَ عَنَّا، قَالَ فَلَقِيَ اللهَ فَتَجَاوَزَ عَنْهُ (بخاري ومسلم)

ಪ್ರವಾದಿ(ಸ) ಹೇಳಿದರು: ಓರ್ವ ವ್ಯಕ್ತಿ ಅಪೇಕ್ಷಿತರಿಗೆ ಸಾಲ ನೀಡುತ್ತಿದ್ದ. ಸಾಲ ವಸೂಲಿಗಾಗಿ ಅವನು ತನ್ನ ದೂತನನ್ನು ಕಳಿಸುವಾಗ, ಸಾಲಗಾರನು ಬಡವನಾಗಿದ್ದರೆ ಮನ್ನಾ ಮಾಡಬೇಕು, (ಕ್ಷಮಿಸಬೇಕು, ವಸೂಲಿಗಾಗಿ ಪೀಡಿಸಬಾರದು) ಅಲ್ಲಾಹನು ನಮ್ಮ ಕುಂದು ಕೊರತೆಗಳನ್ನು ಕ್ಷಮಿಸಬಹುದೆಂದು ನಿರೀಕ್ಷಿಸಬಹುದು ಎಂದು ಹೇಳುತ್ತಾನೆ. ಪ್ರವಾದಿ(ಸ) ಹೇಳುತ್ತಾರೆ: ಅವನು ಅಲ್ಲಾಹನನ್ನು ಭೇಟಿಯಾದಾಗ ಅಲ್ಲಾಹನು ಅವನಿಗೆ ಕ್ಷಮೆ ನೀಡಿದನು.
[ಬುಖಾರಿ, ಮುಸ್ಲಿಮ್]

ಸಾಲಗಾರನಿಗೆ ಕಾಲಾವಕಾಶ ನೀಡಿದುದರ ಪ್ರತಿಫಲ

(194) قَالَ رَسُولُ اللهِ صَلَّى اللهُ عَلَيْهِ وَسَلَّمَ تَلَقَّتِ الْمَلَائِكَةُ رُوحَ رَجُلٍ مِمَّنْ كَانَ قَبْلَكُمْ فَقَالُوا أَعَمِلْتَ مِنَ الْخَيْرِ شَيْئًا؟ قَالَ لَا، قَالُوا تَذَكَّرْ، قَالَ كُنْتُ أُدَايِنُ النَّاسَ فَآمُرُ فِتْيَانِي أَنْ يُنْظِرُوا الْمُعْسِرَ وَيَتَجَوَّزُوا عَنِ الْمُوسِرِ قَالَ قَالَ اللهُ تَجَاوَزُوا عَنْهُ (بخاري، حذيفة)

ಅಲ್ಲಾಹನ ಸಂದೇಶವಾಹಕರು ಹೇಳಿದರು: ನಿಮಗಿಂತ ಮುಂಚೆ ಗತಿಸಿದ ಮುಸ್ಲಿಮರ ಪೈಕಿ ಓರ್ವನ ಪ್ರಾಣವನ್ನು ದೇವಚರರು ವಶಪಡಿಸಿದಾಗ ಅವನೊಂದಿಗೆ ಕೇಳಿದರು: ನೀನೇನಾದರೂ ಒಳ್ಳೆಯ ಕಾರ್ಯ ಮಾಡಿದ್ದಿದೆಯೇ? ಅವನು, 'ಇಲ್ಲ' ಎಂದನು. ಆಗ ದೇವಚರರು ಪುನಃ ಹೇಳಿದರು- ನೀನೇನಾದರೂ ಒಳ್ಳೆಯ ಕಾರ್ಯ ಮಾಡಿರುವೆಯಾ ಎಂದು ಜ್ಞಾಪಿಸಿ ನೋಡು. ಅವನು ಆಲೋಚಿಸಿದನು. ತರುವಾಯ ಹೀಗೆಂದನು- ಹೌದು, ಜ್ಞಾಪಕಕ್ಕೆ ಬಂತು. ನಾನು ಭೂಲೋಕದಲ್ಲಿ ಅಪೇಕ್ಷಿತರಿಗೆ ಸಾಲ ನೀಡುತ್ತಿದ್ದೆ ಮತ್ತು ಕಾಸಿಲ್ಲದ ಸಾಲಗಾರರು ನಿಗದಿತ ಸಮಯದಲ್ಲಿ ಮರುಪಾವತಿ ಮಾಡದಿದ್ದರೆ ಅವರಿಗೆ ಇನ್ನಷ್ಟು ಕಾಲಾವಕಾಶ

ನೀಡುವಂತೆಯೂ ಮರುಪಾವತಿ ಮಾಡಿದ ಸಾಲಗಾರರೊಂದಿಗೆ ನಯವಾಗಿ ವರ್ತಿಸುವಂತೆಯೂ ನನ್ನ ಸೇವಕರಿಗೆ ಆದೇಶಿಸುತ್ತಿದ್ದೆ. ಅಲ್ಲಾಹನು ದೇವಚರರೊಂದಿಗೆ ಹೇಳಿದನು- ಅವನ ತಪ್ಪುಗಳನ್ನೆಲ್ಲ ಕ್ಷಮಿಸಿ ಬಿಡಿ. (ಏಕೆಂದರೆ ಅವನು ನನ್ನ ಅಪೇಕ್ಷಿತ ದಾಸರೊಂದಿಗೆ ಕರುಣೆ ಮತ್ತು ಔದಾರ್ಯದಿಂದ ವರ್ತಿಸುತ್ತಿದ್ದನು)

[ಬುಖಾರಿ- ವರದಿ: ಹುದೈಫ(ರ)]

ಸಾಲ ಮರುಪಾವತಿಗೆ ಮೀನ-ಮೇಷ ಎಣಿಸಬಾರದು

(195) إِنَّ رَسُوْلَ اللّٰهِ صَلَّى اللّٰهُ عَلَيْهِ وَسَلَّمَ قَالَ مَطْلُ الْغَنِيِّ ظُلْمٌ، فَإِذَا أُتْبِعَ أَحَدُكُمْ عَلَى مَلِيٍّ فَلْيَتْبَعْ

(بخاری ومسلم ــ ابوہریرہ رضؓ)

ಪ್ರವಾದಿ(ಸ) ಹೇಳಿದರು: ಸಾಲ ಮರುಪಾವತಿ ಮಾಡಲು ಸಾಧ್ಯವಿರುವ ಸಾಲಗಾರನು ಮರುಪಾವತಿ ಮಾಡಲು ಮೀನ-ಮೇಷ ಎಣಿಸಿದರೆ ಅದೊಂದು ಅನ್ಯಾಯದ ಕೃತ್ಯವಾಗುವುದು. ಒಂದು ವೇಳೆ ಸಾಲಗಾರನು ಸಾಲ ನೀಡಿದವನೊಂದಿಗೆ 'ನೀನು ನಿನ್ನ ಸಾಲದ ಹಣವನ್ನು ಇಂತಿಂಥವನಿಂದ ಪಡೆದುಕೋ (ನಾನವನೊಂದಿಗೆ ಹೇಳಿದ್ದೇನೆ) ಎಂದು ಹೇಳಿದರೆ ಸಾಲ ನೀಡಿದವನು ಅವನು ತೋರಿಸಿದ ವ್ಯಕ್ತಿಯನ್ನು ಸಂಪರ್ಕಿಸಿ ತನ್ನ ಸಾಲ ವಸೂಲಿ ಮಾಡಬೇಕು. (ನನಗೆ ನೀನು ಪಾವತಿಸಬೇಕು. ನನಗೆ ಅವನೇನಾಗಬೇಕು ಎಂದು ಹೇಳಬಾರದು)

[ಬುಖಾರಿ, ಮುಸ್ಲಿಮ್- ವರದಿ: ಅಬೂ ಹುರೈರಾ(ರ)]

ಮೀನ-ಮೇಷ ಎಣಿಸುವವನ ಶಿಕ್ಷೆ

(196) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ لَيُّ الْوَاجِدِ يُحِلُّ عِرْضَهُ وَعُقُوْبَتَهُ

(ابوداؤد ــ شرید سلمیؓ)

ಪ್ರವಾದಿ(ಸ) ಹೇಳಿದರು: ಸಾಲ ಮರುಪಾವತಿ ಮಾಡುವ ಶಕ್ತಿಯಿದ್ದೂ ಪಾವತಿಸುವ ವಿಷಯದಲ್ಲಿ ಮೀನ-ಮೇಷ ಎಣಿಸುವ ಸಾಲಗಾರನಿಗೆ ಛೀಮಾರಿ ಹಾಕುವುದು ಮತ್ತು ಶಿಕ್ಷೆ ವಿಧಿಸುವುದು ಸಮಾಜದ ಪಾಲಿಗೆ ಧರ್ಮಸಮ್ಮತವಾಗಿದೆ.

[ಅಬೂ ದಾವೂದ್- ವರದಿ: ಶರೀದ್ ಸಲಮೀ(ರ)]

ಸಾಲ ಮರುಪಾವತಿಯ ಉತ್ತಮ ರೀತಿ

(197) عَنْ أَبِي رَافِعٍ قَالَ اسْتَسْلَفَ رَسُولُ اللّٰهِ صَلَّى اللّٰهُ عَلَيْهِ وَسَلَّمَ بَكْرًا فَجَاءَتْهُ إِبِلٌ مِنَ الصَّدَقَةِ، قَالَ أَبُو رَافِعٍ فَأَمَرَنِي أَنْ أَقْضِيَ الرَّجُلَ بَكْرَهُ، فَقُلْتُ لَا أَجِدُ إِلَّا جَمَلًا خِيَارًا رَبَاعِيًا، فَقَالَ رَسُولُ اللّٰهِ صَلَّى اللّٰهُ عَلَيْهِ وَسَلَّمَ أَعْطِهِ إِيَّاهُ فَإِنَّ خَيْرَ النَّاسِ أَحْسَنُهُمْ قَضَاءً (مسلم)

ಅಬೂ ರಾಫಿಅ್(ರ) ಹೇಳುತ್ತಾರೆ- ಪ್ರವಾದಿ(ಸ) ಒಮ್ಮೆ ಒಂದು ಮರಿ ಒಂಟೆಯನ್ನು ಯಾರಿಂದಲೋ ಸಾಲ ಪಡೆದರು. ತರುವಾಯ ಝಕಾತ್‌ನ ಕೆಲವು ಒಂಟೆಗಳು ಬಂದಾಗ, ಸಾಲ ಮರು ಪಾವತಿಸುವಂತೆ ನನಗೆ ಆದೇಶಿಸಿದರು. ನಾನು ಹೇಳಿದೆ- ಅವುಗಳ ಪೈಕಿ ಅತ್ಯುತ್ತಮ ವಾದ ಒಂಟೆ ಒಂದು ಮಾತ್ರವಿದೆ. ಅದೂ ಏಳು ವರ್ಷ ಪ್ರಾಯದ್ದಾಗಿದೆ. (ಸಾಲದಲ್ಲಿ ನೀಡಿದ್ದ ಒಂಟೆ ಅದಕ್ಕಿಂತ ಕೆಳಮಟ್ಟದ್ದಾಗಿತ್ತು) ಪ್ರವಾದಿ(ಸ) ಹೇಳಿದರು- ಅದನ್ನೇ ಅವನಿಗೆ ನೀಡು, ಯಾಕೆಂದರೆ ಉತ್ತಮ ರೀತಿಯಲ್ಲಿ ಸಾಲ ಮರುಪಾವತಿ ಮಾಡುವವನೇ ಅತ್ಯುತ್ತಮನು. *[ಮುಸ್ಲಿಮ್]*

ಟಿಪ್ಪಣಿ: ಮೂಲದಲ್ಲಿ 'ಇಬಿಲ್' ಎಂಬ ಪದ ಪ್ರಯೋಗವಾಗಿದೆ. ಹೆಣ್ಣು ಮತ್ತು ಗಂಡು ಒಂಟೆಗಳ ಗುಂಪಿಗೆ 'ಇಬಿಲ್' ಎಂದು ಹೇಳುತ್ತಾರೆ. ಇಲ್ಲಿ ಝಕಾತ್‌ನಲ್ಲಿ ಬಂದ ಒಂಟೆಗಳ ಪೈಕಿ ಒಂದು ಮಾತ್ರ ಗಂಡಾಗಿತ್ತು. ಉಳಿದುವೆಲ್ಲ ಹೆಣ್ಣು ಒಂಟೆಗಳಾಗಿದ್ದುವು.

ವಂಚಕನನ್ನು ವಂಚಿಸಬಾರದು

(198) قَالَ رَسُولُ اللّٰهِ صَلَّى اللّٰهُ عَلَيْهِ وَسَلَّمَ أَدِّ الْأَمَانَةَ إِلَى مَنِ ائْتَمَنَكَ وَلَا تَخُنْ مَنْ خَانَكَ (ترمذی — ابوہریرہؓ)

ಪ್ರವಾದಿ(ಸ) ಹೇಳಿದರು: ಒಬ್ಬನು ನಿಮ್ಮನ್ನು ವಿಶ್ವಸ್ಥನೆಂದು ನಂಬಿ ತನ್ನ ಅಮಾನತನ್ನು (ವಿಶ್ವಸ್ಥ ನಿಧಿ) ನಿಮ್ಮ ವಶಕ್ಕೆ ಕೊಟ್ಟರೆ ಅವನ ಅಮಾನತನ್ನು ಅವನಿಗೆ ಮರಳಿಸಿರಿ. ನಿಮ್ಮನ್ನು ಯಾರಾದರೂ ವಂಚಿಸಿದರೆ ನೀವು ಅವನನ್ನು ವಂಚಿಸದಿರಿ (ನಿಮ್ಮ ಹಕ್ಕುಗಳನ್ನು ಪಡೆಯಲು ಧರ್ಮಸಮ್ಮತ ಮಾರ್ಗವನ್ನು ಅವಲಂಬಿಸಿರಿ.)

[ತಿರ್ಮಿದಿ- ವರದಿ: ಹ. ಅಬೂ ಹುರೈರಾ(ರ)]

ಸಾಲ ಮರುಪಾವತಿಯ ಸಂಕಲ್ಪದ ಪ್ರಭಾವ

(199) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ مَنْ اَخَذَ اَمْوَالَ النَّاسِ يُرِيْدُ اَدَاءَهَا
اَدَّى اللّٰهُ عَنْهُ، وَمَنْ اَخَذَ يُرِيْدُ اِتْلَافَهَا اَتْلَفَهُ اللّٰهُ عَلَيْهِ (بخاری ــــ ابوہریرہؓ)

ಪ್ರವಾದಿ(ಸ) ಹೇಳಿದರು: ಒಬ್ಬನು ಜನರಿಂದ ಸಾಲ ಪಡೆದಿದ್ದು, ಅದನ್ನು ಮರುಪಾವತಿಸುವ ಸಂಕಲ್ಪವನ್ನೂ ಹೊಂದಿದ್ದು ಯಾವುದೋ ಕಾರಣದಿಂದ ಅವನಿಗೆ ಅದನ್ನು ಮರುಪಾವತಿಸಲಾಗದಿದ್ದರೆ ಅವನ ಪರವಾಗಿ ಅಲ್ಲಾಹನು ಮರುಪಾವತಿ ಮಾಡುವನು. ಇನ್ನು ಒಬ್ಬನು ಸಾಲ ಪಡೆದು ಅದನ್ನು ಮರುಪಾವತಿಸುವ ಸಂಕಲ್ಪವನ್ನು ಹೊಂದಿರದಿದ್ದರೆ, ಅವನ ಈ ದುರಾಲೋಚನೆಯ ಕಾರಣದಿಂದಾಗಿ ಅಲ್ಲಾಹನು ಅವನನ್ನು ನಾಶಗೊಳಿಸಿಬಿಡುವನು.

[ಬುಖಾರಿ. ವರದಿ: ಹ. ಅಬೂ ಹುರೈರಾ(ರ)]

ಸಾಲಗಾರನಿಗೆ ಕ್ಷಮೆಯಿಲ್ಲ

(200) اِنَّ رَسُوْلَ اللّٰهِ صَلَّى اللّٰهُ عَلَيْهِ وَسَلَّمَ قَالَ يُغْفَرُ لِلشَّهِيْدِ كُلُّ ذَنْبٍ اِلَّا الدَّيْنَ
(مسلم ــــ عبداللہ بن عمرؓ)

ಪ್ರವಾದಿ(ಸ) ಹೇಳಿದರು: ಅಲ್ಲಾಹನ ಮಾರ್ಗದಲ್ಲಿ ಹುತಾತ್ಮನಾದವನ ಎಲ್ಲ ಪಾಪಗಳೂ ಕ್ಷಮಿಸಲ್ಪಡುವುದು- ಸಾಲದ ಹೊರತು.

[ಮುಸ್ಲಿಮ್. ವರದಿ: ಅಬ್ದುಲ್ಲಾ ಬಿನ್ ಉಮರ್(ರ)]

ಟಿಪ್ಪಣಿ: ಈ ಹದೀಸ್ ಸಾಲದ ಮಹತ್ವವನ್ನು ಸ್ಪಷ್ಟಪಡಿಸುತ್ತದೆ. ಒಬ್ಬನು ಜಿಹಾದ್ (ಧರ್ಮ ಸಮರ)ನಲ್ಲಿ ಭಾಗವಹಿಸಿ, ಧರ್ಮದ ಉತ್ತುಂಗತೆಗಾಗಿ ತನ್ನ ಪ್ರಾಣವನ್ನೇ ಅರ್ಪಿಸಿದರೂ ಅವನು ಸಾಲಗಾರನಾಗಿದ್ದು ಅದನ್ನು ಮರುಪಾವತಿ ಮಾಡಿರದಿದ್ದರೆ ಅದನ್ನು ಕ್ಷಮಿಸಲಾಗದು. ಏಕೆಂದರೆ ಅದು ಜನರ ಹಕ್ಕುಗಳಿಗೆ ಸಂಬಂಧಿಸಿದ ವಿಷಯವಾಗಿದೆ. ಸಾಲದ ಬಗ್ಗೆ ಖಂಡಿತ ವಿಚಾರಣೆ ನಡೆಯುವುದು. ಸಾಲ ಕೊಟ್ಟಾತನು ನ್ಯಾಯಾಲಯಕ್ಕೆ ಹೋಗುವನು. ಅವನು ಮನ್ನಾ ಮಾಡದಿದ್ದರೆ ಅದು ಕ್ಷಮಿಸಲ್ಪಡುವ ಪ್ರಶ್ನೆಯೇ ಇಲ್ಲ.

ಈ ಹದೀಸ್‌ನಲ್ಲಿ ಪ್ರಸ್ತಾಪಿಸಿರುವುದು ಹುತಾತ್ಮನಾದ ಸಾಲಗಾರನ ಕುರಿತಾಗಿದೆ. ಅವನು ಸಾಲವನ್ನು ಮರುಪಾವತಿ ಮಾಡಬೇಕೆಂಬ ಸಂಕಲ್ಪವನ್ನು ಹೊಂದಿದ್ದರೆ ಒಂದು ವೇಳೆ ಅಲ್ಲಾಹನಿಚ್ಛಿಸಿದರೆ ಪಾರಾಗಬಹುದು. ಇತರ ಹದೀಸ್‌ಗಳಲ್ಲಿ ವರದಿಯಾಗಿರುವಂತೆ, ಒಬ್ಬನು ಸಾಲವನ್ನು ಮರುಪಾವತಿ ಮಾಡುವ ಸಂಕಲ್ಪವನ್ನು ಹೊಂದಿದ್ದೂ ಅದು ಅವನಿಂದ ಸಾಧ್ಯವಾಗದಿದ್ದರೆ, ಅವನು ಸತ್ತ ನಂತರ

ನಿರ್ಣಾಯಕ ದಿನದಂದು ಅಲ್ಲಾಹನು ಸಾಲ ನೀಡಿದಾತನನ್ನು ಕರೆದು ಅವನ ಸಾಲವನ್ನು ಮನ್ನಾ ಮಾಡುವಂತೆ ಆದೇಶಿಸುವನು. ಅದಕ್ಕೆ ಪ್ರತಿಯಾಗಿ ಸ್ವರ್ಗದ ಅನುಗ್ರಹಗಳ ಪೈಕಿ ಒಂದನ್ನು ನೀಡುವ ವಾಗ್ದಾನ ಮಾಡುವನು. ಆಗ ಸಾಲ ನೀಡಿದಾತನು ತಾನು ನೀಡಿದ ಸಾಲವನ್ನು ಮನ್ನಾ ಮಾಡುವನು. ಆದರೆ ಯಾರಾದರೂ ಮರುಪಾವತಿ ಮಾಡುವ ಸಾಮರ್ಥ್ಯವಿದ್ದೂ ಮರುಪಾವತಿ ಮಾಡದಿದ್ದರೆ ಹಾಗೂ ಭೂಲೋಕದಲ್ಲಿ ಸಾಲ ಪಡೆದವನಿಂದ ಅದನ್ನು ಮನ್ನಾ ಮಾಡಿಸದಿದ್ದರೆ ಪರಲೋಕದಲ್ಲಿ ಅವನು ತೀವ್ರ ಸಂಕಷ್ಟದಲ್ಲಿ ಸಿಲುಕಬೇಕಾದೀತು.

[ತರ್ಗೀಬ್]

ರೈತನ ದಾನ

(201) قَالَ رَسُولُ اللّٰهِ صَلَّى اللّٰهُ عَلَيْهِ وَسَلَّمَ مَا مِنْ مُسْلِمٍ يَزْرَعُ زَرْعًا
أَوْ يَغْرِسُ غَرْسًا فَيَأْكُلُ مِنْهُ طَيْرٌ أَوْ إِنْسَانٌ أَوْ بَهِيمَةٌ إِلَّا كَانَ لَهُ بِهِ صَدَقَةٌ

(مسلم — انس رض)

ಪ್ರವಾದಿ(ಸ) ಹೇಳಿದರು: ಒಬ್ಬ ಮುಸ್ಲಿಮನು ಬೇಸಾಯ ಮಾಡಿದರೆ ಅಥವಾ ತೋಟ ಬೆಳೆಸಿದರೆ ಅವನ ಹೊಲಗಳ ಧಾನ್ಯವನ್ನು ಮತ್ತು ತೋಟಗಳ ಫಲಗಳನ್ನು ಹಕ್ಕಿಗಳು, ಮಾನವರು ಅಥವಾ ಪ್ರಾಣಿಗಳು ತಿಂದರೆ ಅದು ಅವನ ಪಾಲಿಗೆ ಸದಕಾ (ದಾನ) ಆಗುತ್ತದೆ. (ಅರ್ಥಾತ್ ತೋಟಗಾರನಿಗೆ ಅದರ ಪುಣ್ಯ ಸಿಗುತ್ತದೆ)

[ಮುಸ್ಲಿಮ್- ವರದಿ: ಹ. ಅನಸ್(ರ)]

❖ ❖ ❖

ವಿವಾಹ

ವಿವಾಹವು ಪುರುಷ ಮತ್ತು ಸ್ತ್ರೀಯ ನಡುವೆ ಜೀವನ ಪರ್ಯಂತ ಒಟ್ಟಿಗೆ ಇರುವಂತಹ ಮಹತ್ವದ ಒಡಂಬಡಿಕೆಯಾಗಿದೆ. ಆದುದರಿಂದ ವಿವಾಹ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ಈ ಶೀರ್ಷಿಕೆಯಡಿಯಲ್ಲಿ ತರಲಾಗಿದೆ.

ವಿವಾಹದ ಪ್ರೇರಣೆ

(202) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ يَا مَعْشَرَ الشَّبَابِ مَنِ اسْتَطَاعَ مِنْكُمُ الْبَاءَةَ فَلْيَتَزَوَّجْ، فَإِنَّهُ أَغَضُّ لِلْبَصَرِ وَأَحْصَنُ لِلْفَرْجِ، وَمَنْ لَمْ يَسْتَطِعْ فَعَلَيْهِ بِالصَّوْمِ، فَإِنَّهُ لَهُ وِجَاءٌ (بخاری ومسلم ـــــ ابن مسعودؓ)

ಪ್ರವಾದಿ(ಸ) ಹೇಳಿದರು: ಯುವಕರೇ! ನಿಮ್ಮಲ್ಲಿ ವಿವಾಹದ ಹೊಣೆಗಾರಿಕೆಗಳನ್ನು ವಹಿಸಲು ಸಾಧ್ಯವಿರುವವನು ವಿವಾಹ ಮಾಡಿಕೊಳ್ಳಬೇಕು. ಏಕೆಂದರೆ ವಿವಾಹವು ದೃಷ್ಟಿಗಳನ್ನು ಕೆಳಗಿರಿಸುತ್ತದೆ. ವಿಷಯಾಸಕ್ತಿಯನ್ನು ನಿಯಂತ್ರಿಸುತ್ತದೆ. ಇನ್ನು ವಿವಾಹದ ಹೊಣೆಗಾರಿಕೆಗಳನ್ನು ವಹಿಸಲು ಶಕ್ತಿಯಿಲ್ಲದವನು ಉಪವಾಸ ವ್ರತ ಆಚರಿಸಲಿ. ಏಕೆಂದರೆ ಉಪವಾಸ ವ್ರತವು ಲೈಂಗಿಕಾಸಕ್ತಿಯನ್ನು ನಿಗ್ರಹಿಸುವಲ್ಲಿ ಸಹಾಯಕವಾಗುತ್ತದೆ.

[ಬುಖಾರಿ, ಮುಸ್ಲಿಮ್- ವರದಿ: ಇಬ್ನು ಮಸ್‌ಊದ್(ರ)]

ಟಿಪ್ಪಣಿ: ದೃಷ್ಟಿಗಳನ್ನು ಕೆಳಗಿರಿಸುತ್ತದೆಯೆಂದರೆ ವಿವಾಹವು ದೃಷ್ಟಿಯ ಉಡಾಳತೆಯನ್ನು ತಡೆಯುತ್ತದೆ. ಸಲ್ಲದ ಕಡೆಗಳಿಗೆ ದೃಷ್ಟಿ ಬೀಳುವುದರಿಂದ ತಡೆಯುತ್ತದೆ.

ಧರ್ಮನಿಷ್ಠಳನ್ನು ಆರಿಸಿರಿ

(203) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ تُنْكَحُ الْمَرْأَةُ لِأَرْبَعٍ لِمَالِهَا وَلِحَسَبِهَا وَلِجَمَالِهَا وَلِدِيْنِهَا، فَاظْفَرْ بِذَاتِ الدِّيْنِ تَرِبَتْ يَدَاكَ (بخاری ومسلم ـــ ابوہریرہؓ)

ಪ್ರವಾದಿ(ಸ) ಹೇಳಿದರು: ಸ್ತ್ರೀಯನ್ನು ನಾಲ್ಕು ವಿಷಯಗಳಿಗಾಗಿ ವಿವಾಹ ಮಾಡಲಾಗುತ್ತದೆ. ಆಕೆಯ ಸೊತ್ತಿಗಾಗಿ, ಆಕೆಯ ಕುಲ ಮಹಿಮೆಗಾಗಿ, ಆಕೆಯ ಸೌಂದರ್ಯಕ್ಕಾಗಿ ಮತ್ತು ಆಕೆಯ

ಧರ್ಮನಿಷ್ಠೆಗಾಗಿ. ನೀವು ಧರ್ಮನಿಷ್ಠೆಯುಳ್ಳ ಸ್ತ್ರೀಯನ್ನು ವಿವಾಹವಾಗಿರಿ. ನಿಮಗೆ ಒಳಿತಾಗಲಿ.

[ಬುಖಾರಿ, ಮುಸ್ಲಿಮ್: ಅಬೂ ಹುರೈರಾ(ರ)]

ಟಿಪ್ಪಣಿ: ಪ್ರವಾದಿ(ಸ) ಮುಸ್ಲಿಮ್ ಸಮುದಾಯದ ಯುವಕರಿಗೆ, ವಿವಾಹದ ವಿಷಯದಲ್ಲಿ ಪರಿಗಣಿಸಲಿಕ್ಕಿರುವ ನಿಜವಾದ ವಸ್ತು ಸ್ತ್ರೀಯ ಧರ್ಮನಿಷ್ಠೆಯಾಗಿದೆಯೆಂದು ಉಪದೇಶಿಸಿದ್ದಾರೆ. ಪ್ರಸ್ತುತ ನಾಲ್ಕೂ ಗುಣಗಳು ಒಬ್ಬ ಸ್ತ್ರೀಯಲ್ಲಿ ಮೇಳೈಸಿದರೆ ಅದು ಬಹಳ ಉತ್ತಮವೆ. ಆದರೆ ಧರ್ಮನಿಷ್ಠೆಯನ್ನು ಕಡೆಗಣಿಸಿ ಕೇವಲ ಹಣ ಮತ್ತು ಸೌಂದರ್ಯವನ್ನು ನೋಡಿ ವಿವಾಹವಾಗುವುದು ಮುಸ್ಲಿಮನ ಮಟ್ಟಿಗೆ ಉಚಿತವಲ್ಲ.

---

(204) إِنَّ النَّبِيَّ صَلَّى اللّٰهُ عَلَيْهِ وَسَلَّمَ قَالَ لَا تَزَوَّجُوا النِّسَاءَ لِحُسْنِهِنَّ، فَعَسٰى حُسْنُهُنَّ أَنْ يُرْدِيَهُنَّ، وَلَا تَزَوَّجُوهُنَّ لِأَمْوَالِهِنَّ، فَعَسٰى أَمْوَالُهُنَّ أَنْ يُطْغِيَهُنَّ، وَلٰكِنْ تَزَوَّجُوهُنَّ عَلَى الدِّيْنِ وَلَأَمَةٌ سَوْدَاءُ ذَاتُ دِيْنٍ أَفْضَلُ (المنتقى ـ عبد الله بن عمرو بن عاص)

ಪ್ರವಾದಿ(ಸ) ಹೇಳಿದರು: ಸ್ತ್ರೀಯರನ್ನು ಅವರ ಬಾಹ್ಯ ಸೌಂದರ್ಯದ ಕಾರಣದಿಂದಾಗಿ ವಿವಾಹವಾಗದಿರಿ. ಅವರ ಸೌಂದರ್ಯವು ಅವರನ್ನು ಹಾಳುಮಾಡಿ ಬಿಡಲೂಬಹುದು. (ಸೌಂದರ್ಯದ ದರ್ಪದಿಂದ ಅವರು ಉತ್ತಮ ಪತ್ನಿಯರಾಗದಿರಬಹುದು) ಅವರ ಹಣದ ಕಾರಣದಿಂದಾಗಿ ಅವರೊಂದಿಗೆ ವಿವಾಹವಾಗದಿರಿ. ಯಾಕೆಂದರೆ ಅವರ ಹಣವು ಅವರನ್ನು ಬಂಡುಕೋರರಾಗಿಯೂ ಅನಿಯಂತ್ರಿತರಾಗಿಯೂ ಮಾಡಬಹುದು. ಬದಲಾಗಿ ಅವರ ಧರ್ಮನಿಷ್ಠೆಯನ್ನು ನೋಡಿ ವಿವಾಹವಾಗಿರಿ. ಧರ್ಮನಿಷ್ಠೆಯುಳ್ಳ ಕರಿವರ್ಣದ ದಾಸಿಯು (ಗೌರವರ್ಣದ ಕುಲೀನ ಸ್ತ್ರೀಗಿಂತ) ಉತ್ತಮಳು.

[ಅಲ್ ಮುಂತಕಾ- ವರದಿ: ಅಬ್ದುಲ್ಲಾ ಬಿನ್ ಅಮ್ರ್ ಬಿನ್ ಆಸ್(ರ)]

ಧರ್ಮನಿಷ್ಠರಾದ ಪುರುಷರನ್ನೇ ಆರಿಸಿರಿ

(205) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ إِذَا خَطَبَ إِلَيْكُمْ مَنْ تَرْضَوْنَ دِيْنَهُ وَخُلُقَهُ فَزَوِّجُوْهُ، إِنْ لَا تَفْعَلُوْهُ تَكُنْ فِتْنَةٌ فِي الْأَرْضِ وَفَسَادٌ كَبِيْرٌ (ترمذی)

ಪ್ರವಾದಿ(ಸ) ಹೇಳಿದರು: ನೀವು ಧರ್ಮನಿಷ್ಠ ಹಾಗೂ ಉತ್ತಮ ಗುಣ ನಡತೆಯವನೆಂದು ಭಾವಿಸುವ ಒಬ್ಬ ವ್ಯಕ್ತಿ ನಿಮ್ಮ ಬಳಿಗೆ ವಿವಾಹದ ಪ್ರಸ್ತಾಪ ಮಾಡಲು ಬಂದರೆ

ಅವನೊಂದಿಗೆ ಮದುವೆ ಮಾಡಿಸಿರಿ. ನೀವು ಹಾಗೆ ಮಾಡದಿದ್ದರೆ ಮುಸ್ಲಿಮ್ ಸಮಾಜವು ಕ್ಷೋಭೆ ಮತ್ತು ಗೊಂದಲಕ್ಕೆ ಗುರಿಯಾಗುವುದು. (ತನ್ನ ಪ್ರವಾದಿಯ(ಸ) ಮಾತನ್ನು ಕೇಳದ ಕಾರಣ ಮುಸ್ಲಿಮ್ ಸಮಾಜವು ಎಂತಹ ಗೊಂದಲಕ್ಕೆ ಸಿಲುಕಿದೆಯೆಂಬುದನ್ನು ನೋಡಿಕೊಳ್ಳಿರಿ)

[ತಿರ್ಮಿದಿ]

ನಿಕಾಹ್‌ನ ಖುತ್ಬಾ (ಪ್ರವಚನ)

(206) عَنِ ابْنِ مَسْعُوْدٍ قَالَ عَلَّمَنَا رَسُوْلُ اللّٰهِ صَلَّى اللّٰهُ عَلَيْهِ وَسَلَّمَ التَّشَهُّدَ
فِي الصَّلٰوةِ وَالتَّشَهُّدَ فِي الْحَاجَةِ وَذَكَرَ تَشَهُّدَ الصَّلٰوةِ، قَالَ وَالتَّشَهُّدُ فِي الْحَاجَةِ اَنَّ
الْحَمْدَ لِلّٰهِ نَسْتَعِيْنُهٗ وَنَسْتَغْفِرُهٗ وَنَعُوْذُ بِاللّٰهِ مِنْ شُرُوْرِ اَنْفُسِنَا مَنْ يَّهْدِهِ اللّٰهُ فَلَا مُضِلَّ لَهٗ
وَمَنْ يُّضْلِلْ فَلَا هَادِيَ لَهٗ، وَاَشْهَدُ اَنْ لَّا اِلٰهَ اِلَّا اللّٰهُ وَاَشْهَدُ اَنَّ مُحَمَّدًا عَبْدُهٗ وَ
رَسُوْلُهٗ، قَالَ وَيَقْرَءُ ثَلَاثَ آيَاتٍ ــ فَفَسَّرَهَا سُفْيَانُ الثَّوْرِيُّ ــ اِتَّقُوا اللّٰهَ حَقَّ
تُقَاتِهٖ وَلَا تَمُوْتُنَّ اِلَّا وَاَنْتُمْ مُّسْلِمُوْنَ، اِتَّقُوا اللّٰهَ الَّذِيْ تَسَآءَلُوْنَ بِهٖ وَالْاَرْحَامَ اِنَّ
اللّٰهَ كَانَ عَلَيْكُمْ رَقِيْبًا، اِتَّقُوا اللّٰهَ وَقُوْلُوْا قَوْلًا سَدِيْدًا (ترمذی)

ಇಬ್ನು ಮಸ್‌ವೂದ್(ರ) ಹೇಳುತ್ತಾರೆ- ಪ್ರವಾದಿಯವರು(ಸ) ನಮಗೆ ನಮಾಝ್‌ನಲ್ಲಿ ಪಠಿಸುವ 'ತಶಹ್ಹುದ್' ಕಲಿಸಿದರು ಮತ್ತು ನಿಕಾಹ್‌ನ ಖುತ್ಬಾವನ್ನೂ ಕಲಿಸಿದರು. ಅವರು 'ತಶಹ್ಹುದ್' ಪಠಿಸಿದ ನಂತರ ನಿಕಾಹ್‌ನ ಖುತ್ಬಾವನ್ನು ಓದಿದರು. ಅದರ ಅನುವಾದ ಹೀಗಿದೆ:

ಸರ್ವಸ್ತುತಿಯೂ ಕೃತಜ್ಞತೆಗಳೂ ಅಲ್ಲಾಹನಿಗೆ ಮೀಸಲು. ನಾವು ಅವನಿಂದ ಮಾತ್ರ ಸಹಾಯ ಯಾಚಿಸುತ್ತೇವೆ. ಅವನಿಂದ ಮಾತ್ರ ನಮ್ಮ ಪಾಪಗಳಿಗೆ ಕ್ಷಮೆ ಯಾಚಿಸುತ್ತೇವೆ. ದೇಹೇಚ್ಛೆಗಳ ಕಿರುಕುಳದಿಂದ ನಾವು ಅಲ್ಲಾಹನ ಅಭಯವು ಯಾಚಿಸುತ್ತೇವೆ. ಯಾರಿಗೆ ಅಲ್ಲಾಹನು ಸನ್ಮಾರ್ಗ ದರ್ಶನ ಮಾಡುತ್ತಾನೋ ಅವನನ್ನು ಪಥಭ್ರಷ್ಟಗೊಳಿಸುವವರು ಯಾರೂ ಇಲ್ಲ. (ಅವನು ಸನ್ಮಾರ್ಗವನ್ನು ಅಪೇಕ್ಷಿಸುವವರಿಗೆ ಮಾತ್ರ ಮಾರ್ಗದರ್ಶನ ಮಾಡುತ್ತಾನೆ) ಅವನು ಯಾರನ್ನಾದರೂ ಪಥಭ್ರಷ್ಟಗೊಳಿಸಿದರೆ ಅವನಿಗೆ ಸನ್ಮಾರ್ಗ ತೋರಿಸುವವರು ಯಾರೂ ಇಲ್ಲ. (ಪಥಭ್ರಷ್ಟತೆಯನ್ನು ನೆಚ್ಚಿಕೊಳ್ಳುವವರನ್ನು ಮಾತ್ರ ಅವನು ಪಥಭ್ರಷ್ಟಗೊಳಿಸುತ್ತಾನೆ) ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲವೆಂದು ನಾನು ಸಾಕ್ಷ್ಯ ವಹಿಸುತ್ತೇನೆ ಮತ್ತು ಮುಹಮ್ಮದ್(ಸ) ಅಲ್ಲಾಹನ ದಾಸ

ಮತ್ತು ಸಂದೇಶವಾಹಕರೆಂದು ನಾನು ಸಾಕ್ಷ್ಯವಹಿಸುತ್ತೇನೆ. ಅನಂತರ ಮೂರು ಆಯತ್‌ಗಳನ್ನು ಪಠಿಸುತ್ತಿದ್ದರು. ಸುಫ್ಯಾನ್ ಸೂರಿಯವರ ವ್ಯಾಖ್ಯಾನ ಪ್ರಕಾರ ಅವು ಹೀಗಿವೆ,

ಮೊದಲನೆಯದು, "ಓ ಸತ್ಯವಿಶ್ವಾಸಿಗಳೇ! ಅಲ್ಲಾಹನನ್ನು ಭಯಪಡಬೇಕಾದ ರೀತಿಯಲ್ಲಿ ಭಯಪಡಿರಿ. ನೀವು ಮುಸ್ಲಿಮರಾಗಿರುವ ಸ್ಥಿತಿಯಲ್ಲಲ್ಲದೆ ನಿಮಗೆ ಮರಣ ಬಾರದಿರಲಿ."

(ಆಲಿ ಇಮ್ರಾನ್: 102)

ಎರಡನೆಯದು, "ಜನರೇ! ನೀವು ನಿಮ್ಮ ಪಾಲಕ ಪ್ರಭುವನ್ನು ಭಯಪಡಿರಿ. ಅವನು ನಿಮ್ಮನ್ನು ಒಂದು ಜೀವದಿಂದ ಸೃಷ್ಟಿಸಿದನು. ಅದೇ ಜೀವದಿಂದ ಅದರ ಜೋಡಿಯನ್ನು ಉಂಟು ಮಾಡಿದನು ಮತ್ತು ಅವೆರಡರಿಂದ ಅನೇಕಾನೇಕ ಸ್ತ್ರೀ- ಪುರುಷರನ್ನು ಲೋಕದಲ್ಲಿ ಹಬ್ಬಿಸಿದನು. ನೀವು ಯಾರ ಹೆಸರೆತ್ತಿ ಪರಸ್ಪರ ಹಕ್ಕು ಬಾಧ್ಯತೆಗಳನ್ನು ಹೇಳುತ್ತೀರೋ ಆ ಅಲ್ಲಾಹನನ್ನು ಭಯಪಡಿರಿ. ಕುಟುಂಬ ಸಂಬಂಧಗಳನ್ನು ಕೆಡಿಸಬೇಡಿರಿ. ಅಲ್ಲಾಹನು ನಿಮ್ಮ ಮೇಲ್ನೋಟ ವಹಿಸುತ್ತಿರುವನೆಂಬುದನ್ನು ಚೆನ್ನಾಗಿ ಅರಿತುಕೊಳ್ಳಿರಿ." (ಅನ್ನಿಸಾ: 1)

ಮೂರನೆಯದು, "ಸತ್ಯ ವಿಶ್ವಾಸಿಗಳೇ! ಅಲ್ಲಾಹನನ್ನು ಭಯಪಡಿರಿ ಮತ್ತು ಸರಿಯಾದ ಮಾತನ್ನೇ ಆಡಿರಿ. ಅಲ್ಲಾಹ್ ನಿಮ್ಮ ಕರ್ಮಗಳನ್ನು ಸರಿಪಡಿಸುವನು ಮತ್ತು ನಿಮ್ಮ ಅಪರಾಧಗಳನ್ನು ಕ್ಷಮಿಸುವನು. ಯಾರು ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಅನುಸರಣೆ ಮಾಡಿದನೋ ಅವನು ಮಹಾ ಯಶಸ್ಸನ್ನು ಪಡೆದನು." (ಅಲ್ ಅಹ್‌ಝಾಬ್: 70-71)

[ತಿರ್ಮಿದಿ]

ಈ ಶಾಶ್ವತ ಒಡಂಬಡಿಕೆಯ(ವಿವಾಹ) ಸಂದರ್ಭಕ್ಕಾಗಿ ಇಡೀ ಕುರ್‌ಆನ್‌ನಿಂದ ಈ ಮೂರು ಆಯತ್‌ಗಳನ್ನು ಆರಿಸಿರುವುದರಲ್ಲಿ ಪ್ರವಾದಿಯವರ(ಸ) ಅತ್ಯುನ್ನತ ಮಟ್ಟದ ಚಾಣಾಕ್ಷ್ಮೆಯನ್ನು ಕಾಣಬಹುದು. ಈ ಆಯತ್‌ಗಳ ಅನುವಾದವನ್ನು ಗಮನಿಸಿರಿ. ಅದರಲ್ಲಿ ವಿವಾಹವಾಗಲಿರುವ ಮುಸ್ಲಿಮ್ ಜನ ಸಾಮಾನ್ಯರಿಗೆ ಉಪದೇಶವಿದೆ. ಪುರುಷರು ತಮ್ಮ ಪತ್ನಿಯರ ಹಕ್ಕುಗಳನ್ನು ಅರಿಯಬೇಕು ಮತ್ತು ಸ್ತ್ರೀಯರು ತಮ್ಮ ಪತಿಯಂದಿರ ಹಕ್ಕುಗಳನ್ನು ಗುರುತಿಸಬೇಕು. ವಿಶೇಷವಾಗಿ ಅವರಿಬ್ಬರಿಗೂ ಜೀವನಾದ್ಯಂತ ಸಹಬಾಳ್ವೆ ನಡೆಸುವೆವೆಂಬ ತಮ್ಮ ಕರಾರನ್ನು ಉಲ್ಲಂಘಿಸಬಾರದು. ನಾನು ಸ್ವೀಕರಿಸಿದೆನೆಂಬ ವಾಗ್ದಾನವನ್ನು ಸದಾ ನೆನಪಿಟ್ಟುಕೊಳ್ಳಬೇಕು ಮತ್ತು ಎರಡು ಕುಟುಂಬಗಳ ಮಧ್ಯೆ ಉಂಟಾಗುತ್ತಿರುವ ಈ ಹೊಸ ಸಂಬಂಧದ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ಗಮನಿಸಬೇಕು ಎಂದು ಎಚ್ಚರಿಸಲಾಗಿದೆ.

ಮಹ್ರ್ ಕಡ್ಡಾಯ

(207) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اَحَقُّ الشُّرُوْطِ اَنْ تُوْفُوْا بِهٖ مَا اسْتَحْلَلْتُمْ بِهِ الْفُرُوْجَ (بخاری ومسلم ـــــ عقبہ بن عامر رض)

ಪ್ರವಾದಿ(ಸ) ಹೇಳಿದರು- ಶರ್ತಗಳ ಪೈಕಿ ಪೂರೈಸಲು ಹೆಚ್ಚು ಅರ್ಹವಾದುದು ನೀವು ನಿಮ್ಮ ಪತ್ನಿಯರ ಮಾನದ ಒಡೆಯರಾಗುವಂತಹ ಶರ್ತವಾಗಿದೆ. (ಅರ್ಥಾತ್ ಮಹ್ರ್ ಪಾವತಿಸಬೇಕಾದುದು ಕಡ್ಡಾಯ. ಇದು ನಿಮ್ಮ ಮೇಲೆ ನಿಮ್ಮ ಪತ್ನಿಯರ ಸಾಲವಾಗಿದ್ದು ಅದನ್ನು ಸಂದಾಯ ಮಾಡಲೇ ಬೇಕಾಗಿದೆ.)

[ಬುಖಾರಿ, ಮುಸ್ಲಿಮ್: ವರದಿ: ಉಕ್ಬಾ ಬಿನ್ ಆಮಿರ್(ರ)]

ಸಾಮಾನ್ಯ ಮಹ್ರ್‌ನ ಮಹತ್ವ

(208) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ خَيْرُ الصَّدَاقِ اَيْسَرُهٗ

(المنتقی ـــــ عقبہ بن عامر رض)

ಪ್ರವಾದಿ(ಸ) ಹೇಳಿದರು- ಸಣ್ಣ ಪ್ರಮಾಣದ, ಸುಲಭದಲ್ಲಿ ಪಾವತಿ ಮಾಡಬಲ್ಲಂತಹ ಮಹ್ರ್ ಅತ್ಯುತ್ತಮ ಮಹ್ರ್ ಆಗಿದೆ. *[ಅಲ್ ಮುಂತಕಾ- ವರದಿ: ಉಕ್ಬಾ ಬಿನ್ ಆಮಿರ್(ರ)]*

---

(209) عَنْ عُمَرَ بْنِ الْخَطَّابِ قَالَ اَلَا لَا تُغَالُوْا صَدُقَةَ النِّسَاءِ، فَاِنَّهَا لَوْ كَانَتْ مَكْرُمَةً فِي الدُّنْيَا وَتَقْوٰى عِنْدَ اللّٰهِ لَكَانَ اَوْلَاكُمْ بِهَا نَبِيُّ اللّٰهِ صَلَّى اللّٰهُ عَلَيْهِ وَسَلَّمَ، مَا عَلِمْتُ رَسُوْلَ اللّٰهِ نَكَحَ شَيْئًا مِنْ نِسَائِهٖ وَلَا اَنْكَحَ شَيْئًا مِنْ بَنَاتِهٖ عَلٰى اَكْثَرَ مِنِ اثْنَتَيْ عَشَرَةَ اُوْقِيَّةً (بخاری)

ಹ. ಉಮರ್ ಬಿನ್ ಖತ್ತಾಬ್(ರ) ಹೇಳಿದರು: ಕೇಳಿರಿ! ಸ್ತ್ರೀಯರಿಗೆ ದುಬಾರಿ ಮಹ್ರ್ ನಿಶ್ಚಯಿಸಬೇಡಿರಿ. ಯಾಕೆಂದರೆ ಇದು ಲೋಕದಲ್ಲಿ ಗೌರವಾರ್ಹ ವಸ್ತುವಾಗಿರುತ್ತಿದ್ದರೆ

ಹಾಗೂ ಅಲ್ಲಾಹನ ದೃಷ್ಟಿಯಲ್ಲಿ ಧರ್ಮನಿಷ್ಠೆಯ ಕಾರ್ಯವಾಗಿರುತ್ತಿದ್ದರೆ ಅದಕ್ಕೆ ಅತಿ ಹೆಚ್ಚು ಅರ್ಹರು ಪ್ರವಾದಿ(ಸ) ಆಗಿರುತ್ತಿದ್ದರು. ಪ್ರವಾದಿ(ಸ) ಅವರು 12 ಊಕಿಯ (126 ತೊಲೆ ಬೆಳ್ಳಿ)ಕ್ಕಿಂತ ಹೆಚ್ಚು 'ಮಹ್ರ್' ಕೊಟ್ಟು ವಿವಾಹ ಮಾಡಿದ್ದಾಗಲಿ, ತಮ್ಮ ಪುತ್ರಿಯರ ಪೈಕಿ ಯಾರದಾದರೂ ವಿವಾಹ ಮಾಡಿದ್ದಾಗಲಿ ನನಗೆ ತಿಳಿದಿಲ್ಲ. *[ಬುಖಾರಿ]*

ಟಿಪ್ಪಣಿ: ಜನರು ಕುಲ ಮಹಿಮೆಯ ದರ್ಪದಿಂದ ದುಬಾರಿ ಮೊತ್ತದ 'ಮಹ್ರ್' ನಿಶ್ಚಯಿಸುವುದನ್ನು ಹ. ಉಮರ್(ರ) ತಡೆಯಬಯಸಿದ್ದರು. ಯಾಕೆಂದರೆ ಅದನ್ನು ಪಾವತಿಸುವುದು ಅವರ ಸಾಮರ್ಥ್ಯಕ್ಕೆ ಮೀರಿದ ವಿಷಯವಾಗಿದ್ದು ಅದು ಅವರ ಕೊರಳಿಗೆ ಉರುಳಾಗುತ್ತಿತ್ತು.

ಒಂದು 'ಊಕಿಯ' ಹತ್ತೂವರೆ ತೊಲೆ ಬೆಳ್ಳಿಗೆ ಸಮಾನವಾಗಿದೆ. ಪ್ರವಾದಿಯವರು(ಸ) 126 ತೊಲೆಗಿಂತ ಹೆಚ್ಚು ಮಹ್ರ್ ಕೊಟ್ಟು ತಾವು ವಿವಾಹ ಆದದ್ದಾಗಲೀ ತಮ್ಮ ಪುತ್ರಿಯರಿಗೆ ಅದನ್ನು ನಿಶ್ಚಯಿಸಿದ್ದಾಗಲಿ ಇಲ್ಲ. ಆದರೆ ಹ. ಉಮ್ಮು ಹಬೀಬರ(ರ) ಮಹ್ರ್ ಅದಕ್ಕಿಂತ ಹೆಚ್ಚಾಗಿತ್ತು. ಅದನ್ನು ಇತಿಯೋಪಿಯಾದ ದೊರೆ ನಜ್ಜಾಶಿ ಅವರು ನಿಶ್ಚಯಿಸಿದ್ದು ಅವರೇ ಅದನ್ನು ತಮ್ಮ ವತಿಯಿಂದ ಪಾವತಿಸಿದ್ದರು. 126 ತೊಲೆ ಬೆಳ್ಳಿಗೆ ಸಮಾನವಾದ ಮೊತ್ತವನ್ನು 'ಮಹ್ರ್' ಆಗಿ ನಿಶ್ಚಯಿಸುವುದು ಪ್ರವಾದಿ(ಸ) ಅವರ ಕ್ರಮವಾಗಿದೆ.

ಅತಿ ಕೆಟ್ಟ ವಲೀಮ

(210) قَالَ رَسُوْلُ اللهِ صَلَّى اللهُ عَلَيْهِ وَسَلَّمَ شَرُّ الطَّعَامِ طَعَامُ الْوَلِيْمَةِ يُدْعٰى لَهَا الْاَغْنِيَاءُ وَيُتْرَكُ الْفُقَرَاءُ، وَمَنْ تَرَكَ الدَّعْوَةَ فَقَدْ عَصَى اللهَ وَرَسُوْلَهٗ

(بخاری ومسلم — ابوہریرہ رضی)

ಪ್ರವಾದಿ(ಸ) ಹೇಳಿದರು: ಅತ್ಯಂತ ಕೆಟ್ಟ ಊಟವು (ಬಡವರನ್ನು ನಿರ್ಲಕ್ಷಿಸಿ) ಕೇವಲ ಧನಿಕರನ್ನು ಕರೆದು ಉಣಿಸುವ ವಲೀಮದ ಊಟವಾಗಿದೆ. ವಲೀಮದ ಆಮಂತ್ರಣವನ್ನು ಯಾರು ತಿರಸ್ಕರಿಸಿದನೋ ಅವನು ಅಲ್ಲಾಹ್ ಮತ್ತು ಪ್ರವಾದಿವರ್ಯರ(ಸ) ಆಜ್ಞೋಲ್ಲಂಘನೆ ಮಾಡಿದನು. *[ಬುಖಾರಿ, ಮುಸ್ಲಿಮ್- ವರದಿ: ಹ. ಅಬೂ ಹುರೈರಾ(ರ)]*

ಟಿಪ್ಪಣಿ: ವಲೀಮ ಸುನ್ನತ್ (ಪ್ರವಾದಿಚರ್ಯೆ) ಆಗಿದೆಯೆಂದು ಈ ಹದೀಸ್‌ನಿಂದ ತಿಳಿದು ಬರುತ್ತದೆ. ಈ ಔತಣಕ್ಕೆ ಬಡವರನ್ನು ವಿಶೇಷವಾಗಿ ಕರೆಯಬೇಕು. ಇನ್ನು, ವಲೀಮದ ಆಮಂತ್ರಣ ವನ್ನು ವಿನಾಕಾರಣ ತಿರಸ್ಕರಿಸುವುದು ಸುನ್ನತ್‌ಗೆ ವಿರುದ್ಧವಾಗಿದೆ. ಇಸ್ಲಾಮ್ ಯಾವುದೇ ಸಂದರ್ಭದಲ್ಲಿ ಬಡವರನ್ನು ಮರೆಯುವುದಿಲ್ಲ. ವಿವಾಹದ ಔತಣ ಕೂಟಕ್ಕೆ ಸಮಾಜದ ಬಡವರನ್ನು ಆಹ್ವಾನಿಸಲು ಮರೆಯಬಾರದೆಂದು ಇಸ್ಲಾಮ್ ತನ್ನ ಅನುಯಾಯಿಗಳಿಗೆ ಆದೇಶಿಸಿದೆ.

ಫಾಸಿಕ್‌ನ ಆಮಂತ್ರಣ

(211) نَهٰى رَسُوْلُ اللّٰهِ صَلَّى اللّٰهُ عَلَيْهِ وَسَلَّمَ عَنْ اِجَابَةِ طَعَامِ الْفَاسِقِيْنَ

(مشکوٰۃ ــــ عمران بن حصینؓ)

ಪ್ರವಾದಿಯವರು(ಸ) ಫಾಸಿಕ್‌ಗಳ (ಕರ್ಮಭ್ರಷ್ಟ) ಆಮಂತ್ರಣವನ್ನು ಸ್ವೀಕರಿಸುವುದರಿಂದ ತಡೆದಿದ್ದಾರೆ. *[ಮಿಶ್ಕಾತ್- ವರದಿ: ಇಮ್ರಾನ್ ಬಿನ್ ಹಸೀನ್(ರ)]*

ಟಿಪ್ಪಣಿ: ಅಲ್ಲಾಹನ ಮತ್ತು ಪ್ರವಾದಿಯವರ(ಸ) ಆಜ್ಞೆಗಳನ್ನು ಉದ್ಧಟತನದಿಂದ ಉಲ್ಲಂಘಿಸುವವನನ್ನು 'ಫಾಸಿಕ್' ಎನ್ನುತ್ತಾರೆ. ಅಂತಹ ವ್ಯಕ್ತಿಯ ಆಮಂತ್ರಣವನ್ನು ಸ್ವೀಕರಿಸುವುದೆಂದರೆ ಧರ್ಮವನ್ನು ನಿಂದಿಸುವವನನ್ನು ಗೌರವಿಸಿದಂತೆ.

ವಂಚನೆಯಲ್ಲಿ ಶೈತಾನನಿಗೆ ಆಕರ್ಷಣೆ

(212) قَالَ النَّبِيُّ صَلَّى اللّٰهُ عَلَيْهِ وَسَلَّمَ اِنَّ اللّٰهَ عَزَّ وَجَلَّ يَقُوْلُ اَنَا ثَالِثُ الشَّرِيْكَيْنِ مَا لَمْ يَخُنْ اَحَدُهُمَا صَاحِبَهٗ، فَاِذَا خَانَهٗ خَرَجْتُ مِنْ بَيْنِهِمَا (وَفِيْ رِوَايَةٍ) وَجَاءَ الشَّيْطَانُ

(ابوداؤد ــــ ابوہریرہؓ)

ಪ್ರವಾದಿ(ಸ) ಹೇಳಿದರು- ಯಾವುದೇ ವ್ಯಾಪಾರದ ಇಬ್ಬರು ಪಾಲುದಾರರು ಪರಸ್ಪರ ವಂಚನೆ ಮತ್ತು ಅಪ್ರಾಮಾಣಿಕತೆ ತೋರದಿರುವ ತನಕ ನಾನು ಅವರೊಂದಿಗಿರುತ್ತೇನೆಂದು ಅಲ್ಲಾಹ್ ಹೇಳುತ್ತಾನೆ. (ಅಂದರೆ ವ್ಯಾಪಾರದಲ್ಲಿ ಸಮೃದ್ಧಿ ಮತ್ತು ಪ್ರಗತಿಯುಂಟಾಗುತ್ತದೆ.) ಆದರೆ ಅವರ ಪೈಕಿ ಒಬ್ಬನು ಇನ್ನೊಬ್ಬ ಪಾಲುದಾರನನ್ನು ವಂಚಿಸಿದರೆ ನಾನು ಅವರಿಂದ ದೂರ ಸರಿಯುತ್ತೇನೆ ಮತ್ತು ಶೈತಾನನು ಅಲ್ಲಿಗೆ ಬರುತ್ತಾನೆ (ಅರ್ಥಾತ್ ನಾನು ನನ್ನ ಅನುಗ್ರಹ ಮತ್ತು ಸಹಾಯವನ್ನು ಹಿಂತೆಗೆದುಕೊಳ್ಳುತ್ತೇನೆ ಮತ್ತು ಶೈತಾನನು ಬಂದು ಅವರ ವ್ಯಾಪಾರವನ್ನು ವಿನಾಶದ ಹಾದಿಯಲ್ಲಿ ಹಾಕಿ ಬಿಡುತ್ತಾನೆ)

[ಅಬೂ ದಾವೂದ್- ವರದಿ: ಹ. ಅಬೂ ಹುರೈರಾ(ರ)]

ಸಂಪಾದನೆಯು ಇಬಾದತ್ ಆಗಿದೆ

(213) عَنْ كَعْبِ بْنِ عُجْرَةَ قَالَ مَرَّ عَلَى النَّبِيِّ صَلَّى اللهُ عَلَيْهِ وَسَلَّمَ رَجُلٌ فَرَءَى أَصْحَابُ
رَسُوْلِ اللهِ صَلَّى اللهُ عَلَيْهِ وَسَلَّمَ مِنْ جَلَدِهٖ وَنَشَاطِهٖ، فَقَالُوْا يَا رَسُوْلَ اللهِ لَوْ كَانَ
هٰذَا فِيْ سَبِيْلِ اللهِ، فَقَالَ رَسُوْلُ اللهِ صَلَّى اللهُ عَلَيْهِ وَسَلَّمَ إِنْ كَانَ خَرَجَ يَسْعٰى عَلٰى
وَلَدِهٖ صِغَارًا فَهُوَ فِيْ سَبِيْلِ اللهِ وَإِنْ كَانَ خَرَجَ يَسْعٰى عَلٰى وَالِدَيْهِ فَهُوَ فِيْ سَبِيْلِ اللهِ
وَإِنْ كَانَ خَرَجَ يَسْعٰى عَلٰى نَفْسِهٖ يُعِفُّهَا فَهُوَ فِيْ سَبِيْلِ اللهِ، وَإِنْ كَانَ خَرَجَ يَسْعٰى
رِيَاءً وَمُفَاخَرَةً فَهُوَ فِيْ سَبِيْلِ الشَّيْطَانِ (المنذری بحوالہ الطبرانی)

ಕಅಬ್ ಬಿನ್ ಉಜ್ರ(ರ) ಹೇಳುತ್ತಾರೆ- ಪ್ರವಾದಿಯವರ(ಸ) ಬಳಿಯಿಂದ ಓರ್ವ ವ್ಯಕ್ತಿ ಹಾದು ಹೋಗುತ್ತಿದ್ದನು. (ಅವನು ದುಡಿದು ಸಂಪಾದಿಸುವುದಕ್ಕಾಗಿ ಹೋಗುತ್ತಿದ್ದನು) ಪ್ರವಾದಿಯವರ(ಸ) ಬಳಿ ಕುಳಿತಿದ್ದವರು ಅವನ ಪರಿಶ್ರಮ ಮತ್ತು ಉತ್ಸಾಹವನ್ನು ಕಂಡು ಹೀಗೆಂದರು- ಪ್ರವಾದಿವರ್ಯರೇ! ಅವನ ಈ ಪರಿಶ್ರಮ ಮತ್ತು ಉತ್ಸಾಹವು ಅಲ್ಲಾಹನ ಮಾರ್ಗದಲ್ಲಾಗಿರುತ್ತಿದ್ದರೆ ಎಷ್ಟು ಚೆನ್ನಾಗಿತ್ತು! ಪ್ರವಾದಿ(ಸ) ಹೇಳಿದರು- ಅವನು ತನ್ನ ಸಣ್ಣ ಸಣ್ಣ ಮಕ್ಕಳ ಉದರ ಪೋಷಣೆಗಾಗಿ ಈ ಪರಿಶ್ರಮ ನಡೆಸುತ್ತಿರುವನೆಂದಾದರೆ ಅದು ಅಲ್ಲಾಹನ ಮಾರ್ಗದ ಪರಿಶ್ರಮವೆಂದೇ ಪರಿಗಣಿಸಲ್ಪಡುವುದು. ಅವನು ತನ್ನ ವಯೋವೃದ್ಧ ತಂದೆತಾಯಿಗಳ ಪೋಷಣೆಗಾಗಿ ಪರಿಶ್ರಮಿಸುತ್ತಿದ್ದರೆ ಅದೂ ಅಲ್ಲಾಹನ ಮಾರ್ಗದಲ್ಲೆಂದು ಪರಿಗಣಿಸಲ್ಪಡುವುದು. ಅವನು ಯಾರ ಮುಂದೆಯೂ ಕೈ ಚಾಚುವಂತಾಗಬಾರದೆಂಬ ಸಂಕಲ್ಪದಿಂದ ಸ್ವತಃ ತನಗಾಗಿ ಪರಿಶ್ರಮಿಸಿದರೆ ಅದೂ ಅಲ್ಲಾಹನ ಮಾರ್ಗದ್ದೆಂದು ಪರಿಗಣಿಸಲ್ಪಡುವುದು. ಆದರೆ ಅವನ ಉದ್ದೇಶವು ಜನರ ಮುಂದೆ ತನ್ನ ಆರ್ಥಿಕ ಸುಸ್ಥಿತಿಯನ್ನು ಮೆರೆಯಬೇಕೆಂದೋ ಜನರಿಗೆ ತನ್ನ ಶ್ರೀಮಂತಿಕೆಯನ್ನು ಮೆರೆಯಬೇಕೆಂದೋ ಆಗಿದ್ದರೆ ಅವನ ಈ ಎಲ್ಲ ಪರಿಶ್ರಮಗಳೂ ಶೈತಾನನ ಮಾರ್ಗದಲ್ಲಿ ಎಂದು ಪರಿಗಣಿಸಲ್ಪಡುವುದು.

[ಅಲ್‌ಮುಂದಿರಿ- ತಬ್ರಾನಿಯಿಂದ]

ಟಿಪ್ಪಣಿ: ಸಂಕಲ್ಪ ಶುದ್ಧಿಯು ಮಾನವನ ಇಡೀ ಜೀವನ ಮತ್ತು ಅವನ ಎಲ್ಲ ಕಾರ್ಯಗಳನ್ನೂ 'ಇಬಾದತ್' ಆಗಿ ಮಾಡುತ್ತದೆ. ಸಂಕಲ್ಪದ ದೋಷವು ಉತ್ತಮ ಕರ್ಮಗಳನ್ನೂ ಪಾಪವಾಗಿ ಮಾರ್ಪಡಿಸುತ್ತದೆ. ಇಸ್ಲಾಮ್ ಧರ್ಮನಿಷ್ಠೆ ಮತ್ತು ಇಬಾದತ್‌ನ ಎಷ್ಟು ವಿಶಾಲ ಕಲ್ಪನೆಯನ್ನು ಮೂಡಿಸುತ್ತದೆಂಬುದು ಈ ಹದೀಸ್‌ನಿಂದ ವ್ಯಕ್ತವಾಗುತ್ತದೆ.

ಸಂಪತ್ತು: ನೈಜ ದೃಷ್ಟಿಕೋನ

(214) عَنْ سُفْيَانَ الثَّوْرِيِّ قَالَ: كَانَ الْمَالُ فِيْمَا مَضٰى يُكْرَهُ، فَأَمَّا الْيَوْمَ فَهُوَ تُرْسُ الْمُؤْمِنِ، وَقَالَ لَوْلَا هٰذِهِ الدَّنَانِيْرُ لَتَمَنْدَلَ بِنَا هٰؤُلَاءِ الْمُلُوْكُ، وَقَالَ مَنْ كَانَ فِيْ يَدِهٖ مِنْ هٰذِهٖ شَيْئٌ فَلْيُصْلِحْهُ، فَإِنَّهٗ زَمَانٌ إِنِ احْتَاجَ كَانَ أَوَّلَ مَنْ يَبْذُلُ دِيْنَهٗ، وَقَالَ الْحَلَالُ لَا يَحْتَمِلُ السَّرَفَ (مشكوٰة)

ಸುಫ್‌ಯಾನ್ ಸೌರಿ(ರ) ಹೇಳುತ್ತಾರೆ- ನಮಗಿಂತ ಮುಂಚೆ- ಪ್ರವಾದಿವರ್ಯರ(ಸ) ಮತ್ತು ಖಲೀಫರುಗಳ ಕಾಲದಲ್ಲಿ- ಸಂಪತ್ತನ್ನು ಒಂದು ಅಪ್ರಿಯ ವಸ್ತುವೆಂದು ಪರಿಗಣಿಸ ಲಾಗುತ್ತಿತ್ತು. ಆದರೆ ನಮ್ಮ ಈ ಕಾಲದಲ್ಲಿ ಅದು ಮುಸ್ಲಿಮನ ಮಟ್ಟಿಗೆ ಗುರಾಣಿಯಾಗಿದೆ.

ನಮ್ಮ ಬಳಿ ಇಂದು ದಿರ್ಹಮ್ ಮತ್ತು ದೀನಾರ್ ಇಲ್ಲದಿರುತ್ತಿದ್ದರೆ ಈ ಅರಸರು ನಮ್ಮನ್ನು ತಮ್ಮ ಕಾಲಕಸವಾಗಿ ಮಾಡಿ ಬಿಡುತ್ತಿದ್ದರು. ಇಂದು ಯಾರ ಬಳಿ ಈ ದಿರ್ಹಮ್ ಮತ್ತು ದೀನಾರ್‌ಗಳಿವೆಯೋ ಅವನು ಅವುಗಳನ್ನು ಉತ್ತಮ ಸ್ಥಿತಿಯಲ್ಲಿಡಲಿ (ವ್ಯಾಪಾರ ಇತ್ಯಾದಿಗಳನ್ನು ಮಾಡಲಿ, ಸಂಪತ್ತನ್ನು ಹೆಚ್ಚಿಸಲಿ) ಏಕೆಂದರೆ ಇದು ಒಬ್ಬನು ಪರಾವಲಂಬಿಯಾಗುವ ಸ್ಥಿತಿ ಬಂದರೆ ಮೊಟ್ಟ ಮೊದಲು ತನ್ನ ಧರ್ಮವನ್ನು ಮಾರಿ ಬಿಡುವಂತಹ ಕಾಲವಾಗಿದೆ. ಹಲಾಲ್ ಸಂಪಾದನೆ ಯಲ್ಲಿ ದುಂದುವ್ಯಯವುಂಟಾಗುವುದಿಲ್ಲ. *[ಮಿಶ್ಕಾತ್]*

ಟಿಪ್ಪಣಿ: 'ಅರಸರು ಮತ್ತು ಧನಿಕರು ನಮ್ಮನ್ನು ತಮ್ಮ ಕಾಲಕಸವಾಗಿ ಮಾಡಿ ಬಿಡುತ್ತಿದ್ದರು' ಎಂದರೆ ನಮ್ಮ ಬಳಿ ಸಂಪತ್ತಿಲ್ಲದಿರುತ್ತಿದ್ದರೆ ನಾವು ಅವರ ಬಳಿಗೆ ಹೋಗಲು ನಿರ್ಬಂಧಿತರಾಗುತ್ತಿದ್ದೆವು. ಅವರು ನಮ್ಮನ್ನು ತಮ್ಮ ಕೆಟ್ಟ ಉದ್ದೇಶಗಳಿಗಾಗಿ ಉಪಯೋಗಿಸುತ್ತಿದ್ದರು. ಆದರೆ ನಮ್ಮ ಬಳಿ ಸಂಪತ್ತಿದೆ. ಆದುದರಿಂದ ನಾವು ಅವರಿಂದ ನಿರಪೇಕ್ಷರಾಗಿದ್ದೇವೆ. ಅದರಿಂದಾಗಿ ನಾವು ಅವರಿಂದ ಸುರಕ್ಷಿತರಾಗಿದ್ದೇವೆ.

ಪ್ರವಾದಿ(ಸ) ಮತ್ತು ಸಹಾಬಿಗಳ ಕಾಲದಲ್ಲಿ ಜನರ ವಿಶ್ವಾಸ ಸುದೃಢವಾಗಿತ್ತು. ಆದುದರಿಂದ ಅತ್ಯಂತ ಬಡತನದಲ್ಲೂ ಅವರು ಎಲ್ಲ ರೀತಿಯ ವಿಪತ್ತಿನಿಂದ ಪಾರಾದರು. ಇಂದಿನ ಜನರ ವಿಶ್ವಾಸವು ಸಾಮಾನ್ಯವಾಗಿ ದುರ್ಬಲವಾಗಿದೆ. ಆದುದರಿಂದ ಬಡತನದ ಅವಸ್ಥೆಯಲ್ಲಿ ಜನರು ತಮ್ಮ ಈಮಾನನ್ನು ಮಾರಿಬಿಡಲು ಸಿದ್ಧರಾಗುವರು. ಈ ದೃಷ್ಟಿಕೋನದಿಂದ ಹ. ಸುಫ್‌ಯಾನ್ ಸೌರಿ(ರ) ಉಪದೇಶ ಮಾಡುತ್ತಿದ್ದಾರೆಯೇ ಹೊರತು ಐಶಾರಾಮ ಮಾಡಬೇಕೆಂಬುದು ಅವರ ಇಂಗಿತವಾಗಿರಲಿಲ್ಲ.

ಸುಫ್‌ಯಾನ್ ಸೌರಿಯವರ(ರ) ಕೊನೆಯ ಮಾತಿನ ತಾತ್ಪರ್ಯವೇನೆಂದರೆ ಯಾರಾದರೂ ಒಳ್ಳೆಯ ಆಹಾರ ಸೇವಿಸಿದರೆ ಮತ್ತು ಒಳ್ಳೆಯ ಬಟ್ಟೆ ಧರಿಸಿದರೆ ಅದನ್ನು ದುಂದುವೆಚ್ಚವೆಂದು ಹೇಳಲಾಗದು. ಆದರೆ ಅವನ ಸಂಪಾದನೆ ಧರ್ಮಸಮ್ಮತ ಮೂಲದಿಂದಾಗಿರಬೇಕು. ಅದರ ಇನ್ನೊಂದರ್ಥ- ಧರ್ಮಸಮ್ಮತ ಸಂಪಾದನೆಯಿಂದ ದುಂದುವೆಚ್ಚ ಮಾಡಬಾರದು ಎಂದೂ ಆಗಬಹುದು.

❖ ❖ ❖

ಗುಣನಡತೆಗಳು: ದುರ್ಗುಣಗಳು

ಅಹಂಭಾವ

(215) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ لَا يَدْخُلُ الْجَنَّةَ مَنْ كَانَ فِيْ قَلْبِهٖ مِثْقَالُ ذَرَّةٍ مِّنْ كِبْرٍ، فَقَالَ رَجُلٌ اِنَّ الرَّجُلَ يُحِبُّ اَنْ يَّكُوْنَ ثَوْبُهٗ حَسَنًا وَّنَعْلُهٗ حَسَنًا، قَالَ اِنَّ اللّٰهَ جَمِيْلٌ وَّيُحِبُّ الْجَمَالَ ، اَلْكِبْرُ بَطَرُ الْحَقِّ وَغَمْطُ النَّاسِ (مسلم ــــ عبداللّٰه بن مسعود)

ಪ್ರವಾದಿ(ಸ) ಹೇಳಿದರು- ಒಬ್ಬನ ಮನಸ್ಸಿನಲ್ಲಿ ಸ್ವಲ್ಪವಾದರೂ ಅಹಂಭಾವವಿದ್ದರೆ ಅವನು ಸ್ವರ್ಗ ಪ್ರವೇಶಿಸಲಾರನು. ಆಗ ಒಬ್ಬರು ಕೇಳಿದರು- ಮನುಷ್ಯನು ತನ್ನ ಬಟ್ಟೆ ಬರೆ ಮತ್ತು ಪಾದರಕ್ಷೆಗಳು ಉತ್ತಮ ಮಟ್ಟದ್ದಾಗಿರಬೇಕೆಂದು ಬಯಸುತ್ತಾನೆ. (ಅವನ ಈ ಭಾವನೆ ಅಹಂಭಾವವಾಗುವುದೇ? ಅಂತಹ ವ್ಯಕ್ತಿ ಸ್ವರ್ಗ ಪ್ರವೇಶಕ್ಕೆ ಅನರ್ಹನಾಗುವನೇ?) ಪ್ರವಾದಿ(ಸ) ಹೇಳಿದರು: ಅದು ಅಹಂಭಾವವಲ್ಲ. ಅಲ್ಲಾಹನು ಸುಂದರನಾಗಿರುವನು, ಅವನು ಸೌಂದರ್ಯವನ್ನು ಮೆಚ್ಚುತ್ತಾನೆ. ಅಹಂಭಾವವೆಂದರೆ ಅಲ್ಲಾಹನ ಹಕ್ಕುಗಳನ್ನು ಪೂರೈಸದಿರುವುದು, ಅವನ ಆಜ್ಞೆಗಳನ್ನು ಉಲ್ಲಂಘಿಸುವುದು ಮತ್ತು ಅಲ್ಲಾಹನ ದಾಸರನ್ನು ನಿಕೃಷ್ಟವಾಗಿ ಕಾಣುವುದಾಗಿದೆ. *[ಮುಸ್ಲಿಮ್- ವರದಿ: ಅಬ್ದುಲ್ಲಾ ಬಿನ್ ಮಸ್‌ಊದ್(ರ)]*

ಟಿಪ್ಪಣಿ: ಸೂರಃ ಅಲ್ ಅಅ್‌ರಾಫ್‌ನ ಎರಡನೇ ರುಕೂಅ್‌ನಲ್ಲಿ ಬಂದಿರುವ ಹ. ಆದಮ್(ಅ) ಮತ್ತು ಇಬ್ಲೀಸನ ಕಥೆಯಿಂದ ಅಹಂಭಾವವೆಂದರೇನು ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಇಬ್ಲೀಸನು ಅಲ್ಲಾಹನನ್ನು ತನ್ನ ಸೃಷ್ಟಿಕರ್ತನೆಂದೂ ಪ್ರಭುವೆಂದೂ ಒಪ್ಪಿಕೊಳ್ಳುತ್ತಾನೆ. ಆದರೆ ಅವನಿಗೆ ಅಪ್ಪಣೆ ಕೊಟ್ಟಾಗ ಒಪ್ಪದೆ ಅಹಂಭಾವ ಪ್ರಕಟಿಸಿದನು. ಆಗ ಅಲ್ಲಾಹನು ಹೀಗೆಂದನು- "ತೊಲಗು ಇಲ್ಲಿಂದ. ಉನ್ನತ ಸ್ಥಾನದಲ್ಲಿದ್ದುಕೊಂಡು ಅಹಂಭಾವ ತೋರುತ್ತೀಯಾ? ತೊಲಗು ಇಲ್ಲಿಂದ. ನೀನು ನನ್ನ ದೃಷ್ಟಿಯಲ್ಲಿ ನಿಂದ್ಯನೂ ನೀಚನೂ ಆಗಿರುವೆ." ದೇವನ ವಿರುದ್ಧ ದರ್ಪತೋರುವವನು ಖಂಡಿತವಾಗಿಯೂ ಅಲ್ಲಾಹನ ದಾಸರನ್ನು ನಿಕೃಷ್ಟವಾಗಿ ಕಾಣುವನು.

ದುರಾಸೆ

(216) قَالَ رَسُوْلُ اللهِ صَلَّى اللهُ عَلَيْهِ وَسَلَّمَ لَا يَجْتَمِعُ الشُّحُّ وَالْاِيْمَانُ فِيْ قَلْبِ عَبْدٍ اَبَدًا (نسائی — ابوہریرہ رض)

ಪ್ರವಾದಿ(ಸ) ಹೇಳಿದರು: ಹಣದಾಸೆ ಮತ್ತು ಈಮಾನ್ ಓರ್ವ ದಾಸನ ಹೃದಯದಲ್ಲಿ ಎಂದಿಗೂ ಒಟ್ಟಿಗೆ ಇರಲಾರವು. *[ನಸಾಈ ಅಬೂ ಹುರೈರಾ(ರ)]*

ಟಿಪ್ಪಣಿ: ಮೂಲದಲ್ಲಿ 'ಶುಹ್ಹ್' ಎಂಬ ಪದ ಪ್ರಯೋಗವಾಗಿದೆ. ಅದರ ಅರ್ಥ ದುರಾಸೆ ಮತ್ತು ಜಿಪುಣತೆ ಎಂದಾಗಿದೆ. ಹಣದಾಸೆಯಿರುವವನು ಖಂಡಿತವಾಗಿಯೂ ಜಿಪುಣನಾಗಿರುವನೆಂಬುದು ವ್ಯಕ್ತ. ಇವೆರಡೂ ಈಮಾನ್‌ಗೆ ವಿರುದ್ಧವಾಗಿವೆ. ಮನುಷ್ಯನು ಧನಾರಾಧಕನಾಗಬಾರದು. ಬದಲಾಗಿ ತಾನು ಸಂಪಾದಿಸಿದುದನ್ನು ಧರ್ಮ ಪ್ರಚಾರಕ್ಕಾಗಿ ಹಾಗೂ ಬಡವರಿಗಾಗಿ ಖರ್ಚು ಮಾಡಬೇಕೆಂದು ಈಮಾನ್ ಬಯಸುತ್ತದೆ. ಸಂಪತ್ತನ್ನು ಹೆಚ್ಚು ಹೆಚ್ಚು ಶೇಖರಿಸಿ, ಸುರಕ್ಷಿತವಾಗಿಡುವ ಮನೋಭಾವವು ಯಾವುದೇ ಧಾರ್ಮಿಕ ಕಾರ್ಯಗಳಿಗಾಗಲೀ ನಿರ್ಗತಿಕರ ಮೇಲೆ ಕರುಣೆ ತೋರುವುದಕ್ಕಾಗಲೀ ಮಾನವನನ್ನು ಬಿಡುವುದಿಲ್ಲ.

ಕೆಟ್ಟ ವಿಚಾರಗಳನ್ನು ಪೋಷಿಸಬಾರದು

(217) قَالَ النَّبِيُّ صَلَّى اللهُ عَلَيْهِ وَسَلَّمَ كُتِبَ عَلَى ابْنِ آدَمَ نَصِيْبُهُ مِنَ الزِّنَا ، فَهُوَ مُدْرِكٌ ذٰلِكَ لَا مُحَالَةَ الْعَيْنَانِ زِنَاهُمَا النَّظَرُ ، وَالْاُذُنَانِ زِنَاهُمَا الْاِسْتِمَاعُ ، وَاللِّسَانُ زِنَاهُ الْكَلَامُ ، وَالْيَدُ زِنَاهَا الْبَطْشُ ، وَالرِّجْلُ زِنَاهَا الْخُطٰى ، وَالْقَلْبُ يَهْوٰى وَيَتَمَنّٰى ، وَيُصَدِّقُ ذٰلِكَ الْفَرْجُ اَوْ يُكَذِّبُهُ وَفِيْ رِوَايَةٍ لِمُسْلِمٍ وَلِاَبِيْ دَاؤدَ وَالْفَمُ زِنَاهُ الْقُبَلُ (بخاری، مسلم، ابوداؤد، نسائی — ابوہریرہ رض)

ಪ್ರವಾದಿ(ಸ) ಹೇಳಿದರು: (ದೇವನನ್ನು ಮರೆತ) ವ್ಯಕ್ತಿಗೆ ಅವನ ವ್ಯಭಿಚಾರದ ಪಾಲು ಸಿಕ್ಕಿಯೇ ತೀರುವುದು. ಕಾಮುಕ ದೃಷ್ಟಿಯಿಂದ ನೋಡುವುದು ಕಣ್ಣಿನ ವ್ಯಭಿಚಾರವಾಗಿದೆ. ಅಶ್ಲೀಲ ಮಾತುಗಳನ್ನು ಕೇಳುವುದು ಕಿವಿಯ ವ್ಯಭಿಚಾರವಾಗಿದೆ. ಈ ವಿಷಯದಲ್ಲಿ- ಮಾತಾಡುವುದು ನಾಲಗೆಯ ವ್ಯಭಿಚಾರವಾಗಿದೆ. ಹಿಡಿಯುವುದು ಕೈಯ ವ್ಯಭಿಚಾರವಾಗಿದೆ.

ಅದಕ್ಕಾಗಿ ನಡೆಯುವುದು ಕಾಲಿನ ವ್ಯಭಿಚಾರವಾಗಿದೆ. ಅದನ್ನು ಆಗ್ರಹಿಸುವುದು ಮನಸ್ಸಿನ ವ್ಯಭಿಚಾರವಾಗಿದೆ. ಗುಪ್ತಾಂಗವು ಒಂದೋ ವ್ಯಭಿಚಾರದ ಕ್ರಿಯೆಯನ್ನು ನಡೆಸುವುದು ಅಥವಾ ಅದರಿಂದ ತಡೆದು ನಿಲ್ಲುವುದು. ಮುಸ್ಲಿಮ್ ಮತ್ತು ಅಬೂ ದಾವೂದ್‌ನ ಹದೀಸಿನಲ್ಲಿ 'ಚುಂಬಿಸುವುದು ಬಾಯಿಯ ವ್ಯಭಿಚಾರ' ಎಂಬ ಪದಗಳು ಸೇರಿವೆ.

[ಬುಖಾರಿ, ಮುಸ್ಲಿಮ್, ಅಬೂ ದಾವೂದ್, ನಸಾಈ ವರದಿ: ಹ. ಅಬೂ ಹುರೈರಾ(ರ)]

ಟಿಪ್ಪಣಿ: ಇದು ಅತ್ಯಂತ ಮಹತ್ವ ಪಡೆದ ಪ್ರವಾದಿ ವಚನವಾಗಿದೆ. ಇದರಲ್ಲಿರುವ ಮೂಲಭೂತ ವಿಷಯವೇನೆಂದರೆ, ಮಾನವನ ಮನಸ್ಸು ಅವನ ಶರೀರದ ಮೇಲೆ ಆಧಿಪತ್ಯ ನಡೆಸುತ್ತದೆ. ಮನಸ್ಸಿನೊಳಗೆ ಏನಾದರೂ ಕೆಟ್ಟ ಭಾವನೆ ಬಂದು ಮಾನವನು ಅದನ್ನು ಮಾಡಲುದ್ಯುಕ್ತನಾದರೆ ಅವನನ್ನು ಪಾಪದಿಂದ ತಡೆಯಬಲ್ಲ ಯಾವ ವಸ್ತುವೂ ಇಲ್ಲ. ಮನಸ್ಸು ಕೆಟ್ಟ ಭಾವನೆಗಳನ್ನು ಬೆಳೆಸತೊಡಗಿದರೆ ಮಾನವನ ಎಲ್ಲ ಅಂಗಾಂಗಗಳು ಅವನ ಅಭಿಲಾಷೆಯನ್ನು ಪೂರೈಸುವುದರಲ್ಲೇ ಮಗ್ನವಾಗುತ್ತದೆ. ಆದುದರಿಂದ ಪ್ರಪ್ರಥಮವಾಗಿ ಮಾಡಬೇಕಾದ ಕಾರ್ಯವೇನೆಂದರೆ ಮನಸ್ಸಿನೊಳಗೆ ಏನಾದರೂ ಕೆಟ್ಟ ಭಾವನೆಗಳು ಬಂದರೆ ಅದನ್ನು ಬಲವಂತವಾಗಿ ದೂರೀಕರಿಸಲು ಪ್ರಯತ್ನಿಸಬೇಕು. ಈ ಹದೀಸ್‌ನಲ್ಲಿ ವಿಧಿಲಿಖಿತ ಪ್ರಕಾರ ಮಾನವನು ವ್ಯಭಿಚಾರ ಮಾಡಲು ನಿರ್ಬಂಧಿತನಾಗಿದ್ದಾನೆ. ವಿಧಿ ಲಿಖಿತವನ್ನು ಯಾರು ಸರಿಸಬಲ್ಲರು ಎಂದು ಹೇಳಲಾಗಿಲ್ಲ. ಬದಲಾಗಿ ಮಾನವನು ದೇವನಿಂದ ಅಲಕ್ಷ್ಯನಾದರೆ ಮತ್ತು ಈಮಾನಿನ ಸುದೃಢತೆಗಾಗಿ ಶ್ರಮಿಸದಿದ್ದರೆ ವ್ಯಭಿಚಾರ ಮತ್ತದರ ಪ್ರೇರಕಗಳಿಂದ ಹಾಗೂ ಇತರ ಅಪರಾಧಗಳಿಂದ ಸುರಕ್ಷಿತವಾಗಿರಲು ಸಾಧ್ಯವಿಲ್ಲ. ಕೆಟ್ಟ ಭಾವನೆಗಳನ್ನು ಮನಸ್ಸಿನಲ್ಲಿ ಪೋಷಿಸಿದರೆ ಅದರ ವಿಚಾರಣೆಯೂ ನಡೆಯುವುದು ಎಂಬುದನ್ನು ಇಲ್ಲಿ ಗಮನಿಸಬೇಕು.

ರಹಸ್ಯವನ್ನು ಪಾಲಿಸಿರಿ

(218) قَالَ النَّبِيُّ صَلَّى اللهُ عَلَيْهِ وَسَلَّمَ إِذَا حَدَّثَ الرَّجُلُ الْحَدِيثَ ثُمَّ الْتَفَتَ فَهِيَ أَمَانَةٌ

(ابوداؤد ـــــ جابر بن عبد الله رض)

ಪ್ರವಾದಿ(ಸ) ಹೇಳಿದರು- ಒಬ್ಬನು ನಿಮ್ಮೊಂದಿಗೆ ಮಾತನಾಡುತ್ತಾ ಇರುವಾಗ ಅತ್ತಿತ್ತ ನೋಡುತ್ತಲಿದ್ದರೆ ಅವನ ಮಾತನ್ನು 'ಅಮಾನತ್' (ವಿಶ್ವಸ್ಥ ನಿಧಿ) ಎಂದು ಪರಿಗಣಿಸಿರಿ. (ಅರ್ಥಾತ್ ಅವನ ಮಾತು ಒಂದು ರಹಸ್ಯದ ಮಾತಾಗಿದ್ದು ಅದನ್ನು ರಹಸ್ಯವಾಗಿಡಬೇಕು. ಆದುದರಿಂದಲೇ ಅವನು ಅತ್ತಿತ್ತ ನೋಡುತ್ತಾನೆ.)

[ಅಬೂ ದಾವೂದ್- ಜಾಬಿರ್ ಬಿನ್ ಅಬ್ದುಲ್ಲಾ(ರ)]

ವ್ಯಭಿಚಾರ

(219) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ يَا شَبَابَ قُرَيْشٍ اِحْفَظُوْا فُرُوْجَكُمْ لَا تَزْنُوْا اَلَا مَنْ حَفِظَ فَرْجَهٗ فَلَهُ الْجَنَّةُ (المنذری بحوالہ حاکم وبیہقی ـــ ابن عباسؓ)

ಪ್ರವಾದಿ(ಸ) ಹೇಳಿದರು- ಓ ಕುರೈಶ್ ಯುವಕರೇ! ನೀವು ನಿಮ್ಮ ಗುಪ್ತಾಂಗಗಳನ್ನು ರಕ್ಷಿಸಿರಿ. ವ್ಯಭಿಚಾರವಾಗದಂತೆ ನೋಡಿಕೊಳ್ಳಿರಿ. ಯಾರು ಮಾನ ಮರ್ಯಾದೆಯೊಂದಿಗೆ ಜೀವನ ಸಾಗಿಸುತ್ತಾರೋ ಅವರು ಸ್ವರ್ಗಕ್ಕೆ ಅರ್ಹರಾಗಿದ್ದಾರೆ.

[ಅಲ್ ಮುಂದಿರಿ- ಹಾಕಿಮ್ ಮತ್ತು ಬೈಹಕಿಯಿಂದ ವರದಿ: ಇಬ್ನು ಅಬ್ಬಾಸ್(ರ)]

ಟಿಪ್ಪಣಿ: ಇನ್ನೊಂದು ಹದೀಸ್‌ನಲ್ಲಿ ಹೀಗಿದೆ: "ಯಾರ ಯೌವನವು ವಿಪತ್ತುಗಳಿಂದ ಸುರಕ್ಷಿತವಾಗಿರುವುದೋ ಅದು ಸ್ವರ್ಗಕ್ಕೆ ಅರ್ಹವಾಗಿದೆ."

ವೇಷ ತೊಡಬಾರದು

(220) عَنِ ابْنِ عَبَّاسٍ رضؓ قَالَ لَعَنَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ الْمُتَشَبِّهِيْنَ مِنَ الرِّجَالِ بِالنِّسَاءِ، وَالْمُتَشَبِّهَاتِ مِنَ النِّسَاءِ بِالرِّجَالِ

(ترغیب بحوالہ بخاری وابو داؤد ونسائی)

ಇಬ್ನು ಅಬ್ಬಾಸ್‌ರಿಂದ(ರ) ವರದಿ: ಪ್ರವಾದಿಯವರು(ಸ) ಸ್ತ್ರೀಯರನ್ನು ಹೋಲುವಂತೆ ಶೃಂಗರಿಸುವ ಪುರುಷರನ್ನೂ ಪುರುಷರನ್ನು ಹೋಲುವಂತೆ ಶೃಂಗರಿಸುವ ಸ್ತ್ರೀಯರನ್ನೂ ಶಪಿಸಿದ್ದಾರೆ. *[ತರ್ಗೀಬ್- ಬುಖಾರಿ, ಅಬೂ ದಾವೂದ್, ನಸಾಈಯಿಂದ]*

---

(221) عَنْ اَبِيْ هُرَيْرَةَ رضؓ قَالَ لَعَنَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ الرَّجُلَ يَلْبَسُ لِبْسَةَ الْمَرْاَةِ، وَالْمَرْاَةَ تَلْبَسُ لِبْسَةَ الرَّجُلِ

(ترغیب بحوالہ ابو داؤد، نسائی وغیرہ)

ಅಬೂ ಹುರೈರಾರಿಂದ(ರ) ವರದಿ: ಪ್ರವಾದಿಯವರು(ಸ) ಸ್ತ್ರೀಯರ ಉಡುಪು ಧರಿಸುವ ಪುರುಷರನ್ನೂ ಪುರುಷರ ಉಡುಪು ಧರಿಸುವ ಸ್ತ್ರೀಯರನ್ನೂ ಶಪಿಸಿದ್ದಾರೆ.

[ತರ್ಗೀಬ್- ಅಬೂ ದಾವೂದ್, ನಸಾಈ ಮುಂತಾದವುಗಳಿಂದ]

---

(222) عَنْ أَبِي هُرَيْرَةَ قَالَ أُتِيَ رَسُولُ اللهِ صَلَّى اللهُ عَلَيْهِ وَسَلَّمَ بِمُخَنَّثٍ قَدْ خَضَبَ يَدَيْهِ وَرِجْلَيْهِ بِالْحِنَّاءِ، فَقَالَ رَسُولُ اللهِ صَلَّى اللهُ عَلَيْهِ وَسَلَّمَ مَا بَالُ هٰذَا؟ قَالُوا يَتَشَبَّهُ بِالنِّسَاءِ، فَأَمَرَ بِهِ فَنُفِيَ إِلَى النَّقِيعِ، فَقِيلَ يَا رَسُولَ اللهِ أَلَا تَقْتُلُهُ؟ فَقَالَ إِنِّي نُهِيتُ عَنْ قَتْلِ الْمُصَلِّينَ (ابو داود)

ಅಬೂ ಹುರೈರಾ(ರ) ಹೇಳುತ್ತಾರೆ- ಪ್ರವಾದಿಯವರ(ಸ) ಬಳಿಗೆ ಓರ್ವ ಶಿಖಂಡಿಯನ್ನು ತರಲಾಯಿತು. ಅವನು ತನ್ನ ಕೈಕಾಲುಗಳಿಗೆ ಮದರಂಗಿ ಹಚ್ಚಿದ್ದನು (ಅರ್ಥಾತ್ ಅವನ ಕೈಕಾಲುಗಳು ಕೆಂಪಾಗಿದ್ದುವು) ಪ್ರವಾದಿ(ಸ) ಕೇಳಿದರು: ಇದೆಂತಹ ವ್ಯಕ್ತಿ! ಇವನೇಕೆ ತನ್ನ ಕೈಕಾಲುಗಳನ್ನು ಕೆಂಪಾಗಿಸಿದ್ದಾನೆ? ಜನರು, ಅವನು ಸ್ತ್ರೀಯರಂತಾಗ ಬಯಸುತ್ತಾನೆ ಎಂದರು. ಪ್ರವಾದಿಯವರ(ಸ) ಆಜ್ಞೆಯ ಮೇರೆಗೆ (ಆ ವ್ಯಕ್ತಿಯನ್ನು) ನಕೀಅ್ ಎಂಬ ಸ್ಥಳಕ್ಕೆ ಗಡೀಪಾರು ಮಾಡಲಾಯಿತು. ಜನರು ಕೇಳಿದರು- ತಾವೇಕೆ ಅವನನ್ನು ವಧಿಸುವುದಿಲ್ಲ? ಪ್ರವಾದಿ(ಸ) ಹೇಳಿದರು- ನಮಾಝ್ ಮಾಡುವವರನ್ನು ವಧಿಸುವುದರಿಂದ ನನ್ನನ್ನು ತಡೆಯಲಾಗಿದೆ.

[ಅಬೂ ದಾವೂದ್]

ಸಭೆಯ ಮರ್ಯಾದೆಗಳು

(223) قَالَ رَسُولُ اللهِ صَلَّى اللهُ عَلَيْهِ وَسَلَّمَ لَا يُقِيمُ الرَّجُلُ الرَّجُلَ مِنْ مَجْلِسِهِ فَيَجْلِسَ فِيهِ، وَلٰكِنْ تَفَسَّحُوا وَتَوَسَّعُوا (مسند احمد — ابن عمر رض)

ಪ್ರವಾದಿ(ಸ) ಹೇಳಿದರು- ಸಭೆಯಲ್ಲಿ ಯಾರೂ, ತನಗಿಂತ ಮುಂಚೆ ಬಂದು ಕುಳಿತಿದ್ದವನನ್ನು ಎಬ್ಬಿಸಿ ಅಲ್ಲಿ ಕುಳಿತುಕೊಳ್ಳಬಾರದು. ಬರುವವರಿಗೆ ಕುಳಿತು ಕೊಳ್ಳಲು ಸ್ಥಳಾವಕಾಶ ಮಾಡಿ ಕೊಡಬೇಕು.

[ಮುಸ್ನದ್ ಅಹ್ಮದ್- ವರದಿ: ಇಬ್ನು ಉಮರ್(ರ)]

(224) اِنَّ النَّبِیَّ صَلَّی اللّٰہُ عَلَیْہِ وَسَلَّمَ قَالَ اِذَا کُنْتُمْ ثَلَاثَۃٌ فَلَا یَتَنَاجیٰ اِثْنَانِ دُوْنَ صَاحِبِہِمَا، قَالَ قُلْنَا فَاِنْ کَانُوْا اَرْبَعَۃً، قَالَ فَلَا یَضُرُّ وَفِیْ رِوَایَۃٍ لِابْنِ مَسْعُوْدٍ فَاِنَّ ذٰلِکَ یُحْزِنُہٗ (مسند احمد ـــــ ابن عمرؓ)

ಪ್ರವಾದಿ(ಸ) ಹೇಳಿದರು- ನಿಮ್ಮ ಪೈಕಿ ಮೂವರು ಒಂದೆಡೆ ಕುಳಿತಿರುವಾಗ, ಅವರಲ್ಲಿಬ್ಬರು ಮೂರನೆಯವನನ್ನು ಬಿಟ್ಟು ಪರಸ್ಪರ ರಹಸ್ಯ ಮಾತುಗಳನ್ನಾಡಬಾರದು. (ಏಕೆಂದರೆ ಈ ವರ್ತನೆಯಿಂದ ಮೂರನೆಯವನಿಗೆ ಬೇಸರವಾಗಬಹುದು) ಈ ಪ್ರವಾದಿ ವಚನವನ್ನು ಇಬ್ನು ಉಮರ್(ರ) ಕೇಳಿಸಿದಾಗ ಅವರ ಶಿಷ್ಯ ಅಬೂ ಸಾಲಿಹ್ ಕೇಳಿದರು- ಒಂದು ಸಭೆಯಲ್ಲಿ ನಾಲ್ವರಿದ್ದರೆ ಅವರ ಪೈಕಿ ಇಬ್ಬರು ಪರಸ್ಪರ ಮಾತನಾಡಬಹುದೇ! ಅಬ್ದುಲ್ಲಾ ಬಿನ್ ಉಮರ್(ರ) ಹೇಳಿದರು- ಆಗ ಅಭ್ಯಂತರವಿಲ್ಲ.

[ಮುಸ್ನದ್ ಅಹ್ಮದ್, ವರದಿ: ಇಬ್ನು ಉಮರ್(ರ)]

---

(225) اِنَّ رَسُوْلَ اللّٰہِ ﷺ قَالَ لَا یَحِلُّ لِرَجُلٍ اَنْ یُّفَرِّقَ بَیْنَ اثْنَیْنِ اِلَّا بِاِذْنِھِمَا. (ابوداؤد و ترمذی)

ಪ್ರವಾದಿ(ಸ) ಹೇಳಿದರು- ಇಬ್ಬರು ಕುಳಿತು ಪರಸ್ಪರ ಮಾತನಾಡುತ್ತಿರುವಾಗ ಅವರ ಅನುಮತಿಯಿಲ್ಲದೆ ಇನ್ನೊಬ್ಬನು ಅವರ ಮಧ್ಯೆ ಬಂದು ಕುಳಿತುಕೊಳ್ಳುವುದು ಧರ್ಮಸಮ್ಮತವಲ್ಲ.

[ಅಬೂ ದಾವೂದ್, ತಿರ್ಮಿದಿ. ವರದಿ: ಅಮ್ರ್ ಬಿನ್ ಶುಐಬ್(ರ)]

ವಸ್ತ್ರಧಾರಣೆ

(226) عَنْ اَبِیْ یَعْفُوْرٍ قَالَ سَمِعْتُ ابْنَ عُمَرَ یَسْأَلُہٗ رَجُلٌ مَا اَلْبَسُ مِنَ الثِّیَابِ؟ قَالَ مَا لَا یَزْدَرِیْکَ فِیْہِ السُّفَہَاءُ وَلَا یَعِیْبُکَ بِہِ الْحُکَمَاءُ، قَالَ مَا ھُوَ؟ قَالَ مَا بَیْنَ الْخَمْسَۃِ دَرَاھِمَ اِلَی الْعِشْرِیْنَ دِرْھَمًا (ترغیب بحوالہ طبرانی)

ಅಬೂ ಯಅ್‌ಫೂರ್(ರ) ಹೇಳುತ್ತಾರೆ- ನನ್ನ ಮುಂದೆ ಒಬ್ಬ ವ್ಯಕ್ತಿಯು ಅಬ್ದುಲ್ಲಾ ಬಿನ್ ಉಮರ್‌ರೊಡನೆ(ರ), ನಾನು ಯಾವ ತರದ ಬಟ್ಟೆ ಧರಿಸಬೇಕು ಎಂದು ಕೇಳಿದರು. ಇಬ್ನು ಉಮರ್ ಹೇಳಿದರು- ತಿಳಿಗೇಡಿಗಳು ನಿನ್ನನ್ನು ನಿಕೃಷ್ಟನೆಂದು ಭಾವಿಸುವಂತಹ ಹಾಗೂ

ಬುದ್ಧಿಜೀವಿಗಳು ನಿನ್ನನ್ನು ಆಕ್ಷೇಪಿಸುವಂತಹ ಬಟ್ಟೆ ಧರಿಸಬೇಡ. ಅವನು ಕೇಳಿದನು- ಅದು ಎಷ್ಟು ಬೆಲೆಯದ್ದಾಗಿರಬೇಕು. ಇಬ್ನು ಉಮರ್ ಹೇಳಿದರು- ಐದು ದಿರ್ಹಮ್‌ನಿಂದ ಇಪ್ಪತ್ತು ದಿರ್ಹಮ್‌ವರೆಗಿನ ಬೆಲೆಯದ್ದಾಗಿರಲಿ. *[ತರ್ಗೀಬ್ ತಬ್ರಾನಿಯಿಂದ]*

ಟಿಪ್ಪಣಿ: ಹ. ಅಬ್ದುಲ್ಲಾ ಬಿನ್ ಉಮರ್‌ರ(ರ) ಕಾಲದಲ್ಲಿ ಐದು ದಿರ್ಹಮ್ ಬಹಳವಾಗಿತ್ತು. ಆ ಕಾಲದಲ್ಲಿ ಐದು ದಿರ್ಹಮ್‌ಗೆ ಇಡೀ ಉಡುಪು ಸಿದ್ಧವಾಗುತ್ತಿತ್ತು. ಈ ವ್ಯತ್ಯಾಸವನ್ನು ಗಮನದಲ್ಲಿಡಬೇಕು.

ಅಹಂಭಾವದ ಲಕ್ಷಣ-ದರ್ಪದ ಉಡುಗೆ

(227) عَنْ اَبِیْ سَعِیْدِ نِ الْخُدْرِیِّ قَالَ سَمِعْتُ رَسُوْلَ اللّٰہِ صَلَّی اللّٰہُ عَلَیْہِ وَسَلَّمَ یَقُوْلُ اِزْرَۃُ الْمُؤْمِنِ اِلٰی اَنْصَافِ سَاقَیْہِ وَلَاجُنَاحَ عَلَیْہِ فِیْمَا بَیْنَہٗ وَبَیْنَ الْکَعْبَیْنِ، وَمَا اَسْفَلَ مِنْ ذٰلِکَ فَفِی النَّارِ، قَالَ ذٰلِکَ ثَلَاثَ مَرَّاتٍ، وَلَا یَنْظُرُ اللّٰہُ یَوْمَ الْقِیَامَۃِ مَنْ جَرَّ اِزَارَہٗ بَطَرًا۔ (ابوداؤد)

ಅಬೂ ಸಈದ್ ಖುದ್ರೀ(ರ) ಹೇಳುತ್ತಾರೆ- ಪ್ರವಾದಿ(ಸ) ಹೀಗೆ ಹೇಳುವುದನ್ನು ನಾನು ಕೇಳಿದ್ದೇನೆ: ಸತ್ಯವಿಶ್ವಾಸಿಯ ಲುಂಗಿ (ಇಜಾರು) ಅವನ ಕಣಗಾಲಿನ ವರೆಗಿರುತ್ತದೆ. ಅದರ ಕೆಳಗೆ ಮಣಿಗಂಟಿನವರೆಗಿದ್ದರೆ ಅದರಿಂದೇನೂ ಪಾಪವಿಲ್ಲ. ಇನ್ನು ಮಣಿಗಂಟಿಗಿಂತಲೂ ಕೆಳಗಿದ್ದರೆ ಅದು ನರಕದಲ್ಲಿರುವುದು (ಅಂದರೆ ಅದು ಪಾಪವಾಗುವುದು.) ಇದನ್ನು ಪ್ರವಾದಿ(ಸ) ಮೂರು ಬಾರಿ ಆವರ್ತಿಸಿದರು. ತರುವಾಯ ಅವರು ಹೀಗೆಂದರು: ತಮ್ಮ ಲುಂಗಿ(ಇಜಾರು)ಗಳನ್ನು ಅಹಂಭಾವದಿಂದ ನೆಲದ ಮೇಲೆ ಎಳೆದುಕೊಂಡು ಹೋಗುವವರನ್ನು ಅಲ್ಲಾಹನು ನಿರ್ಣಾಯಕ ದಿನದಂದು ಕಣ್ಣೆತ್ತಿಯೂ ನೋಡಲಾರನು. *[ಅಬೂ ದಾವೂದ್]*

---

(228) اِنَّ النَّبِیَّ صَلَّی اللّٰہُ عَلَیْہِ وَسَلَّمَ قَالَ مَنْ جَرَّ ثَوْبَہٗ خُیَلَاءَ لَا یَنْظُرُ اللّٰہُ اِلَیْہِ یَوْمَ الْقِیَامَۃِ، فَقَالَ اَبُوْبَکْرٍ اِنَّ اِزَارِیْ یَسْتَرْخِیْ اِلَّا اَنْ اَتَعَاھَدَہٗ، فَقَالَ اِنَّکَ لَسْتَ مِمَّنْ یَفْعَلُہٗ خُیَلَاءَ (بخاری ــــ ابن عمرؓ)

ಪ್ರವಾದಿ(ಸ) ಹೇಳಿದರು- ತನ್ನ ಉಡುಪನ್ನು (ಲುಂಗಿ, ಇಜಾರು) ಅಹಂಭಾವದಿಂದ ನೆಲದ ಮೇಲೆ ಎಳೆದು ಕೊಂಡು ನಡೆಯುವವನನ್ನು (ಅರ್ಥಾತ್ ಮಣಿಗಂಟಿಗಿಂತ ಕೆಳಗಿಳಿಸುವವನನ್ನು) ಅಲ್ಲಾಹನು ಕೋಪ ಮತ್ತು ತಿರಸ್ಕಾರದಿಂದಾಗಿ ಕಣ್ಣೆತ್ತಿಯೂ ನೋಡಲಾರನು.

ಇದನ್ನು ಕೇಳಿ ಹ. ಅಬೂಬಕರ್(ರ) ಹೀಗೆಂದರು- ನಾನು ಸರಿಪಡಿಸುತ್ತಾ ಇರದಿದ್ದರೆ ನನ್ನ ಲುಂಗಿ ಮಣಿಗಂಟಿಗಿಂತ ಕೆಳಗೆ ಜಾರುತ್ತದೆ. (ನಾನೂ ಅಲ್ಲಾಹನ ಕೃಪಾದೃಷ್ಟಿಯಿಂದ ವಂಚಿತನಾಗುವೆನೆ?) ಪ್ರವಾದಿ(ಸ) ಹೇಳಿದರು- ನೀವು ಅಹಂಭಾವದಿಂದ ಹಾಗೆ ಮಾಡುತ್ತಿಲ್ಲವಲ್ಲ. ಹಾಗಿರುವಾಗ ನೀವು ಅಲ್ಲಾಹನ ಕೃಪಾದೃಷ್ಟಿಯಿಂದ ವಂಚಿತರಾಗುವುದು ಹೇಗೆ?

[ಬುಖಾರಿ- ವರದಿ: ಇಬ್ನು ಉಮರ್(ರ)]

---

(229) عَنِ ابْنِ عَبَّاسٍ قَالَ كُلْ مَاشِئْتَ وَالْبَسْ مَاشِئْتَ اِنْ اَخْطَأَتْكَ اِثْنَتَانِ سَرَفٌ وَمَخِيْلَةٌ (بخاری)

ಇಬ್ನು ಅಬ್ಬಾಸ್(ರ) ಹೇಳುತ್ತಾರೆ: ಚೆನ್ನಾಗಿ ಉಣ್ಣಿರಿ, ಚೆನ್ನಾಗಿ ಉಡಿರಿ. ಆದರೆ ನಿಮ್ಮಲ್ಲಿ ಅಹಂಭಾವ ಮತ್ತು ದುಂದು ವ್ಯಯವೆಂಬ ಎರಡು ದುರ್ಗುಣಗಳಿರಬಾರದು.

[ಬುಖಾರಿ]

ನಿರ್ಣಾಯಕ ದಿನ ಮತ್ತು ಅನ್ಯಾಯದ ಕತ್ತಲು

(230) اِنَّ النَّبِيَّ صَلَّى اللّٰهُ عَلَيْهِ وَسَلَّمَ قَالَ اَلظُّلْمُ ظُلُمَاتٌ يَوْمَ الْقِيَامَةِ (بخاری ومسلم ـــــ ابن عمرؓ)

ಪ್ರವಾದಿ(ಸ) ಹೇಳಿದರು: ಅನ್ಯಾಯವು ಅಕ್ರಮಿಯ ಮಟ್ಟಿಗೆ ನಿರ್ಣಾಯಕ ದಿನದಂದು ಭಯಾನಕ ಕತ್ತಲೆಯ ರೂಪದಲ್ಲಿ ಪ್ರತ್ಯಕ್ಷವಾಗುವುದು.

[ಬುಖಾರಿ, ಮುಸ್ಲಿಮ್- ವರದಿ: ಇಬ್ನು ಉಮರ್(ರ)]

ಅಕ್ರಮಿಗೆ ಸಹಕಾರ

(231) عَنْ اَوْسِ بْنِ شُرَحْبِيْلٍ اَنَّهٗ سَمِعَ رَسُوْلَ اللّٰهِ صَلَّى اللّٰهُ عَلَيْهِ وَسَلَّمَ يَقُوْلُ مَنْ مَشٰى مَعَ ظَالِمٍ لِيُقَوِّيَهٗ وَهُوَ يَعْلَمُ اَنَّهٗ ظَالِمٌ فَقَدْ خَرَجَ مِنَ الْاِسْلَامِ (مشکوٰۃ)

ಔಸ್ ಬಿನ್ ಶರ್ಜೀಲ್(ರ) ಹೇಳುತ್ತಾರೆ- ಒಬ್ಬನು ಅಕ್ರಮಿಯೆಂದು ತಿಳಿದೂ ಅವನಿಗೆ ಬೆಂಬಲ ನೀಡುವ ಮೂಲಕ ಅವನಿಗೆ ಶಕ್ತಿ ಒದಗಿಸಿದವನು ಇಸ್ಲಾಮಿನಿಂದ ಹೊರ ಹೋದನೆಂದು ಪ್ರವಾದಿ(ಸ) ಹೇಳಿರುವುದನ್ನು ನಾನು ಕೇಳಿದ್ದೇನೆ. (ಅರ್ಥಾತ್ ಅಕ್ರಮಿ ಯೆಂದು ತಿಳಿದೂ ಬೆಂಬಲ ನೀಡುವುದು ಮುಸ್ಲಿಮನಿಗೆ ಭೂಷಣವಲ್ಲ) *[ಮಿಶ್ಕಾತ್]*

ಅನ್ಯಾಯದ ದುಷ್ಪರಿಣಾಮ

(232) إِنَّ رَسُولَ اللهِ صَلَّى اللهُ عَلَيْهِ وَسَلَّمَ قَالَ تَدْرُونَ مَا الْمُفْلِسُ؟ قَالُوا الْمُفْلِسُ فِينَا مَنْ لَا دِرْهَمَ لَهُ وَلَا مَتَاعَ، فَقَالَ إِنَّ الْمُفْلِسَ مِنْ أُمَّتِي مَنْ يَأْتِي يَوْمَ الْقِيَامَةِ بِصَلٰوةٍ وَصِيَامٍ وَزَكٰوةٍ، وَيَأْتِي قَدْ شَتَمَ هٰذَا، وَقَذَفَ هٰذَا، وَأَكَلَ مَالَ هٰذَا، وَسَفَكَ دَمَ هٰذَا، وَضَرَبَ هٰذَا، فَيُعْطِي هٰذَا مِنْ حَسَنَاتِهِ وَهٰذَا مِنْ حَسَنَاتِهِ، فَإِنْ فَنِيَتْ حَسَنَاتُهُ قَبْلَ أَنْ يُقْضٰى مَا عَلَيْهِ أُخِذَ مِنْ خَطَايَاهُمْ فَطُرِحَتْ عَلَيْهِ ثُمَّ طُرِحَ فِي النَّارِ (مسلم- ابوهريرة رض)

ಪ್ರವಾದಿವರ್ಯರು(ಸ) ಒಮ್ಮೆ ಜನರೊಡನೆ ಕೇಳಿದರು: ದಿವಾಳಿಕೋರ ಯಾರೆಂದು ನಿಮಗೆ ಗೊತ್ತೇ? ಜನರು ಹೇಳಿದರು: ದಿರ್ಹಮ್ ಅಥವಾ ಇನ್ನಾವುದೇ ವಸ್ತು ಇಲ್ಲದವನನ್ನು ನಮ್ಮಲ್ಲಿ ದಿವಾಳಿಕೋರನೆಂದು ಹೇಳುತ್ತಾರೆ. ಪ್ರವಾದಿಯವರು(ಸ) ಹೇಳಿದರು- ನನ್ನ ಸಮುದಾಯದಲ್ಲಿ ದಿವಾಳಿಕೋರ ಯಾರೆಂದರೆ ನಿರ್ಣಾಯಕ ದಿನದಂದು ತನ್ನ ನಮಾಝ್, ಉಪವಾಸ ವ್ರತ ಮತ್ತು ಝಕಾತ್‌ನೊಂದಿಗೆ ಅಲ್ಲಾಹನ ಮುಂದೆ ಹಾಜರಾಗುವವನು. ಆದರೆ ಅದರೊಂದಿಗೆ ಅವನು ಲೋಕದಲ್ಲಿ ಯಾರನ್ನಾದರೂ ಬೈದಿರಬಹುದು, ಯಾರ ಮೇಲಾದರೂ ಅಪವಾದ ಹೊರಿಸಿರಬಹುದು, ಯಾರದಾದರೂ ಸಂಪತ್ತನ್ನು ಕಬಳಿಸಿರಬಹುದು, ಯಾರನ್ನಾದರೂ ಕೊಲೆಗೈದಿರಬಹುದು, ಯಾರಿಗಾದರೂ ಹೊಡೆದಿರಬಹುದು. ಅಲ್ಲಿ ಅವನ ಎಲ್ಲ ಒಳಿತುಗಳನ್ನು ಆ ಎಲ್ಲ ಮರ್ದಿತರಿಗೂ ಹಂಚಲಾಗುವುದು. ಅವನ ಒಳಿತುಗಳೆಲ್ಲ ಮುಗಿದು ಮರ್ದಿತರ ಹಕ್ಕು ಇನ್ನೂ ಬಾಕಿ ಇದ್ದರೆ ಅವರೆಲ್ಲರ ಪಾಪಗಳನ್ನು ಇವನ ಲೆಕ್ಕಕ್ಕೆ ಹಾಕಲಾಗುವುದು. ಅನಂತರ ಇವನನ್ನು ನರಕಕ್ಕೆ ತಳ್ಳಲಾಗುವುದು.

[ಮುಸ್ಲಿಮ್- ವರದಿ: ಅಬೂ ಹುರೈರಾ(ರ)

ಟಿಪ್ಪಣಿ: ಜನರ ಹಕ್ಕುಗಳ ಮಹತ್ವವನ್ನು ಇಲ್ಲಿ ವಿವರಿಸಲಾಗಿದೆ. ಅಲ್ಲಾಹನ ಹಕ್ಕುಗಳನ್ನು ತೀರಿಸುವವರು ಜನರ ಹಕ್ಕುಗಳನ್ನು ವಂಚಿಸಬಾರದು. ಅನ್ಯಥಾ ಅವರ ನಮಾಝ್, ಉಪವಾಸ ಮತ್ತಿತರ ಒಳಿತುಗಳು ವ್ಯರ್ಥವಾಗುವುವು.

ಮರ್ದಿತನ ಗೋಳು

(233) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اِيَّاكَ وَدَعْوَةَ الْمَظْلُوْمِ، فَاِنَّمَا يَسْئَلُ اللّٰهَ تَعَالٰى حَقَّهٗ وَاِنَّ اللّٰهَ لَا يَمْنَعُ ذَا حَقٍّ حَقَّهٗ (مشکوٰۃ — علیؓ)

ಪ್ರವಾದಿವರ್ಯರು(ಸ) ಹೇಳಿದರು: ಮರ್ದಿತನ ಶಾಪದಿಂದ ನಿಮ್ಮನ್ನು ರಕ್ಷಿಸಿ ಕೊಳ್ಳಿರಿ. ಏಕೆಂದರೆ ಅವನು ಅಲ್ಲಾಹನಿಂದ ತನ್ನ ಹಕ್ಕನ್ನಷ್ಟೆ ಬೇಡುತ್ತಾನೆ. ಅಲ್ಲಾಹನು ಯಾವುದೇ ಹಕ್ಕುದಾರನನ್ನು ಅವನ ಹಕ್ಕಿನಿಂದ ವಂಚಿತಗೊಳಿಸುವುದಿಲ್ಲ.

[ಮಿಶ್ಕಾತ್, ವರದಿ: ಹ. ಅಲೀ(ರ)]

ಟಿಪ್ಪಣಿ: ಈ ಹದೀಸ್‌ನಲ್ಲಿ ಮರ್ದಿತನ ಶಾಪಕ್ಕೆ ಗುರಿಯಾಗುವುದರ ಬಗ್ಗೆ ಎಚ್ಚರಿಸಲಾಗಿದೆ. ಏಕೆಂದರೆ ಅವನ ಆರ್ತನಾದವು ಅಕ್ರಮಿಯನ್ನು ಸುಟ್ಟುಬಿಡುವುದು. ಮರ್ದಿತನ ಗೋಳು ಆಕಾಶಕ್ಕೆ ತಲಪಿದಾಗ ಆಕಾಶದವನು ಅಕ್ರಮಿಯನ್ನು ವಿವಿಧ ರೀತಿಯ ವಿಪತ್ತು ಮತ್ತು ಸಂಕಟಗಳಲ್ಲಿ ಸಿಲುಕಿಸುತ್ತಾನೆ.

ಕೋಪ

(234) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ لَيْسَ الشَّدِيْدُ بِالصُّرَعَةِ، اِنَّمَا الشَّدِيْدُ الَّذِىْ يَمْلِكُ نَفْسَهٗ عِنْدَ الْغَضَبِ (بخاری — ابوہریرہؓ)

ಪ್ರವಾದಿವರ್ಯರು(ಸ) ಹೇಳಿದರು: ಕುಸ್ತಿ ಪಂದ್ಯಾಟದಲ್ಲಿ ತನ್ನ ಎದುರಾಳಿಯನ್ನು ಸೋಲಿಸುವವನು ಶಕ್ತಿಶಾಲಿಯಲ್ಲ. ಬದಲಾಗಿ ಕೋಪ ಬಂದಾಗ ಅದನ್ನು ತನ್ನ ನಿಯಂತ್ರಣ ದಲ್ಲಿರಿಸುವವನೇ ನಿಜವಾದ ಶಕ್ತಿಶಾಲಿ- (ಅರ್ಥಾತ್ ಕೋಪ ಬಂದಾಗ ಅಲ್ಲಾಹ್ ಮತ್ತು ಪ್ರವಾದಿಯವರು(ಸ) ಮೆಚ್ಚದಂತಹ ಯಾವ ಕೃತ್ಯವನ್ನೂ ಅವನು ಎಸಗುವುದಿಲ್ಲ).

[ಬುಖಾರಿ- ವರದಿ: ಅಬೂ ಹುರೈರಾ(ರ)]

ಕೋಪಕ್ಕೆ ಮದ್ದು

(235) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ إِنَّ الْغَضَبَ مِنَ الشَّيْطَانِ ، وَإِنَّ الشَّيْطَانَ خُلِقَ مِنَ النَّارِ ، وَإِنَّمَا تُطْفَأُ النَّارُ بِالْمَاءِ ، فَإِذَا غَضِبَ أَحَدُكُمْ فَلْيَتَوَضَّأْ

(ابوداؤد ــــ عطیہ سعدیؓ)

ಪ್ರವಾದಿ(ಸ) ಹೇಳಿದರು- ಕೋಪವು ಶೈತಾನನ ಪ್ರೇರಣೆಯಿಂದಾಗಿರುತ್ತದೆ. ಶೈತಾನನನ್ನು ಅಗ್ನಿಯಿಂದ ಸೃಷ್ಟಿಸಲಾಗಿದೆ. ಅಗ್ನಿಯು ನೀರಿನಿಂದ ಮಾತ್ರ ನಂದುತ್ತದೆ. ಆದುದರಿಂದ ನಿಮ್ಮ ಪೈಕಿ ಯಾರಿಗಾದರೂ ಕೋಪ ಬಂದರೆ ಅವನು ವುಝೂ ಮಾಡಲಿ.

[ಅಬೂ ದಾವೂದ್- ವರದಿ: ಅತಿಯ್ಯಾ ಸಅದೀ(ರ)]

ಟಿಪ್ಪಣಿ: ಒಬ್ಬನಿಗೆ ತನ್ನ ಮೇಲೆಯೇ ಬರುವ ಕೋಪವು ಶೈತಾನನ ಪ್ರೇರಣೆಯಿಂದಾಗಿರುತ್ತದೆ. ಆದರೆ ಸತ್ಯವಿಶ್ವಾಸಿಗೆ ಧರ್ಮವಿರೋಧಿಗಳ ಬಗ್ಗೆ ಬರುವ ಕೋಪವು ಪ್ರಶಂಸಾರ್ಹವಾಗಿದೆ. ಯಾರಾದರೂ ನಿಮ್ಮ ಧರ್ಮವನ್ನು ನಿರ್ಮೂಲನ ಮಾಡಲು ಪ್ರಯತ್ನಿಸುವಾಗ ಕೋಪ ಬರದಿರುವುದು ವಿಶ್ವಾಸದ ಕೊರತೆ ಮತ್ತು ಅಭಿಮಾನರಾಹಿತ್ಯದ ಸಂಕೇತವಾಗಿದೆ.

---

(236) إِنَّ رَسُوْلَ اللّٰهِ صَلَّى اللّٰهُ عَلَيْهِ وَسَلَّمَ قَالَ إِذَا غَضِبَ أَحَدُكُمْ وَهُوَ قَائِمٌ فَلْيَجْلِسْ فَإِنْ ذَهَبَ عَنْهُ الْغَضَبُ وَإِلَّا فَلْيَضْطَجِعْ (مشکوٰۃ ــــ ابوذرؓ)

ಪ್ರವಾದಿ(ಸ) ಹೇಳಿದರು- ನಿಮ್ಮ ಪೈಕಿ ಯಾರಿಗಾದರೂ ನಿಂತುಕೊಂಡಿರುವ ಸ್ಥಿತಿಯಲ್ಲಿ ಕೋಪ ಬಂದರೆ ಅವನು ಕುಳಿತುಕೊಳ್ಳಬೇಕು. ಅದರಿಂದ ಕೋಪ ಹೊರಟು ಹೋದರೆ ಒಳ್ಳೆಯದು. ಅನ್ಯಥಾ ಅವನು ಮಲಗಿಕೊಳ್ಳಬೇಕು. (ಇದರಿಂದ ಕೋಪ ಹೊರಟು ಹೋಗುವುದು) *[ಮಿಶ್ಕಾತ್- ಅಬೂದರ್(ರ)]*

ನಕಲು ಹೊಡೆಯುವುದು

(237) قَالَ النَّبِيُّ صَلَّى اللّٰهُ عَلَيْهِ وَسَلَّمَ مَا أُحِبُّ أَنِّي حَكَيْتُ أَحَدًا وَأَنَّ لِي كَذَا وَكَذَا

(ترمذی ــــ عائشہؓ)

ಪ್ರವಾದಿ(ಸ) ಹೇಳಿದರು- ನಾನು ಯಾರಾದರೂ ಅಣಕಿಸುವುದನ್ನು (Imitate) ಇಷ್ಟಪಡುವುದಿಲ್ಲ. ಅದಕ್ಕಾಗಿ ನನಗೆ ರಾಶಿ ಸಂಪತ್ತು ಸಿಕ್ಕಿದರೂ ಸರಿ.

[ತಿರ್ಮಿದಿ- ವರದಿ: ಆಯಿಶಾ(ರ)]

ಇತರರ ಸಂಕಷ್ಟದಿಂದ ಸಂತೋಷ ಪಡುವುದು

(238) قَالَ النَّبِيُّ صَلَّى اللّٰهُ عَلَيْهِ وَسَلَّمَ لَا تُظْهِرِ الشَّمَاتَةَ لِأَخِيكَ فَيَرْحَمَهُ اللّٰهُ وَيَبْتَلِيكَ (ترمذی ـــــ واثلہ رض)

ಪ್ರವಾದಿ(ಸ) ಹೇಳಿದರು- ನೀನು ನಿನ್ನ ಸಹೋದರನ ಸಂಕಷ್ಟವನ್ನು ಕಂಡು ಸಂತೋಷ ಪಡಬೇಡ. ಅನ್ಯಥಾ ಅಲ್ಲಾಹನು ಅವನ ಮೇಲೆ ಕರುಣೆ ತೋರುವನು ಮತ್ತು ನಿನ್ನನ್ನು ಸಂಕಷ್ಟಕ್ಕೆ ಗುರಿಪಡಿಸುವನು. *[ತಿರ್ಮಿದಿ- ವರದಿ: ವಾಸಿಲ(ರ)]*

ಸತ್ಯವಿಶ್ವಾಸಿಯ ಚಾರಿತ್ರ್ಯ

(239) إِنَّ رَسُولَ اللّٰهِ صَلَّى اللّٰهُ عَلَيْهِ وَسَلَّمَ قَالَ ثَلَاثٌ مِنْ أَخْلَاقِ الْمُؤْمِنِ مَنْ إِذَا غَضِبَ لَمْ يُدْخِلْهُ غَضَبُهُ فِي بَاطِلٍ، وَمَنْ إِذَا رَضِيَ لَمْ يُخْرِجْهُ رِضَاهُ عَنْ حَقٍّ وَمَنْ إِذَا قَدَرَ لَمْ يَتَعَاطَ مَا لَيْسَ لَهُ (مشکوۃ ـــــ انس رض)

ಪ್ರವಾದಿ(ಸ) ಹೇಳಿದರು- ಮೂರು ವಿಷಯಗಳು ಸತ್ಯವಿಶ್ವಾಸಿಯ ಗುಣ ನಡತೆಗಳಲ್ಲಿ ಸೇರಿವೆ. ಒಂದನೆಯದು, ಸತ್ಯವಿಶ್ವಾಸಿಗೆ ಕೋಪ ಬಂದಾಗ ಅವನ ಕೋಪವು ಅವನನ್ನು ತಪ್ಪುದಾರಿ ಹಿಡಿಯಲು ಪ್ರೇರೇಪಿಸುವುದಿಲ್ಲ. ಎರಡನೆಯದು, ಅವನು ಸಂತೋಷಗೊಂಡಾಗ ಅವನ ಸಂತೋಷವು ಅವನನ್ನು ಸತ್ಯಮಾರ್ಗದಿಂದ ವ್ಯತಿ ಚಲಿಸಲು ಬಿಡುವುದಿಲ್ಲ. ಮೂರನೆಯದು, ಅವನು ಬಲಶಾಲಿಯಾಗಿದ್ದಾಗ ಇತರರ ವಸ್ತುಗಳನ್ನು ಕಸಿಯುವುದಿಲ್ಲ.

[ಮಿಶ್ಕಾತ್- ವರದಿ: ಅನಸ್]

❖ ❖ ❖

ಸುಳ್ಳು

ಕಾಪಟ್ಯದ ಲಕ್ಷಣ

(240) إِنَّ النَّبِيَّ صَلَّى اللّٰهُ عَلَيْهِ وَسَلَّمَ قَالَ أَرْبَعٌ مَنْ كُنَّ فِيهِ كَانَ مُنَافِقًا خَالِصًا وَمَنْ كَانَتْ فِيهِ خَصْلَةٌ مِنْهُنَّ كَانَتْ فِيهِ خَصْلَةٌ مِنَ النِّفَاقِ حَتَّى يَدَعَهَا إِذَا أُؤْتُمِنَ خَانَ، وَإِذَا حَدَّثَ كَذَبَ، وَإِذَا وَعَدَ أَخْلَفَ، وَإِذَا خَاصَمَ فَجَرَ

(بخاری ومسلم۔ عبداللہ بن عمرو بن العاص)

ಪ್ರವಾದಿ(ಸ) ಹೇಳಿದರು: ನಾಲ್ಕು ದುರ್ಗುಣಗಳು ಯಾರಲ್ಲಿವೆಯೋ ಅವನು ಅಪ್ಪಟ ಮುನಾಫಿಕ್ (ಕಪಟವಿಶ್ವಾಸಿ) ಆಗಿದ್ದಾನೆ. ಅವುಗಳ ಪೈಕಿ ಒಂದು ದುರ್ಗುಣವಿದ್ದರೆ ಅದನ್ನು ತೊರೆಯುವವರೆಗೂ ಅವನಲ್ಲಿ ಅಷ್ಟಂಶ ಕಾಪಟ್ಯವಿರುವುದು. 1) ಅವನ ಬಳಿ ಏನಾದರೂ ಅಮಾನತು ಇಟ್ಟರೆ ಅದರಲ್ಲಿ ವಂಚನೆ ಮಾಡುವುದು. 2) ಮಾತಾಡುವಾಗ ಸುಳ್ಳು ಹೇಳುವುದು. 3) ವಚನ ಕೊಟ್ಟರೆ ಉಲ್ಲಂಘಿಸುವುದು. 4) ಯಾರೊಂದಿಗಾದರೂ ಜಗಳಕ್ಕಿಳಿದರೆ ಬೈಯುವುದು ಮತ್ತು ಸತ್ಯ-ನ್ಯಾಯದ ಮೇರೆ ಮೀರುವುದು.

[ಬುಖಾರಿ, ಮುಸ್ಲಿಮ್- ವರದಿ: ಅಬ್ದುಲ್ಲಾ ಬಿನ್ ಅಮ್ರ್ ಬಿನ್ ಆಸ್(ರ)]

ಅತಿದೊಡ್ಡ ಸುಳ್ಳು

(241) قَالَ النَّبِيُّ صَلَّى اللّٰهُ عَلَيْهِ وَسَلَّمَ أَفْرَى الْفِرَى أَنْ يُرِيَ الرَّجُلُ عَيْنَيْهِ مَا لَمْ تَرَيَا (بخاری۔ ابن عمرؓ)

ಪ್ರವಾದಿ(ಸ) ಹೇಳಿದರು: ಮನುಷ್ಯನು ತನ್ನ ಕಣ್ಣುಗಳಿಗೆ ಅವು ನೋಡದ ಕನಸುಗಳನ್ನು ತೋರಿಸುವುದು ಅತಿದೊಡ್ಡ ಸುಳ್ಳಾಗಿದೆ. *[ಬುಖಾರಿ- ವರದಿ: ಇಬ್ನು ಉಮರ್(ರ)]*

ಟಿಪ್ಪಣಿ: ಅರ್ಥಾತ್ ಅವನು ಕನಸು ಕಾಣದಿದ್ದರೂ ಬೆಳಿಗ್ಗೆದ್ದು ತನ್ನ ಸಂಗಾತಿಗಳೊಂದಿಗೆ ತಾನು ಇಂತಿಂತಹ ಒಳ್ಳೆಯ ಕನಸುಗಳನ್ನು ಕಂಡಿದ್ದೇನೆ ಎಂದು ಹೇಳುತ್ತಾನೆ. ಹೀಗೆ ಮಾಡುವುದು ಕಣ್ಣಿನಿಂದ ಸುಳ್ಳು ಹೇಳಿಸುವುದಾಗಿದೆ. ಬೇರೆ ಮಾತಿನಲ್ಲಿ ಹೇಳುವುದಾದರೆ ಅವನು ತನ್ನ ಕಣ್ಣುಗಳ ಮೇಲೆ ಅಪವಾದ ಹೊರಿಸುತ್ತಾನೆ. ಕಣ್ಣುಗಳು ನೋಡದ ವಿಷಯಗಳನ್ನು ಅವುಗಳ ಮೇಲೆ ಆರೋಪಿಸುತ್ತಾನೆ.

ಅತಿದೊಡ್ಡ ವಂಚನೆ

(242) عَنْ سُفْيَانَ بْنِ أَسِيْدٍ الْحَضْرَمِيِّ قَالَ سَمِعْتُ رَسُوْلَ اللّٰهِ صَلَّى اللّٰهُ عَلَيْهِ وَسَلَّمَ يَقُوْلُ كَبُرَتْ خِيَانَةً أَنْ تُحَدِّثَ أَخَاكَ حَدِيْثًا وَهُوَ لَكَ بِهِ مُصَدِّقٌ وَأَنْتَ بِهِ كَاذِبٌ، (ابوداؤد)

ಸುಫ್ಯಾನ್ ಬಿನ್ ಉಸೈದ್ ಹದ್ರಮೀ(ರ) ಹೇಳುತ್ತಾರೆ- ಪ್ರವಾದಿ(ಸ) ಹೀಗೆ ಹೇಳಿರುವುದಾಗಿ ನಾನು ಕೇಳಿದ್ದೇನೆ- ನೀವು ನಿಮ್ಮ ಸಹೋದರನೊಂದಿಗೆ ಒಂದು ವಿಷಯ ಹೇಳಿದಿರಿ. ಅವನು ಅದನ್ನು ಸತ್ಯವೆಂದು ನಂಬಿದನು. ವಸ್ತುತಃ ನೀವು ಅವನೊಂದಿಗೆ ಸುಳ್ಳು ಹೇಳಿದ್ದೀರಿ. ಇದಕ್ಕಿಂತ ದೊಡ್ಡ ವಂಚನೆ ಇನ್ನೇನಿರಬಹುದು? *[ಅಬೂ ದಾವೂದ್]*

ಮಕ್ಕಳೊಂದಿಗೆ ಸುಳ್ಳು ಹೇಳುವುದು

(243) عَنْ عَبْدِ اللّٰهِ بْنِ عَامِرٍ قَالَ دَعَتْنِيْ أُمِّيْ يَوْمًا وَرَسُوْلُ اللّٰهِ صَلَّى اللّٰهُ عَلَيْهِ وَسَلَّمَ قَاعِدٌ فِيْ بَيْتِنَا، فَقَالَتْ تَعَالَ أُعْطِيْكَ، فَقَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ مَا أَرَدْتِّ أَنْ تُعْطِيْهِ؟ قَالَتْ أَرَدْتُّ أَنْ أُعْطِيَهُ تَمْرًا، فَقَالَ لَهَا رَسُوْلُ اللّٰهِ صَلَّى اللّٰهُ عَلَيْهِ وَسَلَّمَ أَمَا إِنَّكِ لَوْ لَمْ تُعْطِيْهِ شَيْئًا كُتِبَتْ عَلَيْكِ كَذْبَةٌ

(ابوداؤد)

ಅಬ್ದುಲ್ಲಾ ಬಿನ್ ಆಮಿರ್(ರ) ಹೇಳುತ್ತಾರೆ- ಒಂದು ದಿನ ಪ್ರವಾದಿಯವರು(ಸ) ನಮ್ಮ ಮನೆಗೆ ಬಂದಿದ್ದರು. ನನ್ನ ತಾಯಿ ನನ್ನನ್ನು ಕೂಗಿ ಕರೆಯುತ್ತಾ "ಇಲ್ಲಿ ಬಾ ನಿನಗೊಂದು ವಸ್ತು ಕೊಡುತ್ತೇನೆ" ಎಂದರು. ಪ್ರವಾದಿ(ಸ) ತಾಯಿಯೊಡನೆ- "ನೀವೇನು ಕೊಡಬಯಸಿದ್ದೀರಿ?" ಎಂದು ಕೇಳಿದರು. ಅವರು ಹೇಳಿದರು, ನಾನು ಅವನಿಗೆ ಖರ್ಜೂರ ಕೊಡಬಯಸಿದ್ದೆ. ಆಗ ಪ್ರವಾದಿ(ಸ) ಹೇಳಿದರು- ನೀವು ಅವನಿಗೆ ಏನಾದರೂ ಕೊಡದೆ ಇರುತ್ತಿದ್ದರೆ ನಿಮ್ಮ ಕರ್ಮಪತ್ರದಲ್ಲಿ ಒಂದು ಸುಳ್ಳು ಬರೆಯಲ್ಪಡುತ್ತಿತ್ತು. *[ಅಬೂ ದಾವೂದ್]*

ಟಿಪ್ಪಣಿ: ತಂದೆ-ತಾಯಿಗಳು ಈ ಪ್ರವಾದಿ ವಚನವನ್ನು ಚೆನ್ನಾಗಿ ನೆನಪಿಟ್ಟುಕೊಳ್ಳಬೇಕು.

ಮಕ್ಕಳೊಂದಿಗೆ ಸುಳ್ಳು ಹೇಳಬಾರದು

(244) عَنْ عَبْدِ اللهِ قَالَ لَا يَصْلُحُ الْكَذِبُ فِي جِدٍّ وَلَا هَزْلٍ، وَلَا أَنْ يَعِدَ أَحَدُكُمْ وَلَدَهُ شَيْئًا ثُمَّ لَا يُنْجِزُ لَهُ (الادب المفرد للبخاری)

ಅಬ್ದುಲ್ಲಾ(ರ) ಹೇಳುತ್ತಾರೆ; ಸಾಮಾನ್ಯ ಸ್ಥಿತಿಯಲ್ಲಾಗಲಿ, ತಮಾಷೆಯಲ್ಲಾಗಲಿ ಎಂದೂ ಸುಳ್ಳು ಹೇಳಬಾರದು. ನೀವು ನಿಮ್ಮ ಮಕ್ಕಳೊಂದಿಗೆ ಯಾವುದಾದರೂ ವಾಗ್ದಾನ ಮಾಡಿ ಅದನ್ನು ಪೂರೈಸದಿರುವುದೂ ಸರಿಯಲ್ಲ.

[ಅಲ್ ಅದಬುಲ್ ಮುಫ್ರದ್- ಅಲ್ ಬುಖಾರಿ]

ತಮಾಷೆಗಾಗಿ ಸುಳ್ಳಾಡುವುದು

(245) قَالَ رَسُوْلُ اللهِ صَلَّى اللهُ عَلَيْهِ وَسَلَّمَ وَيْلٌ لِّمَنْ يُحَدِّثُ فَيَكْذِبُ لِيُضْحِكَ بِهِ الْقَوْمَ وَيْلٌ لَهُ وَيْلٌ لَهُ (ترمذی ـــــ بہز بن حکیم رض)

ಪ್ರವಾದಿ(ಸ) ಹೇಳಿದರು: ಜನರನ್ನು ನಗಿಸಲಿಕ್ಕಾಗಿ ಸುಳ್ಳಾಡುವವನಿಗೆ ನಾಶವಿದೆ. ಅವನಿಗೆ ನಾಶವಿದೆ. ಅವನಿಗೆ ನಾಶವಿದೆ. *[ತಿರ್ಮಿದಿ- ಬಹಝ್ ಬಿನ್ ಹಕೀಮ್(ರ)]*

ಗೋಮುಖ ವ್ಯಾಘ್ರತೆ

(246) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ تَجِدُوْنَ شَرَّ النَّاسِ يَوْمَ
الْقِيَامَةِ ذَا الْوَجْهَيْنِ الَّذِيْ هٰؤُلَاءِ بِوَجْهٍ وَهٰؤُلَاءِ بِوَجْهٍ

(بخاری ومسلم ـــــ ابوہریرہ رضؓ)

ಪ್ರವಾದಿ(ಸ) ಹೇಳಿದರು- ನೀವು ನಿರ್ಣಾಯಕ ದಿನದಂದು ಅತ್ಯಂತ ದುಷ್ಟನೊಬ್ಬನನ್ನು ಕಾಣುವಿರಿ. ಅವನು ಈ ಲೋಕದಲ್ಲಿ ದ್ವಿಮುಖ ನೀತಿಯನ್ನು ಅನುಸರಿಸುತ್ತಿದ್ದನು. ಕೆಲವ ರೊಂದಿಗೆ ಒಂದು ರೀತಿಯಲ್ಲಿ ಭೇಟಿಯಾಗುತ್ತಿದ್ದರೆ ಇನ್ನು ಕೆಲವರೊಂದಿಗೆ ಬೇರೆಯೇ ರೀತಿಯಲ್ಲಿ ಮಾತನಾಡುತ್ತಿದ್ದನು.

[ಬುಖಾರಿ, ಮುಸ್ಲಿಮ್- ಅಬೂ ಹುರೈರಾ(ರ)]

ಟಿಪ್ಪಣಿ: ಇಬ್ಬರು ವ್ಯಕ್ತಿಗಳೊಳಗೆ ಅಥವಾ ಎರಡು ಗುಂಪುಗಳೊಳಗೆ ಏನಾದರೂ ವಿವಾದಗಳಿದ್ದರೆ ಉಭಯತ್ರರನ್ನೂ ಸಮೀಪಿಸುವ ಕೆಲವು ವ್ಯಕ್ತಿಗಳು ಎಲ್ಲೆಡೆ ಇರುತ್ತಾರೆ. ಎರಡೂ ಕಡೆಯವರ ಮಾತಿಗೆ ಹೂಂಗುಟ್ಟುತ್ತಾರೆ ಮತ್ತು ಅವರೊಳಗಿನ ವಿವಾದಗಳಿಗೆ ಇನ್ನಷ್ಟು ಗಾಳಿ ಹಾಕುತ್ತಾರೆ. ಇವರು ರಾಜಿ ಮಾಡಲು ಪ್ರಯತ್ನಿಸುವುದಿಲ್ಲ. ಬದಲಾಗಿ ದ್ವೇಷದ ಅಗ್ನಿಯನ್ನು ಇನ್ನಷ್ಟು ಹೊತ್ತಿಸುವ ಚಿಂತೆಯಲ್ಲಿರುತ್ತಾರೆ.

ಅಶ್ಲೀಲ ಮಾತು ಮತ್ತು ಬೈಗುಳ

(247) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اِنَّ اَثْقَلَ شَيْءٍ فِيْ مِيْزَانِ الْمُؤْمِنِ
يَوْمَ الْقِيَامَةِ خُلُقٌ حَسَنٌ، وَاِنَّ اللّٰهَ يُبْغِضُ الْفَاحِشَ الْبَذِيَّ

(ترمذی ـــــ ابوالدرداءؓ)

ಪ್ರವಾದಿ(ಸ) ಹೇಳಿದರು: ನಿರ್ಣಾಯಕ ದಿನದಂದು ಸತ್ಯವಿಶ್ವಾಸಿಯ ತಕ್ಕಡಿಯಲ್ಲಿಡಲಾಗುವ ಅತ್ಯಂತ ಭಾರದ ವಸ್ತು ಉತ್ತಮ ಚಾರಿತ್ರ್ಯವಾಗಿರುವುದು. ಅಲ್ಲಾಹನು ಅಶ್ಲೀಲ ಮಾತುಗಳನ್ನಾಡುವವನನ್ನು ಮತ್ತು ಬೈಯುವವನನ್ನು ದ್ವೇಷಿಸುತ್ತಾನೆ.

[ತಿರ್ಮಿದಿ- ವರದಿ: ಅಬೂದ್ದರ್ದಾ(ರ)]

ಟಿಪ್ಪಣಿ: ಮೂಲದಲ್ಲಿ 'ಖುಲುಕುನ್ ಹಸನುನ್' ಎಂಬ ಪದ ಬಳಕೆಯಾಗಿದೆ. ಅದನ್ನು ಸುಪ್ರಸಿದ್ಧ ಹದೀಸ್ ತಜ್ಞ ಅಬ್ದುಲ್ಲಾ ಬಿನ್ ಮುಬಾರಕ್(ರ) ಹೀಗೆ ವ್ಯಾಖ್ಯಾನಿಸಿದ್ದಾರೆ- ಮಾನವನು ಪ್ರಸನ್ನವದನನಾಗಿ ಜನರೊಂದಿಗೆ ಮಾತನಾಡುವುದು, ಅಪೇಕ್ಷಿತರ ಮೇಲೆ ಖರ್ಚು ಮಾಡುವುದು ಮತ್ತು ಯಾರಿಗೂ ಉಪದ್ರವ ಮಾಡದಿರುವುದು ಸಚ್ಚಾರಿತ್ರ್ಯವಾಗಿದೆ.

ಬೆಂಕಿಯ ನಾಲಗೆಗಳು

(248) قَالَ رَسُوْلُ اللهِ صَلَّى اللهُ عَلَيْهِ وَسَلَّمَ مَنْ كَانَ ذَا وَجْهَيْنِ فِي الدُّنْيَا كَانَ لَهُ يَوْمَ الْقِيَامَةِ لِسَانَانِ مِنْ نَارٍ (ابوداود ـــــ عمار رض)

ಪ್ರವಾದಿ(ಸ) ಹೇಳಿದರು: ಲೋಕದಲ್ಲಿ ಇಬ್ಬಗೆಯ ನೀತಿಯನ್ನು ಅಳವಡಿಸಿಕೊಂಡವನ ಬಾಯಿಯಲ್ಲಿ ನಿರ್ಣಾಯಕ ದಿನದಂದು ಎರಡು ಬೆಂಕಿಯ ನಾಲಗೆಗಳಿರುವುದು.

[ಅಬೂ ದಾವೂದ್- ವರದಿ: ಅಮ್ಮಾರ್(ರ)]

ಟಿಪ್ಪಣಿ: ಪರಲೋಕದಲ್ಲಿ ಅವನ ಬಾಯಿಯಲ್ಲಿ ಬೆಂಕಿಯ ಎರಡು ನಾಲಗೆಗಳಿರುವುವು. ಯಾಕೆಂದರೆ ಲೋಕದಲ್ಲಿ ಅವನ ಬಾಯಿಯಿಂದ ಬೆಂಕಿ ಹೊರಡುತ್ತಿದ್ದು ಅದು ಇಬ್ಬರೊಳಗಿನ ಪರಸ್ಪರ ಸಂಬಂಧಗಳನ್ನು ಉರಿಸುತ್ತಿತ್ತು.

ಮೃತರನ್ನು ನಿಂದಿಸಬಾರದು

(249) قَالَ رَسُوْلُ اللهِ صَلَّى اللهُ عَلَيْهِ وَسَلَّمَ لَا تَسُبُّوا الْأَمْوَاتَ فَإِنَّهُمْ قَدْ أَفْضَوْا إِلَى مَا قَدَّمُوْا (الادب المفرد ـــــ عائشة رض)

ಪ್ರವಾದಿ(ಸ) ಹೇಳಿದರು- ಮೃತರನ್ನು ಹಳಿಯಬೇಡಿರಿ. ಯಾಕೆಂದರೆ ಅವರು ತಮ್ಮ ಕರ್ಮಗಳೊಂದಿಗೆ ತಮ್ಮ ಪ್ರಭುವಿನ ಬಳಿಗೆ ಹೋಗಿ ಬಿಟ್ಟಿದ್ದಾರೆ.

[ಅಲ್ ಅದಬುಲ್ ಮುಫ್ರದ್- ಹ. ಆಯಿಶಾ(ರ)]

ಪರನಿಂದೆ ಮತ್ತು ಅಪವಾದ

(250) اِنَّ رَسُوْلَ اللّٰهِ صَلَّى اللّٰهُ عَلَيْهِ وَسَلَّمَ قَالَ اَتَدْرُوْنَ مَا الْغِيْبَةُ ؟ قَالُوا اللّٰهُ
وَرَسُوْلُهٗ اَعْلَمُ، قَالَ ذِكْرُكَ اَخَاكَ بِمَا يَكْرَهُ، قِيْلَ اَفَرَأَيْتَ اِنْ كَانَ فِيْ اَخِيْ
مَا اَقُوْلُ ؟ قَالَ اِنْ كَانَ فِيْهِ مَا تَقُوْلُ فَقَدِ اغْتَبْتَهٗ وَاِنْ لَّمْ يَكُنْ فِيْهِ مَا تَقُوْلُ
فَقَدْ بَهَتَّهٗ (مشکوٰۃ ــــ ابوہریرہ رض)

ಪ್ರವಾದಿ(ಸ) ತಮ್ಮ ಸಂಗಾತಿಗಳೊಡನೆ ಕೇಳಿದರು- ಗೀಬತ್ (ಪರನಿಂದೆ) ಎಂದರೇನೆಂದು ನಿಮಗೆ ತಿಳಿದಿದೆಯೇ? ಜನರು ಹೇಳಿದರು- 'ಅದನ್ನು ಅಲ್ಲಾಹ್ ಮತ್ತು ಅವನ ಸಂದೇಶವಾಹಕರೇ ಚೆನ್ನಾಗಿ ಬಲ್ಲರು'. ಆಗ ಪ್ರವಾದಿ ಹೇಳಿದರು: ನೀನು ನಿನ್ನ ಸಹೋದರನ ಬಗ್ಗೆ ಅವನಿಗೆ ಇಷ್ಟವಿಲ್ಲದ ರೀತಿಯಲ್ಲಿ ಪ್ರಸ್ತಾಪಿಸುವುದೇ ಪರನಿಂದೆಯಾಗಿದೆ. ಜನರು ಕೇಳಿದರು- ನಾವು ಹೇಳುವಂತಹ ವಿಷಯ ನಮ್ಮ ಸಹೋದರನಲ್ಲಿ ನಿಜವಾಗಿಯೂ ಇದ್ದರೆ ಅದು ಪರನಿಂದೆಯಾಗುವುದೇ? ಪ್ರವಾದಿ(ಸ) ಹೇಳಿದರು- ಹೌದು, ಅದು ಅವನಲ್ಲಿದ್ದರೆ ಪರನಿಂದೆಯಾಗುವುದು- ಆ ವಿಷಯ ಅವನಲ್ಲಿಲ್ಲದಿದ್ದರೆ ಅದು ಅಪವಾದವಾಗುವುದು.

[ಮಿಶ್ಕಾತ್- ಅಬೂ ಹುರೈರಾ(ರ)]

ಪರನಿಂದೆ ವ್ಯಭಿಚಾರಕ್ಕಿಂತ ಘೋರ ಅಪರಾಧ

(251) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اَلْغِيْبَةُ اَشَدُّ مِنَ الزِّنَا، قَالُوْا يَا
رَسُوْلَ اللّٰهِ وَكَيْفَ الْغِيْبَةُ اَشَدُّ مِنَ الزِّنَا ؟ قَالَ اِنَّ الرَّجُلَ لَيَزْنِيْ فَيَتُوْبُ اللّٰهُ عَلَيْهِ
وَاِنَّ صَاحِبَ الْغِيْبَةِ لَا يُغْفَرُ لَهٗ حَتّٰى يَغْفِرَهَا لَهٗ صَاحِبُهٗ (مشکوٰۃ ــــ ابوسعید وجابرؓ)

ಪ್ರವಾದಿ(ಸ) ಹೇಳಿದರು- ಪರನಿಂದೆಯು ವ್ಯಭಿಚಾರಕ್ಕಿಂತ ಘೋರ ಅಪರಾಧ ವಾಗಿದೆ. ಸಹಾಬಿಗಳು ಕೇಳಿದರು- ಪರನಿಂದೆಯು ವ್ಯಭಿಚಾರಕ್ಕಿಂತ ಘೋರ ಅಪರಾಧ ವಾಗಲು ಕಾರಣವೇನು? ಪ್ರವಾದಿ(ಸ) ಹೇಳಿದರು- ಒಬ್ಬನು ವ್ಯಭಿಚಾರವೆಸಗಿದ ನಂತರ ತನ್ನ ಪ್ರಭುವಿನಲ್ಲಿ ಪಶ್ಚಾತ್ತಾಪಪಟ್ಟು ಕ್ಷಮಾಪಣೆ ಮಾಡಿದರೆ ಅವನ ಅಪರಾಧ ಕ್ಷಮಿಸಲ್ಪಡುವುದು.

ಆದರೆ ಪರನಿಂದೆಗೊಳಗಾದ ವ್ಯಕ್ತಿಯು ಕ್ಷಮಿಸುವವರೆಗೆ ಪರನಿಂದೆಗೈದವನನ್ನು ಅಲ್ಲಾಹನು ಕ್ಷಮಿಸುವುದಿಲ್ಲ. *[ಮಿಶ್ಕಾತ್- ವರದಿ: ಅಬೂ ಸಈದ್ ಮತ್ತು ಜಾಬಿರ್(ರ)]*

ಪರನಿಂದೆಯ ಪ್ರಾಯಶ್ಚಿತ್ತ

(252) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اِنَّ مِنْ كَفَّارَةِ الْغِيْبَةِ اَنْ تَسْتَغْفِرَ
لِمَنِ اغْتَبْتَهٗ تَقُوْلُ اَللّٰهُمَّ اغْفِرْ لَنَا وَلَهٗ (مشکوٰۃ ـــــ انسؓ)

ಪ್ರವಾದಿ(ಸ) ಹೇಳಿದರು- ನಿನ್ನಿಂದ ಪರನಿಂದೆಗೊಳಗಾದವನ ಪರವಾಗಿ ನೀನು ಅಲ್ಲಾಹನಲ್ಲಿ ಕ್ಷಮೆಯಾಚಿಸುವುದೇ ಪರನಿಂದೆಯ ಪ್ರಾಯಶ್ಚಿತ್ತವಾಗಿದೆ. ನೀನು ಹೀಗೆ ಪ್ರಾರ್ಥಿಸಬೇಕು, 'ಓ ಅಲ್ಲಾಹ್! ನೀನು ನನ್ನನ್ನೂ ಆ ವ್ಯಕ್ತಿಯನ್ನೂ ಕ್ಷಮಿಸು. (ಇದು ಅವನಿಂದ ಕ್ಷಮೆ ಕೇಳಲು ಸಾಧ್ಯವಿಲ್ಲದ ಸ್ಥಿತಿಯಲ್ಲಿ ಮಾತ್ರ. ಉದಾ: ಅವನು ಮರಣ ಹೊಂದಿದರೆ ಅಥವಾ ದೂರದ ಪ್ರದೇಶಕ್ಕೆ ಹೋಗಿದ್ದರೆ,)

[ಮಿಶ್ಕಾತ್- ವರದಿ: ಹ. ಅನಸ್(ರ)]

ಅತ್ಯಂತ ಕೆಟ್ಟ ಸ್ಥಿತಿಯಲ್ಲಿರುವವನು

(253) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ مِنْ شَرِّ النَّاسِ مَنْزِلَةً يَوْمَ الْقِيَامَةِ
عَبْدٌ اَذْهَبَ آخِرَتَهٗ بِدُنْيَا غَيْرِهٖ (مشکوٰۃ ـــــ ابوامامہؓ)

ಪ್ರವಾದಿ(ಸ) ಹೇಳಿದರು- ಇತರರ ಲೋಕವನ್ನು ಬೆಳಗಿಸಲಿಕ್ಕಾಗಿ ತನ್ನ ಪರಲೋಕವನ್ನು ನಷ್ಟಗೊಳಿಸಿದವನು ನಿರ್ಣಾಯಕ ದಿನದಂದು ಅತ್ಯಂತ ಕೆಟ್ಟ ಸ್ಥಿತಿಯಲ್ಲಿರುವನು.

[ಮಿಶ್ಕಾತ್- ವರದಿ: ಅಬೂ ಉಮಾಮ(ರ)]

ಕೋಮು ಪಕ್ಷಪಾತ

(254) عَنْ اَبِیْ فَسِیْلَةَ قَالَ سَأَلْتُ فَقُلْتُ يَا رَسُوْلَ اللهِ أَمِنَ الْعَصَبِيَّةِ
اَنْ يُحِبَّ الرَّجُلُ قَوْمَهُ؟ قَالَ لَا، وَلٰكِنْ مِنَ الْعَصَبِيَّةِ اَنْ يَنْصُرَ الرَّجُلُ قَوْمَهُ
عَلَى الظُّلْمِ (مشكوٰة)

ಅಬೂ ಫಸೀಲ(ರ) ಹೇಳುತ್ತಾರೆ- ನಾನು ಪ್ರವಾದಿಯವರಲ್ಲಿ(ಸ) ಕೇಳಿದೆ- ನನ್ನವರನ್ನು ಪ್ರೀತಿಸುವುದು ಕೋಮು ಪಕ್ಷಪಾತವೇ? ಪ್ರವಾದಿ(ಸ) ಹೇಳಿದರು- ಅಲ್ಲ, ಅದು ಪಕ್ಷಪಾತವಲ್ಲ. ಒಬ್ಬನು ತನ್ನವರಿಗೆ ಅವರ ಅಕ್ರಮ ಕಾರ್ಯಗಳಲ್ಲೂ ನೆರವಾಗುವುದು ಕೋಮು ಪಕ್ಷಪಾತವಾಗಿದೆ. *[ಮಿಶ್ಕಾತ್]*

ಅಕ್ರಮ ಬೆಂಬಲ ವಿನಾಶಕಾರಿ

(255) قَالَ رَسُوْلُ اللهِ صَلَّى اللهُ عَلَيْهِ وَسَلَّمَ مَنْ نَصَرَ قَوْمَهُ عَلٰى غَيْرِ الْحَقِّ
فَهُوَ كَالْبَعِيْرِ الَّذِیْ رَدٰی فَهُوَ يُنْزَعُ بِذَنَبِهٖ (ابوداؤد ـــــ ابن مسعودؓ)

ಪ್ರವಾದಿ(ಸ) ಹೇಳಿದರು- ಮಿಥ್ಯ ಮತ್ತು ನಿಷಿದ್ಧ ಕಾರ್ಯಗಳಲ್ಲಿ ತಮ್ಮ ಗೋತ್ರ (ಕುಲ, ಕುಟುಂಬ ಅಥವಾ ಜನಾಂಗ)ವನ್ನು ಬೆಂಬಲಿಸುವವನ ಉದಾಹರಣೆ, ಬಾವಿಗೆ ಬೀಳುವ ಒಂಟೆಯ ಬಾಲ ಹಿಡಿದವನಂತಿದೆ. ಒಂಟೆಯ ಜೊತೆ ಅವನೂ ಬಾವಿಯಲ್ಲಿ ಬೀಳುವನು. *[ಅಬೂ ದಾವೂದ್- ವರದಿ: ಇಬ್ನು ಮಸ್ಊದ್(ರ)]*

(256) قَالَ رَسُوْلُ اللهِ صَلَّى اللهُ عَلَيْهِ وَسَلَّمَ لَيْسَ مِنَّا مَنْ دَعَا اِلٰى عَصَبِيَّةٍ، وَلَيْسَ
مِنَّا مَنْ قَاتَلَ عَصَبِيَّةً، وَلَيْسَ مِنَّا مَنْ مَاتَ عَلٰى عَصَبِيَّةٍ۔ (ابوداؤد ـــ جبیر بن مطعمؓ)

ಪ್ರವಾದಿ(ಸ) ಹೇಳಿದರು- ಕೋಮು ಪಕ್ಷಪಾತದ ಕಡೆಗೆ ಕರೆ ನೀಡುವವನು ನಮ್ಮವನಲ್ಲ. ಕೋಮುಭಾವನೆಯೊಂದಿಗೆ ಯುದ್ಧ ಮಾಡುವವನೂ ನಮ್ಮವನಲ್ಲ. ಕೋಮು ಪಕ್ಷಪಾತದೊಂದಿಗೆ ಸಾಯುವವನೂ ನಮ್ಮವನಲ್ಲ.

[ಅಬೂ ದಾವೂದ್- ವರದಿ: ಜುಬೈರ್ ಬಿನ್ ಮುತ್ಇಮ್(ರ)]

ಟಿಪ್ಪಣಿ: ಕೋಮುಪಕ್ಷಪಾತವೆಂದರೆ, "ಸತ್ಯದಲ್ಲಿದ್ದರೂ ಅಸತ್ಯದಲ್ಲಿದ್ದರೂ ನನ್ನವರು" ಎಂಬ ಭಾವನೆ. ಇದು ಅಜ್ಞಾನಜನ್ಯ ಪಕ್ಷಪಾತವಾಗಿದೆ. ಈ ಸಿದ್ಧಾಂತದ ಕಡೆಗೆ ಜನರನ್ನು ಆಹ್ವಾನಿಸುವುದು, ಈ ಭಾವನೆಯೊಂದಿಗೆ ಯುದ್ಧ ಮಾಡುವುದು, ಇದೇ ಮನೋಭಾವವನ್ನು ಹೊತ್ತುಕೊಂಡು ಮರಣ ಹೊಂದುವುದು ಮುಸ್ಲಿಮರಿಗೆ ಹೇಳಿಸಿದ್ದಲ್ಲ, ಅಂತಹ ವ್ಯಕ್ತಿಗಳೊಂದಿಗೆ ತನ್ನ ಸಂಬಂಧವೇ ಇಲ್ಲವೆಂದು ಪ್ರವಾದಿ(ಸ) ಹೇಳಿದ್ದಾರೆ.

ಮುಖಸ್ತುತಿಯ ಖಂಡನೆ

(257) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اِذَا رَاَيْتُمُ الْمَدَّاحِيْنَ فَاحْثُوْا فِيْ وُجُوْهِهِمُ التُّرَابَ (مسلم — مقداد رض)

ಪ್ರವಾದಿ(ಸ) ಹೇಳಿದರು- ನೀವು ಮುಖ ಸ್ತುತಿ ಮಾಡುವವರನ್ನು ಕಂಡರೆ ಅವರ ಮುಖಕ್ಕೆ ಮಣ್ಣೆರಚಿರಿ. *[ಮುಸ್ಲಿಮ್, ವರದಿ: ಮಿಕ್ದಾದ್(ರ)]*

ಟಿಪ್ಪಣಿ: ಮೂಲದಲ್ಲಿ 'ಮದ್ದಾಹೀನ್' ಎಂಬ ಪದ ಬಳಕೆಯಾಗಿದೆ. ಅರ್ಥಾತ್ ಜನರ ಮುಖಸ್ತುತಿಯನ್ನು ತಮ್ಮ ಕಾಯಕವನ್ನಾಗಿ ಮಾಡಿಕೊಂಡಿರುವವರು. ತಮಗೇನಾದರೂ ಸಿಗುವುದೆಂಬ ಆಸೆಯಿಂದ ಅವರು ಅಹೋರಾತ್ರಿ ಪರಿಶ್ರಮಿಸುತ್ತಾರೆ. ಇಂತಹ ವ್ಯಕ್ತಿಗಳು ಅಜ್ಞಾನ ಕಾಲದಲ್ಲೂ ಇದ್ದರು. ಈಗಲೂ ಇದ್ದಾರೆ. ಇಂತಹ ವ್ಯಕ್ತಿಗಳ ಮುಖಕ್ಕೆ ಮಣ್ಣು ಎಸೆಯಿರೆಂದು ಪ್ರವಾದಿ(ಸ) ಹೇಳಿದ್ದಾರೆ. ಅಂದರೆ ಅವರಿಗೆ ಏನೂ ಕೊಡದೆ ಹಾಗೆಯೇ ಮರಳಿಸಿರಿ.

ಫಾಸಿಕ್‌ನನ್ನು ಹೊಗಳುವುದು

(258) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اِذَا مُدِحَ الْفَاسِقُ غَضِبَ الرَّبُّ تَعَالٰى وَاهْتَزَّ لَهُ الْعَرْشُ (مشكوة — انس رض)

ಪ್ರವಾದಿ(ಸ) ಹೇಳಿದರು- ಫಾಸಿಕ್ (ಕರ್ಮಭ್ರಷ್ಟ)ನನ್ನು ಹೊಗಳುವಾಗ, ಅಲ್ಲಾಹನು ಕುಪಿತಗೊಳ್ಳುತ್ತಾನೆ ಮತ್ತು ಅರ್ಶ್ (ವಿಶ್ವಪೀಠ) ಅಲುಗಾಡ ತೊಡಗುತ್ತದೆ.

[ಮಿಶ್ಕಾತ್- ವರದಿ: ಹ. ಅನಸ್(ರ)]

ಟಿಪ್ಪಣಿ: ಅಲ್ಲಾಹನ ಆಜ್ಞೆಗಳನ್ನು ಗೌರವಿಸದೆ ಬಹಿರಂಗವಾಗಿ ಉಲ್ಲಂಘಿಸುವಾತನು ಸ್ವಲ್ಪವೂ ಗೌರವಕ್ಕೆ ಅರ್ಹನಲ್ಲ. ಮುಸ್ಲಿಮ್ ಸಮಾಜದಲ್ಲಿ ಇಂತಹ ವ್ಯಕ್ತಿಗಳಿಗೆ ಗೌರವ ಸಲ್ಲಿಸಲಾಗುತ್ತದೆ. ಅವರಿಗೆ

ದೇಶದ ಆಡಳಿತವನ್ನು ಒಪ್ಪಿಸಲಾಗುತ್ತದೆ ಎಂದಾದರೆ ಅದರ ಅರ್ಥ ಆ ಸಮಾಜದ ಜನರಿಗೆ ಅಲ್ಲಾಹನ ಧರ್ಮದೊಂದಿಗೆ ಪ್ರೀತಿಯೇ ಇಲ್ಲ ಎಂದಾಗುತ್ತದೆ. ಒಂದು ವೇಳೆ ಇದ್ದರೂ ನಾಮ ಮಾತ್ರ. ಇಂತಹ ಪ್ರೀತಿಯು ಅಲ್ಲಾಹನ ಸಾಮೂಹಿಕ ಕರುಣೆ ಮತ್ತು ಸಹಾಯಕ್ಕೆ ಅವರನ್ನು ಅರ್ಹಗೊಳಿಸುವುದಿಲ್ಲ.

ಮುಖಸ್ತುತಿ

(259) عَنْ اَبِیْ بَکْرَةَ قَالَ اَثْنٰی رَجُلٌ عَلٰی رَجُلٍ عِنْدَ النَّبِیِّ صَلَّی اللّٰهُ عَلَیْهِ وَسَلَّمَ فَقَالَ
وَیْلَكَ قَطَعْتَ عُنُقَ اَخِیْكَ ثَلَاثًا، مَنْ كَانَ مِنْكُمْ مَادِحًا لَا مَحَالَةَ، فَلْیَقُلْ اَحْسِبُ
فُلَانًا وَاللّٰهُ حَسِیْبُهٗ اِنْ كَانَ یَرٰی اَنَّهٗ كَذٰلِكَ، وَلَا یُزَکِّیْ عَلَی اللّٰهِ اَحَدًا
(بخاری ومسلم)

ಅಬೂಬಕ್ರಃ(ರ) ಹೇಳುತ್ತಾರೆ- ಒಮ್ಮೆ ಒಬ್ಬ ವ್ಯಕ್ತಿಯು ಪ್ರವಾದಿಯವರ(ಸ) ಸನ್ನಿಧಿಯಲ್ಲಿ ಇನ್ನೊಬ್ಬನ ಮುಖಸ್ತುತಿ ಮಾಡಿದರು. (ಆ ವ್ಯಕ್ತಿಯೂ ಆ ಸಭೆಯಲ್ಲಿದ್ದರು) ಪ್ರವಾದಿಯವರು(ಸ) ಮುಖಸ್ತುತಿ ಮಾಡುತ್ತಿದ್ದ ವ್ಯಕ್ತಿಯೊಡನೆ- 'ನೀವು ನಿಮ್ಮ ಸಹೋದರನ ಕೊರಳು ಕೊಯ್ದಿರಿ' ಎಂದು ಮೂರು ಸಲ ಆವರ್ತಿಸಿ ಹೇಳಿದರು. ತರುವಾಯ ನಿಮ್ಮ ಪೈಕಿ ಯಾರಾದರೂ ಇನ್ನೊಬ್ಬನನ್ನು ಹೊಗಳುವುದಾದರೆ ಮತ್ತು ಹಾಗೆ ಹೊಗಳುವುದು ಅಗತ್ಯವೆಂದು ಮನಗಂಡರೆ ಅವನು ಹೀಗೆನ್ನಲಿ ಎಂದರು. ನಾನು ಇಂತಿಂತಹ ವ್ಯಕ್ತಿಯನ್ನು ಹೀಗೆ ಭಾವಿಸಿದ್ದೇನೆ, ವಾಸ್ತವಿಕತೆಯನ್ನು ಅಲ್ಲಾಹನೇ ಬಲ್ಲ. ವಾಸ್ತವದಲ್ಲಿ ಹಾಗೆ ಭಾವಿಸುವುದಿದ್ದರೆ, ಯಾರನ್ನೂ ಅಲ್ಲಾಹನ ಹೊರತು ಪಾವನನೆಂದು ಬಗೆಯಬಾರದು.

[ಬುಖಾರಿ, ಮುಸ್ಲಿಮ್]

ಟಿಪ್ಪಣಿ: ಪ್ರವಾದಿಯವರ(ಸ) ಸಭೆಯಲ್ಲಿ ಒಬ್ಬನನ್ನು ಅವನ ಮುಂದೆ ಹೊಗಳಲಾಯಿತು. ಇದರಿಂದ ಅವನಿಗೆ ಮುಜುಗರವಾಗಬಹುದೆಂದು ಪ್ರವಾದಿ(ಸ) ಭಾವಿಸಿದರು. ಆದ್ದರಿಂದ ಅವರು ಅದನ್ನು ಟೀಕಿಸುತ್ತಾ ಹೀಗೆಂದರು- ಯಾರ ಬಗೆಗಾದರೂ ಏನಾದರೂ ಹೇಳಲಿಕ್ಕಿದ್ದರೆ, ನಾನವನನ್ನು ಉತ್ತಮ ವ್ಯಕ್ತಿಯೆಂದು ಭಾವಿಸುತ್ತೇನೆ ಎಂದು ಹೇಳಬೇಕು. ಇಂತಹ ವ್ಯಕ್ತಿ ಖಂಡಿತ ಸ್ವರ್ಗಕ್ಕೆ ಹೋಗುವನು ಎಂದು ಹೇಳಬಾರದು. ಈ ರೀತಿ ಹೇಳಲು ಯಾವ ದಾಸನಿಗೂ ಅಧಿಕಾರವಿಲ್ಲ. ಅವನು ಸ್ವರ್ಗವಾಸಿಯೆಂದು ಹೇಳುವ ವ್ಯಕ್ತಿ ಅಲ್ಲಾಹನ ದೃಷ್ಟಿಯಲ್ಲಿ ಸ್ವರ್ಗವಾಸಿಯೇ ಅಲ್ಲವೇ ಎಂದು ಯಾರಿಗೆ ಗೊತ್ತು. ಮನುಷ್ಯನು ಜೀವಿಸಿರುವಷ್ಟು ಕಾಲ ಪರೀಕ್ಷಾ ಕೊಠಡಿಯಲ್ಲಿರುತ್ತಾನೆ. ಮನುಷ್ಯನ ಮನಸ್ಸು ಯಾವಾಗ ಬದಲಾಗುತ್ತದೆ, ಯಾವಾಗ ಅವನು ದಾರಿಗೆಡುತ್ತಾನೆಂದು ಯಾರಿಗೂ ತಿಳಿಯದು. ಮರಣ ಹೊಂದಿದ ಬಳಿಕವೂ ಯಾರನ್ನೂ ಸ್ವರ್ಗವಾಸಿಯೆಂದು ಖಚಿತವಾಗಿ ಹೇಳುವುದು ಸರಿಯಲ್ಲ.

ಮನುಷ್ಯನು ಪರೀಕ್ಷೆಗೆ ಗುರಿಯಾಗುವ ಭಯವಿಲ್ಲದಿದ್ದರೆ, ಸಂದರ್ಭ ಬಂದಾಗ ಅವನ ಮುಂದೆ ಅವನನ್ನು ಹೊಗಳಬಹುದೆಂಬುದು ವಿದ್ವಾಂಸರ ಅಭಿಪ್ರಾಯ.

ಸುಳ್ಳು ಸಾಕ್ಷ್ಯ

(260) عَنْ خُرَيْمِ بْنِ فَاتِكٍ قَالَ صَلَّى رَسُوْلُ اللّٰهِ صَلَّى اللّٰهُ عَلَيْهِ وَسَلَّمَ صَلٰوةَ الصُّبْحِ فَلَمَّا انْصَرَفَ قَامَ قَائِمًا، فَقَالَ عُدِلَتْ شَهَادَةُ الزُّوْرِ بِالْاِشْرَاكِ بِاللّٰهِ ثَلَاثَ مَرَّاتٍ، ثُمَّ قَرَءَ فَاجْتَنِبُوا الرِّجْسَ مِنَ الْاَوْثَانِ وَاجْتَنِبُوْا قَوْلَ الزُّوْرِ حُنَفَاءَ لِلّٰهِ غَيْرَ مُشْرِكِيْنَ بِهٖ (ابوداؤد)

ಖುರೈಮ್ ಬಿನ್ ಫಾತಿಕ್(ರ) ಹೇಳುತ್ತಾರೆ- ಪ್ರವಾದಿಯವರು(ಸ) ಪ್ರಭಾತ ನಮಾಝ್ ಮಾಡಿಸಿದರು. ಸಲಾಮ್ ಹೇಳಿದ ನಂತರ ಎದ್ದು ನಿಂತು ಹೀಗೆಂದರು- ಸುಳ್ಳು ಸಾಕ್ಷ್ಯ ಹೇಳುವುದು ಮತ್ತು ಶಿರ್ಕ್ (ಬಹು ದೇವಾರಾಧನೆ) ಮಾಡುವುದು ಸಮಾನವಾಗಿದೆ. ಈ ಮಾತನ್ನು ಅವರು ಮೂರು ಸಲ ಪುನರಾವರ್ತಿಸಿ ಹೇಳಿದರು. ತರುವಾಯ, "ನೀವು ಮಾಲಿನ್ಯದಿಂದ ಅರ್ಥಾತ್ ವಿಗ್ರಹಗಳಿಂದ ಮತ್ತು ಸುಳ್ಳು ಹೇಳುವುದರಿಂದ ದೂರವಿರಿ. ಅಲ್ಲಾಹನಿಗಾಗಿ ಏಕಾಗ್ರಚಿತ್ತರಾಗಿರಿ. ಶಿರ್ಕ್ ಬಿಟ್ಟು ತೌಹೀದ್ (ಏಕದೇವತ್ವ) ಸ್ವೀಕರಿಸಿರಿ" ಎಂಬ ಆಯತ್ ಪಠಿಸಿದರು. *[ಅಬೂ ದಾವೂದ್]*

ಟಿಪ್ಪಣಿ: ಪ್ರವಾದಿ(ಸ) ಪಠಿಸಿದ ಸೂರಃ ಅಲ್ ಹಜ್ಜ್‌ನ ಆಯತ್‌ನಲ್ಲಿ 'ಕೌಲಝ್ಝೂರ್' ಎಂಬ ಪದ ಬಂದಿದೆ. ಅದರರ್ಥ ಸುಳ್ಳು ಹೇಳುವುದು. ಸುಳ್ಳು ಹೇಳುವುದು ಎಲ್ಲ ಕಡೆಯೂ ಕೆಟ್ಟದೇ ಆಗಿದೆ. ಅದು ನ್ಯಾಯಾಲಯದಲ್ಲಿ ಅಧಿಕಾರಿಯ ಮುಂದೆಯಾದರೂ ಇನ್ನಿತರ ಕಡೆಯಾದರೂ ಸರಿ.

ತರ್ಕ, ತಮಾಷೆ ಮತ್ತು ವಚನಭಂಗ

(261) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ لَا تُمَارِ اَخَاكَ وَلَا تُمَازِحْهُ وَلَا تَعِدْهُ مَوْعِدًا فَتُخْلِفَهُ (ترمذی — ابن عباسؓ)

ಪ್ರವಾದಿ(ಸ) ಹೇಳಿದರು- ನೀನು ನಿನ್ನ ಸಹೋದರನೊಂದಿಗೆ ತರ್ಕ ಮಾಡದಿರು. ಅವನೊಂದಿಗೆ ತಮಾಷೆಯಾಡದಿರು ಮತ್ತು ಅವನೊಂದಿಗೆ ವಚನಭಂಗ ಮಾಡದಿರು.

[ತಿರ್ಮಿದಿ- ಇಬ್ನು ಅಬ್ಬಾಸ್(ರ)]

ಟಿಪ್ಪಣಿ: ಇಲ್ಲಿ ತಡೆಯಲಾಗಿರುವ ತರ್ಕವು ವಾಗ್ವಾದ ನಡೆಸುವವನು ತನ್ನ ಮಾತೇ ಸರಿಯಾಗಿರಬೇಕೆಂದು ಮೊದಲೇ ನಿರ್ಧರಿಸಿದ್ದು ಎದುರಾಳಿಯ ಮಾತು ಎಷ್ಟೇ ಸತ್ಯವಾದರೂ ಅದನ್ನು ಮುರಿದೇ ಸಿದ್ಧ ಎಂದು ತೀರ್ಮಾನಿಸಿದವನೊಂದಿಗೆ ಮಾಡುವ ತರ್ಕವಾಗಿದೆ.

ಇಲ್ಲಿ ಇತರರ ಮನನೋಯಿಸುವಂತಹ ತಮಾಷೆಯಾಡುವುದನ್ನು ತಡೆಯಲಾಗಿದೆಯೇ ಹೊರತು ಸಭ್ಯ ರೀತಿಯಲ್ಲಿ ಮನ ಸಂತಸಗೊಳಿಸುವ ತಮಾಷೆಯನ್ನು ತಡೆಯಲಾಗಿಲ್ಲ.

ವಚನ ಪಾಲನೆಯ ಸಂಕಲ್ಪ

(262) قَالَ النَّبِيُّ صَلَّى اللهُ عَلَيْهِ وَسَلَّمَ إِذَا وَعَدَ الرَّجُلُ أَخَاهُ وَمِنْ نِيَّتِهِ أَنْ يَفِيَ لَهُ فَلَمْ يَجِئْ لِلْمِيعَادِ فَلَا إِثْمَ عَلَيْهِ (ابوداؤد ـــــ زید بن ارقم رض)

ಪ್ರವಾದಿ(ಸ) ಹೇಳಿದರು- ಒಬ್ಬನು ತನ್ನ ಸಹೋದರನೊಡನೆ, ನಾನು ನಿನ್ನನ್ನು ಇಂತಹ ಸ್ಥಳದಲ್ಲಿ ಇಂತಹ ಸಮಯದಲ್ಲಿ ಭೇಟಿಯಾಗುವೆನು ಎಂದು ವಚನಕೊಟ್ಟು ಅದನ್ನು ಪೂರ್ತೀಕರಿಸುವ ಇಚ್ಛೆಯನ್ನು ಹೊಂದಿದ್ದರೂ ಕಾರಣಾಂತರಗಳಿಂದ ಅವನು ವಚನ ಪಾಲಿಸಲಾಗದಿದ್ದರೆ ಅವನು ಪಾಪಿಯಲ್ಲ. *[ಅಬೂ ದಾವೂದ್- ಝೈದ್ ಬಿನ್ ಅರ್ಖಮ್(ರ)]*

ದೋಷ ಹುಡುಕುವುದು

(263) عَنْ عَائِشَةَ قَالَتْ قُلْتُ لِلنَّبِيِّ صَلَّى اللهُ عَلَيْهِ وَسَلَّمَ حَسْبُكَ مِنْ صَفِيَّةَ كَذَا وَكَذَا تَعْنِي قَصِيرَةً ، فَقَالَ لَقَدْ قُلْتِ كَلِمَةً لَوْ مُزِجَ بِهَا الْبَحْرُ لَمَزَجَتْهُ (مشکوٰۃ)

ಆಯಿಶಾ(ರ) ಹೇಳುತ್ತಾರೆ- ನಾನು ಪ್ರವಾದಿವರ್ಯರೊಡನೆ(ಸ) ಹೇಳಿದೆ- ಸಫಿಯ್ಯಾ ಹೇಗಿದ್ದಾಳೆನ್ನಲು ಆಕೆಯ ಒಂದು ದೋಷವೇ ಸಾಕು. (ಅಂದರೆ ಆಕೆ ಕುಳ್ಳಗಾಗಿರುವುದೇ

ಅತಿ ದೊಡ್ಡ ದೋಷ) ಪ್ರವಾದಿ(ಸ) ಹೇಳಿದರು, "ಆಯಿಶಾ! ನಿನ್ನ ಬಾಯಿಯಿಂದ ಹೊರಟ ಮಾತನ್ನು ಸಮುದ್ರಕ್ಕೆ ಬೆರೆಸಿದರೆ ಅದು ಇಡೀ ಸಮುದ್ರವನ್ನು ಕೆಡಿಸಿ ಬಿಟ್ಟೀತು."

[ಮಿಶ್ಕಾತ್]

ಟಿಪ್ಪಣಿ: ಸಾಮಾನ್ಯವಾಗಿ ಪ್ರವಾದಿಯವರ(ಸ) ಪತ್ನಿಯರು ಸವತಿಯರಾಗಿದ್ದರೂ ಪರಸ್ಪರ ಸೌಹಾರ್ದದಿಂದಿರುತ್ತಿದ್ದರು. ಆದರೆ ಎಂದಾದರೂ ಅವರಿಂದ ಅಕಸ್ಮಾತ್ ಏನಾದರೂ ತಪ್ಪು ಸಂಭವಿಸಿ ಹೋಗುತ್ತಿತ್ತು. ಅಂತಹುದೇ ಒಂದು ತಪ್ಪು ಹ. ಆಯಿಶಾರಿಂದ(ರ) ಸಂಭವಿಸಿತು. ಅವರು ಹ. ಸಫಿಯ್ಯಾರು(ರ) ಕುಳ್ಳಗಾಗಿರುವುದನ್ನು ಗೇಲಿ ಮಾಡಿ ಬಿಟ್ಟರು. ಪ್ರವಾದಿ(ಸ) ಅದನ್ನು ಕೇಳಿದೊಡನೆಯೇ ಕೋಪವನ್ನು ವ್ಯಕ್ತಪಡಿಸುತ್ತಾ, 'ನೀನು ಅತ್ಯಂತ ಕೆಟ್ಟ ಮಾತು ಬಾಯಿಯಿಂದ ಹೊರಡಿಸಿದಿ' ಎಂದರು. ಅನಂತರ ಹ. ಆಯಿಶಾರಿಂದ ಅಂತಹ ತಪ್ಪು ಸಂಭವಿಸಲಿಲ್ಲ.

ಈ ಹದೀಸ್‌ನಲ್ಲಿ ಇರುವ ಗಮನಾರ್ಹ ಅಂಶವೆಂದರೆ ಪ್ರವಾದಿಯವರು(ಸ) ತಮ್ಮ ಪ್ರಿಯ ಪತ್ನಿಯ ತಪ್ಪು ನುಡಿಯನ್ನು ಕೇಳಿ ಮೌನ ವಹಿಸಲಿಲ್ಲ. ಅವರನ್ನು ಸೂಕ್ತ ರೀತಿಯಲ್ಲಿ ಎಚ್ಚರಿಸಿದರು.

ಪರಾಮರ್ಶಿಸಬೇಕು

(264) عَنِ ابْنِ مَسْعُوْدٍ قَالَ اِنَّ الشَّيْطَانَ لَيَتَمَثَّلُ فِيْ صُوْرَةِ الرَّجُلِ فَيَأْتِي الْقَوْمَ فَيُحَدِّثُهُمْ بِالْحَدِيْثِ مِنَ الْكَذِبِ فَيَتَفَرَّقُوْنَ، فَيَقُوْلُ الرَّجُلُ مِنْهُمْ سَمِعْتُ رَجُلًا اَعْرِفُ وَجْهَهُ وَلَا اَدْرِيْ مَا اسْمُهُ يُحَدِّثُ (مسلم)

ಇಬ್ನು ಮಸ್‌ವೂದ್(ರ) ಹೇಳುತ್ತಾರೆ- ಶೈತಾನನು ಮಾನವ ರೂಪದಲ್ಲಿ ಜನರ ಬಳಿಗೆ ಬಂದು ಸುಳ್ಳು ವಿಷಯ ಹೇಳುತ್ತಾನೆ. ತರುವಾಯ ಸಭೆ ಚದುರುವಾಗ ಅವರಲ್ಲೊಬ್ಬನು ಹೀಗೆನ್ನುತ್ತಾನೆ- ಸಭೆಯಲ್ಲೊಬ್ಬನು ಹೀಗೆನ್ನುತ್ತಿದ್ದನು. ನನಗೆ ಅವನ ಪರಿಚಯವಿದೆ. ಆದರೆ ಅವನ ಹೆಸರು ಗೊತ್ತಿಲ್ಲ.

[ಮುಸ್ಲಿಮ್]

ಟಿಪ್ಪಣಿ: ಈ ಹದೀಸ್‌ನಲ್ಲಿ ವಿಷಯವನ್ನೂ ಪರಾಮರ್ಶಿಸದೆ ಪ್ರಚಾರಮಾಡಬಾರದೆಂದು ಮುಸ್ಲಿಮರನ್ನು ಎಚ್ಚರಿಸಲಾಗಿದೆ. ಆದುದರಿಂದ ಹೇಳುವವನ ಕುರಿತು ಪರಾಂಬರಿಸದೆ ವಿಷಯವನ್ನು ಹರಡುವುದರಿಂದ ಸಮಾಜಕ್ಕೆ ಗಂಭೀರ ಹಾನಿಯಾಗುವ ಸಂಭವವಿದೆ.

ಚಾಡಿ

(265) قَالَ رَسُوْلُ اللهِ صَلَّى اللهُ عَلَيْهِ وَسَلَّمَ لَا يَدْخُلُ الْجَنَّةَ نَمَّامٌ

(بخاری و مسلم ـــــ حذیفہ رض)

ಪ್ರವಾದಿ(ಸ) ಹೇಳಿದರು- ಚಾಡಿಕೋರನು ಸ್ವರ್ಗಕ್ಕೆ ಹೋಗಲಾರನು.

[ಬುಖಾರಿ, ಮುಸ್ಲಿಮ್- ವರದಿ: ಹುದೈಫ(ರ)]

---

(266) عَنِ ابْنِ عَبَّاسٍ اَنَّ رَسُوْلَ اللهِ صَلَّى اللهُ عَلَيْهِ وَسَلَّمَ مَرَّ بِقَبْرَيْنِ فَقَالَ اِنَّهُمَا يُعَذَّبَانِ وَمَا يُعَذَّبَانِ فِيْ كَبِيْرٍ، بَلٰى اِنَّهٗ كَبِيْرٌ، اَمَّا اَحَدُهُمَا فَكَانَ يَمْشِيْ بِالنَّمِيْمَةِ، وَاَمَّا الْاٰخَرُ فَكَانَ لَا يَسْتَتِرُ مِنْ بَوْلِهٖ (بخاری)

ಪ್ರವಾದಿ(ಸ) ಒಮ್ಮೆ ಎರಡು ಗೋರಿಗಳ ಬಳಿಯಿಂದ ಹಾದು ಹೋಗುತ್ತಿದ್ದಾಗ ಹೀಗೆಂದರು: "ಇಲ್ಲಿ ಇಬ್ಬರಿಗೆ ಶಿಕ್ಷೆ ನೀಡಲಾಗುತ್ತಿದೆ. ಈ ಶಿಕ್ಷೆ ಕೂಡಾ ಅವರಿಂದ ತ್ಯಜಿಸಲು ಸಾಧ್ಯವಿಲ್ಲದಂತಹ ಪಾಪಗಳಿಗಾಗಿ ಅಲ್ಲ. ಅವರು ಬಯಸಿದ್ದರೆ ಅದನ್ನು ಸುಲಭದಲ್ಲಿ ತ್ಯಜಿಸಬಹುದಾಗಿತ್ತು. ವಾಸ್ತವದಲ್ಲಿ ಧಿಕ್ಕಾರಿಗಳಿಗೆ ಅದನ್ನು ತ್ಯಜಿಸುವುದು ಬಹಳ ಕಷ್ಟ. ಅವರಲ್ಲೊಬ್ಬನು ಜನರ ಸಂಬಂಧವನ್ನು ಕೆಡಿಸಲು ವಿಷಯವನ್ನು ಅಲ್ಲಿಂದಿಲ್ಲಿಗೆ ಮುಟ್ಟಿಸುತ್ತಿದ್ದ. ಇನ್ನೊಬ್ಬನು ಮೂತ್ರದ ಹನಿಗಳ ಬಗ್ಗೆ ಜಾಗ್ರತೆ ವಹಿಸುತ್ತಿರಲಿಲ್ಲ. *[ಬುಖಾರಿ]*

ಚಾಡಿ ಮತ್ತು ಪರದೂಷಣೆ

(267) نَهٰى رَسُوْلُ اللهِ صَلَّى اللهُ عَلَيْهِ وَسَلَّمَ عَنِ النَّمِيْمَةِ وَعَنِ الْغِيْبَةِ وَالْاِسْتِمَاعِ اِلَى الْغِيْبَةِ (مشکوٰۃ ـــــ ابن عمر رض)

ಪ್ರವಾದಿಯವರು(ಸ) ಚಾಡಿ ಹೇಳುವುದರಿಂದ, ಪರದೂಷಣೆ ಮಾಡುವುದರಿಂದ ಮತ್ತು ಪರದೂಷಣೆಯನ್ನು ಕೇಳುವುದರಿಂದ ತಡೆದಿದ್ದಾರೆ.

[ಮಿಶ್ಕಾತ್, ವರದಿ: ಇಬ್ನು ಉಮರ್(ರ)]

ಅಸೂಯೆ

(268) اِنَّ النَّبِيَّ صَلَّى اللّٰهُ عَلَيْهِ وَسَلَّمَ قَالَ اِيَّاكُمْ وَالْحَسَدَ، فَاِنَّ الْحَسَدَ يَأْكُلُ الْحَسَنَاتِ كَمَا تَأْكُلُ النَّارُ الْحَطَبَ (ابوداؤد ــــ ابوہریرہؓ)

ಪ್ರವಾದಿ(ಸ) ಹೇಳಿದರು: ಅಸೂಯೆಯಿಂದ ದೂರವಿರಿ. ಯಾಕೆಂದರೆ ಬೆಂಕಿಯು ಕಟ್ಟಿಗೆಯನ್ನು ಉರಿಸುವಂತೆ ಅಸೂಯೆಯು ಒಳಿತುಗಳನ್ನು ನುಂಗಿ ಹಾಕುತ್ತದೆ.

[ಅಬೂ ದಾವೂದ್- ವರದಿ: ಅಬೂ ಹುರೈರಾ(ರ)]

ಕೆಟ್ಟ ದೃಷ್ಟಿ

(269) عَنْ جَرِيْرِ بْنِ عَبْدِ اللّٰهِ قَالَ سَأَلْتُ رَسُوْلَ اللّٰهِ صَلَّى اللّٰهُ عَلَيْهِ وَسَلَّمَ عَنْ نَظَرِ الْفُجَاءَةِ فَقَالَ اِصْرِفْ بَصَرَكَ (مسلم)

ಜರೀರ್ ಬಿನ್ ಅಬ್ದುಲ್ಲಾ(ರ) ಹೇಳುತ್ತಾರೆ- ಪ್ರವಾದಿಯವರೊಡನೆ(ಸ) ಪರ ಸ್ತ್ರೀಯ ಮೇಲೆ ಅಕಸ್ಮಾತ್ ದೃಷ್ಟಿ ಬೀಳುವ ಬಗ್ಗೆ ನಾನು ಕೇಳಿದೆ. ಪ್ರವಾದಿ(ಸ) ಹೇಳಿದರು- ನಿನ್ನ ದೃಷ್ಟಿಯನ್ನು ಬೇರೆಡೆಗೆ ತಿರುಗಿಸು. *[ಮುಸ್ಲಿಮ್]*

---

(270) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ لِعَلِيٍّ يَا عَلِيُّ لَا تُتْبِعِ النَّظْرَةَ النَّظْرَةَ فَاِنَّمَا لَكَ الْاُوْلٰى وَلَيْسَتْ لَكَ الْاٰخِرَةُ (ابوداؤد)

ಪ್ರವಾದಿಯವರು(ಸ) ಹ. ಅಲೀಯವರೊಂದಿಗೆ(ರ) ಹೇಳಿದರು- ಓ ಅಲೀ! ಪರಸ್ತ್ರೀಯ ಮೇಲೆ ಎರಡನೇ ಬಾರಿ ದೃಷ್ಟಿಹರಿಸಬೇಡ. ಮೊದಲನೆಯ ನೋಟ ಕ್ಷಮಾರ್ಹ ವಾಗಿದೆ. ಎರಡನೆಯ ನೋಟ ನಿನಗೆ ಧರ್ಮಸಮ್ಮತವಲ್ಲ. *[ಅಬೂ ದಾವೂದ್]*

ಉತ್ತಮ ಗುಣಗಳು

ಪ್ರವಾದಿತ್ವದ ಉದ್ದೇಶ

(271) اِنَّ رَسُوْلَ اللّٰهِ صَلَّى اللّٰهُ عَلَيْهِ وَسَلَّمَ قَالَ بُعِثْتُ لِاُتَمِّمَ حُسْنَ الْاَخْلَاقِ (موطا امام مالك)

ಪ್ರವಾದಿ(ಸ) ಹೇಳಿದರು- ಉತ್ತಮ ಚಾರಿತ್ರ್ಯವನ್ನು ಪರಿಪೂರ್ಣಗೊಳಿಸಲಿಕ್ಕಾಗಿ ನನ್ನನ್ನು ಅಲ್ಲಾಹನ ವತಿಯಿಂದ ನಿಯೋಗಿಸಲಾಗಿದೆ. *[ಮುಅತ್ತಾ ಇಮಾಮ್ ಮಾಲಿಕ್]*

ಟಿಪ್ಪಣಿ: ಮುಹಮ್ಮದ್‌ರ(ಸ) ಪ್ರವಾದಿತ್ವದ ಉದ್ದೇಶವು ಜನರ ಚಾರಿತ್ರ್ಯ ಮತ್ತು ವ್ಯವಹಾರಗಳನ್ನು ಸುಧಾರಿಸುವುದು, ಅವರಲ್ಲಿರುವ ದುರ್ಗುಣಗಳನ್ನು ಕಿತ್ತೆಸೆಯುವುದು ಮತ್ತು ಅವುಗಳ ಸ್ಥಾನದಲ್ಲಿ ಉತ್ತಮ ಗುಣಗಳನ್ನು ಬೆಳೆಸುವುದಾಗಿದೆ. ಪ್ರವಾದಿ(ಸ) ಅಲ್ಲಾಹನ ಮಾರ್ಗದರ್ಶನದಲ್ಲಿ ಉತ್ತಮ ಗುಣಗಳ ಯಾದಿ ಸಿದ್ಧಪಡಿಸಿದರು. ಅವುಗಳನ್ನು ಸಂಪೂರ್ಣ ಜೀವನ ಮತ್ತು ಜೀವನದ ಎಲ್ಲ ರಂಗಗಳಲ್ಲೂ ಜಾರಿಗೊಳಿಸಿದರು ಮತ್ತು ಎಲ್ಲ ಪರಿಸ್ಥಿತಿಯಲ್ಲೂ ಅವುಗಳನ್ನು ಬಿಗಿ ಹಿಡಿಯುವಂತೆ ಮುಸ್ಲಿಮ್ ಸಮುದಾಯಕ್ಕೆ ಆದೇಶಿಸಿದರು.

'ಉತ್ತಮ ಚಾರಿತ್ರ್ಯ' ಎಷ್ಟು ವಿಶಾಲಾರ್ಥವನ್ನು ಹೊಂದಿದೆಯೆಂಬುದನ್ನು ಅಬ್ದುಲ್ಲಾ ಬಿನ್ ಮುಬಾರಕ್‌ರ(ರ) ಈ ಮಾತುಗಳಿಂದ ಅಂದಾಜಿಸಬಹುದು- "ಉತ್ತಮ ಚಾರಿತ್ರ್ಯವೆಂದರೆ ಹಸನ್ಮುಖಿಯಾಗಿ ಜನರೊಡನೆ ವ್ಯವಹರಿಸುವುದು,ಬಡವರಿಗಾಗಿ ಹಣ ಖರ್ಚು ಮಾಡುವುದು ಮತ್ತು ಯಾರಿಗೂ ತೊಂದರೆಯುಂಟು ಮಾಡದಿರುವುದು."

ಸಚ್ಚಾರಿತ್ರ್ಯದ ಉಪದೇಶ

(272) عَنْ مُعَاذِ بْنِ جَبَلٍ قَالَ كَانَ اٰخِرَ مَا وَصَّانِيْ بِهٖ رَسُوْلُ اللّٰهِ صَلَّى اللّٰهُ عَلَيْهِ وَسَلَّمَ حِيْنَ وَضَعْتُ رِجْلِيْ فِي الْغَرْزِ اَنْ قَالَ يَا مُعَاذُ اَحْسِنْ خُلُقَكَ لِلنَّاسِ (موطا امام مالك)

ಮುಆದ್ ಬಿನ್ ಜಬಲ್(ರ) ಹೇಳುತ್ತಾರೆ- ಪ್ರವಾದಿಯವರು(ಸ) ನನ್ನನ್ನು ಯಮನ್‌ಗೆ ಕಳುಹಿಸುವಾಗ, ನಾನು ಕುದುರೆಯ ರಿಕಾಬಿನ ಮೇಲೆ ಕಾಲಿಡುತ್ತಿರುವ ವೇಳೆ ಮಾಡಿದ ಉಪದೇಶ ಹೀಗಿತ್ತು- ಓ ಮುಆದ್! ಜನರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಿರಿ. *[ಮುವತ್ತಾ ಇಮಾಮ್ ಮಾಲಿಕ್]*

ಗಾಂಭೀರ್ಯ

(273) إِنَّ النَّبِيَّ صَلَّى اللهُ عَلَيْهِ وَسَلَّمَ قَالَ لِأَشَجِّ عَبْدِ الْقَيْسِ إِنَّ فِيكَ لَخَصْلَتَيْنِ
يُحِبُّهُمَا اللهُ الْحِلْمُ وَالْأَنَاةُ (مسلم — ابن عباس رض)

ಪ್ರವಾದಿಯವರು(ಸ) ಅಬ್ದುಲ್ ಕೈಸ್ ಗೋತ್ರದ ನಿಯೋಗದ ನಾಯಕ ಮುಂದಿರ್ ಬಿನ್ ಆಇದ್‌ರೊಡನೆ ಹೀಗೆಂದರು- ನಿಮ್ಮಲ್ಲಿ ಅಲ್ಲಾಹನಿಗೆ ಮೆಚ್ಚುಗೆಯ ಎರಡು ಗುಣಗಳಿವೆ. ಸಹನೆ (ಉದ್ವಿಗ್ನರಾಗದಿರುವುದು) ಮತ್ತು ಗಾಂಭೀರ್ಯ.

[ಮುಸ್ಲಿಮ್- ವರದಿ: ಇಬ್ನು ಅಬ್ಬಾಸ್(ರ)]

ಟಿಪ್ಪಣಿ: ಹಿಜರಿ 9ರಲ್ಲಿ ಬಹ್ರೈನ್‌ನ ಅಬ್ದುಲ್ ಕೈಸ್ ಗೋತ್ರದ ಒಂದು ನಿಯೋಗ ಮದೀನಾಕ್ಕೆ ಬಂದಿತ್ತು. ಮುಂದಿರ್ ಬಿನ್ ಆಇದ್ ಅದರ ನಾಯಕರಾಗಿದ್ದರು. ಅವರನ್ನು 'ಅಶುಬ್ಬಹ್' ಎಂಬ ಹೆಸರಿನಿಂದ ಪ್ರವಾದಿ(ಸ) ಕರೆದರು. ಈ ನಿಯೋಗದ ಇತರ ಮಂದಿ ಮದೀನಾ ತಲಪಿದ ಕೂಡಲೇ ಪ್ರವಾದಿಯವರನ್ನು(ಸ) ಭೇಟಿಯಾಗಲು ಧಾವಿಸಿದರು, ಸ್ನಾನಾದಿ ಕರ್ಮಗಳನ್ನು ಮಾಡಲಿಲ್ಲ, ತಮ್ಮ ಸಾಮಾನು ಸರಂಜಾಮುಗಳನ್ನು ಸರಿಯಾಗಿ ಇಡಲೂ ಇಲ್ಲ, ತಮ್ಮ ಒಂಟೆಗಳಿಗೆ ಮೇವನ್ನೂ ನೀಡಲಿಲ್ಲ. ಅವರು ದೀರ್ಘ ಪ್ರಯಾಣ ಮಾಡಿ ಬಂದಿದ್ದರು. ಶರೀರವಿಡೀ ಧೂಳು ಮುಕ್ಕಿತ್ತು. ಆದರೆ ಇದಕ್ಕೆ ವ್ಯತಿರಿಕ್ತವಾಗಿ, ಮುಂದಿರ್ ಸ್ವಲ್ಪವೂ ದುಡುಕಲಿಲ್ಲ. ಶಾಂತವಾಗಿ ಇಳಿದರು. ತಮ್ಮ ಮತ್ತು ತಮ್ಮ ಸಂಗಾತಿಗಳ ಸಾಮಾನುಗಳನ್ನು ಓರಣವಾಗಿ ಜೋಡಿಸಿಟ್ಟರು. ಒಂಟೆಗಳಿಗೆ ನೀರು ಮತ್ತು ಮೇವು ನೀಡಿದರು. ತರುವಾಯ ಸ್ನಾನಾದಿ ಕರ್ಮಗಳನ್ನು ಮಾಡಿ ಗಾಂಭೀರ್ಯದೊಂದಿಗೆ ಸಮಾಧಾನದಿಂದ ಪ್ರವಾದಿವರ್ಯರನ್ನು(ಸ) ಭೇಟಿಯಾದರು.

ಸರಳತೆ

(274) قَالَ رَسُولُ اللهِ صَلَّى اللهُ عَلَيْهِ وَسَلَّمَ إِنَّ الْبَذَاذَةَ مِنَ الْإِيمَانِ
(ابوداؤد — ابوامامة رض)

ಪ್ರವಾದಿ(ಸ) ಹೇಳಿದರು: ಸರಳತೆಯು ಸತ್ಯವಿಶ್ವಾಸದ ಅಂಶವಾಗಿದೆ.

[ಅಬೂ ದಾವೂದ್- ವರದಿ: ಅಬೂ ಉಮಾಮ(ರ)]

ಟಿಪ್ಪಣಿ: ಮೂಲದಲ್ಲಿರುವ 'ಬದಾದ' ಎಂಬ ಅರಬಿ ಪದವನ್ನು ಸರಳತೆಯೆಂದು ನಾವು ಅನುವಾದಿಸಿದ್ದೇವೆ. ಅದರ ತಾತ್ಪರ್ಯವೇನೆಂದರೆ ಸತ್ಯವಿಶ್ವಾಸಿಯು ಯಾವಾಗಲೂ ಅಲಂಕಾರ-ಶೃಂಗಾರಾದಿಗಳ ಪ್ರಿಯನಾಗಿರುವುದಿಲ್ಲ. ಇದರ ಅರ್ಥ ಯೋಗ್ಯತೆಗೆ ತಕ್ಕಂತೆ ಉತ್ತಮ ಉಡುಪು

ಧರಿಸಬಾರದೆಂದೋ ಉತ್ತಮ ಆಹಾರ ಸೇವಿಸಬಾರದೆಂದೋ ಅಲ್ಲ. ಇದನ್ನು ಹದೀಸ್‌ನ ವಿದ್ವಾಂಸರು ಯಾವಾಗಲೂ ಶೃಂಗಾರ ಮಾಡುವ ಅಭ್ಯಾಸವನ್ನು ಬಿಟ್ಟುಬಿಡುವುದು ಎಂದು ವ್ಯಾಖ್ಯಾನಿಸಿದ್ದಾರೆ.

[ಲಿಸಾನುಲ್ ಅರಬ್]

ಶುಚಿತ್ವ ಮತ್ತು ಅಚ್ಚುಕಟ್ಟು

(275) عَنْ جَابِرٍ قَالَ اَتَانَا رَسُوْلُ اللّٰهِ صَلَّى اللّٰهُ عَلَيْهِ وَسَلَّمَ زَائِرًا، فَرَأَى رَجُلًا شَعِثًا قَدْ تَفَرَّقَ شَعْرُهٗ، فَقَالَ مَا كَانَ يَجِدُ هٰذَا مَا يُسَكِّنُ رَأْسَهٗ؟ وَرَأَى رَجُلًا عَلَيْهِ ثِيَابٌ وَسِخَةٌ، فَقَالَ مَا كَانَ يَجِدُ هٰذَا مَا يَغْسِلُ بِهٖ ثَوْبَهٗ؟ (مشكوٰة)

ಜಾಬಿರ್(ರ) ಹೇಳುತ್ತಾರೆ- ಪ್ರವಾದಿ(ಸ) ಒಮ್ಮೆ ನಮ್ಮನ್ನು ಭೇಟಿಯಾಗಲು ಬಂದರು. ಅಲ್ಲಿ ಧೂಳು ಮುಕ್ಕಿದ ಹಾಗೂ ತಲೆಗೂದಲು ಕೆದರಿಕೊಂಡಿರುವ ಓರ್ವ ವ್ಯಕ್ತಿಯನ್ನು ಕಂಡು. ಪ್ರವಾದಿ(ಸ) ಕೇಳಿದರು- "ಅವನಿಗೆ ತಲೆಗೂದಲು ಸರಿ ಪಡಿಸಲು ಬಾಚಣಿಗೆ ಇಲ್ಲವೇ?" ಅದೇ ರೀತಿ ಪ್ರವಾದಿ ಕೊಳಕು ಬಟ್ಟೆ ಧರಿಸಿದ ಇನ್ನೊಬ್ಬನನ್ನು ಕಂಡಾಗ, 'ಅವನ ಬಳಿ ಬಟ್ಟೆ ಒಗೆಯುವಂತಹ ಯಾವುದಾದರೂ ವಸ್ತು ಇಲ್ಲವೇ' ಎಂದು ಕೇಳಿದರು. *[ಮಿಶ್ಕಾತ್]*

ಅಸ್ತವ್ಯಸ್ತ ಕೂದಲು

(276) كَانَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ فِى الْمَسْجِدِ، فَدَخَلَ رَجُلٌ ثَائِرُ الرَّاسِ وَاللِّحْيَةِ، فَاَشَارَ اِلَيْهِ رَسُوْلُ اللّٰهِ بِيَدِهٖ كَاَنَّهٗ يَاْمُرُهٗ بِاِصْلَاحِ شَعْرِهٖ وَلِحْيَتِهٖ. فَفَعَلَ ثُمَّ رَجَعَ، فَقَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اَلَيْسَ هٰذَا خَيْرًا مِنْ اَنْ يَاْتِىَ اَحَدُكُمْ وَهُوَ ثَائِرُ الرَّاسِ كَاَنَّهٗ شَيْطَانٌ (مشكوٰة ــــ عطاء بن يسارؒ)

ಪ್ರವಾದಿ(ಸ) ಒಮ್ಮೆ ಮಸೀದಿ (ಮಸ್ಜಿದುನ್ನಬವಿ)ಯಲ್ಲಿ ಕುಳಿತಿದ್ದರು. ಅಲ್ಲಿಗೆ ಒಬ್ಬರು ಬಂದರು. ಅವರ ತಲೆಗೂದಲು ಮತ್ತು ಗಡ್ಡ ಅಸ್ತವ್ಯಸ್ತಗೊಂಡಿತ್ತು. ಪ್ರವಾದಿ(ಸ), ಅವರ ಕಡೆಗೆ ಬೆರಳು ತೋರಿಸಿ ಸನ್ನೆ ಮಾಡಿದರು. ಅದರರ್ಥ ನಿನ್ನ ತಲೆಗೂದಲು ಮತ್ತು ಗಡ್ಡ ಸರಿಪಡಿಸಿಕೊಂಡು ಬಾ ಎಂದಾಗಿತ್ತು. ಹಾಗೆ ಅವರು ಹೋಗಿ ಕೂದಲು ಮತ್ತು ಗಡ್ಡವನ್ನು ಸರಿಪಡಿಸಿಕೊಂಡು ಬಂದರು. ಆಗ ಪ್ರವಾದಿ(ಸ) ಹೀಗೆಂದರು- 'ತಲೆಗೂದಲು ಮತ್ತು ಗಡ್ಡ ಅಸ್ತವ್ಯಸ್ತಗೊಂಡು ಒಬ್ಬನು ಶೈತಾನನಂತೆ ಕಾಣುವುದಕ್ಕಿಂತ ಇದು ಉತ್ತಮವಲ್ಲವೇ?'

[ಮಿಶ್ಕಾತ್- ವರದಿ: ಅತಾ ಬಿನ್ ಯಸಾರ್(ರ)]

ಸಂಪತ್ತು ಮತ್ತು ದಾರಿದ್ರ್ಯ ಪ್ರದರ್ಶನ

(277) عَنْ اَبِي الْاَحْوَصِ عَنْ اَبِيْهِ قَالَ اَتَيْتُ رَسُوْلَ اللّٰهِ صَلَّى اللّٰهُ عَلَيْهِ وَسَلَّمَ وَعَلَيَّ ثَوْبٌ دُوْنٌ، فَقَالَ لِيْ اَلَكَ مَالٌ؟ قُلْتُ نَعَمْ، قَالَ مِنْ اَيِّ الْمَالِ؟ قُلْتُ مِنْ كُلِّ الْمَالِ، قَدْ اَعْطَانِيَ اللّٰهُ مِنَ الْاِبِلِ وَالْبَقَرِ وَالْغَنَمِ وَالْخَيْلِ وَالرَّقِيْقِ، قَالَ فَاِذَا اٰتَاكَ اللّٰهُ مَالًا فَلْيُرَ اَثَرُ نِعْمَةِ اللّٰهِ عَلَيْكَ

(مشكوة)

ತಮ್ಮ ತಂದೆ ಹೇಳಿರುವುದಾಗಿ ಅಬುಲ್ ಅಹ್ವಸ್(ರ) ಹೇಳಿದರು- ನಾನು ಪ್ರವಾದಿಯವರ(ಸ) ಬಳಿಗೆ ಹೋದೆ. ನನ್ನ ಉಡುಪು ಸಾಮಾನ್ಯ ಕೀಳ್ತರದ್ದಾಗಿತ್ತು. ಪ್ರವಾದಿ(ಸ) ಕೇಳಿದರು- ನಿಮ್ಮ ಬಳಿ ಸಂಪತ್ತಿದೆಯೇ? ನಾನು ಹೌದೆಂದೆ. ಅವರು ಕೇಳಿದರು- ಎಂತಹ ಸಂಪತ್ತಿದೆ? ನಾನೆಂದೆ- 'ಸಕಲ ರೀತಿಯ ಸಂಪತ್ತನ್ನು ಅಲ್ಲಾಹನು ನನಗೆ ನೀಡಿದ್ದಾನೆ- ನನ್ನ ಬಳಿ ಒಂಟೆಗಳಿವೆ, ಹಸುಗಳಿವೆ, ಕುದುರೆಗಳಿವೆ ಹಾಗೂ ಗುಲಾಮರೂ ಇದ್ದಾರೆ'. ಆಗ ಪ್ರವಾದಿ(ಸ) ಹೇಳಿದರು- ಅಲ್ಲಾಹನು ನಿಮಗೆ ಇಷ್ಟೆಲ್ಲಾ ನೀಡಿರುವಾಗ ಅವನ ಉಪಕಾರಗಳ ಪ್ರಭಾವವು ನಿಮ್ಮಲ್ಲಿ ಪ್ರಕಟವಾಗಬೇಕು. *[ಮಿಶ್ಕಾತ್]*

ಟಿಪ್ಪಣಿ: ತಾತ್ಪರ್ಯವೇನೆಂದರೆ ಅಲ್ಲಾಹನು ಎಲ್ಲ ರೀತಿಯ ಅನುಗ್ರಹಗಳನ್ನು ದಯಪಾಲಿಸಿರುವಾಗ ನಿಮ್ಮ ಅಂತಸ್ತಿಗೆ ತಕ್ಕಂತೆ ತಿನ್ನಿರಿ ಮತ್ತು ಉಡಿರಿ. ನಿಮ್ಮ ಬಳಿ ಸಾಕಷ್ಟು ಸಂಪತ್ತಿದ್ದರೂ ಮನೆಯಲ್ಲಿ ಒಲೆಯೇ ಉರಿಸದ ರೀತಿಯಲ್ಲಿ ನಿಮ್ಮ ರೂಪವನ್ನು ಕೆಡಿಸಿಕೊಳ್ಳುವುದರಲ್ಲಿ ಅರ್ಥವಿಲ್ಲ. ಪ್ರವಾದಿಯವರು(ಸ) ಇಲ್ಲಿ ಆಡಂಬರದ ಜೀವನ ಸಾಗಿಸಬೇಕೆಂದು ಬೋಧಿಸುತ್ತಿಲ್ಲ. ಬದಲಾಗಿ ಸಂತುಲಿತ ಜೀವನ ಸಾಗಿಸಬೇಕೆಂದು ಉಪದೇಶಿಸುತ್ತಿದ್ದಾರೆಂಬುದನ್ನು ಗಮನಿಸಬೇಕು.

ಸಲಾಮ್‌ನ ಆಧಿಕ್ಯ

(278) عَنْ عَبْدِ اللهِ بْنِ عُمَرَ قَالَ إِنَّ رَجُلًا سَأَلَ رَسُوْلَ اللهِ صَلَّى اللهُ عَلَيْهِ وَسَلَّمَ أَيُّ الْإِسْلَامِ خَيْرٌ؟ قَالَ تُطْعِمُ الطَّعَامَ وَتَقْرَءُ السَّلَامَ عَلَى مَنْ عَرَفْتَ وَمَنْ لَّمْ تَعْرِفْ (بخاری ومسلم)

ಅಬ್ದುಲ್ಲಾ ಬಿನ್ ಉಮರ್(ರ) ಹೇಳುತ್ತಾರೆ- ಒಬ್ಬ ವ್ಯಕ್ತಿ ಪ್ರವಾದಿಯವರಲ್ಲಿ(ಸ) ಕೇಳಿದರು- ಇಸ್ಲಾಮಿನಲ್ಲಿ ಯಾವ ಕಾರ್ಯ ಉತ್ತಮವಾದುದು? ಪ್ರವಾದಿ(ಸ) ಹೇಳಿದರು- ಅಪೇಕ್ಷಿತ ಬಡವರಿಗೆ ಉಣಿಸುವುದು, ನಿಮಗೆ ಪರಿಚಯವಿರುವ ಮತ್ತು ಇಲ್ಲದಿರುವ ಎಲ್ಲರಿಗೂ 'ಸಲಾಮ್' ಹೇಳುವುದು. *[ಬುಖಾರಿ, ಮುಸ್ಲಿಮ್]*

---

(279) قَالَ رَسُوْلُ اللهِ صَلَّى اللهُ عَلَيْهِ وَسَلَّمَ لَا تَدْخُلُوْنَ الْجَنَّةَ حَتّٰى تُؤْمِنُوْا، وَلَا تُؤْمِنُوْنَ حَتّٰى تَحَابُّوْا، أَوَلَا أَدُلُّكُمْ عَلٰى شَيْئٍ إِذَا فَعَلْتُمُوْهُ تَحَابَبْتُمْ، أَفْشُوْا السَّلَامَ بَيْنَكُمْ (مسلم — ابوہریرہؓ)

ಪ್ರವಾದಿ(ಸ) ಹೇಳಿದರು- ನೀವು ಸತ್ಯವಿಶ್ವಾಸಿಗಳಾಗುವ ತನಕ ಸ್ವರ್ಗ ಪ್ರವೇಶ ಮಾಡಲಾರಿರಿ, ನೀವು ಪರಸ್ಪರ ಪ್ರೀತಿಸುವ ತನಕ ಸತ್ಯವಿಶ್ವಾಸಿಗಳಾಗಲಾರಿರಿ. ನೀವು ಪರಸ್ಪರ ಪ್ರೀತಿಸಲು ಸಹಾಯವಾಗಬಲ್ಲಂತಹ ಒಂದು ಉಪಾಯವನ್ನು ಹೇಳಿಕೊಡಲೇ? ಪರಸ್ಪರ 'ಸಲಾಮ್' ಹೇಳುವುದನ್ನು ರೂಢಿಸಿರಿ. *[ಮುಸ್ಲಿಮ್- ವರದಿ: ಅತಾ ಬಿನ್ ಯಸಾರ್(ರ)]*

ಟಿಪ್ಪಣಿ: ಪರಸ್ಪರ ಪ್ರೀತಿಸಬೇಕಾದುದು ಈಮಾನ್ ಮತ್ತು ಇಸ್ಲಾಮ್‌ನ ಬೇಡಿಕೆಯಾಗಿದೆ. ಪ್ರೀತಿಯನ್ನು ಬೆಳೆಸಬಲ್ಲ ಅತ್ಯುತ್ತಮ ಉಪಾಯ ಪರಸ್ಪರ ಸಲಾಮ್ ಹೇಳುವುದನ್ನು ರೂಢಿಸಿಕೊಳ್ಳುವುದಾಗಿದೆ. ಆದರೆ ಜನರು ಸಲಾಮ್‌ನ ಅರ್ಥ ತಾತ್ಪರ್ಯಗಳನ್ನೂ 'ಅಸ್ಸಲಾಮು ಅಲೈಕುಮ್' ಎಂಬುದರ ಸ್ಫೂರ್ತಿಯನ್ನೂ ಅರಿತಿರಬೇಕಾದುದು ಅಗತ್ಯ.

ನಾಲಗೆ ಮತ್ತು ಗುಪ್ತಾಂಗಗಳ ರಕ್ಷಣೆ

(280) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ مَنْ يَضْمَنْ لِيْ مَا بَيْنَ لَحْيَيْهِ
وَمَا بَيْنَ رِجْلَيْهِ اَضْمَنْ لَهُ الْجَنَّةَ (بخاری — سہل بن سعدؓ)

ಪ್ರವಾದಿ(ಸ) ಹೇಳಿದರು- ತನ್ನ ನಾಲಗೆ ಮತ್ತು ಗುಪ್ತಾಂಗಗಳ ಬಗ್ಗೆ (ಅವುಗಳನ್ನು ಪಾಪಕಾರ್ಯಗಳಿಗೆ ಉಪಯೋಗಿಸದಂತೆ ರಕ್ಷಿಸುವೆನೆಂದು) ಯಾರಾದರೂ ವಾಗ್ದಾನ ಕೊಟ್ಟರೆ ನಾನು ಅವನಿಗೆ ಸ್ವರ್ಗದ ವಾಗ್ದಾನ ನೀಡುವೆನು. *[ಬುಖಾರಿ- ಸಹ್ಲ್ ಬಿನ್ ಸಅದ್(ರ)]*

ಟಿಪ್ಪಣಿ: ಇವೆರಡೂ ಶೈತಾನನಿಗೆ ಆಕ್ರಮಣ ಮಾಡಲು ಸಿಗುವ ಅತ್ಯಂತ ದುರ್ಬಲ ಮಾನವ ಅಂಗಗಳಾಗಿವೆ. ಹೆಚ್ಚಿನ ಪಾಪಗಳು ಇವುಗಳಿಂದಲೇ ಆಗುತ್ತವೆ. ಇನ್ನು ಯಾರಾದರೂ ಅವುಗಳ ರಕ್ಷಣೆಯ ಹೊಣೆ ಹೊತ್ತರೆ ಅವನಿಗೆ ಸ್ವರ್ಗ ಪ್ರಾಪ್ತವಾಗುವುದರಲ್ಲಿ ಸಂದೇಹವಿಲ್ಲ.

ಮಾತಿನ ಹೊಣೆ

(281) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اِنَّ الْعَبْدَ لَيَتَكَلَّمُ بِالْكَلِمَةِ مِنْ
رِضْوَانِ اللّٰهِ لَا يُلْقِيْ لَهَا بَالًا يَرْفَعُ اللّٰهُ بِهَا دَرَجَاتٍ، وَاِنَّ الْعَبْدَ لَيَتَكَلَّمُ بِالْكَلِمَةِ
مِنْ سَخَطِ اللّٰهِ لَا يُلْقِيْ لَهَا بَالًا يَهْوِيْ بِهَا فِيْ جَهَنَّمَ (بخاری — ابوہریرہ رضؓ)

ಪ್ರವಾದಿ(ಸ) ಹೇಳಿದರು- ಅಲ್ಲಾಹನ ದಾಸನು ಒಂದು ಮಾತನ್ನು ತನ್ನ ಬಾಯಿಯಿಂದ ಹೊರಡಿಸುತ್ತಾನೆ. ಅದು ಅಲ್ಲಾಹನಿಗೆ ಪ್ರಿಯವಾಗಿರುತ್ತದೆ. ದಾಸನು ಅದಕ್ಕೆ ಮಹತ್ವ ಕೊಟ್ಟಿರುವುದಿಲ್ಲ. ಆದರೆ ಅಲ್ಲಾಹನು ಆ ಮಾತಿಗಾಗಿ ಅವನ ಸ್ಥಾನವನ್ನು ಉನ್ನತಗೊಳಿಸುತ್ತಾನೆ. ಅದೇ ರೀತಿ ಒಬ್ಬನು ಅಲ್ಲಾಹನನ್ನು ಕುಪಿತಗೊಳಿಸುವಂತಹ ಒಂದು ಮಾತನ್ನಾಡುತ್ತಾನೆ. ಅದಕ್ಕೆ ಅವನು ಯಾವುದೇ ಮಹತ್ವ ನೀಡಿರುವುದಿಲ್ಲ. ವಸ್ತುತಃ ಆ ಮಾತೇ ಅವನನ್ನು ನರಕಾಗ್ನಿಗೆ ಕೊಂಡೊಯ್ಯಬಲ್ಲುದು. *[ಬುಖಾರಿ, ವರದಿ: ಅಬೂ ಹುರೈರಾ(ರ)]*

ಟಿಪ್ಪಣಿ: ಈ ಹದೀಸ್‌ನ ಉದ್ದೇಶವು ಮನುಷ್ಯನು ತನ್ನ ನಾಲಗೆಯನ್ನು ಅನಿಯಂತ್ರಿತವಾಗಿ ಬಳಸಬಾರದು ಮತ್ತು ನರಕಕ್ಕೆ ಕೊಂಡೊಯ್ಯ ಬಹುದಾದಂತಹ ಯಾವ ಮಾತನ್ನೂ ಆಡಬಾರದೆಂದೇ ಆಗಿದೆ.

❖ ❖ ❖

ಇಸ್ಲಾಮೀ ಸಂದೇಶ ಪ್ರಚಾರ

ಇಸ್ಲಾಮಿನ ಅರ್ಥ

(282) عَنْ مُعَاوِيَةَ بْنِ حَيْدَةَ الْقُشَيْرِيِّ قَالَ ....
بِمَ بَعَثَكَ رَبُّنَا إِلَيْنَا؟ قَالَ بِدِيْنِ الْإِسْلَامِ، قَالَ وَمَا دِيْنُ الْإِسْلَامِ؟ قَالَ أَنْ تَقُوْلَ
أَسْلَمْتُ وَجْهِيَ لِلّٰهِ وَتَخَلَّيْتُ، وَتُقِيْمَ الصَّلٰوةَ وَتُؤْتِيَ الزَّكٰوةَ (الاستيعاب لابن عبد البر)

ಮುಆವಿಯ ಬಿನ್ ಹೈದತಲ್ ಕುಶೈರಿ(ರ) ತಮ್ಮ ಇಸ್ಲಾಮ್ ಸ್ವೀಕಾರದ ವೃತ್ತಾಂತವನ್ನು ವಿವರಿಸುತ್ತಾ ಹೇಳುತ್ತಾರೆ- ನಾನು ಪ್ರವಾದಿಯವರ(ಸ) ಬಳಿಗೆ (ಮಕ್ಕಾಕ್ಕೆ) ಹೋದೆ ಮತ್ತು ಅವರಲ್ಲಿ ಕೇಳಿದೆ- ಅಲ್ಲಾಹನು ತಮಗೆ ಏನನ್ನು ಕೊಟ್ಟು ಕಳಿಸಿರುವನು? ಪ್ರವಾದಿ(ಸ) ಹೇಳಿದರು: ನಾನು ಇಸ್ಲಾಮ್ ಧರ್ಮದೊಂದಿಗೆ ಕಳುಹಿಸಲ್ಪಟ್ಟಿದ್ದೇನೆ. ನಾನು ಕೇಳಿದೆ- ಇಸ್ಲಾಮ್ ಧರ್ಮವೆಂದರೇನು, ಅದರ ಬೋಧನೆಗಳೇನು? ಪ್ರವಾದಿ(ಸ) ಹೇಳಿದರು- ನೀನು ಸಂಪೂರ್ಣವಾಗಿ ಅಲ್ಲಾಹನಿಗೆ ಶರಣಾಗುವುದು, ನಿನ್ನದೆಂದು ಹೇಳುವ ಎಲ್ಲ ವಸ್ತುಗಳನ್ನೂ ತ್ಯಜಿಸುವುದು, ನಮಾಝ್ ಸಂಸ್ಥಾಪಿಸುವುದು ಮತ್ತು ಝಕಾತ್ ನೀಡುವುದೇ ಇಸ್ಲಾಮ್ ಆಗಿದೆ.

[ಅಲ್ ಇಸ್ತೀಆಬ್ ಲಿಬ್ನಿ ಅಬ್ದುಲ್ ಬರ್(ರ)]

ಟಿಪ್ಪಣಿ: ಇದು ಮಕ್ಕಾ ಜೀವನದ ಸಂದೇಶ ಪ್ರಚಾರ ಕಾಲದ ಘಟನೆಯಾಗಿದೆ. ಇದರಲ್ಲಿ ಮಾನವನು ತನ್ನ ಅಸ್ತಿತ್ವವನ್ನು, ತನ್ನ ಜೀವನ ಮತ್ತು ಶರೀರವನ್ನು ಹಾಗೂ ತನ್ನ ಎಲ್ಲ ಶಕ್ತಿ-ಸಾಮರ್ಥ್ಯಗಳನ್ನು ಒಟ್ಟಿನಲ್ಲಿ ತನ್ನ ಸರ್ವಸ್ವವನ್ನೂ ಅಲ್ಲಾಹನಿಗೆ ಅರ್ಪಿಸುವುದೇ ಇಸ್ಲಾಮ್ ಎಂಬುದನ್ನು ಸ್ಪಷ್ಟ ಪಡಿಸಲಾಗಿದೆ. ಇದು ಅದರ ಸಕಾರಾತ್ಮಕ ಮುಖವಾಗಿದೆ. ಅದರ ನಕಾರಾತ್ಮಕ ಮುಖವು ಮಾನವನು ತನ್ನನ್ನು, ತನ್ನ ಜೀವನ ಮತ್ತು ಶರೀರವನ್ನು ಹಾಗೂ ತನ್ನ ಸಂಪೂರ್ಣ ಶಕ್ತಿ-ಸಾಮರ್ಥ್ಯಗಳನ್ನು ಒಟ್ಟಿನಲ್ಲಿ ತನ್ನ ಸಂಪೂರ್ಣ ಜೀವನವನ್ನು ಇತರರಿಗೆ ಒಪ್ಪಿಸಲು ನಿರಾಕರಿಸುವುದು, ಇತರರನ್ನು ತನ್ನ ಯಾವ ವಿಷಯದಲ್ಲೂ ಭಾಗೀದಾರರಾಗಿ ಮಾಡದಿರುವುದು. ಬೇರೆ ಮಾತಿನಲ್ಲಿ ಹೇಳುವುದಾದರೆ ತನ್ನ ಯಾವ ವಸ್ತುವನ್ನೂ ತನ್ನದೆಂದು ಬಗೆಯದೆ ಅಲ್ಲಾಹನ ಅಮಾನತ್ ಎಂದು ಬಗೆಯುವುದು. ಇದರ ಇನ್ನೊಂದು ಹೆಸರೇ 'ತೌಹೀದ್'. ತೌಹೀದ್‌ನ ಕ್ರಿಯಾರೂಪವೇ ನಮಾಝ್ ಮತ್ತು ಝಕಾತ್ ಆಗಿದೆ. ನಮಾಝ್ ಸಂಸ್ಥಾಪಿಸುವುದೆಂದರೆ ಅದು ಸರ್ವವಿಧದಲ್ಲೂ ಪರಿಪೂರ್ಣವಾಗಿರುವುದು ಮತ್ತು ತನ್ನ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ಆತನ ಅಪೇಕ್ಷಿತ ದಾಸರ ಮೇಲೆ ಖರ್ಚು ಮಾಡುವುದು. ಅದರಲ್ಲಿ ಯಾವುದೇ ವಕ್ರತೆ ಇಲ್ಲದಿರುವುದು.

ಪವಿತ್ರ ವಚನದ ವೈಶಾಲ್ಯ

(283) عَنِ ابْنِ عَبَّاسٍ .... وَتَكَلَّمَ رَسُوْلُ اللهِ صَلَّى اللهُ عَلَيْهِ وَسَلَّمَ فَقَالَ يَا عَمِّ
إِنِّيْ أُرِيْدُهُمْ عَلَى كَلِمَةٍ وَاحِدَةٍ تَدِيْنُ لَهُمْ بِهَا الْعَرَبُ وَتُؤَدِّيْ إِلَيْهِمْ بِهَا الْعَجَمُ الْجِزْيَةَ،
فَفَزِعُوْا لِكَلِمَتِهِ وَلِقَوْلِهِ، فَقَالَ الْقَوْمُ كَلِمَةً وَاحِدَةً؟ نَعَمْ وَأَبِيْكَ عَشْرًا، فَقَالُوْا
مَا هِيَ؟ وَقَالَ أَبُوْ طَالِبٍ وَأَيُّ كَلِمَةٍ هِيَ يَا ابْنَ أَخِيْ؟ قَالَ صَلَّى اللهُ عَلَيْهِ وَسَلَّمَ لَا إِلٰهَ إِلَّا اللهُ (مسند احمد نسائی)

ಇಬ್ನು ಅಬ್ಬಾಸ್(ರ) ಹೇಳುತ್ತಾರೆ- ಪ್ರವಾದಿಯವರು(ಸ) ತಮ್ಮ ಪಿತೃ ಸಹೋದರನೊಂದಿಗೆ ಹೇಳಿದರು- ಚಿಕ್ಕಪ್ಪಾ! ನಾನು ಜನರೊಂದಿಗೆ ಕೇವಲ ಒಂದು ವಚನವನ್ನು ಸ್ವೀಕರಿಸಿಕೊಳ್ಳುವಂತೆ ವಿನಂತಿಸುತ್ತಿದ್ದೇನೆ. ಅದನ್ನು ಅವರು ಸ್ವೀಕರಿಸಿದರೆ ಸಂಪೂರ್ಣ ಅರೇಬಿಯವು ಅವರಿಗೆ ಶರಣಾಗುವುದು ಮತ್ತು ಅರಬೇತರ ಜನಾಂಗಗಳು ಅವರಿಗೆ 'ಜಿಝಿಯಾ' ಕೊಡುವುವು. ಜನರು ಈ ಮಾತನ್ನು ಕೇಳಿ ಬೆಚ್ಚಿಬಿದ್ದರು. ಅವರು ಹೇಳಿದರು- ನೀವು ನಮ್ಮೊಂದಿಗೆ ಒಂದು ವಚನವನ್ನು ಸ್ವೀಕರಿಸಲು ಹೇಳುತ್ತೀರಾ. ನಾವಾದರೋ ಹತ್ತು ವಚನಗಳನ್ನು ಒಪ್ಪಲು ಸಿದ್ಧರಿದ್ದೇವೆ. ಹೇಳಿರಿ; ಆ ವಚನ ಯಾವುದು? ಅಬೂತಾಲಿಬರೂ ಈ ಮಾತನ್ನೇ ಪುನರಾವರ್ತಿಸಿದರು- ಭ್ರಾತೃಜ! ಆ ವಚನ ಯಾವುದು ಹೇಳು! ಪ್ರವಾದಿ(ಸ) ಹೇಳಿದರು- ಅದುವೇ, 'ಲಾ ಇಲಾಹ ಇಲ್ಲಲ್ಲಾಹ್' (ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲ.)
[ಮುಸ್ನದ್ ಅಹ್ಮದ್, ನಸಾಈ]

ಟಿಪ್ಪಣಿ: ಈ ಹದೀಸ್ ಕೂಡಾ ಮಕ್ಕಾ ಜೀವನದಲ್ಲಿ ಪ್ರವಾದಿ(ಸ) ಮಾಡುತ್ತಿದ್ದ ಸಂದೇಶ ಪ್ರಚಾರಕ್ಕೆ ಸಂಬಂಧಿಸಿದೆ. ಇದು ಕುರೈಶ್ ಸರದಾರರು ಅಬೂತಾಲಿಬರ ಬಳಿಗೆ ಬಂದು, ಅವರು ತಮ್ಮ ವೈಯಕ್ತಿಕ ಪ್ರಭಾವ ಮತ್ತು ರಾಜಕೀಯ ಒತ್ತಡ ಹೇರಿ ಈ ಹೊಸ ಧರ್ಮಾಹ್ವಾನ ಕಾರ್ಯವನ್ನು ನಿಲ್ಲಿಸಬಹುದೆಂಬ ನಿರೀಕ್ಷೆಯನ್ನಿಟ್ಟು ವಿನಂತಿಸಿದಾಗಿನ ಮಾತುಕತೆಯಾಗಿತ್ತು. ಆ ಸಂದರ್ಭದಲ್ಲೇ ಪ್ರವಾದಿಯವರು(ಸ) ಅಬೂತಾಲಿಬರೊಂದಿಗೆ ಹೀಗೆಂದಿದ್ದರು- ಒಂದು ವೇಳೆ ನನ್ನ ಬಲಕೈಯಲ್ಲಿ ಸೂರ್ಯನನ್ನೂ ಎಡಗೈಯಲ್ಲಿ ಚಂದ್ರನನ್ನೂ ತಂದಿಟ್ಟರೂ ನಾನು ಈ ಕಾರ್ಯವನ್ನು ನಿಲ್ಲಿಸಲಾರೆ. ಒಂದೋ ಅಲ್ಲಾಹನು ಈ ಧರ್ಮವನ್ನು ಉತ್ತುಂಗಗೊಳಿಸುವನು ಅಥವಾ ನಾನು ಈ ಕಾರ್ಯ ಮಾಡುತ್ತಾ ತೀರಿ ಹೋಗುವೆನು.

'ಲಾ ಇಲಾಹ ಇಲ್ಲಲ್ಲಾಹ್' ಎಂಬ ಏಕದೇವತ್ವದ ವಚನವು ಕೇವಲ ಒಂದು ವಚನವಲ್ಲ. ಬದಲಾಗಿ ಅದು ಮಾನವ ಜೀವನದ ಸಕಲ ರಂಗಗಳನ್ನೊಳಗೊಂಡ ಇಡೀ ವ್ಯವಸ್ಥೆಯ ಹೆಸರಾಗಿದೆ. ಅದರಂತೆ ಕೇವಲ ನಮಾಝ್, ಉಪವಾಸ ವ್ರತವನ್ನು ಸ್ಥಾಪಿಸುವುದು ಮಾತ್ರ ಉದ್ದೇಶವಲ್ಲ. ಅದರ ಆಧಾರದಲ್ಲಿ ಇಡೀ ರಾಜಕೀಯ ವ್ಯವಸ್ಥೆಯೇ ಸ್ಥಾಪನೆಯಾಗಬೇಕಾಗಿದೆ. ಹಾಗಿಲ್ಲದಿರುತ್ತಿದ್ದರೆ ಅರಬರು ನಿಮ್ಮ ಅಧೀನಕ್ಕೆ ಬರುವವರು ಮತ್ತು ಅರಬೇತರರು ನಿಮಗೆ 'ಜಿಝಿಯಾ' ಪಾವತಿಸುವವರು ಎಂದು

ಪ್ರವಾದಿ(ಸ) ಹೇಳಿದುದಾದರೂ ಏಕೆ? ರಾಜಕೀಯ ಅಧಿಕಾರವಿಲ್ಲದಿರುತ್ತಿದ್ದರೆ ಇದು ಸಾಧ್ಯವಿತ್ತೇ? ಈಗ ಅದು ಸಾಧ್ಯವಿದೆಯೇ ಹಾಗೂ ಮುಂದೆಂದಾದರೂ ಸಾಧ್ಯವಾದೀತೇ?

ಸಂದೇಶ ಪ್ರಚಾರದಿಂದ ಉಭಯಲೋಕಗಳಲ್ಲಿ ಸೌಭಾಗ್ಯ

(284) عَنِ ابْنِ عَبَّاسٍ.......... فَقَالَ رَسُولُ اللهِ صَلَّى اللهُ عَلَيْهِ وَسَلَّمَ
مَابِي مَا تَقُولُونَ، مَا جِئْتُكُمْ بِمَا جِئْتُكُمْ بِهِ اَطْلُبُ اَمْوَالَكُمْ وَلَا الشَّرَفَ فِيكُمْ وَلَا الْمُلْكَ
عَلَيْكُمْ، وَلٰكِنَّ اللهَ بَعَثَنِي اِلَيْكُمْ رَسُولًا، وَاَنْزَلَ عَلَيَّ كِتَابًا، وَاَمَرَنِي اَنْ اَكُونَ لَكُمْ بَشِيرًا
وَنَذِيرًا. فَبَلَّغْتُكُمْ رِسَالَاتِ رَبِّي وَنَصَحْتُ لَكُمْ، فَاِنْ تَقْبَلُوا مِنِّي مَا جِئْتُكُمْ بِهِ فَهُوَ
حَظُّكُمْ فِي الدُّنْيَا وَالْاٰخِرَةِ (البداية والنهاية ج ٣، ص ٥)

ಇಬ್ನು ಅಬ್ಬಾಸ್(ರ) ವರದಿ ಮಾಡುತ್ತಾರೆ- ಪ್ರವಾದಿಯವರು(ಸ) ಕುರೈಶ್ ಸರದಾರರ ಮಾತನ್ನು ಕೇಳಿ ಹೀಗೆ ಉತ್ತರಿಸಿದರು- ನೀವು ಮುಂದಿಡುತ್ತಿರುವ ವಸ್ತುಗಳ ಆಮಿಷ ನನಗೆ ಖಂಡಿತ ಇಲ್ಲ. ನಾನು ನಿಮ್ಮ ಮುಂದಿಡುತ್ತಿರುವ ಸಂದೇಶದ ಉದ್ದೇಶವು ಹಣ ಗಳಿಸಬೇಕೆಂಬ ಇಚ್ಛೆಯಿಂದಲ್ಲ, ಗೌರವ ಪ್ರತಿಷ್ಠೆಗಳನ್ನು ಬಯಸುವ ಇಚ್ಛೆಯಿಂದಲೂ ಅಲ್ಲ, ನಿಮ್ಮ ಮೇಲೆ ಆಡಳಿತ ನಡೆಸಬೇಕೆಂಬ ದಾಹವೂ ನನಗಿಲ್ಲ. ಬದಲಾಗಿ ಅಲ್ಲಾಹನು ನನ್ನನ್ನು ನಿಮ್ಮ ಬಳಿಗೆ ಪ್ರವಾದಿಯಾಗಿ ಕಳುಹಿಸಿರುವನು. ಗ್ರಂಥವನ್ನು ಇಳಿಸಿರುವನು. ನಾನು ಮಿಥ್ಯ ಜೀವನ ವ್ಯವಸ್ಥೆಗಳ ಕೆಡುಕುಗಳಿಂದಲೂ ಅವುಗಳ ಪರಿಣಾಮಗಳಿಂದಲೂ ನಿಮ್ಮನ್ನು ಎಚ್ಚರಿಸಬೇಕೆಂದೂ ಯಾರು ಅದನ್ನು ಸ್ವೀಕರಿಸುತ್ತಾರೋ ಅವರಿಗೆ ಸುವಾರ್ತೆ ಕೊಡ ಬೇಕೆಂದೂ ಅವನು ಆಜ್ಞಾಪಿಸಿರುವನು. ಆದುದರಿಂದ ನಾನು ನನ್ನ ಪ್ರಭುವಿನ ಬೋಧನೆ ಗಳನ್ನು ನಿಮಗೆ ತಲಪಿಸಿರುವೆನು. ಕಳಕಳಿಯೊಂದಿಗೆ ನಿಮಗೆ ಮನದಟ್ಟು ಮಾಡಿರುವೆನು. ನೀವು ನನ್ನ ಕರೆಯನ್ನು ಸ್ವೀಕರಿಸಿದರೆ ಇಹಲೋಕದಲ್ಲೂ ಪರಲೋಕದಲ್ಲೂ ಅದು ನಿಮ್ಮ ಸೌಭಾಗ್ಯವಾಗಿರುವುದು. *[ಅಲ್ ಬಿದಾಯ ವನ್ನಿಹಾಯ]*

ಟಿಪ್ಪಣಿ: ಈ ಹದೀಸ್ ಕೂಡಾ ಮಕ್ಕಾ ಜೀವನದ ಸಂದೇಶ ಪ್ರಚಾರ ಕಾಲದ್ದಾಗಿದೆ. ಅದರ ಕೊನೆಯ ಭಾಗ ಬಹಳ ಗಮನಾರ್ಹವಾಗಿದೆ. ಪ್ರವಾದಿಯವರ(ಸ) ಸಂದೇಶವು ಕೇವಲ ಆರಾಧನಾ ವ್ಯವಸ್ಥೆಗೆ ಮಾತ್ರ ಸೀಮಿತವಾಗಿರುತ್ತಿದ್ದರೆ, ಜೀವನದ ಸಮಸ್ಯೆಗಳಿಗೂ ಜೀವನದ ವ್ಯವಹಾರಗಳಿಗೂ

ಅದರೊಂದಿಗೆ ಸಂಬಂಧವಿಲ್ಲದಿರುತ್ತಿದ್ದರೆ ಹಾಗೂ ಕೇವಲ ಪರಲೋಕವನ್ನು ಬೆಳಗಿಸುವಷ್ಟಕ್ಕೆ ಸೀಮಿತವಾಗಿರುತ್ತಿದ್ದರೆ ಪರಲೋಕದೊಂದಿಗೆ ಇಹಲೋಕದ ಪ್ರಸ್ತಾಪ ಮಾಡುವ ಅಗತ್ಯವೇನಿತ್ತು?

ಪರಿಚಯ ಭಾಷಣ

(285) عَنْ أُمِّ سَلَمَةَ زَوْجِ النَّبِيِّ صَلَّى اللهُ عَلَيْهِ وَسَلَّمَ .... قَالَ أَيُّهَا
الْمَلِكُ كُنَّا قَوْمًا أَهْلَ جَاهِلِيَّةٍ، نَعْبُدُ الْأَصْنَامَ، وَنَأْكُلُ الْمَيْتَةَ وَنَأْتِي الْفَوَاحِشَ،
وَنَقْطَعُ الْأَرْحَامَ، وَنُسِيءُ الْجِوَارَ وَيَأْكُلُ الْقَوِيُّ مِنَّا الضَّعِيفَ، فَكُنَّا عَلَى ذٰلِكَ
حَتّٰى بَعَثَ اللهُ إِلَيْنَا رَسُولًا مِنَّا، نَعْرِفُ نَسَبَهُ وَصِدْقَهُ وَأَمَانَتَهُ وَعَفَافَهُ
فَدَعَانَا إِلَى اللهِ عَزَّ وَجَلَّ لِنُوَحِّدَهُ وَنَعْبُدَهُ وَنَخْلَعَ مَا كُنَّا نَعْبُدُ نَحْنُ وَآبَاؤُنَا مِنْ دُونِ
اللهِ مِنَ الْحِجَارَةِ وَالْأَوْثَانِ. وَأَمَرَنَا بِصِدْقِ الْحَدِيثِ وَأَدَاءِ الْأَمَانَةِ وَصِلَةِ
الرَّحِمِ وَحُسْنِ الْجِوَارِ وَالْكَفِّ عَنِ الْمَحَارِمِ وَالدِّمَاءِ، وَنَهَانَا عَنِ الْفَوَاحِشِ وَشَهَادَةِ
الزُّورِ وَأَكْلِ مَالِ الْيَتِيمِ وَقَذْفِ الْمُحْصَنَةِ، وَأَمَرَنَا أَنْ نَعْبُدَ اللهَ لَا نُشْرِكُ بِهِ
شَيْئًا وَإِقَامَ الصَّلٰوةِ وَإِيتَاءَ الزَّكٰوةِ (مسند احمد)

ಪ್ರವಾದಿ ಪತ್ನಿಯಾಗಿದ್ದ ಉಮ್ಮು ಸಲಮ(ರ) ಹೇಳುತ್ತಾರೆ- ಜಅ್‌ಫರ್ ಬಿನ್ ಅಬೂತಾಲಿಬ್(ರ) ಮುಸ್ಲಿಮರ ಪ್ರತಿನಿಧಿಯೆಂಬ ನೆಲೆಯಲ್ಲಿ ನಜ್ಜಾಶಿ ರಾಜನ ಆಸ್ಥಾನದಲ್ಲಿ ಇಸ್ಲಾಮಿನ ಪರಿಚಯ ಮಾಡುತ್ತಾ ಹೀಗೆ ಭಾಷಣ ಮಾಡಿದರು- ಮಹಾರಾಜಾ! ನಾವು ಅಜ್ಞಾನಿಗಳಾಗಿ ಜೀವನ ಸಾಗಿಸುತ್ತಿದ್ದೆವು (ನಮ್ಮ ಕೈಯಿಂದಲೇ ಕೆತ್ತಿದ) ಮೂರ್ತಿಗಳನ್ನು ಪೂಜಿಸುತ್ತಿದ್ದೆವು, ಶವಗಳನ್ನು ತಿನ್ನುತ್ತಿದ್ದೆವು, ಎಲ್ಲ ರೀತಿಯ ಅಶ್ಲೀಲ ಮತ್ತು ಕೆಟ್ಟ ಕಾರ್ಯಗಳನ್ನು ಮಾಡುತ್ತಿದ್ದೆವು. ಸಂಬಂಧಿಕರ ಹಕ್ಕುಗಳನ್ನು ಕಸಿಯುತ್ತಿದ್ದೆವು. ನೆರೆಯವರೊಂದಿಗೆ ಕೆಟ್ಟದಾಗಿ ವರ್ತಿಸುತ್ತಿದ್ದೆವು. ಬಲಶಾಲಿಗಳು ದುರ್ಬಲರನ್ನು ಕಿತ್ತು ತಿನ್ನುತ್ತಿದ್ದರು. ಇದೇ ಅವಸ್ಥೆಯಲ್ಲಿ ನಾವು ಬದುಕುತ್ತಿದ್ದಾಗ ಅಲ್ಲಾಹನು ನಮ್ಮ ಬಳಿಗೆ ನಮ್ಮಿಂದಲೇ ಒಬ್ಬರನ್ನು ಪ್ರವಾದಿಯಾಗಿ ನೇಮಿಸಿದನು. ಅವರ ಕುಲೀನತೆ, ಸತ್ಯಸಂಧತೆ, ಪ್ರಾಮಾಣಿಕತೆ

ಹಾಗೂ ಪಾವಿತ್ರ್ಯತೆ ಮತ್ತು ಪಾವನತೆಯನ್ನು ನಾವು ಚೆನ್ನಾಗಿ ಅರಿತಿದ್ದೆವು. ಅವರು ನಮ್ಮನ್ನು ಅಲ್ಲಾಹನ ಕಡೆಗೆ ಕರೆದರು. ನಾವು ಅಲ್ಲಾಹನನ್ನು ಮಾತ್ರ ಆರಾಧ್ಯನೆಂದು ನಂಬಬೇಕೆಂದೂ ನಾವು ಮತ್ತು ನಮ್ಮ ಪೂರ್ವಜರು ಆರಾಧಿಸುತ್ತಿದ್ದ ಕಲ್ಲಿನ ಮೂರ್ತಿಗಳನ್ನೂ ದೇವಿ ದೇವತೆಗಳನ್ನೂ ಬಿಟ್ಟು ಬಿಡಬೇಕೆಂದೂ ಅವರು ನಮಗೆ ಕರೆ ನೀಡಿದರು. ಸತ್ಯವನ್ನೇ ಹೇಳಬೇಕು, ಅಮಾನತನ್ನು ವಂಚಿಸಬಾರದು, ಸಂಬಂಧಿಕರ ಹಕ್ಕುಗಳನ್ನು ನೀಡಬೇಕು, ನೆರೆಹೊರೆಯವರೊಡನೆ ಸದ್ವರ್ತನೆ ಕೈಗೊಳ್ಳಬೇಕು, ನಿಷಿದ್ಧ ಪದಾರ್ಥಗಳನ್ನು ಸೇವಿಸ ಬಾರದು. ರಕ್ತಪಾತ ನಡೆಸಬಾರದು ಮತ್ತು ಮುಗ್ಧ ಸ್ತ್ರೀಯರ ಮೇಲೆ ಅಪವಾದ ಹೊರಿಸ ಬಾರದು ಎಂದು ಮುಂತಾಗಿ ಅವರು ನಮಗೆ ಉಪದೇಶಿಸಿದರು. ಅದೇ ರೀತಿ ಅವರು ನಮಗೆ ಏಕೈಕ ಅಲ್ಲಾಹನನ್ನು ಆರಾಧಿಸಲು, ನಮಾಝ್ ಸಂಸ್ಥಾಪಿಸಲು ಮತ್ತು ಅಲ್ಲಾಹನ ಅಪೇಕ್ಷಿತ ದಾಸರಿಗೆ ಧನ ಸಹಾಯ ಮಾಡಲು ಆದೇಶಿಸಿದರು. *[ಮುಸ್ನದ್ ಅಹ್ಮದ್]*

ಟಿಪ್ಪಣಿ: ಇದು ಇತಿಯೋಪಿಯಾದ ರಾಜ ನಜ್ಜಾಶಿಯ ಆಸ್ಥಾನದಲ್ಲಿ ಸಭಿಕರೆದುರು ಹ. ಜಅ್‌ಫರ್ ಬಿನ್ ಅಬೂತಾಲಿಬ್‌ರವರು ಮಾಡಿದ ಇಸ್ಲಾಮಿನ ಸಂದೇಶದ ಸ್ಥೂಲ ಪರಿಚಯ ವಾಗಿದೆ. ಇಸ್ಲಾಮಿನ ಸಂದೇಶವು ಬಹಳ ಸರಳ ಮತ್ತು ಸಂಕ್ಷಿಪ್ತವಾಗಿರುತ್ತಿದ್ದರೆ, ಈ ಎಲ್ಲಾ ವಿವರಗಳನ್ನು ಹೇಳುವ ಅಗತ್ಯವಿರಲಿಲ್ಲ. ನಾವು 'ಅಲ್ಲಾಹ್', 'ಅಲ್ಲಾಹ್' ಎಂದು ಜಪಿಸುವವರು, ನಮಗೆ ಜೀವನದ ಇತರ ಸಮಸ್ಯೆಗಳೊಂದಿಗೆ ಯಾವ ಸಂಬಂಧವೂ ಇಲ್ಲ, ಈ ಕುರೈಶ್ ಸರದಾರರು ವೃಥಾ ನಮ್ಮ ವೈರಿಗಳಾದರು, ನಾವು ಅವರ ಹಿಂಸೆ, ದೌರ್ಜನ್ಯಗಳಿಂದ ಬೇಸತ್ತು ಇಲ್ಲಿ ಅಭಯಕ್ಕಾಗಿ ಬಂದರೆ ಇಲ್ಲಿಗೂ ಅವರು ಬೆನ್ನಟ್ಟಿಕೊಂಡು ಬಂದಿದ್ದಾರೆ ಎಂದಷ್ಟೇ ಹೇಳಿದ್ದರೆ ಸಾಕಿತ್ತು.

ಇಲ್ಲಿ ಒಂದು ವಿಷಯ ಅಗತ್ಯವಾಗಿ ತಿಳಿದಿರಬೇಕು. ಇತಿಯೋಪಿಯಾದ ಬಹುಸಂಖ್ಯಾತ ಜನರು ಹ. ಈಸಾರನ್ನು(ರ) ದೇವನೆಂದೂ ದೇವನ ಪುತ್ರನೆಂದೂ ನಂಬುತ್ತಿದ್ದರು. ಆದರೆ ನಜ್ಜಾಶಿ ಮತ್ತಿತರ ಕೆಲವರು ನೈಜ ಈಸಾಯಿ (ಕ್ರೈಸ್ತ)ಗಳಾಗಿದ್ದರು. ಅವರು ಹ. ಈಸಾರ(ರ) ನೈಜ ಶಿಕ್ಷಣಗಳಿಗನುಸಾರ ಜೀವನ ಸಾಗಿಸುವವರಾಗಿದ್ದರು. ಇದು ಪ್ರವಾದಿಯವರಿಗೆ(ಸ) ತಿಳಿದಿತ್ತು. ಆದುದರಿಂದಲೇ ಅವರು ಮರ್ದಿತ ಸತ್ಯವಿಶ್ವಾಸಿಗಳಿಗೆ, ಇತಿಯೋಪಿಯಾಕ್ಕೆ ವಲಸೆ ಹೋಗುವಂತೆ ಸಲಹೆ ನೀಡಿದರು.

ಸಂದೇಶ ಪ್ರಚಾರದ ಉದ್ದೇಶ

(286) عَنْ عَلِيِّ بْنِ أَبِي طَالِبٍ .... قَالَ مَفْرُوقُ بْنُ عَمْرٍو

الشَّيْبَانِيُّ إِلَى مَا تَدْعُوا يَا أَخَا قُرَيْشٍ؟ فَتَقَدَّمَ رَسُولُ اللهِ وَقَالَ أَدْعُوكُمْ إِلَى شَهَادَةِ

أَنْ لَا إِلٰهَ إِلَّا اللهُ وَأَنِّي رَسُولُ اللهِ، .... قَالَ لَهُ وَإِلَى مَا تَدْعُوا

أَيْضًا يَا أَخَا قُرَيْشٍ؟ فَتَلَا رَسُولُ اللهِ ﷺ قُلْ تَعَالَوْا أَتْلُ مَا حَرَّمَ إِلَى قَوْلِهِ لَعَلَّكُمْ

تَتَّقُونَ فَقَالَ لَهُ مَفْرُوقٌ وَإِلَى مَا تَدْعُوا يَا أَخَا قُرَيْشٍ؟ فَتَلَا رَسُولُ اللهِ ﷺ

إِنَّ اللهَ يَأْمُرُ بِالْعَدْلِ إِلَى قَوْلِهِ لَعَلَّكُمْ تَذَكَّرُونَ، فَقَالَ لَهُ مَفْرُوقٌ دَعَوْتَ وَاللهِ

يَا قُرَيْشِيُّ إِلَى مَكَارِمِ الْأَخْلَاقِ وَمَحَاسِنِ الْأَعْمَالِ (البداية والنهاية ج ٣، ص ١٩٥)

ಅಲೀ ಬಿನ್ ಅಬೀ ತಾಲಿಬ್(ರ) ಹೇಳುತ್ತಾರೆ- ಮಫ್ರೂಕ್ ಶೈಬಾನಿ ಪ್ರವಾದಿಯವರಲ್ಲಿ(ಸ) ಕೇಳಿದನು, 'ಓ ಕುರೈಶನೇ! ನೀವು ಯಾವುದರ ಕಡೆಗೆ ಕರೆ ನೀಡುತ್ತಿದ್ದೀರಿ?' ಪ್ರವಾದಿ(ಸ) ಹೇಳಿದರು- "ಅಲ್ಲಾಹನ ಹೊರತು ಅನ್ಯ ಆರಾಧ್ಯರಿಲ್ಲವೆಂಬುದನ್ನೂ ನಾನು ಅಲ್ಲಾಹನ ಸಂದೇಶವಾಹಕನೆಂಬುದನ್ನೂ ಜನರು ನಂಬಬೇಕೆಂದು ಕರೆ ನೀಡುತ್ತಿದ್ದೇನೆ." (ಅರ್ಥಾತ್ ಏಕೈಕ ಅಲ್ಲಾಹನ ಆರಾಧನೆ ಮತ್ತು ಅನುಸರಣೆ ಮಾಡಬೇಕು ಹಾಗೂ ನನ್ನ ನೇತೃತ್ವ ಮತ್ತು ಮಾರ್ಗದರ್ಶನದ ಪ್ರಕಾರ ಜೀವನ ಸಾಗಿಸಬೇಕು)... ಮಫ್ರೂಕ್ ಪುನಃ ಕೇಳಿದನು- "ಇನ್ನು ಯಾವುದರ ಕಡೆಗೆ ಕರೆಯುತ್ತೀರಿ". ಪ್ರವಾದಿಯವರು(ಸ) 'ಕುಲ್ ತಆಲೌ ನಿಂದ ಲಅಲ್ಲಕುಮ್ ತತ್ತಕೂನ್' (6:151-153) ವರೆಗಿನ ಆಯತ್‌ಗಳನ್ನು ಓದಿದರು. "ತರುವಾಯ ಮಫ್ರೂಕ್ ಪುನಃ ಕೇಳಿದನು- "ನೀವು ಇನ್ನು ಯಾವುದರ ಕಡೆಗೆ ಕರೆಯುತ್ತೀರಿ" ಪ್ರವಾದಿ(ಸ), 'ಇನ್ನಹಾ ಯಅ್‌ಮುರು- ಎಂಬ ಇಡೀ ಆಯತ್ ಪಠಿಸಿದರು. (16:90) ಇದೆಲ್ಲವನ್ನೂ ಕೇಳಿದ ಬಳಿಕ ಮಫ್ರೂಕ್ ಹೀಗೆಂದನು- "ಓ ಕುರೈಶನೇ! ಅಲ್ಲಾಹನಾಣೆ! ನೀವು ಉನ್ನತ ಮಟ್ಟದ ಚಾರಿತ್ರ್ಯಗಳ ಮತ್ತು ಅತ್ಯುತ್ತಮ ಕರ್ಮಗಳತ್ತ ಕರೆ ನೀಡುತ್ತಿರುವಿರಿ."

[ಅಲ್ ಬಿದಾಯ ವನ್ನಿಹಾಯ]

ಟಿಪ್ಪಣಿ: ಈ ಘಟನೆ ಕೂಡಾ ಮಕ್ಕಾದ ಸಂದೇಶ ಪ್ರಚಾರ ಕಾಲದ್ದಾಗಿದೆ. ಹಜ್ಜ್‌ನ ಕಾಲದಲ್ಲಿ ಪ್ರವಾದಿ(ಸ) ಒಬ್ಬಂಟಿಯಾಗಿ ಅಥವಾ ಹ. ಅಬೂಬಕರ್ ಮತ್ತು ಹ. ಅಲೀಯವರ(ರ) ಜೊತೆ ಪ್ರತಿಯೊಂದು ಗೋತ್ರದ ನಿವಾಸ(ಡೇರೆ)ಗಳಿಗೆ ಹೋಗಿ ಇಸ್ಲಾಮಿನ ಸಂದೇಶ ನೀಡುವುದು ರೂಢಿಯಾಗಿತ್ತು. ಒಂದು ವರ್ಷ ಶೈಬಾನ್ ಗೋತ್ರದವರು ಬಂದಿದ್ದರು. ಪ್ರವಾದಿಯವರು(ಸ) ಹ. ಅಬೂಬಕರ್ ಮತ್ತು ಅಲೀಯವರೊಂದಿಗೆ(ರ) ಅವರ ಡೇರೆಗಳಿಗೆ ಭೇಟಿ ನೀಡಿದರು. ಮಫ್ರೂಕ್ ಅವರ ಸರದಾರನಾಗಿದ್ದ. ಅವನಿಗೆ ಹ. ಅಬೂಬಕರ್‌ರ ಪರಿಚಯವಿತ್ತು. ಅವನು ಅವರ ಬಳಿಯಲ್ಲೇ

ಕುಳಿತಿದ್ದನು. ಉಭಯ ಕುಶಲೋಪರಿಯ ಬಳಿಕ ಹ.ಅಬೂಬಕರ್‌ರು(ರ) ಮಫ್ರೂಕ್ ಮತ್ತು ಅವನ ಸಂಗಾತಿಗಳಿಗೆ ಪ್ರವಾದಿವರ್ಯರನ್ನು(ಸ) ಪರಿಚಯಿಸುತ್ತಾ, ಇವರು ಅಲ್ಲಾಹನ ಸಂದೇಶವಾಹಕರು, ಇವರ ಬಗ್ಗೆ ನೀವು ಕೇಳಿರಬಹುದು ಎಂದರು. ಆಗ ಅವರು, 'ಹೌದು! ನಾವು ಇವರ ವಿಷಯ ಕೇಳಿದ್ದೇವೆ ಎಂದರು. ಆಗ ಪ್ರವಾದಿಯವರು(ಸ) ಸೂರಃ ಅನ್‌ಆಮ್‌ನ 151ರಿಂದ 153ರ ವರೆಗಿನ ಆಯತ್‌ಗಳನ್ನು ಓದಿ ಕೇಳಿಸಿದರು. ಈ ಆಯತ್‌ಗಳಲ್ಲಿ ಅಪ್ಪಟ ಏಕದೇವ ವಿಶ್ವಾಸ ಮತ್ತು ಹೆತ್ತವರೊಂದಿಗೆ ಸೌಜನ್ಯದಿಂದ ವರ್ತಿಸಬೇಕೆಂಬ ಬೋಧನೆ ನೀಡಲಾಗಿದೆ. ಅದರೊಂದಿಗೆ ಬಡತನಕ್ಕೆ ಹೆದರಿ ಸಂತಾನವನ್ನು ಕೊಲ್ಲದಂತೆ ಆಜ್ಞಾಪಿಸಲಾಗಿದೆ. ಪ್ರತ್ಯಕ್ಷ ಮತ್ತು ಪರೋಕ್ಷ ದುಷ್ಕಾರ್ಯಗಳಿಂದ ತಡೆಯಲಾಗಿದೆ. ಅನಾಥರ ಸೊತ್ತನ್ನು ಕಬಳಿಸುವುದನ್ನು ಮತ್ತು ತೂಕ ಅಳತೆಗಳಲ್ಲಿ ಕಡಿತಗೊಳಿಸುವುದನ್ನು ನಿಷೇಧಿಸಲಾಗಿದೆ. ಅದಲ್ಲದೆ, ಮಾತನಾಡುವಾಗ ಆಪ್ತ ಸಂಬಂಧಿಕರ ಕುರಿತೇ ಆದರೂ ನ್ಯಾಯದ ಮಾತು ಆಡುವಂತೆ ಮತ್ತು ಅಲ್ಲಾಹನೊಂದಿಗೆ ಮಾಡಿದ ದಾಸ್ಯ ಅನುಸರಣೆಯ ಕರಾರನ್ನು ಪೂರೈಸುವಂತೆ ಬೋಧಿಸಲಾಗಿದೆ.

ಸೂರಃ ಅನ್‌ಆಮ್ ಮಕ್ಕಾ ಜೀವನ ಕಾಲದಲ್ಲಿ ಅವತೀರ್ಣವಾದ ಅಧ್ಯಾಯವಾಗಿದೆ. ಅದರಲ್ಲಿ ಧರ್ಮದ ಪ್ರಾಥಮಿಕ ಶಿಕ್ಷಣಗಳು ಸಂಕ್ಷೇಪವಾಗಿ ಬಂದಿದೆ. ಅಜ್ಞಾನಜನ್ಯ ವ್ಯವಸ್ಥೆಯ ಕೆಡುಕುಗಳನ್ನು ವಿಮರ್ಶಿಸಲಾಗಿದೆ. ಮಾನವ ಕೋಟಿಯು ಶಾಂತಿ-ಸುಭಿಕ್ಷೆಯಲ್ಲಿರಬೇಕಾದರೆ ಸಮಾಜವನ್ನು ಯಾವ ಬುನಾದಿಗಳ ಮೇಲೆ ಕಟ್ಟಬೇಕಾಗಿದೆಯೆಂದು ಅವರಿಗೆ ತೋರಿಸಿ ಕೊಡಲಾಗಿದೆ. ಇಸ್ಲಾಮಿನ ಸಂದೇಶ ಪ್ರಚಾರವು ಕೇವಲ, ನಮಾಝ್ ಉಪವಾಸಗಳಿಗಷ್ಟೇ ಸೀಮಿತವಾಗಿದ್ದರೆ ಈ ಎಲ್ಲ ಮೂಲ ತತ್ವಗಳನ್ನು ವಿವರಿಸಬೇಕಾದ ಅಗತ್ಯವಾದರೂ ಏನಿತ್ತು? ಮುಂದೆ ಸ್ಥಾಪಿತವಾದ ಆಡಳಿತ ವ್ಯವಸ್ಥೆಯು ಇದೇ ಬುನಾದಿಗಳ ಮೇಲೆ ನೆಲೆ ನಿಂತಿತು. ಹೆಚ್ಚಿನ ವಿವರಗಳಿಗೆ ಸೂರಃ ಬನೀ ಇಸ್ರಾಈಲ್‌ನ ಮೂರನೆಯ ಮತ್ತು ನಾಲ್ಕನೆಯ ರುಕೂಅ್‌ಗಳನ್ನು ನೋಡಿರಿ.

ಪ್ರವಾದಿವರ್ಯರು ಶೈಬಾನಿಗಳ ಮುಂದೆ ಓದಿದ ಎರಡನೆಯ ಸೂಕ್ತವು, ಅನ್ನಹ್ಲ್ ಸೂರಾದ 90ನೆಯ ಸೂಕ್ತವಾಗಿದೆ. ಅದರಲ್ಲಿ ಇಸ್ಲಾಮಿನ ಸಂದೇಶದ ಅಂಶಗಳನ್ನು ಬಹಳ ಸಮಗ್ರವಾಗಿ ವಿವರಿಸಲಾಗಿದೆ. ಮಫ್ರೂಕ್ ಶೈಬಾನಿಯವರು ಅದರ ಬಗ್ಗೆ ಚಿಂತನೆ ನಡೆಸಲು ಸಮಯಾವಕಾಶ ಕೇಳಿದರು. ಅನಂತರ ಹೀಗೆಂದರು- ತಾವು ನೀಡುವ ಈ ಕರೆಯು ಬಹುಶಃ ರಾಜರುಗಳಿಗೆ ಇಷ್ಟವಾಗಲಿಕ್ಕಿಲ್ಲ. ಇಲ್ಲಿ ಉದ್ಭವಿಸುವ ಪ್ರಶ್ನೆಯೇನೆಂದರೆ, ಇಸ್ಲಾಮಿನ ಕರೆಯು ವೈಯಕ್ತಿಕವಾಗಿ ಕೇವಲ ದಿಕ್ರ್-ತಸ್ಬೀಹ್‌ನ ಕರೆಯಾಗಿರುತ್ತಿದ್ದರೆ ರಾಜರುಗಳು ಮತ್ತು ಅಧಿಕಾರಿ ವರ್ಗಗಳಿಗೆ ಅದು ಅರೋಚಕವಾಗುವುದಾದರೂ ಏಕೆ? ಇದರಿಂದ, ದೇವೇತರ ವ್ಯವಸ್ಥೆಗಳನ್ನು ಅಳಿಸಿ ಅದರ ಸ್ಥಾನದಲ್ಲಿ ಅಪ್ಪಟ ದೈವಿಕ ವ್ಯವಸ್ಥೆಯನ್ನು ಸಂಸ್ಥಾಪಿಸುವುದೇ ಇಸ್ಲಾಮೀ ಸಂದೇಶ ಪ್ರಚಾರದ ಉದ್ದೇಶವಾಗಿದೆಯೆಂದು ತಿಳಿದು ಬರುತ್ತದೆ.

---

(287) عَنْ عَمْرِو بْنِ عَبَسَةَ قَالَ دَخَلْتُ عَلَى النَّبِيِّ صَلَّى اللّٰهُ عَلَيْهِ وَسَلَّمَ بِمَكَّةَ يَعْنِيْ فِي
أَوَّلِ النُّبُوَّةِ، فَقُلْتُ مَا أَنْتَ ؟ قَالَ نَبِيٌّ، فَقُلْتُ وَمَا نَبِيٌّ ؟ قَالَ أَرْسَلَنِيَ اللّٰهُ تَعَالٰى، فَقُلْتُ
بِأَيِّ شَيْءٍ أَرْسَلَكَ ؟ قَالَ أَرْسَلَنِيْ بِصِلَةِ الْأَرْحَامِ وَكَسْرِ الْأَوْثَانِ وَأَنْ يُوَحَّدُ اللّٰهُ
لَا يُشْرَكُ بِهٖ شَيْءٌ (مسلم ورياض الصالحين)

ಅಮ್ರ್ ಬಿನ್ ಅಬಸ(ರ) ಹೇಳುತ್ತಾರೆ- ನಾನು ಪ್ರವಾದಿವರ್ಯರ(ಸ) ಬಳಿಗೆ ಅವರ ಪ್ರವಾದಿತ್ವದ ಆರಂಭದ ಕಾಲದಲ್ಲಿ ಹೋಗಿ ತಾವು ಏನಾಗಿರುವಿರೆಂದು ಕೇಳಿದೆ. ಅವರು ಹೇಳಿದರು- ನಾನು ಪ್ರವಾದಿಯಾಗಿರುವೆನು. ಪುನಃ ನಾನು, 'ಪ್ರವಾದಿ ಎಂದರೇನು' ಎಂದು ಕೇಳಿದೆ. ಪ್ರವಾದಿ(ಸ) ಹೇಳಿದರು- ನನ್ನನ್ನು ಅಲ್ಲಾಹನು ಕಳಿಸಿರುವನು. ನಾನು ಕೇಳಿದೆ- ಅಲ್ಲಾಹನು ಏನನ್ನು ಕೊಟ್ಟು ತಮ್ಮನ್ನು ಕಳಿಸಿರುವನು? ಪ್ರವಾದಿ(ಸ) ಹೇಳಿದರು- ನಾನು ಜನರಿಗೆ ಸಂಬಂಧಿಕರೊಂದಿಗೆ ಸೌಜನ್ಯದಿಂದ ವರ್ತಿಸುವಂತೆ ಬೋಧಿಸಲು, ವಿಗ್ರಹಾರಾಧನೆಯನ್ನು ಕೊನೆಗೊಳಿಸಲು ಮತ್ತು ಜನರು ಏಕೈಕ ಅಲ್ಲಾಹನನ್ನು ಆರಾಧಿಸುವಂತೆ ಬೋಧಿಸಲು ಕಳುಹಿಸಲ್ಪಟ್ಟಿದ್ದೇನೆ. *[ಮುಸ್ಲಿಮ್, ರಿಯಾದುಸ್ಸಾಲಿಹೀನ್]*

ದಾಸರ ದಾಸ್ಯದಿಂದ ಹೊರಬನ್ನಿರಿ

(288) إِنَّ رَسُوْلَ اللّٰهِ صَلَّى اللّٰهُ عَلَيْهِ وَسَلَّمَ كَتَبَ إِلٰى أَهْلِ نَجْرَانَ كِتَابًا وَفِيْهِ
------------- أَمَّا بَعْدُ فَإِنِّيْ أَدْعُوْكُمْ إِلٰى عِبَادَةِ اللّٰهِ مِنْ عِبَادَةِ الْعِبَادِ، وَأَدْعُوْكُمْ
إِلٰى وِلَايَةِ اللّٰهِ مِنْ وِلَايَةِ الْعِبَادِ (تفسير ابن كثير ج١)

ಪ್ರವಾದಿಯವರು(ಸ) (ಕ್ರೈಸ್ತರಾಗಿದ್ದ) ನಜ್ರಾನಿನ ಜನರಿಗೆ ಈ ಪತ್ರ ಬರೆದರು- ...ತರುವಾಯ ನೀವು ದಾಸರ ದಾಸ್ಯ-ಆರಾಧನೆಯನ್ನು ಬಿಟ್ಟು ಅಲ್ಲಾಹನ ದಾಸ್ಯ-ಆರಾಧನೆ ಕೈಗೊಳ್ಳಬೇಕೆಂದು ನಾನು ನಿಮಗೆ ಕರೆ ನೀಡುತ್ತೇನೆ ಮತ್ತು ದಾಸರ ರಕ್ಷಣೆಯಿಂದ ಹೊರಬಂದು ಅಲ್ಲಾಹನ ರಕ್ಷಣೆ ಮತ್ತು ಅಧಿಕಾರದೊಳಗೆ ಸೇರಿರಿ ಎಂದೂ ಕರೆ ನೀಡುತ್ತೇನೆ. *[ತಫ್ಸೀರ್ ಇಬ್ನು ಕಸೀರ್, ಭಾಗ-1]*

ಕುಟುಂಬ ಸಂಬಂಧದ ಬೇಡಿಕೆಗಳು

(289) قَالَ مَاذَا يَأْمُرُكُمْ؟ قُلْتُ يَقُوْلُ اعْبُدُوا اللّٰهَ وَلَا تُشْرِكُوْا بِهِ شَيْئًا، وَاتْرُكُوْا
مَا يَقُوْلُ آبَاؤُكُمْ، وَيَأْمُرُنَا بِالصَّلٰوةِ وَالصِّدْقِ وَالْعَفَافِ وَالصِّلَةِ (بخاری)

(ಹರ್ಕ್ಯುಲಸ್ ಚಕ್ರವರ್ತಿಯು ಅಬೂ ಸುಫ್ಯಾನ್‌ರೊಡನೆ ಕೇಳಿದನು)- ಅವರು [ಮುಹಮ್ಮದ್(ಸ)] ನಿಮ್ಮನ್ನು ಯಾವುದರ ಕಡೆಗೆ ಕರೆ ನೀಡುತ್ತಾರೆ? ಅಬೂ ಸುಫ್ಯಾನ್

ಹೇಳಿದರು- ಅವರು ನಮ್ಮೊಡನೆ, "ನೀವು ಅಲ್ಲಾಹನನ್ನು ಮಾತ್ರ ಆರಾಧ್ಯನೆಂದು ನಂಬಬೇಕು, ಅವನ ದೇವತ್ವದಲ್ಲಿ ಯಾರನ್ನೂ ಸೇರಿಸಬಾರದು, ನಿಮ್ಮ ಪೂರ್ವಜರ ತಪ್ಪು ವಿಶ್ವಾಸಾಚಾರ ಗಳನ್ನು ತೊರೆಯಬೇಕು, ನಮಾಝ್ ಮಾಡಬೇಕು, ಸತ್ಯ ನುಡಿಯಬೇಕು, ಸಚ್ಚಾರಿತ್ರ್ಯದ ಜೀವನ ಸಾಗಿಸಬೇಕು ಮತ್ತು ಸಂಬಂಧಿಕರೊಂದಿಗೆ ಸೌಜನ್ಯದಿಂದ ವರ್ತಿಸಬೇಕು" ಎಂದು ಹೇಳುತ್ತಾರೆ. *[ಬುಖಾರಿ]*

ಟಿಪ್ಪಣಿ: ಇದು 'ಹದೀಸ್ ಹಿರ್ಕಲ್' ಎಂಬ ಹೆಸರಿನಿಂದ ಪ್ರಸಿದ್ಧವಾದ ಸುದೀರ್ಘ ಪ್ರವಾದಿ ವಚನದ ಒಂದು ತುಣುಕಾಗಿದೆ. ಇದರ ಸಾರಾಂಶ ಹೀಗಿದೆ: ರೋಮ್‌ನ ಅರಸ ಹರ್ಕ್ಯುಲಸ್ ಬೈತುಲ್ ಮಕ್ದಿಸ್‌ನಲ್ಲಿದ್ದಾಗ ಅವನಿಗೆ ಪ್ರವಾದಿಯವರ(ಸ) ಸಂದೇಶದ ಪತ್ರ ಸಿಕ್ಕಿತು. ಆಗ ಅವನು ಅದರ ವಸ್ತುಸ್ಥಿತಿಯನ್ನು ಅರಿಯುವ ಸಲುವಾಗಿ ಯಾರಾದರೂ ಮಕ್ಕಾ ನಿವಾಸಿಗಳು ಸಿಗುತ್ತಾರೋ ಎಂದು ಹುಡುಕ ತೊಡಗಿದ. ಅದೃಷ್ಟವಶಾತ್ ಸಿರಿಯಾದಲ್ಲಿ ವ್ಯಾಪಾರಕ್ಕಾಗಿ ಬಂದಿದ್ದ ಅಬೂ ಸುಫ್ಯಾನ್ ಮತ್ತವರ ಸಂಗಾತಿಗಳು ಅವನಿಗೆ ಸಿಕ್ಕಿದರು. ಅವನು ಆಗಿನ್ನೂ ಸತ್ಯವಿಶ್ವಾಸ ಸ್ವೀಕರಿಸಿಲ್ಲದ ಹಾಗೂ ಇಸ್ಲಾಮಿನ ಕಡುವೈರಿಯಾದ ಅಬೂ ಸುಫ್ಯಾನ್‌ರೊಂದಿಗೆ ಅನೇಕ ಪ್ರಶ್ನೆಗಳನ್ನು ಕೇಳಿದನು. ಈ ಪ್ರಶ್ನೆಗಳ ಪೈಕಿ ಒಂದು ಪ್ರಶ್ನೆಯೇ ಪ್ರಸ್ತುತ ಹದೀಸ್‌ನಲ್ಲಿರುವುದು.

ಈ ಹದೀಸ್‌ನಲ್ಲೂ ಈ ಹಿಂದೆ ಬಂದ ಇನ್ನಿತರ ಹದೀಸ್‌ಗಳಲ್ಲೂ ಸಂಬಂಧಿಕರೊಂದಿಗೆ ಸೌಜನ್ಯದಿಂದ ವರ್ತಿಸಬೇಕೆಂಬ ಪ್ರಸ್ತಾಪ ಬಂದಿದೆ. ಇದು ಬಹಳ ವಿಶಾಲಾರ್ಥದಲ್ಲಿ ಪ್ರಯೋಗಿಸ ಲ್ಪಟ್ಟಿದೆ. ಸಕಲ ಮಾನವ ಕುಲವೇ ಅದರ ವ್ಯಾಪ್ತಿಗೆ ಬರುತ್ತದೆ. ಒಂದು ಪ್ರವಾದಿ ವಚನ ಹೀಗಿದೆ: "ಮಾನವ ಜನಾಂಗದ ಎಲ್ಲರೂ ಪರಸ್ಪರ ಸಹೋದರರು, ಏಕೆಂದರೆ ಎಲ್ಲರೂ ಒಂದೇ ತಂದೆ-ತಾಯಿಯ (ಆದಮ್-ಹವ್ವಾ) ಮಕ್ಕಳಾಗಿದ್ದಾರೆ." (ಅಬೂ ದಾವೂದ್) ತರುವಾಯ ಪ್ರವಾದಿಯವರು(ಸ), "ಇದಕ್ಕೆ ನಾನು ಸಾಕ್ಷಿಯಾಗಿದ್ದೇನೆ. ನಾನಿದನ್ನು ಘೋಷಿಸುತ್ತಿದ್ದೇನೆ" ಎಂದು ಹೇಳಿದರು. ಇದೇ ವಾಸ್ತವಿಕತೆಯನ್ನು ಹ. ಮುಗೀರ ಬಿನ್ ಶುಅ್‌ಬ, ಇರಾನ್‌ನ ಸೇನಾಧಿಪತಿ ರುಸ್ತುಮ್ ಮತ್ತು ಇತರ ಸೇನಾ ನಾಯಕರ ಮುಂದೆ ಘೋಷಿಸಿದ್ದಾರೆ. ಅವರು ಮೊಟ್ಟ ಮೊದಲು ಇರಾನಿಯರ ತಪ್ಪು ಕಲ್ಪನೆಗಳನ್ನು ದೂರೀಕರಿಸುತ್ತಾ ಹೇಳಿದರು- "ನಾವು ವ್ಯಾಪಾರಿಗಳಲ್ಲ. ಹೊಸ ಹೊಸ ಮಾರುಕಟ್ಟೆ ಹುಡುಕುವುದು ನಮ್ಮ ಉದ್ದೇಶವಲ್ಲ. ನಮ್ಮ ಧ್ಯೇಯವು ಇಹಲೋಕವಲ್ಲ, ಪರಲೋಕವಾಗಿದೆ, ಕೇವಲ ಪರಲೋಕ! ನಾವು ಸತ್ಯದ ವಾಹಕರು. ಸತ್ಯದ ಕಡೆಗೆ ಜನರನ್ನು ಆಹ್ವಾನಿಸುವುದೇ ನಮ್ಮ ಗುರಿ." ಇದನ್ನು ಕೇಳಿ ರುಸ್ತುಮನು, "ಸತ್ಯಧರ್ಮ ವೆಂದರೇನು? ಅದನ್ನು ಪರಿಚಯಿಸಿರಿ" ಎಂದನು. ಆಗ ಮುಗೀರ(ರ) ಹೀಗೆಂದರು: "ನಮ್ಮ ಧರ್ಮದ ಮೂಲಭೂತ ಹಾಗೂ ಕೇಂದ್ರೀಯ ವಿಷಯ, ಮಾನವನು ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲವೆಂಬ ಹಾಗೂ ಮುಹಮ್ಮದ್(ಸ) ಅಲ್ಲಾಹನ ಸಂದೇಶವಾಹಕರೆಂಬ ಸತ್ಯವನ್ನು ಘೋಷಿಸುವುದಾಗಿದೆ. ಅದರ ಹೊರತು ಧರ್ಮದ ಯಾವುದೇ ಅಂಶವು ಸರಿಯಾಗುವುದಿಲ್ಲ. (ಇದರ ಅರ್ಥ- ತೌಹೀದನ್ನು (ಏಕದೇವತ್ವ) ಅಂಗೀಕರಿಸಬೇಕು ಮತ್ತು ಮುಹಮ್ಮದ್‌ರ(ಸ) ನೇತೃತ್ವ ಮತ್ತು ಮಾರ್ಗದರ್ಶನವನ್ನು ಒಪ್ಪಿಕೊಳ್ಳಬೇಕು ಎಂದಾಗಿದೆ.) ಇದನ್ನು ಕೇಳಿ ಇರಾನಿನ ಸೇನಾಧಿಪತಿಯು, "ಇದಂತೂ ಬಹಳ ಉತ್ತಮ ಬೋಧನೆಯಾಗಿದೆ. ಈ ಧರ್ಮದ ಇನ್ನೇನಾದರೂ ಬೋಧನೆಗಳಿವೆಯೇ?" ಎಂದು ಕೇಳಿದನು. ಹ. ಮುಗೀರ(ರ) ಹೇಳಿದರು- "ಮಾನವರನ್ನು ಮಾನವರ ದಾಸ್ಯದಿಂದ ವಿಮೋಚಿಸಿ ಅಲ್ಲಾಹನ ದಾಸ್ಯದೆಡೆಗೆ ತರುವುದೂ ಈ ಧರ್ಮದ ಬೋಧನೆಯಾಗಿದೆ." ಇರಾನಿನ ಸೇನಾಧಿಪತಿಯು, "ಇದೂ ಉತ್ತಮ ಬೋಧನೆಯಾಗಿದೆ. ಇನ್ನೇನಾದರೂ ಇದೆಯೇ?" ಹ. ಮುಗೀರ(ರ) ಹೇಳಿದರು-

"ನಮ್ಮ ಧರ್ಮವು ಸಕಲ ಮಾನವರೂ ಆದಮರ(ಅ) ಸಂತತಿಯಾದುದರಿಂದ- ಎಲ್ಲರೂ ಪರಸ್ಪರ ಸಹೋದರರು. ಒಂದೇ ತಂದೆ-ತಾಯಿಯಿಂದ ಹುಟ್ಟಿದ ಸಹೋದರರು ಎಂದು ಬೋಧಿಸುತ್ತದೆ."

ಹ. ಮುಗೀರ(ರ) ನೀಡಿದ ಧರ್ಮದ ಬೋಧನೆಗಳಿವು. ಅದೇ ಸೇನಾಧಿಪತಿಯ ಮುಂದೆ ಹ. ರಿಬಿಈ ಬಿನ್ ಆಮಿರ್(ರ) ತಮ್ಮ ಉದ್ದೇಶವನ್ನು ಈ ಕೆಳಗಿನ ಮಾತುಗಳಲ್ಲಿ ವ್ಯಕ್ತಪಡಿಸಿದರು-

ಅಲ್ಲಾಹನು ಯಾರಿಗೆ ಅನುಗ್ರಹ ಪ್ರದಾನ ಮಾಡುತ್ತಾನೋ ಅವರನ್ನು ಮಾನವರ ದಾಸ್ಯದಿಂದ ವಿಮೋಚಿಸಿ ಅಲ್ಲಾಹನ ದಾಸ್ಯದೊಳಗೆ ಸೇರಿಸಲು, ಇಕ್ಕಟ್ಟಾದ ಲೋಕದಿಂದ ಅವರನ್ನು ಹೊರತೆಗೆದು ವಿಶಾಲವೂ ವಿಸ್ತಾರವೂ ಆದ ಲೋಕಕ್ಕೆ ತರಲು, ಅನ್ಯಾಯ ಪೂರ್ಣ ಜೀವನ ವ್ಯವಸ್ಥೆಗಳಿಂದ ಇಸ್ಲಾಮಿನ ನ್ಯಾಯಪೂರ್ಣ ವ್ಯವಸ್ಥೆಗೆ ತರಲು ಅಲ್ಲಾಹನು ನಮ್ಮನ್ನು ನೇಮಿಸಿರುತ್ತಾನೆ. ನಾವು ಜನರನ್ನು ಅಲ್ಲಾಹನ ಧರ್ಮದ ಕಡೆಗೆ ಕರೆಯುವಂತೆ ಅಲ್ಲಾಹನು ತನ್ನ ಧರ್ಮವನ್ನು ನಮಗೆ ಕೊಟ್ಟು ತನ್ನ ದಾಸರೆಡೆಗೆ ಕಳಿಸಿರುತ್ತಾನೆ. *[ಅಲ್‌ಬಿದಾಯ ವನ್ನಿಹಾಯ]*

ಎರಡು ವಿಷಯಗಳನ್ನು ವ್ಯಕ್ತಪಡಿಸಲಿಕ್ಕಾಗಿ ನಾವು ಈ ಸುದೀರ್ಘ ಉಲ್ಲೇಖವನ್ನು ಕೊಟ್ಟಿದ್ದೇವೆ. ಒಂದನೆಯದು, ಇಸ್ಲಾಮಿನಲ್ಲಿ ಸಂಬಂಧಿಕರೊಂದಿಗೆ ಸೌಜನ್ಯದಿಂದ ವರ್ತಿಸಬೇಕೆಂಬುದು ಸಕಲ ಮಾನವಕುಲಕ್ಕೆ ಅನ್ವಯಿಸುತ್ತದೆ. ಎರಡನೆಯದು, ಬಹಳ ಮಹತ್ವ ಪೂರ್ಣವಾದ ವಿಷಯವಾಗಿದೆ. ಮುಸ್ಲಿಮ್ ಸಮುದಾಯದ 'ನೇಮಕ'ದ ಉದ್ದೇಶವು ಅಲ್ಲಾಹನ ದಾಸರನ್ನು ಮಾನವರ ದಾಸ್ಯದಿಂದ ವಿಮೋಚಿಸಿ ಇಸ್ಲಾಮಿನ ನ್ಯಾಯಪೂರ್ಣ ವ್ಯವಸ್ಥೆಯನ್ನು ಸ್ಥಾಪಿಸುವ ಮೂಲಕ ಅಕ್ರಮ-ಮರ್ದನಗಳಿಂದ ತತ್ತರಿಸುವ ಲೋಕವನ್ನು ನ್ಯಾಯಪೂರ್ಣ ವ್ಯವಸ್ಥೆಯಡಿಯಲ್ಲಿ ಶಾಂತಿ ನೆಮ್ಮದಿಯೊಂದಿಗೆ ಬಾಳುವಂತೆ ಮಾಡುವುದೇ ಆಗಿದೆ.

ಈ ನ್ಯಾಯಪೂರ್ಣ ವ್ಯವಸ್ಥೆಯೇ 'ಖಿಲಾಫತ್ ರಾಶಿದಃ' ಎಂದು ಕರೆಯಲ್ಪಡುವ ವ್ಯವಸ್ಥೆಯಾಗಿದ್ದು ಇದು ಮುಹಮ್ಮದ್(ಸ) ಅವರ ಪ್ರವಾದಿತ್ವದ ನೇತೃತ್ವ ಮತ್ತು ಸಹಾಬಿಗಳ 23 ವರ್ಷಗಳ ನಿರಂತರ ಪರಿಶ್ರಮದ ಫಲವಾಗಿ ಸ್ಥಾಪಿಸಲ್ಪಟ್ಟಿತ್ತು. ಬೇರೆ ಮಾತಿನಲ್ಲಿ ಇದನ್ನು ಮಾನವ ಜನಾಂಗದ ರಕ್ಷಕ ವ್ಯವಸ್ಥೆಯೆಂದು ಕರೆಯಬಹುದು. ಈ ರಕ್ಷಕ ವ್ಯವಸ್ಥೆಗೆ ಪ್ರವಾದಿಯವರ(ಸ) ನಿಧನದ ಬೆನ್ನಲ್ಲೇ ಅಪಾಯ ಎದುರಾಗಿತ್ತು. ಇಷ್ಟೆಲ್ಲ ತ್ಯಾಗ ಬಲಿದಾನಗಳ ಬಳಿಕ ಸ್ಥಾಪಿಸಲಾದ ವ್ಯವಸ್ಥೆಯು ಎಲ್ಲಿ ಕುಸಿದು ಬೀಳುವುದೋ ಎಂಬುದನ್ನು ಮನಗಂಡ ಹ. ಅಬೂಬಕರ್(ರ) ಜನರನ್ನು ಒಟ್ಟು ಸೇರಿಸಿದರು. ಪ್ರವಾದಿ(ಸ) ನಮ್ಮ ಮಧ್ಯೆ ಇಲ್ಲದಿರುವ ಅವಸ್ಥೆಯಲ್ಲಿ ಇನ್ನೇನಾದೀತು ಎಂದು ಜನರು ಹತಾಶರಾಗಿದ್ದರು. ಈ ಹಿನ್ನಲೆಯಲ್ಲಿ ಹ. ಅಬೂಬಕರ್(ರ) ಈ ಕೆಳಗಿನಂತೆ ಭಾಷಣ ಮಾಡಿದರು-

"ಜನರೇ! ಮುಹಮ್ಮದ್‌ರನ್ನು(ಸ) ಆರಾಧ್ಯನೆಂದು ಮಾಡಿಕೊಂಡಿದ್ದವರು ಮುಹಮ್ಮದ್(ಸ) ನಿಧನ ಹೊಂದಿದ್ದಾರೆಂದು ತಿಳಿದಿರಬೇಕು. ಯಾರು ಅಲ್ಲಾಹನನ್ನು ಆರಾಧ್ಯನೆಂದು ಮಾಡಿಕೊಂಡಿದ್ದನೋ ಅಲ್ಲಾಹನು ಜೀವಂತವಾಗಿದ್ದಾನೆ ಮತ್ತು ಅವನು ಸಾಯಲಿಕ್ಕಿಲ್ಲವೆಂದು ತಿಳಿದಿರಬೇಕು. ಅಲ್ಲಾಹನು ತನ್ನ ಧರ್ಮವನ್ನು ರಕ್ಷಿಸಬೇಕೆಂದು ನಿಮಗೆ ಆಜ್ಞಾಪಿಸಿರುವನು. ಆದುದರಿಂದ ಪ್ರವಾದಿವರ್ಯರ(ಸ) ನಿಧನದ ದುಃಖದಿಂದ ಈ ಧರ್ಮದ ರಕ್ಷಣೆಯ ಹೊಣೆಯನ್ನು ಮರೆಯಬೇಡಿರಿ. ಅಲ್ಲಾಹನು ತನ್ನ ಪ್ರವಾದಿಯನ್ನು ನಿಮ್ಮ ನಡುವಿನಿಂದ ತನ್ನ ಬಳಿಗೆ ಕರೆಯಲು ಇಷ್ಟಪಟ್ಟನು. ಅಲ್ಲಿ ಅವರಿಗೆ ಪ್ರವಾದಿತ್ವದ ಹೊಣೆಗಾರಿಕೆಯನ್ನು ಈಡೇರಿಸಿದುದಕ್ಕಾಗಿ ಪುರಸ್ಕಾರಗಳನ್ನು ನೀಡುವನು. ನಿಮ್ಮ ಮಧ್ಯೆ ಅಲ್ಲಾಹನು ಆತನ ಗ್ರಂಥವನ್ನೂ ಪ್ರವಾದಿಯವರ ಚರ್ಯೆಯನ್ನೂ ಉಳಿಸಿರುವನು. ಇನ್ನು ಯಾರು ಇವೆರಡರ ಆದೇಶಗಳಂತೆ ಕರ್ಮವೆಸಗುವನೋ ಅವನು ಒಳಿತಿನ ಮಾರ್ಗವನ್ನು ಪಡೆಯುವನು. ಯಾರು ಈ ಎರಡರ ಮಧ್ಯೆ ತಾರತಮ್ಯ ತೋರುವನೋ ಅವನು ಕೆಡುಕಿನ ಮಾರ್ಗವನ್ನು ಕೈಗೊಳ್ಳುವನು. ಅಲ್ಲಾಹನು

ನಿಮ್ಮನ್ನುದ್ದೇಶಿಸಿ ಹೇಳಿರುವನು- "ಸತ್ಯವಿಶ್ವಾಸಿಗಳೇ! ನಾವು ಕಳಿಸಿರುವ ನ್ಯಾಯಪೂರ್ಣ ವ್ಯವಸ್ಥೆಗೆ ಸಂಪೂರ್ಣ ಬದ್ಧರಾಗಿರಿ. ಎಚ್ಚರಿಕೆ! ಶೈತಾನನು ನಿಮ್ಮನ್ನು ಪ್ರವಾದಿಯ ಮರಣದ ದುಃಖದಲ್ಲಿ ಸಿಲುಕಿಸಿ ನಿಮ್ಮನ್ನು ನಿಮ್ಮ ಧರ್ಮದಿಂದ ದೂರ ಸರಿಸದಿರಲಿ. ಆದುದರಿಂದ ಶೈತಾನನನ್ನು ಸೋಲಿಸಬಲ್ಲಂತಹ ಉಪಾಯವನ್ನು ಶೀಘ್ರ ಹೂಡಿರಿ. ಅವನಿಗೆ ತನ್ನ ಕೆಲಸವನ್ನು ಮಾಡಲು ಸಮಯಾವಕಾಶ ನೀಡದಿರಿ. ಅನ್ಯಥಾ ಅವನು ನಿಮ್ಮ ಮೇಲೆ ಆಕ್ರಮಣ ನಡೆಸುವನು ಮತ್ತು ನಿಮ್ಮ ಧಾರ್ಮಿಕ ವ್ಯವಸ್ಥೆಯನ್ನು ಕೆಡಿಸಿ ಬಿಡುವನು".

ಇದುವೇ ಈ ತೌಹೀದ್‌ನ ವ್ಯವಸ್ಥೆಯ ಮಹತ್ವ ಮತ್ತು ಅದರ ನೆಲೆ, ಬೆಲೆ. ಅದನ್ನು ಮುಸ್ಲಿಮ್ ಸಮುದಾಯವು ಕ್ರಮೇಣ ಕಳೆದುಕೊಂಡಿದೆ. ಈ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸ ಬಯಸುವವರು ನಾಲ್ಕೂ ದಿಕ್ಕುಗಳಿಂದ ಆಕ್ಷೇಪ-ಟೀಕೆಗಳಿಗೆ ಗುರಿಯಾಗುತ್ತಿದ್ದಾರೆ.

ಸಂಘಟಿತ ಜೀವನ

(290) إِنَّ النَّبِيَّ صَلَّى اللهُ عَلَيْهِ وَسَلَّمَ قَالَ إِذَا كَانَ ثَلَاثَةٌ فِي سَفَرٍ فَلْيُؤَمِّرُوا أَحَدَهُمْ

(ابوداؤد — ابوسعيد خدرى رض)

ಪ್ರವಾದಿ(ಸ) ಹೇಳಿದರು: ಮೂವರು ವ್ಯಕ್ತಿಗಳು ಪ್ರಯಾಣದಲ್ಲಿದ್ದರೆ ಅವರು ತಮ್ಮಲ್ಲೊಬ್ಬನನ್ನು ತಮ್ಮ ಅಮೀರ್ (ನಾಯಕ) ಆಗಿ ಮಾಡಬೇಕು.

[ಅಬೂ ದಾವೂದ್- ವರದಿ: ಅಬೂ ಸಈದ್ ಖುದ್ರೀ(ರ)]

ಟಿಪ್ಪಣಿ: ಶೇಖುಲ್ ಇಸ್ಲಾಮ್ ಇಬ್ನು ತೈಮಿಯ್ಯಾ(ರ) ಹೇಳುತ್ತಾರೆ, "ಪ್ರಯಾಣದಲ್ಲಿರುವಾಗಲೂ ಜನರು ಸಂಘಟಿತರಾಗಬೇಕಾದುದು ಕಡ್ಡಾಯವೆಂದಿರುವಾಗ, ಮುಸ್ಲಿಮರ ಸಂಘಟಿತ ವ್ಯವಸ್ಥೆಯು ಅಸ್ತವ್ಯಸ್ತಗೊಂಡಿರುವ ಅವಸ್ಥೆಯಲ್ಲಿ ಅವರು ಒಂದು ಸಂಘಟನೆಯ ರೂಪ ತಾಳಬೇಕಾದುದು ಇನ್ನಷ್ಟು ಅಗತ್ಯವಾಗಿದೆ. ವೈಯಕ್ತಿಕ ನೆಲೆಯಲ್ಲಿ ಜೀವನ ಸಾಗಿಸುವುದು ಮುಸ್ಲಿಮರಿಗೆ ಧರ್ಮಸಮ್ಮತವಲ್ಲ."

---

(291) عَنْ عَبْدِ اللهِ بْنِ عَمْرٍو أَنَّ النَّبِيَّ صَلَّى اللهُ عَلَيْهِ وَسَلَّمَ قَالَ لَا يَحِلُّ لِثَلَاثَةٍ يَكُونُونَ بِفَلَاةٍ مِنَ الْأَرْضِ إِلَّا أَمَّرُوا عَلَيْهِمْ أَحَدَهُمْ

(المنتقى)

ಅಬ್ದುಲ್ಲಾ ಬಿನ್ ಅಮ್ರ್(ರ) ವರದಿ ಮಾಡುತ್ತಾರೆ- ಪ್ರವಾದಿ(ಸ) ಹೇಳಿದರು: ಮೂವರು ವ್ಯಕ್ತಿಗಳು ಒಂದು ಮರುಭೂಮಿಯಲ್ಲಿರುವಾಗ, ಅವರು ತಮ್ಮ ಪೈಕಿ ಒಬ್ಬನನ್ನು ತಮ್ಮ ನಾಯಕನಾಗಿ ಮಾಡದಿರುವುದು ಅವರಿಗೆ ಧರ್ಮಸಮ್ಮತವಲ್ಲ. *[ಅಲ್ ಮುನ್ತಖಾ]*

(291-[ಅ]) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ آمُرُكُمْ بِخَمْسٍ بِالْجَمَاعَةِ، وَالسَّمْعِ، وَ
الطَّاعَةِ، وَالْهِجْرَةِ، وَالْجِهَادِ (مشکوٰۃ بحوالہ ترمذی ومسند احمد ــــ حارث بن اشعری)

ಪ್ರವಾದಿ(ಸ) ಹೇಳಿದರು: ನಾನು ನಿಮಗೆ ಸಂಘಟನೆಯ, ಆಲಿಸುವ, ಅನುಸರಿಸುವ, ಹಿಜ್ರತ್‌ನ (ವಲಸೆ) ಮತ್ತು ಜಿಹಾದ್‌ನ (ಧರ್ಮಕ್ಕಾಗಿ ಹೋರಾಟ) ಐದು ಆದೇಶ ನೀಡುತ್ತೇನೆ.

[ಮಿಶ್ಕಾತ್‌ನಲ್ಲಿ ತಿರ್ಮಿದಿ ಮತ್ತು ಮುಸ್ನದ್ ಅಹ್ಮದ್‌ನಿಂದ-
ವರದಿ: ಹಾರಿಸ್ ಬಿನ್ ಅಶ್‌ಅರೀ]

ಟಿಪ್ಪಣಿ: ಪ್ರವಾದಿ(ಸ) ತಮ್ಮ ಸಮುದಾಯಕ್ಕೆ ಐದು ವಿಷಯಗಳ ಆಜ್ಞೆ ಕೊಡುತ್ತಾರೆ - (1) ಸಂಘಟಿತ ಜೀವನ ಸಾಗಿಸಬೇಕು. (2) ಸಂಘಟನೆಯ ನಾಯಕನ ಆಜ್ಞೆಗಳನ್ನು ಕೇಳಬೇಕು. (3) ನಾಯಕನನ್ನು ಅನುಸರಿಸಬೇಕು. (4) ಹಿಜ್ರತ್ ಮಾಡಬೇಕು- ಅರ್ಥಾತ್ ನಾಡು ತೊರೆಯಬೇಕೆಂದು ಧರ್ಮ ಬಯಸಿದಾಗ ದೇಶಪ್ರೇಮವನ್ನು ಬಲಿಗೊಡಬೇಕು. ಧರ್ಮದ ಹಾದಿಯಲ್ಲಿ ಬರುವ ಯಾವುದೇ ಅಡೆತಡೆಯನ್ನು ಮೆಟ್ಟಿ ನಿಲ್ಲಬೇಕು. (5) ಜಿಹಾದ್ ಅರ್ಥಾತ್ ಅಲ್ಲಾಹನು ತೋರಿಸಿದ ಮಾರ್ಗದಲ್ಲಿ ನಿಮ್ಮ ಸರ್ವಶಕ್ತಿಗಳನ್ನು ಉಪಯೋಗಿಸಿರಿ. ಧರ್ಮವನ್ನು ಜೀವಂತವಾಗಿಡಲು ಮತ್ತು ಶಕ್ತಿಶಾಲಿಯಾಗಿ ಮಾಡಲು ಎಲ್ಲ ರೀತಿಯಿಂದಲೂ ಪ್ರಯತ್ನಿಸಿರಿ. ಮಾತು, ಲೇಖನಿ ಮತ್ತು ಆಯುಧಗಳೇ ಮೊದಲಾದ ಎಲ್ಲ ಲಭ್ಯ ಸಂಪನ್ಮೂಲಗಳನ್ನು ಸಂದರ್ಭಾನುಸಾರ ಬಳಸಿಕೊಳ್ಳಿರಿ.

ಹದೀಸ್‌ನ ಮೂಲದಲ್ಲಿ 'ಅಲ್ ಜಮಾಅತ್' ಎಂಬ ಪದ ಬಳಕೆಯಾಗಿದೆ. ಅದು ಆಡಳಿತಾಧಿಕಾರವು ಸಂಪೂರ್ಣ ಇಸ್ಲಾಮಿನ ಕೈಯಲ್ಲಿದ್ದು ಎಲ್ಲ ಮುಸ್ಲಿಮರು ಒಬ್ಬ ಅಮೀರ್‌ನನ್ನು ಅಂಗೀಕರಿಸಿರುವ ವ್ಯವಸ್ಥೆಯಾಗಿದೆ. ಈ ಸ್ಥಿತಿ ಇಲ್ಲದಿದ್ದರೆ ಮುಸ್ಲಿಮರು ಏನು ಮಾಡಬೇಕೆಂಬುದು ಮಹತ್ವದ ಪ್ರಶ್ನೆ. ಅದರ ಉತ್ತರವೇನೆಂದರೆ- ಮುಸ್ಲಿಮರು ಸಂಘಟಿತ ಜೀವನ ಸಾಗಿಸಬೇಕು. ಒಂದು ಸಂಘಟನೆಗೆ ರೂಪುಕೊಟ್ಟು ಅಲ್ಲಾಹನು ಬಯಸಿದರೆ 'ಅಲ್ ಜಮಾಅತ್' ಅಸ್ತಿತ್ವಕ್ಕೆ ಬರುವ ರೀತಿಯಲ್ಲಿ ಸಂದೇಶ ಪ್ರಚಾರ ಕಾರ್ಯ ನಿರ್ವಹಿಸಬೇಕು. ಅವನ ಅನುಗ್ರಹವಿಲ್ಲದಿದ್ದರೆ ಯಾವುದೇ ಕಾರ್ಯವೂ ಸಾಧಿತವಾಗುವುದಿಲ್ಲ. ಅಲ್ಲಾಹನ ಅನುಗ್ರಹವು ಅವನೊಂದಿಗೆ ಗಾಢ ಸಂಬಂಧ ಬೆಳೆಸದೆ ಲಭ್ಯವಾಗದು.

ಧರ್ಮಕ್ಕಾಗಿ ಒಟ್ಟು ಸೇರುವವರು

(292) عَنْ عَمْرِو بْنِ عَبَسَةَ قَالَ سَمِعْتُ رَسُوْلَ اللهِ صَلَّى اللهُ عَلَيْهِ وَسَلَّمَ يَقُوْلُ عَنْ يَمِيْنِ الرَّحْمٰنِ رِجَالٌ لَيْسُوْا بِأَنْبِيَاءَ وَلَا شُهَدَاءَ يُغْشِيْ بَيَاضُ وُجُوْهِهِمْ نَظَرَ النَّاظِرِيْنَ. يَغْبِطُهُمُ الْأَنْبِيَاءُ وَالشُّهَدَاءُ بِمَقْعَدِهِمْ وَقُرْبِهِمْ مِنَ اللهِ عَزَّ وَجَلَّ قِيْلَ يَا رَسُوْلَ اللهِ مَنْ هُمْ؟ قَالَ هُمْ جُمَّاعٌ مِنْ نَوَازِعِ الْقَبَائِلِ يَجْتَمِعُوْنَ عَلٰى ذِكْرِ اللهِ فَيَنْتَقُوْنَ أَطَايِبَ الْكَلَامِ كَمَا يَنْتَقِيْ آكِلُ التَّمْرِ أَطَايِبَهٗ (المنذری بحوالہ طبرانی)

ಅಮ್ರ್ ಬಿನ್ ಅಬಸ(ರ) ಹೇಳುತ್ತಾರೆ- ಪ್ರವಾದಿ(ಸ) ಹೀಗೆ ಹೇಳುವುದನ್ನು ನಾನು ಕೇಳಿದ್ದೇನೆ: "ನಿರ್ಣಾಯಕ ದಿನದಂದು ದಯಾಮಯನಾದ ಅಲ್ಲಾಹನ ಬಲಭಾಗದಲ್ಲಿ ಕೆಲವು ವ್ಯಕ್ತಿಗಳಿರುವರು. ಅವರು ಪ್ರವಾದಿಗಳೋ ಹುತಾತ್ಮರೋ ಆಗಿರಲಾರರು. ಅವರ ಮುಖ ಕಾಂತಿಯು ನೋಡುವವರ ದೃಷ್ಟಿಯನ್ನು ಸೆಳೆಯುವುದು. ಅವರ ಸ್ಥಾನಮಾನಗಳನ್ನು ನೋಡಿ ಪ್ರವಾದಿಗಳು ಮತ್ತು ಹುತಾತ್ಮರು ಈರ್ಷ್ಯೆ ಪಡುವರು." ಆಗ ಜನರು ಕೇಳಿದರು: "ಅಲ್ಲಾಹನ ಸಂದೇಶವಾಹಕರೇ(ಸ) ಆ ಮಂದಿ ಯಾರಾಗಿರಬಹುದು?" ಪ್ರವಾದಿ(ಸ) ಹೇಳಿದರು, ಇವರು ವಿವಿಧ ಕುಲಗೋತ್ರಗಳ ಮತ್ತು ವಿವಿಧ ನಾಡುಗಳ ಜನರಾಗಿರುವರು. ಅವರು ಭೂಲೋಕದಲ್ಲಿ ಅಲ್ಲಾಹನನ್ನು ಸ್ತುತಿಸಲಿಕ್ಕಾಗಿ ಒಟ್ಟು ಸೇರುತ್ತಿದ್ದರು. ಖರ್ಜೂರ ತಿನ್ನುವವನು ಉತ್ತಮ ಮತ್ತು ಸ್ವಾದಿಷ್ಟ ಖರ್ಜೂರಗಳನ್ನು ಆರಿಸುವಂತೆ ಈ ಮಂದಿ ಅತ್ಯುತ್ತಮ ಮತ್ತು ಪಾವನ ವಚನಗಳನ್ನು ಆರಿಸುತ್ತಿದ್ದರು. *[ಅಲ್ ಮುಂದಿರೀ- ತಬ್ರಾನಿಯಿಂದ]*

ಟಿಪ್ಪಣಿ: ಈ ಹದೀಸ್‌ನಲ್ಲಿ ವಿವಿಧ ನಾಡುಗಳಲ್ಲಿ ವಿವಿಧ ಪ್ರದೇಶಗಳಲ್ಲಿ ವಾಸಿಸುವವರಿಗೆ ಅತಿದೊಡ್ಡ ಸುವಾರ್ತೆಯಿದೆ. ಅವರನ್ನು ಧರ್ಮ ಹಾಗೂ ಧರ್ಮದ ಸಂದೇಶವು ಒಂದುಗೂಡಿಸಿತ್ತು. ಅವರು ಒಟ್ಟಾಗಿ ನಮಾಝ್ ಮಾಡುತ್ತಿದ್ದರು. ಒಟ್ಟಾಗಿ ಅಲ್ಲಾಹನನ್ನು ಸ್ಮರಿಸುತ್ತಿದ್ದರು. ಕುರ್‌ಆನ್ ಓದುವುದರಲ್ಲಿಯೂ ಕಲಿಸುವುದರಲ್ಲಿಯೂ ಧರ್ಮದ ಸಂದೇಶವನ್ನು ಇತರರಿಗೆ ತಲಪಿಸುವುದರಲ್ಲಿಯೂ ಸಂಘಟಿತರಾಗಿ ನಿರತರಾಗಿರುತ್ತಿದ್ದರು.

ಈ ಹದೀಸ್‌ನಲ್ಲಿ 'ದಿಕ್ರುಲ್ಲಾ' ಎಂಬ ಪದ ಬಂದಿದೆ. ಕುರ್‌ಆನ್ ಮತ್ತು ಹದೀಸ್‌ಗಳಲ್ಲಿ ಈ ಪದವನ್ನು ಬಹಳ ವಿಶಾಲಾರ್ಥದಲ್ಲಿ ಪ್ರಯೋಗಿಸಲಾಗಿದೆ. ಇದರಲ್ಲಿ ಕುರ್‌ಆನ್, ನಮಾಝ್, ದಿಕ್ರ್-ತಸ್ಬೀಹ್‌ಗಳು ಮತ್ತಿತರ ಎಲ್ಲ ರೀತಿಯ ಸಂದೇಶ ಪ್ರಚಾರ ಚಟುವಟಿಕೆಗಳು ಒಳಗೊಂಡಿವೆ.

ನಾಯಕನ ಹೊಣೆಗಾರಿಕೆ

(293) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اَلَا كُلُّكُمْ رَاعٍ وَكُلُّكُمْ مَسْئُوْلٌ عَنْ رَعِيَّتِهٖ، فَالْاِمَامُ الَّذِىْ عَلَى النَّاسِ رَاعٍ وَهُوَ مَسْئُوْلٌ عَنْ رَعِيَّتِهٖ

(بخاریؒ ـــــ عبداللہ بن عمرؓ)

ಪ್ರವಾದಿ(ಸ) ಹೇಳಿದರು: ನಿಮ್ಮಲ್ಲಿ ಪ್ರತಿಯೊಬ್ಬನೂ ಮೇಲ್ವಿಚಾರಕನಾಗಿದ್ದಾನೆ. ಅವನ ಅಧೀನದಲ್ಲಿರುವವರ ಕುರಿತು ಅವನೊಂದಿಗೆ ಪ್ರಶ್ನಿಸಲಾಗುವುದು. ಜನರ ಮೇಲ್ವಿಚಾರಕನಾಗಿರುವ ನಾಯಕನೊಂದಿಗೆ ಅವನ ಅಧೀನದಲ್ಲಿರುವವರ ಕುರಿತು ಪ್ರಶ್ನಿಸಲಾಗುವುದು.

[ಬುಖಾರಿ- ಅಬ್ದುಲ್ಲಾ ಬಿನ್ ಉಮರ್(ರ)]

---

(294) عَنْ مَعْقِلِ بْنِ يَسَارٍ قَالَ سَمِعْتُ رَسُوْلَ اللّٰهِ صَلَّى اللّٰهُ عَلَيْهِ وَسَلَّمَ يَقُوْلُ اَيُّمَا وَالٍ وَلِيَ مِنْ اَمْرِ الْمُسْلِمِيْنَ شَيْئًا فَلَمْ يَنْصَحْ لَهُمْ وَلَمْ يَجْهَدْ لَهُمْ كَنُصْحِهٖ وَجَهْدِهٖ لِنَفْسِهٖ، كَبَّهُ اللّٰهُ عَلٰى وَجْهِهٖ فِى النَّارِ

(کتاب الخراج امام ابویوسفؒ)

ಮಅ್‌ಕಿಲ್ ಬಿನ್ ಯಸಾರ್(ರ) ಹೇಳುತ್ತಾರೆ: ಪ್ರವಾದಿ(ಸ) ಹೀಗೆ ಹೇಳುತ್ತಿರುವುದನ್ನು ನಾನು ಕೇಳಿದ್ದೇನೆ- ಒಬ್ಬನು ಮುಸ್ಲಿಮರ ಸಾಮೂಹಿಕ ವ್ಯವಹಾರಗಳ ಬಗ್ಗೆ ಯಾವುದಾದರೂ ಹೊಣೆಗಾರಿಕೆ ವಹಿಸಿದ್ದು ಅವರ ವ್ಯವಹಾರಗಳನ್ನು ಈಡೇರಿಸುವಾಗ ಅವರ ಹಿತ ಬಯಸದೆ ಸ್ವಯಂ ತನ್ನ ಹಿತ ಬಯಸುವ ರೀತಿಯಲ್ಲಿ ಹಾಗೂ ತನ್ನ ಖಾಸಗಿ ಕೆಲಸಗಳನ್ನು ಮಾಡುವ ರೀತಿಯಲ್ಲಿ ಸಂಪೂರ್ಣ ಪರಿಶ್ರಮಿಸದಿದ್ದರೆ ಅಲ್ಲಾಹನು ಅಂತಹ ಹೊಣೆಗಾರ ವ್ಯಕ್ತಿಯನ್ನು ಮುಖ ಹಿಡಿದೆಳೆದು ನರಕಕ್ಕೆ ತಳ್ಳುವನು.

[ಕಿತಾಬುಲ್ ಖಿರಾಜ್: ಇಮಾಮ್ ಅಬೂ ಯೂಸುಫ್(ರ)]

ಸಂಬಂಧಿಕರಿಗೆ ಆದ್ಯತೆ ನೀಡುವುದು

(295) عَنْ يَزِيْدَ بْنِ اَبِيْ سُفْيَانَ قَالَ، قَالَ اَبُوْبَكْرٍ حِيْنَ بَعَثَنِيْ اِلَى الشَّامِ، يَا يَزِيْدُ اِنَّ لَكَ قَرَابَةً عَسَيْتَ اَنْ تُؤْثِرَهُمْ بِالْاِمَارَةِ، وَذٰلِكَ اَكْبَرُ مَا اَخَافُ عَلَيْكَ، فَاِنَّ رَسُوْلَ اللّٰهِ صَلَّى اللّٰهُ عَلَيْهِ وَسَلَّمَ قَالَ مَنْ وَلِيَ مِنْ اَمْرِ الْمُسْلِمِيْنَ شَيْئًا فَاَمَّرَ عَلَيْهِمْ اَحَدًا مُحَابَاةً فَعَلَيْهِ لَعْنَةُ اللّٰهِ لَا يَقْبَلُ اللّٰهُ مِنْهُ صَرْفًا وَلَا عَدْلًا حَتّٰى يُدْخِلَهُ جَهَنَّمَ (كتاب الخراج امام ابويوسفؒ)

ಯಝೀದ್ ಬಿನ್ ಅಬೂ ಸುಫ್ಯಾನ್(ರ) ಹೇಳುತ್ತಾರೆ- ಹ. ಅಬೂಬಕರ್(ರ) ನನ್ನನ್ನು ಸೇನಾಧಿಪತಿಯಾಗಿ ಸಿರಿಯಾದ ಕಡೆಗೆ ರವಾನಿಸುವಾಗ ನನಗೆ ಹೀಗೆ ಉಪದೇಶಿಸಿದರು- ಓ ಯಝೀದ್! ನಿಮ್ಮ ಕೆಲವು ಸಂಬಂಧಿಕರಿದ್ದಾರೆ, ನೀವು ಏನಾದರೂ ಹೊಣೆಗಾರಿಕೆ ವಹಿಸಿ ಕೊಡುವಾಗ ಇತರರಿಗಿಂತ ಅವರಿಗೆ ಆದ್ಯತೆ ನೀಡುವಿರೋ ಎಂದು ನನಗೆ ಭಯವಾಗುತ್ತಿದೆ. ಕೇಳಿರಿ! ಪ್ರವಾದಿ(ಸ) ಹೇಳಿದ್ದಾರೆ- ಯಾರಾದರೂ ಮುಸ್ಲಿಮರ ಸಾಮೂಹಿಕ ವ್ಯವಹಾರಗಳ ಹೊಣೆಗಾರನಾಗಿದ್ದು ಅವನು ಕೇವಲ ತನ್ನ ಸಂಬಂಧಿಕರು ಅಥವಾ ಸ್ನೇಹಿತರೆಂಬ ಕಾರಣಕ್ಕಾಗಿ ಯಾರನ್ನಾದರೂ ಮುಸ್ಲಿಮರ ಅಧಿಕಾರಿಯಾಗಿ ನೇಮಿಸಿದರೆ ಅವನ ಮೇಲೆ ಅಲ್ಲಾಹನ ಶಾಪವಿರುವುದು. ಅವನಿಂದ ಯಾವುದೇ ಪರಿಹಾರ ಸ್ವೀಕರಿಸಲಾಗದು. ಕೊನೆಗೆ ಅವನನ್ನು ನರಕಕ್ಕೆ ಹಾಕಲಾಗುವುದು.

[ಕಿತಾಬುಲ್ ಖಿರಾಜ್ - ಇಮಾಮ್ ಅಬೂ ಯೂಸುಫ್(ರ)-]

ನಾಯಕನ ತ್ಯಾಗ

(296) قَالَتْ اَسْمَاءُ بِنْتُ عُمَيْسٍ اِنَّ اَبَا بَكْرٍ قَالَ لِعُمَرَ بْنِ الْخَطَّابِ اِنِّيْ اِنَّمَا اسْتَخْلَفْتُكَ نَظَرًا لِمَا خَلَّفْتُ وَرَائِيْ، وَقَدْ صَحِبْتَ رَسُوْلَ اللّٰهِ صَلَّى اللّٰهُ عَلَيْهِ وَسَلَّمَ فَرَاَيْتَ مِنْ اَثَرَتِهِ اَنْفُسَنَا عَلٰى نَفْسِهِ وَاَهْلَنَا عَلٰى اَهْلِهِ، حَتّٰى اِنْ كُنَّا لَنَظَلُّ نُهْدِيْ اِلٰى اَهْلِهِ مِنْ فُضُوْلِ مَا يَاْتِيْنَا عَنْهُ (كتاب الخراج امام ابويوسفؒ)

ಅಸ್ಮಾ ಬಿಂತ್ ಉಮೈಸ್(ರ) ಹೇಳುತ್ತಾರೆ- ಹ.ಅಬೂಬಕರ್(ರ) ಅವರು ಹ. ಉಮರ್‌ರನ್ನುದ್ದೇಶಿಸಿ(ರ) ಹೀಗೆಂದರು- "ಓ ಉಮರ್(ರ)! ನಾನು ಪ್ರಜೆಗಳ ಮೇಲಿನ ಕಾರುಣ್ಯದ ದೃಷ್ಟಿಯಿಂದ ನಿಮ್ಮನ್ನು ಖಲೀಫಾ ಆಗಿ ಆರಿಸಿರುವೆನು. ನೀವು ಪ್ರವಾದಿವರ್ಯರ(ಸ) ಒಡನಾಟದಲ್ಲಿದ್ದಿರಿ. ಪ್ರವಾದಿ(ಸ) ನಮಗೆ ಮತ್ತು ನಮ್ಮ ಮನೆಯವರಿಗೆ ತಮ್ಮ ಮತ್ತು ತಮ್ಮ ಮನೆಯವರಿಗಿಂತ ಎಷ್ಟು ಆದ್ಯತೆ ನೀಡುತ್ತಿದ್ದರೆಂದರೆ ಅವರು ನಮಗೆ ನೀಡುತ್ತಿದ್ದ ವಸ್ತುಗಳು ನಮ್ಮ ಅಗತ್ಯಕ್ಕಿಂತಲೂ ಹೆಚ್ಚಾಗಿ ನಾವು ಅದನ್ನು ಪ್ರವಾದಿಯವರ(ಸ) ಮನೆಗೆ ಉಡುಗೊರೆಯಾಗಿ ಕಳುಹಿಸಿ ಕೊಡುತ್ತಿದ್ದೆವು ಎಂಬುದನ್ನು ನೀವು ನೋಡಿರಬಹುದು.

[ಕಿತಾಬುಲ್ ಖಿರಾಜ್: ಇಮಾಮ್ ಅಬೂ ಯೂಸುಫ್(ರ)]

ಸಹನಶೀಲ ನಾಯಕ

(297) خَطَبَ عُمَرُ بْنُ الْخَطَّابِ رض فَقَالَ اَيُّهَا النَّاسُ اِنَّ لَنَا عَلَيْكُمْ حَقَّ النَّصِيْحَةِ بِالْغَيْبِ وَالْمَعُوْنَةِ عَلَى الْخَيْرِ، اَيُّهَا الرُّعَاءُ اِنَّهُ لَيْسَ مِنْ حِلْمٍ اَحَبَّ اِلَى اللّٰهِ وَلَا اَعَمَّ نَفْعًا مِنْ حِلْمِ اِمَامٍ وَرِفْقِهٖ، وَلَيْسَ مِنْ جَهْلٍ اَبْغَضَ اِلَى اللّٰهِ وَاَعَمَّ ضَرَرًا مِنْ جَهْلِ اِمَامٍ وَخُرْقِهٖ

(كتاب الخراج امام ابو يوسفؒ)

ಮುಸ್ಲಿಮರ ನಾಯಕ ಹ. ಉಮರ್ ಬಿನ್ ಖತ್ತಾಬ್(ರ) (ಜನಸಾಮಾನ್ಯರೂ ಸರಕಾರಿ ಅಧಿಕಾರಿಗಳೂ ಇದ್ದಂತಹ ಸಭೆಯೊಂದನ್ನುದ್ದೇಶಿಸಿ) ಭಾಷಣ ಮಾಡುತ್ತಾ ಹೀಗೆಂದರು- "ಜನರೇ! ನಮ್ಮ ಬೆನ್ನ ಹಿಂದೆ ನಮ್ಮೊಂದಿಗೆ ಹಿತಚಿಂತನೆ ಮಾಡುವುದು ಮತ್ತು ಒಳಿತಿನ ಕಾರ್ಯಗಳಲ್ಲಿ ನಮಗೆ ನೆರವಾಗುವುದು ನಿಮ್ಮ ಮೇಲೆ ಹಕ್ಕಾಗಿದೆ. (ತರುವಾಯ) ಓ ಸರಕಾರಿ ಅಧಿಕಾರಿಗಳೇ! ಅಧಿಕಾರಿಯ ಸಹನೆ ಮತ್ತು ಮೃದುನೀತಿಗಿಂತ ಪ್ರಯೋಜನಕಾರಿ ಹಾಗೂ ಪ್ರಿಯವಾದ ಸಹನೆ ಮತ್ತು ಮೃದುತ್ವ ಬೇರೆ ಇಲ್ಲ. ಅದೇ ರೀತಿ ನಾಯಕನ ಆವೇಶ ಮತ್ತು ದುಡುಕಿನ ಕ್ರಮಕ್ಕಿಂತ ಹಾನಿಕಾರಕ ಹಾಗೂ ಅಲ್ಲಾಹನಿಗೆ ಇಷ್ಟವಿಲ್ಲದ ಆವೇಶ ಮತ್ತು ಅವ್ಯವಸ್ಥೆ ಬೇರೆ ಇಲ್ಲ. *[ಕಿತಾಬುಲ್ ಖಿರಾಜ್- ಇಮಾಮ್ ಅಬೂ ಯೂಸುಫ್(ರ)]*

ಅನುಯಾಯಿಗಳ ಹೊಣೆಗಾರಿಕೆ

(298) قَالَ رَسُوْلُ اللهِ صَلَّى اللهُ عَلَيْهِ وَسَلَّمَ اَلسَّمْعُ وَالطَّاعَةُ عَلَى الْمَرْءِ الْمُسْلِمِ فِيْمَا اَحَبَّ وَكَرِهَ مَا لَمْ يُؤْمَرْ بِمَعْصِيَةٍ، فَاِذَا اُمِرَ بِمَعْصِيَةٍ فَلَا سَمْعَ وَلَا طَاعَةَ

(بخاری ومسلم ــــ عبداللہ بن عمرؓ)

ಪ್ರವಾದಿ(ಸ) ಹೇಳಿದರು: "ಸಂಘಟನೆಯ ನಾಯಕನ ಮಾತನ್ನು ಆಲಿಸುವುದು ಮತ್ತು ಅದನ್ನು ಅನುಸರಿಸುವುದು ಮುಸ್ಲಿಮರ ಕರ್ತವ್ಯವಾಗಿದೆ. ಆಜ್ಞೆಯು ಅವನ ಮನಸ್ಸಿಗೆ ಹಿಡಿಸಲಿ, ಹಿಡಿಸದಿರಲಿ. ಆದರೆ ಅದು ಪಾಪಕಾರ್ಯಗಳ ಆಜ್ಞೆಯಾಗಿರಬಾರದು. ಒಂದು ವೇಳೆ ಅವನು ಶರೀಅತ್‌ಗೆ ವಿರುದ್ಧವಾದ ಆಜ್ಞೆಕೊಟ್ಟರೆ ಅದನ್ನು ಕೇಳಲೂ ಬಾರದು, ಅನುಸರಿಸಲೂ ಬಾರದು. *[ಬುಖಾರಿ, ಮುಸ್ಲಿಮ್- ವರದಿ: ಅಬ್ದುಲ್ಲಾ ಬಿನ್ ಉಮರ್(ರ)]*

---

(299) عَنْ تَمِيْمِ نِ الدَّارِيِّ اَنَّ النَّبِيَّ صَلَّى اللهُ عَلَيْهِ وَسَلَّمَ قَالَ اَلدِّيْنُ النَّصِيْحَةُ ثَلَاثًا، قُلْنَا لِمَنْ؟ قَالَ لِلّٰهِ وَلِرَسُوْلِهٖ وَلِكِتَابِهٖ وَلِاَئِمَّةِ الْمُسْلِمِيْنَ وَعَامَّتِهِمْ (مسلم)

ತಮೀಮ್ ದಾರೀ(ರ) ವರದಿ ಮಾಡುತ್ತಾರೆ: ಪ್ರವಾದಿ(ಸ) ಹೇಳಿದರು- ನಿಷ್ಠೆ ಮತ್ತು ಹಿತಚಿಂತನೆಯೇ ಧರ್ಮ. ಈ ಮಾತನ್ನು ಪ್ರವಾದಿ(ಸ) ಮೂರು ಸಲ ಪುನರಾವರ್ತಿಸಿದರು. ನಾವು ಕೇಳಿದೆವು- ಯಾರೊಂದಿಗೆ ನಿಷ್ಠೆ ಮತ್ತು ಹಿತಚಿಂತನೆ? ಪ್ರವಾದಿ(ಸ) ಹೇಳಿದರು- ಅಲ್ಲಾಹನೊಂದಿಗೆ, ಆತನ ಸಂದೇಶವಾಹಕನೊಂದಿಗೆ, ಆತನ ಗ್ರಂಥದೊಂದಿಗೆ, ಮುಸ್ಲಿಮರ ರಾಜಕೀಯ ವ್ಯವಸ್ಥೆಯ ನಾಯಕತ್ವವನ್ನು ವಹಿಸಿದವರೊಂದಿಗೆ ಹಾಗೂ ಮುಸ್ಲಿಮ್ ಜನಸಾಮಾನ್ಯರೊಂದಿಗೆ. *[ಮುಸ್ಲಿಮ್]*

ಟಿಪ್ಪಣಿ: ಮೂಲದಲ್ಲಿ ಬಂದಿರುವ 'ನಸೀಹಃ' ಎಂಬ ಪದವನ್ನು ಅರಬಿ ಭಾಷೆಯಲ್ಲಿ ವಂಚನೆ, ಅಪ್ರಾಮಾಣಿಕತೆ, ಮೋಸ ಮತ್ತು ಕಲಬೆರಕೆಯ ವಿರುದ್ಧಾರ್ಥದಲ್ಲಿ ಬಳಸಲಾಗುತ್ತದೆ. ಅದರ ಅರ್ಥ, ಪ್ರಾಮಾಣಿಕ, ನಿಷ್ಠೆ ಮತ್ತು ಹಿತಚಿಂತನೆ ಎಂದಾಗುತ್ತದೆ.

ಅಲ್ಲಾಹನೊಂದಿಗೆ ಪ್ರಾಮಾಣಿಕ ನಿಷ್ಠೆಯೆಂದರೇನೆಂಬುದನ್ನು 'ಅಲ್ಲಾಹನ ಮೇಲೆ ವಿಶ್ವಾಸ' ಎಂಬ ಶೀರ್ಷಿಕೆಯಲ್ಲಿ ನಾವು ಈ ಮುಂಚೆ ಸ್ಪಷ್ಟಪಡಿಸಿದ್ದೇವೆ. ಅದೇ ರೀತಿಯಲ್ಲಿ ಅಲ್ಲಾಹನ ಗ್ರಂಥ ಮತ್ತು ಸಂದೇಶವಾಹಕರೊಂದಿಗೆ ಪ್ರಾಮಾಣಿಕ ನಿಷ್ಠೆಯ ಕುರಿತೂ ಕುರ್‌ಆನ್ ಮತ್ತು ಪ್ರವಾದಿ ವರ್ಯರ(ಸ) ಮೇಲೆ ವಿಶ್ವಾಸ ಎಂಬ ಶೀರ್ಷಿಕೆಯಡಿಯಲ್ಲಿ ಬಂದಿದೆ. ಮುಸ್ಲಿಮ್ ಜನಸಾಮಾನ್ಯ ರೊಂದಿಗೆ ಹಿತಚಿಂತನೆಯ ತಾತ್ಪರ್ಯವನ್ನು 'ಮುಸ್ಲಿಮರ ಹಕ್ಕುಗಳು' ಎಂಬ ಶೀರ್ಷಿಕೆಯಡಿಯಲ್ಲಿ

ನೋಡಿರಿ. ಇನ್ನು ಮುಸ್ಲಿಮರ ರಾಜಕೀಯ ವ್ಯವಸ್ಥೆಯ ನಾಯಕರೊಂದಿಗೆ ಹಿತಚಿಂತನೆಯ ವಿಷಯ- ಅದರ ತಾತ್ಪರ್ಯವೇನೆಂದರೆ ಆ ನಾಯಕರೊಂದಿಗೆ ಪ್ರೀತಿಪೂರ್ವಕ ಸಂಬಂಧವಿರಬೇಕು. ಅವರು ಅಪ್ಪಣೆ ಕೊಟ್ಟರೆ ಅದನ್ನು ನಿಷ್ಠೆಯಿಂದ ಪಾಲಿಸಬೇಕು. ಸಂದೇಶ ಪ್ರಚಾರ ಮತ್ತು ಸಂಘಟನಾತ್ಮಕ ಕಾರ್ಯಗಳಲ್ಲಿ ಅವರಿಗೆ ಮನಸಾರೆ ನೆರವಾಗಬೇಕು. ಅವರು, ನಿಮ್ಮ ದೃಷ್ಟಿಯಲ್ಲಿ ಯಾವುದಾದರೂ ತಪ್ಪು ಹಾದಿ ತುಳಿಯುವ ಸಂದರ್ಭದಲ್ಲಿ ಅವರ ಮನಸ್ಸಿಗೆ ನೋವಾಗದಂತೆ ಅವರನ್ನು ತಡೆಯಬೇಕು. ಇಂತಹ ಸಂದರ್ಭದಲ್ಲಿ ಯಾರೂ ತಡೆಯದಿದ್ದರೆ ಅದು ಸಾಮೂಹಿಕ ವಂಚನೆಯೆನಿಸುವುದು. ಅವರು ತಮ್ಮ ನಾಯಕನ ಹಿತಚಿಂತಕರಾಗಲಾರರು. ಆದರೆ ಇದು ನಾಯಕರು ಪ್ರಾಮಾಣಿಕ ಟೀಕೆ-ವಿಮರ್ಶೆಗಳನ್ನು ಸಹಿಸುವಾಗ ಮಾತ್ರ ಸಾಧ್ಯ. ಅವರು ಅದನ್ನು ಸಹಿಸುವುದು ಮಾತ್ರವಲ್ಲ, ತಮ್ಮ ನಾಯಕನು ತಪ್ಪು ಮಾಡಿದಾಗ ಅನುಯಾಯಿಗಳು ಟೀಕಿಸುವುದನ್ನು ಇಷ್ಟ ಪಡುತ್ತಾನೆ ಎಂಬ ಭಾವನೆ ಜನರಲ್ಲಿ ಮೂಡಿಸಬೇಕು. ಆದರೆ ಅದನ್ನು ಸಾಧ್ಯವಿದ್ದಷ್ಟು ಏಕಾಂತದಲ್ಲಿ ಮಾಡಬೇಕು. ಬಾಯಿಗೆ ಬಂದಂತೆ ಎಲ್ಲರ ಮುಂದೆ ಟೀಕಿಸುವುದು ಸರಿಯಲ್ಲ. ಈ ವಿಷಯವನ್ನು ಸ್ಪಷ್ಟಪಡಿಸುವಂತಹ ಹ. ಉಮರ್‌ರ(ರ) ಎರಡು ಐತಿಹಾಸಿಕ ಉದಾಹರಣೆಗಳನ್ನು ಇಲ್ಲಿ ಕೊಡುತ್ತಿದ್ದೇವೆ. ಮೊದಲನೆಯದು, ಹ. ಉಮರ್‌ರನ್ನು(ರ) ಯಾರೋ ಒಂದು ಸಭೆಯಲ್ಲಿ ಟೀಕಿಸಿದಾಗ ಅವನನ್ನು ಇನ್ನೊಬ್ಬನು ತಡೆಯಲು ಅಥವಾ ಸುಮ್ಮನಿರಲು ಸೂಚಿಸಿದನು. ಆಗ ಹ. ಉಮರ್(ರ) ಹೀಗೆಂದರು- "ಅವನನ್ನು ಹೇಳಲು ಬಿಡಿರಿ. ಜನರು ನಮ್ಮೊಂದಿಗೆ ಈ ರೀತಿಯಲ್ಲಿ ಮಾತನಾಡದಿದ್ದರೆ ಅವರಲ್ಲಿ ಏನೂ ಒಳಿತಿರಲಾರದು. ಅದೇ ರೀತಿ ನಾವು ಇಂತಹ ಹಿತಚಿಂತನೆಯನ್ನು ಸ್ವೀಕರಿಸದಿದ್ದರೆ ನಮ್ಮಲ್ಲೂ ಒಳಿತಿರಲಾರದು."

[ಕಿತಾಬುಲ್ ಖಿರಾಜ್ ಇಮಾಮ್ ಅಬೂ ಯೂಸುಫ್(ರ)]

ಎರಡನೆಯ ಉದಾಹರಣೆ: ಹ. ಉಮರ್(ರ) ಖಲೀಫರಾದ ನಂತರ ಹ. ಅಬೂ ಉಬೈದ ಮತ್ತು ಮುಆದ್ ಬಿನ್ ಜಬಲ್(ರ) ಜಂಟಿಯಾಗಿ ಒಂದು ಪತ್ರ ಬರೆದರು. ಆ ಪತ್ರದ ಪ್ರತಿಯೊಂದು ಪದದಲ್ಲೂ ಹಿತಚಿಂತನೆ ಸ್ಫುರಿಸುತ್ತಿತ್ತು. ಅದಕ್ಕೆ ಉತ್ತರವಾಗಿ ಹ. ಉಮರ್(ರ) ಬರೆದ ಪತ್ರದಿಂದ ಓರ್ವ ನಾಯಕನು ಹೇಗಿರಬೇಕು ಎಂಬುದೂ ವ್ಯಕ್ತವಾಗುತ್ತದೆ-

ಅಬೂ ಉಬೈದ ಬಿನ್ ಜರ್‍ರಾಹ್ ಮತ್ತು ಮುಆದ್ ಬಿನ್ ಜಬಲ್‌ರ ವತಿಯಿಂದ ಅಮೀರುಲ್ ಮುಅ್‌ಮಿನೀನ್ ಉಮರ್ ಬಿನ್ ಖತ್ತಾಬ್(ರ) ಅವರಿಗೆ ಬರೆದ ಪತ್ರ:

"ತಮ್ಮ ಮೇಲೆ ಅಲ್ಲಾಹನ ರಕ್ಷಣೆಯಿರಲಿ. ತಾವು ತಮ್ಮ ವೈಯಕ್ತಿಕ ಸುಧಾರಣೆ ಮತ್ತು ತರಬೇತಿಯ ಬಗ್ಗೆ ಗಮನ ಹರಿಸುತ್ತಿದ್ದುದನ್ನು ನಾವು ಕಂಡಿದ್ದೇವೆ. ಈಗಂತೂ ತಮ್ಮ ಮೇಲೆ ಇಡೀ ಸಮುದಾಯದ ತರಬೇತಿ ಮತ್ತು ಮೇಲ್ನೋಟದ ಜವಾಬ್ದಾರಿ ಬಿದ್ದಿದೆ. ಅಮೀರುಲ್ ಮುಅ್‌ಮಿನೀನ್! ತಮ್ಮ ಸಭೆಗಳಲ್ಲಿ ಉನ್ನತ ವ್ಯಕ್ತಿಗಳೂ ಇರುವರು, ಕೆಳದರ್ಜೆಯ ಜನರೂ ಇರುವರು. ತಮ್ಮ ಬಳಿಗೆ ವೈರಿಗಳೂ ಬರುವರು, ಸ್ನೇಹಿತರೂ ಬರುವರು. ನ್ಯಾಯದಲ್ಲಿ ಪ್ರತಿಯೊಬ್ಬರಿಗೂ ಪಾಲಿದೆ. ಆಗ ತಾವು ಯಾವ ಧೋರಣೆ ಕೈಗೊಳ್ಳುವಿರೆಂಬ ಬಗ್ಗೆ ಆಲೋಚಿಸಬೇಕಾಗಿದೆ. ನಾವು ತಮ್ಮನ್ನು ಆ ಭಯಾನಕ ದಿನದ ಬಗ್ಗೆ ಎಚ್ಚರಿಸುತ್ತಿದ್ದೇವೆ. ಅಂದು ಪ್ರತಾಪಶಾಲಿಯಾದ ಅಲ್ಲಾಹನ ಮುಂದೆ ಜನರು ಶಿರಬಾಗಿ ನಿಲ್ಲುವರು. ಹೃದಯಗಳು ಭಯದಿಂದ ಕಂಪಿಸುತ್ತಿರುವುವು. ಪ್ರತಾಪಿಯೂ ಪ್ರಬಲನೂ ಆದ ಅಲ್ಲಾಹನ ಮುಂದೆ ಯಾರ ನೆಪಗಳೂ ನಡೆಯಲಾರವು. ಅಂದು ಎಲ್ಲರೂ ಸಂಪೂರ್ಣ ಅಸಹಾಯಕರಾಗಿರುವರು. ಜನರು ಅವನ ಕರುಣೆಯನ್ನು ನಿರೀಕ್ಷಿಸುತ್ತಲೂ ಅವನ ಯಾತನೆಯ ಬಗ್ಗೆ ಹೆದರುತ್ತಲೂ ಇರುವರು.

'ಈ ಸಮುದಾಯದ ಜನರು ಕೊನೆಯ ಕಾಲದಲ್ಲಿ ಬಾಹ್ಯನೋಟಕ್ಕೆ ಪರಸ್ಪರ ಮಿತ್ರರಂತಿರುವರು. ಆದರೆ ವಾಸ್ತವದಲ್ಲಿ ಅವರು ಪರಸ್ಪರ ಶತ್ರುಗಳಾಗಿರುವರು' ಎಂಬ ಪ್ರವಾದಿ ವಚನವನ್ನು ನಾವು

ಕೇಳಿದ್ದೇವೆ. ತಾವು ಈ ಪತ್ರಕ್ಕೆ ಸಲ್ಲಬೇಕಾದಂತಹ ಸ್ಥಾನವನ್ನು ಕೊಡದಿರಬಹುದು. ಆ ಬಗ್ಗೆ ನಾವು ಅಲ್ಲಾಹನ ಅಭಯ ಯಾಚಿಸುತ್ತೇವೆ. ನಾವು ಈ ಪತ್ರವನ್ನು ಹಿತಚಿಂತನೆ ಮತ್ತು ಪ್ರಾಮಾಣಿಕ ಭಾವನೆಗಳೊಂದಿಗೆ ಬರೆದಿದ್ದೇವೆ. ತಮ್ಮ ಮೇಲೆ ಶಾಂತಿಯಿರಲಿ."

ಈ ಪತ್ರವು ಅಮೀರುಲ್ ಮುಅ್‌ಮಿನೀನ್‌ರಿಗೆ ಮುಟ್ಟಿದಾಗ ಅವರು ಹೀಗೆ ಬರೆದರು:

ಉಮರ್ ಬಿನ್ ಖತ್ತಾಬ್‌ನ ವತಿಯಿಂದ ಅಬೂ ಉಬೈದ ಮತ್ತು ಮುಆದ್‌ರಿಗೆ!

ನಿಮ್ಮಿಬ್ಬರ ಮೇಲೂ ಅಲ್ಲಾಹನ ರಕ್ಷಣೆಯಿರಲಿ. ನಿಮ್ಮ ಜಂಟಿ ಪತ್ರ ಸಿಕ್ಕಿತು. ಈ ಮುಂಚೆ ನಾನು ನನ್ನ ವೈಯಕ್ತಿಕ ಸುಧಾರಣೆಯತ್ತ ಗಮನ ಹರಿಸುತ್ತಿದ್ದೆ; ಆದರೆ ಈಗ ನನ್ನ ತಲೆಯ ಮೇಲೆ ಇಡೀ ಸಮುದಾಯದ ಮೇಲ್ವಿಚಾರಣೆ ಮತ್ತು ರಕ್ಷಣೆಯ ಹೊಣೆಗಾರಿಕೆ ಬಂದು ಬಿದ್ದಿದೆ. ನನ್ನ ಮುಂದೆ ಉನ್ನತ ವ್ಯಕ್ತಿಗಳೂ ಕುಳಿತುಕೊಳ್ಳುವರು, ಕೆಳದರ್ಜೆಯವರೂ ಕುಳಿತುಕೊಳ್ಳುವರು, ಮಿತ್ರರೂ ನನ್ನ ಬಳಿ ಬರುವರು, ಶತ್ರುಗಳೂ ಬರುವರು. ಪ್ರತಿಯೊಬ್ಬರೊಂದಿಗೂ ನ್ಯಾಯದಿಂದ ವರ್ತಿಸಬೇಕಾದುದು ಅವರ ಹಕ್ಕಾಗಿದೆ ಎಂದು ಮುಂತಾಗಿ ಪತ್ರದಲ್ಲಿ ಬರೆದಿರುವಿರಿ. ಅನಂತರ, ಓ ಉಮರ್! ಇಂತಹ ಪರಿಸ್ಥಿತಿಯಲ್ಲಿ ನೀವೇನು ಮಾಡುವಿರಿ ಎಂದೂ ಪ್ರಶ್ನಿಸಿದ್ದೀರಿ. ಅದಕ್ಕೆ ಉತ್ತರವಾಗಿ ನಾನೇನು ಹೇಳಲಿ- ಉಮರ್‌ನ ಬಳಿ ಶಕ್ತಿಯೂ ಇಲ್ಲ, ತಂತ್ರವೂ ಇಲ್ಲ. ಅವನಿಗೆ ಶಕ್ತಿ ಸಿಗುವುದಾದರೆ ಅದು ಅಲ್ಲಾಹನ ವತಿಯಿಂದಲೇ ಸಿಗಬೇಕು. ಇನ್ನು ನೀವಿಬ್ಬರೂ ನಮಗಿಂತ ಮುಂಚಿನವರು ಹೆದರಿಸಲ್ಪಟ್ಟ ಆ ಅಂತಿಮ ಪರಿಣಾಮದ ಬಗ್ಗೆ ಎಚ್ಚರಿಸಿದ್ದೀರಿ. ಈ ದಿನರಾತ್ರಿಗಳಿಗೆ ನಿರಂತರ ನಮ್ಮ ಜೀವನದೊಂದಿಗೆ ನಿಕಟ ಸಂಬಂಧವಿದೆ. ದೂರವಿರುವುದನ್ನು ಅದು ಹತ್ತಿರಗೊಳಿಸುತ್ತಿದೆ. ಪ್ರತಿಯೊಂದು ಹೊಸತನ್ನು ಹಳತಾಗಿಸುತ್ತಿದೆ. ಅದು ಪ್ರತಿಯೊಂದು ವಾಗ್ದಾನವನ್ನು ತರುತ್ತಿದೆ. ಎಲ್ಲಿಯವರೆಗೆಂದರೆ ಜಗತ್ತಿನ ಆಯುಷ್ಯ ಮುಗಿದು ಪರಲೋಕ ಬರುವುದು. ಅಲ್ಲಿ ಪ್ರತಿಯೊಬ್ಬನೂ ಸ್ವರ್ಗ ಅಥವಾ ನರಕಕ್ಕೆ ಹೋಗುವನು.

ಅನಂತರ ನೀವು, ಈ ಸಮುದಾಯದ ಜನರು ಕೊನೆಯ ಕಾಲದಲ್ಲಿ ಬಾಹ್ಯವಾಗಿ ಪರಸ್ಪರ ಮಿತ್ರರೂ ಆಂತರಿಕವಾಗಿ ಪರಸ್ಪರ ಶತ್ರುಗಳೂ ಆಗಿರುವರೆಂಬ ಹದೀಸ್ ಉಲ್ಲೇಖಿಸಿದ್ದೀರಿ. ನೆನಪಿಡಿರಿ, ಯಾರ ಬಗ್ಗೆ ಈ ಸುದ್ದಿ ನೀಡಲಾಗಿದೆಯೋ ಅದು ನಿಮ್ಮ ಕುರಿತಲ್ಲ. ಈ ಕಾಪಟ್ಯ ಪ್ರತ್ಯಕ್ಷವಾಗುವ ಕಾಲ ಇದಲ್ಲ. ಅದು ಜನರು ತಮ್ಮ ಲೌಕಿಕ ಸ್ವಾರ್ಥ ಲಾಭಕ್ಕಾಗಿ ಪರಸ್ಪರ ಪ್ರೀತಿಸುವ ಮತ್ತು ಸ್ವಾರ್ಥಲಾಭವನ್ನು ರಕ್ಷಿಸುವ ಸಲುವಾಗಿ ಪರಸ್ಪರರಿಂದ ಹೆದರುವ ಕಾಲವಾಗಿರುವುದು.

ಕೊನೆಯಲ್ಲಿ, ನಾನು ನಿಮ್ಮ ಪತ್ರದಿಂದ ಯಾವುದಾದರೂ ತಪ್ಪು ಪ್ರಭಾವಕ್ಕೊಳಗಾಗುತ್ತೇನೋ ಎಂಬ ಬಗ್ಗೆ ಅಲ್ಲಾಹನ ಅಭಯ ಯಾಚಿಸುವುದಾಗಿ ಬರೆದಿದ್ದೀರಿ. ನಿಸ್ಸಂದೇಹ, ನೀವು ಸತ್ಯ ಹೇಳುತ್ತಿದ್ದೀರಿ. ನೀವು ಹಿತಚಿಂತನೆ ಮತ್ತು ಪ್ರಾಮಾಣಿಕತೆಯ ಭಾವನೆಯೊಂದಿಗೆ ಪತ್ರ ಬರೆದಿದ್ದೀರಿ. ಮುಂದೆಯೂ ನೀವು ಪತ್ರ ಬರೆಯುವುದನ್ನು ನಿಲ್ಲಿಸಬಾರದು. ನಿಮ್ಮಿಬ್ಬರ ಸಲಹೆಗಳಿಂದ ನಾನೆಂದೂ ನಿರಪೇಕ್ಷನಾಗಿರಲಾರೆ. ನಿಮ್ಮ ಮೇಲೆ ಶಾಂತಿಯಿರಲಿ.

ಬೋಧನೆಯ ಪ್ರಮುಖ ತತ್ವ

(300) كَانَ عَبْدُ اللّٰهِ بْنُ مَسْعُوْدٍ يُذَكِّرُ النَّاسَ فِيْ كُلِّ خَمِيْسٍ، فَقَالَ لَهُ رَجُلٌ يَا اَبَا عَبْدِ الرَّحْمٰنِ لَوَدِدْتُ اَنَّكَ ذَكَّرْتَنَا كُلَّ يَوْمٍ، فَقَالَ اَمَا اِنَّهُ يَمْنَعُنِيْ مِنْ ذٰلِكَ اَنِّيْ اَكْرَهُ اَنْ اُمِلَّكُمْ، وَاِنِّيْ اَتَخَوَّلُكُمْ بِالْمَوْعِظَةِ كَمَا كَانَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ يَتَخَوَّلُنَا بِهَا مَخَافَةَ السَّاٰمَةِ عَلَيْنَا (بخاری ومسلم)

ಹ. ಅಬ್ದುಲ್ಲಾ ಬಿನ್ ಮಸ್‌ಊದ್(ರ) ಪ್ರತಿ ಗುರುವಾರ ಜನರಿಗೆ ಉಪನ್ಯಾಸ ನೀಡುತ್ತಿದ್ದರು. ಒಮ್ಮೆ ಒಬ್ಬರು ಅವರೊಂದಿಗೆ, "ಓ ಅಬೂ ಅಬ್ದುರ್ರಹ್ಮಾನ್! ತಾವು ಪ್ರತಿದಿನ ಉಪನ್ಯಾಸ ನೀಡಿರಿ ಎಂದು ನಾನು ಬಯಸುತ್ತೇನೆ" ಎಂದರು. ಆಗ ಅವರು ಹೇಳಿದರು- ಪ್ರತಿದಿನ ಉಪನ್ಯಾಸ ನೀಡಿದರೆ ನಿಮಗೆ ಅದು ಅರೋಚಕಕವಾದೀತು ಎಂಬ ಭಯ ನನಗಿದೆ. ಆದುದರಿಂದ ನಾನು ಬಿಟ್ಟು ಬಿಟ್ಟು ಬೋಧಿಸುತ್ತೇನೆ. ಯಾಕೆಂದರೆ ಪ್ರವಾದಿ(ಸ) ಕೂಡಾ ನಮಗೆ ಅರೋಚಕವಾಗದಿರಲೆಂದು ದಿನ ಬಿಟ್ಟು ದಿನ ಉಪದೇಶ ನೀಡುತ್ತಿದ್ದರು. *[ಬುಖಾರಿ, ಮುಸ್ಲಿಮ್]*

ಟಿಪ್ಪಣಿ: ಪ್ರವಾದಿ(ಸ) ಮತ್ತು ಅಬ್ದುಲ್ಲಾ ಬಿನ್ ಮಸ್‌ಊದ್‌ರ(ರ) ಪ್ರಯೋಗದಿಂದ ಬೋಧನೆಯನ್ನು ಜನರ ಬೆನ್ನು ಹತ್ತಿ ನೀಡಬಾರದೆಂದು ತಿಳಿದು ಬರುತ್ತದೆ. ಬದಲಾಗಿ ಪರಿಸ್ಥಿತಿಯನ್ನು ಅರಿತು, ಸಂದರ್ಭಾನುಸಾರ, ಜನರು ಕೇಳಲಿಕ್ಕೆ ಸಿದ್ಧರಿದ್ದಾರೆಂದು ಖಾತ್ರಿ ಪಡಿಸಿದ ಬಳಿಕವೇ ನಮ್ಮ ಮಾತನ್ನು ಹೇಳಬೇಕು. ಈ ಕುರಿತು ಹೆಚ್ಚಿನ ವಿವರಗಳು ಮುಂದಿನ ಹದೀಸ್‌ಗಳಲ್ಲಿ ಬರಲಿವೆ.

---

(301) عَنْ عِكْرِمَةَ اَنَّ ابْنَ عَبَّاسٍ قَالَ حَدِّثِ النَّاسَ كُلَّ جُمُعَةٍ مَرَّةً فَاِنْ اَبَيْتَ فَمَرَّتَيْنِ، فَاِنْ اَكْثَرْتَ فَثَلَاثَ مَرَّاتٍ، وَلَا تُمِلَّنَّ النَّاسَ هٰذَا الْقُرْاٰنَ وَلَاُلْفِيَنَّكَ تَاْتِي الْقَوْمَ وَهُمْ فِيْ حَدِيْثٍ مِنْ حَدِيْثِهِمْ فَتَقُصُّ عَلَيْهِمْ فَتَقْطَعُ عَلَيْهِمْ حَدِيْثَهُمْ فَتُمِلُّهُمْ، وَلٰكِنْ اَنْصِتْ، فَاِذَا اَمَرُوْكَ فَحَدِّثْهُمْ وَهُمْ يَشْتَهُوْنَهُ وَانْظُرِ السَّجْعَ مِنَ الدُّعَاءِ فَاجْتَنِبْهُ، فَاِنِّيْ عَهِدْتُّ رَسُوْلَ اللّٰهِ صَلَّى اللّٰهُ عَلَيْهِ وَسَلَّمَ وَاَصْحَابَهُ لَا يَفْعَلُوْنَ ذٰلِكَ (بخاری)

ಇಕ್ರಿಮಾ(ರ) ವರದಿ ಮಾಡುತ್ತಾರೆ- ಹ. ಇಬ್ನು ಅಬ್ಬಾಸ್(ರ) ನನಗೆ ಈ ರೀತಿ ಉಪದೇಶ ಮಾಡಿದರು- ಪ್ರತಿವಾರ ಶುಕ್ರವಾರದ ದಿನ ನೀವು ಪ್ರವಚನ ನೀಡಿರಿ. ವಾರದಲ್ಲಿ ಎರಡು ಸಲ ನೀಡಿದರೂ ಆಗಬಹುದು. ವಾರದಲ್ಲಿ ಮೂರು ಬಾರಿಗಿಂತ ಅಧಿಕ ಮಾಡ ಬಾರದು. ಎಚ್ಚರಿಕೆ! ಪ್ರವಚನವನ್ನು ಅಧಿಕಗೊಳಿಸಿ ಜನರಲ್ಲಿ ಕುರ್‌ಆನಿನ ಬಗ್ಗೆ ದ್ವೇಷ ಹುಟ್ಟಿಸಬೇಡಿರಿ. ನೀವು ಜನರ ಬಳಿ ಹೋಗುವಾಗ ಅವರು ಮಾತುಕತೆಯಲ್ಲಿ ತಲ್ಲೀನ ರಾಗಿದ್ದರೆ ಅವರ ಮಾತನ್ನು ಮುರಿದು ನೀವೆಂದೂ ಬೋಧಿಸಬಾರದು. ಹಾಗೆ ಮಾಡಿದರೆ ನಿಮ್ಮ ಉಪದೇಶದಿಂದ ಅವರಲ್ಲಿ ತಿರಸ್ಕಾರ ಹುಟ್ಟುವಂತೆ ಮಾಡುವಿರಿ. ಅಂತಹ ಸಂದರ್ಭದಲ್ಲಿ ಮೌನ ವಹಿಸಿರಿ. ಅವರೇ ಬಯಸಿದರೆ ಮತ್ತು ನಿಮ್ಮನ್ನು ಬೋಧಿಸುವಂತೆ ವಿನಂತಿಸಿದರೆ ನಿಮ್ಮ ವಿಷಯವನ್ನು ಹೇಳಿರಿ. ಇನ್ನು ಪ್ರಾರ್ಥನೆಯನ್ನು ಪ್ರಾಸಬದ್ಧವಾಗಿ ಮಾಡಬಾರದು. ಏಕೆಂದರೆ ಪ್ರವಾದಿ(ಸ) ಮತ್ತು ಅವರ ಸಂಗಾತಿಗಳು ಪ್ರಾಸಬದ್ಧ ಪದ ಗಳನ್ನು ಬಳಸುತ್ತಿರಲಿಲ್ಲ. *[ಬುಖಾರಿ]*

ಟಿಪ್ಪಣಿ: ಇನ್ನೊಂದು ಹದೀಸ್‌ನಲ್ಲಿ ಪ್ರವಾದಿ(ಸ) ಹೀಗೆಂದಿದ್ದಾರೆ - ಜನರು ಅಲ್ಲಾಹನ ದಾಸ್ಯ- ಆರಾಧನೆಯಿಂದ ಬೇಸತ್ತು ಹೋಗುವಂತಹ ಶೈಲಿಯನ್ನು ಬಳಸಬೇಡಿರಿ.

---

(302) قَالَ عَلِيٌّ رض إِنَّ لِلْقُلُوْبِ شَهَوَاتٍ وَإِقْبَالًا وَإِدْبَارًا، فَأْتُوْهَا مِنْ قِبَلِ شَهَوَاتِهَا وَإِقْبَالِهَا، فَإِنَّ الْقَلْبَ إِذَا أُكْرِهَ عَمِيَ (كتاب الخراج، امام ابو يوسف)

ಹ. ಅಲೀ(ರ) ಹೇಳುತ್ತಾರೆ: ಮನಸ್ಸಿಗೆ ಕೆಲವು ಒಲವುಗಳಿರುತ್ತವೆ. ಅದು ಕೆಲವೊಮ್ಮೆ ಮಾತು ಕೇಳಲು ಸಿದ್ಧವಿರುತ್ತದೆ. ಕೆಲವೊಮ್ಮೆ ಸಿದ್ಧವಿರುವುದಿಲ್ಲ. ಆದುದರಿಂದ ಮನಸ್ಸಿ ನೊಳಗೆ ಈ ಒಲವುಗಳ ಮೂಲಕ ಪ್ರವೇಶಿಸಿರಿ. ಅದು ಕೇಳಲು ಸಿದ್ಧವಿದೆಯೆಂದು ತಿಳಿದಾಗ ನಿಮ್ಮ ವಿಷಯ ಹೇಳಿರಿ. ಯಾಕೆಂದರೆ ಮನಸ್ಸನ್ನು ಕೇಳುವಂತೆ ನಿರ್ಬಂಧಿಸಿದರೆ ಅದು ಕಿವುಡಾಗಿ ಬಿಡುತ್ತದೆ. (ಮತ್ತು ನಿಮ್ಮ ಮಾತನ್ನು ಸ್ವೀಕರಿಸದೆ ನಿರಾಕರಿಸಿ ಬಿಡುತ್ತದೆ.)

[ಕಿತಾಬುಲ್ ಖಿರಾಜ್: ಇಮಾಮ್ ಅಬೂ ಯೂಸುಫ್(ರ)]

---

(303) كَانَ النَّبِيُّ صَلَّى اللّٰهُ عَلَيْهِ وَسَلَّمَ إِذَا تَكَلَّمَ بِكَلِمَةٍ أَعَادَهَا ثَلَاثًا حَتَّى تُفْهَمَ عَنْهُ (بخاری، انس رض)

ಪ್ರವಾದಿ(ಸ) ಮಾತನಾಡುವಾಗ, ಕೇಳುವವನು ಅದನ್ನು ಗ್ರಹಿಸುವ ರೀತಿಯಲ್ಲಿ ಮಾತನ್ನು ಮೂರು ಸಲ ಪುನರಾವರ್ತಿಸುತ್ತಿದ್ದರು. *[ಬುಖಾರಿ- ವರದಿ: ಹ. ಅನಸ್(ರ)]*

ಟಿಪ್ಪಣಿ: ಮಾತನಾಡುವ ಮತ್ತು ಭಾಷಣ ಮಾಡುವ ಶೈಲಿಯು ಎಲ್ಲ ಭಾಷೆಗಳಲ್ಲೂ ಇರುತ್ತದೆ. ಮುಖ್ಯ ಉದ್ದೇಶ ಜನರ ಮನಸ್ಸಿಗೆ ವಿಷಯವನ್ನು ಇಳಿಸುವುದಾಗಿದೆ. ಅಗತ್ಯವಿದ್ದರೆ ಮಾತನ್ನು ವಿವಿಧ ಶೈಲಿಯಲ್ಲಿ ಎರಡು ಮೂರು ಬಾರಿ ಪುನರಾವರ್ತಿಸಬಹುದು. ಅಗತ್ಯವಿಲ್ಲದಿದ್ದರೆ ಮಾತಿನ ಪುನರಾವರ್ತನೆಯು ಬೇಸರವನ್ನುಂಟು ಮಾಡುವುದು. ಅದಲ್ಲದೆ ಅಭಿಸಂಬೋಧಿತನು ಯಾವ ರೀತಿಯವನೆಂಬುದನ್ನು ನೋಡಿ ಅದಕ್ಕನುಗುಣವಾಗಿ ಮಾತಿನ ಮೋಡಿಯನ್ನು ಬಳಸಬೇಕು. ಅಶಿಕ್ಷಿತರ ಮತ್ತು ಕಡಿಮೆ ಕಲಿತವರ ಮುಂದೆ ಕಠಿಣ ಶಬ್ದಗಳನ್ನೂ ಶೈಲಿಯನ್ನೂ ಬಳಸುವುದರಿಂದ ಮತ್ತು ತತ್ವಜ್ಞಾನದ ಕಠಿಣ ವಿಷಯಗಳನ್ನು ಹೇಳುವುದರಿಂದ ನಿಮ್ಮ ಸಂದೇಶವನ್ನು ಪ್ರಭಾವಹೀನಗೊಳಿಸಿಕೊಳ್ಳುವಿರಿ. ಪ್ರವಾದಿಯವರ(ಸ) ಬಗ್ಗೆ ಹ. ಆಯಿಶಾ(ರ) ಹೇಳುತ್ತಾರೆ: "ಪ್ರವಾದಿಯವರ(ಸ) ಉಪನ್ಯಾಸ ಅತ್ಯಂತ ಸ್ಪಷ್ಟವಾಗಿರುತ್ತಿತ್ತು. ಅದನ್ನು ಕೇಳಿದವರು ಗ್ರಹಿಸಿಕೊಳ್ಳುತ್ತಿದ್ದರು." *[ಅಬೂ ದಾವೂದ್]*

ಧರ್ಮದಲ್ಲಿ ಸೌಲಭ್ಯ

(304) إِنَّ النَّبِيَّ صَلَّى اللّٰهُ عَلَيْهِ وَسَلَّمَ بَعَثَ رَجُلًا يُصَدِّقُ النَّاسَ حِيْنَ
أَمَرَهُ اللّٰهُ أَنْ يَأْخُذَ الصَّدَقَةَ ، فَقَالَ لَهُ لَا تَأْخُذْ مِنْ حَزَرَاتِ أَنْفُسِ النَّاسِ
شَيْئًا ، خُذِ الشَّارِفَ وَالْبِكْرَ وَذَاتَ الْعَيْبِ ، فَذَهَبَ فَأَخَذَ ذٰلِكَ عَلٰى مَا
أَمَرَهُ النَّبِيُّ أَنْ يَأْخُذَ ، حَتّٰى جَاءَ إِلٰى رَجُلٍ مِنْ أَهْلِ الْبَادِيَةِ فَذَكَرَ لَهُ أَنَّ
اللّٰهَ أَمَرَ رَسُوْلَهُ أَنْ يَأْخُذَ الصَّدَقَةَ مِنَ النَّاسِ يُزَكِّيْهِمْ بِهَا وَيُطَهِّرُهُمْ
بِهَا ، فَقَالَ لَهُ الرَّجُلُ قُمْ فَخُذْ ، فَذَهَبَ فَأَخَذَ الشَّارِفَ وَالْبِكْرَ وَذَاتَ
الْعَيْبِ ، فَقَالَ لَهُ وَاللّٰهِ مَا قَامَ فِيْ إِبِلِيْ أَحَدٌ قَطُّ يَأْخُذُ شَيْئًا لِلّٰهِ قَبْلَكَ ،
وَاللّٰهِ لَتَخْتَارَنَّ (كتاب الخراج امام ابو يوسفؒ)

ಝಕಾತ್ ಕಡ್ಡಾಯವಾದಾಗ ಪ್ರವಾದಿಯವರು(ಸ) ಝಕಾತ್ ಸಂಗ್ರಹಿಸಲು ಒಬ್ಬ ವ್ಯಕ್ತಿಯನ್ನು ಹೀಗೆ ಆದೇಶಿಸಿ ಕಳುಹಿಸಿದರು: "ಜನರಿಂದ ಉತ್ತಮ ಸಂಪತ್ತನ್ನು ಸಂಗ್ರಹಿಸಬಾರದು. ಮುದಿ ಒಂಟೆಗಳು, ಮರಿಗಳಿಲ್ಲದ ಚಿಕ್ಕಪ್ರಾಯದ ಹಾಗೂ ಅಂಗವೈಕಲ್ಯ ಹೊಂದಿದ ಒಂಟೆಗಳನ್ನು ಪಡೆದುಕೊಳ್ಳಬೇಕು." ಝಕಾತ್ ಸಂಗ್ರಹಕಾರನು ಹೋಗಿ ಪ್ರವಾದಿವರ್ಯರ(ಸ)

ಆದೇಶದಂತೆ ಜಾನುವಾರುಗಳನ್ನು ಪಡೆಯತೊಡಗಿದರು. ಹೀಗೆ ಸಂಗ್ರಹಿಸುತ್ತಾ ಅವರು ಒಬ್ಬ ಗ್ರಾಮೀಣನ ಬಳಿಗೆ ತಲಪಿದರು. ಅವನೊಂದಿಗೆ ಹೀಗೆಂದರು: "ಅಲ್ಲಾಹನು ತನ್ನ ಪ್ರವಾದಿಗೆ, ಕೆಡುಕುಗಳು ದೂರವಾಗಬೇಕು, ಸತ್ಯವಿಶ್ವಾಸದಲ್ಲಿ ವರ್ಧನೆಯುಂಟಾಗಬೇಕು ಮತ್ತು ಚಾರಿತ್ರ್ಯದಲ್ಲಿ ಪಾವನತೆಯುಂಟಾಗಬೇಕು ಎಂಬ ಉದ್ದೇಶದಿಂದ ಝಕಾತ್ ವಸೂಲು ಮಾಡಲು ಅಪ್ಪಣೆ ಕೊಟ್ಟಿರುವನು." ಆಗ ಅವನು, ಹೋಗಿ ಅಲ್ಲಾಹನ ಹಕ್ಕುಗಳನ್ನು ಪಡಕೊಳ್ಳಿರಿ ಎಂದನು. ಝಕಾತ್ ಸಂಗ್ರಹಕಾರನು ಹೋಗಿ ಪ್ರವಾದಿಯವರ(ಸ) ಆದೇಶದಂತೆ ಜಾನುವಾರುಗಳನ್ನು ಪಡೆದುಕೊಂಡರು. ಅವನು ಹೇಳಿದನು, "ನನ್ನ ಜಾನುವಾರುಗಳಲ್ಲಿ ಅಲ್ಲಾಹನ ಹಕ್ಕುಗಳನ್ನು ವಸೂಲು ಮಾಡಲು ನಿಮಗಿಂತ ಮುಂಚೆ ಯಾರೂ ಬಂದಿಲ್ಲ. ನೀವಾದರೋ ಕೆಟ್ಟ ಜಾನುವಾರುಗಳನ್ನು ಅಲ್ಲಾಹನ ಹಕ್ಕುಗಳಿಗಾಗಿ ಪಡೆಯುತ್ತಿದ್ದೀರಿ. ಇಲ್ಲ, ಅಲ್ಲಾಹನಾಣೆ! ನೀವು ಅತ್ಯುತ್ತಮ ಜಾನುವಾರುಗಳನ್ನು ಪಡೆಯಬೇಕು. ಅಲ್ಲಾಹನಿಗೆ ಕೆಟ್ಟ ವಸ್ತುಗಳನ್ನು ಏಕೆ ಕೊಡಬೇಕು?"

[ಕಿತಾಬುಲ್ ಖಿರಾಜ್, ಇಮಾಮ್ ಅಬೂ ಯೂಸುಫ್(ರ)]

ಟಿಪ್ಪಣಿ: ಪ್ರವಾದಿ(ಸ) ಅವರು ಮೊದಲ ದಿನವೇ ಜನರಿಂದ ಅತ್ಯುತ್ತಮ ಸಂಪತ್ತನ್ನು ಝಕಾತ್‌ನಲ್ಲಿ ಪಡೆಯುತ್ತಿದ್ದರೆ, ಜನರು ಬಂಡೇಳುವ ಸಂಭವವಿತ್ತು. ಆದರೆ ಹಂತ-ಹಂತವಾಗಿ ತರಬೇತಿ ಮಾಡಿದುದರಿಂದ ಸತ್ಯವಿಶ್ವಾಸವು ಜನಮನದಲ್ಲಿ ಬೇರೂರಿತು. ಆದುದರಿಂದ ಅತ್ಯುತ್ತಮ ವಸ್ತುಗಳನ್ನು ಝಕಾತ್ ಪಡೆಯುವಂತೆ ಸಂಗ್ರಹಕಾರರನ್ನು ಒತ್ತಾಯಿಸುವಂತಹ ಗುಣಗಳು ಮದೀನದಿಂದ ದೂರದ ಪ್ರದೇಶದ ಹಳ್ಳಿಗರಲ್ಲೂ ಬೆಳೆದುವು.

ಯುಕ್ತಿಪೂರ್ಣ ಭಾಷಣ

(305) قَالَ عَلِيُّ بْنُ أَبِي طَالِبٍ رض اَلْفَقِيْهُ كُلُّ الْفَقِيْهِ مَنْ لَّمْ يُقَنِّطِ النَّاسَ مِنْ رَّحْمَةِ اللهِ، وَلَمْ يُرَخِّصْ لَهُمْ فِيْ مَعَاصِي اللهِ، وَلَمْ يُؤَمِّنْهُمْ مِنْ عَذَابِ اللهِ

(كتاب الخراج ــــ امام ابو يوسفؒ)

ಹ. ಅಲೀ ಬಿನ್ ಅಬೂತಾಲಿಬ್(ರ) ಹೀಗೆ ಹೇಳುತ್ತಾರೆ- ಜನರನ್ನು (ತನ್ನ ಬರಹ-ಭಾಷಣಗಳ ಮೂಲಕ) ಅಲ್ಲಾಹನ ಕರುಣೆಯಿಂದ ನಿರಾಶೆಗೊಳಿಸದ, ಅವರನ್ನು ಅಲ್ಲಾಹನ ಆಜ್ಞೋಲ್ಲಂಘನೆಯಲ್ಲಿ ದಿಟ್ಟತನ ತೋರುವಂತೆ ಮಾಡದ ಮತ್ತು ಅವರನ್ನು ಅಲ್ಲಾಹನ ಯಾತನೆಯಿಂದ ನಿರ್ಭಯರಾಗಿ ಮಾಡದ ವ್ಯಕ್ತಿಯೇ ಅತ್ಯುತ್ತಮ ವಿದ್ವಾಂಸ.

[ಕಿತಾಬುಲ್ ಖಿರಾಜ್ - ಇಮಾಮ್ ಅಬೂ ಯೂಸುಫ್(ರ)]

ಟಿಪ್ಪಣಿ: ತಾತ್ಪರ್ಯವೇನೆಂದರೆ ಜನರು ಅಲ್ಲಾಹನ ಕರುಣೆಯಿಂದ ನಿರಾಶರಾಗಿ ಬಿಡಬಲ್ಲಂತಹ ಶೈಲಿಯಲ್ಲಿ ಭಾಷಣ ಮಾಡುವುದು ಸರಿಯಲ್ಲ. ಅಲ್ಲಾಹನ ದಯೆ, ಕರುಣೆಗಳ ಬಗ್ಗೆ ಮತ್ತು ಪ್ರವಾದಿ

ಮುಹಮ್ಮದ್‌ರ(ಸ) ಶಿಫಾರಸಿನ ಬಗ್ಗೆ ತಪ್ಪು ಅರ್ಥಗಳನ್ನು ಕಟ್ಟಿ ಜನರು ಆಜ್ಞೋಲ್ಲಂಘನೆ ಮಾಡಲು ಧೈರ್ಯ ತೋರುವಂತೆ ಮಾಡುವುದೂ ಸರಿಯಲ್ಲ. ಬದಲಾಗಿ ಸರಿಯಾದ ವಿಧಾನವೇನೆಂದರೆ ಮೋಕ್ಷ ಮತ್ತು ಅಲ್ಲಾಹನ ಕರುಣೆಯಿಂದ ನಿರಾಶರಾಗದಂತೆ ಹಾಗೂ ಅಲ್ಲಾಹನ ಆಜ್ಞೋಲ್ಲಂಘನೆಯಲ್ಲಿ ಧೈರ್ಯ ತೋರದಂತೆ ವಿಷಯದ ಎರಡೂ ಮುಖಗಳನ್ನು ವಿವರಿಸಬೇಕು.

ಸಂದೇಶ ಮತ್ತು ಕರ್ಮದಲ್ಲಿ ಏಕರೂಪತೆ

(306) عَنْ عَبْدِ اللّٰهِ ابْنِ مَسْعُوْدٍ قَالَ لَعَنَ اللّٰهُ الْوَاشِمَاتِ وَالْمُسْتَوْشِمَاتِ وَالْمُتَنَمِّصَاتِ وَالْمُتَفَلِّجَاتِ لِلْحُسْنِ الْمُغَيِّرَاتِ خَلْقَ اللّٰهِ، قَالَ فَبَلَغَ امْرَأَةً فِي الْبَيْتِ يُقَالُ لَهَا أُمُّ يَعْقُوْبَ، فَجَاءَتْ إِلَيْهِ فَقَالَتْ بَلَغَنِيْ أَنَّكَ قُلْتَ كَيْتَ وَكَيْتَ، فَقَالَ مَالِيَ لَا أَلْعَنُ مَنْ لَعَنَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ فِيْ كِتَابِ اللّٰهِ عَزَّ وَجَلَّ! فَقَالَتْ إِنِّيْ لَأَقْرَءُ مَا بَيْنَ لَوْحَيْهِ فَمَا وَجَدْتُهُ، فَقَالَ إِنْ كُنْتِ قَرَأْتِيْهِ فَقَدْ وَجَدْتِيْهِ، أَمَا قَرَأْتِ "مَا آتَاكُمُ الرَّسُوْلُ فَخُذُوْهُ وَمَا نَهَاكُمْ عَنْهُ فَانْتَهُوْا" قَالَتْ بَلٰى، قَالَ فَإِنَّ النَّبِيَّ صَلَّى اللّٰهُ عَلَيْهِ وَسَلَّمَ نَهٰى عَنْهُ، قَالَتْ إِنِّيْ لَأَظُنُّ أَهْلَكَ يَفْعَلُوْنَ، قَالَ اذْهَبِيْ فَانْظُرِيْ، فَنَظَرَتْ فَلَمْ تَرَ مِنْ حَاجَتِهَا شَيْئًا، فَجَاءَتْ فَقَالَتْ مَا رَأَيْتُ شَيْئًا، قَالَ لَوْ كَانَتْ كَذَالِكَ لَمْ تُجَامِعْنِيْ، وَفِيْ رِوَايَةٍ فَدَخَلَتْ ثُمَّ خَرَجَتْ فَقَالَتْ مَا رَأَيْتُ بَأْسًا، قَالَ مَا حَفِظْتُ إِذًا وَصِيَّةَ الْعَبْدِ الصَّالِحِ وَمَا أُرِيْدُ أَنْ أُخَالِفَكُمْ إِلٰى مَا أَنْهَاكُمْ عَنْهُ (مسند احمد)

ಹ. ಅಬ್ದುಲ್ಲಾ ಬಿನ್ ಮಸ್‌ವೂದ್(ರ) ಹೇಳುತ್ತಾರೆ- ತಮ್ಮ ಶರೀರದಲ್ಲಿ ಕೆತ್ತುವ ಮತ್ತು ಕೆತ್ತಿಸುವ ಸ್ತ್ರೀಯರ ಮೇಲೆ, ಅಲಂಕಾರಕ್ಕಾಗಿ ತಮ್ಮ ತಲೆಗೂದಲನ್ನು ಕಿರಿದಾಗಿಸುವ ಸ್ತ್ರೀಯರ ಮೇಲೆ, ಸೌಂದರ್ಯ ವರ್ಧನೆಗಾಗಿ ತಮ್ಮ ಹಲ್ಲುಗಳ ಮಧ್ಯೆ ಬಿರುಕುಂಟು ಮಾಡುವ ಮತ್ತು ಅಲ್ಲಾಹನು ಸೃಷ್ಟಿಸಿದ ಶಾರೀರಿಕ ರೂಪವನ್ನು ಕೆಡಿಸುವ ಸ್ತ್ರೀಯರ ಮೇಲೆ ಅಲ್ಲಾಹನ ಶಾಪವಿರಲಿ.

ಅಬ್ದುಲ್ಲಾ ಬಿನ್ ಮಸ್‌ಊದ್‌ರ(ರ) ಈ ಮಾತುಗಳು ಓರ್ವ ಪರ್ದಾಧಾರಿ ಮಹಿಳೆ ಉಮ್ಮು ಯಾಕೂಬ್‌ರ ಕಿವಿಗೆ ಬಿದ್ದಾಗ ಅವರು ಬಂದು, ನೀವು ಹೀಗೆಲ್ಲ ಹೇಳಿದಿರೆಂದು ನನ್ನ ತಿಳುವಳಿಕೆಗೆ ಬಂದಿದೆ ಎಂದರು (ಅರ್ಥಾತ್ ಇಂತಿಂತಹ ಕೆಲಸಗಳನ್ನು ಮಾಡುವ ಸ್ತ್ರೀಯರ ಮೇಲೆ ಅಲ್ಲಾಹನ ಶಾಪವಿರಲಿ ಎಂದು).

ಅಬ್ದುಲ್ಲಾ ಬಿನ್ ಮಸ್‌ವೂದ್(ರ) ಹೇಳಿದರು- ಪ್ರವಾದಿಯವರು(ಸ) ಅಲ್ಲಾಹನ ಗ್ರಂಥದಲ್ಲಿ ಶಾಪ ಹಾಕಿದವರ ಮೇಲೆ ನಾನೇಕೆ ಶಾಪ ಹಾಕಬಾರದು. ಆಗ ಉಮ್ಮು ಯಾಕೂಬ್ ಹೇಳಿದರು- "ನಾನು ಸಂಪೂರ್ಣ ಕುರ್‌ಆನ್ ಓದಿದ್ದೇನೆ. ಕುರ್‌ಆನ್‌ನಲ್ಲಿ ಇಂತಹ ವಿಷಯವನ್ನು ನಾನು ಕಂಡಿಲ್ಲ." ಇಬ್ನು ಮಸ್‌ಊದ್(ರ) ಹೇಳಿದರು- ನೀವು ಕುರ್‌ಆನನ್ನು ಗಮನವಿಟ್ಟು ಓದುತ್ತಿದ್ದರೆ ಈ ವಿಷಯ ಕುರ್‌ಆನ್‌ನಲ್ಲಿರುವುದನ್ನು ಕಾಣುತ್ತಿದ್ದಿರಿ. ನೀವು ಕುರ್‌ಆನ್‌ನಲ್ಲಿ ಈ ಆಯತ್ ಓದಿಲ್ಲವೇ?- "ಪ್ರವಾದಿ(ಸ) ಕೊಡುವುದನ್ನೆಲ್ಲ ಸ್ವೀಕರಿಸಿರಿ ಮತ್ತು ಅವರು ತಡೆಯುವುದರಿಂದೆಲ್ಲ ತಡೆದು ನಿಲ್ಲಿರಿ." ಉಮ್ಮು ಯಾಕೂಬ್ ಹೇಳಿದರು - "ಹೌದು, ನಾನು ಆ ಆಯತ್ ಓದಿದ್ದೇನೆ." ಇಬ್ನು ಮಸ್‌ಊದ್ ಹೇಳಿದರು- "ನಾನು ಹೇಳಿರುವ ವಿಷಯಗಳನ್ನು ಪ್ರವಾದಿ(ಸ) ತಡೆದಿದ್ದಾರೆಂಬುದು ನೀವು ತಿಳಿದಿರಬೇಕು." ಉಮ್ಮು ಯಾಕೂಬ್ ಹೇಳಿದರು- "ನಿಮ್ಮ ಪತ್ನಿ ಕೂಡಾ ಇಂತಹ ಕೆಲಸಗಳನ್ನು ಮಾಡುತ್ತಾಳೆಂದು ನಾನು ಭಾವಿಸುತ್ತೇನೆ." ಅವರನ್ನು ಒಳಗೆ ಹೋಗಿ ನೋಡುವಂತೆ ಇಬ್ನು ಮಸ್‌ವೂದ್ ಹೇಳಿದರು. ಅವರು ಒಳಗೆ ಹೋಗಿ ನೋಡಿ ಬಂದು, "ನನ್ನ ಅಭಿಪ್ರಾಯ ತಪ್ಪು. ನಿಮ್ಮಾಕೆ ಹಾಗೇನೂ ಮಾಡುವುದಿಲ್ಲ"ವೆಂದರು. ಇಬ್ನು ಮಸ್‌ವೂದ್ ಹೇಳಿದರು- "ಆಕೆ ಇದನ್ನೆಲ್ಲಾ ಮಾಡುತ್ತಿದ್ದರೆ ನನ್ನೊಂದಿಗೆ ಇರುತ್ತಿರಲಿಲ್ಲ."

ಇನ್ನೊಂದು ವರದಿಯಲ್ಲಿ ಹೀಗೆ ಬಂದಿದೆ - ಆಕೆ ಒಳಗೆ ಹೋಗಿ ಬಂದು ನಿಮ್ಮಾಕೆ ಇಂತಹ ಶೃಂಗಾರಾದಿಗಳಿಂದ ದೂರವಿದ್ದಾಳೆ ಎಂದರು. ಆಗ ಅಬ್ದುಲ್ಲಾ ಬಿನ್ ಮಸ್‌ವೂದ್(ರ) ಹೇಳಿದರು, "ನಿಮಗೆ ಅಲ್ಲಾಹನ ನಿಷ್ಠ ದಾಸರಾದ ಹ. ಶುಐಬ್‌ರ(ಅ) ಮಾತು ನೆನಪಿಲ್ಲವೇ? ಅವರು ತಮ್ಮ ಜನಾಂಗದೊಡನೆ ನಾನು ನಿಮ್ಮನ್ನು ತೂಕಳತೆಯಲ್ಲಿ ಕಡಿತ ಮಾಡದಂತೆ ತಡೆಯುತ್ತಿದ್ದೇನೆ. ನಿಮ್ಮನ್ನು ತಡೆಯುತ್ತಾ, ನಾನೇ ಈ ಕಾರ್ಯವನ್ನು ಮಾಡುವುದಾದರೂ ಹೇಗೆ? ಎಂದು ಕೇಳಿದ್ದರು." *[ಮುಸ್ನದ್ ಅಹ್ಮದ್]*

ಸಂದೇಶ ಪ್ರಚಾರ ತನ್ನಿಂದಾರಂಭವಾಗಬೇಕು

(307) إِنَّ رَجُلاً قَالَ لِابْنِ عَبَّاسٍ أُرِيْدُ أَنْ آمُرَ بِالْمَعْرُوْفِ وَأَنْهٰى
عَنِ الْمُنْكَرِ، فَقَالَ لَهُ ابْنُ عَبَّاسٍ أَبَلَغْتَ تِلْكَ الْمَنْزِلَةَ؟ قَالَ أَرْجُوْ، فَقَالَ
لَهُ إِنْ لَمْ تَخْشَ أَنْ تُفْتَضَحَ بِثَلَاثِ آيَاتٍ مِنْ كِتَابِ اللّٰهِ فَافْعَلْ، قَالَ الرَّجُلُ
وَمَا هُنَّ؟ قَالَ قَوْلُهُ "أَتَأْمُرُوْنَ النَّاسَ بِالْبِرِّ" اَلْآيَةَ، فَهَلْ أَحْكَمْتَ
هٰذِهٖ؟ قَالَ لَا، فَقَالَ وَالثَّانِيَةُ قَوْلُهُ "لِمَ تَقُوْلُوْنَ مَا لَا تَفْعَلُوْنَ"
فَهَلْ أَحْكَمْتَهَا؟ قَالَ لَا، فَقَالَ وَالثَّالِثَةُ مَقَالَةُ شُعَيْبٍ "مَا أُرِيْدُ أَنْ
أُخَالِفَكُمْ إِلٰى مَا أَنْهَاكُمْ عَنْهُ" فَهَلْ أَحْكَمْتَهَا؟ قَالَ لَا، قَالَ فَابْدَأْ
بِنَفْسِكَ (خلق المسلم)

ಒಬ್ಬ ವ್ಯಕ್ತಿಯು ಹ. ಅಬ್ದುಲ್ಲಾ ಬಿನ್ ಅಬ್ಬಾಸ್‌ರೊಡನೆ(ರ) ಹೀಗೆಂದನು- ನಾನು ಇಸ್ಲಾಮಿನ ಸಂದೇಶ ಪ್ರಚಾರದ ಕಾರ್ಯ ಮಾಡಬಯಸುತ್ತೇನೆ. ನಾನು ಜನರಿಗೆ ಒಳಿತಿನ ಆದೇಶ ನೀಡುವೆನು ಮತ್ತು ಕೆಡುಕಿನಿಂದ ಅವರನ್ನು ತಡೆಯುವೆನು. ಆಗ ಅವರು, ನೀನು ಈ ಸ್ಥಾನಕ್ಕೆ ತಲಪಿರುವೆಯಾ? ಎಂದು ಕೇಳಿದರು. ಅವನು, ಹೌದು, ಹಾಗೆಂದು ನಿರೀಕ್ಷಿಸುತ್ತೇನೆ ಎಂದನು. ಇಬ್ನು ಅಬ್ಬಾಸ್(ರ) ಹೇಳಿದರು- "ಪವಿತ್ರ ಕುರ್‌ಆನಿನ ಮೂರು ಆಯತ್‌ಗಳು ನಿನ್ನನ್ನು ಅವಮಾನಿಸಲಾರದೆಂಬ ಭೀತಿ ನಿನಗಿಲ್ಲದಿದ್ದರೆ ಖಂಡಿತ ಸಂದೇಶ ಪ್ರಚಾರ ಕಾರ್ಯ ಮಾಡು!" ಅವು ಯಾವುದೆಂದು ಅವನು ಕೇಳಿದನು. ಇಬ್ನು ಅಬ್ಬಾಸ್(ರ) ಹೀಗೆಂದರು- ಮೊದಲನೆಯ ಆಯತ್ ಹೀಗಿದೆ - "ನೀವು ಜನರಿಗೆ ಒಳಿತನ್ನು ಆಜ್ಞಾಪಿಸಿ ನಿಮ್ಮನ್ನು ನೀವೇ ಮರೆತುಬಿಡುತ್ತೀರಾ?" (ಅಲ್ ಬಕರಃ) ಈಗ ಹೇಳು. ಇದರಂತೆ ನೀನು ಮಾಡುತ್ತಿರುವೆಯಾ? ಅವನು, 'ಇಲ್ಲ'ವೆಂದನು. ಇಬ್ನು ಅಬ್ಬಾಸ್(ರ) ಎರಡನೆಯ ಆಯತ್ ಪಠಿಸಿದರು - 'ನೀವು ಮಾಡದ್ದನ್ನು ಆಡುತ್ತೀರೇಕೆ?' (ಅಸ್ಸಫ್ಫ್) ಇದರಂತೆ ನೀನಿರುವೆಯಾ, ಹೇಳು? ಅವನು 'ಇಲ್ಲ'ವೆಂದು ಉತ್ತರಿಸಿದನು. ಇಬ್ನು ಅಬ್ಬಾಸ್(ರ) ಅವರು ಹ. ಶುಐಬ್(ಅ) ತಮ್ಮ ಜನಾಂಗಕ್ಕೆ ಹೇಳಿದ ಮಾತಿರುವ ಆಯತ್ ಪಠಿಸಿದರು - "ನಾನು ನಿಮ್ಮನ್ನು ತಡೆಯುತ್ತಿರುವ ವಿಷಯಗಳಿಂದ, ನಿಮ್ಮನ್ನು ಮಾತ್ರ ತಡೆಯುತ್ತಾ ನಾನು ಆ ಕೆಲಸ

ಮಾಡಬೇಕೆಂಬ ಉದ್ದೇಶ ನನಗಿಲ್ಲ." ಅನಂತರ ನೀನು ಈ ರೀತಿ ನಡೆಯುತ್ತಿರುವೆಯಾ ಎಂದು ಕೇಳಿದರು- ಅವನು, 'ಇಲ್ಲ'ವೆಂದನು. ಆಗ ಇಬ್ನು ಅಬ್ಬಾಸ್(ರ) ಹೇಳಿದರು - ಹೋಗು, ಸಂದೇಶ ಪ್ರಚಾರ ಮತ್ತು ಸುಧಾರಣೆಯನ್ನು ನಿನ್ನಿಂದಲೇ ಆರಂಭಿಸು.

[ಮಿಲ್ಯುಲ್ ಮುಸ್ಲಿಮ್]

ಟಿಪ್ಪಣಿ: ಈ ವ್ಯಕ್ತಿಯು ತನ್ನ ಸುಧಾರಣೆಯ ಕಡೆಯಿಂದ ಅಲಕ್ಷ್ಯನೂ ಇತರರಿಗೆ ಸಂದೇಶ ನೀಡುವ ಬಗ್ಗೆ ಆಸಕ್ತನೂ ಆಗಿದ್ದನು. ಹ. ಇಬ್ನು ಅಬ್ಬಾಸ್‌ರು(ರ) ಆತನ ಮನೋಸ್ಥಿತಿಯ ವಸ್ತುನಿಷ್ಠ ವಿಶ್ಲೇಷಣೆ ಮಾಡಿ ಸೂಕ್ತ ಸಲಹೆ ನೀಡಿದರು.

ಮಾಡಬೇಕಾದ ಕಾರ್ಯ

(308) عَنْ حَرْمَلَةَ قَالَ قُلْتُ يَا رَسُوْلَ اللهِ مَا تَأْمُرُنِيْ بِهِ أَعْمَلُ؟ قَالَ إِئْتِ الْمَعْرُوْفَ وَاجْتَنِبِ الْمُنْكَرَ، وَانْظُرْ مَا يُعْجِبُ أُذُنَكَ أَنْ يَقُوْلَ لَكَ الْقَوْمُ إِذَا قُمْتَ مِنْ عِنْدِهِمْ فَأْتِهِ، وَانْظُرِ الَّذِيْ تَكْرَهُ أَنْ يَقُوْلَ لَكَ الْقَوْمُ إِذَا قُمْتَ مِنْ عِنْدِهِمْ فَاجْتَنِبْهُ (بخاری)

ಹರ್ಮಲ(ರ) ಹೇಳುತ್ತಾರೆ- ನಾನು ಪ್ರವಾದಿಯವರೊಡನೆ(ಸ) ಹೀಗೆ ಬಿನ್ನವಿಸಿದೆ - ತಾವು ನನಗೆ ಯಾವ ವಿಷಯಗಳಂತೆ ನಡೆಯಲು ಆಜ್ಞಾಪಿಸುತ್ತೀರಿ? ಪ್ರವಾದಿ(ಸ) ಹೇಳಿದರು- ಒಳಿತಿನ ಕಾರ್ಯಗಳನ್ನು ಮಾಡಿರಿ, ಕೆಡುಕಿನಿಂದ ದೂರವಿರಿ. ನೋಡಿರಿ! ನೀವು ನಿರ್ಗಮಿಸಿದ ಬಳಿಕ ಸಭಿಕರು ನಿಮ್ಮ ಸದ್ಗುಣಗಳನ್ನು ಪ್ರಸ್ತಾಪಿಸಬೇಕೆಂದು ನೀವು ಬಯಸುವುದಾದರೆ ಅಂತಹ ಸದ್ಗುಣಗಳನ್ನು ಬೆಳೆಸಿಕೊಳ್ಳಿರಿ. ನೀವು ನಿರ್ಗಮಿಸಿದ ಬಳಿಕ ಸಭಿಕರು ನಿಮ್ಮ ದುರ್ಗುಣಗಳನ್ನು ಪ್ರಸ್ತಾಪಿಸಬಾರದೆಂದು ನೀವು ಬಯಸುವುದಾದರೆ ಅಂತಹ ದುರ್ಗುಣಗಳಿಂದ ನೀವು ದೂರವಿರಿ. *[ಬುಖಾರಿ]*

❖ ❖ ❖

ಕರ್ಮರಹಿತ ಸಂದೇಶ

ಇತರರಿಗೆ ಉಪದೇಶ

(309) قَالَ رَسُوْلُ اللهِ صَلَّى اللهُ عَلَيْهِ وَسَلَّمَ يُجَاءُ بِالرَّجُلِ يَوْمَ الْقِيَامَةِ فَيُلْقَى فِي النَّارِ فَتَنْدَلِقُ اَقْتَابُهُ فِي النَّارِ فَيَطْحَنُ فِيْهَا كَطَحْنِ الْحِمَارِ بِرَحَاهُ فَيَجْتَمِعُ اَهْلُ النَّارِ عَلَيْهِ فَيَقُوْلُوْنَ اَيْ فُلَانُ مَا شَأْنُكَ؟ اَلَيْسَ كُنْتَ تَأْمُرُنَا بِالْمَعْرُوْفِ وَتَنْهَانَا عَنِ الْمُنْكَرِ؟ قَالَ كُنْتُ آمُرُكُمْ بِالْمَعْرُوْفِ وَلَا آتِيْهِ وَاَنْهَاكُمْ عَنِ الْمُنْكَرِ وَآتِيْهِ
(بخاری — اسامہ بن زید)

ಪ್ರವಾದಿ(ಸ) ಹೇಳಿದರು- ನಿರ್ಣಾಯಕ ದಿನದಂದು ಒಬ್ಬ ವ್ಯಕ್ತಿಯನ್ನು ತಂದು ನರಕಕ್ಕೆ ಎಸೆಯಲಾಗುವುದು. ಅವನ ಕರುಳುಗಳು ಹೊರಗೆ ಬರುವುವು. ಅವನು ಅವುಗಳನ್ನು ಹೊತ್ತು, ಕತ್ತೆಯು ಗಾಣದ ಸುತ್ತ ತಿರುಗುವಂತೆ, ಸುತ್ತು ಬರುವನು. ಇತರ ನರಕವಾಸಿಗಳು ಅವನ ಸುತ್ತ ನೆರೆದು, "ಇದೇನು ನಿನ್ನ ಅವಸ್ಥೆ? ನೀನು ಇಲ್ಲಿಗೆ ಹೇಗೆ ಬಂದೆ? ನೀನು ನಮಗೆ ಒಳಿತಿನ ಆಜ್ಞೆ ನೀಡುತ್ತಿದ್ದೆ. ಕೆಡುಕಿನಿಂದ ತಡೆಯುತ್ತಿದ್ದೆಯಲ್ಲ" ಎಂದು ಕೇಳುವರು. ಆಗ ಅವನು ಹೀಗೆ ಉತ್ತರಿಸುವನು- "ನಾನು ನಿಮಗೆ ಒಳಿತಿನ ಆಜ್ಞೆ ಕೊಡುತ್ತಿದ್ದೆ. ಆದರೆ ನಾನು ಅದರಂತೆ ನಡೆಯುತ್ತಿರಲಿಲ್ಲ. ನಿಮ್ಮನ್ನು ಕೆಡುಕಿನಿಂದ ತಡೆಯುತ್ತಿದ್ದೆ. ಆದರೆ ನಾನು ಸ್ವತಃ ಆ ಕೆಡುಕುಗಳನ್ನು ಮಾಡುತ್ತಿದ್ದೆ." *[ಬುಖಾರಿ - ವರದಿ: ಉಸಾಮಾ ಬಿನ್ ಝೈದ್(ರ)]*

ಬೆಂಕಿಯ ಕತ್ತರಿ

(310) اِنَّ رَسُوْلَ اللهِ صَلَّى اللهُ عَلَيْهِ وَسَلَّمَ قَالَ رَاَيْتُ لَيْلَةَ اُسْرِيَ بِيْ رِجَالًا تُقْرَضُ شِفَاهُهُمْ بِمَقَارِيْضَ مِنْ نَارٍ، فَقُلْتُ مَنْ هٰؤُلَاءِ يَا جِبْرِيْلُ؟ قَالَ هٰؤُلَاءِ خُطَبَاءُ اُمَّتِكَ يَأْمُرُوْنَ النَّاسَ بِالْبِرِّ وَيَنْسَوْنَ اَنْفُسَهُمْ
(مشکوۃ — انس)

ಪ್ರವಾದಿ(ಸ) ಹೇಳಿದರು: ಮಿಅ್‌ರಾಜ್‌ನ ರಾತ್ರಿ ನಾನು ಕೆಲವರ ತುಟಿಗಳನ್ನು ಬೆಂಕಿಯ ಕತ್ತರಿಯಿಂದ ಕತ್ತರಿಸುವುದನ್ನು ಕಂಡೆ. ಇವರು ಯಾರೆಂದು ನಾನು ಜಿಬ್ರೀಲ್‌ರಲ್ಲಿ(ಅ) ಕೇಳಿದೆ. ಅವರು ಹೇಳಿದರು - ಇದು ನಿಮ್ಮ ಸಮುದಾಯದ ಉಪದೇಶಕರು ಮತ್ತು ವಾಗ್ಮಿಗಳು. ಇವರು ಇತರರಿಗೆ ಒಳಿತನ್ನು ಬೋಧಿಸುತ್ತಿದ್ದರು. ಆದರೆ ಸ್ವತಃ ಅದರಂತೆ ನಡೆಯುತ್ತಿರಲಿಲ್ಲ. *[ಮಿಶ್ಕಾತ್: ಹ. ಅನಸ್(ರ)]*

ಜ್ಞಾನ ಮತ್ತು ಕರ್ಮ

(311) عَنِ الْحَسَنِ قَالَ الْعِلْمُ عِلْمَانِ، فَعِلْمٌ فِي الْقَلْبِ فَذَاكَ الْعِلْمُ النَّافِعُ وَعِلْمٌ عَلَى اللِّسَانِ فَذَاكَ حُجَّةُ اللهِ عَزَّ وَجَلَّ عَلَى ابْنِ آدَمَ (مسند دارمی)

ಹ. ಹಸನ್ ಬಸರೀ(ರ) ಹೇಳುತ್ತಾರೆ- ಎರಡು ತರದ ವಿದ್ಯೆಗಳಿವೆ. ಒಂದನೆಯದು ಹೃದಯದೊಳಗೆ ಇಳಿಯುವಂತಹದ್ದು. ಇದುವೇ ನಿರ್ಣಾಯಕ ದಿನದಂದು ಅಲ್ಲಾಹನ ದಾಸನ ಪ್ರಯೋಜನಕ್ಕೆ ಬರುವುದು. ಇನ್ನೊಂದು ವಿದ್ಯೆಯು ಕೇವಲ ನಾಲಗೆಗೆ ತಲಪುತ್ತದೆ, ಹೃದಯದೊಳಗೆ ಇಳಿಯುವುದಿಲ್ಲ. ಈ ವಿದ್ಯೆಯು ಮಹಾ ಪ್ರತಾಪವಂತನಾದ ಅಲ್ಲಾಹನ ನ್ಯಾಯಾಲಯದಲ್ಲಿ ಮನುಷ್ಯನ ವಿರುದ್ಧ ಆಧಾರ ಪ್ರಮಾಣವಾಗಿರುವುದು.

[ಮುಸ್ನದ್ ದಾರಿಮಿ]

ಬೋಧನೆ ಮತ್ತು ಪ್ರಚಾರದ ಮಹತ್ವ

(312) عَنْ أَبِي مُوسَى الأَشْعَرِيِّ قَالَ خَطَبَ رَسُولُ اللهِ صَلَّى اللهُ عَلَيْهِ وَسَلَّمَ
ذات يوم فأثنى على طوائف من المسلمين خيرا، ثم قال ما بال أقوام لا يفقهون
جيرانهم ولا يعلمونهم ولا يعظونهم؟ وما بال أقوام لا يتعلمون من
جيرانهم ولا يتفقهون ولا يتعظون؟ والله ليعلمن قوم جيرانهم ويفقهونهم
ويأمرونهم وينهونهم، وليتعلمن قوم من جيرانهم ويتفقهن ويتعظن أو
لأعاجلنهم العقوبة ثم نزل، فقال قوم من ترونه عنى بهؤلاء؟ قالوا الأشعريين
هم قوم فقهاء ولهم جيران جفاة من أهل المياه والأعراب، فبلغ ذلك الأشعريين
فأتوا رسول الله صلى الله عليه وسلم، وقالوا يا رسول الله ذكرت قوما بخير وذكرتنا
بشر فما بالنا؟ فقال ليعلمن قوم جيرانهم وليعظنهم وليأمرنهم ولينهونهم، وليتعلمن
قوم من جيرانهم ويتعظن ويتفقهن أو لأعاجلنهم العقوبة في الدنيا، فقالوا
يا رسول الله أنفطن غيرنا؟ فأعاد قوله عليهم فأعادوا قولهم أنفطن غيرنا؟
فقال ذلك أيضا، فقالوا أمهلنا سنة، فأمهلهم سنة ليفقهوهم ويعلموهم ويعظوهم،
ثم قرأ رسول الله صلى الله عليه وسلم هذه الآية لعن الذين كفروا
من بني إسرائيل (طبراني)

ಅಬೂ ಮೂಸಾ ಅಶ್‌ಅರಿ(ರ) ಹೇಳುತ್ತಾರೆ- ಪ್ರವಾದಿ(ಸ) ಒಂದು ದಿನ ಭಾಷಣ ಮಾಡುತ್ತಾ ಇವರು ಧರ್ಮದ ವಿಷಯಗಳನ್ನು ಇತರರಿಗೆ ತಲಪಿಸುತ್ತಾರೆಂದು ಕೆಲವರನ್ನು ಪ್ರಶಂಸಿಸಿದರು. ತರುವಾಯ ಹೀಗೆಂದರು- "ಕೆಲವರು ತಮ್ಮ ನೆರೆಹೊರೆಯವರಲ್ಲಿ ಧರ್ಮ ಜ್ಞಾನವನ್ನು ಬೆಳೆಸುವುದಿಲ್ಲವೇಕೆ? ಅವರಿಗೆ ಧರ್ಮದ ಶಿಕ್ಷಣ ನೀಡುವುದಿಲ್ಲವೇಕೆ? ಅವರಿಗೆ ಉಪದೇಶ ಮಾಡುವುದಿಲ್ಲವೇಕೆ? ಕೆಟ್ಟ ವಿಷಯಗಳಿಂದ ಅವರನ್ನು ತಡೆಯುವುದಿಲ್ಲವೇಕೆ? ಇನ್ನು ಕೆಲವರು ಧರ್ಮದ ವಿಷಯಗಳನ್ನು ಕಲಿಯುವುದಿಲ್ಲವೇಕೆ? ತಮ್ಮಲ್ಲಿ ಧರ್ಮದ ಜ್ಞಾನವನ್ನು ಬೆಳೆಸಿಕೊಳ್ಳುವುದಿಲ್ಲವೇಕೆ? ಧರ್ಮವನ್ನು ಅರಿಯದಿರುವುದರ ಪರಿಣಾಮವನ್ನು ಗ್ರಹಿಸುವುದಿಲ್ಲವೇಕೆ?

ಅಲ್ಲಾಹನಾಣೆ! ಜನರು ತಮ್ಮ ಪರಿಸರದವರಿಗೆ ಧರ್ಮವನ್ನು ಕಲಿಸಬೇಕು, ಅವರಲ್ಲಿ ಧಾರ್ಮಿಕ ಜ್ಞಾನ ಬೆಳೆಸಬೇಕು, ಅವರಿಗೆ ಉಪದೇಶ-ಬೋಧನೆ ನೀಡಬೇಕು ಮತ್ತು ಜನರು ಕಡ್ಡಾಯವಾಗಿ ತಮ್ಮ ಪರಿಸರದವರಿಂದ ಧರ್ಮವನ್ನು ಕಲಿಯಬೇಕು. ತಮ್ಮಲ್ಲಿ ಧರ್ಮದ ಜ್ಞಾನವನ್ನು ಬೆಳೆಸಿಕೊಳ್ಳಬೇಕು ಮತ್ತು ಉಪದೇಶವನ್ನು ಸ್ವೀಕರಿಸಬೇಕು, ಅನ್ಯಥಾ ನಾನು ಅವರಿಗೆ ಈ ಲೋಕದಲ್ಲಿ ಶೀಘ್ರ ಶಿಕ್ಷೆ ನೀಡುವೆನು."

ತರುವಾಯ ಪ್ರವಾದಿವರ್ಯರು(ಸ) ವೇದಿಕೆಯಿಂದ ಕೆಳಗಿಳಿದರು. ಅವರ ಸಂಬೋಧನೆ ಯಾರ ಕಡೆಗಿದೆಯೆಂಬ ಬಗ್ಗೆ ಜನರಲ್ಲಿ ಗುಸುಗುಸು ಮಾತುಕತೆ ನಡೆಯಿತು. ಕೆಲವರು ಹೇಳಿದರು, ಅವರ ಸೂಚನೆ ಅಶ್‌ಅರ್ ಗೋತ್ರದ ಕಡೆಗಿತ್ತು. ಅವರು ಧರ್ಮದ ಜ್ಞಾನವನ್ನು ಹೊಂದಿದವರಾಗಿದ್ದರು. ಅವರ ಪರಿಸರದಲ್ಲಿ ಧರ್ಮದ ಜ್ಞಾನವಿಲ್ಲದ ಗ್ರಾಮೀಣರು ವಾಸಿಸುತ್ತಿದ್ದರು, ಅಶ್‌ಅರ್ ಗೋತ್ರದವರು ಅವರಲ್ಲಿ ಸಂದೇಶಪ್ರಚಾರ ಮಾಡುವ ಬಗ್ಗೆ ನಿರ್ಲಕ್ಷರಾಗಿದ್ದರು.

ಪ್ರವಾದಿವರ್ಯರ(ಸ) ಈ ಭಾಷಣದ ಸುದ್ದಿ ಅಶ್‌ಅರ್ ಗೋತ್ರದವರಿಗೆ ಸಿಕ್ಕಿದಾಗ ಅವರು ಪ್ರವಾದಿಯವರ(ಸ) ಬಳಿಗೆ ಬಂದು, ನಮ್ಮಿಂದ ಏನು ತಪ್ಪು ಸಂಭವಿಸಿತು. ತಾವೇಕೆ ನಮ್ಮ ಮೇಲೆ ಕ್ರುದ್ಧರಾಗಿರುವಿರಿ ಎಂದು ಕೇಳಿದರು. ಪ್ರವಾದಿ(ಸ) ಹೇಳಿದರು- ಜನರು ತಮ್ಮ ಪರಿಸರದವರಿಗೆ ಕಡ್ಡಾಯವಾಗಿ ಧರ್ಮವನ್ನು ಕಲಿಸಬೇಕು. ಅವರಿಗೆ ಬೋಧಿಸಬೇಕು, ಅವರನ್ನು ಕೆಡುಕುಗಳಿಂದ ತಡೆಯಬೇಕು. ಅದೇ ರೀತಿ ಜನರು ತಮ್ಮ ನೆರೆಯವರಿಂದ ಧರ್ಮವನ್ನು ಕಲಿಯಬೇಕು, ಉಪದೇಶವನ್ನು ಸ್ವೀಕರಿಸಬೇಕು. ಅನ್ಯಥಾ ನಾನು ಜನರಿಗೆ ಲೋಕದಲ್ಲಿ ಶೀಘ್ರ ಶಿಕ್ಷೆ ನೀಡುವೆನು. ಅಶ್‌ಅರ್ ಗೋತ್ರದವರು, 'ಧರ್ಮದ ಶಿಕ್ಷಣ ಮತ್ತು ಧರ್ಮಪ್ರಚಾರವೂ ನಮ್ಮ ಕರ್ತವ್ಯವೇ' ಎಂದು ಕೇಳಿದರು. ಆಗ ಪ್ರವಾದಿ(ಸ), "ಹೌದು, ಇದೂ ನಿಮ್ಮ ಜವಾಬ್ದಾರಿಕೆಯಾಗಿದೆ" ಎಂದರು. ಆ ಜನರು (ಧರ್ಮ ಪ್ರಚಾರ ಕಾರ್ಯ ಮಾಡಲಿಕ್ಕಾಗಿ) ಒಂದು ವರ್ಷದ ಕಾಲಾವಕಾಶ ನೀಡಬೇಕೆಂದು ಬಿನ್ನವಿಸಿದರು. ಪ್ರವಾದಿ(ಸ) ಅವರಿಗೆ ಒಂದು ವರ್ಷದ ಕಾಲಾವಕಾಶ ನೀಡಿದರು. ತರುವಾಯ ಅವರು ಈ ಆಯತ್ ಪಠಿಸಿದರು- "ಲುಇನಲ್ಲದೀನ ಕಫರೂ ಮಿನ್ ಬನೀ ಇಸ್ರಾಈಲ." *[ತಬ್ರಾನೀ]*

ಟಿಪ್ಪಣಿ: ಪ್ರವಾದಿ(ಸ) ಪ್ರಸ್ತುತ ಆಯತ್ ಪಠಿಸುವ ಮೂಲಕ ನಮಗೆ ತಿಳಿಯಪಡಿಸ ಬಯಸಿದ್ದರು. ಬನೀ ಇಸ್ರಾಈಲರು ಆಜ್ಞೋಲ್ಲಂಘನೆ ಮಾಡುವವರನ್ನು ತಡೆಯುತ್ತಿರಲಿಲ್ಲ. ಅದರಿಂದಾಗಿ ಅವರ ಮೇಲೆ ಅಲ್ಲಾಹನ ಕ್ರೋಧ ಎರಗಿತ್ತು. ನೀವೂ ಅದೇ ತರ ಆಜ್ಞೋಲ್ಲಂಘನೆ ಮಾಡುವವರ ಕೈ ಹಿಡಿಯದಿದ್ದರೆ ಮತ್ತು ತಪ್ಪಾದ ಮೃದುನೀತಿ ಅನುಸರಿಸಿದರೆ ನೀವೂ ಅವನ ಕ್ರೋಧಕ್ಕೆ ಪಾತ್ರರಾಗುವಿರಿ.

ಕೆಡುಕಿನಿಂದ ತಡೆಯುವುದು ಕಡ್ಡಾಯ

(313) عن النعمان بن بشير قال، قال رسول الله صلى الله عليه وسلم
مثل المدهن في حدود الله والواقع فيها مثل قوم استهموا سفينة فصار بعضهم
في أسفلها وصار بعضهم في أعلاها، فكان الذي في أسفلها يمر بالماء على الذين
في أعلاها، فتأذوا به، فأخذ فأسا فجعل ينقر أسفل السفينة، فأتوه فقالوا
ما لك؟ قال تأذيتم بي ولا بد لي من الماء، فإن أخذوا على يديه أنجوه
ونجوا أنفسهم، وإن تركوه أهلكوه وأهلكوا أنفسهم (بخاري)

ನುಅ್‌ಮಾನ್ ಬಿನ್ ಬಶೀರ್(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು- ಅಲ್ಲಾಹನ ಆಜ್ಞೋಲ್ಲಂಘನೆ ಮಾಡುವವರ ಮತ್ತು ಅವರನ್ನು ತಡೆಯದೆ ಕಣ್ಣು ಮುಚ್ಚಿಕೊಳ್ಳುವವರ ಉದಾಹರಣೆಯು ಹಡಗಿನ ಪ್ರಯಾಣಿಕರಂತಿದೆ. ಹಡಗು ಎರಡಂತಸ್ತಿನದ್ದಾಗಿದ್ದು ಚೀಟಿ ಎತ್ತುವ ಮೂಲಕ ಕೆಲವರು ಮೇಲಿನ ಅಂತಸ್ತಿನಲ್ಲಿ ಕುಳಿತರು. ಇನ್ನು ಕೆಲವರು ಕೆಳ ಅಂತಸ್ತಿನಲ್ಲಿ ಕುಳಿತರು. ನದಿಯ ನೀರು ತೆಗೆಯಲಿಕ್ಕಾಗಿ ಕೆಳ ಅಂತಸ್ತಿನವರು ಮೇಲೆ ಹೋಗುತ್ತಿರುವಾಗ ಮೇಲಿನವರಿಗೆ ಕಿರಿಕಿರಿಯಾಗುತ್ತಿತ್ತು. ಅವರು ಹುಬ್ಬುಗಂಟಿಕ್ಕುತ್ತಿದ್ದರು. ಆಗ ಕೆಳಗಿನವರು ಒಂದು ಕೊಡಲಿ ತೆಗೆದು ಹಡಗಿನ ಹಲಗೆಗಳನ್ನು ಕೀಳತೊಡಗಿದರು. ಮೇಲಿನವರು, 'ಇದೇನು ಮಾಡುತ್ತೀರೆ'ಂದು ಕೇಳಿದರು. ಕೆಳಗಿನವರು ಹೀಗೆ ಉತ್ತರಿಸಿದರು- "ನಮಗೆ ನೀರು ಬೇಕಾಗಿದೆ. ನೀರಿಗಾಗಿ ಮೇಲೆ ಬಂದರೆ ನಿಮಗೆ ತೊಂದರೆಯಾಗುತ್ತದೆ. ಆದುದರಿಂದ ಹಡಗಿನ ಹಲಗೆ ಕಿತ್ತು ನಾವು ನೀರು ಪಡೆಯುವೆವು."

ಪ್ರವಾದಿ(ಸ) ಈ ಉದಾಹರಣೆ ನೀಡಿದ ಬಳಿಕ ಹೀಗೆಂದರು - ಮೇಲಿನವರು ಕೆಳಗಿನವರ ಕೈಹಿಡಿದರೆ ಮತ್ತು ಹಲಗೆ ಕೀಳುವುದನ್ನು ತಡೆದರೆ ಅವರು ತಮ್ಮನ್ನೂ ಕೆಳಗಿನವರನ್ನೂ ರಕ್ಷಿಸಿಕೊಳ್ಳುವರು. ಇನ್ನು ಅವರು ಅವರ ಈ ಕೃತ್ಯವನ್ನು ತಡೆಯದಿದ್ದರೆ ಅವರನ್ನೂ ಮುಳುಗಿಸುವರು. ತಾವೂ ಮುಳುಗಿ ಹೋಗುವರು.

[ಬುಖಾರಿ]

ಸಂದೇಶ ಪ್ರಚಾರಕ್ಕೆ ಆಧುನಿಕ ಮಾಧ್ಯಮಗಳು

(314) عَنْ زَيْدِ بْنِ ثَابِتٍ قَالَ أَمَرَنِي رَسُوْلُ اللّٰهِ صلى الله عليه وسلم أَنْ أَتَعَلَّمَ السِّرْيَانِيَّةَ، وَفِي رِوَايَةٍ أَنَّهُ أَمَرَنِي أَنْ أَتَعَلَّمَ كِتَابَ يَهُوْدَ، وَقَالَ إِنِّي مَا آمَنُ يَهُوْدَ عَلَى كِتَابٍ، قَالَ فَمَا مَرَّ بِي نِصْفُ شَهْرٍ حَتّٰى تَعَلَّمْتُ، فَكَانَ إِذَا كَتَبَ إِلَى يَهُوْدَ كَتَبْتُ، وَإِذَا كَتَبُوْا إِلَيْهِ قَرَأْتُ لَهُ كِتَابَهُمْ (المنذرى)

ಝ್ಯೆದ್ ಬಿನ್ ಸಾಬಿತ್(ರ) ಹೇಳುತ್ತಾರೆ- ಪ್ರವಾದಿ(ಸ) ನನಗೆ ಸಿರಿಯನ್ ಭಾಷೆ ಕಲಿಯುವಂತೆ ಆಜ್ಞಾಪಿಸಿದರು. ಇನ್ನೊಂದು ವರದಿ ಪ್ರಕಾರ ಪ್ರವಾದಿಯವರು(ಸ) ನನಗೆ ಯಹೂದ್ಯರ ಅಕ್ಷರ ಕಲಿಯುವಂತೆ ಆದೇಶಿಸುತ್ತಾ, ನನಗೆ ಯಹೂದಿಯರ ಯಾವುದೇ ಬರಹದ ಮೇಲೆ ನಂಬಿಕೆಯಿಲ್ಲವೆಂದರು. ನಾನು ಕೇವಲ ಹದಿನೈದು ದಿನಗಳಲ್ಲಿ ಯಹೂದಿಯರ ಅರಾಮಿಕ್ ಭಾಷೆ ಕಲಿತೆ. ಪ್ರವಾದಿ(ಸ) ಯಹೂದಿಯರಿಗೆ ಪತ್ರ ಬರೆಯ ಬಯಸಿದರೆ ನಾನು ಅರಾಮಿಕ್ ಭಾಷೆಯಲ್ಲಿ ಬರೆಯುತ್ತಿದ್ದೆ. ಯಹೂದಿಯರ ಕಡೆಯಿಂದ ಪ್ರವಾದಿಯವರಿಗೆ(ಸ) ಯಾವುದಾದರೂ ಪತ್ರ ಬಂದರೆ ನಾನು ಅದನ್ನು ಓದಿ ಕೇಳಿಸುತ್ತಿದ್ದೆ. *[ಅಲ್ ಮುಂದಿರಿ]*

ಟಿಪ್ಪಣಿ: ಸಿರಿಯನ್ ಭಾಷೆಯು ಕ್ರೈಸ್ತರ ಭಾಷೆಯಾಗಿದೆ. ಪ್ರವಾದಿ(ಸ) ಹ. ಝ್ಯೆದ್‌ರಿಗೆ(ರ) ಸಿರಿಯನ್ ಮತ್ತು ಅರಾಮಿಕ್ ಭಾಷೆಗಳೆರಡನ್ನೂ ಕಲಿಯಲು ಆಜ್ಞಾಪಿಸಿರಬಹುದು. ಎಲ್ಲ ಭಾಷೆಗಳೂ ಅಲ್ಲಾಹನ ಅನುಗ್ರಹದಿಂದಲೇ ಅಸ್ತಿತ್ವಕ್ಕೆ ಬಂದಿವೆ. ಸತ್ಯಪ್ರಚಾರದ ಕೆಲಸ ಯಾವ ದೇಶದಲ್ಲೇ ನಡೆಯುತ್ತಿರಲಿ, ಅಲ್ಲಿನ ಭಾಷೆಗಳನ್ನು ಕಲಿಯುವ ಮೂಲಕ ಆ ದೇಶದ ಜನರಿಗೆ ಅಲ್ಲಾಹನ ಸಂದೇಶವನ್ನು ಅವರ ಭಾಷೆಯಲ್ಲೇ ತಲಪಿಸಬೇಕು. ಅದೇ ರೀತಿಯಲ್ಲಿ ಆಧುನಿಕ ಜಗತ್ತು ನೀಡುವ ಎಲ್ಲ ಪ್ರಚಾರ-ಪ್ರಸಾರ ಮಾಧ್ಯಮಗಳನ್ನೂ ಸಂದೇಶ ಪ್ರಚಾರಕರು ಬಳಸಿಕೊಳ್ಳಬೇಕು.

ಸತ್ಯಪ್ರಚಾರಕ ಮತ್ತು ಸಹನೆ

(315) عَنْ عَمَّارِ بْنِ يَاسِرٍ قَالَ بَعَثَنِيْ رَسُوْلُ اللّٰهِ صلى الله عليه وسلم
إِلَى حَيٍّ مِنْ قَيْسٍ أُعَلِّمُهُمْ شَرَائِعَ الْإِسْلَامِ، فَإِذَا هُمْ قَوْمٌ كَأَنَّهُمُ الْإِبِلُ الْوَحْشِيَّةُ،
لَيْسَ لَهُمْ هَمٌّ إِلَّا شَاةٌ أَوْ بَعِيْرٌ، فَانْصَرَفْتُ إِلَى رَسُوْلِ اللّٰهِ صلى الله عليه وسلم،
فَقَالَ يَا عَمَّارُ مَا عَمِلْتَ؟ فَقَصَصْتُ عَلَيْهِ قِصَّةَ الْقَوْمِ وَأَخْبَرْتُهُ بِمَا فِيْهِمْ مِنَ السَّهْوَةِ
فَقَالَ يَا عَمَّارُ أَلَا أُخْبِرُكَ بِأَعْجَبَ مِنْهُمْ؟ قَوْمٌ عَلِمُوْا مَا جَهِلَ أُولٰئِكَ ثُمَّ سَهَوْا كَسَهْوِهِمْ

(المنذري بحواله طبراني)

ಅಮ್ಮಾರ್ ಬಿನ್ ಯಾಸಿರ್(ರ) ಹೇಳುತ್ತಾರೆ- ನನ್ನನ್ನು ಪ್ರವಾದಿ(ಸ) ಕೈಸ್ ಗೋತ್ರದ ಕಡೆಗೆ ಧರ್ಮವಿಧಿಗಳನ್ನು ಬೋಧಿಸಲು ಕಳಿಸಿದರು. ಅಲ್ಲಿಗೆ ತಲಪಿದಾಗ, ಈ ಜನರು ಬೆದರಿದ ಒಂಟೆಗಳಂತಿದ್ದಾರೆ, ಅವರು ಲೋಕಾರಾಧಕರಾಗಿದ್ದು ಅವರ ಜೀವನಕ್ಕೆ ಯಾವುದೇ ಉದ್ದೇಶವಿಲ್ಲ, ಅವರ ಸಂಪೂರ್ಣ, ಆಸಕ್ತಿ ಅವರ ಆಡು-ಒಂಟೆಗಳ ಮೇಲೆ ಕೇಂದ್ರೀಕೃತ ವಾಗಿದೆಯೆಂಬ ವಿಷಯ ನನ್ನ ಗಮನಕ್ಕೆ ಬಂತು.

ಅಲ್ಲಿಂದ ನಾನು ಮರಳಿ ಪ್ರವಾದಿಯವರ(ಸ) ಬಳಿಗೆ ಬಂದಾಗ ಅವರು, ಅಮ್ಮಾರ್! ಏನು ಮಾಡಿದೆ (ವರದಿ ನೀಡು) ಎಂದು ಕೇಳಿದರು. ನಾನು ಹೇಳಿದೆ- ಅವರು ಧರ್ಮದ ಬಗ್ಗೆ ಸಂಪೂರ್ಣ ಅಲಕ್ಷ್ಯರಾದ ಜನರಾಗಿದ್ದಾರೆ. ಪ್ರವಾದಿ(ಸ) ಹೇಳಿದರು- ಅವರಿಗಿಂತಲೂ ಆಶ್ಚರ್ಯಜನಕ ಸ್ಥಿತಿ ಎಲ್ಲವನ್ನೂ ಅರಿತೂ ಅವರಂತೆಯೇ ಧರ್ಮದಿಂದ ಅಲಕ್ಷ್ಯರಾಗಿರು ವವರದ್ದಾಗಿದೆ. *[ಅಲ್‌ಮುಂದಿರೀ - ತಬ್ರಾನಿಯಿಂದ]*

ಟಿಪ್ಪಣಿ: ಈ ಮಂದಿಗೆ ಧರ್ಮದ ಕುರಿತು ತಿಳುವಳಿಕೆಯಿಲ್ಲ. ಸುದೀರ್ಘ ಕಾಲದಿಂದ ಅಜ್ಞಾನದ ಜೀವನ ಸಾಗಿಸುತ್ತಾ ಬಂದಿದ್ದಾರೆ. ಅವರು ಧರ್ಮದ ಕುರಿತು ನಿರ್ಲಕ್ಷ್ಯ ತೋರಿದರೆ ಅದರಲ್ಲಿ ಆಶ್ಚರ್ಯವಿಲ್ಲ. ಆದರಿಂದ ಧರ್ಮಪ್ರಚಾರಕರು ಹತಾಶರಾಗುವ ಅಗತ್ಯವೂ ಇಲ್ಲ.

ಸೀರತ್ ಇಬ್ನು ಹಿಶಾಮ್‌ನಲ್ಲಿ ವಿವರಿಸಲಾದ ಕೆಲವು ಘಟನೆಗಳಿಂದಲೂ ಪ್ರಸ್ತುತ ಹದೀಸ್ ನಿಂದಲೂ ಪ್ರವಾದಿ(ಸ) ಧರ್ಮ ಪ್ರಚಾರಕ್ಕಾಗಿ ಜನರನ್ನು ಕಳಿಸುತ್ತಲೂ ಇದ್ದರು, ಅವರಿಂದ ವರದಿ ಪಡೆಯುತ್ತಲೂ ಇದ್ದರು ಎಂದು ತಿಳಿದು ಬರುತ್ತದೆ.

ಕೆಟ್ಟ ಭಾಷಣಕಾರರು

(316) إِنَّ النَّبِيَّ صلى الله عليه وسلم قَالَ هَلَكَ الْمُتَنَطِّعُونَ قَالَهَا ثَلَاثًا
(مسلم — ابن مسعودؓ)

ಪ್ರವಾದಿ(ಸ) ಹೇಳಿದರು: ತೋರಿಕೆಗಾಗಿ ವಾಗ್ವೈಖರಿಯನ್ನು ಪ್ರದರ್ಶಿಸುವವರು ಹಾಳಾಗಿ ಹೋಗಲಿ. ಈ ಮಾತನ್ನು ಅವರು ಮೂರು ಸಲ ಹೇಳಿದರು.

[ಮುಸ್ಲಿಮ್- ವರದಿ: ಇಬ್ನು ಮಸ್‌ವೂದ್(ರ)]

ಟಿಪ್ಪಣಿ: ಹೆಚ್ಚಿನ ಭಾಷಣಕಾರರು ಜನರ ಮೇಲೆ ತಮ್ಮ ಪ್ರಭಾವ ಬೀರಲಿಕ್ಕಾಗಿ ಮತ್ತು ಅವರಿಗೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲಿಕ್ಕಾಗಿ ತಮ್ಮ ವಾಗ್ವೈಖರಿಯ ಹೊಳೆ ಹರಿಸುತ್ತಾರೆ. ಅವರಿಗೆ ಪ್ರವಾದಿಯವರು(ಸ) ಸರಳ ಮತ್ತು ನಿರರ್ಗಳವಾಗಿ ಹೊರಡುವ ಶಬ್ದಗಳನ್ನು ಬಳಸುವಂತೆ ಆದೇಶಿಸಿದ್ದಾರೆ. ವಾಗ್ವೈಖರಿಯ ಪ್ರದರ್ಶನವನ್ನು ಅಲ್ಲಾಹನು ಮೆಚ್ಚುವುದಿಲ್ಲ.

ಸತ್ಯ ಪ್ರಚಾರಕನ ಅಸ್ತ್ರ

(317) عَنِ ابْنِ عَبَّاسٍ فِي قَوْلِهِ تَعَالَى اِدْفَعْ بِالَّتِي هِيَ اَحْسَنُ، قَالَ الصَّبْرُ عِنْدَ الْغَضَبِ وَالصَّبْرُ عِنْدَ الْإِسَاءَةِ، فَإِذَا فَعَلُوا عَصَمَهُمُ اللّٰهُ وَخَضَعَ لَهُمْ عَدُوُّهُمْ كَأَنَّهُ وَلِيٌّ حَمِيمٌ
(بخاری)

ಇಬ್ನು ಅಬ್ಬಾಸ್(ರ) ಅವರು, 'ಇದ್‌ಫಅ್ ಬಿಲ್ಲತೀ ಹಿಯ ಅಹ್ಸನ್' (ಹಾಮ್ಮೀಮ್ ಅಸ್ಸಜ್ದ- 34) ಎಂಬ ಆಯತನ್ನು ವ್ಯಾಖ್ಯಾನಿಸುತ್ತಾ ಹೇಳಿದರು- ಸತ್ಯಪ್ರಚಾರಕನು ಸಹನ ಶೀಲನೂ ಸಂಯಮಿಯೂ ಆಗಿರಬೇಕು. ಜನರು ಕೋಪ ಬರಿಸುವಂತಹ ಕೃತ್ಯಗಳನ್ನೆಸಗಿದರೆ ಅಂತಹ ಸಂದರ್ಭದಲ್ಲಿ ಸತ್ಯಪ್ರಚಾರಕನು ಉದ್ರೇಕಗೊಳ್ಳಬಾರದು. ದುರ್ವರ್ತನೆಯನ್ನು ಕ್ಷಮಿಸುವ ಮೂಲಕ ಅದಕ್ಕೆ ಉತ್ತರ ನೀಡಬೇಕು. ಸತ್ಯಪ್ರಚಾರಕರ ಬಳಿ ಈ ಎರಡು ಆಯುಧಗಳಿದ್ದಲ್ಲಿ ಶತ್ರುಗಳು ಅವರಿಗೆ ಶರಣಾಗುವರು, ಮಾತ್ರವಲ್ಲ, ಅವರು ಇವರ ಆಪ್ತ ಸ್ನೇಹಿತರೂ ಪ್ರಬಲ ಬೆಂಬಲಿಗರೂ ಆಗಬಲ್ಲರು. *[ಬುಖಾರಿ]*

ಧರ್ಮಪ್ರಚಾರದ ವಿಧಾನ

(318) قَالَ النَّبِيُّ صلى الله عليه وسلم يَسِّرَا وَلَا تُعَسِّرَا وَقَرِّبَا وَلَا تُنَفِّرَا
(جمع الفوائد)

ಪ್ರವಾದಿಯವರು(ಸ) ಹ. ಮುಆದ್ ಬಿನ್ ಜಬಲ್ ಮತ್ತು ಅಬೂ ಮೂಸಾ ಅಶ್‌ಅರೀಯವರನ್ನು(ರ) ಯಮನ್‌ಗೆ ರವಾನಿಸುವಾಗ ಅವರಿಗೆ ಹೀಗೆ ಉಪದೇಶಿಸಿದರು- ನೀವಿಬ್ಬರೂ ಧರ್ಮವನ್ನು ಜನರಿಗೆ ಸರಳಗೊಳಿಸಬೇಕು. ಕಠಿಣಗೊಳಿಸಬಾರದು. ಜನರನ್ನು ತಮ್ಮ ಧರ್ಮಕ್ಕೆ ಹತ್ತಿರವಾಗಿಸಬೇಕು. ಜನರು ಧರ್ಮದಿಂದ ಭಯಭೀತರಾಗಿ ದೂರ ಓಡುವಂತೆ ಮಾಡಬಾರದು. *[ಜಮ್‌ಉಲ್ ಫವಾಇದ್]*

ಟಿಪ್ಪಣಿ: ಜನರ ಮುಂದೆ ಧರ್ಮವನ್ನು ಸರಳ ರೀತಿಯಲ್ಲಿ ಮಂಡಿಸಬೇಕು. ಇದು ಸುಲಭದ ದಾರಿ. ಇದರಲ್ಲಿ ನಾವು ನಡೆಯಬಲ್ಲೆವು ಎಂದು ಅವರಿಗೆ ಭಾಸವಾಗಬೇಕು. ಧರ್ಮವನ್ನು ಬೋಧಿಸುವಾಗ ಅದನ್ನು ಕೇಳಿ ಜನರು ಧೈರ್ಯಗುಂದುವಂತಹ ಮತ್ತು ಧರ್ಮವನ್ನು ದೊಡ್ಡ ಪರ್ವತವೆಂದು ಬಗೆದು ಅದನ್ನು ಏರಲು ನಮ್ಮಿಂದ ಸಾಧ್ಯವಿಲ್ಲವೆಂದು ಭಾವಿಸುವಂತಹ ಶೈಲಿಯನ್ನು ಬಳಸಬಾರದು. ಅದರೊಂದಿಗೆ ಸತ್ಯ ಪ್ರಚಾರಕನ ಜೀವನವೂ ಜನರನ್ನು ಆಕರ್ಷಿಸುವಂತಿರಬೇಕು ಮತ್ತು ಅವರು ಧರ್ಮಕ್ಕೆ ಹತ್ತಿರ ಬರುವಂತಿರಬೇಕು, ಧರ್ಮದಿಂದ ಹೆದರಿ ದೂರ ಓಡುವಂತಿರಬಾರದು.

ಇಲ್ಲಿ ಇನ್ನೊಂದು ಪ್ರವಾದಿವಚನವನ್ನು ಉಲ್ಲೇಖಿಸುವುದು ಸೂಕ್ತವೆನಿಸೀತು. ಯಾರೋ ಪ್ರವಾದಿಯವರ(ಸ) ಬಗ್ಗೆ ಅಸಭ್ಯ ಮಾತುಗಳನ್ನಾಡಿದರು. ಸಹಾಬಿಗಳು ಆಕ್ರೋಶಗೊಂಡರು. ಅವರು ಆತನನ್ನು ಕೊಂದು ಹಾಕುವುದರಲ್ಲಿದ್ದರು. ಆದರೆ ಪ್ರವಾದಿ(ಸ) ಅವರನ್ನು ತಡೆದು, ಯುಕ್ತಿಪೂರ್ಣ ಸತ್ಯಪ್ರಚಾರದ ಕಡೆಗೆ ಮಾರ್ಗದರ್ಶನ ಮಾಡುತ್ತಾ ಹೀಗೆಂದರು- ನನ್ನ ಮತ್ತು ಈ ವ್ಯಕ್ತಿಯ ಉದಾಹರಣೆಯನ್ನು ಹೀಗೆ ಗ್ರಹಿಸಿರಿ- ಒಬ್ಬನ ಬಳಿ ಒಂದು ಒಂಟೆಯಿತ್ತು. ಒಮ್ಮೆ ಅದು ಯಾವುದೋ ಕಾರಣದಿಂದ ಕೋಪಗೊಂಡು ಓಡಿತು. ಜನರು ಅದರ ಬೆನ್ನಟ್ಟಿ ಹೋದರು. ಅದನ್ನು ಬಲ ಪ್ರಯೋಗಿಸಿ ನಿಯಂತ್ರಿಸ ಬಯಸಿದರು. ಆದರೆ ಅದು ಇನ್ನಷ್ಟು ಕೆರಳಿತು. ಯಾವ ರೀತಿಯಲ್ಲೂ ಅದು ನಿಯಂತ್ರಣಕ್ಕೆ ಬರಲಿಲ್ಲ. ಆಗ ಅದರ ಮಾಲಿಕ ಬಂದು, ಒಂಟೆಯನ್ನು ನನಗೆ ಬಿಟ್ಟು ಬಿಡಿರಿ- ಅದನ್ನು ನಿಯಂತ್ರಿಸುವುದು ಹೇಗೆಂದು ನನಗೆ ತಿಳಿದಿದೆ ಎಂದನು. ಅವನು ಒಂಟೆಯ ಹಿಂದಿನಿಂದ ಓಡುವುದನ್ನು ಬಿಟ್ಟು ಅದರ ಮುಂದೆ ಬಂದನು. ಕೈಯಲ್ಲಿ ಹುಲ್ಲು ಹಿಡಿದುಕೊಂಡು ಪ್ರೀತಿಯಿಂದ ಕರೆದನು. ಆಗ ಅದು ಅವನ ಬಳಿಗೆ ಬಂದು ಕುಳಿತಿತು. ಕೂಡಲೇ ಅವನು ಅದರ ಮೇಲೆ ಜೀನು ಹಾಕಿ ಸವಾರಿ ಮಾಡಿದನು.

ಧರ್ಮದ ಬಗ್ಗೆ ಮೃದುನೀತಿ

(319) قال رسول الله صلى الله عليه وسلم لما وقعت بنو إسرائيل
في المعاصي نهتهم علماؤهم فلم ينتهوا، فجالسوهم في مجالسهم وآكلوهم و
شاربوهم، فضرب الله قلوب بعضهم ببعض، فلعنهم على لسان داود وعيسى
بن مريم ذلك بما عصوا وكانوا يعتدون، قال فجلس رسول الله صلى الله عليه وسلم
وكان متكئا، فقال لا، والذي نفسي بيده لتأمرن بالمعروف ولتنهون عن المنكر
ولتأخذن على يدي الظالم ولتأطرنه على الحق أطرا أو ليضربن بقلوب بعضكم
على بعض ثم ليلعننكم كما لعنهم (مشكوة — عبد الله ابن مسعود)

ಪ್ರವಾದಿ(ಸ) ಹೇಳಿದರು- ಬನೀ ಇಸ್ರಾಈಲರು ಅಲ್ಲಾಹನ ಆಜ್ಞೋಲ್ಲಂಘನೆ ಮಾಡತೊಡಗಿದಾಗ ಸಮುದಾಯದ ವಿದ್ವಾಂಸರು ಅವರನ್ನು ತಡೆದರು. ಆದರೆ ಅವರು ಕೇಳಲಿಲ್ಲ. ಆಗ ಅವರ ವಿದ್ವಾಂಸರು (ಅವರನ್ನು ಬಹಿಷ್ಕರಿಸುವ ಬದಲು) ಅವರ ಸಭೆಗಳಲ್ಲಿ ಹೋಗಿ ಕುಳಿತರು. ಅವರೊಂದಿಗೆ ಊಟ ಮಾಡತೊಡಗಿದರು. ಆಗ ಅಲ್ಲಾಹನು ಅವರೆಲ್ಲರ ಹೃದಯಗಳನ್ನು ಒಂದೇ ರೀತಿ ಮಾಡಿಬಿಟ್ಟನು. ತರುವಾಯ ಅಲ್ಲಾಹನು ಹ. ದಾವೂದ್ ಮತ್ತು ಈಸಾರ(ಅ) ಮೂಲಕ ಅವರ ಮೇಲೆ ಶಾಪ ಹಾಕಿದನು. ಯಾಕೆಂದರೆ ಅವರು ಆಜ್ಞೋಲ್ಲಂಘನೆಯ ಮಾರ್ಗವನ್ನು ತುಳಿದು ಅದರಲ್ಲೇ ಮುಂದುವರಿದಿದ್ದರು.

ಈ ಹದೀಸ್‌ನ ವರದಿಗಾರ ಹ. ಅಬ್ದುಲ್ಲಾ ಬಿನ್ ಮಸ್‌ಊದ್(ರ) ಹೇಳುತ್ತಾರೆ- ಪ್ರವಾದಿ(ಸ) ಒರಗಿ ಕುಳಿತಿದ್ದವರು ನೇರವಾಗಿ ಕುಳಿತರು. ಅನಂತರ ಹೀಗೆಂದರು- ನನ್ನ ಪ್ರಾಣ ಯಾರ ಕೈಯಲ್ಲಿರುವುದೋ ಆತನಾಣೆ! ನೀವು ಜನರಿಗೆ ಒಳಿತಿನ ಆಜ್ಞೆ ನೀಡಲೇ ಬೇಕು. ಕೆಡುಕಿನಿಂದ ತಡೆಯಲೇಬೇಕು. ಅಕ್ರಮಿಯ (ಆಜ್ಞೋಲ್ಲಂಘಕ) ಎರಡೂ ಕೈಗಳನ್ನು ಹಿಡಿದು ಆತನನ್ನು ಸತ್ಯದ ಕಡೆಗೆ ತಿರುಗಿಸಬೇಕು. ಅನ್ಯಥಾ ನಿಮ್ಮೆಲ್ಲರ ಹೃದಯಗಳಿಗೂ ಪರಸ್ಪರ ಅಂಟುವ್ಯಾಧಿ ತಗಲಬಹುದು. ಅನಂತರ ಅಲ್ಲಾಹನು ಬನೀ ಇಸ್ರಾಈಲರನ್ನು ಮಾಡಿದಂತೆ ನಿಮ್ಮೆಲ್ಲರನ್ನು ತನ್ನ ಕೃಪೆಯಿಂದ ದೂರ ಎಸೆದು ಬಿಡುವನು.

[ಮಿಶ್ಕಾತ್- ಅಬ್ದುಲ್ಲಾ ಬಿನ್ ಮಸ್‌ಊದ್(ರ)]

ಮಿಥ್ಯದ ಪ್ರಾಬಲ್ಯದ ವೇಳೆ ಸತ್ಯದವಾಹಕರ ಕರ್ತವ್ಯ

(320) عَنْ اَبِیْ سَعِیْدِنِ الْخُدْرِیِّ اَنَّ رَسُوْلَ اللّٰهِ قَالَ مَنْ رَاٰی مِنْکُمْ مُنْکَرًا فَغَیَّرَهٗ بِیَدِهٖ
فَقَدْ بَرِئَ، وَمَنْ لَّمْ یَسْتَطِعْ اَنْ یُّغَیِّرَهٗ بِیَدِهٖ فَغَیَّرَهٗ بِلِسَانِهٖ فَقَدْ بَرِئَ وَمَنْ لَّمْ
یَسْتَطِعْ اَنْ یُّغَیِّرَهٗ بِلِسَانِهٖ فَغَیَّرَهٗ بِقَلْبِهٖ فَقَدْ بَرِئَ وَذٰلِکَ اَضْعَفُ الْاِیْمَانِ (نسائی)

ಅಬೂ ಸಈದ್ ಖುದ್ರೀ(ರ) ವರದಿ ಮಾಡುತ್ತಾರೆ- ಪ್ರವಾದಿ(ಸ) ಹೇಳಿದರು: ನಿಮ್ಮಲ್ಲಿ ಒಬ್ಬನು ಸಮಾಜದಲ್ಲಿ ಯಾವುದಾದರೂ ಕೆಡುಕನ್ನು ನೋಡಿದಾಗ ಬಲಪ್ರಯೋಗದಿಂದ ಅದನ್ನು ನಿವಾರಿಸಿದರೆ ಅವನು ಅಲ್ಲಾಹನ ಹಿಡಿತದಿಂದ ಪಾರಾಗುವನು. ಶಕ್ತಿಯಿಲ್ಲದ ಕಾರಣ ಒಬ್ಬನು ಬಾಯಿಯಿಂದ ಈ ಕೆಡುಕಿನ ವಿರುದ್ಧ ಧ್ವನಿಯೆತ್ತಿದರೆ ಅವನೂ ಪಾರಾಗುವನು. ಅದಕ್ಕೂ ಸಾಧ್ಯವಿಲ್ಲವೆಂದಾದರೆ ಮನಸ್ಸಿನಲ್ಲಾದರೂ ಕೆಡುಕನ್ನು ದ್ವೇಷಿಸಿದರೆ ಅವನೂ ಪಾರಾಗುವನು ಮತ್ತು ಇದು ವಿಶ್ವಾಸದ(ಈಮಾನ್) ಅತ್ಯಂತ ದುರ್ಬಲ ಹಂತವಾಗಿದೆ.

[ನಸಾಈ]

ಟಿಪ್ಪಣಿ: ಕೆಡುಕನ್ನು ಯಾರು ಮನಸ್ಸಿನಲ್ಲಿ ದ್ವೇಷಿಸುವುದಿಲ್ಲವೋ ಅವನು ಎಷ್ಟೇ ಧರ್ಮನಿಷ್ಠನಾದರೂ ಅಲ್ಲಾಹನ ಹಿಡಿತದಿಂದ ತಪ್ಪಿಸಿಕೊಳ್ಳುವಂತಿಲ್ಲವೆಂದು ಈ ಹದೀಸ್ ಕಲಿಸುತ್ತದೆ. ಮಿಥ್ಯದ ಪ್ರಾಬಲ್ಯವಿರುವಾಗ ಸತ್ಯದವಾಹಕರಲ್ಲಿ ಸತ್ಯದ ಬಗ್ಗೆ ಅಭಿಮಾನವಿರಬೇಕು. ಅಂತಹ ಪರಿಸ್ಥಿತಿಯಲ್ಲಿ ಸುಖನಿದ್ರೆಯಲ್ಲಿರುವುದು ಮತ್ತು ಸಮಾಧಾನದಿಂದಿರುವುದು ಅಪಮಾನದ ಸೂಚನೆಯಾಗಿದೆ ಮತ್ತು ಅದು ಸತ್ಯನಿಷ್ಠೆಯ ಕೊರತೆಯ ದ್ಯೋತಕವಾಗಿದೆ ಎಂದೂ ಈ ಹದೀಸ್ ತಿಳಿಸುತ್ತದೆ.

ಸತ್ಯನಿಷ್ಠೆಯ ಬೇಡಿಕೆ

(321) عَنْ مُعَاذِ بْنِ جَبَلٍ قَالَ، قَالَ رَسُوْلُ اللّٰهِ صلى الله عليه وسلم
خُذُوْا الْعَطَاءَ مَا دَامَ عَطَاءً، فَإِذَا صَارَ رِشْوَةً عَلَى الدِّيْنِ فَلَا تَأْخُذُوْهُ،
وَلَسْتُمْ بِتَارِكِيْهِ يَمْنَعُكُمُ الْفَقْرُ وَالْحَاجَةُ، أَلَا إِنَّ رَحَا الْإِسْلَامِ دَائِرَةٌ فَدُوْرُوْا
مَعَ الْكِتَابِ حَيْثُ دَارَ، أَلَا إِنَّ الْكِتَابَ وَالسُّلْطَانَ سَيَفْتَرِقَانِ فَلَا تُفَارِقُوا
الْكِتَابَ، أَلَا إِنَّهُ سَيَكُوْنُ عَلَيْكُمْ أُمَرَاءُ يَقْضُوْنَ لَكُمْ، فَإِنْ أَطَعْتُمُوْهُمْ يُضِلُّوْكُمْ
وَإِنْ عَصَيْتُمُوْهُمْ قَتَلُوْكُمْ، قَالُوْا يَا رَسُوْلَ اللّٰهِ كَيْفَ نَصْنَعُ؟ قَالَ كَمَا صَنَعَ أَصْحَابُ
عِيْسٰى، نُشِرُوْا بِالْمَنَاشِيْرِ، وَحُمِلُوْا عَلَى الْخَشَبِ، مَوْتٌ فِيْ طَاعَةِ اللّٰهِ خَيْرٌ مِنْ
حَيَاةٍ فِيْ مَعْصِيَةِ اللّٰهِ (معجم كبير طبرانی)

ಮುಆದ್ ಬಿನ್ ಜಬಲ್(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು- ಉಡುಗೊರೆ, ಪಾರಿತೋಷಕಗಳನ್ನು- ಉಡುಗೊರೆ ಪಾರಿತೋಷಕಗಳ ನೆಲೆಯಲ್ಲಿದ್ದರೆ ಅದನ್ನು ಸ್ವೀಕರಿಸಿ ಕೊಳ್ಳಿರಿ. ಆದರೆ ಅದು ಲಂಚದ ರೂಪದಲ್ಲಿ ಬಂದರೆ ಮತ್ತು ಧರ್ಮವಿರೋಧಿ ಕಾರ್ಯ ಗಳಿಗಾಗಿ ಕೊಡುವುದಾದರೆ ಅದನ್ನು ಸ್ವೀಕರಿಸಬೇಡಿರಿ. ನೀವು ಅದನ್ನು ಬಿಡಲಾರಿರಿ. ಬಡತನ, ದಾರಿದ್ರ್ಯವು ಅದನ್ನು ತೆಗೆದುಕೊಳ್ಳುವಂತೆ ನಿಮ್ಮನ್ನು ನಿರ್ಬಂಧಿಸಬಹುದು. ಕೇಳಿರಿ! ಈಗ ಇಸ್ಲಾಮಿನ ಗಾಣ ತಿರುಗುತ್ತಿದೆ. (ಅರ್ಥಾತ್ ಇಸ್ಲಾಮೀ ವ್ಯವಸ್ಥೆ ಸ್ಥಾಪನೆಗೊಂಡಿದೆ) ಆದುದರಿಂದ ನೀವು ಅಲ್ಲಾಹನ ಗ್ರಂಥದ ಕಡೆಗೆ ಅದು ಹೋಗುವಲ್ಲಿಗೆ ಹೋಗಿರಿ. ಕೇಳಿರಿ- ಅಲ್ಲಾಹನ ಗ್ರಂಥ ಮತ್ತು ಅಧಿಕಾರ ಪರಸ್ಪರ ಬೇರ್ಪಟ್ಟಾಗ (ಅರ್ಥಾತ್ ಇಸ್ಲಾಮೀ ಆಡಳಿತ ವ್ಯವಸ್ಥೆ ಇಲ್ಲವಾದಾಗ) ನೀವು ಅಲ್ಲಾಹನ ಗ್ರಂಥವನ್ನು ಬೆಂಬಲಿಸಿರಿ (ಆಡಳಿತವನ್ನು ಬೆಂಬಲಿಸದಿರಿ) ಕೇಳಿರಿ- ನಿಮ್ಮ ಮೇಲೆ ನಿಮಗಾಗಿ ಕಾನೂನು ರಚಿಸುವ ಆಡಳಿತಾಧಿಕಾರಿಗಳು ಎರಗುವರು. ನೀವು ಅವರ ಕಾನೂನು ಮತ್ತು ತೀರ್ಪುಗಳನ್ನು ಒಪ್ಪಿದರೆ ಅವರು ನಿಮ್ಮನ್ನು ತಪ್ಪು ದಾರಿಗೊಯ್ಯುವರು. ಒಪ್ಪದಿದ್ದರೆ ನಿಮ್ಮನ್ನು ವಧಿಸುವರು.

ಸಹಾಬಿಗಳು ಕೇಳಿದರು- ಇಂತಹ ಪರಿಸ್ಥಿತಿಯಲ್ಲಿ ನಾವೇನು ಮಾಡಬೇಕು? ಪ್ರವಾದಿ(ಸ) ಹೇಳಿದರು- ನೀವು ಈಸಾರ(ಅ) ಅನುಯಾಯಿಗಳು ಮಾಡಿದ್ದನ್ನೇ ಮಾಡಬೇಕು. ಅವರನ್ನು

ಗರಗಸದಿಂದ ಸೀಳಲಾಯಿತು, ಶಿಲುಬೆಗೇರಿಸಲಾಯಿತು. (ಆದರೆ ಅವರು ಮಿಥ್ಯದ ಮುಂದೆ ಮಣಿಯಲಿಲ್ಲ) ಅಲ್ಲಾಹನ ಅನುಸರಣೆಯಲ್ಲಿ ಪ್ರಾಣ ತೆರುವುದು ಆತನ ಆಜ್ಞೋಲ್ಲಂಘನೆ ಯಲ್ಲಿ ಜೀವಿಸುವುದಕ್ಕಿಂತ ಉತ್ತಮ. *[ಮುಅಜಮ್ ಕಬೀರ್, ತಬ್ರಾನಿ]*

ಟಿಪ್ಪಣಿ: ತಿರ್ಮಿದಿ ಹದೀಸ್ ಗ್ರಂಥದಲ್ಲಿ ಅಕ್ರಮಿ ಆಡಳಿತಗಾರರ ಬಗ್ಗೆ ಒಂದು ಹದೀಸ್ ಬಂದಿದೆ. ಅದರಲ್ಲಿ ಪ್ರವಾದಿಯವರು(ಸ) ಕಅಬ್ ಬಿನ್ ಉಜ್ರರೊಂದಿಗೆ(ರ) ಹೀಗೆಂದರು- "ಓ ಕಅಬ್! ನಾನು ನನ್ನ ಬಳಿಕ ಬರುವ ಕೆಲವು ಆಡಳಿತಗಾರರ ಬಗ್ಗೆ ನಿಮ್ಮನ್ನು ಅಲ್ಲಾಹನ ಆಶ್ರಯಕ್ಕೆ ಒಪ್ಪಿಸುತ್ತೇನೆ. ಅಂತಹ ಅಕ್ರಮಿ ಅಧಿಕಾರಿಗಳ ಬಾಗಿಲ ಬಳಿಗೆ ಹೋಗುವ, ಅವರ ತಪ್ಪು ನೀತಿಗಳನ್ನು ಬೆಂಬಲಿಸುವ ಮತ್ತು ಅವರ ಅನ್ಯಾಯದ ವರ್ತನೆಗಳಲ್ಲಿ ಅವರಿಗೆ ನೆರವಾಗುವ ಜನರೊಂದಿಗೆ ನನ್ನ ಸಂಬಂಧವಿಲ್ಲ ಮತ್ತು ನನ್ನೊಂದಿಗೆ ಅವರ ಸಂಬಂಧವೂ ಇಲ್ಲ. ಅವರು ಕೌಸರ್ ಸರೋವರದಲ್ಲಿ ನನ್ನನ್ನು ಭೇಟಿಯಾಗಲಾರರು.

ಆದರೆ ಈ ಅಧಿಕಾರಿಗಳ ಬಳಿಗೆ ಹೋಗದ, ಅವರ ತಪ್ಪುಗಳನ್ನು ಸರಿಯೆಂದು ಸಮರ್ಥಿಸದ ಮತ್ತು ಅವರ ತಪ್ಪು ಕೆಲಸಗಳಲ್ಲಿ ಅವರನ್ನು ಬೆಂಬಲಿಸದ ಜನರು ನನ್ನವರು ಮತ್ತು ನಾನು ಅವರವನು. ಅವರು ಖಂಡಿತ ನನ್ನನ್ನು ಕೌಸರ್‌ನಲ್ಲಿ ಭೇಟಿಯಾಗುವರು ಮತ್ತು ನಾನು ನನ್ನ ಕೈಯಿಂದಲೇ ಅವರಿಗೆ ಅದರ ನೀರು ಕುಡಿಸುವೆನು. ಆ ಬಳಿಕ ಅವರಿಗೆಂದೂ ಬಾಯಾರಿಕೆಯಾಗದು.

---

(322) قَالَ رَسُوْلُ اللّٰهِ صلى الله عليه وسلم كَيْفَ اَنْتُمْ اِذَا طَغٰى نِسَاءُكُمْ
وَفَسَدَ شَبَابُكُمْ وَتَرَكْتُمْ جِهَادَكُمْ ؟ قَالُوْا وَاِنَّ ذٰلِكَ لَكَائِنٌ يَا رَسُوْلَ اللّٰهِ !!
قَالَ نَعَمْ وَالَّذِيْ نَفْسِيْ بِيَدِهٖ وَاَشَدُّ مِنْهُ سَيَكُوْنُ ، قَالُوْا وَمَا اَشَدُّ مِنْهُ يَا
رَسُوْلَ اللّٰهِ ؟ قَالَ كَيْفَ اَنْتُمْ اِذَا لَمْ تَاْمُرُوْا بِالْمَعْرُوْفِ وَتَنْهَوْا عَنِ الْمُنْكَرِ ؟
قَالُوْا اَوَكَائِنٌ ذٰلِكَ يَا رَسُوْلَ اللّٰهِ ؟ قَالَ نَعَمْ وَالَّذِيْ نَفْسِيْ بِيَدِهٖ وَاَشَدُّ مِنْهُ
سَيَكُوْنُ ، قَالُوْا وَمَا اَشَدُّ مِنْهُ ؟ قَالَ كَيْفَ اَنْتُمْ اِذَا رَاَيْتُمُ الْمَعْرُوْفَ مُنْكَرًا
وَالْمُنْكَرَ مَعْرُوْفًا ، قَالُوْا اَوَكَائِنٌ ذٰلِكَ يَا رَسُوْلَ اللّٰهِ ؟ قَالَ نَعَمْ وَالَّذِيْ نَفْسِيْ
بِيَدِهٖ وَاَشَدُّ مِنْهُ سَيَكُوْنُ ! قَالُوْا وَمَا اَشَدُّ مِنْهُ ؟ قَالَ كَيْفَ اَنْتُمْ اِذَا اَمَرْتُمْ
بِالْمُنْكَرِ وَنَهَيْتُمْ عَنِ الْمَعْرُوْفِ ، قَالُوْا اَوَكَائِنٌ ذٰلِكَ يَا رَسُوْلَ اللّٰهِ ، قَالَ نَعَمْ
وَالَّذِيْ نَفْسِيْ بِيَدِهٖ وَاَشَدُّ مِنْهُ سَيَكُوْنُ ، يَقُوْلُ اللّٰهُ تَعَالٰى بِيْ حَلَفْتُ لَاُتِيْحَنَّ
لَهُمْ فِتْنَةً يَصِيْرُ الْحَلِيْمُ فِيْهَا حَيْرَانَ ، (طبرانی)

ಪ್ರವಾದಿ(ಸ) ಕೇಳಿದರು: ನಿಮ್ಮ ಸ್ತ್ರೀಯರು ಬಂಡುಕೋರರೂ ಅನಿಯಂತ್ರಿತರೂ ಆದಾಗ, ಯುವಜನರು ದುರಾಚಾರಿಗಳಾದಾಗ ಮತ್ತು ನೀವು ಜಿಹಾದ್ (ಧರ್ಮಸಂಸ್ಥಾಪನೆಗಾಗಿ ಹೋರಾಡುವುದನ್ನು ಮತ್ತು ಪ್ರಾಣ-ಸೊತ್ತುಗಳ ತ್ಯಾಗ ಮಾಡುವುದನ್ನು) ಬಿಟ್ಟು ಬಿಟ್ಟಾಗಿನ ನಿಮ್ಮ ಪರಿಸ್ಥಿತಿ ಏನಾಗಿರಬಹುದು? ಜನರು ಹೇಳಿದರು- ಅಲ್ಲಾಹನ ಸಂದೇಶವಾಹಕರೇ! ಮುಸ್ಲಿಮ್ ಸಮುದಾಯದಲ್ಲಿ ಈ ಕೆಡುಕು ಬಂದು ಬಿಡುವುದೇ? ಪ್ರವಾದಿ(ಸ) ಹೇಳಿದರು- ಹೌದು, ಯಾರ ಕೈಯಲ್ಲಿ ನನ್ನ ಪ್ರಾಣವಿದೆಯೋ ಆ ಅಲ್ಲಾಹನಾಣೆ! ಅದಕ್ಕಿಂತಲೂ ಕಠಿಣ ಹಂತ ಬರಲಿದೆ. ಜನರು ಕೇಳಿದರು- ಅದಕ್ಕಿಂತಲೂ ಕಠಿಣ ಹಂತ ಯಾವುದು? ಪ್ರವಾದಿ(ಸ) ಹೇಳಿದರು - ನೀವು ಒಳಿತಿನ ಆಜ್ಞೆ ನೀಡದ ಮತ್ತು ಕೆಡುಕಿನಿಂದ ತಡೆಯದಾಗಿನ ನಿಮ್ಮ ಪರಿಸ್ಥಿತಿ ಏನಾಗಿರಬಹುದು! ಜನರು ಕೇಳಿದರು- ಅಲ್ಲಾಹನ ಸಂದೇಶವಾಹಕರೇ! ಇದೂ ಸಂಭವಿಸುವುದೇ? ಪ್ರವಾದಿ(ಸ) ಹೇಳಿದರು- ಹೌದು, ಯಾರ ಕೈಯಲ್ಲಿ ನನ್ನ ಪ್ರಾಣವಿರುವುದೋ ಆ ಅಲ್ಲಾಹನಾಣೆ! ಅದಕ್ಕಿಂತಲೂ ಕಠಿಣ ಕಾಲಘಟ್ಟ ಬರಲಿರುವುದು. ಜನರು ಕೇಳಿದರು- ಅಲ್ಲಾಹನ ಸಂದೇಶವಾಹಕರೇ! ಅದಕ್ಕಿಂತಲೂ ಕಠಿಣ ಕಾಲಘಟ್ಟ ಯಾವುದು? ಪ್ರವಾದಿ(ಸ) ಹೇಳಿದರು- ನೀವು ಕೆಡುಕನ್ನು ಒಳಿತೆಂದೂ ಒಳಿತನ್ನು ಕೆಡುಕೆಂದೂ ಬಗೆಯುವಾಗಿನ ನಿಮ್ಮ ಪರಿಸ್ಥಿತಿ ಏನಾಗಿರಬಹುದು? ಜನರು ಕೇಳಿದರು- ಇದೂ ಸಂಭವಿಸುವುದೇ? ಪ್ರವಾದಿ(ಸ) ಹೇಳಿದರು- ಹೌದು, ಯಾರ ಕೈಯಲ್ಲಿ ನನ್ನ ಪ್ರಾಣವಿರುವುದೋ ಆ ಅಲ್ಲಾಹನಾಣೆ! ಅದಕ್ಕಿಂತಲೂ ಕಠಿಣ ಘಟ್ಟ ಬರಲಿವೆ. ಜನರು ಕೇಳಿದರು - ಅಲ್ಲಾಹನ ಸಂದೇಶವಾಹಕರೇ! ಅದಕ್ಕಿಂತಲೂ ಕಠಿಣ ಘಟ್ಟ ಯಾವುದಾಗಿರಬಹುದು? ಪ್ರವಾದಿ(ಸ) ಹೇಳಿದರು- ನೀವು ಕೆಡುಕನ್ನು ಆಜ್ಞಾಪಿಸುವಿರಿ ಮತ್ತು ಒಳಿತಿನಿಂದ ಜನರನ್ನು ತಡೆಯುವಿರಿ. ಜನರು ಕೇಳಿದರು: ಸಮುದಾಯದ ಮೇಲೆ ಇದೂ ಸಂಭವಿಸುವುದೇ? ಪ್ರವಾದಿ(ಸ) ಹೇಳಿದರು: ಹೌದು, ಯಾರ ಕೈಯಲ್ಲಿ ನನ್ನ ಪ್ರಾಣವಿರುವುದೋ ಆ ಅಲ್ಲಾಹನಾಣೆ! ಅದಕ್ಕಿಂತಲೂ ಕಠಿಣ ದಿನಗಳು ಬರಲಿವೆ. ಮಹಾನನಾದ ಅಲ್ಲಾಹನು ತನ್ನ ಆಣೆ ಹಾಕಿ ಹೇಳುತ್ತಾನೆ- (ಈ ಕೊನೆಯ ಕಾಲ ಘಟ್ಟಕ್ಕೆ ಸಮುದಾಯವು ಕಾಲಿಟ್ಟ ಬಳಿಕ) ನಾನು ಅವರನ್ನು ಎಂತಹ ಸತ್ವ ಪರೀಕ್ಷೆಗಳಿಗೆಲ್ಲ ಸಿಲುಕಿಸುವೆನೆಂದರೆ ಅವರ ಬುದ್ಧಿಜೀವಿಗಳು ಅತ್ಯಂತ ಕಳವಳಕ್ಕೀಡಾಗುವರು (ಅವರ ಬುದ್ಧಿಗೆ ಈ ಸತ್ವ ಪರೀಕ್ಷೆಗಳಿಂದ ಹೇಗೆ ಪಾರಾಗಬಹುದು, ಏನು ಮಾಡಬೇಕು, ಎಲ್ಲಿಗೆ ಓಡಬೇಕು ಎಂದು ಹೊಳೆಯಲಾರದು).

ಈ ಹದೀಸ್‌ನ ನಂತರ ಪರೀಕ್ಷೆಯ ವಿವರಣೆಗಳಿರುವ ಹ. ಅಬೂಬಕರ್ ಮತ್ತು ಇಬ್ನು ಉಮರ್‌ರ(ರ) ಹದೀಸ್‌ಗಳನ್ನೂ ಓದಿರಿ.

ಜಿಹಾದ್‌ನ ಬಗ್ಗೆ ನಿರ್ಲಕ್ಷ್ಯದ ಪರಿಣಾಮ

(323) عَنْ اَبِي بَكْرٍ قَالَ، قَالَ رَسُوْلُ اللّٰهِ صلى الله عليه وسلم مَا تَرَكَ قَوْمٌ الْجِهَادَ اِلَّا عَمَّهُمُ اللّٰهُ بِالْعَذَابِ (المنذرى بحواله طبرانى)

ಹ. ಅಬೂಬಕರ್(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು- ಯಾರು ಜಿಹಾದ್ ಮಾಡುವುದಿಲ್ಲವೋ (ಅರ್ಥಾತ್ ಧರ್ಮದ ಉತ್ಥಾನಕ್ಕಾಗಿ ಪರಿಶ್ರಮ, ಆತ್ಮಾರ್ಪಣೆ, ಹಣ ಮತ್ತು ಜೀವತ್ಯಾಗ ಮಾಡುವುದಿಲ್ಲವೋ) ಅವರ ಮೇಲೆ ಅಲ್ಲಾಹನು ಯಾತನೆ ಎರಗಿಸುತ್ತಾನೆ.

[ಅಲ್ ಮುಂದಿರೀ ತಬ್ರಾನಿಯಿಂದ]

ಟಿಪ್ಪಣಿ: ಈ ಹದೀಸ್‌ನಲ್ಲಿ ಪ್ರವಾದಿಯವರು(ಸ) ಯಾತನೆಯ ಸ್ವರೂಪವನ್ನು ವಿವರಿಸಲಿಲ್ಲ. ಮುಂದೆ ಬರುವ ಹದೀಸ್‌ನಲ್ಲಿ ಯಾತನೆಯ ಸ್ವರೂಪವನ್ನು ಸ್ಪಷ್ಟಪಡಿಸಲಾಗಿದೆ.

---

(324) قَالَ رَسُوْلُ اللّٰهِ صلى الله عليه وسلم اِذَا تَبَايَعْتُمْ بِالْعِيْنَةِ وَ اَخَذْتُمْ اَذْنَابَ الْبَقَرِ وَرَضِيْتُمْ بِالزَّرْعِ، وَتَرَكْتُمُ الْجِهَادَ، سَلَّطَ اللّٰهُ عَلَيْكُمْ ذُلًّا لَا يَنْزِعُهُ اَبَدًا حَتّٰى تَرْجِعُوْا اِلٰى دِيْنِكُمْ (ابوداؤد ــــ ابن عمرؓ)

ಪ್ರವಾದಿ(ಸ) ಹೇಳಿದರು- ನೀವು 'ಈನಾ'ದ ವ್ಯವಹಾರ ನಡೆಸುತ್ತಾ ಇದ್ದರೆ, ನೀವು ಎತ್ತಿನ ಬಾಲ ಹಿಡಿದು ಗದ್ದೆ ಉಳುವುದರಲ್ಲೇ ನಿರತರಾದರೆ ಮತ್ತು ಧರ್ಮದ ಸಂಸ್ಥಾಪನೆಗಾಗಿರುವ ಆಂದೋಲನದಲ್ಲಿ ಪರಿಶ್ರಮ ಮಾಡಲು ಮತ್ತು ಜೀವ-ಸೊತ್ತಿನ ತ್ಯಾಗ ಮಾಡಲು ಹಿಂಜರಿಯುವುದಾದರೆ ಅಲ್ಲಾಹನು ನಿಮ್ಮ ಮೇಲೆ ನಿಂದ್ಯತೆ ಮತ್ತು ಗುಲಾಮಗಿರಿಯನ್ನು ಎರಗಿಸುವನು. ನೀವು ಧರ್ಮದ ಕಡೆಗೆ ಮರಳುವವರೆಗೆ ಅದು ನಿಮ್ಮ ಬೆನ್ನು ಬಿಡದು.

[ಅಬೂ ದಾವೂದ್ - ವರದಿ: ಇಬ್ನು ಉಮರ್(ರ)]

ಟಿಪ್ಪಣಿ: 'ಈನಾ' ಎಂಬುದರ ವಿವಿಧ ಪ್ರಕಾರಗಳಿರಬಹುದು. ಉದಾ: ಬಡ್ಡಿಗೆ ಬೇರೆ ಸುಂದರ ಹೆಸರು ನೀಡಿ ಮಾಡುವ ವ್ಯವಹಾರಕ್ಕೆ 'ಈನಾ' ಎನ್ನುತ್ತಾರೆ. ಮುಸ್ಲಿಮನಾಗಿ ಬಹಿರಂಗ ಬಡ್ಡಿ ವ್ಯವಹಾರವನ್ನು ಮಾಡಲು ನಾಚಿಕೆಯಾಗುವುದರಿಂದ ಅದಕ್ಕೆ ಬೇರೆ ಸುಂದರ ಹೆಸರು ನೀಡಿ ಅದರ ಮರೆಯಲ್ಲಿ ಬಡ್ಡಿ ವ್ಯವಹಾರ ಮಾಡಲಾಗುತ್ತದೆ. ಈ ರೀತಿ ಇವರು ಶರೀಅತ್‌ನೊಂದಿಗೆ ಆಟವಾಡುತ್ತಾರೆ.

ಹೀಗೆ ಬೇರೆ ಹೆಸರುಗಳನ್ನಿಡುವುದರಿಂದ ಸರ್ವಜ್ಞನಾದ ಅಲ್ಲಾಹನೂ ಮೋಸ ಹೋಗುತ್ತಾನೆಂದು ಇವರು ಭಾವಿಸುತ್ತಾರೆ.

ಈ ಹದೀಸ್‌ನಲ್ಲಿ ಬೆಟ್ಟು ಮಾಡಲಾಗಿರುವ ಕೆಡುಕುಗಳು ಮುಸ್ಲಿಮರಲ್ಲಿ ಸಾಮಾನ್ಯವಾಗಿ ಕಾಣಸಿಗುತ್ತದೆ. ನಮ್ಮ ನಿಂದ್ಯತೆ ಮತ್ತು ಗುಲಾಮಗಿರಿಯ ನೈಜ ಕಾರಣ ಇದೇ ಆಗಿದೆ. ಇದರಿಂದ ಮುಕ್ತಿ ಪಡೆಯುವ ಮಾರ್ಗವಿಲ್ಲ. ಧಾರ್ಮಿಕ ಕಾರ್ಯಗಳು ನಮ್ಮ ದೃಷ್ಟಿಯಲ್ಲಿ ವ್ಯಾಪಾರ, ಕೃಷಿ ಮತ್ತಿತರ ಪ್ರಮುಖ ಚಟುವಟಿಕೆಗಳಿಗಿಂತ ಪ್ರಧಾನವಾದರೆ, ನಾವು ಧರ್ಮವನ್ನು ಜೀವಂತಗೊಳಿಸುವ ಮತ್ತು ಅದಕ್ಕೆ ಶಕ್ತಿ ನೀಡುವ ಮಾರ್ಗದಲ್ಲಿ ಸಕ್ರಿಯರಾದರೆ, ದೇವಮಾರ್ಗದ ಯಾತ್ರಿಕರು ಆಶ್ಚರ್ಯ ಪಡುವ ರೀತಿಯಲ್ಲಿ ಈ ನಿಂದ್ಯತೆ ಮತ್ತು ಗುಲಾಮಗಿರಿಯ ಬಂಧನಗಳು ಒಂದೊಂದಾಗಿ ಕಳಚಿ ಹೋಗುವುವು.

❖ ❖ ❖

ಸಂದೇಶ ಪ್ರಚಾರ ಕಾರ್ಯಕ್ಕೆ ಬಲ ನೀಡುವ ವಸ್ತುಗಳು

ಕುರ್‌ಆನ್ ಪಠನ

(325) عَنْ عَبْدِ اللهِ بْنِ مَسْعُوْدٍ رضي الله عنه قَالَ إِنَّ هٰذَا الْقُرْآنَ مَأْدُبَةُ اللهِ،
فَاقْبَلُوْا مَأْدُبَتَهُ مَا اسْتَطَعْتُمْ، إِنَّ هٰذَا الْقُرْآنَ حَبْلُ اللهِ وَالنُّوْرُ الْمُبِيْنُ،
وَالشِّفَاءُ النَّافِعُ، عِصْمَةٌ لِمَنْ تَمَسَّكَ بِهِ، وَنَجَاةٌ لِمَنِ اتَّبَعَهُ، لَا يَزِيْغُ
فَيُسْتَعْتَبَ، وَلَا يَعْوَجُّ فَيُقَوَّمَ، وَلَا تَنْقَضِي عَجَائِبُهُ، وَلَا يَخْلَقُ مِنْ
كَثْرَةِ الرَّدِّ (المنذري بحواله مستدرك)

ಹ.ಅಬ್ದುಲ್ಲಾ ಬಿನ್ ಮಸ್‌ಊದ್(ರ) ಹೇಳುತ್ತಾರೆ- ಈ ಕುರ್‌ಆನ್ ಅಲ್ಲಾಹನು ಹಾಸಿರುವ ಊಟದ ಹಾಸಾಗಿದೆ. ಅದಕ್ಕೆ ಎಷ್ಟು ಬಾರಿ ಸಾಧ್ಯವೋ ಅಷ್ಟು ಬಾರಿ ತಲಪಿರಿ. ಖಂಡಿತವಾಗಿಯೂ ಈ ಕುರ್‌ಆನ್ ಅಲ್ಲಾಹನ ಬಳಿಗೆ ತಲಪುವ ಸೋಪಾನವಾಗಿದೆ. ಅಂಧಕಾರಗಳನ್ನು ಅಳಿಸುವ ಪ್ರಕಾಶವಾಗಿದೆ. ರೋಗಶಮನದ ಔಷಧಿಯಾಗಿದೆ. ಇದು ಭದ್ರವಾಗಿ ಹಿಡಿಯುವವರ ಆಸರೆಯಾಗಿದೆ. ಅನುಸರಿಸುವವರಿಗೆ ಮೋಕ್ಷದ ಉಪಾಧಿಯಾಗಿದೆ. ಈ ಗ್ರಂಥವನ್ನು ಮಣಿಸುವ ಅಗತ್ಯವಿಲ್ಲ. ಅದು ಬೆನ್ನು ತಿರುಗಿಸುವುದಿಲ್ಲ. ಅದನ್ನು ನೇರಗೊಳಿಸುವ ಅಗತ್ಯವಿಲ್ಲ. ಅದರಲ್ಲಿ ಯಾವುದೇ ವಕ್ರತೆಯಿಲ್ಲ. ಅದರ ಅದ್ಭುತ ಅರ್ಥಗಳ ನಿಧಿಯು ಎಂದೂ ಕೊನೆಗೊಳ್ಳುವುದಿಲ್ಲ. ಅದು ಹೆಚ್ಚು ಹೆಚ್ಚು ಉಪಯೋಗಿಸುವುದರಿಂದ ಹಳತಾಗುವಂತಹ ಉಡುಪಲ್ಲ. *[ಅಲ್ ಮುಂದಿರಿ- ಮುಸ್ತದ್ರಕ್‌ನಿಂದ]*

ಟಿಪ್ಪಣಿ: ಹ.ಅಬ್ದುಲ್ಲಾ ಬಿನ್ ಮಸ್‌ಊದ್(ರ) ಕುರ್‌ಆನನ್ನು 'ಅಲ್ಲಾಹನ ಊಟದ ಹಾಸು' ಎಂದು ಅತ್ಯಂತ ಮಹತ್ವದ ಮಾತನ್ನು ಹೇಳಿದ್ದಾರೆ. ಆಹಾರದ ಅಭಾವದಿಂದ ಮಾನವನ ದೈಹಿಕ ಉಳಿವು ಅಸಂಭವ. ಅದಕ್ಕಾಗಿ ಅಲ್ಲಾಹನು ಆಹಾರ ಪದಾರ್ಥಗಳನ್ನು ಒದಗಿಸಿಕೊಟ್ಟಿದ್ದಾನೆ. ಅದೇ ರೀತಿ ಮಾನವನ ಆಧ್ಯಾತ್ಮಿಕ ಉಳಿವಿಗಾಗಿ ಆತನು ತನ್ನ ಸನ್ಮಾರ್ಗದ ರೂಪದಲ್ಲಿ ಈ ಹಾಸನ್ನು ಹಾಸಿದ್ದಾನೆ. ಆದ್ದರಿಂದ ಯಾರು ಅದರಿಂದ ಎಷ್ಟು ಹೆಚ್ಚು ಪ್ರಯೋಜನ ಪಡೆಯುತ್ತಾರೋ ಅಷ್ಟೇ ಹೆಚ್ಚು ಅವರ ಆಧ್ಯಾತ್ಮಿಕತೆಯು ಪ್ರಗತಿ ಹೊಂದುವುದು.

(326) قَالَ رَسُوْلُ اللّٰهِ صَلَّى اللّٰهُ عليه وسلم اَعْرِبُوا الْقُرْاٰنَ وَاتَّبِعُوْا غَرَائِبَهٗ، وَغَرَائِبُهٗ فَرَائِضُهٗ وَحُدُوْدُهٗ (مشكوٰة)

ಪ್ರವಾದಿ(ಸ) ಹೇಳಿದರು- ಕುರ್‌ಆನನ್ನು ಸ್ಪಷ್ಟವಾಗಿ ತಡೆ ತಡೆದು ಓದಿರಿ. ಅದರ 'ಗರಾಇಬ್'ಗಳಂತೆ ನಡೆಯಿರಿ. 'ಗರಾಇಬ್' ಅಂದರೆ ಅಲ್ಲಾಹನು ಕಡ್ಡಾಯಗೊಳಿಸಿದ ಆದೇಶಗಳು ಮತ್ತು ಆತನು ನಿಷೇಧಿಸಿರುವ ಕಾರ್ಯಗಳಾಗಿವೆ. [ಮಿಶ್ಕಾತ್]

---

(327) عَنْ اَبِيْ ذَرٍّ قَالَ دَخَلْتُ عَلٰى رَسُوْلِ اللّٰهِ صلى الله عليه وسلم فَقُلْتُ اَوْصِنِيْ، قَالَ اُوْصِيْكَ بِتَقْوَى اللّٰهِ فَاِنَّهٗ اَزْيَنُ لِاَمْرِكَ كُلِّهٖ، قُلْتُ زِدْنِيْ، قَالَ عَلَيْكَ بِتِلَاوَةِ الْقُرْاٰنِ وَذِكْرِ اللّٰهِ عَزَّ وَجَلَّ، فَاِنَّهٗ ذِكْرٌ لَّكَ فِي السَّمَاءِ وَنُوْرٌ لَّكَ فِي الْاَرْضِ (مشكوٰة)

ಅಬೂದರ್ರ್ ಗಿಫ್ಫಾರಿ(ರ) ಹೇಳುತ್ತಾರೆ- ನಾನು ಪ್ರವಾದಿಯವರ(ಸ) ಬಳಿಗೆ ಹೋಗಿ ನನಗೇನಾದರೂ ಉಪದೇಶ ಮಾಡಿರಿ ಎಂದು ಬಿನ್ನವಿಸಿದೆ. ಪ್ರವಾದಿ(ಸ) ಹೇಳಿದರು- ಅಲ್ಲಾಹನ ಭಯವಿರಿಸಿರಿ. ಇದು ನಿಮ್ಮ ಸ್ಥಿತಿಯನ್ನು ಸುಧಾರಿಸುವ ಸಾಧನವಾಗಿದೆ. ನಾನು 'ಇನ್ನೂ ಉಪದೇಶಿಸಿರಿ' ಎಂದು ಹೇಳಿದಾಗ ಪ್ರವಾದಿ(ಸ) ಹೇಳಿದರು- ಕುರ್‌ಆನ್ ಪಠನ ಮತ್ತು ಅಲ್ಲಾಹನ ಸ್ಮರಣೆಯನ್ನು ರೂಢಿಸಿಕೊಂಡರೆ ಅಲ್ಲಾಹನು ನಿಮ್ಮನ್ನು ಆಕಾಶದಲ್ಲಿ ಸ್ಮರಿಸುವನು. ಇಹಲೋಕದ ಅಂಧಕಾರಗಳಲ್ಲಿ ಇದು ಬೆಳಕು ನೀಡುವುದು. [ಮಿಶ್ಕಾತ್]

---

(328) عَنِ النَّوَّاسِ بْنِ سِمْعَانَ قَالَ سَمِعْتُ رَسُوْلَ اللّٰهِ صلى الله عليه وسلم يَقُوْلُ يُؤْتٰى يَوْمَ الْقِيَامَةِ بِالْقُرْاٰنِ وَاَهْلِهِ الَّذِيْنَ كَانُوْا يَعْمَلُوْنَ بِهٖ فِي الدُّنْيَا تَقْدُمُهٗ سُوْرَةُ الْبَقَرَةِ وَاٰلُ عِمْرَانَ تُحَاجَّانِ عَنْ صَاحِبِهِمَا۔ (مسلم)

ನವಾಸ್ ಬಿನ್ ಸಿಮ್‌ಆನ್(ರ) ಹೇಳುತ್ತಾರೆ- ಪ್ರವಾದಿ(ಸ) ಹೀಗೆ ಹೇಳುತ್ತಿರುವುದನ್ನು ನಾನು ಕೇಳಿದ್ದೇನೆ- ನಿರ್ಣಾಯಕ ದಿನದಂದು ಕುರ್‌ಆನ್ ಮತ್ತು ಕುರ್‌ಆನನ್ನು ಅನುಸರಿಸಿ

ನಡೆಯುವವರನ್ನು ಅಲ್ಲಾಹನ ಮುಂದೆ ಹಾಜರು ಪಡಿಸಲಾಗುವುದು. ಅಲ್‌ಬಕರಃ ಮತ್ತು ಆಲಿ ಇಮ್ರಾನ್ ಎಂಬೆರಡು ಅಧ್ಯಾಯಗಳು ಕುರ್‌ಆನಿನ ಪ್ರಾತಿನಿಧ್ಯ ವಹಿಸುತ್ತಾ ಅಲ್ಲಾಹನಲ್ಲಿ, ಈ ವ್ಯಕ್ತಿ ನಿನ್ನ ಕ್ಷಮೆ ಮತ್ತು ಕರುಣೆಗೆ ಅರ್ಹನಾಗಿದ್ದಾನೆ ಎಂದು ಶಿಫಾರಸು ಮಾಡುವುವು. *[ಮುಸ್ಲಿಮ್]*

---

(329) عَنْ عَبِيْدَةَ الْمُلَيْكِيِّ وَكَانَتْ لَهُ صُحْبَةٌ قَالَ، قَالَ رَسُوْلُ اللهِ صلى الله عليه وسلم يَا اَهْلَ الْقُرْآنِ لَا تَتَوَسَّدُوا الْقُرْآنَ وَاتْلُوْهُ حَقَّ تِلَاوَتِهِ مِنْ آنَاءِ اللَّيْلِ وَالنَّهَارِ، وَافْشُوْهُ وَتَغَنَّوْهُ وَتَدَبَّرُوْا مَا فِيْهِ لَعَلَّكُمْ تُفْلِحُوْنَ، وَلَا تَعْجَلُوْا ثَوَابَهُ فَاِنَّ لَهُ ثَوَابًا (مشكوة)

ಅಬೀದಾ ಮುಲೈಕಿ(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು- ಕುರ್‌ಆನ್ ಪಠಿಸುವವರೇ! ಕುರ್‌ಆನನ್ನು ದಿಂಬಾಗಿ ಬಳಸದಿರಿ. ರಾತ್ರಿ ಹಗಲುಗಳಲ್ಲಿ ಅದನ್ನು ಪಠಿಸುವ ರೀತಿಯಲ್ಲಿ ಪಠಿಸಿರಿ. ಅದನ್ನು ಪ್ರಚಾರ ಪಡಿಸುವುದನ್ನು ರೂಢಿಸಿ ಕೊಳ್ಳಿರಿ. ನೀವು ಯಶಸ್ವಿಯಾಗಲೆಂದು ಅದರಲ್ಲಿ ಚಿಂತನೆ ನಡೆಸಿರಿ. ಈ ಗ್ರಂಥವನ್ನು ಲೌಕಿಕ ಸಂಪತ್ತು ಗಳಿಕೆಯ ಸಾಧನವಾಗಿ ಮಾಡದಿರಿ. ಸದಾ ಉಳಿಯುವಂತಹ ಅನುಗ್ರಹವನ್ನು ಅರಸಿರಿ. [ಮಿಶ್ಕಾತ್]

ಟಿಪ್ಪಣಿ: 'ಕುರ್‌ಆನನ್ನು ದಿಂಬಾಗಿ ಮಾಡದಿರಿ' ಎಂದರೆ ಕುರ್‌ಆನ್ ಪಠಿಸುವ ಬಗ್ಗೆ ನಿರ್ಲಕ್ಷ್ಯ ತೋರಬಾರದು. ಯಾವಾಗಲೂ ಅದನ್ನು ಪಠಿಸಬೇಕು. ತಹಜ್ಜುದ್‌ನಲ್ಲೂ ಪಠಿಸಬೇಕು. ತಹಜ್ಜುದ್‌ನ ಹೊರತಾಗಿಯೂ ಅರ್ಥ ಸಹಿತ ಪಠಿಸಿರಿ. ಕೊನೆಯ ಮಾತಿನ ಅರ್ಥವೇನೆಂದರೆ ಕುರ್‌ಆನನ್ನು ಲೌಕಿಕ ಸಂಪತ್ತು ಮತ್ತು ಸ್ಥಾನಮಾನದ ಗಳಿಕೆಯ ಸೋಪಾನವಾಗಿ ಮಾಡಬಾರದು.

---

(330) قَالَ رَسُوْلُ اللهِ صلى الله عليه وسلم اِنَّ هٰذِهِ الْقُلُوْبَ تَصْدَاُ كَمَا يَصْدَاُ الْحَدِيْدُ اِذَا اَصَابَهُ الْمَاءُ، قِيْلَ يَا رَسُوْلَ اللهِ وَمَا جِلَاءُهَا؟ قَالَ كَثْرَةُ ذِكْرِ الْمَوْتِ وَتِلَاوَةِ الْقُرْآنِ (مشكوة — ابن عمرؓ)

ಪ್ರವಾದಿ(ಸ) ಹೇಳಿದರು- ಒದ್ದೆಯಾದ ಕಬ್ಬಿಣಕ್ಕೆ ತುಕ್ಕು ಹಿಡಿಯುವಂತೆ ಮನಸ್ಸಿಗೂ ತುಕ್ಕು ಹಿಡಿಯುತ್ತದೆ. 'ಅಲ್ಲಾಹನ ಸಂದೇಶವಾಹಕರೇ! ಮನಸ್ಸಿನ ತುಕ್ಕನ್ನು ಹೋಗಲಾಡಿಸುವ ಬಗೆ ಹೇಗೆ' ಎಂದು ಕೇಳಲಾದಾಗ, ಮರಣವನ್ನು ಅತ್ಯಧಿಕ ಸ್ಮರಿಸುವುದರಿಂದ ಮತ್ತು ಕುರ್‌ಆನ್ ಪಠಿಸುವುದರಿಂದ ಪ್ರವಾದಿ(ಸ) ಹೇಳಿದರು. *[ಮಿಶ್ಕಾತ್- ಇಬ್ನು ಉಮರ್(ರ)]*

ಟಿಪ್ಪಣಿ: ಮರಣವನ್ನು ಸ್ಮರಿಸುವುದೆಂದರೆ ತಾನು ಒಂದು ದಿನ ಸಾಯಬೇಕಾಗಿದೆ. ಈ ಲೋಕವನ್ನು ಶಾಶ್ವತವಾಗಿ ಬಿಟ್ಟು ತೆರಳಬೇಕಾಗಿದೆ. ಅನಂತರ ಇಹಲೋಕ ಜೀವನದಲ್ಲಿ ಮಾಡಿದ ಕರ್ಮಗಳ ಪರಿಪೂರ್ಣ ವಿಚಾರಣೆ ನಡೆಯಲಿದೆ. ಅದನ್ನು ನಡೆಸುವವನು ಎಲ್ಲವನ್ನೂ ಬಲ್ಲ ಅಲ್ಲಾಹನಾಗಿರುವನು. ವಿಚಾರಣೆಯ ನಂತರ ಮಾನವನು ಒಂದೋ ಉತ್ತೀರ್ಣನಾಗುವನು ಅಥವಾ ಅನುತ್ತೀರ್ಣನಾಗುವನು. ಉತ್ತೀರ್ಣನಾದರೆ ಶಾಶ್ವತ ಸುಖ-ಸಂತೋಷಗಳಲ್ಲೂ ಅನುತ್ತೀರ್ಣನಾದರೆ ಶಾಶ್ವತ ದುಃಖ ದುಮ್ಮಾನಗಳಲ್ಲೂ ಇರಬೇಕಾಗುವುದು ಎಂಬುದನ್ನು ಸದಾ ಸ್ಮರಿಸುವುದಾಗಿದೆ.

ಈ ವಾಸ್ತವಿಕತೆಗಳ ನೆನಪು ಎಷ್ಟು ಹೆಚ್ಚಾಗಿರುವುದೋ ಅಷ್ಟೇ ಪ್ರಮಾಣದಲ್ಲಿ ಮಾನವನ ಮನಸ್ಸಿನ ತುಕ್ಕು ಅಳಿದು ಹೋಗುತ್ತದೆ. ಅವನಿಗೆ ಕುರ್‌ಆನ್ ಪಠನದಿಂದ ಬಹಳ ಶಕ್ತಿ ದೊರೆಯುತ್ತದೆ. ತಿಲಾವತ್ (ಪಠನ) ಎಂದರೆ ಅರಬಿ ಭಾಷೆಯಲ್ಲಿ ಅರ್ಥ ಗ್ರಹಿಸದೆ ಕೇವಲ ಓದುವುದಲ್ಲ. ಬದಲಾಗಿ ಕುರ್‌ಆನಿನ ಪದಗಳನ್ನು ಓದುವುದು, ಅರ್ಥ ಗ್ರಹಿಸುವುದು ಮತ್ತು ಅದರಂತೆ ನಡೆಯುವುದನ್ನು 'ತಿಲಾವತ್' ಎನ್ನಲಾಗುತ್ತದೆ. ಆದರೆ ಮುಸ್ಲಿಮ್ ಸಮುದಾಯದ ಅಧಿಕಾಂಶ ಜನರು ಕೇವಲ ಪದಗಳನ್ನು ಓದುವುದರಲ್ಲೇ ಸಂತೃಪ್ತರಾಗಿರುವುದು ವಿಷಾದನೀಯ.

ತಹಜ್ಜುದ್ ಮತ್ತು ಐಚ್ಛಿಕ ಕರ್ಮಗಳು

(331) عَنْ اَبِىْ هُرَيْرَةَ قَالَ، قَالَ رَسُوْلُ اللهِ صَلَّى اللهُ عَلَيْهِ وَسَلَّمَ ....
وَمَا تَقَرَّبَ اِلَىَّ عَبْدِىْ بِشَيْئٍ اَحَبَّ اِلَىَّ مِمَّا افْتَرَضْتُ عَلَيْهِ، وَمَا يَزَالُ عَبْدِىْ
يَتَقَرَّبُ اِلَىَّ بِالنَّوَافِلِ حَتّٰى اُحِبَّهُ، وَكُنْتُ سَمْعَهُ الَّذِىْ يَسْمَعُ بِهٖ وَبَصَرَهُ
الَّذِىْ يُبْصِرُ بِهٖ، وَيَدَهُ الَّتِىْ يَبْطِشُ بِهَا، وَرِجْلَهُ الَّتِىْ يَمْشِىْ بِهَا (بخارى)

ಅಬೂ ಹುರೈರಾ(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು... (ಅಲ್ಲಾಹನು ಹೇಳುತ್ತಾನೆ) ನನ್ನ ದಾಸನು ನನ್ನ ಸಾಮಿಪ್ಯವನ್ನು ಗಳಿಸಲು ಮಾಡುವ ಕರ್ಮಗಳ ಪೈಕಿ ನನಗೆ ಅತ್ಯಂತ ಪ್ರಿಯವಾಗಿರುವುದು ನಾನು ಅವನ ಮೇಲೆ ಕಡ್ಡಾಯಗೊಳಿಸಿರುವ ಕರ್ಮಗಳಾಗಿವೆ. ನನ್ನ ದಾಸನು ನಿರಂತರ ಐಚ್ಛಿಕ ಕರ್ಮಗಳ ಮೂಲಕ ನನಗೆ ನಿಕಟವಾಗುತ್ತಾ ಇರುತ್ತಾನೆ. ಆಗ ನಾನು ಅವನನ್ನು ಪ್ರೀತಿಸತೊಡಗುತ್ತೇನೆ ಮತ್ತು ನಾನು, ಅವನು ಆಲಿಸುವ ಕಿವಿಯಾಗುತ್ತೇನೆ. ಅವನು ನೋಡುವ ಕಣ್ಣಾಗುತ್ತೇನೆ. ಅವನು ಹಿಡಿಯುವ ಕೈಯಾಗುತ್ತೇನೆ. ಅವನು ನಡೆಯುವ ಕಾಲಾಗುತ್ತೇನೆ. *[ಬುಖಾರಿ]*

ಟಿಪ್ಪಣಿ: ಕಿವಿ, ಕಣ್ಣು ಇತ್ಯಾದಿ ಆಗುವುದೆಂದರೆ ಹದೀಸ್‌ನಲ್ಲಿ ಪ್ರಸ್ತಾಪಿಸಲಾದ ಆ ದಾಸನನ್ನು ಅಲ್ಲಾಹನು ತನ್ನ ರಕ್ಷಣೆಯಲ್ಲಿ ತೆಗೆದುಕೊಳ್ಳುತ್ತಾನೆಂದಾಗಿದೆ. ಈಗ ಅವನ ಎಲ್ಲ ಶಕ್ತಿ-ಸಾಮರ್ಥ್ಯಗಳು

ಅಲ್ಲಾಹನ ಸಂಪ್ರೀತಿಯ ಕಾರ್ಯಗಳಲ್ಲಿ ವ್ಯಯವಾಗುತ್ತದೆ. ಶೈತಾನನಿಗೆ ಆ ಶಕ್ತಿ ಸಾಮರ್ಥ್ಯಗಳ ಯಾವ ಪಾಲೂ ಸಿಗುವುದಿಲ್ಲ. ಅಲ್ಲಾಹನು ತನ್ನ ಪ್ರಿಯದಾಸನ ಹತ್ತಿರ ಶೈತಾನನನ್ನು ಸುಳಿಯಗೊಡುವನೇ? ಒಬ್ಬನು ತನ್ನ ಆಪ್ತ ಸ್ನೇಹಿತನನ್ನು ವೈರಿಗಳಿಗೆ ಒಪ್ಪಿಸಿದುದನ್ನು ಎಂದಾದರೂ ನೀವು ಕೇಳಿದ್ದೀರಾ?

---

(332) عَنْ أَبِي أُمَامَةَ الْبَاهِلِيِّ عَنْ رَسُوْلِ اللّٰهِ صلى الله عليه وسلم قَالَ عَلَيْكُمْ بِقِيَامِ اللَّيْلِ فَإِنَّهُ دَأْبُ الصَّالِحِيْنَ قَبْلَكُمْ وَقُرْبَةٌ إِلَى رَبِّكُمْ وَمَكْفَرَةٌ لِلسَّيِّاٰتِ وَمَنْهَاةٌ عَنِ الْإِثْمِ (ترمذی)

ಅಬೂ ಉಮಾಮ ಬಾಹಿಲೀ(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು- ನೀವು ತಹಜ್ಜುದ್ ನಮಾಝನ್ನು ರೂಢಿಸಿಕೊಳ್ಳಿರಿ. ಇದು ನಿಮಗಿಂತ ಮುಂಚಿನ ಸಜ್ಜನರ ಕ್ರಮವಾಗಿದೆ. ಇದು ನಿಮ್ಮನ್ನು ನಿಮ್ಮ ಪ್ರಭುವಿಗೆ ಹತ್ತಿರ ಗೊಳಿಸುವ, ನಿಮ್ಮ ಪಾಪಗಳನ್ನು ಮುಚ್ಚುವ ಮತ್ತು ನಿಮ್ಮನ್ನು ಪಾಪಗಳಿಂದ ರಕ್ಷಿಸುವ ವಸ್ತುವಾಗಿದೆ.

[ತಿರ್ಮಿದಿ]

---

(333) عَنْ عَمْرِو بْنِ عَنْبَسَةَ رض أَنَّهُ سَمِعَ النَّبِيَّ صَلَّى اللّٰهُ عَلَيْهِ وَسَلَّمَ يَقُوْلُ أَقْرَبُ مَا يَكُوْنُ الرَّبُّ مِنَ الْعَبْدِ فِي جَوْفِ اللَّيْلِ الْآخِرِ، فَإِنِ اسْتَطَعْتَ أَنْ تَكُوْنَ مِمَّنْ يَذْكُرُ اللّٰهَ فِي تِلْكَ السَّاعَةِ فَافْعَلْ (ترمذی)

ಅಮ್ರ್ ಬಿನ್ ಅಂಬಸ(ರ) ಹೇಳುತ್ತಾರೆ- ಪ್ರವಾದಿ(ಸ) ಹೀಗೆ ಹೇಳಿರುವುದಾಗಿ ನಾನು ಕೇಳಿದ್ದೇನೆ- ಪ್ರಭುವು ತನ್ನ ದಾಸನಿಗೆ ಅತ್ಯಧಿಕ ನಿಕಟನಾಗಿರುವ ಸಮಯವು ರಾತ್ರೆಯ ಅಂತಿಮ ಜಾವವಾಗಿದೆ. ನಿಮಗೆ ಸಾಧ್ಯವಾದರೆ ರಾತ್ರೆಯ ಕೊನೆಯ ಜಾವಗಳಲ್ಲಿ ಅಲ್ಲಾಹನನ್ನು ಸ್ಮರಿಸುವವರೊಂದಿಗೆ ಸೇರಿರಿ. [ತಿರ್ಮಿದಿ]

ಟಿಪ್ಪಣಿ: ರಾತ್ರಿಯ ಅಂತಿಮ ಘಳಿಗೆಗಳಲ್ಲಿ ಅಲ್ಲಾಹನ ಕರುಣೆಯು ದಾಸರ ಕಡೆಗೆ ಹೆಚ್ಚಾಗಿರುತ್ತದೆ. ಆದುದರಿಂದ ಅಲ್ಲಾಹನನ್ನು ತನ್ನ ಹತ್ತಿರಗೊಳಿಸಲು ಮತ್ತು ಅಲ್ಲಾಹನಿಗೆ ನಿಕಟನಾಗಲು ಅದು ಅತ್ಯಂತ ಸೂಕ್ತ ಸಮಯವಾಗಿದೆ.

---

(334) عَنْ أَبِي هُرَيْرَةَ قَالَ، قَالَ رَسُوْلُ اللّٰهِ صلى الله عليه وسلم رَحِمَ اللّٰهُ رَجُلًا قَامَ مِنَ اللَّيْلِ فَصَلَّى، وَأَيْقَظَ امْرَأَتَهُ، فَإِنْ أَبَتْ نَضَحَ فِي وَجْهِهَا الْمَاءَ، وَرَحِمَ اللّٰهُ امْرَأَةً قَامَتْ مِنَ اللَّيْلِ فَصَلَّتْ، وَأَيْقَظَتْ زَوْجَهَا، فَإِنْ أَبَى نَضَحَتْ فِي وَجْهِهِ الْمَاءَ (ابوداؤد، نسائی، ترغیب)

ಅಬೂ ಹುರೈರಾ(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು: ರಾತ್ರಿ ಹೊತ್ತು ಎದ್ದು ತಹಜ್ಜುದ್ ನಮಾಝ್ ಮಾಡುವ ಮತ್ತು ತನ್ನ ಪತ್ನಿಯನ್ನೂ- ನಮಾಝ್ ಮಾಡಲಿಕ್ಕಾಗಿ- ಎಬ್ಬಿಸುವ, ನಿದ್ರೆಯ ಭಾರದಿಂದ ಆಕೆಗೆ ಏಳಲಾಗದಿದ್ದರೆ ಆಕೆಯ ಮುಖಕ್ಕೆ ನೀರು ಚಿಮುಕಿಸುವ ಪತಿಯ ಮೇಲೆ ಅಲ್ಲಾಹನ ಅನುಗ್ರಹವಿರಲಿ. ಅದೇ ರೀತಿ ರಾತ್ರಿ ಹೊತ್ತು ಎದ್ದು ತಹಜ್ಜುದ್ ನಮಾಝ್ ಮಾಡುವ ಮತ್ತು ತನ್ನ ಪತಿಯನ್ನೂ- ನಮಾಝ್ ಮಾಡಲಿಕ್ಕಾಗಿ- ಎಬ್ಬಿಸುವ, ನಿದ್ರೆಯ ಆಧಿಕ್ಯದಿಂದಾಗಿ ಆತನಿಗೆ ಏಳಲಿಕ್ಕಾಗದಿದ್ದರೆ ಆತನ ಮುಖಕ್ಕೆ ನೀರು ಚಿಮುಕಿಸುವ ಪತ್ನಿಯ ಮೇಲೂ ಅಲ್ಲಾಹನ ಅನುಗ್ರಹವಿರಲಿ.

[ಅಬೂ ದಾವೂದ್, ನಸಾಈ, ತರ್ಗೀಬ್]

ಟಿಪ್ಪಣಿ: ಇಲ್ಲಿ ಬಲವಂತವಾಗಿ ನಮಾಝ್ ಮಾಡಿಸುವುದಲ್ಲವೆಂಬುದನ್ನು ಗಮನಿಸಬೇಕು. ಇದು ಇಬ್ಬರಿಗೂ ತಹಜ್ಜುದ್ ನಮಾಝ್ ಮಾಡುವ ಅಭ್ಯಾಸವಿದ್ದು ನೀರು ಚಿಮುಕಿಸಿ ಎಬ್ಬಿಸಬೇಕೆಂದು ಪರಸ್ಪರ ನಿರ್ಧರಿಸಿರುವವರ ಕುರಿತಾಗಿದೆ.

---

(335) عَنِ ابْنِ عَبَّاسٍ عَنِ النَّبِيِّ صلى الله عليه وسلم قَالَ اِسْتَعِيْنُوْا بِطَعَامِ السَّحَرِ عَلَى صِيَامِ النَّهَارِ، وَبِقَيْلُوْلَةِ النَّهَارِ عَلَى قِيَامِ اللَّيْلِ (ترغیب، ابن ماجہ)

ಇಬ್ನು ಅಬ್ಬಾಸ್(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು, "ಹಗಲಿನಲ್ಲಿ ಉಪವಾಸ ಆಚರಿಸಲು ಸಹ್ರೀಯಿಂದ ಸಹಾಯ ಪಡೆಯಿರಿ ಮತ್ತು ತಹಜ್ಜುದ್ ನಮಾಝ್ ಮಾಡಲು ಹಗಲಿನ ನಿದ್ದೆಯಿಂದ ಸಹಾಯ ಪಡೆಯಿರಿ." *[ತರ್ಗೀಬ್, ಇಬ್ನು ಮಾಜಃ]*

ಟಿಪ್ಪಣಿ: ಸಹ್ರೀ ಉಣ್ಣಿರಿ, ಆದರಿಂದ ಹಗಲಿನಲ್ಲಿ ಸುಖವಾಗಿರಬಹುದು. ಆಲಸ್ಯ ಮತ್ತು ನಿತ್ರಾಣ ವುಂಟಾಗದು. ತಹಜ್ಜುದ್ ನಮಾಝ್‌ಗಾಗಿ ಏಳಬೇಕೆಂದು ಬಯಸುವವರು ಹಗಲಿನಲ್ಲಿ ಸ್ವಲ್ಪ ಹೊತ್ತು ನಿದ್ರಿಸಬೇಕು.

---

(336) عَنْ سَمُرَةَ بْنِ جُنْدُبٍ قَالَ أَمَرَنَا رَسُوْلُ اللّٰهِ صَلَّى اللّٰهُ عَلَيْهِ وَسَلَّمَ أَنْ نُصَلِّيَ مِنَ اللَّيْلِ مَا قَلَّ أَوْ كَثُرَ، وَنَجْعَلَ آخِرَ ذٰلِكَ وِتْرًا (ترغيب، مسند بزاز، طبرانی)

ಸಮುರ ಬಿನ್ ಜುಂದುಬ್(ರ) ಹೇಳುತ್ತಾರೆ- ಪ್ರವಾದಿ(ಸ) ನಮಗೆ ತಹಜ್ಜುದ್ ನಮಾಝ್ ಮಾಡುವಂತೆ ಆದೇಶಿಸಿದ್ದಾರೆ. ರಕಅತ್‌ಗಳು ಕಡಿಮೆ ಇರಲಿ ಹೆಚ್ಚು ಇರಲಿ ಮತ್ತು ಕೊನೆಯಲ್ಲಿ ವಿತ್ರ್ ನಮಾಝ್ ಮಾಡಬೇಕೆಂದಿದ್ದಾರೆ. *[ತರ್ಗೀಬ್, ಬಝ್ಝಾರ್, ತಬ್ರಾನಿ]*

ಟಿಪ್ಪಣಿ: ತಹಜ್ಜುದ್‌ನಲ್ಲಿ ಪ್ರವಾದಿ(ಸ) ಸಾಮಾನ್ಯವಾಗಿ ಎಂಟು ರಕಅತ್ ನಮಾಝ್ ಮಾಡುತ್ತಿದ್ದರು. ಕನಿಷ್ಠ ನಾಲ್ಕು ರಕಅತ್ ಮಾಡುತ್ತಿದ್ದರು. ಮನುಷ್ಯನು ನಿದ್ರೆಯಿಂದ ಏಳಬಲ್ಲನಾದರೆ ಇಶಾ ನಮಾಝ್‌ನ ನಂತರ ವಿತ್ರ್ ನಮಾಝ್ ಮಾಡಬಾರದು. ವಿತ್ರ್ ನಮಾಝನ್ನು ತಹಜ್ಜುದ್‌ನ ಕೊನೆಯಲ್ಲಿ ಮಾಡುವುದು ಹೆಚ್ಚು ಪುಣ್ಯದಾಯಕವಾಗಿದೆ.

---

(337) عَنْ عَبْدِ اللّٰهِ بْنِ عَمْرِو بْنِ الْعَاصِ قَالَ، قَالَ لِي رَسُوْلُ اللّٰهِ صَلَّى اللّٰهُ عَلَيْهِ وَسَلَّمَ يَا عَبْدَ اللّٰهِ لَا تَكُنْ مِثْلَ فُلَانٍ كَانَ يَقُوْمُ مِنَ اللَّيْلِ فَتَرَكَ قِيَامَ اللَّيْلِ (بخاری ومسلم)

ಅಬ್ದುಲ್ಲಾ ಬಿನ್ ಅಮ್ರ್ ಬಿನ್ ಆಸ್(ರ) ಹೇಳುತ್ತಾರೆ- ನನ್ನೊಡನೆ ಪ್ರವಾದಿ(ಸ) ಹೇಳಿದರು- ಅಬ್ದುಲ್ಲಾ! ತಹಜ್ಜುದ್ ನಮಾಝ್ ಮಾಡುತ್ತಿದ್ದು ಅನಂತರ ಅದನ್ನು ಬಿಟ್ಟು ಬಿಟ್ಟವನಂತೆ ನೀವಾಗಬಾರದು. (ನೀವು ತಹಜ್ಜುದ್ ಬಿಡಬಾರದು) *[ಬುಖಾರಿ, ಮುಸ್ಲಿಮ್]*

ಟಿಪ್ಪಣಿ: ಬಿಟ್ಟು ಬಿಟ್ಟವನೆಂದರೆ ಬಹುಶಃ ಅಬ್ದುಲ್ಲಾ ಬಿನ್ ಉಮರ್(ರ) ಆಗಿರಬೇಕು. ಅವರ ಪುತ್ರ ಸಾಲಿಮ್(ರ) ಹೇಳುತ್ತಾರೆ- ಪ್ರವಾದಿಯವರ(ಸ) ಈ ಪ್ರೀತಿಪೂರ್ವಕ ಎಚ್ಚರಿಕೆಯ ನಂತರ ನನ್ನ ತಂದೆಯವರಿಗೆ ತಹಜ್ಜುದ್ ಎಂದೂ ಬಿಟ್ಟು ಹೋಗಲಿಲ್ಲ.

---

(338) عَنْ عَلِيٍّ أَنَّ النَّبِيَّ صَلَّى اللّٰهُ عَلَيْهِ وَسَلَّمَ طَرَقَهُ لَيْلًا فَقَالَ أَلَا تُصَلِّيَانِ (بخاری ومسلم)

ಅಲೀ(ರ) ಪ್ರವಾದಿಯವರು(ಸ) ರಾತ್ರಿ ಹೊತ್ತು ನಮ್ಮ ಮನೆಗೆ ಬಂದು ನನ್ನೊಂದಿಗೂ ಫಾತಿಮಾ(ರ)ಳೊಂದಿಗೂ, ನೀವು ತಹಜ್ಜುದ್ ನಮಾಝ್ ನಿರ್ವಹಿಸುವುದಿಲ್ಲವೇ ಎಂದು ಕೇಳಿದರು. *[ಬುಖಾರಿ, ಮುಸ್ಲಿಮ್]*

ಟಿಪ್ಪಣಿ: ಪ್ರವಾದಿಯವರು(ಸ) ರಾತ್ರೆಯ ಕೊನೆಯ ಹೊತ್ತಿನಲ್ಲಿ, ಯಾರು ಯಾವ ಅವಸ್ಥೆಯಲ್ಲಿದ್ದಾರೆ, ಅವರು ಮಲಗಿ ನಿದ್ರಿಸುತ್ತಾರೋ ಅಥವಾ ತಮ್ಮ ಪ್ರಭುವಿನಿಂದ ಕ್ಷಮಾಯಾಚನೆ ಮಾಡುವುದರಲ್ಲೂ ಅವನನ್ನು ಮೆಚ್ಚಿಸುವುದರಲ್ಲೂ ನಿರತರಾಗಿದ್ದಾರೋ ಎಂಬುದನ್ನು ಪರಿಶೀಲಿಸಲಿಕ್ಕಾಗಿ ಹೊರಡುತ್ತಿದ್ದರು ಎಂದು ಈ ಹದೀಸ್‌ನಿಂದಲೂ ಇನ್ನಿತರ ಹದೀಸ್‌ಗಳಿಂದಲೂ ತಿಳಿದು ಬರುತ್ತದೆ.

---

(339) قَالَ رَسُوْلُ اللّٰہِ صلی اللہ علیہ وسلم يَنْزِلُ رَبُّنَا تَبَارَكَ وَتَعَالٰی كُلَّ لَيْلَةٍ اِلَى السَّمَاءِ الدُّنْيَا حِيْنَ يَبْقٰی ثُلُثُ اللَّيْلِ الْاٰخِرُ فَيَقُوْلُ مَنْ يَدْعُوْنِي فَاَسْتَجِيْبَ لَهٗ ؟ مَنْ يَسْاَلُنِيْ فَاُعْطِيَهٗ ، مَنْ يَسْتَغْفِرُنِيْ فَاَغْفِرَ لَهٗ

(بخاری ومسلم —— ابوہریرہؓ)

ಪ್ರವಾದಿ(ಸ) ಹೇಳಿದರು: ರಾತ್ರೆಯ ಮೂರನೆಯ ಒಂದಂಶ ಉಳಿದಿರುವಾಗ ನಮ್ಮ ಪ್ರಭು ನಮಗೆ ಗೋಚರಿಸುವ ಹತ್ತಿರದ ಆಕಾಶಕ್ಕೆ ಬಂದು ಹೀಗೆ ಕೂಗಿ ಹೇಳುತ್ತಾನೆ - ಯಾರಿದ್ದಾರೆ ನನ್ನಲ್ಲಿ ತನ್ನ ಕಷ್ಟಗಳನ್ನು ನಿವೇದಿಸಲು; ನಾನವರ ಕಷ್ಟಗಳನ್ನು ಪರಿಹರಿಸುವೆನು. ಯಾರಿದ್ದಾರೆ ನನ್ನಲ್ಲಿ ಬೇಡುವವನು, ನಾನವನಿಗೆ ನೀಡುವೆನು. ಯಾರಿದ್ದಾರೆ ನನ್ನಲ್ಲಿ ತನ್ನ ಪಾಪಗಳಿಗಾಗಿ ಕ್ಷಮೆ ಯಾಚಿಸುವವನು, ನಾನವನ ಪಾಪಗಳನ್ನು ಕ್ಷಮಿಸುವೆನು.

[ಬುಖಾರಿ, ಮುಸ್ಲಿಮ್ - ವರದಿ: ಅಬೂ ಹುರೈರಾ(ರ)]

---

(340) عَنْ جَابِرٍ قَالَ، قَالَ رَسُوْلُ اللّٰہِ صلی اللہ علیہ وسلم اِذَا قَضٰی اَحَدُكُمُ الصَّلٰوةَ فِيْ مَسْجِدِهٖ ، فَلْيَجْعَلْ لِبَيْتِهٖ نَصِيْبًا مِنْ صَلٰوتِهٖ ، فَاِنَّ اللّٰهَ جَاعِلٌ فِيْ بَيْتِهٖ مِنْ صَلٰوتِهٖ خَيْرًا (مسلم)

ಜಾಬಿರ್(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು- ನಿಮ್ಮಲ್ಲಿ ಯಾರಾದರೂ ಮಸೀದಿಯಲ್ಲಿ ಸಾಮೂಹಿಕ ನಮಾಝ್ ಮಾಡಿದರೆ ಸುನ್ನತ್ ಮತ್ತು ನಫಿಲ್ ನಮಾಝ್‌ಗಳನ್ನು ಅವನು ಮನೆಯಲ್ಲಿ ಮಾಡಲಿ. ಹಾಗೆ ಮಾಡಿದರೆ ಅಲ್ಲಾಹನು ಅವನ ಮನೆಯಲ್ಲಿ ಈ ನಮಾಝ್‌ನ ಕಾರಣದಿಂದ ಒಳಿತು ಮತ್ತು ಸಮೃದ್ಧಿಯನ್ನು ಇಳಿಸುವನು. *[ಮುಸ್ಲಿಮ್]*

---

(341) عَنِ النَّبِيِّ صلى الله عليه وسلم قَالَ إِنَّ الدِّيْنَ يُسْرٌ، وَلَنْ يُشَادَّ الدِّيْنَ أَحَدٌ إِلَّا غَلَبَهُ، فَسَدِّدُوْا وَقَارِبُوْا وَأَبْشِرُوْا وَاسْتَعِيْنُوْا بِالْغَدْوَةِ وَالرَّوْحَةِ وَشَيْءٌ مِنَ الدُّلْجَةِ (بخاری — ابوہریرہؓ)

ಅಬೂ ಹುರೈರಾ(ರ) ವರದಿ ಮಾಡುತ್ತಾರೆ: ಪ್ರವಾದಿ(ಸ) ಹೇಳಿದರು- ಈ ಧರ್ಮವು (ಇಸ್ಲಾಮ್) ಸುಲಭವಾದುದು. ಯಾರಾದರೂ ಈ ಧರ್ಮದೊಂದಿಗೆ ಹೋರಾಡಿದರೆ ಅದು ಅವನನ್ನು ಸೋಲಿಸಿ ಬಿಡುವುದು. ಆದುದರಿಂದ ನೀವು ಸರಿಯಾದ ಮಾರ್ಗದಲ್ಲೇ ನಡೆಯಿರಿ. ಉಗ್ರ ನಿಲುವು ಮತ್ತು ಅತಿರೇಕದಿಂದ ದೂರವಿರಿ. ನಿಮ್ಮ ಮೋಕ್ಷದ ಬಗ್ಗೆ ನಿರಾಶರಾಗಬೇಡಿರಿ. ಸಂತೋಷವಾಗಿರಿ, 'ಇನ್‌ಶಾಅಲ್ಲಾಹ್' ನಿಮಗೆ ಮೋಕ್ಷ ದೊರಕಬಹುದು. ಬೆಳಿಗ್ಗೆ ಸ್ವಲ್ಪ ನಡೆಯಿರಿ, ಸಂಜೆ ಸ್ವಲ್ಪ ನಡೆಯಿರಿ ಮತ್ತು ರಾತ್ರಿ ಸ್ವಲ್ಪ ನಡೆಯಿರಿ. *[ಬುಖಾರಿ]*

ಟಿಪ್ಪಣಿ: ಧರ್ಮವು ಸುಲಭವಾದುದೆಂದರೆ ಅದರ ಆದೇಶಗಳು ಸುಲಭವಾಗಿದ್ದು ಪ್ರತಿಯೊಬ್ಬನೂ ಸುಲಭವಾಗಿ ಈ ಧರ್ಮದಂತೆ ನಡೆಯಬಲ್ಲನು. ಧರ್ಮದೊಂದಿಗೆ ಹೋರಾಡುವುದೆಂದರೆ ಧರ್ಮವು ಯಾವ ಸೌಲಭ್ಯವನ್ನು ಒದಗಿಸಿದೆಯೋ ಅದರಲ್ಲಿ ತೃಪ್ತಿ ಪಡದೆ ಉಗ್ರ ನಿಲುವು ತಳೆಯುವುದು. ಆಗ ಅವನು ಸೋತು ಹೋಗುವನು. ತನ್ನ ಮೇಲೆ ಹೇರಿಕೊಂಡ ನಿರ್ಬಂಧಗಳನ್ನು ಪಾಲಿಸಲು ಅವನಿಂದಾಗದು. ಆದುದರಿಂದ ತೀವ್ರವಾದದಿಂದ ಪಾರಾಗಲಿಕ್ಕಾಗಿ ಪ್ರವಾದಿ(ಸ) ಹೀಗೆಂದರು- ಧರ್ಮದ ನೇರಮಾರ್ಗದಲ್ಲಿ ನಡೆಯಿರಿ. ಉಗ್ರ ನಿಲುವು ಮತ್ತು ಅತಿರೇಕದಿಂದ ದೂರವಿರಿ. ನಿಮ್ಮ ಮೋಕ್ಷದ ಬಗ್ಗೆ ನಿರಾಶರಾಗಬೇಡಿರಿ. ಫರ್ಝ್‌ಗಳಲ್ಲದೆ ಸ್ವಲ್ಪ ಬೆಳಿಗ್ಗೆ, ಸ್ವಲ್ಪ ಸಂಜೆ ಮತ್ತು ಸ್ವಲ್ಪ ರಾತ್ರಿಯ ಅಂತಿಮ ಜಾವದಲ್ಲಿ ನಫಿಲ್ ನಮಾಝ್‌ಗಳನ್ನು ನಿರ್ವಹಿಸಿರಿ. ಇದನ್ನು ಪ್ರವಾದಿಯವರು(ಸ) ಅತ್ಯಂತ ಪ್ರಭಾವಪೂರ್ಣ ಶೈಲಿಯಲ್ಲಿ ತಿಳಿಸಿದರು. ಅಂದರೆ ಸತ್ಯವಿಶ್ವಾಸಿಯು ಯಾತ್ರಿಕನಂತಿರುತ್ತಾನೆ. ಯಾತ್ರಿಕನು ಬಿಸಿಲಿಲ್ಲದ ಸಂಜೆ ಹೊತ್ತಿನಲ್ಲಿ ಮತ್ತು ಬೆಳಿಗ್ಗೆ ಪ್ರಯಾಣ ಮಾಡುತ್ತಾನೆ. ರಾತ್ರಿ ಸ್ವಲ್ಪ ದಾರಿ ಕ್ರಮಿಸುತ್ತಾನೆ. ಇದರಿಂದ ಅವನಿಗೆ ಸುಖವಾಗಿ ತನ್ನ ಗುರಿ ಮುಟ್ಟಲು ಸುಲಭವಾಗುತ್ತದೆ. ಇನ್ನು ದಾರಿಯನ್ನು ಕ್ರಮಿಸಲು ರಾತ್ರಿ ಹಗಲು ಒಂದಾಗಿಸಿ ಶ್ರಮಿಸುವ ಒಬ್ಬ ಯಾತ್ರಿಕನು ಕೊನೆಗೆ ದಣಿದು ಒಂದೆಡೆ ಕುಳಿತು ಕೊಳ್ಳುತ್ತಾನೆ. ಅವನು ಗುರಿ ಮುಟ್ಟುವುದಿಲ್ಲ. ಈ ಉದಾಹರಣೆಯ ಮೂಲಕ ಸೂಚಿಸ ಬಯಸಿರುವುದೇನೆಂದರೆ ಸತ್ಯವಿಶ್ವಾಸಿಯು ಈ ಲೋಕದಲ್ಲಿದ್ದುಕೊಂಡೂ ಪರಲೋಕದ ಯಾತ್ರೆಯಲ್ಲಿರುತ್ತಾನೆ; ತನ್ನ ಗುರಿಯಾಗಿರುವ ಸ್ವರ್ಗವನ್ನು ತಲುಪಬೇಕಾದರೆ ರಾತ್ರಿ ಹಗಲು ಇಬಾದತ್‌ನಲ್ಲಿ ನಿರತನಾಗಿರಬೇಕಾದುದು ಅಗತ್ಯ. ಸ್ವಲ್ಪ ಬೆಳಿಗ್ಗೆ, ಸ್ವಲ್ಪ ಸಂಜೆ ಮತ್ತು ಸ್ವಲ್ಪ ರಾತ್ರಿ ಹೊತ್ತು ನಫಿಲ್ ನಮಾಝ್‌ಗಳನ್ನು ಮಾಡುತ್ತಲಿದ್ದರೆ 'ಇನ್‌ಶಾಅಲ್ಲಾಹ್' ಅವನು ತನ್ನ ಗುರಿ ಮುಟ್ಟಬಲ್ಲನು. ತಹಜ್ಜುದ್, ಇಶ್ರಾಕ್ ಮತ್ತು ಚಾಶ್ತ್ ಇತ್ಯಾದಿ ನಮಾಝ್‌ಗಳು ಪ್ರವಾದಿ(ಸ) ತಮ್ಮ ಸಮುದಾಯಕ್ಕೆ ತೋರಿಸಿದ ಅವರ ವ್ಯಾವಹಾರಿಕ ರೂಪಗಳಾಗಿವೆ.

ಉನ್ನತ ಮಟ್ಟದಲ್ಲಿ ಸತ್ಕರ್ಮಗಳನ್ನೆಸಗಿಯೂ, ಇಷ್ಟು ಸಣ್ಣ ಪ್ರಮಾಣದ ಕರ್ಮಗಳಿಂದ ಶಾಶ್ವತ ಶಾಂತಿಗೇಹವಾಗಿರುವ ಸ್ವರ್ಗದಲ್ಲಿ ಪ್ರವೇಶಿಸಲು ಸಾಧ್ಯವೇ ಎಂಬ ಬಗ್ಗೆ ನಿರಾಶರಾಗಿರುವವರಿಗೆ, ಈ ಸುವಾರ್ತೆಯನ್ನು ನೀಡಲಾಗುತ್ತಿದೆಯೆಂಬುದನ್ನು ಗಮನದಲ್ಲಿರಿಸಬೇಕು.

---

(342) قَالَ رَسُوْلُ اللّٰهِ صلى الله عليه وسلم اِنَّ اَوَّلَ مَا افْتَرَضَ اللّٰهُ عَلَى
النَّاسِ مِنْ دِيْنِهِمُ الصَّلَاةُ، وَآخِرُ مَا يَبْقَى الصَّلَاةُ، وَاِنَّ اَوَّلَ مَا يُحَاسَبُ بِهِ
الصَّلَاةُ، وَيَقُوْلُ اللّٰهُ انْظُرُوْا فِيْ صَلَاةِ عَبْدِيْ، فَاِنْ كَانَتْ تَامَّةً كُتِبَتْ تَامَّةً
وَاِنْ كَانَتْ نَاقِصَةً يَقُوْلُ انْظُرُوْا هَلْ لِعَبْدِيْ مِنْ تَطَوُّعٍ؟ فَاِنْ وُجِدَ لَهُ
تَطَوُّعٌ تَمَّتِ الْفَرِيْضَةُ مِنَ التَّطَوُّعِ، ثُمَّ قَالَ انْظُرُوْا هَلْ زَكَاتُهُ تَامَّةٌ؟
فَاِنْ كَانَتْ تَامَّةً كُتِبَتْ تَامَّةً، وَاِنْ كَانَتْ نَاقِصَةً قَالَ انْظُرُوْا هَلْ لَهُ
صَدَقَةٌ؟ فَاِنْ كَانَتْ لَهُ صَدَقَةٌ تَمَّتْ زَكَاتُهُ

(المنذری بحوالہ مسند ابو یعلی - انس رض)

ಪ್ರವಾದಿ(ಸ) ಹೇಳಿದರು- ಧರ್ಮದಲ್ಲಿ ಅಲ್ಲಾಹನು ಮೊಟ್ಟಮೊದಲು ಕಡ್ಡಾಯ ಗೊಳಿಸಿರುವ ವಸ್ತು ನಮಾಝ್ ಆಗಿದೆ. (ಸಮುದಾಯದಲ್ಲಿ) ಕೊನೆಗೆ ಉಳಿಯುವಂತಹದ್ದೂ ನಮಾಝ್ ಆಗಿದೆ. ನಿರ್ಣಾಯಕ ದಿನದಂದು ಮೊಟ್ಟಮೊದಲು ನಮಾಝ್‌ನ ಬಗ್ಗೆ ವಿಚಾರಿಸಲಾಗುವುದು. ಅಲ್ಲಾಹನು ದೇವಚರರೊಂದಿಗೆ ಹೀಗೆ ಹೇಳುವನು - ನನ್ನ ಈ ದಾಸನ ಫರ್ಝ್ ನಮಾಝನ್ನು ನೋಡಿರಿ. ಅದು ಪರಿಪೂರ್ಣವಾಗಿದ್ದರೆ ಹಾಗೆಯೇ ಬರೆಯಿರಿ. ಇನ್ನು ಅದರಲ್ಲಿ ಲೋಪವಿದ್ದರೆ ನನ್ನ ದಾಸನ ಕರ್ಮ ಪತ್ರದಲ್ಲಿ ನಫಿಲ್ ನಮಾಝ್‌ಗಳೇನಾದರೂ ಇದೆಯೇ ಎಂದು ಪರೀಕ್ಷಿಸಿರಿ. ನಫಿಲ್ ನಮಾಝ್‌ಗಳಿದ್ದರೆ ಫರ್ಝ್ ನಮಾಝ್‌ನ ಕೊರತೆಯನ್ನು ಅದರಿಂದ ತುಂಬಲಾಗುವುದು. ತರುವಾಯ ಅಲ್ಲಾಹನು ದೇವಚರರೊಡನೆ ಹೇಳುವನು - ನನ್ನ ದಾಸನ ಕರ್ಮಪತ್ರದಲ್ಲಿ ಝಕಾತ್ ಪರಿಪೂರ್ಣವಾಗಿದೆಯೇ? ಇದ್ದರೆ ಅವನಿಗೆ ಪರಿಪೂರ್ಣ ಝಕಾತ್‌ನ ಪ್ರತಿಫಲ ಸಿಗುವುದು. ಝಕಾತ್‌ನಲ್ಲಿ ಏನಾದರೂ ಲೋಪದೋಷಗಳಿದ್ದರೆ ಅಲ್ಲಾಹನು ಹೇಳುವನು - ಈ ದಾಸನ ಕರ್ಮಪತ್ರದಲ್ಲಿ ಐಚ್ಛಿಕ ದಾನಧರ್ಮಗಳೇನಾದರೂ ಇದೆಯೇ ಎಂದು ಪರೀಕ್ಷಿಸಿರಿ. ಅವು ಇದ್ದರೆ ಝಕಾತ್‌ನ ಕೊರತೆಯನ್ನು ಐಚ್ಛಿಕ ದಾನಧರ್ಮಗಳಿಂದ ತುಂಬಲಾಗುವುದು.

[ಅಲ್ ಮುಂದಿರೀ - ಅಬೂ ಯಲ್‌ಲಾರಿಂದ- ವರದಿ: ಅನಸ್(ರ)]

ಟಿಪ್ಪಣಿ: ಈ ಹದೀಸ್‌ನಲ್ಲಿ ಕೇವಲ ನಮಾಝ್ ಮತ್ತು ಝಕಾತ್‌ನ ಪ್ರಸ್ತಾಪವಿದೆ. ಇದೇ ರೀತಿಯಲ್ಲಿ ಇತರ ಎಲ್ಲಾ ಕಡ್ಡಾಯ ಕರ್ಮಗಳ ಪರಿಶೀಲನೆ ನಡೆಯುವುದು. ಅದರಲ್ಲಿರ ಬಹುದಾದ ಲೋಪದೋಷಗಳನ್ನು ಐಚ್ಛಿಕ ಕರ್ಮಗಳಿಂದ ತುಂಬಲಾಗುವುದು.

ಜನರು ಕಡ್ಡಾಯ ಕರ್ಮಗಳ ಬಳಿಕ ಐಚ್ಛಿಕ ಕರ್ಮಗಳ ಬಗ್ಗೆಯೂ ಚಿಂತಿಸಬೇಕು ಎಂದು ಈ ಹದೀಸ್‌ನಿಂದ ತಿಳಿಯುತ್ತದೆ. ಏಕೆಂದರೆ ಮಾನವನು ಸ್ವಾಭಾವಿಕವಾಗಿ ದುರ್ಬಲನಾಗಿದ್ದಾನೆ. ನಮಾಝನ್ನು ಎಷ್ಟೇ ಜಾಗರೂಕತೆಯಿಂದ ನಿರ್ವಹಿಸಿದರೂ ಏನಾದರೂ ಲೋಪದೋಷವಿರುತ್ತದೆ. ಅವನ ಬಳಿ ನಫಿಲ್ ನಮಾಝ್‌ಗಳಿಲ್ಲದಿದ್ದರೆ ಫರ್ಝ್‌ನಲ್ಲುಂಟಾದ ಕೊರತೆಯನ್ನು ತುಂಬುವುದಾದರೂ ಹೇಗೆ?

ಧನವೆಚ್ಚ

(343) قَالَ رَسُولُ اللهِ صلى الله عليه وسلم يَقُولُ الْعَبْدُ مَالِي مَالِي، وَإِنَّمَا لَهُ مِنْ مَالِهِ ثَلَاثٌ، مَا أَكَلَ فَأَفْنَى، أَوْ لَبِسَ فَأَبْلَى، أَوْ أَعْطَى فَاقْتَنَى، وَمَا سِوَى ذٰلِكَ فَهُوَ ذَاهِبٌ وَتَارِكُهُ لِلنَّاسِ (مسلم - ابوہریرہ رض)

ಪ್ರವಾದಿ(ಸ) ಹೇಳಿದರು- ಅಲ್ಲಾಹನ ದಾಸನು 'ಇದು ನನ್ನ ಸೊತ್ತು, ಇದು ನನ್ನ ಸೊತ್ತು' ಎನ್ನುತ್ತಾನೆ. ವಸ್ತುತಃ ಅವನಿಗಾಗಿ ಸೊತ್ತಿನಲ್ಲಿ ಮೂರು ಪಾಲುಗಳಿವೆ-

1. ಅವನು ತಿಂದುದು ಮುಗಿಯುತ್ತದೆ. 2. ಅವನು ಉಟ್ಟದ್ದು ಹಳತಾಗುತ್ತದೆ. 3. ಅಲ್ಲಾಹನ ಮಾರ್ಗದಲ್ಲಿ ನೀಡಿದ್ದು ಮಾತ್ರ ಅವನಿಗಾಗಿ ಸುರಕ್ಷಿತವಾಗಿರುತ್ತದೆ. ಆದಕ್ಕೆ ಹೊರತಾದ ಸೊತ್ತನ್ನು, ಅವನು ಗೋರಿಗೆ ಹೋಗುವಾಗ ತನ್ನ ವಾರೀಸುದಾರರಿಗೆ ಬಿಟ್ಟು ಹೋಗುವನು. *[ಮುಸ್ಲಿಮ್ - ವರದಿ: ಅಬೂ ಹುರೈರಾ(ರ)]*

ಟಿಪ್ಪಣಿ: ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದೆಂದರೆ ಅಗತ್ಯಕ್ಕಿಂತ ಹೆಚ್ಚಿರುವ ಸೊತ್ತನ್ನು ಧರ್ಮಸಂಸ್ಥಾಪನೆಯ ಚಟುವಟಿಕೆಗಳಲ್ಲಿ ತೊಡಗಿಸುವುದು. ನಿಮ್ಮ ಸಹೋದರರಾದ ಮತ್ತು ಅಲ್ಲಾಹನ ದಾಸರ ಮೇಲೆ ಖರ್ಚು ಮಾಡುವುದು. ಈ ವಿಷಯದ ಕುರಿತು ಹದೀಸ್‌ಗಳು ಈ ಮುಂಚೆ ಬಂದಿವೆ.

---

(344) عَنْ عُقْبَةَ بْنِ عَامِرٍ قَالَ سَمِعْتُ رَسُولَ اللهِ صلى الله عليه وسلم يَقُولُ كُلُّ امْرِئٍ فِي ظِلِّ صَدَقَتِهِ حَتَّى يُقْضَى بَيْنَ النَّاسِ (مسند احمد)

ಉಕ್ಬಾ ಬಿನ್ ಆಮಿರ್(ರ) ಹೇಳುತ್ತಾರೆ- ಪ್ರವಾದಿ(ಸ) ಹೀಗೆ ಹೇಳಿರುವುದಾಗಿ ನಾನು ಕೇಳಿದ್ದೇನೆ: ನಿರ್ಣಾಯಕ ದಿನದಂದು ವಿಚಾರಣೆ ಮುಗಿಯುವ ವರೆಗೆ ಮಾನವನು ತನ್ನ ದಾನಧರ್ಮದ ನೆರಳಿನಲ್ಲಿರುವನು. *[ಮುಸ್ನದ್ ಅಹ್ಮದ್]*

ಟಿಪ್ಪಣಿ: ಮಹ್‌ಶರದಲ್ಲಿ ಅತ್ಯುಷ್ಣವಿರುವುದು. ಅಸಹನೀಯವಾದ ಆ ಬಿಸಿಲಲ್ಲಿ ದಾನಧರ್ಮಗಳು ನೆರಳಿನ ರೂಪ ತಾಳುವುದು. ದಾನಿಯು ಅಂದು ತಾಪದಿಂದ ಸುರಕ್ಷಿತನಾಗುವನು.

---

(345) عَنِ الْحَسَنِ قَالَ، قَالَ رَسُوْلُ اللّٰهِ صلى الله عليه وسلم فِيْمَا يَرْوِيْ عَنْ رَبِّهٖ عَزَّ وَجَلَّ اِنَّهٗ يَقُوْلُ اَفْرِغْ مِنْ كَنْزِكَ عِنْدِيْ، وَلَا حَرَقَ وَلَا غَرَقَ وَلَا سَرَقَ، اُوْفِيْكَهٗ اَحْوَجَ مَا تَكُوْنُ اِلَيْهِ (طبرانی)

ಹಸನ್ ಬಸರೀ ತಾಬಈ(ರ) ಹೇಳುತ್ತಾರೆ- ಪ್ರವಾದಿಯವರು(ಸ) ಪ್ರತಾಪಶಾಲಿಯಾದ ಅಲ್ಲಾಹನ ಮಾತನ್ನು ಈ ರೀತಿ ಉದ್ಧರಿಸಿದ್ದಾರೆ: ಆದಮನ ಪುತ್ರನೇ! ನೀನು ನಿನ್ನ ಸೊತ್ತನ್ನು ನನ್ನ ಬೊಕ್ಕಸದಲ್ಲಿ ನಿಕ್ಷೇಪಿಸಿ ನಿಶ್ಚಿಂತನಾಗಿರು. ಬೆಂಕಿಯ ಅಪಾಯವಾಗಲಿ, ನೀರಿನಲ್ಲಿ ಮುಳುಗಿ ಹೋಗುವ ಭೀತಿಯಾಗಲಿ, ಕಳ್ಳನು ಕದಿಯುವನೆಂಬ ಹೆದರಿಕೆಯಾಗಲಿ ಇರಲಾರದು. ನನ್ನ ಬಳಿಯಲ್ಲಿಟ್ಟ ಸೊತ್ತನ್ನು ನೀನು ಅತ್ಯಂತ ಅಪೇಕ್ಷಿತನಾಗಿರುವ ಆ ದಿನ ನಾನು ನಿನಗೆ ಸಂಪೂರ್ಣ ಮರಳಿಸುವೆನು. *[ತಬ್ರಾನೀ]*

ಟಿಪ್ಪಣಿ: ಅಲ್ಲಾಹನ ಬ್ಯಾಂಕಿನಲ್ಲಿ ಸಂಪತ್ತು ನಿಕ್ಷೇಪಿಸುವುದೆಂದರೆ ಅಲ್ಲಾಹನ ಮಾರ್ಗದಲ್ಲಿ ನೀಡುವುದಾಗಿದೆ. ಅಲ್ಲಾಹನ ಮಾರ್ಗದಲ್ಲಿ ನೀಡಲಾದ ಸಂಪತ್ತು ಸಂಪೂರ್ಣ ಸುರಕ್ಷಿತವಾಗಿರುತ್ತದೆ. ಅದು ಅಗ್ನಿಯಿಂದಲೂ, ನೀರಿನಲ್ಲಿ ಮುಳುಗುವುದರಿಂದಲೂ ಕಳ್ಳಕಾಕರಿಂದಲೂ ಸುರಕ್ಷಿತವಾಗಿದ್ದು ಅದರ ಸಮಯ ಬಂದಾಗ ಸಂಪೂರ್ಣ ಮರುಪಾವತಿಯಾಗುತ್ತದೆ. ಅದೂ ಮನುಷ್ಯನು ಒಂದೊಂದು ಕಾಸಿಗೂ ಅಪೇಕ್ಷಿತನಾಗಿರುವ ಆ ದಿನ!

---

(346) قَالَ رَسُوْلُ اللّٰهِ صلى الله عليه وسلم مَا نَقَصَتْ صَدَقَةٌ مِّنْ مَالٍ وَمَا مَدَّ عَبْدٌ يَدَهٗ بِصَدَقَةٍ اِلَّا اُلْقِيَتْ فِيْ يَدِ اللّٰهِ قَبْلَ اَنْ تَقَعَ فِيْ يَدِ السَّائِلِ (المنذری بحوالہ طبرانی - ابن عباس رض)

ಪ್ರವಾದಿ(ಸ) ಹೇಳಿದರು - ಅಲ್ಲಾಹನ ಮಾರ್ಗದಲ್ಲಿ ನೀಡುವುದರಿಂದ ಸಂಪತ್ತು ಕಡಿಮೆಯಾಗುವುದಿಲ್ಲ. ಅಲ್ಲಾಹನ ಓರ್ವ ದಾಸನು ಸಂಪತ್ತನ್ನು ಖರ್ಚುಮಾಡಲು ಮುಂದಾದಾಗ ಅಪೇಕ್ಷಿತನ ಕೈಗೆ ಮುಟ್ಟುವುದಕ್ಕಿಂತ ಮುಂಚೆ ಅದು ಅಲ್ಲಾಹನ ಕೈಗೆ ತಲಪುತ್ತದೆ.

[ಅಲ್‌ಮುಂದಿರೀ, ತಬ್ರಾನಿಯಿಂದ. ವರದಿ: ಇಬ್ನು ಅಬ್ಬಾಸ್(ರ)]

---

(347) قَالَ النَّبِيُّ صلی اللہ علیہ وسلم الصَّدَقَةُ عَلَى الْمِسْكِيْنِ صَدَقَةٌ وَعَلَى ذِي الرَّحِمِ ثِنْتَانِ صَدَقَةٌ وَصِلَةٌ (نسائی و ترمذی ــ سلمان بن عامرؓ)

ಪ್ರವಾದಿ(ಸ) ಹೇಳಿದರು- ಸಂಬಂಧಿಕನಲ್ಲದ ಬಡವನಿಗೆ ನೀಡುವುದರಿಂದ ಒಂದು ಪುಣ್ಯ ಸಿಗುತ್ತದೆ. ಸಂಬಂಧಿಕನಾದ ಬಡವನಿಗೆ ನೀಡಿದರೆ ಇಮ್ಮಡಿ ಪುಣ್ಯ ಸಿಗುತ್ತದೆ. ಒಂದು, ದಾನದ ಪುಣ್ಯ. ಇನ್ನೊಂದು, ಸಂಬಂಧದ ಬಾಧ್ಯತೆಯನ್ನು ಪೂರೈಸಿದುದರ ಪುಣ್ಯ.

(ನಸಾಈ, ತಿರ್ಮಿದಿ, ವರದಿ: ಸಲ್ಮಾನ್ ಬಿನ್ ಆಮಿರ್(ರ)]

---

(348) عَنْ حَكِيْمِ بْنِ حِزَامٍ اَنَّ رَجُلًا سَاَلَ رَسُوْلَ اللّٰهِ صلی اللہ علیہ وسلم عَنِ الصَّدَقَاتِ اَيُّهَا اَفْضَلُ؟ قَالَ عَلٰى ذِي الرَّحِمِ الْكَاشِحِ (ترغیب)

ಹಕೀಮ್ ಬಿನ್ ಹಿಝಾಮ್(ರ) ವರದಿ ಮಾಡುತ್ತಾರೆ- ಪ್ರವಾದಿಯವರೊಡನೆ(ಸ) ಒಬ್ಬ ವ್ಯಕ್ತಿಯು, ಉತ್ತಮ ದಾನ ಯಾವುದು ಎಂದು ಕೇಳಿದನು. ಪ್ರವಾದಿ(ಸ) ಹೇಳಿದರು- ಮನುಷ್ಯನು ತನ್ನನ್ನು ದ್ವೇಷಿಸುವ ತನ್ನ ಬಡ ಸಂಬಂಧಿಕನಿಗೆ ನೀಡುವ ದಾನವೇ ಅತ್ಯುತ್ತಮವಾದುದು.

[ತರ್ಗೀಬ್]

---

(349) قَالَ رَسُوْلُ اللّٰهِ صلی اللہ علیہ وسلم اَفْضَلُ دِيْنَارٍ دِيْنَارٌ يُنْفِقُهُ عَلٰى عِيَالِهِ، وَدِيْنَارٌ يُنْفِقُهُ عَلٰى دَابَّةٍ فِيْ سَبِيْلِ اللّٰهِ، وَدِيْنَارٌ يُنْفِقُهُ عَلٰى اَصْحَابِهِ فِيْ سَبِيْلِ اللّٰهِ (مسلم ــ ثوبانؓ)

ಪ್ರವಾದಿ(ಸ) ಹೇಳಿದರು- ಸ್ಥಾನಮಾನ ಮತ್ತು ಪುಣ್ಯದ ದೃಷ್ಟಿಯಿಂದ ಮನುಷ್ಯನು ತನ್ನ ಮಕ್ಕಳು ಮರಿಗಳಿಗೆ ಖರ್ಚುಮಾಡುವ ಒಂದು ದೀನಾರ್(ರೂಪಾಯಿ) ಶ್ರೇಷ್ಠವಾಗಿದೆ. ಮನುಷ್ಯನು ಅಲ್ಲಾಹನ ಮಾರ್ಗದಲ್ಲಿ ಹೋರಾಡಲಿಕ್ಕಾಗಿ ಸವಾರಿ ಇತ್ಯಾದಿಗಳ ಖರೀದಿಗಾಗಿಯೂ ಸಿದ್ಧತೆಗಾಗಿಯೂ ಖರ್ಚು ಮಾಡುವ ಒಂದು ದೀನಾರ್ ಉತ್ತಮವಾಗಿದೆ. ಅಲ್ಲಾಹನ ಮಾರ್ಗದ ಹೋರಾಟದಲ್ಲಿರುವ ತನ್ನ ಸಂಗಾತಿಗಳ ಮೇಲೆ ಖರ್ಚು ಮಾಡುವ ಒಂದು ದೀನಾರ್ ಕೂಡಾ ಉತ್ತಮವಾಗಿದೆ.

[ಮುಸ್ಲಿಮ್- ವರದಿ: ಸೌಬಾನ್(ರ)]

---

(350) قَالَ رَسُوْلُ اللّٰهِ صلى الله عليه وسلم يَا ابْنَ آدَمَ إِنَّكَ أَنْ تَبْذُلَ الْفَضْلَ خَيْرٌ لَّكَ، وَأَنْ تُمْسِكَهُ شَرٌّ لَّكَ، وَلَا تُلَامُ عَلٰى كَفَافٍ، وَابْدَأْ بِمَنْ تَعُوْلُ (ترمذی ــــ ابوامامہؓ)

ಪ್ರವಾದಿ(ಸ) ಹೇಳಿದರು- ಆದಮನ ಪುತ್ರನೇ! ನೀನು ನಿನ್ನಲ್ಲಿ ಅಗತ್ಯಕ್ಕಿಂತ ಹೆಚ್ಚಿರುವ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ಕೊಟ್ಟರೆ ಅದು ನಿನಗೆ ಒಳಿತಾಗಿರುವುದು. ಒಂದು ವೇಳೆ ಅದನ್ನು ನೀಡದೆ ಜಿಪುಣತೆ ತೋರಿದರೆ ಅದು ನಿನಗೆ ಕಂಟಕವಾಗುವುದು. ನಿನ್ನ ಅಗತ್ಯಕ್ಕಿಂತ ಹೆಚ್ಚು ಸಂಪತ್ತು ನಿನ್ನ ಬಳಿಯಲ್ಲಿಲ್ಲದಿದ್ದರೆ ನೀನು ಅಲ್ಲಾಹನ ಬಳಿ ಆಕ್ಷೇಪಾರ್ಹನಲ್ಲ. (ಅಂದರೆ ನೀನು ಅಲ್ಲಾಹನ ಮಾರ್ಗದಲ್ಲಿ ನೀಡದಿದ್ದರೆ ಪಾಪಿಯಾಗಲಾರೆ) ನಿನ್ನ ಸಂಪತ್ತನ್ನು ಮೊಟ್ಟ ಮೊದಲು ನಿನ್ನ ಮಡದಿ ಮಕ್ಕಳ ಮೇಲೆ ಖರ್ಚು ಮಾಡು.

[ತಿರ್ಮಿದಿ - ವರದಿ: ಅಬೂ ಉಮಾಮ(ರ)]

ಟಿಪ್ಪಣಿ: ಇದು ಈ ಹಿಂದಿನ ಹದೀಸ್‌ನ ಮೊದಲ ಭಾಗದ ವಿವರಣೆಯಾಗಿದೆ. ಮಡದಿ ಮಕ್ಕಳನ್ನು ಉಪವಾಸವಿರಿಸಿ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದು ಒಳಿತೇನೂ ಅಲ್ಲ. ಹ. ಅಬೂಬಕರ್‌ರು(ರ) ಸಕಲ ಸಂಪತ್ತನ್ನೂ ಅರ್ಪಿಸಿದರು. ಅಲ್ಲಾಹನ ಮಾರ್ಗದಲ್ಲಿ ಸರ್ವಸ್ವವನ್ನೂ ಖರ್ಚು ಮಾಡುವುದು ಶ್ರೇಷ್ಠ ಕರ್ಮವಾಗಿದೆ. ತುರ್ತು ಅಗತ್ಯ ಬಂದಾಗ ಅವರು ಸರ್ವಸ್ವವನ್ನೂ ಅರ್ಪಿಸಿದರು. ಅವರಿಗೆ ಧಾನ್ಯ ಬರುತ್ತದೆಯೆಂಬ ದೃಢ ನಂಬಿಕೆಯಿತ್ತು. ಅಷ್ಟರೊಳಗೆ ಮಡದಿ ಮಕ್ಕಳು ಉಪವಾಸದಿಂದ ಸಾಯಲಾರರೆಂದು ಅವರು ನಂಬಿದ್ದರು. ಅವರ ಮಡದಿ ಮಕ್ಕಳು ಕೂಡಾ ಅಲ್ಲಾಹನ ಮಾರ್ಗದಲ್ಲಿ ಸರ್ವಸ್ವವನ್ನೂ ಅರ್ಪಿಸುವವರಾಗಿದ್ದರು.

---

(351) عَنِ ابْنِ مَسْعُوْدٍ قَالَ خَطَبَنَا النَّبِيُّ صلى الله عليه وسلم فَقَالَ تَصَدَّقْنَ يَا مَعْشَرَ النِّسَاءِ فَإِنَّكُنَّ أَكْثَرُ أَهْلِ جَهَنَّمَ يَوْمَ الْقِيَامَةِ، فَقَامَتِ امْرَأَةٌ لَيْسَتْ مِنْ عِلْيَةِ النِّسَاءِ، فَقَالَتْ لِمَ نَحْنُ أَكْثَرُ أَهْلِ جَهَنَّمَ؟ فَقَالَ لِأَنَّكُنَّ تُكْثِرْنَ اللَّعْنَ وَتَكْفُرْنَ الْعَشِيْرَ (مسند احمد)

ಇಬ್ನು ಮಸ್‌ವೂದ್(ರ) ಹೇಳುತ್ತಾರೆ- ಪ್ರವಾದಿ(ಸ) ಒಮ್ಮೆ ಮಹಿಳೆಯರನ್ನುದ್ದೇಶಿಸಿ ಭಾಷಣ ಮಾಡುತ್ತಾ- "ಮಹಿಳೆಯರೇ! ನೀವು ದಾನಧರ್ಮಗಳನ್ನು ಮಾಡಿರಿ. ಯಾಕೆಂದರೆ ನಿರ್ಣಾಯಕ ದಿನದಂದು ನರಕಾಗ್ನಿಯಲ್ಲಿ ನೀವು ಸ್ತ್ರೀಯರೇ ಅಧಿಕವಾಗಿರುವಿರಿ" ಎಂದು

ಹೇಳಿದರು. ಆಗ ಓರ್ವ ಕುಲೀನಳಲ್ಲದ (ಸಾಮಾನ್ಯ) ಸ್ತ್ರೀಯು, ನರಕದಲ್ಲಿ ನಾವು ಸ್ತ್ರೀಯರು ಅಧಿಕವಾಗಿರಲು ಕಾರಣವೇನು ಎಂದು ಕೇಳಿದಳು. ಪ್ರವಾದಿ(ಸ) ಹೇಳಿದರು- ಸ್ತ್ರೀಯರು ಹೆಚ್ಚು ಶಪಿಸುವವರೂ ತಮ್ಮ ಪತಿಯಂದಿರಿಗೆ ಕೃತಘ್ನತೆ ತೋರುವವರೂ ಆಗಿರುವುದರಿಂದ.

[ಮುಸ್ನದ್ ಅಹ್ಮದ್]

ಟಿಪ್ಪಣಿ: ತಾತ್ಪರ್ಯವೇನೆಂದರೆ ಸ್ತ್ರೀಯರ ನಾಲಗೆಯು ಕತ್ತರಿಯಂತೆ ಚಲಿಸುತ್ತದೆ. ಇತರರನ್ನು ಹಂಗಿಸುವುದು, ಚುಚ್ಚಿ ಮಾತಾಡುವುದು, ಅವರ ಕುಂದು ಕೊರತೆಗಳನ್ನು ಎತ್ತಿ ತೋರಿಸುವುದು, ಪರನಿಂದೆ, ಅಪವಾದ ಹೊರಿಸುವುದು ಇತ್ಯಾದಿ ಅವರ ವಿಶೇಷ ಹವ್ಯಾಸಗಳಾಗಿವೆ. ಅವರು ತಮ್ಮ ಪತಿಯಂದಿರಿಗೆ ಕೃತಘ್ನತೆ ತೋರುತ್ತಾರೆ. ತಮ್ಮ ಸ್ವಭಾವಕ್ಕೆ ವಿರುದ್ಧವಾಗಿ ಏನಾದರೂ ಆದರೆ ಪತಿಯಂದಿರ ಎಲ್ಲ ಉಪಕಾರಗಳನ್ನು ಮರೆತು ಬಿಡುತ್ತಾರೆ. ಈ ಮನೆಯಲ್ಲಿ ನನಗೆಂದೂ ಸುಖ ಸಿಗಲಿಲ್ಲ ಎಂದು ಹೇಳುತ್ತಾರೆ.

---

(352) قَالَ رَسُوْلُ اللّٰهِ صلى الله عليه وسلم بَيْنَا رَجُلٌ فِيْ فَلَاةٍ
مِنَ الْأَرْضِ، فَسَمِعَ صَوْتًا فِيْ سَحَابَةٍ اِسْقِ حَدِيْقَةَ فُلَانٍ، فَتَنَحَّى ذٰلِكَ
السَّحَابُ، فَأَفْرَغَ مَاءَهُ فِيْ حَرَّةٍ، فَإِذَا شَرْجَةٌ مِنْ تِلْكَ الشِّرَاجِ قَدِ اسْتَوْعَبَتْ
ذٰلِكَ الْمَاءَ كُلَّهُ، فَتَتَبَّعَ الْمَاءَ، فَإِذَا رَجُلٌ قَائِمٌ فِيْ حَدِيْقَتِهٖ يُحَوِّلُ الْمَاءَ بِمِسْحَاتِهٖ
فَقَالَ لَهٗ يَا عَبْدَ اللّٰهِ مَا اسْمُكَ؟ قَالَ فُلَانٌ لِلْاِسْمِ الَّذِيْ سَمِعَ فِي السَّحَابَةِ
فَقَالَ لَهٗ يَا عَبْدَ اللّٰهِ لِمَ سَأَلْتَنِيْ عَنِ اسْمِيْ؟ قَالَ قَدْ سَمِعْتُ فِي السَّحَابِ
الَّذِيْ هٰذَا مَاؤُهٗ اِسْقِ حَدِيْقَةَ فُلَانٍ لِاسْمِكَ فَمَا تَصْنَعُ فِيْهَا؟ قَالَ أَمَّا
إِذْ قُلْتَ هٰذَا، فَإِنِّيْ أَنْظُرُ إِلٰى مَا يَخْرُجُ مِنْهَا فَأَتَصَدَّقُ بِثُلُثِهٖ، وَآكُلُ أَنَا
وَعِيَالِيْ ثُلُثَهٗ، وَأَرُدُّ ثُلُثَهٗ (مسلم — ابوہریرہ رض)

ಪ್ರವಾದಿ(ಸ) ಹೇಳಿದರು- ಒಬ್ಬ ವ್ಯಕ್ತಿ ಕಾಡಿನಲ್ಲಿ ಹೋಗುತ್ತಿದ್ದನು. ಒಮ್ಮೆಲೆ ಅವನಿಗೆ ಮೇಲಿನಿಂದ ಒಂದು ಶಬ್ದ ಕೇಳಿಸಿತು. ಯಾರೋ ಹೇಳುತ್ತಿದ್ದರು, "ಮೇಘಗಳೇ! ಇಂತಹ ವ್ಯಕ್ತಿಯ ತೋಟದ ಮೇಲೆ ಸುರಿದು ಅದನ್ನು ಫಲವತ್ತಾಗಿಸಿರಿ." ಆಗ ಮೇಘಗಳು ಒಂದು ದಿಕ್ಕಿಗೆ ಚಲಿಸಿದುವು. ಅವು ನೀರನ್ನು ಒಂದು ಪೀಠ ಭೂಮಿಯ ಮೇಲೆ ಸುರಿಸಿದುವು. ಅಲ್ಲಿ ಒಂದು ನಾಲೆಯಿತ್ತು. ಅದು ಆ ಎಲ್ಲ ನೀರನ್ನು ತನ್ನಲ್ಲಿ ಸೆಳೆದುಕೊಂಡು ಹರಿಯ

ತೊಡಗಿತು. ಈ ಯಾತ್ರಿಕನು ಆ ನೀರಿನೊಂದಿಗೇ ನಡೆದನು. ಒಬ್ಬ ವ್ಯಕ್ತಿಯು ತೋಟದಲ್ಲಿ ತನ್ನ ಹಾರೆಯಿಂದ ನೀರನ್ನು ತನ್ನ ತೋಟದ ಕಡೆಗೆ ತಿರುಗಿಸುತ್ತಿದ್ದನು. ತೋಟಗಾರನೊಂದಿಗೆ ಆ ಯಾತ್ರಿಕ ನಿನ್ನ ಹೆಸರೇನೆಂದು ಕೇಳಿದನು. ಆತ ತಾನು ಅಂತರಿಕ್ಷದಲ್ಲಿ ಕೇಳಿದ್ದ ಅದೇ ಹೆಸರನ್ನು ಹೇಳಿದನು. ಆತ, ನೀನೇಕೆ ನನ್ನ ಹೆಸರು ಕೇಳಿದೆಯೆಂದು ಪ್ರಶ್ನಿಸಿದನು. ಯಾತ್ರಿಕನು ಹೇಳಿದನು- ನಾನು ಅಂತರಿಕ್ಷದಲ್ಲಿ ಒಂದು ಶಬ್ದ ಕೇಳಿದೆ. ಮೇಘಗಳೇ! ಇಂಥವನ ತೋಟವನ್ನು ಫಲವತ್ತಾಗಿಸಿರಿ ಎಂದು ಯಾರೋ ಹೇಳುತ್ತಿದ್ದರು. ಈಗ ಹೇಳಿ, ನೀವು ನಿಮ್ಮ ತೋಟದ ಉತ್ಪನ್ನಗಳಿಂದ ಏನು ಮಾಡುತ್ತೀರಿ. ಅಲ್ಲಾಹನು ನಿಮ್ಮ ಮೇಲೆ ಇಷ್ಟೊಂದು ಅನುಗ್ರಹ ಸುರಿಸಲು ಕಾರಣವೇನು? ತೋಟಗಾರನು ಹೇಳಿದನು - ನೀನೀಗ ಕೇಳಿಬಿಟ್ಟೆ. ಪರಿಸ್ಥಿತಿಯ ಸಂಪೂರ್ಣ ಅರಿವು ನಿನಗೆ ಆಗಿಬಿಟ್ಟಿದೆ. ಆದುದರಿಂದ ನಾನು ಹೇಳುತ್ತೇನೆ, ಕೇಳು, ಈ ತೋಟದ ಉತ್ಪನ್ನದಿಂದ ನಾನು ಮೂರು ಪಾಲು ಮಾಡುತ್ತೇನೆ. ಒಂದು ಪಾಲನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುತ್ತೇನೆ. ಇನ್ನೊಂದು ಪಾಲನ್ನು ನಾನು ಮತ್ತು ನನ್ನ ಸಂಬಂಧಿಕರು ತಿನ್ನುತ್ತೇವೆ. ಮೂರನೇ ಪಾಲನ್ನು ಇದೇ ತೋಟದ ಅಭಿವೃದ್ಧಿಗಾಗಿ ಖರ್ಚು ಮಾಡುತ್ತೇನೆ. *[ಮುಸ್ಲಿಮ್ - ಅಬೂ ಹುರೈರಾ(ರ)]*

---

(353) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اِنَّ مِمَّا يَلْحَقُ الْمُؤْمِنَ مِنْ عَمَلِهٖ وَحَسَنَاتِهٖ
بَعْدَ مَوْتِهٖ عِلْمًا عَلَّمَهٗ وَنَشَرَهٗ، اَوْ وَلَدًا صَالِحًا تَرَكَهٗ ۔ اَوْ مُصْحَفًا وَرَّثَهٗ،
اَوْ مَسْجِدًا بَنَاهُ، اَوْ بَيْتًا لِابْنِ السَّبِيْلِ بَنَاهُ ۔ اَوْ نَهْرًا اَجْرَاهُ، اَوْ صَدَقَةً اَخْرَجَهَا
مِنْ مَالِهٖ فِيْ صِحَّتِهٖ وَحَيَاتِهٖ تَلْحَقُهٗ مِنْ بَعْدِ مَوْتِهٖ
(ترغیب بحوالہ صحیح ابن خزیمہ – ابوہریرہؓ)

ಪ್ರವಾದಿ(ಸ) ಹೇಳಿದರು - ಸತ್ಯವಿಶ್ವಾಸಿಯು ಮರಣ ಹೊಂದಿದ ಬಳಿಕ ಅವನ ಕೆಲವು ಒಳಿತುಗಳಿಗೆ ಪುಣ್ಯ ಸಿಗುತ್ತಿರುತ್ತದೆ. ಅವು ಹೀಗಿವೆ: 1) ಯಾರಿಗಾದರೂ ಧರ್ಮದ ಜ್ಞಾನವನ್ನು ಕಲಿಸಿ ಅದನ್ನು ಪ್ರಚಾರ ಮಾಡುವುದು. 2) ಒಳ್ಳೆಯ ಪುತ್ರ ಅಥವಾ ಪುತ್ರಿಯನ್ನು (ಅವನಿಗಾಗಿ ಪ್ರಾರ್ಥಿಸಲು) ಬಿಟ್ಟು ಹೋಗುವುದು. 3) ಯಾರಿಗಾದರೂ ಪವಿತ್ರ ಕುರ್‌ಆನ್ ನೀಡುವುದು. 4) ಮಸೀದಿ ಕಟ್ಟಿಸುವುದು. 5) ಪ್ರಯಾಣಿಕರ ತಂಗುದಾಣ ನಿರ್ಮಿಸುವುದು. (ಧಾರ್ಮಿಕ ಶಾಲೆಗಳ ಹಾಸ್ಟೆಲ್‌ಗಳ ನಿರ್ಮಾಣವೂ ಇದರಲ್ಲಿ ಸೇರುತ್ತದೆ.) 6) ಕಾಲುವೆ ತೋಡುವುದು. 7) ಇನ್ನೇನಾದರೂ ಒಳ್ಳೆಯ ಕಾರ್ಯಗಳನ್ನು ಮಾಡಲು ಹಣ ತೊಡಗಿಸುವುದು-

ಈ ಎಲ್ಲ ವಸ್ತುಗಳಿಂದ ಜನರು ಪ್ರಯೋಜನ ಪಡೆಯುತ್ತಿರುವ ಕಾಲದ ವರೆಗೆ ಅವನ ಕರ್ಮಪತ್ರದಲ್ಲಿ ಪುಣ್ಯ ಬರೆಯುತ್ತಲೇ ಇರುವುದು.

[ತರ್ಗೀಬ್, ಇಬ್ನು ಖುಝೈಮದಿಂದ. ವರದಿ: ಅಬೂ ಹುರೈರಾ(ರ)]

ಟಿಪ್ಪಣಿ: ಇನ್ನು ಕೆಲವು ಹದೀಸ್‌ಗಳಲ್ಲಿ ಬಾವಿ ತೋಡಿಸುವ ಮತ್ತು ಮರಗಳನ್ನು ನೆಡುವ ಪ್ರಸ್ತಾಪವೂ ಇದೆ. ಇಂತಹ ಸದಕಾ(ದಾನ)ಗಳಿಗೆ 'ಸದಕತುನ್ ಜಾರಿಯಃ' ಎನ್ನುತ್ತಾರೆ. ಪ್ರಸ್ತುತ ಹದೀಸ್‌ನಲ್ಲಿ ಉಲ್ಲೇಖಿಸಿರುವ ಕಾರ್ಯಗಳು ಮಾತ್ರ 'ಸದಕತುನ್ ಜಾರಿಯಃ' ಅಲ್ಲ. ಅವುಗಳ ಹೊರತು ಇನ್ನಿತರ ಕಾರ್ಯಗಳೂ ಇರಬಹುದು. ಉದಾ: ಧಾರ್ಮಿಕ ವಿದ್ಯಾಲಯಗಳಿಗೆ ಗ್ರಂಥಗಳನ್ನು ವಕ್ಫ್ ಮಾಡುವುದು, ತಮ್ಮ ಆಸ್ತಿಯನ್ನು ಧಾರ್ಮಿಕ ವಿದ್ಯಾಲಯಗಳಿಗೆ ವಕ್ಫ್ ಮಾಡುವುದು ಇತ್ಯಾದಿ.

---

(354) عَنْ اَبِیْ ذَرٍّ قَالَ ، اِنْتَهَيْتُ اِلَى النَّبِیِّ صَلَّى اللّٰهُ عَلَيْهِ وَسَلَّمَ وَهُوَ جَالِسٌ فِیْ ظِلِّ
الْكَعْبَةِ ، فَلَمَّا رَآنِیْ قَالَ هُمُ الْاَخْسَرُوْنَ ! فَقُلْتُ فِدَاكَ اَبِیْ وَاُمِّیْ مَنْ هُمْ ؟ قَالَ
هُمُ الْاَكْثَرُوْنَ اَمْوَالًا اِلَّا مَنْ قَالَ هٰكَذَا وَهٰكَذَا وَهٰكَذَا مِنْ بَيْنِ يَدَيْهِ وَمِنْ
خَلْفِهٖ وَعَنْ شِمَالِهٖ ، وَقَلِيْلٌ مَّا هُمْ (بخاری ومسلم)

ಅಬೂದರ್(ರ) ಹೇಳುತ್ತಾರೆ- ನಾನು ಪ್ರವಾದಿವರ್ಯರ(ಸ) ಬಳಿಗೆ ಹೋದೆ. ಆಗ ಅವರು ಕಅಬಾ ಭವನದ ನೆರಳಿನಲ್ಲಿ ಕುಳಿತಿದ್ದರು. ಅವರ ದೃಷ್ಟಿಯು ನನ್ನ ಮೇಲೆ ಬಿದ್ದಾಗ, "ಆ ಜನರು ಸಂಪೂರ್ಣ ನಾಶಗೊಂಡರು" ಎಂದು ಹೇಳಿದರು. ನಾನು ಕೇಳಿದೆ - ನನ್ನ ತಂದೆ ತಾಯಿಗಳು ತಮಗೆ ಅರ್ಪಿತ! ಯಾರದು ನಾಶ ಹೊಂದುವವರು? ಪ್ರವಾದಿ(ಸ) ಹೇಳಿದರು- ಸ್ಥಿತಿವಂತರಾಗಿದ್ದೂ ಅಲ್ಲಾಹನ ಮಾರ್ಗದಲ್ಲಿ ಹಣ ಖರ್ಚು ಮಾಡದವರು ಸಂಪೂರ್ಣ ನಾಶ ಹೊಂದುವರು. ತಮ್ಮ ಸಂಪತ್ತನ್ನು ಧಾರೆಯೆರೆಯುವವರು, ತಮ್ಮ ಮುಂದೆ ಇರುವವರಿಗೆ, ತಮ್ಮ ಹಿಂದೆ ಇರುವವರಿಗೆ ಮತ್ತು ತಮ್ಮ ಎಡಭಾಗದಲ್ಲಿರುವವರಿಗೆ ನೀಡುವವರು ವಿಜಯ ಹೊಂದುವರು. ಆದರೆ ಇಂತಹವರು ಬಹಳ ಕಡಿಮೆ.

[ಬುಖಾರಿ, ಮುಸ್ಲಿಮ್]

ಟಿಪ್ಪಣಿ: ಮನುಷ್ಯನು ಲೋಭಿಯಾಗಲು ಮುಖ್ಯ ಕಾರಣ ಸಂತಾನದ ಮೇಲಿರುವ ಪ್ರೀತಿ ಯಾಗಿದೆ. ಅವರ ಭವಿಷ್ಯವನ್ನು ಉತ್ತಮಗೊಳಿಸಲಿಕ್ಕಾಗಿ ಅವನು ಹಣ ಕೂಡಿಡುತ್ತಾನೆ. ಅದನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದಿಲ್ಲ. ಆದರೆ ಅವನ ಸಂತಾನವು ಬಡತನ ಮತ್ತು ದಾರಿದ್ರ್ಯಕ್ಕೆ ಸಿಲುಕುವ ಸಾಧ್ಯತೆಯೂ ಇದೆ. ಅವರ ಲೋಕವನ್ನು ಬೆಳಗಿಸುವ ಯೋಜನೆಯಲ್ಲಿ ಅವರಿಗಾಗಲಿ, ಹೆತ್ತವರಿಗಾಗಲಿ ಒಳಿತಾಗದಿರಬಹುದು. ಇದನ್ನು ತಬ್ರಾನಿಯಲ್ಲಿ ಉಲ್ಲೇಖಗೊಂಡಿರುವ ಹ. ಅಬ್ದುಲ್ಲಾ ಬಿನ್ ಮಸ್‌ವೂದ್‌ರ(ರ) ಈ ಕೆಳಗಿನ ಹದೀಸ್ ಇನ್ನಷ್ಟು ಸ್ಪಷ್ಟಪಡಿಸುತ್ತದೆ,

ಅಲ್ಲಾಹನು ತನ್ನ ದಾಸರ ಪೈಕಿ ಇಬ್ಬರನ್ನು ನಿರ್ಣಾಯಕ ದಿನದಂದು ಕರೆಯುವನು. ಈ ಇಬ್ಬರಿಗೂ ಅಲ್ಲಾಹನು ಹೆಚ್ಚು ಸಂಪತ್ತು ಮತ್ತು ಸಂತಾನಗಳನ್ನು ದಯಪಾಲಿಸಿದ್ದನು. ಅವರಲ್ಲೊಬ್ಬನೊಡನೆ ಅಲ್ಲಾಹನು "ಓ ಇಂಥವನೇ?" ಎಂದು ಹೇಳುವನು. ಅವನು ಕೇಳುವನು- "ದಾಸ ಹಾಜರಿದ್ದಾನೆ, ಏನಪ್ಪಣೆ?" ಅಲ್ಲಾಹನು ಕೇಳುವನು - "ನಾನು ನಿನಗೆ ಹೆಚ್ಚು ಸಂಪತ್ತು-ಸಂತಾನಗಳನ್ನು ದಯಪಾಲಿಸಿರಲಿಲ್ಲವೇ?" ಅವನು ಹೇಳುವನು, "ಹೌದು ನನ್ನ ಪ್ರಭೂ, ಖಂಡಿತ ನೀನು ನನಗೆ ಬಹಳಷ್ಟು ಸಂಪತ್ತು ಮತ್ತು ಸಂತಾನವನ್ನು ಪ್ರದಾನ ಮಾಡಿರುವೆ." ಅಲ್ಲಾಹ್ ಹೇಳುವನು - "ನೀನು ಅದನ್ನು ಏನು ಮಾಡಿದೆ. ಯಾವ ಕಾರ್ಯಗಳಲ್ಲಿ ವ್ಯಯಿಸಿದೆ?" ಅವನು ಹೇಳುವನು- "ನನ್ನ ಪ್ರಭೂ, ನಾನು ಆ ಸಂಪತ್ತನ್ನು ನನ್ನ ಸಂತಾನಗಳಿಗೆ- ಅವರು ನನ್ನ ಬಳಿಕ ದಾರಿದ್ರ್ಯದಲ್ಲಿ ಸಿಲುಕಬಾರದೆಂಬ ಉದ್ದೇಶದಿಂದ- ಬಿಟ್ಟಿದ್ದೇನೆ." ಅಲ್ಲಾಹ್ ಹೇಳುವನು, "ನೀನು ವಾಸ್ತವಿಕತೆಯನ್ನು ಅರಿತಿದ್ದರೆ ನಗುತ್ತಿರಲಿಲ್ಲ; ಸದಾ ಅಳುತ್ತಿದ್ದೆ. ನೋಡು ನಾನು ನಿನಗೆ ತೋರಿಸುತ್ತೇನೆ. ನಿನ್ನ ಸಂತಾನವು ದಾರಿದ್ರ್ಯದಲ್ಲಿ ಜೀವನ ಸಾಗಿಸುತ್ತಿದೆ" (ನಿನ್ನ ಯೋಜನೆಯಿಂದ ನಿನ್ನ ಸಂತಾನಕ್ಕೆ ಪ್ರಯೋಜನವಾಗಲಿಲ್ಲ).

ತರುವಾಯ ಇನ್ನೊಬ್ಬನನ್ನು ಕರೆಯುವನು. ಅದೇ ಪ್ರಶ್ನೆಯನ್ನು ಅವನಿಗೂ ಹಾಕುವನು. ಅವನು ಹೇಳುವನು - "ನನ್ನ ಪ್ರಭೂ! ನೀನು ದಯಪಾಲಿಸಿದ್ದ ಸಂಪತ್ತನ್ನು ನಿನ್ನ ದಾಸ್ಯದ ಮಾರ್ಗದಲ್ಲಿ ಖರ್ಚು ಮಾಡಿದೆ. ನನ್ನ ಸಂತಾನಗಳ ಬಗ್ಗೆ ನಿನ್ನ ಕೃಪಾಶ್ರಯವನ್ನೇ ನಂಬಿದೆ. ನೀನು ಅವರನ್ನು ಹಾಳು ಮಾಡಲಾರೆ ಎಂಬ ನಂಬಿಕೆಯೊಂದಿಗೆ ಅವರನ್ನು ನಿನ್ನ ಕೃಪಾಶ್ರಯಕ್ಕೆ ಒಪ್ಪಿಸಿದೆ." ಅಲ್ಲಾಹ್ ಹೇಳುವನು- "ಕೇಳು! ನಿನ್ನ ಸಂತಾನಗಳ ಬಗ್ಗೆ ನೀನು ಏನನ್ನು ನಂಬಿದ್ದೆಯೋ ನಿನ್ನ ನಂತರ ಅದನ್ನೇ ನಾನು ನೀಡಿದೆ. ನಿನ್ನ ಸಂತಾನವು ಸಂಪನ್ನ ಹಾಗೂ ಸಂತೃಪ್ತ ಜೀವನ ಸಾಗಿಸುತ್ತಿದೆ."

ತೌಬಾ ಮತ್ತು ಇಸ್ತಿಗ್‌ಫಾರ್

ಸಂದೇಶ ಪ್ರಚಾರ ಕಾರ್ಯದಲ್ಲಿ ಶಕ್ತಿ ಗಳಿಸಲಿಕ್ಕಿರುವ ಪ್ರಭಾವಕಾರಿ ಉಪಾಧಿ ತೌಬಾ- ಇಸ್ತಿಗ್‌ಫಾರ್, ದಿಕ್ರ್ ಮತ್ತು ದುಆ (ಪಶ್ಚಾತ್ತಾಪ, ಕ್ಷಮಾಯಾಚನೆ, ಅಲ್ಲಾಹನ ಸ್ಮರಣೆ ಮತ್ತು ಪ್ರಾರ್ಥನೆ)ಗಳಾಗಿವೆ. ಅಲ್ಲಾಹನತ್ತ ಮರಳಿ ಪಾಪಗಳಿಗೆ ಕ್ಷಮೆ ಯಾಚಿಸುವುದರಿಂದಲೂ ದಿಕ್ರ್ ದುಆಗಳಿದಂಲೂ ದಾಸ್ಯ ಪ್ರಜ್ಞೆ ಜಾಗೃತವಾಗುತ್ತದೆ ಮತ್ತು ಸಂದೇಶ ಪ್ರಚಾರ ಕಾರ್ಯದಲ್ಲಿ ಸ್ಫೂರ್ತಿಯುಂಟಾಗುತ್ತದೆ. ಅದರ ಬಲವರ್ಧನೆಯಾಗುತ್ತದೆ. ಈ ವಿಷಯಗಳಿಗೆ ಸಂಬಂಧಿಸಿದ ಕೆಲವು ಹದೀಸ್‌ಗಳನ್ನು ಇಲ್ಲಿ ಕೊಡಲಾಗಿದೆ.

(355) قَالَ رَسُوْلُ اللهِ صلى الله عليه وسلم اَللهُ اَفْرَحُ بِتَوْبَةِ عَبْدِهٖ مِنْ اَحَدِكُمْ سَقَطَ عَلٰى بَعِيْرِهٖ وَقَدْ اَضَلَّهٗ فِيْ اَرْضٍ فَلَاةٍ (بخاری ومسلم — انس بن مالکؓ)

ಪ್ರವಾದಿ(ಸ) ಹೇಳಿದರು- ದಾಸನು ಪಾಪ ಮಾಡಿದ ಬಳಿಕ ಕ್ಷಮಾಪಣೆಗಾಗಿ ಅಲ್ಲಾಹನತ್ತ ಮರಳಿದಾಗ ಅಲ್ಲಾಹನಿಗೆ ಎಷ್ಟು ಸಂತೋಷವಾಗುತ್ತದೆಂದರೆ, "ಒಬ್ಬನು

ಮರುಭೂಮಿಯಲ್ಲಿ ಪ್ರಯಾಣ ಮಾಡುತ್ತಾ ಒಂದು ಮರದ ಆಶ್ರಯದಲ್ಲಿ ಮಲಗಿ ನಿದ್ರಿಸಿದ್ದು, ಸ್ವಲ್ಪ ಹೊತ್ತಿನ ಬಳಿಕ ಎಚ್ಚರವಾದಾಗ ಅವನ ಒಂಟೆಯು ಆಹಾರ ಮತ್ತು ನೀರು ಸಮೇತ ಕಾಣೆಯಾಗಿರುತ್ತದೆ. ತನ್ನ ಏಕೈಕ ಆಶ್ರಯವಾಗಿದ್ದ ಒಂಟೆಯನ್ನು ಹುಡುಕಿ ಹುಡುಕಿ ಕಂಗಾಲಾಗಿ, ಕೊನೆಗೆ ನಿರಾಶೆಗೊಂಡು ಅದೇ ಮರದಡಿಯಲ್ಲಿ ಬಂದು ಸಾಯಲಿಕ್ಕೆಂದು ಮಲಗಿ ಇನ್ನೊಂದು ಪಾರ್ಶ್ವಕ್ಕೆ ತಿರುಗಿದಾಗ ಒಂಟೆಯು ತನ್ನ ಬಳಿ ನಿಂತಿರುವುದನ್ನು ಕಾಣುತ್ತಾನೆ. ಆಗ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುವ ತರಾತುರಿಯಲ್ಲಿ, 'ಅಲ್ಲಾಹನೇ ನಿನಗೆ ಕೃತಜ್ಞತೆ, ನೀನು ನನ್ನ ಪ್ರಭು, ನಾನು ನಿನ್ನ ದಾಸ ಎಂದು ಹೇಳುವ ಬದಲು ಅತಿಯಾದ ಸಂತೋಷದಿಂದ ಅವನ ಬಾಯಿಯಿಂದ, "ಓ ಅಲ್ಲಾಹ್! ನಾನು ನಿನ್ನ ಪ್ರಭು ಮತ್ತು ನೀನು ನನ್ನ ದಾಸ" ಎಂಬ ಶಬ್ದಗಳು ಹೊರಡುತ್ತವೆ.

ಪ್ರವಾದಿ(ಸ) ಹೇಳುತ್ತಾರೆ - ಓರ್ವ ದಾಸನು ಪಾಪ ಮಾಡಿದ ಬಳಿಕ ಪಶ್ಚಾತ್ತಾಪ ಪಟ್ಟು, ಕ್ಷಮಾಪಣೆ ಮಾಡಿದಾಗ ಅಲ್ಲಾಹನಿಗೆ ಆ ಮರುಭೂಮಿಯ ಯಾತ್ರಿಕನಿಗೆ ಆಗುವ ಸಂತೋಷಕ್ಕಿಂತ ಹೆಚ್ಚು ಸಂತೋಷವಾಗುತ್ತದೆ.

[ಬುಖಾರಿ, ಮುಸ್ಲಿಮ್- ವರದಿ: ಅನಸ್ ಬಿನ್ ಮಾಲಿಕ್(ರ)]

ಟಿಪ್ಪಣಿ: ಪ್ರಸ್ತುತ ಹದೀಸ್‌ನಲ್ಲಿ ವಿಷಯವನ್ನು ಬಹಳ ಸಂಕ್ಷಿಪ್ತವಾಗಿ ಹೇಳಲಾಗಿದೆ. ನಾವು ಈ ವಿಷಯಕ್ಕೆ ಸಂಬಂಧಿಸಿದ ಇತರ ಹದೀಸ್‌ಗಳನ್ನು ಮುಂದಿಟ್ಟು ವಿಶದ ಪಡಿಸಿರುತ್ತೇವೆ. ಅಲ್ಲಾಹನ ಕರುಣೆ ಎಷ್ಟೊಂದು ಅಪಾರವೆಂಬುದನ್ನು ಯೋಚಿಸಿ ನೋಡಿ.

---

(356) قَالَ رَسُولُ اللهِ صَلَّى اللهُ عَلَيْهِ وَسَلَّمَ إِنَّ اللهَ يَبْسُطُ يَدَهُ بِاللَّيْلِ لِيَتُوبَ مُسِيءُ النَّهَارِ، وَيَبْسُطُ يَدَهُ بِالنَّهَارِ لِيَتُوبَ مُسِيءُ اللَّيْلِ حَتَّى تَطْلُعَ الشَّمْسُ مِنْ مَغْرِبِهَا (مسلم — ابوموسیٰ اشعریؓ)

ಪ್ರವಾದಿ(ಸ) ಹೇಳಿದರು: ಹಗಲಿನಲ್ಲಿ ಪಾಪ ಮಾಡಿ ತನ್ನಿಂದ ದೂರ ಸರಿದಿದ್ದವರು ಪಶ್ಚಾತ್ತಾಪ ಪಟ್ಟು ಮರಳಿದಾಗ ಅವರನ್ನು ತನ್ನ ಹತ್ತಿರ ಮಾಡಿಕೊಳ್ಳಲಿಕ್ಕಾಗಿ! ಅಲ್ಲಾಹನು ರಾತ್ರಿ ಹೊತ್ತು ತನ್ನ ಕೈ ಚಾಚುತ್ತಾನೆ. ಅದೇ ರೀತಿ ರಾತ್ರಿ ಹೊತ್ತು ಪಾಪ ಮಾಡಿ ತನ್ನಿಂದ ದೂರ ಸರಿದಿದ್ದವರು ಪಶ್ಚಾತ್ತಾಪಪಟ್ಟು ಮರಳಿದಾಗ ಅವರನ್ನು ತನ್ನ ಹತ್ತಿರಗೊಳಿಸಲಿಕ್ಕಾಗಿ! ಅವನು ಹಗಲಿನಲ್ಲಿ ಕೈ ಚಾಚುತ್ತಾನೆ. (ತನ್ನಿಂದ ದೂರವಾದವರನ್ನು ತನ್ನ ಆಶ್ರಯದಲ್ಲಿ ಸೇರಿಸಿ ಶೈತಾನನ ಜಾಲದಿಂದ ರಕ್ಷಿಸಲಿಕ್ಕಾಗಿಯೇ ಈ ರೀತಿ ಅಲ್ಲಾಹನು ತನ್ನ ಕೈ ಚಾಚುತ್ತಾನೆ) ಇದು ಸೂರ್ಯನು ಪಶ್ಚಿಮದಿಂದ ಉದಯಿಸುವ ತನಕ ನಡೆಯುತ್ತಿರುವುದು.

[ಮುಸ್ಲಿಮ್- ವರದಿ: ಅಬೂ ಮೂಸಾ ಅಶ್‌ಅರೀ(ರ)]

---

(357) عَنْ اَبِیْ ذَرٍّ عَنِ النَّبِیِّ صَلَّی اللّٰہُ عَلَیْہِ وَسَلَّمَ فِیْمَا یَرْوِیْ عَنْ رَّبِّہٖ تَبَارَکَ وَتَعَالٰی
اَنَّہٗ قَالَ یَا عِبَادِیْ اِنِّیْ حَرَّمْتُ الظُّلْمَ عَلٰی نَفْسِیْ وَجَعَلْتُہٗ بَیْنَکُمْ مُحَرَّمًا فَلَا تَظَالَمُوْا
یَا عِبَادِیْ کُلُّکُمْ ضَالٌّ اِلَّا مَنْ ھَدَیْتُہٗ، فَاسْتَھْدُوْنِیْ اَھْدِکُمْ، یَا عِبَادِیْ
کُلُّکُمْ جَائِعٌ اِلَّا مَنْ اَطْعَمْتُہٗ، فَاسْتَطْعِمُوْنِیْ اُطْعِمْکُمْ، یَا عِبَادِیْ کُلُّکُمْ عَارٍ اِلَّا
مَنْ کَسَوْتُہٗ، فَاسْتَکْسُوْنِیْ اَکْسُکُمْ، یَا عِبَادِیْ اِنَّکُمْ تُخْطِئُوْنَ بِاللَّیْلِ
وَالنَّھَارِ وَاَنَا اَغْفِرُ الذُّنُوْبَ جَمِیْعًا، فَاسْتَغْفِرُوْنِیْ اَغْفِرْ لَکُمْ (مسلم)

ಅಬೂದರ್(ರ) ವರದಿ ಮಾಡುತ್ತಾರೆ- ಅಲ್ಲಾಹನು ಹೇಳಿರುವುದಾಗಿ ಪ್ರವಾದಿ(ಸ) ಹೇಳಿದರು: ನನ್ನ ದಾಸರೇ! ನಾನು ನನ್ನ ಮೇಲೆ ಅಕ್ರಮವನ್ನು ನಿಷಿದ್ಧಗೊಳಿಸಿದ್ದೇನೆ. ನೀವು ಪರಸ್ಪರ ಅಕ್ರಮವೆಸಗಬೇಡಿ. ನನ್ನ ದಾಸರೇ! ನಾನು ಸನ್ಮಾರ್ಗ ತೋರಿಸಿದವನ ಹೊರತು ನಿಮ್ಮ ಪೈಕಿ ಪ್ರತಿಯೊಬ್ಬನೂ ದಾರಿತಪ್ಪಿದವನಾಗಿದ್ದಾನೆ. ನೀವು ನನ್ನೊಂದಿಗೆ ಸನ್ಮಾರ್ಗವನ್ನು ಅಪೇಕ್ಷಿಸಿದರೆ ನಾನು ನಿಮಗೆ ಸನ್ಮಾರ್ಗವನ್ನು ತೋರಿಸುವೆನು. ನನ್ನ ದಾಸರೇ! ನಾನು ಉಣಿಸಿದವನ ಹೊರತು ನಿಮ್ಮ ಪೈಕಿ ಪ್ರತಿಯೊಬ್ಬನೂ ಹಸಿದವನಾಗಿದ್ದಾನೆ. ನೀವು ನನ್ನೊಂದಿಗೆ ಆಹಾರ ಬೇಡಿದರೆ ನಾನು ನಿಮಗೆ ಉಣಿಸುವೆನು. ನನ್ನ ದಾಸರೇ! ನಾನು ಬಟ್ಟೆ ತೊಡಿಸಿದವನ ಹೊರತು ನಿಮ್ಮ ಪೈಕಿ ಪ್ರತಿಯೊಬ್ಬನೂ ನಗ್ನನಾಗಿದ್ದಾನೆ. ನೀವು ನನ್ನೊಂದಿಗೆ ಬಟ್ಟೆ ಬೇಡಿದರೆ ನಾನು ನಿಮಗೆ ತೊಡಿಸುವೆನು. ನನ್ನ ದಾಸರೇ! ನಿಮ್ಮ ಪೈಕಿ ಪ್ರತಿಯೊಬ್ಬನೂ ಹಗಲಿನಲ್ಲೂ ರಾತ್ರಿಯಲ್ಲೂ ಪಾಪ ಮಾಡುತ್ತಾನೆ. ನಾನು ಎಲ್ಲ ಪಾಪಗಳನ್ನು ಕ್ಷಮಿಸಬಲ್ಲೆ. ಆದುದರಿಂದ ನೀವು ನನ್ನೊಂದಿಗೆ ಕ್ಷಮಾಯಾಚನೆ ಮಾಡಿದರೆ ನಾನು ನಿಮ್ಮ ಎಲ್ಲ ಪಾಪಗಳನ್ನೂ ಕ್ಷಮಿಸುವೆನು. *[ಮುಸ್ಲಿಮ್]*

ತೌಬಾ ಸ್ವೀಕಾರ

(358) قَالَ النَّبِیُّ صَلَّی اللّٰہُ عَلَیْہِ وَسَلَّمَ اِنَّ اللّٰہَ عَزَّوَجَلَّ یَقْبَلُ تَوْبَةَ الْعَبْدِ
مَا لَمْ یُغَرْغِرْ (ترمذی — ابن عمرؓ)

ಪ್ರವಾದಿ(ಸ) ಹೇಳಿದರು: ಅಲ್ಲಾಹನು ತನ್ನ ದಾಸರ ತೌಬಾ(ಪಶ್ಚಾತ್ತಾಪ)ವನ್ನು ಶ್ವಾಸ ಕಟ್ಟುವುದಕ್ಕಿಂತ ಮುಂಚಿನ ವರೆಗೆ ಸ್ವೀಕರಿಸುತ್ತಾನೆ. *[ತಿರ್ಮಿದಿ- ವರದಿ ಇಬ್ನು ಉಮರ್(ರ)]*

ಟಿಪ್ಪಣಿ: ಒಬ್ಬನು ತನ್ನ ಇಡೀ ಜೀವನವನ್ನು ಪಾಪದಲ್ಲಿ ಕಳೆದು ಅಂತಿಮವಾಗಿ ಶ್ವಾಸ ಕಟ್ಟುವುದಕ್ಕಿಂತ ಮೊದಲು ಪ್ರಜ್ಞಾವಸ್ಥೆಯಲ್ಲಿ ಪ್ರಾಮಾಣಿಕ 'ತೌಬಾ' ಮಾಡಿದರೆ ಅಲ್ಲಾಹನು ಅವನ ಎಲ್ಲ ಪಾಪಗಳನ್ನು ಕ್ಷಮಿಸಿ ಬಿಡುವನು. ಈ ಹದೀಸ್‌ನಲ್ಲಿ, ಚಿಂತಿಸಬೇಕಾಗಿಲ್ಲ, ಪಾಪ ಮಾಡುತ್ತಲೇ ಇರಿ. ಪ್ರಾಣ ಹೋಗುವುದಕ್ಕಿಂತ ಮುಂಚೆ 'ತೌಬಾ' ಮಾಡಿದರಾಯಿತು ಎಂದು ಹೇಳಲಾಗಿಲ್ಲ. ಬದಲಾಗಿ ಪ್ರಾಣ ತೆಗೆಯುವ ದೇವಚರ ಯಾವಾಗ ಬರುತ್ತಾರೆಂದು ಯಾರಿಗೂ ತಿಳಿದಿಲ್ಲ. ಆದುದರಿಂದ ಕೂಡಲೇ ತೌಬಾ ಮಾಡಿರಿ. ವಿಳಂಬಿಸಬೇಡಿರಿ. 'ಮರಣದ ದೇವಚರ ಬರಲಿ' ಆಗ ನೋಡೋಣ ಎಂಬ ನಿರೀಕ್ಷೆಯಲ್ಲಿರಬೇಡಿರಿ ಎಂದು ಹೇಳಲಾಗಿದೆ. 'ತೌಬಾ' ಮಾಡಲು ಮರಣ ಹತ್ತಿರ ಬರಲಿ ಎಂದು ಕಾಯುವವರು ಸಾಮಾನ್ಯವಾಗಿ 'ತೌಬಾ' ಮಾಡಲು ಅವಕಾಶ ಸಿಗದೆ ಸಾಯುತ್ತಾರೆ.

ದೇವಸ್ಮರಣೆ ಮತ್ತು ಪ್ರಾರ್ಥನೆ

(359) قَالَ رَسُوْلُ اللهِ صَلَّى اللهُ عَلَيْهِ وَسَلَّمَ اِنَّ اللهَ تَعَالٰى يَقُوْلُ اَنَا مَعَ عَبْدِيْ اِذَا ذَكَرَنِيْ تَحَرَّكَتْ بِيْ شَفَتَاهُ (بخاری ـــــ ابوہریرہ رض)

ಪ್ರವಾದಿ(ಸ) ಹೇಳಿದರು: ಅಲ್ಲಾಹನು ಹೀಗೆ ಹೇಳುತ್ತಾನೆ: ನನ್ನ ದಾಸನು ನನ್ನನ್ನು ಸ್ಮರಿಸುವಾಗ ಅವನ ಎರಡು ತುಟಿಗಳು ಅಲ್ಲಾಡುವ ವೇಳೆ ನಾನು ಅವನ ಬಳಿಯಲ್ಲಿರುತ್ತೇನೆ.

[ಬುಖಾರಿ ವರದಿ: ಅಬೂ ಹುರೈರಾ(ರ)]

ಟಿಪ್ಪಣಿ: 'ಅವನ ಬಳಿಯಲ್ಲಿರುತ್ತೇನೆ' ಎಂದರೆ ಅಲ್ಲಾಹನು ಆ ದಾಸನನ್ನು ತನ್ನ ಸಂರಕ್ಷಣೆಯಲ್ಲಿರಿಸುತ್ತಾನೆ ಮತ್ತು ಅವನನ್ನು ಕೆಡುಕಿನಿಂದ ರಕ್ಷಿಸುತ್ತಾನೆ.

ಅಲ್ಲಾಹನ ಸ್ಮರಣೆಯನ್ನು ಮನಸಾರೆ ಮಾಡುವುದರ ಜೊತೆಗೆ ಬಾಯಿಯಿಂದಲೂ ಉಚ್ಛರಿಸಬೇಕೆಂದು ಈ ಹದೀಸ್ ತಿಳಿಸುತ್ತದೆ. ನಮಾಝ್‌ನೊಳಗೆ ಮತ್ತು ಹೊರಗೆ ಬಾಯಿಯಿಂದ ಹೇಳಲಾಗುವ ದಿಕ್ರ್ (ಜಪ)ಗಳ ವೇಳೆ ತುಟಿ ಅಲ್ಲಾಡಬೇಕು. ಇಸ್ಲಾಮ್‌ನಲ್ಲಿ ಧ್ಯಾನ-ತಪಸ್ಸಿಗೆ ಅವಕಾಶವಿಲ್ಲ. ಹಾಗಿರುತ್ತಿದ್ದರೆ ಪ್ರವಾದಿ(ಸ) ನಮಗೆ ದುಆ-ದಿಕ್ರ್ (ಪ್ರಾರ್ಥನೆ-ಜಪ)ಗಳನ್ನು ಕಲಿಸುತ್ತಿರಲಿಲ್ಲ? ನಮಾಝನ್ನು ತುಟಿ ಅಲ್ಲಾಡಿಸದೆ ಮನಸ್ಸಿನಲ್ಲಿ ಮಾಡುವವರು ಈ ಕುರಿತು ಆಲೋಚಿಸಬೇಕು.

ದಿಕ್ರ್ ಜೀವನವಾಗಿದೆ

(360) قَالَ رَسُوْلُ اللهِ صَلَّى اللهُ عَلَيْهِ وَسَلَّمَ مَثَلُ الَّذِيْ يَذْكُرُ وَالَّذِيْ لَا يَذْكُرُ مَثَلُ الْحَيِّ وَالْمَيِّتِ (بخاری ومسلم ـــــ ابوموسیٰ اشعری رض)

ಪ್ರವಾದಿ(ಸ) ಹೇಳಿದರು: ತನ್ನ ಪ್ರಭುವನ್ನು ಸ್ಮರಿಸುವವನ ಉದಾಹರಣೆ ಜೀವಂತ ಮನುಷ್ಯನಂತಿದೆ ಮತ್ತು ಅವನನ್ನು ಸ್ಮರಿಸದವನ ಉದಾಹರಣೆ ಮೃತದಂತಿದೆ.

[ಬುಖಾರಿ- ಮುಸ್ಲಿಮ್, ವರದಿ: ಅಬೂ ಮೂಸಾ ಅಶ್‌ಅರೀ(ರ)]

ಟಿಪ್ಪಣಿ: ಮಾನವ ಶರೀರವು ಆಹಾರವನ್ನು ಅವಲಂಬಿಸಿದೆ. ಅದಕ್ಕೆ ಆಹಾರ ಲಭಿಸದಿದ್ದರೆ ಅದು ಸಾಯುತ್ತದೆ. ಅದೇ ರೀತಿ ಆತ್ಮದ ಆಹಾರವು ಅಲ್ಲಾಹನ ಸ್ಮರಣೆಯಾಗಿದೆ. ಆದರೆ ಈ ಆಹಾರ ಅದಕ್ಕೆ ಸಿಗದಿದ್ದರೆ ಅದು ಸತ್ತಂತೆಯೇ. ಅದರ ಬಾಹ್ಯ ಆಕಾರ(ಶರೀರ)ವು ಎಷ್ಟೇ ಶಕ್ತಿಶಾಲಿಯಾಗಿದ್ದರೂ ಸರಿ.

ದಿಕ್ರ್‌ನ ಬೋಧನೆ

(361) عَنْ سَعْدِ بْنِ اَبِىْ وَقَّاصٍ قَالَ جَاءَ اَعْرَابِىٌّ اِلٰى رَسُوْلِ اللّٰهِ صَلَّى اللّٰهُ عَلَيْهِ وَسَلَّمَ فَقَالَ عَلِّمْنِىْ كَلَامًا اَقُوْلُهُ، قَالَ قُلْ لَا اِلٰهَ اِلَّا اللّٰهُ وَحْدَهُ لَا شَرِيْكَ لَهُ، اَللّٰهُ اَكْبَرُ كَبِيْرًا، وَالْحَمْدُ لِلّٰهِ كَثِيْرًا، وَسُبْحَانَ اللّٰهِ رَبِّ الْعَالَمِيْنَ، لَا حَوْلَ وَلَا قُوَّةَ اِلَّا بِاللّٰهِ الْعَزِيْزِ الْحَكِيْمِ (مسلم)

ಸಅದ್ ಬಿನ್ ಅಬೀ ವಕ್ಕಾಸ್(ಸ) ಹೇಳುತ್ತಾರೆ- ಪ್ರವಾದಿ(ಸ) ಅವರ ಬಳಿ ಒಬ್ಬ ಗ್ರಾಮೀಣ ಅರಬನು ಬಂದು, ಅಲ್ಲಾಹನನ್ನು ಸ್ಮರಿಸುವಂತಹ ಒಂದು ದಿಕ್ರ್ (ಮಂತ್ರ) ಹೇಳಿಕೊಡಿ ಎಂದನು. ಪ್ರವಾದಿ(ಸ) ಅವರು ಅವನಿಗೆ ಈ 'ದಿಕ್ರ್' ಹೇಳಿಕೊಟ್ಟರು-

"ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕಲಹೂ, ಅಲ್ಲಾಹು ಅಕ್ಬರ್ ಕಬೀರನ್, ವಲ್ ಹಮ್ದು ಲಿಲ್ಲಾಹಿ ಕಸೀರನ್, ವಸುಬ್‌ಹಾನಲ್ಲಾಹಿ ರಬ್ಬಿಲ್ ಆಲಮೀನ್. ಲಾ ಹೌಲ ವಲಾಕುವ್ವತ ಇಲ್ಲಾ ಬಿಲ್ಲಾಹಿಲ್ ಅಝೀಝಿಲ್ ಹಕೀಮ್."

ಅರ್ಥ: ಅಲ್ಲಾಹನ ಹೊರತು ಆರಾಧನೆಗೆ ಮತ್ತು ಅನುಸರಣೆಗೆ ಅರ್ಹರು ಯಾರೂ ಇಲ್ಲ. ಅವನಿಗೆ ಸಹಭಾಗಿಗಳು ಯಾರೂ ಇಲ್ಲ. ಅಲ್ಲಾಹನು ಅತಿ ದೊಡ್ಡವನು. ಸರ್ವಸ್ತುತಿಯೂ ಅತ್ಯಧಿಕವಾಗಿ ಅವನಿಗೇ ಮೀಸಲು. ಅವನು ಎಲ್ಲ ದೌರ್ಬಲ್ಯಗಳಿಂದಲೂ ಮುಕ್ತನು. ಯಾರ ಬಳಿಯಲ್ಲೂ ಶಕ್ತಿ-ಯುಕ್ತಿಯಿಲ್ಲ. ಶಕ್ತಿ-ಯುಕ್ತಿಗಳು ಸಿಗುವುದಾದರೆ ಅದು ಅಲ್ಲಾಹನಲ್ಲಿ ಮಾತ್ರ. ಅವನು ಪೂರ್ಣ ಅಧಿಕಾರವುಳ್ಳವನು ಹಾಗೂ ಜ್ಞಾನ ಮತ್ತು ನ್ಯಾಯದೊಂದಿಗೆ ತನ್ನ ಅಧಿಕಾರವನ್ನು ಚಲಾಯಿಸುವವನಾಗಿದ್ದಾನೆ.

[ಮುಸ್ಲಿಮ್]

ಫರ್ಝ್ ನಮಾಝ್‌ಗಳ ಬಳಿಕ

(362) إِنَّ رَسُولَ اللّٰهِ صَلَّى اللّٰهُ عَلَيْهِ وَسَلَّمَ كَانَ يَقُولُ فِي دُبُرِ كُلِّ صَلٰوةٍ مَكْتُوبَةٍ إِذَا سَلَّمَ لَا إِلٰهَ إِلَّا اللّٰهُ وَحْدَهُ لَا شَرِيكَ لَهُ، لَهُ الْمُلْكُ وَلَهُ الْحَمْدُ وَهُوَ عَلٰى كُلِّ شَيْءٍ قَدِيرٌ، اَللّٰهُمَّ لَا مَانِعَ لِمَا أَعْطَيْتَ وَلَا مُعْطِيَ لِمَا مَنَعْتَ، وَلَا يَنْفَعُ ذَا الْجَدِّ مِنْكَ الْجَدُّ (بخاری)

ಪ್ರವಾದಿಯವರು(ಸ) ಎಲ್ಲ ಫರ್ಝ್ ನಮಾಝ್‌ಗಳ ಬಳಿಕ ಈ ದುಆ ಪಠಿಸುತ್ತಿದ್ದರು- 'ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕಲಹೂ ಲಹುಲ್ ಮುಲ್ಕು ವಲಹುಲ್ ಹಮ್ದು ವಹುವ ಅಲಾ ಕುಲ್ಲಿ ಶೈಇನ್ ಕದೀರ್. ಅಲ್ಲಾಹುಮ್ಮ ಲಾಮಾನಿಅ ಲಿಮಾ ಅಅ್‌ತೈತ ವಲಾ ಮುಅ್‌ತಿಯ ಲಿಮಾ ಮನಅ್‌ತ ವಲಾ ಯಂಫಉ ದಲ್‌ಜದ್ದಿ ಮಿಂಕಲ್ ಜದ್ದು.'

ಅರ್ಥ: ಅಲ್ಲಾಹನ ಹೊರತು ಯಾರೂ ಆರಾಧ್ಯರಿಲ್ಲ. ಅವನು ಏಕೈಕನು. ಅವನಿಗೆ ಪಾಲುದಾರರು ಯಾರೂ ಇಲ್ಲ. ಅಧಿಕಾರವು ಸರ್ವ ಸಂಪೂರ್ಣವಾಗಿ ಅವನ ಕೈಯಲ್ಲಿದೆ. ಅವನು ಎಲ್ಲ ಕಾರ್ಯಗಳಿಗೂ ಸಮರ್ಥನು. ಓ ಅಲ್ಲಾಹ್! ನೀನು (ನಿನ್ನ ದಾಸರ ಪೈಕಿ ಯಾರಿಗಾದರೂ) ಏನಾದರೂ ಕೊಡ ಬಯಸಿದರೆ ಅದನ್ನು ತಡೆಯುವವರು ಯಾರೂ ಇಲ್ಲ. ನೀನು ಯಾರನ್ನಾದರೂ ವಂಚಿತಗೊಳಿಸಿದರೆ ಅವನಿಗೆ ನೀಡಬಲ್ಲವನೂ ಯಾರೂ ಇಲ್ಲ. ನಿನ್ನ ವಿರುದ್ಧ ಯಾವನೇ ಬಲಶಾಲಿಯ ಶಕ್ತಿ ಯಾವ ಪ್ರಯೋಜನಕ್ಕೂ ಬಾರದು.

[ಬುಖಾರಿ]

ಅಲ್ಲಾಹನ ಸ್ಮರಣೆ ಎಂಬ ಭದ್ರಕೋಟೆ

(363) قَالَ رَسُولُ اللّٰهِ صَلَّى اللّٰهُ عَلَيْهِ وَسَلَّمَ آمُرُكُمْ بِذِكْرِ اللّٰهِ كَثِيرًا، وَمَثَلُ ذٰلِكَ كَمَثَلِ رَجُلٍ طَلَبَهُ الْعَدُوُّ سِرَاعًا حَتّٰى أَتٰى حِصْنًا حَصِينًا فَأَحْرَزَ نَفْسَهُ فِيهِ، وَكَذٰلِكَ الْعَبْدُ لَا يَنْجُو مِنَ الشَّيْطَانِ إِلَّا بِذِكْرِ اللّٰهِ (ترمذی)

ಪ್ರವಾದಿ(ಸ) ಹೇಳಿದರು: ಅಲ್ಲಾಹನನ್ನು ಅತಿ ಹೆಚ್ಚು ಸ್ಮರಿಸಬೇಕೆಂದು ನಾನು ನಿಮಗೆ ಆದೇಶಿಸುತ್ತೇನೆ. ದೇವಸ್ಮರಣೆಯ ಉದಾಹರಣೆ ಹೀಗಿದೆ: ಒಬ್ಬನನ್ನು ಅವನ ವೈರಿ ವೇಗವಾಗಿ

ಬೆನ್ನಟ್ಟುತ್ತಿರುವಾಗ ಅವನು ಓಡಿ ಹೋಗಿ ಒಂದು ಭದ್ರ ಕೋಟೆಯೊಳಗೆ ಆಶ್ರಯ ಪಡೆಯುತ್ತಾನೆ. ಅದೇ ರೀತಿಯಲ್ಲಿ ಅಲ್ಲಾಹನ ಸ್ಮರಣೆಯ ಸಹಾಯವಿಲ್ಲದೆ ದಾಸನು ಶೈತಾನನಿಂದ ರಕ್ಷಣೆ ಹೊಂದುವಂತಿಲ್ಲ. *[ತಿರ್ಮಿದಿ]*

ಟಿಪ್ಪಣಿ: ಅಲ್ಲಾಹನ ಸ್ಮರಣೆಯೆಂದರೆ ಅಲ್ಲಾಹನ ಅಸ್ತಿತ್ವ, ಅವನ ಗುಣಗಳು, ಅವನ ಮಹಾನತೆ, ಅವನ ಪ್ರತಾಪ ಹಾಗೂ ಅವನ ದಯಾಪರತೆ, ಅವನ ಹಿಡಿತ ಮತ್ತು ಪ್ರತೀಕಾರ- ಒಟ್ಟಿನಲ್ಲಿ ಅವನ ಎಲ್ಲ ಗುಣಗಳ ಪ್ರಜ್ಞೆ ಹಾಗೂ ಸ್ಪಷ್ಟ ಕಲ್ಪನೆಯಿರಿಸುವುದಾಗಿದೆ. ಈ ಕಲ್ಪನೆಯು ಎಷ್ಟು ಬಲಿಷ್ಠ ವಾಗಿರುವುದೋ ಅಷ್ಟೇ ಶೈತಾನನ ಮತ್ತು ಭ್ರಷ್ಟಚಿತ್ತದ ಆಕ್ರಮಣದಿಂದ ಮಾನವನು ಪಾರಾಗುವನು. ಕಡ್ಡಾಯ ನಮಾಝ್‌ಗಳು, ಐಚ್ಛಿಕ ಆರಾಧನೆಗಳು, ತಹಜ್ಜುದ್, ದಿಕ್ರ್ ಮತ್ತು ದುಆಗಳು ಸದಾ ಈ ಸ್ಮರಣೆಯನ್ನುಂಟು ಮಾಡಿ ಅವನನ್ನು ಸ್ಥಿರವಾಗಿರಿಸಲಿಕ್ಕಾಗಿ ಪ್ರವಾದಿ(ಸ) ಕಲಿಸಿದ ಉಪಾಯಗಳಾಗಿವೆ. ಆದರೆ ಮಾನವನು ಅವುಗಳನ್ನು ನೆನಪಿಡಬೇಕು. ಅವುಗಳ ಅರ್ಥ ತಾತ್ಪರ್ಯಗಳನ್ನು ಗ್ರಹಿಸಿ ಸದಾ ಪಠಿಸುತ್ತಿರಬೇಕು.

ಅಲ್ಲಾಹನನ್ನು ಸ್ಮರಿಸುವವನು

(364) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ يَقُوْلُ اللّٰهُ اَنَا عِنْدَ ظَنِّ عَبْدِىْ بِىْ، وَاَنَا مَعَهٗ اِذَا ذَكَرَنِىْ، فَاِنْ ذَكَرَنِىْ فِىْ نَفْسِهٖ ذَكَرْتُهٗ فِىْ نَفْسِىْ، وَاِنْ ذَكَرَنِىْ فِىْ مَلَاٍ ذَكَرْتُهٗ فِىْ مَلَاٍ خَيْرٍ مِّنْهُمْ، وَاِنْ تَقَرَّبَ اِلَىَّ شِبْرًا تَقَرَّبْتُ اِلَيْهِ ذِرَاعًا وَاِنْ تَقَرَّبَ اِلَىَّ ذِرَاعًا تَقَرَّبْتُ اِلَيْهِ بَاعًا، وَاِنْ اَتَانِىْ يَمْشِىْ اَتَيْتُهٗ هَرْوَلَةً

(بخاری ومسلم — ابو ہریرہ رض)

ಪ್ರವಾದಿ(ಸ) ಹೇಳಿದರು- ಅಲ್ಲಾಹನು ಹೀಗೆ ಹೇಳುತ್ತಾನೆ, ನನ್ನ (ಸತ್ಯವಿಶ್ವಾಸಿ) ದಾಸನು ನನ್ನ ಬಗ್ಗೆ ಯಾವ ರೀತಿಯ ನಂಬಿಕೆ ಇರಿಸುತ್ತಾನೋ ನನ್ನನ್ನು ಹಾಗೆಯೇ ಕಾಣುವನು. ಅವನು ನನ್ನನ್ನು ಸ್ಮರಿಸುವಾಗ ನಾನು ಅವನ ಜೊತೆಗಿರುತ್ತೇನೆ. ಅವನು ನನ್ನನ್ನು ಏಕಾಂತದಲ್ಲಿ (ರಹಸ್ಯವಾಗಿ) ಸ್ಮರಿಸುವಾಗ ನಾನೂ ಅವನನ್ನು ಏಕಾಂತದಲ್ಲಿ ಸ್ಮರಿಸುತ್ತೇನೆ. ಅವನು ನನ್ನನ್ನು ಜನರ ಗುಂಪಿನಲ್ಲಿ ಸ್ಮರಿಸುವಾಗ ನಾನು ಅವನನ್ನು ಮಾನವರಿಗಿಂತ ಉತ್ತಮವಾದವರ ಗುಂಪಿನಲ್ಲಿ ಸ್ಮರಿಸುತ್ತೇನೆ (ಅಂದರೆ ದೇವಚರರ ಗುಂಪಿನಲ್ಲಿ ಅವನ ಬಗ್ಗೆ ಪ್ರಸ್ತಾಪಿಸುತ್ತೇನೆ). ಅವನು ನನ್ನತ್ತ ಒಂದು ಗೇಣಿನಷ್ಟು ಹತ್ತಿರವಾಗುವಾಗ ನಾನು ಅವನತ್ತ ಒಂದು ಕೈಯಷ್ಟು ಹತ್ತಿರವಾಗುತ್ತೇನೆ. ಅವನು ನನ್ನತ್ತ ಒಂದು ಕೈಯಷ್ಟು ಸಾಗುವಾಗ ನಾನು

ಅವನತ್ತ ನಾಲ್ಕು ಕೈಯಷ್ಟು ಸಾಗುತ್ತೇನೆ. ಅವನು ನನ್ನತ್ತ ನಡೆದುಕೊಂಡು ಬರುವಾಗ ನಾನು ಅವನತ್ತ ಓಡಿಕೊಂಡು ಹೋಗುತ್ತೇನೆ. *[ಬುಖಾರಿ, ಮುಸ್ಲಿಮ್- ವರದಿ: ಅಬೂ ಹುರೈರಾ(ರ)]*

ಟಿಪ್ಪಣಿ: ಅಲ್ಲಾಹನು ದಯಾಮಯನೂ ಕರುಣಾಳುವೂ ಆಗಿರುತ್ತಾನೆ. ಅದೇ ರೀತಿ ಮನ್ನಿಸುವವನೂ ಕ್ಷಮಿಸುವವನೂ ಆಗಿರುತ್ತಾನೆ ಎಂಬುದು ಸತ್ಯವಿಶ್ವಾಸಿಯ ನಂಬಿಕೆ. ದಾಸನು ನನ್ನನ್ನು ಅವನ ನಂಬಿಕೆಗನುಸಾರ ಕಾಣುವನು ಎಂದು ಅಲ್ಲಾಹನು ಹೇಳಿರುವುದರ ಅರ್ಥವೇನೆಂದರೆ ನಾನು ಅವನ ಮೇಲೆ ನನ್ನ ಅನುಗ್ರಹವನ್ನು ಸುರಿಸುವೆನು. ಇಹ-ಪರ ಲೋಕಗಳಲ್ಲಿ ಅವನಿಗೆ ಸಹಾಯ ಮಾಡುವೆನು. ಹದೀಸ್‌ನ ಅನಂತರದ ಭಾಗವು ಅದರ ಅತ್ಯುತ್ತಮ ವಿವರಣೆಯಾಗಿದೆ.

ಅಲ್ಲಾಹ್ ಮತ್ತು ದೇವಚರರ ಮಾತುಕತೆ

(365) قَالَ رَسُوْلُ اللهِ صلى الله عليه وسلم اِنَّ لِلّٰهِ مَلَائِكَةً يَطُوْفُوْنَ فِي الطُّرُقِ يَلْتَمِسُوْنَ اَهْلَ الذِّكْرِ، فَاِذَا وَجَدُوْا قَوْمًا يَذْكُرُوْنَ اللهَ تَنَادَوْا هَلُمُّوْا اِلٰى حَاجَتِكُمْ، فَيَحُفُّوْنَهُمْ بِاَجْنِحَتِهِمْ اِلَى السَّمَاءِ الدُّنْيَا، قَالَ فَيَسْأَلُهُمْ رَبُّهُمْ وَهُوَ اَعْلَمُ بِهِمْ ـ مَا يَقُوْلُ عِبَادِيْ؟ قَالَ يَقُوْلُوْنَ يُسَبِّحُوْنَكَ وَيُكَبِّرُوْنَكَ وَيَحْمَدُوْنَكَ وَيُمَجِّدُوْنَكَ، قَالَ فَيَقُوْلُ هَلْ رَاَوْنِيْ؟ قَالَ فَيَقُوْلُوْنَ لَا وَاللهِ يَا رَبِّ مَا رَاَوْكَ، قَالَ فَيَقُوْلُ كَيْفَ لَوْ رَاَوْنِيْ؟ قَالَ يَقُوْلُوْنَ لَوْ رَاَوْكَ كَانُوْا اَشَدَّ لَكَ عِبَادَةً وَاَشَدَّ لَكَ تَمْجِيْدًا وَاَكْثَرَ لَكَ تَسْبِيْحًا، قَالَ فَيَقُوْلُ فَمَا يَسْأَلُوْنِيْ؟ قَالَ يَقُوْلُوْنَ يَسْأَلُوْنَكَ الْجَنَّةَ، قَالَ فَيَقُوْلُ وَهَلْ رَاَوْهَا؟ قَالَ يَقُوْلُوْنَ لَا وَاللهِ يَا رَبِّ مَا رَاَوْهَا قَالَ فَيَقُوْلُ فَكَيْفَ لَوْ رَاَوْهَا؟ قَالَ يَقُوْلُوْنَ لَوْ اَنَّهُمْ رَاَوْهَا كَانُوْا اَشَدَّ عَلَيْهَا حِرْصًا وَاَشَدَّ لَهَا طَلَبًا وَاَعْظَمَ فِيْهَا رَغْبَةً، قَالَ فَمِمَّ يَتَعَوَّذُوْنَ؟ قَالَ يَقُوْلُوْنَ يَتَعَوَّذُوْنَ مِنَ النَّارِ، قَالَ فَيَقُوْلُ وَهَلْ رَاَوْهَا؟ قَالَ يَقُوْلُوْنَ لَا وَاللهِ مَا رَاَوْهَا، قَالَ فَيَقُوْلُ فَكَيْفَ لَوْ رَاَوْهَا؟ قَالَ يَقُوْلُوْنَ لَوْ رَاَوْهَا كَانُوْا اَشَدَّ مِنْهَا فِرَارًا وَاَشَدَّ لَهَا مَخَافَةً، قَالَ فَيَقُوْلُ اُشْهِدُكُمْ اَنِّيْ قَدْ غَفَرْتُ لَهُمْ ـ بخاری ـ ابوہریرہ رض

ಪ್ರವಾದಿ(ಸ) ಹೇಳಿದರು: ಕೆಲವು ದೇವಚರರು, ಯಾರು ಎಲ್ಲಿ ಅಲ್ಲಾಹನನ್ನು ಸ್ಮರಿಸುತ್ತಾರೆ ಎಂಬುದನ್ನು ನೋಡುವ ಸಲುವಾಗಿ ದಾರಿಯಲ್ಲಿ ತಿರುಗಾಡುತ್ತಿರುತ್ತಾರೆ. ಅಲ್ಲಾಹನನ್ನು ಸ್ಮರಿಸುವ ಕೆಲವು ಮಂದಿಯನ್ನು ಕಂಡಾಗ ಅವರು ತಮ್ಮ ಸಂಗಾತಿಗಳನ್ನು ಕರೆದು, 'ಇಲ್ಲಿ ಬನ್ನಿ, ನೀವು ಹುಡುಕುತ್ತಿರುವ ಮಂದಿ ಇಲ್ಲಿದ್ದಾರೆ ಎಂದು ಹೇಳುತ್ತಾರೆ. ಆಗ ಅವರು ತಮ್ಮ ರೆಕ್ಕೆಗಳನ್ನು ಆಕಾಶದ ವರೆಗೆ ಹರಡುತ್ತಾರೆ. ತರುವಾಯ ಅವರು ಅಲ್ಲಾಹನ ಮುಂದೆ ಹಾಜರಾಗುತ್ತಾರೆ. ಆಗ ಅಲ್ಲಾಹನು (ಅವನಿಗೆ ಎಲ್ಲವೂ ತಿಳಿದಿದ್ದರೂ) ಕೇಳುತ್ತಾನೆ- ಓ ದೇವಚರರೇ! ನನ್ನ ಆ ದಾಸರು ಏನು ಹೇಳುತ್ತಾರೆ? ದೇವಚರರು ಹೇಳುತ್ತಾರೆ, ಅವರು ನಿನ್ನನ್ನು ಸ್ತುತಿಸುತ್ತಾರೆ. ನಿನ್ನ ಮಹಾನತೆಯನ್ನು ಕೊಂಡಾಡುತ್ತಾರೆ. ನಿನಗೆ ಕೃತಜ್ಞತೆ ಸಲ್ಲಿಸುತ್ತಾರೆ. ನಿನ್ನ ಔನ್ನತ್ಯ ಮತ್ತು ಮೇಲ್ಮೆಯನ್ನು ಪ್ರಸ್ತಾಪಿಸುತ್ತಾರೆ. ಅಲ್ಲಾಹನು ಕೇಳುತ್ತಾನೆ: ಅವರು ನನ್ನನ್ನು ಕಂಡಿದ್ದಾರೆಯೇ? ದೇವಚರರು ಹೇಳುತ್ತಾರೆ- ಇಲ್ಲ, ನಿನ್ನಾಣೆ! ಅವರು ನಿನ್ನನ್ನು ಕಂಡಿಲ್ಲ. ಅಲ್ಲಾಹನು ಹೇಳುತ್ತಾನೆ, ಅವರು ನನ್ನನ್ನು ಕಂಡಿರುತ್ತಿದ್ದರೆ ಏನು ಮಾಡುತ್ತಿದ್ದರು? ದೇವಚರರು ಹೇಳುತ್ತಾರೆ: ಅವರು ನಿನ್ನನ್ನು ಕಂಡಿರುತ್ತಿದ್ದರೆ ಈಗ ಮಾಡುವುದಕ್ಕಿಂತಲೂ ಅಧಿಕ ಸ್ಫೂರ್ತಿಯೊಂದಿಗೆ ನಿನ್ನ ದಾಸ್ಯ-ಆರಾಧನೆ ಮಾಡುತ್ತಿದ್ದರು. ಹೆಚ್ಚು ಹೆಚ್ಚು ನಿನ್ನನ್ನು ಸ್ತುತಿಸುವುದರಲ್ಲಿ ಮಗ್ನರಾಗಿರುತ್ತಿದ್ದರು. ತರುವಾಯ ಅಲ್ಲಾಹನು ಕೇಳುತ್ತಾನೆ- ನನ್ನ ಆ ದಾಸರು ನನ್ನಿಂದ ಏನು ಬೇಡುತ್ತಾರೆ? ದೇವಚರರು ಹೇಳುತ್ತಾರೆ- ಅವರು ನಿನ್ನಿಂದ ಸ್ವರ್ಗ ಬೇಡುತ್ತಾರೆ. ಅಲ್ಲಾಹನು ಕೇಳುತ್ತಾನೆ- ಅವರು ಸ್ವರ್ಗವನ್ನು ನೋಡಿದ್ದಾರೆಯೇ? ದೇವಚರರು ಹೇಳುತ್ತಾರೆ- ಇಲ್ಲ ನಮ್ಮ ಪ್ರಭೂ! ಅವರು ಸ್ವರ್ಗವನ್ನು ನೋಡಿಲ್ಲ. ಅಲ್ಲಾಹನು ಕೇಳುತ್ತಾನೆ- ಅವರು ಸ್ವರ್ಗವನ್ನು ನೋಡಿರುತ್ತಿದ್ದರೆ ಏನು ಮಾಡುತ್ತಿದ್ದರು? ದೇವಚರರು ಹೇಳುತ್ತಾರೆ- ಅವರು ಸ್ವರ್ಗವನ್ನು ನೋಡಿರುತ್ತಿದ್ದರೆ ಅವರ ಆಗ್ರಹ ಇನ್ನಷ್ಟು ಹೆಚ್ಚುತ್ತಿತ್ತು. ಅದನ್ನು ಗಳಿಸಲು ಅವರ ಅಪೇಕ್ಷೆ ಇನ್ನಷ್ಟು ತೀವ್ರವಾಗುತ್ತಿತ್ತು.

ಅಲ್ಲಾಹನು ಕೇಳುತ್ತಾನೆ- ಅವರು ಯಾವುದರಿಂದ ಅಭಯ ಯಾಚಿಸುತ್ತಾರೆ? ದೇವಚರರು ಹೇಳುತ್ತಾರೆ- ಅವರು ನರಕದಿಂದ ಅಭಯ ಯಾಚಿಸುತ್ತಾರೆ. ಅಲ್ಲಾಹನು ಕೇಳುತ್ತಾನೆ- ಅವರು ನರಕವನ್ನು ನೋಡಿದ್ದಾರೆಯೇ? ದೇವಚರರು ಹೇಳುತ್ತಾರೆ. ಇಲ್ಲ, ನಮ್ಮ ಪ್ರಭೂ! ನಿನ್ನಾಣೆ, ಅವರು ನರಕವನ್ನು ನೋಡಿಲ್ಲ. ಅಲ್ಲಾಹನು ಕೇಳುತ್ತಾನೆ- ಅವರು ನರಕವನ್ನು ನೋಡಿರುತ್ತಿದ್ದರೆ ಏನು ಮಾಡುತ್ತಿದ್ದರು? ದೇವಚರರು ಹೇಳುತ್ತಾರೆ. ಅವರು ನರಕವನ್ನು ನೋಡಿರುತ್ತಿದ್ದರೆ ಅದರಿಂದ ದೂರ ಓಡುತ್ತಿದ್ದರು ಮತ್ತು ಅದರಿಂದ ಬಹಳ ವಾಗಿ ಹೆದರುತ್ತಿದ್ದರು. ಆ ಬಳಿಕ ಅಲ್ಲಾಹನು ದೇವಚರರೊಡನೆ ಹೇಳುತ್ತಾನೆ- ನಿಮ್ಮನ್ನು ಸಾಕ್ಷಿಯಾಗಿರಿಸಿ ನಾನು ಹೇಳುತ್ತೇನೆ, ನಾನು ಅವರನ್ನು ಕ್ಷಮಿಸಿ ಬಿಟ್ಟಿದ್ದೇನೆ. ನರಕದ ತಾಪವೂ ಅವರಿಗೆ ಸೋಂಕದಂತೆ ಮಾಡುವೆನು ಮತ್ತು ಅವರನ್ನು ನನ್ನ ಕೃಪಾಕಟಾಕ್ಷ ದೊಳಗೆ ಸೇರಿಸುವೆನು. *[ಬುಖಾರಿ - ವರದಿ: ಅಬೂ ಹುರೈರಾ(ರ)]*

'ದುಆ'ದ ಶಿಷ್ಟಾಚಾರ

(366) عَنْ اَبِيْ هُرَيْرَةَ عَنِ النَّبِيِّ صَلَّى اللّٰهُ عَلَيْهِ وَسَلَّمَ اَنَّهُ قَالَ لَا يَزَالُ يُسْتَجَابُ
لِلْعَبْدِ مَالَمْ يَدْعُ بِاِثْمٍ اَوْ قَطِيْعَةِ رَحِمٍ مَالَمْ يَسْتَعْجِلْ، قِيْلَ يَا رَسُوْلَ اللّٰهِ مَا
الْاِسْتِعْجَالُ؟ قَالَ يَقُوْلُ قَدْ دَعَوْتُ وَقَدْ دَعَوْتُ فَلَمْ اَرَ يَسْتَجِيْبُ لِيْ، فَيَسْتَحْسِرُ
عِنْدَ ذٰلِكَ وَيَدَعُ الدُّعَاءَ (مسلم)

ಅಬೂ ಹುರೈರಾರಿಂದ(ರ) ವರದಿಯಾಗಿದೆ. ಪ್ರವಾದಿ(ಸ) ಹೇಳಿದರು- ಅಲ್ಲಾಹನ ದಾಸನ ದುಆ (ಪ್ರಾರ್ಥನೆ)- ಅದು ಪಾಪ, ಸಂಬಂಧ ಕಡಿಯುವಂತಹ ಅಥವಾ ದುಡುಕಿನದ್ದಾಗಿರದಿದ್ದರೆ - ಅಲ್ಲಾಹನು ಯಾವಾಗಲೂ ಸ್ವೀಕರಿಸುತ್ತಾನೆ. ಜನರು ಕೇಳಿದರು- ದುಡುಕಿನ ಪ್ರಾರ್ಥನೆಯೆಂದರೇನು? ಪ್ರವಾದಿ(ಸ) ಹೇಳಿದರು: ಪ್ರಾರ್ಥಿಸುವವನು 'ನಾನು ಬಹಳಷ್ಟು ಪ್ರಾರ್ಥಿಸಿದೆ. ಆದರೆ ಅವು ಸ್ವೀಕೃತವಾಗುವುದಿಲ್ಲ'ವೆಂದು ಭಾವಿಸಿ, ಕೊನೆಗೆ ಬೇಸತ್ತು ಸೋತು ಪ್ರಾರ್ಥಿಸುವುದನ್ನೇ ಬಿಟ್ಟು ಬಿಡುವುದು. *[ಮುಸ್ಲಿಮ್]*

ಪ್ರಾರ್ಥನೆಯ ಲಾಭ

(367) عَنْ اَبِيْ سَعِيْدِنِ الْخُدْرِيِّ اَنَّ النَّبِيَّ صَلَّى اللّٰهُ عَلَيْهِ وَسَلَّمَ قَالَ مَا مِنْ مُسْلِمٍ يَدْعُوْا
بِدَعْوَةٍ لَيْسَ فِيْهَا اِثْمٌ وَلَا قَطِيْعَةُ رَحِمٍ اِلَّا اَعْطَاهُ اللّٰهُ بِهَا اِحْدٰى ثَلَاثٍ، اِمَّا
اَنْ يُعَجِّلَ لَهُ دَعْوَتَهُ، وَاِمَّا اَنْ يَدَّخِرَهَا لَهُ فِي الْاٰخِرَةِ، وَاِمَّا اَنْ يَصْرِفَ عَنْهُ
مِنَ السُّوْءِ مِثْلَهَا، قَالُوْا اِذًا نُكْثِرُ، قَالَ اللّٰهُ اَكْثَرُ (مسند احمد)

ಅಬೂ ಸಈದ್ ಖುದ್ರೀ(ರ) ವರದಿ ಮಾಡುತ್ತಾರೆ: ಪ್ರವಾದಿ(ಸ) ಹೇಳಿದರು- ಒಬ್ಬ ಮುಸ್ಲಿಮನು ಪ್ರಾರ್ಥಿಸಿದರೆ - ಅದು ಪಾಪ ಅಥವಾ ಸಂಬಂಧ ಕಡಿಯುವಂತಹದ್ದಾಗಿರದಿದ್ದರೆ- ಅಂತಹ ಪ್ರಾರ್ಥನೆಯನ್ನು ಅಲ್ಲಾಹನು ಖಂಡಿತ ಸ್ವೀಕರಿಸುತ್ತಾನೆ. ಒಂದೋ ಈ ಲೋಕದಲ್ಲೇ

ಅವನ 'ದುಆ' ಸ್ವೀಕರಿಸಿ ಅವನ ಉದ್ದೇಶವನ್ನು ಈಡೇರಿಸುತ್ತಾನೆ ಇಲ್ಲವೇ ಪರಲೋಕದಲ್ಲಿ ಅವನಿಗಾಗಿ ಅದನ್ನು ಸಂಗ್ರಹಿಸಿಡುತ್ತಾನೆ ಅಥವಾ ಅವನ ಮೇಲೆ ಎರಗಲಿರುವ ಯಾವುದಾದರೂ ವಿಪತ್ತನ್ನು ಈ 'ದುಆ'ದ ಕಾರಣ ಅವನಿಂದ ನೀಗಿಸುತ್ತಾನೆ. ಸಹಾಬಿಗಳು ಹೇಳಿದರು- ಹಾಗಾದರೆ ನಾವು ಬಹಳ ಹೆಚ್ಚು ಪ್ರಾರ್ಥಿಸುವೆವು. ಪ್ರವಾದಿ(ಸ) ಹೇಳಿದರು- ಅಲ್ಲಾಹನೂ ಬಹಳ ಹೆಚ್ಚು ನೀಡುವವನಾಗಿದ್ದಾನೆ. *[ಮುಸ್ನದ್ ಅಹ್ಮದ್]*

ಟಿಪ್ಪಣಿ: ಪರಲೋಕದಲ್ಲಿ ಅವನಿಗಾಗಿ ಶೇಖರಿಸಿಡುವುದೆಂದರೆ ನನ್ನ ದಾಸನು ನನ್ನೊಂದಿಗೆ ಬೇಡಿದುದಕ್ಕಿಂತ ಉತ್ತಮ ವಸ್ತುವನ್ನು ಪರಲೋಕದಲ್ಲಿ ಅವನಿಗೆ ನೀಡುವೆನು. ಈ ಹದೀಸ್‌ನ ಇಂಗಿತ, ಪ್ರಾರ್ಥನೆಯನ್ನು ಅತ್ಯಂತ ಕಳಕಳಿಯೊಂದಿಗೆ ಮಾಡಬೇಕು ಮತ್ತು ಹೆಚ್ಚು ಹೆಚ್ಚು ಪ್ರಾರ್ಥಿಸಬೇಕು ಎಂದಾಗಿದೆ. ಅಲ್ಲಾಹನ ಬೊಕ್ಕಸದಲ್ಲೇನೂ ಕಡಿಮೆಯಿಲ್ಲ. ಅವನು ಎಲ್ಲ ಉದಾರಿಗಳಿಗಿಂತಲೂ ಅಧಿಕ ಉದಾರಿಯಾಗಿದ್ದಾನೆ.

ದುಃಖಿತಪ್ತ ವ್ಯಕ್ತಿಯ ಪ್ರಾರ್ಥನೆ

(368) عَنْ اَبِيْ بَكْرَةَ قَالَ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ دَعْوَةُ الْمَكْرُوْبِ
اَللّٰهُمَّ رَحْمَتَكَ اَرْجُوْ فَلَا تَكِلْنِيْ اِلٰى نَفْسِيْ طَرْفَةَ عَيْنٍ، وَاَصْلِحْ لِيْ شَأْنِيْ
كُلَّهٗ، لَا اِلٰهَ اِلَّا اَنْتَ (ابوداؤد)

ಅಬೂ ಬಕ್ರ(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು- ದುಃಖಿತಪ್ತ ವ್ಯಕ್ತಿ ಈ 'ದುಆ' ಪಠಿಸಲಿ: "ಅಲ್ಲಾಹುಮ್ಮ ರಹ್ಮತಕ ಅರ್ಜೂ ಫಲಾ ತಕಿಲ್‌ನೀ ಇಲಾ ನಫ್ಸೀ ತರ್ಫತ ಐನಿನ್, ವ ಅಸ್‌ಲಿಹ್‌ಲೀ ಶಅ್‌ನೀ ಕುಲ್ಲಹೂ, ಲಾ ಇಲಾಹ ಇಲ್ಲಾ ಅಂತ್".

ಅರ್ಥ: ಓ ಅಲ್ಲಾಹ್! ನಾನು ನಿನ್ನ ಕರುಣೆಯನ್ನು ಅಪೇಕ್ಷಿಸುವವನಾಗಿದ್ದೇನೆ. ರೆಪ್ಪೆ ಬಡಿಯುವಷ್ಟರ ಮಟ್ಟಿಗಾದರೂ ನೀನು ನನ್ನನ್ನು ನನ್ನ ಚಿತ್ತದ ವಶಕ್ಕೆ ಒಪ್ಪಿಸಬೇಡ (ನಿನ್ನ ಸಹಾಯದಿಂದ ನನ್ನನ್ನು ವಂಚಿತಗೊಳಿಸದಿರು. ಅನ್ಯಥಾ ನಾನು ನಾಶವಾಗಿ ಬಿಡುವೆನು) ನನ್ನ ಎಲ್ಲ ವ್ಯವಹಾರಗಳನ್ನು ಸರಿಪಡಿಸು. ನಿನ್ನ ಹೊರತು ಬೇರಾರೂ ಆರಾಧ್ಯರಿಲ್ಲ. (ಆದುದರಿಂದ ನನ್ನ ದುಃಖವನ್ನು ನಿನ್ನ ಹೊರತು ಇನ್ನಾರ ಮುಂದೆ ಇಡಲಿ! ನೀನೇ ನನ್ನ ಕಷ್ಟಗಳನ್ನು ಪರಿಹರಿಸು) *[ಅಬೂ ದಾವೂದ್]*

ಅಲ್ಲಾಹನು ನಾಚುತ್ತಾನೆ!

(369) قَالَ رَسُوْلُ اللّٰهِ صلى الله عليه وسلم إِنَّ اللّٰهَ حَيِيٌّ كَرِيْمٌ، يَسْتَحْيِيْ إِذَا رَفَعَ الرَّجُلُ إِلَيْهِ يَدَيْهِ أَنْ يَرُدَّهُمَا صِفْرًا خَائِبَتَيْنِ (ابوداؤد وترمذی — سلمان فارسیؓ)

ಪ್ರವಾದಿ(ಸ) ಹೇಳಿದರು - ಅಲ್ಲಾಹನು ಲಜ್ಜಾಪೂರ್ಣನೂ ಉದಾರಿಯೂ ಆಗಿದ್ದಾನೆ. ದಾಸನು ಅವನ ಮುಂದೆ ತನ್ನ ಎರಡೂ ಕೈಗಳನ್ನು ಚಾಚಿದಾಗ ಅದನ್ನು ಹಾಗೆಯೇ ಮರಳಿಸಲು ಅವನಿಗೆ ನಾಚಿಕೆಯಾಗುತ್ತದೆ.

[ಅಬೂ ದಾವೂದ್, ತಿರ್ಮಿದಿ - ವರದಿ: ಸಲ್ಮಾನ್ ಫಾರ್ಸೀ(ರ)]

ನಮಾಝ್‌ನ ನಂತರದ ದುಆ

(370) عَنْ مُعَاذٍ أَنَّ رَسُوْلَ اللّٰهِ صلى الله عليه وسلم أَخَذَ بِيَدِهٖ وَقَالَ يَا مُعَاذُ وَاللّٰهِ إِنِّيْ لَأُحِبُّكَ ثُمَّ قَالَ أُوْصِيْكَ لَا تَدَعَنَّ فِيْ دُبُرِ كُلِّ صَلٰوةٍ أَنْ تَقُوْلَ اَللّٰهُمَّ أَعِنِّيْ عَلٰى ذِكْرِكَ وَشُكْرِكَ وَحُسْنِ عِبَادَتِكَ (رياض الصالحين، ابوداؤد، نسائی)

ಮುಆದ್ ಬಿನ್ ಜಬಲ್(ರ) ವರದಿ ಮಾಡುತ್ತಾರೆ- ಪ್ರವಾದಿ(ಸ) ನನ್ನ ಕೈಹಿಡಿದು, ಓ ಮುಆದ್! ನಾನು ನಿಮ್ಮನ್ನು ಪ್ರೀತಿಸುತ್ತೇನೆ ಎಂದರು. ತರುವಾಯ, ಓ ಮುಆದ್! ಪ್ರತಿ ನಮಾಝ್‌ನ ಬಳಿಕ ಈ ದುಆ ತಪ್ಪದೆ ಪಠಿಸಬೇಕೆಂದು ನಾನು ನಿಮಗೆ ವಸಿಯ್ಯತ್ (ಉಪದೇಶ) ಮಾಡುತ್ತೇನೆ.

'ಅಲ್ಲಾಹುಮ್ಮ ಅಇನ್ನೀ ಅಲಾ ದಿಕ್ರಿಕ, ವಶುಕ್ರಿಕ, ವ ಹುಸ್ನಿ ಇಬಾದತಿಕ.'

ಅರ್ಥ: ಓ ಅಲ್ಲಾಹ್! ನಿನ್ನನ್ನು ಸ್ಮರಿಸುವುದರಲ್ಲಿ ನಿನಗೆ ಕೃತಜ್ಞತೆ ಸಲ್ಲಿಸುವುದರಲ್ಲಿ ಮತ್ತು ನಿನ್ನನ್ನು ಉತ್ತಮವಾಗಿ ಆರಾಧಿಸುವುದರಲ್ಲಿ ನೀನು ನನಗೆ ನೆರವಾಗು.

[ರಿಯಾದುಸ್ಸಾಲಿಹೀನ್, ಅಬೂ ದಾವೂದ್, ನಸಾಈ]

ಟಿಪ್ಪಣಿ: ತಾತ್ಪರ್ಯವೇನೆಂದರೆ ನಾವು ನಮ್ಮಷ್ಟಕ್ಕೆ ನಿನ್ನನ್ನು ಸ್ತುತಿಸಲು, ನಿನಗೆ ಕೃತಜ್ಞತೆ ಸಲ್ಲಿಸಲು ಮತ್ತು ನಿನ್ನ ಉತ್ತಮ ಆರಾಧಕರಾಗಲು ಸಾಧ್ಯವಿಲ್ಲ. ನಿನ್ನ ಸಹಾಯ ಮತ್ತು ನಿನ್ನ ಅನುಜ್ಞೆಯಂತೆ ಮಾತ್ರ ಅವೆಲ್ಲ ಆಗಬಲ್ಲವು. ಅನ್ಯಥಾ ನಿನ್ನ ಸ್ಮರಣೆಯಿಂದ, ನಿನ್ನ ಕೃತಜ್ಞತೆಯಿಂದ ನಿರ್ಲಕ್ಷ್ಯರಾಗಿ ನಾವು ಹಾಳಾಗಿ ಹೋಗುವೆವು.

ಅಲ್ಲಾಹನು ನಮ್ಮ ಉಪಕಾರಿ ಮತ್ತು ದಾನಿಯೆಂಬುದರ ಬಗ್ಗೆ ಮನುಷ್ಯನಿಗೆ ಪ್ರಜ್ಞೆಯಿರಬೇಕು. ಆತನ ಸ್ಮರಣೆಯಿಂದ ಎಂದೂ ಅಲಕ್ಷ್ಯರಾಗಿರಬಾರದು. ಆಗ ಮಾತ್ರ ಆರಾಧನೆಯಲ್ಲಿ ಸಂತೋಷ ಉಂಟಾಗುತ್ತದೆಯೆಂಬುದನ್ನು ಈ ಹದೀಸ್ ಮತ್ತು ಅದರ ಪದಗಳ ಅನುಕ್ರಮವೇ ಸ್ಪಷ್ಟಪಡಿಸುತ್ತದೆ.

ನಮಾಝ್‌ನಲ್ಲಿ ಪಠಿಸುವ ದುಆ

(371) عَنْ اَبِيْ بَكْرِنِ الصِّدِّيْقِ اَنَّهُ قَالَ لِرَسُوْلِ اللّٰهِ صَلَّى اللّٰهُ عَلَيْهِ وَسَلَّمَ عَلِّمْنِيْ دُعَاءً اَدْعُوْبِهٖ فِيْ صَلَاتِيْ، قَالَ قُلْ اَللّٰهُمَّ اِنِّيْ ظَلَمْتُ نَفْسِيْ ظُلْمًا كَثِيْرًا، وَلَا يَغْفِرُ الذُّنُوْبَ اِلَّا اَنْتَ، فَاغْفِرْلِيْ مَغْفِرَةً مِّنْ عِنْدِكَ وَارْحَمْنِيْ اِنَّكَ اَنْتَ الْغَفُوْرُ الرَّحِيْمُ (بخاری ومسلم)

ಪ್ರವಾದಿಯವರೊಡನೆ(ಸ) ಅಬೂಬಕರ್ ಸಿದ್ದೀಕ್(ರ) ಬಿನ್ನವಿಸಿದರು- ನನಗೆ ನಮಾಝ್‌ನಲ್ಲಿ (ಅತ್ತಹಿಯ್ಯಾತ್ ಮತ್ತು ಸಲಾತ್‌ನ ನಂತರ) ಪಠಿಸಲು ಯಾವುದಾದರೂ ದುಆ ಕಲಿಸಿರಿ. ಪ್ರವಾದಿ(ಸ) ಹೇಳಿದರು- ನೀವು ಈ ದುಆ ಪಠಿಸಿರಿ : ಅಲ್ಲಾಹುಮ್ಮ ಇನ್ನೀ ಝುಲಮ್ತು ನಫ್ಸೀ ಝುಲ್‌ಮನ್ ಕಸೀರನ್, ವಲಾ ಯಗ್‌ಫಿರುದ್ದುನೂಬ ಇಲ್ಲಾ ಅಂತ, ಫಗ್‌ಫಿರ್‌ಲೀ ಮಗ್‌ಫಿರತನ್ ಮಿನ್ ಇಂದಿಕ ವರ್‌ಹಮ್ನೀ ಇನ್ನಕ ಅಂತಲ್ ಗಫೂರುರ‍್ರಹೀಮ್.

ಅರ್ಥ: ಓ ಅಲ್ಲಾಹ್! ನಾನು ಪಾಪಕೃತ್ಯಗಳನ್ನು ಮಾಡಿ ನನ್ನ ಮೇಲೆಯೇ ಅಕ್ರಮ ವೆಸಗಿದ್ದೇನೆ. ನನ್ನ ಪಾಪಗಳನ್ನು ನಿನ್ನ ಹೊರತು ಯಾರೂ ಕ್ಷಮಿಸುವವರಿಲ್ಲ. ಆದುದರಿಂದ ನಿನ್ನ ಅನುಗ್ರಹದಿಂದ ನನ್ನ ಪಾಪಗಳನ್ನು ಕ್ಷಮಿಸು ಮತ್ತು ನನ್ನ ಮೇಲೆ ಕರುಣೆ ತೋರು. ನಿಸ್ಸಂದೇಹವಾಗಿಯೂ ಕ್ಷಮಿಸುವವನೂ ಕರುಣಾಳುವೂ ನೀನು ಮಾತ್ರ ಆಗಿರುವೆ.

[ಬುಖಾರಿ, ಮುಸ್ಲಿಮ್]

ಸಂದೇಶಪ್ರಚಾರಕರಿಗಾಗಿ ಕೆಲವು ವಿಶಿಷ್ಟ ದುಆಗಳು

(372) اَللّٰهُمَّ اِنِّيْ اَسْأَلُكَ الثَّبَاتَ فِي الْاَمْرِ، وَاَسْأَلُكَ عَزِيْمَةَ الرُّشْدِ وَاَسْأَلُكَ شُكْرَ نِعْمَتِكَ وَحُسْنَ عِبَادَتِكَ، وَاَسْأَلُكَ لِسَانًا صَادِقًا وَقَلْبًا سَلِيْمًا (المنتقى)

"ಓ ಅಲ್ಲಾಹ್! ನಾನು ಧರ್ಮದ ಮೇಲೆ ಅಚಲವಾಗಿರುವಂತೆ ನಿನ್ನಲ್ಲಿ ನಿವೇದಿಸುತ್ತೇನೆ. ನೀನು ನನಗೆ ಸನ್ಮಾರ್ಗ ಮತ್ತು ಸತ್ಯಸಂಧತೆಯಲ್ಲಿ ಸ್ಥಿರತೆ ನೀಡುವಂತೆ ಬೇಡುತ್ತೇನೆ. ನಿನ್ನ ಅನುಗ್ರಹಗಳಿಗೆ ನಾನು ಕೃತಜ್ಞತೆ ಸಲ್ಲಿಸುವವನಾಗುವಂತೆ ಮತ್ತು ನಿನ್ನ ಆರಾಧನೆಯನ್ನು ಅತ್ಯುತ್ತಮವಾಗಿ ನಿರ್ವಹಿಸುವಂತೆ ನಿನ್ನಲ್ಲಿ ಬೇಡಿಕೊಳ್ಳುತ್ತೇನೆ. ಸತ್ಯವನ್ನೇ ನುಡಿಯುವ ನಾಲಗೆಯನ್ನು ನೀಡುವಂತೆ ಹಾಗೂ ಎಲ್ಲಾ ರೀತಿಯ ವಿಕಾರ ಮತ್ತು ಕಾಪಟ್ಯದಿಂದ ಮುಕ್ತವಾಗಿರುವ ಹೃದಯವನ್ನು ನನಗೆ ದಯಪಾಲಿಸುವಂತೆ ನಿನ್ನಲ್ಲಿ ಯಾಚಿಸುತ್ತೇನೆ."

[ಅಲ್‌ಮುಂತಖಾ]

---

(373) اَللّٰهُمَّ اِنِّيْ اَسْأَلُكَ اِيْمَانًا يُبَاشِرُ قَلْبِيْ حَتّٰى اَعْلَمَ اَنَّهٗ لَا يُصِيْبُنِيْ اِلَّا مَا كَتَبْتَ لِيْ، وَرَضِّنِيْ مِنَ الْمَعِيْشَةِ بِمَا قَسَمْتَ لِيْ (ترغيب)

"ಓ ಅಲ್ಲಾಹ್! ನನ್ನ ಮೇಲೆ ಎಂದಾದರೂ ಯಾವುದೇ ವಿಪತ್ತು ಎರಗಿದರೆ, ನೀನು ನಿರ್ಣಯಿಸಿದುದರಿಂದ ಅದು ಬಂತೆಂಬ ದೃಢ ನಂಬಿಕೆ ಬರುವಂತಹ ಹೃದಯವನ್ನು ನನಗೆ ದಯಪಾಲಿಸುವಂತೆ ನಿನ್ನಲ್ಲಿ ಕೋರುತ್ತೇನೆ. (ನಿನ್ನ ವತಿಯಿಂದ ಬರುವ ಯಾವುದೇ ವಸ್ತು ನನ್ನ ಒಳಿತಿಗಾಗಿಯೇ ಇರುವುದು. ಈ ವಿಪತ್ತು ಕೂಡಾ ನನ್ನ ಸುಧಾರಣೆಗಾಗಿ ಬಂದಿದೆ) ನನಗಾಗಿ ನೀನು ನಿಶ್ಚಯಿಸಿರುವ ಜೀವನಾಧಾರದಲ್ಲಿ ಸಂತೃಪ್ತನಾಗುವಂತೆ ನನ್ನನ್ನು ಅನುಗ್ರಹಿಸು. (ಅರ್ಥಾತ್ ಹೆಚ್ಚು ಹೆಚ್ಚು ಸಂಪತ್ತು ಕೂಡಿಡುವಂತಹ ದುರಾಸೆಯಿಂದ ನನ್ನನ್ನು ರಕ್ಷಿಸು ಮತ್ತು ಬಡತನದಲ್ಲಿ ನಿನ್ನ ಬಗ್ಗೆ ಕೆಟ್ಟ ಗುಮಾನಿಯಿರಿಸುವುದರಿಂದಲೂ ನನ್ನನ್ನು ರಕ್ಷಿಸು.)"

(ತರ್ಗೀಬ್)

---

(374) اَللّٰهُمَّ لَا تَكِلْنِيْ إِلٰى نَفْسِيْ طَرْفَةَ عَيْنٍ، وَلَا تَنْزِعْ مِنِّيْ صَالِحَ مَا أَعْطَيْتَنِيْ

(المنذری)

"ಓ ಅಲ್ಲಾಹ್! ನೀನು ನನ್ನನ್ನು ಒಂದು ಕ್ಷಣದ ಮಟ್ಟಿಗಾದರೂ ನನ್ನ ಚಿತ್ತದ ವಶಕ್ಕೊಪ್ಪಿಸಬೇಡ. ನೀನು ನನಗೆ ದಯಪಾಲಿಸಿರುವ ಅತ್ಯುತ್ತಮ ಅನುಗ್ರಹಗಳನ್ನು ನನ್ನಿಂದ ಕಿತ್ತುಕೊಳ್ಳಬೇಡ." *[ಅಲ್‌ಮುಂದಿರೀ]*

ಟಿಪ್ಪಣಿ: ನಿನ್ನ ಸಂರಕ್ಷಣೆಯಿಂದ ವಂಚಿತನಾಗಿ ಶೈತಾನನ ಮತ್ತು ಚಿತ್ತದ ಅನುಸರಣೆ ಮಾಡುವಾಗ ಅವೆರಡೂ ಮನುಷ್ಯನನ್ನು ಯಾವುದಾದರೂ ಪಾತಾಳಕ್ಕೆ ಬೀಳಿಸಿಯೇ ತೀರುತ್ತದೆ. ಇಂತಹ ಪರಿಸ್ಥಿತಿಯಿಂದ ನನ್ನನ್ನು ರಕ್ಷಿಸು. ಅದೇ ರೀತಿಯಲ್ಲಿ ಮಾನವನು ಅಲ್ಲಾಹನ ಅನುಗ್ರಹಗಳನ್ನು ಲೆಕ್ಕಿಸದೆ ಪಾಪ ಮಾರ್ಗವನ್ನು ತುಳಿಯುವಾಗ ಅವನಿಗೆ ಹೆಚ್ಚಿನ ಅನುಗ್ರಹಗಳ ದ್ವಾರವನ್ನು ಮುಚ್ಚಿ ಬಿಡಲಾಗುತ್ತದೆ. ಮಾತ್ರವಲ್ಲ, ಅವನಿಗೆ ಸಿಕ್ಕಿರುವ ಅನುಗ್ರಹಗಳನ್ನೂ ಅವನಿಂದ ಕಿತ್ತುಕೊಳ್ಳಲಾಗುತ್ತದೆ.

---

(375) اَللّٰهُمَّ أَسْأَلُكَ خَشْيَتَكَ فِي الْغَيْبِ وَالشَّهَادَةِ، وَأَسْأَلُكَ كَلِمَةَ الْعَدْلِ فِي الرِّضَا وَالْغَضَبِ، وَأَسْأَلُكَ الْقَصْدَ فِي الْفَقْرِ وَالْغِنٰى، وَأَسْأَلُكَ نَعِيْمًا لَا يَنْفَدُ وَأَسْأَلُكَ قُرَّةَ عَيْنٍ لَا تَنْقَطِعُ، وَأَسْأَلُكَ لَذَّةَ النَّظَرِ إِلٰى وَجْهِكَ، وَالشَّوْقَ إِلٰى لِقَائِكَ، فِي غَيْرِ ضَرَّاءَ مُضِرَّةٍ وَلَا فِتْنَةٍ مُضِلَّةٍ، اَللّٰهُمَّ زَيِّنَّا بِزِيْنَةِ الْإِيْمَانِ وَاجْعَلْنَا هُدَاةً مُهْتَدِيْنَ (ترغیب)

"ಓ ಅಲ್ಲಾಹ್! ನಾನು ಬಹಿರಂಗ ಹಾಗೂ ಗುಪ್ತವಾದ ಎರಡೂ ಅವಸ್ಥೆಯಲ್ಲಿ ನಿನ್ನ ಭಯವಿರಿಸುವಂತೆ ನಿನ್ನಲ್ಲಿ ಯಾಚಿಸುತ್ತೇನೆ. ಸಂತೋಷದಲ್ಲಿರಲಿ, ಕೋಪಗೊಂಡಿರಲಿ- ಯಾವ ಅವಸ್ಥೆಯಲ್ಲೂ ನಾನು ನ್ಯಾಯವಾದ ಮಾತನ್ನೇ ಆಡುವಂತೆ ನಿನ್ನಲ್ಲಿ ಬೇಡುತ್ತೇನೆ. ಬಡತನದಲ್ಲೂ ಸಿರಿತನದಲ್ಲೂ ಸರಿಯಾದ ಮಾರ್ಗದಲ್ಲೇ ನಡೆಯುವಂತೆ ನನ್ನನ್ನು ಅನುಗ್ರಹಿಸು. ನಾನು ನಿನ್ನಲ್ಲಿ ಎಂದೆಂದಿಗೂ ಕೊನೆಗೊಳ್ಳದಂತಹ ಸುಖವನ್ನು ಅಪೇಕ್ಷಿಸುತ್ತೇನೆ. ಸದಾ ಉಳಿಯುವಂತಹ ಕಣ್ತಂಪನ್ನು ನಿನ್ನಿಂದ ಬಯಸುತ್ತೇನೆ. ನಾನು ನಿನ್ನ ತೀರ್ಮಾನದ ಬಗ್ಗೆ ಸಂತೃಪ್ತಿಯನ್ನು ಯಾಚಿಸುತ್ತೇನೆ. ನಾನು ನಿನ್ನ ದರ್ಶನದ ರುಚಿಯನ್ನೂ ನಿನ್ನನ್ನು ಭೇಟಿ ಯಾಗುವ ಆಸಕ್ತಿಯನ್ನೂ ಬೇಡುತ್ತೇನೆ. ಯಾವುದೇ ವಿನಾಶಕಾರಿ ಸಂಕಟಕ್ಕೆ ಮತ್ತು ದಾರಿತಪ್ಪಿಸುವಂತಹ ಪರೀಕ್ಷೆಗೆ ಸಿಲುಕದಂತೆ ನನ್ನನ್ನು ಅನುಗ್ರಹಿಸು. ಓ ಅಲ್ಲಾಹ್! ನಮ್ಮ ಜೀವನವನ್ನು ಈಮಾನ್‌ನಿಂದ ಶೃಂಗರಿಸು. ನಮ್ಮನ್ನು ನೇರಮಾರ್ಗದಲ್ಲಿ ನಡೆಯುವಂತೆ

ಮಾಡು ಮತ್ತು ಜನರಿಗೆ ನೇರಮಾರ್ಗವನ್ನು ತೋರಿಸುವಂತೆ ನಮ್ಮನ್ನು ಅನುಗ್ರಹಿಸು."

[ತರ್ಗೀಬ್]

ಟಿಪ್ಪಣಿ: 'ದರ್ಶನದ ರುಚಿ' ಮತ್ತು 'ಪ್ರಭುವನ್ನು ಭೇಟಿಯಾಗುವ ಆಸಕ್ತಿ'ಗಳೇ ಅತ್ಯಂತ ಕಠಿಣ ಪರಿಸ್ಥಿತಿಯಲ್ಲೂ ಸತ್ಯ ಪ್ರಚಾರಕರನ್ನು ಬೆಟ್ಟದಂತೆ ಅಚಲವಾಗಿರಿಸುತ್ತವೆ. ಗತಕಾಲದ ಮತ್ತು ನಿಕಟ ಪೂರ್ವದ ಅಗ್ನಿಪರೀಕ್ಷೆಗಳ ಇತಿಹಾಸವು ಇದರ ಜ್ವಲಂತ ಸಾಕ್ಷಿಗಳಾಗಿವೆ. ಇವು ಇಲ್ಲದಿದ್ದರೆ ಅಪೇಕ್ಷಿತ ತಾಳ್ಮೆ ಖಂಡಿತ ಉಂಟಾಗಲಾರದು. ಕೊನೆಯ ನುಡಿಯಲ್ಲಿ ಮಾತು-ಕೃತಿಗಳ ವಿರೋಧಾಭಾಸಗಳಿಂದ ದೂರವಿರಲು ಹೇಳಲಾಗಿದೆ.

---

(376) اَللّٰهُمَّ اجْعَلْنَا هَادِيْنَ مُهْتَدِيْنَ غَيْرَ ضَالِّيْنَ وَلَا مُضِلِّيْنَ، سِلْمًا لِّاَوْلِيَائِكَ وَعَدُوًّا لِّاَعْدَائِكَ، نُحِبُّ بِحُبِّكَ مَنْ اَحَبَّكَ وَنُعَادِيْ بِعَدَاوَتِكَ مَنْ خَالَفَكَ (ترغیب للمنذری)

"ಓ ಅಲ್ಲಾಹ್! ನಮಗೆ ಸತ್ಯದ ಪ್ರಚಾರ ಮಾಡುವ ಮತ್ತು ಸತ್ಯದ ಮೇಲೆ ನಡೆಯುವ ಸೌಭಾಗ್ಯವನ್ನು ದಯಪಾಲಿಸು. ನಾವು ಪಥಭ್ರಷ್ಟರಾಗದಂತೆ ಮತ್ತು ಪಥ ಭ್ರಷ್ಟತೆಯ ಕಡೆಗೆ ಕರೆ ನೀಡುವವರಾಗದಂತೆ ಮಾಡು. ನಾವು ನಿನ್ನ ವೈರಿಗಳ ವೈರಿಗಳಾಗುವಂತೆ, ನೀನು ಪ್ರೀತಿಸುವವರನ್ನು ಪ್ರೀತಿಸುವವರಾಗುವಂತೆ ಮತ್ತು ನಿನ್ನ ವಿರೋಧಿಗಳ ವೈರಿಗಳಾಗುವಂತೆ ಮಾಡು." *[ತರ್ಗೀಬ್ ಲಿಲ್ ಮುಂದಿರಿ]*

---

(377) اَللّٰهُمَّ اقْسِمْ لَنَا مِنْ خَشْيَتِكَ مَا يَحُوْلُ بَيْنَنَا وَبَيْنَ مَعَاصِيْكَ وَمِنْ طَاعَتِكَ مَا تُبَلِّغُنَا بِهٖ جَنَّتَكَ، وَمِنَ الْيَقِيْنِ مَا تُهَوِّنُ عَلَيْنَا مَصَائِبَ الدُّنْيَا، وَمَتِّعْنَا بِاَسْمَاعِنَا وَاَبْصَارِنَا وَقُوَّتِنَا مَا اَحْيَيْتَنَا، وَاجْعَلْهُ الْوَارِثَ مِنَّا، وَاجْعَلْ ثَأْرَنَا عَلٰى مَنْ ظَلَمَنَا، وَانْصُرْنَا عَلٰى مَنْ عَادَانَا، وَلَا تَجْعَلْ مُصِيْبَتَنَا فِيْ دِيْنِنَا، وَلَا تَجْعَلِ الدُّنْيَا اَكْبَرَ هَمِّنَا وَلَا مَبْلَغَ عِلْمِنَا، وَلَا تُسَلِّطْ عَلَيْنَا مَنْ لَّا يَرْحَمُنَا (ترغیب للمنذری)

"ಓ ಅಲ್ಲಾಹ್! ನಿನ್ನ ಆಜ್ಞೋಲ್ಲಂಘನೆಯಿಂದ ಪಾರಾಗುವಂತೆ ನಮ್ಮ ಹೃದಯಗಳಲ್ಲಿ ನಿನ್ನ ಭಯವನ್ನು ಹುಟ್ಟಿಸು. ನಿನ್ನ ಸ್ವರ್ಗದಲ್ಲಿ ಸ್ಥಳ ಪಡೆಯುವಂತಾಗಲು ನಮಗೆ

ನಿನ್ನ ಆಜ್ಞಾಪಾಲನೆ ಮಾಡುವ ಸೌಭಾಗ್ಯ ನೀಡು. ಲೋಕದ ಕಷ್ಟ-ಕಾರ್ಪಣ್ಯಗಳು ಹಗುರವೂ ಸುಲಭವೂ ಆಗುವಂತೆ ನಮಗೆ ದೃಢಚಿತ್ತತೆಯನ್ನು ನೀಡು. ನಾವು ಬದುಕಿ ಉಳಿದಿರುವವರೆಗೆ ನಮಗೆ ಕೇಳುವ, ನೋಡುವ ಮತ್ತು ದೈಹಿಕ ಶಕ್ತಿಗಳನ್ನು ದಯಪಾಲಿಸು. (ಅರ್ಥಾತ್ ಕೊನೆಯ ಕ್ಷಣದ ವರೆಗೂ ನಾವು ಕಿವುಡಾಗುವುದರಿಂದ, ಕುರುಡಾಗುವುದರಿಂದ ಮತ್ತು ದೈಹಿಕವಾಗಿ ಕ್ಷೀಣವಾಗುವುದರಿಂದ ನಮ್ಮನ್ನು ರಕ್ಷಿಸು) ನಮ್ಮ ಮೇಲೆ ಅಕ್ರಮವೆಸಗುವವರ ಮೇಲೆ ನೀನೇ ಪ್ರತೀಕಾರವೆಸಗು. ನಮ್ಮನ್ನು ದ್ವೇಷಿಸುವವರ ವಿರುದ್ಧ ನಮಗೆ ನಿನ್ನ ಸಹಾಯ ನೀಡು. ನಮ್ಮ ಧರ್ಮದ ಮೇಲೆ ವಿಪತ್ತುಗಳೆರಗದಂತೆ ಮಾಡು. ಈ ಲೋಕವನ್ನೇ ನಮ್ಮ ಉದ್ದೇಶವಾಗಿ ಮಾಡದಿರು. ನಮ್ಮ ಜ್ಞಾನವು ಈ ಲೋಕಕ್ಕೆ ಮಾತ್ರ ಸೀಮಿತವಾಗದಿರಲಿ. ಪರಲೋಕದ ಬಗ್ಗೆ ನಮ್ಮನ್ನು ಅಜ್ಞಾನಿಗಳಾಗಿ ಮಾಡದಿರು. ನಮ್ಮ ಮೇಲೆ ಕರುಣೆ ತೋರದಂತಹ ಜನರನ್ನು ನಮ್ಮ ಮೇಲೆ ಹೇರಬೇಡ. *[ತರ್ಗೀಬ್ ಲಿಲ್ ಮುಂದಿರಿ]*

---

(378) اَللّٰهُمَّ اَصْلِحْ ذَاتَ بَيْنِنَا، وَاَلِّفْ بَيْنَ قُلُوْبِنَا وَاهْدِنَا سُبُلَ السَّلَامِ، وَنَجِّنَا مِنَ الظُّلُمَاتِ اِلَى النُّوْرِ (ترغيب للمنذرى)

"ಓ ಅಲ್ಲಾಹ್! ನಮ್ಮ ಪರಸ್ಪರ ಸಂಬಂಧಗಳನ್ನು ಸರಿಪಡಿಸು (ಸಂಬಂಧ ಕೆಟ್ಟಿದ್ದರೆ ಉತ್ತಮ ಪಡಿಸು) ನಮ್ಮ ಹೃದಯಗಳನ್ನು ಜೋಡಿಸಿಡು. (ಐಕ್ಯವು ಶಿಥಿಲವಾಗಿದ್ದರೆ ಅದನ್ನು ಒಂದುಗೂಡಿಸು) ನಮಗೆ ಶಾಂತಿಯ ಮಾರ್ಗವನ್ನು ತೋರಿಸಿ ಅದರಲ್ಲೇ ನಡೆಸು. (ಅಂದರೆ ನಾವು ಕ್ಷೇಮದೊಂದಿಗೆ ಶಾಂತಿಯ ಗೇಹವಾದ ಸ್ವರ್ಗಕ್ಕೆ ಅರ್ಹರಾಗಲು ಧರ್ಮಪ್ರಚಾರದ ಮಜಲುಗಳಲ್ಲಿ ನಮಗೆ ಮಾರ್ಗದರ್ಶನ ಮತ್ತು ಸಹಾಯ ನೀಡು) ಮತ್ತು ನಮ್ಮನ್ನು ಅಂಧಕಾರಗಳಿಂದ ತೆಗೆದು ಬೆಳಕಿನತ್ತ ಸಾಗಿಸು." *[ತರ್ಗೀಬ್ ಲಿಲ್ ಮುಂದಿರಿ]*

ಅಬ್ದುಲ್ಲಾ ಬಿನ್ ಮಸ್‌ವೂದ್‌ರ(ರ) ದುಆ

(379) اَللّٰهُمَّ اِنِّىْ اَسْاَلُكَ اِيْمَانًا لَا يَرْتَدُّ، وَنَعِيْمًا لَا يَنْفَدُ، وَمُرَافَقَةَ نَبِيِّكَ مُحَمَّدٍ صَلَّى اللّٰهُ عَلَيْهِ وَسَلَّمَ فِىْ اَعْلٰى جَنَّةِ الْخُلْدِ (مسند احمد)

"ಓ ಅಲ್ಲಾಹ್! ನಾನು ನಿನ್ನಲ್ಲಿ ಅಚಂಚಲ ಈಮಾನನ್ನು ಬೇಡುತ್ತೇನೆ. ಎಂದೆಂದಿಗೂ ಕೊನೆಗೊಳ್ಳದಂತಹ (ಸ್ವರ್ಗದ) ಅನುಗ್ರಹಗಳನ್ನು ಮತ್ತು ಶಾಶ್ವತವಾಗಿ

ಉಳಿಯುವಂತಹ ಉನ್ನತ ಸ್ವರ್ಗದಲ್ಲಿ ನಿನ್ನ ಪ್ರವಾದಿ ಮುಹಮ್ಮದ್‌ರ (ಸ) ಸಾಮೀಪ್ಯವನ್ನು ಕರುಣಿಸುವಂತೆ ಬೇಡುತ್ತೇನೆ." *[ಮುಸ್ನದ್ ಅಹ್ಮದ್]*

ಟಿಪ್ಪಣಿ: ಹ.ಅಬ್ದುಲ್ಲಾ ಬಿನ್ ಮಸ್‌ವೂದ್‌ರ(ರ) ಪ್ರಾರ್ಥನೆಯ ಕೊನೆಯ ವಾಕ್ಯದ ಅರ್ಥವೇನೆಂದರೆ, ಓ ಅಲ್ಲಾಹ್! ನನ್ನನ್ನು ಲೋಕದಲ್ಲಿ ನಿನ್ನ ವಿಧೇಯನಾಗಿ ಹಾಗೂ ಪ್ರವಾದಿಯವರನ್ನು(ಸ) ಸರಿಯಾದ ರೀತಿಯಲ್ಲಿ ಪ್ರೀತಿಸುವವನಾಗಿ ಮಾಡು. ಅದರ ಹೊರತು ಸ್ವರ್ಗದಲ್ಲಿ ಪ್ರವಾದಿಯವರ(ಸ) ಸಾಮೀಪ್ಯ ಗಳಿಸುವುದು ಅಸಂಭವ.

ಹ. ಇಬ್ನು ಮಸ್‌ವೂದ್‌ರಿಗೆ(ರ) ಸೂರಃ ಅನ್ನಿಸಾದ 69ನೇ ಆಯತ್ ನೆನಪಿತ್ತು. ಅದರಲ್ಲಿ ಅಲ್ಲಾಹನು ಹೀಗೆಂದಿದ್ದಾನೆ- ಯಾರು ಅಲ್ಲಾಹ್ ಮತ್ತು ರಸೂಲರನ್ನು ಮನಸಾರೆ ಹಾಗೂ ಗೌರವಭಾವದೊಂದಿಗೆ ಅನುಸರಿಸುವರೋ ಅವರಿಗೆ, ಅಲ್ಲಾಹನು ಅನುಗ್ರಹಿಸಿದವರ ಸಾಮೀಪ್ಯ ಲಭಿಸುವುದು. ಅಂದರೆ ಪ್ರವಾದಿಗಳ, ಸತ್ಯಸಂಧರ ಹುತಾತ್ಮರ ಹಾಗೂ ಸಜ್ಜನರ ಸಾಮೀಪ್ಯ- ಎಷ್ಟೊಂದು ಉತ್ತಮ ಸಂಗಾತಿಗಳವರು!

❖ ❖ ❖

ವೈರಾಗ್ಯ ಮತ್ತು ಪರಲೋಕದ ಚಿಂತೆ

ಇವು ಸತ್ಯ ಸಂದೇಶ ಪ್ರಚಾರಕರಿಗೆ ಶಕ್ತಿ ನೀಡುವ ಮತ್ತು ಅವರ ಕೆಲಸ ಕಾರ್ಯಗಳಲ್ಲಿ ಸಮೃದ್ಧಿ ಉಂಟು ಮಾಡುವ ವಿಷಯಗಳಾಗಿವೆ. ಈ ವಿಷಯಕ್ಕೆ ಸಂಬಂಧಿಸಿದ ಕೆಲವು ಹದೀಸ್‌ಗಳು ಇಲ್ಲಿವೆ-

ಲೋಕದ ಪ್ರೀತಿ ಮತ್ತು ಮರಣದ ಭಯ ಅಪಮಾನದ ಹೇತು

(380) قَالَ رَسُوْلُ اللّٰهِ صلى الله عليه وسلم يُوْشِكُ الْأُمَمُ أَنْ تَدَاعٰى عَلَيْكُمْ كَمَا تَدَاعَى الْأَكَلَةُ إِلٰى قَصْعَتِهَا، فَقَالَ قَائِلٌ وَمِنْ قِلَّةٍ نَحْنُ يَوْمَئِذٍ؟ قَالَ بَلْ أَنْتُمْ يَوْمَئِذٍ كَثِيْرٌ وَلٰكِنَّكُمْ غُثَاءٌ كَغُثَاءِ السَّيْلِ، وَلَيَنْزِعَنَّ اللّٰهُ مِنْ صُدُوْرِ عَدُوِّكُمُ الْمَهَابَةَ مِنْكُمْ، وَلَيَقْذِفَنَّ فِيْ قُلُوْبِكُمُ الْوَهْنَ، قَالَ قَائِلٌ يَا رَسُوْلَ اللّٰهِ وَمَا الْوَهْنُ؟ قَالَ حُبُّ الدُّنْيَا وَكَرَاهِيَةُ الْمَوْتِ (ابوداؤد — ثوبانؓ)

ಪ್ರವಾದಿಯವರು(ಸ) ಸಹಾಬಿಗಳನ್ನುದ್ದೇಶಿಸಿ ಹೇಳಿದರು: ನನ್ನ ಸಮುದಾಯದ ಮೇಲೆ ಒಂದು ಕಾಲ ಬೇಗನೆ ಬರಲಿದೆ. ಅಂದು ಹಸಿದವರು ಊಟದ ಬಟ್ಟಲಿಗೆ ಮುಗಿ ಬೀಳುವಂತೆ ಅವರ ಮೇಲೆ ಇತರ ಜನಾಂಗಗಳು ಮುಗಿ ಬೀಳುವರು. ಆಗ ಒಬ್ಬನು ಕೇಳಿದನು- "ಪ್ರವಾದಿವರ್ಯರೇ(ಸ)! ತಾವು ವಿವರಿಸುವ ಆ ಕಾಲದಲ್ಲಿ ಇತರ ಜನಾಂಗಗಳು ಒಗ್ಗಟ್ಟಾಗಿ ನಮ್ಮ ಮೇಲೆ ಮುಗಿ ಬೀಳಲು ಮುಸ್ಲಿಮರಾದ ನಾವು ಅಲ್ಪಸಂಖ್ಯೆಯಲ್ಲಿರುವುದು ಕಾರಣವೆ? ಪ್ರವಾದಿ(ಸ) ಹೇಳಿದರು - ಅಲ್ಲ, ಆಗ ನಿಮ್ಮ ಸಂಖ್ಯೆಯೇನೂ ಕಡಿಮೆಯಾಗಿರಲಾರದು. ನೀವು ಆಗ ಭಾರೀ ಸಂಖ್ಯೆಯಲ್ಲಿರುವಿರಿ. ಆದರೆ ನೀವು ನೆರೆಯಲ್ಲಿ ತೇಲುತ್ತಿರುವ ಕಸಕಡ್ಡಿಗಳಂತಿರುವಿರಿ (ಬೆಲೆ, ತೂಕವಿಲ್ಲದವರಾಗುವಿರಿ). ನಿಮ್ಮ ವೈರಿಗಳ ಮನಸ್ಸಿನಿಂದ ನಿಮ್ಮ ಭೀತಿ ಹೊರಟು ಹೋಗುವುದು. ನಿಮ್ಮ ಮನಗಳಲ್ಲಿ ಹೇಡಿತನ ಮನೆ ಮಾಡುವುದು. ಒಬ್ಬನು ಕೇಳಿದನು- "ಈ ಹೇಡಿತನ ಉಂಟಾಗಲು ಕಾರಣವೇನು?" ಪ್ರವಾದಿ(ಸ) ಹೇಳಿದರು- "ಅಂದು ಜನರು 'ಲೋಕವನ್ನು ಪ್ರೀತಿಸುವುದರಿಂದ ಮತ್ತು (ಅಲ್ಲಾಹನ ಮಾರ್ಗದಲ್ಲಿ ಬರುವ) ಮರಣವನ್ನು ಬಯಸದಿರುವುದರಿಂದ ಅದು ಉಂಟಾಗುವುದು." *[ಅಬೂ ದಾವೂದ್, ವರದಿ: ಸೌಬಾನ್(ರ)]*

ಆಡಂಬರ ಪ್ರಿಯತೆ

(381) عَنْ مُعَاذِ بْنِ جَبَلٍ اَنَّ رَسُوْلَ اللّٰهِ صَلَّى اللّٰهُ عَلَيْهِ وَسَلَّمَ - لَمَّا بَعَثَ بِهٖ اِلَى الْيَمَنِ - قَالَ اِيَّاكَ وَالتَّنَعُّمَ، فَاِنَّ عِبَادَ اللّٰهِ لَيْسُوْا بِالْمُتَنَعِّمِيْنَ (مشكوٰة)

ಮುಆದ್ ಬಿನ್ ಜಬಲ್(ರ) ಹೇಳುತ್ತಾರೆ- ಪ್ರವಾದಿಯವರು(ಸ) ನನ್ನನ್ನು ಯಮನ್‌ಗೆ ರಾಜ್ಯಪಾಲನಾಗಿ ಮಾಡಿ ಕಳಿಸುವಾಗ ಹೀಗೆಂದರು- ಓ ಮುಆದ್! ನೀವು ಆಡಂಬರದಲ್ಲಿ ಬೀಳದಂತೆ ಜಾಗ್ರತೆ ಪಾಲಿಸಬೇಕು. ಏಕೆಂದರೆ ಅಲ್ಲಾಹನ ದಾಸರು ಆಡಂಬರ ಪ್ರಿಯರಾಗಿರುವುದಿಲ್ಲ. *[ಮಿಶ್ಕಾತ್]*

ಟಿಪ್ಪಣಿ: ತಾತ್ಪರ್ಯವೇನೆಂದರೆ ನೀವು ಆಡಳಿತಗಾರನಾಗಿ ಹೋಗುತ್ತಿರುವಿರಿ. ಅಲ್ಲಿ ಜೀವನದ ಸುಖಸಂತೋಷಗಳಿಂದ ಪ್ರಯೋಜನ ಪಡೆಯುವ ಮತ್ತು ಕೈತುಂಬಾ ಸಂಪಾದಿಸುವ ಅವಕಾಶಗಳು ಹೇರಳವಾಗಿರುತ್ತವೆ. ಆದುದರಿಂದ ಲೋಕಾರಾಧಕರಾದ ಆಡಳಿತಗಾರರಂತಹ ಮನೋಭಾವವನ್ನು ನೀವು ಬೆಳೆಸಿಕೊಳ್ಳಬಾರದು. ಅದು ಅಲ್ಲಾಹನ ದಾಸ್ಯ-ಅನುಸರಣೆಗೆ ನಿಲುಕುವಂತಹದ್ದಲ್ಲ.

ಅಪಾಯದ ಕರೆಗಂಟೆ

(382) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اِنَّ اَخْوَفَ مَا اَتَخَوَّفُ عَلٰى اُمَّتِى الْهَوٰى وَطُوْلُ الْاَمَلِ، فَاَمَّا الْهَوٰى فَيَصُدُّ عَنِ الْحَقِّ، وَاَمَّا طُوْلُ الْاَمَلِ فَيُنْسِى الْاٰخِرَةَ، هٰذِهِ الدُّنْيَا مُرْتَحِلَةٌ ذَاهِبَةٌ، وَهٰذِهِ الْاٰخِرَةُ مُرْتَحِلَةٌ قَادِمَةٌ، وَلِكُلِّ وَاحِدَةٍ مِنْهُمَا بَنُوْنَ، فَاِنِ اسْتَطَعْتُمْ اَنْ لَا تَكُوْنُوْا مِنْ اَبْنَاءِ الدُّنْيَا فَافْعَلُوْا، فَاِنَّكُمُ الْيَوْمَ فِىْ دَارِ الْعَمَلِ وَلَا حِسَابَ، وَغَدًا اَنْتُمْ فِىْ دَارِ الْاٰخِرَةِ وَلَا عَمَلَ (مشكوٰة — جابرؓ)

ಪ್ರವಾದಿ(ಸ) ಹೇಳಿದರು: ನಾನು ನನ್ನ ಸಮುದಾಯದ ಬಗ್ಗೆ ಎರಡು ವಿಷಯಗಳಲ್ಲಿ ತುಂಬಾ ಹೆದರುತ್ತೇನೆ. ಒಂದನೆಯದು ಈ ಲೋಕ ಮತ್ತು ಇದರ ಸಾಧನಾನುಕೂಲತೆಗಳ ಮೋಹ. ಎರಡನೆಯದು ಲೋಕವನ್ನು ಕಟ್ಟಲು ಸುದೀರ್ಘ ಯೋಜನೆಗಳನ್ನು ಮಾಡುವುದು. ಲೋಕದ ಮೋಹದ ಪರಿಣಾಮವಾಗಿ ಸಮುದಾಯವು ಸತ್ಯದಿಂದ ದೂರ ಸರಿಯುವುದು.

ಲೋಕವನ್ನು ಕಟ್ಟುವ ಯೋಜನೆಗಳಿಂದ ಸಮುದಾಯವು ಪರಲೋಕವನ್ನು ಮರೆಯುವುದು. (ಜನರೇ!) ಈ ಲೋಕ ಚಲಿಸಲಾರಂಭಿಸಿದೆ- ಚಲಿಸುತ್ತಾ ಇರುವುದು ಮತ್ತು ಪರಲೋಕವೂ ಚಲಿಸಲಾರಂಭಿಸಿದೆ- ಅದು ಬರುವುದು. ಈ ಪೈಕಿ ಒಂದನ್ನು ನಂಬುವವರು ಅದನ್ನು ಪ್ರೀತಿಸುತ್ತಾರೆ. ಆದುದರಿಂದ ಪರಲೋಕವನ್ನು ಪ್ರೀತಿಸುವವರಾಗಿ ಲೋಕಾರಾಧಕರಾಗದಿರುವುದು ಒಳ್ಳೆಯದು. ನೀವು ಈಗ ಕರ್ಮಲೋಕದಲ್ಲಿದ್ದೀರಿ. ಇಲ್ಲಿ ವಿಚಾರಣೆ ನಡೆಯದು. ನಾಳೆ ನೀವು ಪರಲೋಕದಲ್ಲಿರುವಿರಿ. ಅಲ್ಲಿ ವಿಚಾರಣೆ ಇರುವುದು. ಕರ್ಮಕ್ಕೆ ಅವಕಾಶವಿರಲಾರದು.

[ಮಿಶ್ಕಾತ್ : ಜಾಬಿರ್(ರ)]

---

(383) عَنِ ابْنِ مَسْعُوْدٍ قَالَ قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ لَا تَتَّخِذُوْا الضَّيْعَةَ فَتَرْغَبُوْا فِي الدُّنْيَا (مسند احمد)

ಇಬ್ನು ಮಸ್‌ವೂದ್(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು: ನೀವು ಆಸ್ತಿ-ಭೂಮಿಯನ್ನು ಮಾಡಬೇಡಿ. ಅನ್ಯಥಾ ನಿಮ್ಮಲ್ಲಿ ಲೋಕದ ವ್ಯಾಮೋಹವುಂಟಾಗಬಹುದು.

[ಮುಸ್ನದ್ ಅಹ್ಮದ್]

ಟಿಪ್ಪಣಿ: ಮನುಷ್ಯನು ಹೆಚ್ಚು ಹೆಚ್ಚು ಆಸ್ತಿ ಮಾಡುವ ಚಿಂತೆಯಲ್ಲಿದ್ದರೆ ಅವನ ಮನಸ್ಸು ಪರಲೋಕದ ಚಿಂತೆಯಿಂದ ಮೆಲ್ಲಮೆಲ್ಲನೆ ದೂರ ಸರಿಯುವುದು. ಇದು ಈ ಸಮುದಾಯದ ಜೀವನದ ಉದ್ದೇಶಕ್ಕೆ ವಿರುದ್ಧವಾಗಿದೆ. ಹಿಂದೆಯೂ ಲೋಕಾರಾಧಕರಿಗೇನೂ ಅಭಾವವಿರಲಿಲ್ಲ. ಈ ಅಭಾವವನ್ನು ತುಂಬಲು ಇನ್ನೊಂದು ಸಮುದಾಯವನ್ನು ರೂಪಿಸುವ ಅಗತ್ಯ ಇರಲಿಲ್ಲ. ಈ ಸಮುದಾಯವು ಪರಲೋಕವನ್ನು ತನ್ನ ಗುರಿಯಾಗಿಸಬೇಕಾದುದು ಕಡ್ಡಾಯ. ಪರಲೋಕದ ಸಿದ್ಧತೆಗಾಗಿ ಅಗತ್ಯವಿರುವಷ್ಟು ಮಾತ್ರ ಈ ಲೋಕದ ಸಾಧನಾನುಕೂಲತೆಗಳನ್ನು ಬಳಸಬಹುದು.

ಈ ಹದೀಸ್‌ನಲ್ಲಿ ಸನ್ಯಾಸಿಗಳಂತೆ ಜೀವನ ಸಾಗಿಸಬೇಕೆಂದು ಪ್ರವಾದಿ(ಸ) ಬೋಧಿಸಲಿಲ್ಲ. ಬದಲಾಗಿ ಒಂದು ಅಪಾಯದ ಬಗ್ಗೆ ಎಚ್ಚರಿಸುತ್ತಿದ್ದಾರೆ. ಮನುಷ್ಯನು ಯಾವುದಕ್ಕಾಗಿ ತನ್ನ ಸಮಯ, ಸಾಮರ್ಥ್ಯಗಳನ್ನು ವ್ಯಯಿಸುತ್ತಾನೋ ಅದರೊಂದಿಗೆ ಅವನಿಗೆ ಸಹಜವಾಗಿಯೇ ಪ್ರೀತಿಯಿರುತ್ತದೆ. ಅವನ ಮನಸ್ಸು ಸದಾ ಅದರಲ್ಲೇ ನೆಟ್ಟಿರುತ್ತದೆ. ಪರಲೋಕ ಪ್ರಿಯರು ಈ ಅಪಾಯದ ಬಗ್ಗೆ ಎಚ್ಚರದಿಂದಿರಬೇಕಾಗಿದೆ.

ವೈರಾಗ್ಯದ ನೈಜ ಕಲ್ಪನೆ

(384) قَالَ النَّبِيُّ صَلَّى اللهُ عَلَيْهِ وَسَلَّمَ اَلزَّهَادَةُ فِي الدُّنْيَا لَيْسَتْ بِتَحْرِيْمِ الْحَلَالِ وَلَا بِإِضَاعَةِ الْمَالِ، وَلٰكِنَّ الزَّهَادَةَ فِي الدُّنْيَا اَنْ لَّا تَكُوْنَ بِمَا فِي يَدَيْكَ اَوْثَقَ مِمَّا فِي يَدَيِ اللهِ، وَاَنْ تَكُوْنَ فِي ثَوَابِ الْمُصِيْبَةِ اِذَا اَنْتَ اُصِبْتَ بِهَا اَرْغَبَ فِيْهَا لَوْ اَنَّهَا اُبْقِيَتْ لَكَ (ترمذی — ابوذر غفاری)

ಪ್ರವಾದಿ(ಸ) ಹೇಳಿದರು: ವೈರಾಗ್ಯವೆಂದರೆ(ಲೋಕದ ಬಗ್ಗೆ ವಿರಕ್ತಿ) ಮನುಷ್ಯನು ಹಲಾಲನ್ನು ಹರಾಮ್‌ಗೊಳಿಸುವುದಲ್ಲ(ಅರ್ಥಾತ್ ಸನ್ಯಾಸ ಜೀವನ ಸಾಗಿಸುವುದಲ್ಲ). ಮನುಷ್ಯನು ತನ್ನ ಸೊತ್ತನ್ನು ಪೋಲು ಮಾಡುವುದೂ(ಅಂದರೆ ತನ್ನ ಬಳಿ ಏನೂ ಇಡದಿರುವುದು) ವೈರಾಗ್ಯವಲ್ಲ. ಬದಲಾಗಿ ವೈರಾಗ್ಯವೆಂದರೆ ನಿಮಗೆ ನಿಮ್ಮ ಸಂಪತ್ತಿಗಿಂತ ಅಲ್ಲಾಹನ ಅನುಗ್ರಹಗಳ ಮೇಲೆ ಭರವಸೆಯಿರಿಸುವುದು. ನಿಮ್ಮ ಮೇಲೇನಾದರೂ ವಿಪತ್ತು ಎರಗಿದಾಗ ಅದಕ್ಕೆ ಅಲ್ಲಾಹನ ವತಿಯಿಂದ ಸಿಗುವ ಪುರಸ್ಕಾರಗಳಿಂದಾಗಿ ನೀವು ಆ ವಿಪತ್ತು ಹಾಗೆಯೇ ಇದ್ದರೆ ಒಳ್ಳೆಯದಾಗಿತ್ತೆಂದು ಭಾವಿಸುವುದಾಗಿದೆ.

[ತಿರ್ಮಿದಿ- ವರದಿ: ಅಬೂದರ್ರ್ ಗಿಫಾರೀ(ರ)]

ಟಿಪ್ಪಣಿ: ಈ ಹದೀಸ್ ವೈರಾಗ್ಯದ ಬಗೆಗಿನ ಆಧುನಿಕ ಕಲ್ಪನೆಯನ್ನೇ ಕಿತ್ತೊಗೆಯುತ್ತದೆ. ಮನುಷ್ಯನು ತನ್ನ ಎಲ್ಲ ಪ್ರಾಕೃತಿಕ ಬೇಡಿಕೆಗಳನ್ನೂ ಸಕಲ ಸಂಬಂಧಗಳನ್ನೂ ತ್ಯಜಿಸಿ ಎಲ್ಲೋ ಗುಹೆಯಲ್ಲಿ ಅಡಗಿ ಕುಳಿತು ಕೊಳ್ಳುವುದು ವೈರಾಗ್ಯವಲ್ಲವೆಂದು ಇದರಲ್ಲಿ ತಿಳಿಸಲಾಗಿದೆ. ಬದಲಾಗಿ ಇದೇ ಲೋಕದಲ್ಲಿದ್ದುಕೊಂಡು ಅಲ್ಲಾಹನ ದಾಸ್ಯ-ಆರಾಧನೆಯ ಮಾರ್ಗದಲ್ಲಿ ನಡೆಯುವುದಾಗಿದೆ. ಇದು ಸಂಕಷ್ಟಗಳ ಮಾರ್ಗವಾಗಿದೆ. ಅಲ್ಲಾಹನ ಅನುಗ್ರಹದ ಮೇಲೆ ದೃಷ್ಟಿಯಿಲ್ಲದಿದ್ದರೆ ಈ ಸಂಕಷ್ಟಗಳನ್ನು ಎದುರಿಸಲು ಯಾರಿಂದಲೂ ಸಾಧ್ಯವಿಲ್ಲ.

ಇಹಲೋಕ ಅಥವಾ ಪರಲೋಕ

(385) قَالَ رَسُوْلُ اللهِ صَلَّى اللهُ عَلَيْهِ وَسَلَّمَ مَنْ اَحَبَّ دُنْيَاهُ اَضَرَّ بِاٰخِرَتِهٖ وَمَنْ اَحَبَّ اٰخِرَتَهٗ اَضَرَّ بِدُنْيَاهُ، فَاٰثِرُوْا مَا يَبْقٰى عَلٰى مَا يَفْنٰى (مشکوٰة — ابوموسیٰ اشعریؓ)

ಪ್ರವಾದಿ(ಸ) ಹೇಳಿದರು: ಯಾರು ಈ ಲೋಕವನ್ನು ಪ್ರೀತಿಸುವನೋ ಅವನು ಪರಲೋಕವನ್ನು ಹಾಳುಮಾಡುವನು. ಯಾರಿಗೆ ಪರಲೋಕವು ಪ್ರಿಯವೋ ಅವನು ತನ್ನ ಇಹಲೋಕವನ್ನು ಹಾಳು ಮಾಡುವನು. ಆದುದರಿಂದ ನೀವು ಶಾಶ್ವತವಾಗಿ ಉಳಿಯುವ ಜೀವನಕ್ಕೆ ನಾಶವಾಗಿ ಹೋಗುವ ಜೀವನಕ್ಕಿಂತ ಪ್ರಾಶಸ್ತ್ಯ ನೀಡಿರಿ.

[ಮಿಶ್ಕಾತ್- ವರದಿ: ಅಬೂ ಮೂಸಾ ಅಶ್‌ಅರಿ(ರ)]

ಟಿಪ್ಪಣಿ: ಇಹ-ಪರಲೋಕಗಳ ಪೈಕಿ ಒಂದರ ಆಯ್ಕೆ ಕಡ್ಡಾಯ. ಒಂದೋ ಇಹಲೋಕವನ್ನು ಇಲ್ಲವೇ ಪರಲೋಕವನ್ನು ನಿಮ್ಮ ಜೀವನದ ಉದ್ದೇಶವಾಗಿರಿಸಬೇಕು. ಇಹಲೋಕವೇ ನಿಮ್ಮ ಉದ್ದೇಶವೆಂದಾದರೆ ಪರಲೋಕದ ಸುಖ ಸೌಭಾಗ್ಯಗಳು ನಿಮಗೆ ದೊರಕಲಾರವು. ಪರಲೋಕವನ್ನು ನೀವು ಉದ್ದೇಶವಾಗಿಟ್ಟುಕೊಂಡರೆ ನಿಮ್ಮ ಇಹಲೋಕ ನಷ್ಟವಾಗಲೂಬಹುದು. ಆದರೆ ಅದಕ್ಕೆ ಪ್ರತಿಫಲವಾಗಿ ಪರಲೋಕದಲ್ಲಿ ಸಿಗುವ ಸುಖ ಸಂತೋಷಗಳು ಶಾಶ್ವತವಾಗಿರುವುವು. ಪರಲೋಕದ ಮಾರ್ಗದಲ್ಲಿ ನಡೆಯುವಾಗ ನಷ್ಟವಾಗುವ ವಸ್ತು ನಶ್ವರವಾಗಿದೆ. ನಶ್ವರ ವಸ್ತುವನ್ನು ಬಲಿಕೊಟ್ಟು ಶಾಶ್ವತ ವಸ್ತುವನ್ನು ಪಡೆದರೆ ಅದು ನಷ್ಟದ ವ್ಯಾಪಾರವಲ್ಲ, ಅದರಲ್ಲಿ ಲಾಭವೇ ಲಾಭವಿದೆ.

ಬುದ್ಧಿವಂತ ಮತ್ತು ಮೂರ್ಖ

(386) قَالَ رَسُوْلُ اللهِ صَلَّى اللهُ عَلَيْهِ وَسَلَّمَ اَلْكَيِّسُ مَنْ دَانَ نَفْسَهٗ وَعَمِلَ لِمَا بَعْدَ الْمَوْتِ، وَالْعَاجِزُ مَنْ اَتْبَعَ نَفْسَهٗ هَوَاهَا وَتَمَنّٰى عَلَى اللهِ (ترمذى - شداد بن اوسؓ)

ಪ್ರವಾದಿ(ಸ) ಹೇಳಿದರು- ತನ್ನ ಚಿತ್ತವನ್ನು ನಿಯಂತ್ರಣದಲ್ಲಿಟ್ಟುಕೊಂಡವನು (ಇಹಲೋಕದ ವ್ಯಾಮೋಹದ ಕಡೆಗೆ ಸೆಳೆಯಲ್ಪಡದವನು) ಮತ್ತು ಮರಣಾನಂತರದ ಜೀವನಕ್ಕಾಗಿ ಕರ್ಮವೆಸಗಿದವನು ಜಾಣ. ತನ್ನನ್ನು ತಾನು ಈ ಲೋಕದ ವ್ಯಾಮೋಹದ ದಾರಿಯಲ್ಲಿ ಮುನ್ನಡೆಸುತ್ತಾ ಅಲ್ಲಾಹನಿಂದ ಪೊಳ್ಳು ನಿರೀಕ್ಷೆಯನ್ನಿರಿಸಿದವನು ಮೂರ್ಖ.

[ತಿರ್ಮಿದಿ- ವರದಿ: ಶದ್ದಾತ್ ಬಿನ್ ಔಸ್(ರ)]

ಟಿಪ್ಪಣಿ: ಸತ್ಯವನ್ನು ಅನುಸರಿಸುವ ಬದಲು ಚಿತ್ತದ ಅಂಧವಾದ ಬಯಕೆಗಳನ್ನು ಅನುಸರಿಸುತ್ತಾ ಅಲ್ಲಾಹನು ತನ್ನನ್ನು ಖಂಡಿತ ಸ್ವರ್ಗಕ್ಕೆ ಕಳಿಸುವನು ಎಂದು ನಿರೀಕ್ಷಿಸುವುದು. ಪವಿತ್ರ ಕುರ್‌ಆನಿನ ಅವತರಣದ ಕಾಲದಲ್ಲಿ ಯಹೂದ್ಯರೂ ಕ್ರೈಸ್ತರೂ ಇಂತಹ ಶುಭ ನಿರೀಕ್ಷೆಯನ್ನೇ ಇಟ್ಟಿದ್ದರು. ಇಂದು ನಮ್ಮ ಅನೇಕ ಮುಸ್ಲಿಮ್ ಸಹೋದರರು ಇಂತಹದೇ ಪೊಳ್ಳು ನಿರೀಕ್ಷೆಗಳಲ್ಲಿ ಕಾಲಕಳೆಯುತ್ತಿದ್ದಾರೆ.

ಲಜ್ಜೆಯ ಸಮಗ್ರ ಕಲ್ಪನೆ

(387) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اِسْتَحْيُوْا مِنَ اللّٰهِ حَقَّ الْحَيَاءِ، قُلْنَا اِنَّا نَسْتَحْيِيْ مِنَ اللّٰهِ يَا رَسُوْلَ اللّٰهِ وَالْحَمْدُ لِلّٰهِ، قَالَ لَيْسَ ذٰلِكَ، وَلٰكِنَّ الْاِسْتِحْيَاءَ مِنَ اللّٰهِ حَقَّ الْحَيَاءِ اَنْ تَحْفَظَ الرَّأْسَ وَمَا وَعٰى، وَالْبَطْنَ وَمَا حَوٰى، وَتَذْكُرَ الْمَوْتَ وَالْبِلٰى، وَمَنْ اَرَادَ الْاٰخِرَةَ تَرَكَ زِيْنَةَ الدُّنْيَا وَاٰثَرَ الْاٰخِرَةَ عَلَى الْاُوْلٰى فَمَنْ فَعَلَ ذٰلِكَ فَقَدِ اسْتَحْيَا مِنَ اللّٰهِ حَقَّ الْحَيَاءِ (ترمذی)

ಪ್ರವಾದಿ(ಸ) ಹೇಳಿದರು: ಅಲ್ಲಾಹನ ಮುಂದೆ ಲಜ್ಜೆ ಪಾಲಿಸಿರಿ. ಆಗ ನಾವು ಹೇಳಿದೆವು- ಅಲ್ಲಾಹನ ಸಂದೇಶವಾಹಕರೇ(ಸ) ಅಲ್ಲಾಹನಿಗೆ ಸ್ತುತಿ, ನಾವು ಅವನ ಮುಂದೆ ಲಜ್ಜೆ ಪಾಲಿಸುತ್ತಿದ್ದೇವೆ. ಅದಕ್ಕೆ ಪ್ರವಾದಿ(ಸ) ಹೇಳಿದರು- ಅಲ್ಲಾಹನ ಮುಂದೆ ಲಜ್ಜೆ ಪಾಲಿಸಲು ಯಾವುದೇ ಪರಿಮಿತ ವ್ಯಾಖ್ಯಾನವಿಲ್ಲ. ಅಲ್ಲಾಹನ ಮುಂದೆ ಲಜ್ಜೆ ಪಾಲಿಸುವುದೆಂದರೆ ನೀವು ನಿಮ್ಮ ತಲೆ ಮತ್ತು ಅದರಲ್ಲಿ ಉದ್ಭವಿಸುವಂತಹ ವಿಚಾರಗಳ ಬಗ್ಗೆ ಜಾಗರೂಕರಾಗಬೇಕು- (ಅಂದರೆ ಕೆಟ್ಟ ವಿಚಾರಗಳಿಂದ ನಿಮ್ಮನ್ನು ರಕ್ಷಿಸಬೇಕು) ಹೊಟ್ಟೆಯೊಳಗೆ ಹೋಗುವ ಆಹಾರ ಪದಾರ್ಥಗಳನ್ನು ವೀಕ್ಷಿಸಬೇಕು(ಅದರಲ್ಲಿ ಹರಾಮ್ ವಸ್ತು ಹೋಗದಂತೆ ನೋಡಬೇಕು) ಮತ್ತು ಸತ್ತು ಮಣ್ಣಾಗಿ ಪುನಃ ಜೀವಂತಗೊಳಿಸಲ್ಪಟ್ಟು ಲೆಕ್ಕ ಸಮರ್ಪಿಸಲಿಕ್ಕಿದೆ ಎಂದು ಮರಣವನ್ನು ಸ್ಮರಿಸಬೇಕು.

ತರುವಾಯ ಪ್ರವಾದಿ(ಸ) ಹೀಗೆಂದರು- ಪರಲೋಕವನ್ನು ಬಯಸುವವನಿಗೆ ಈ ಲೋಕದ ಬೆಡಗು ಬಿನ್ನಾಣಗಳಲ್ಲಿ ಆಸಕ್ತಿಯಿರಲಾರದು. ಅವನು ಈ ಲೋಕಕ್ಕಿಂತ ಪರಲೋಕಕ್ಕೆ ಆದ್ಯತೆ ನೀಡುತ್ತಾನೆ. ಅಲ್ಲಾಹನ ಮುಂದೆ ಲಜ್ಜೆ ಪಾಲಿಸುವುದೆಂದರೆ ಇದುವೇ!

[ತಿರ್ಮಿದಿ]

ಗೋರಿಯು ಪರಲೋಕದ ಪ್ರಥಮ ಹಂತ

(388) عَنْ هَانِئٍ مَوْلَى عُثْمَانَ بْنِ عَفَّانَ قَالَ كَانَ عُثْمَانُ إِذَا وَقَفَ عَلَى قَبْرٍ يَبْكِي حَتَّى يَبُلَّ لِحْيَتَهُ، فَقِيلَ لَهُ تَذْكُرُ الْجَنَّةَ وَالنَّارَ فَلَا تَبْكِي وَتَذْكُرُ الْقَبْرَ فَتَبْكِي فَقَالَ إِنِّي سَمِعْتُ رَسُولَ اللهِ صَلَّى اللهُ عَلَيْهِ وَسَلَّمَ يَقُولُ الْقَبْرُ أَوَّلُ مَنْزِلٍ مِنْ مَنَازِلِ الْآخِرَةِ، فَإِنْ نَجَا مِنْهُ فَمَا بَعْدَهُ أَيْسَرُ، وَإِنْ لَمْ يَنْجُ مِنْهُ فَمَا بَعْدَهُ أَشَدُّ، قَالَ وَسَمِعْتُ رَسُولَ اللهِ صَلَّى اللهُ عَلَيْهِ وَسَلَّمَ يَقُولُ مَا رَأَيْتُ مَنْظَرًا قَطُّ إِلَّا وَالْقَبْرُ أَفْظَعُ مِنْهُ

قَالَ هَانِئٌ وَسَمِعْتُ عُثْمَانَ يُنْشِدُ عَلَى قَبْرٍ (ترمذی)

فَإِنْ تَنْجُ مِنْهَا تَنْجُ مِنْ ذِي عَظِيمَةٍ

وَإِلَّا فَإِنِّي لَا إِخَالُكَ نَاجِيًا

ಹ. ಉಸ್ಮಾನ್(ರ) ಸ್ವತಂತ್ರಗೊಳಿಸಿದ ಗುಲಾಮ ಹಾನೀ ಹೇಳುತ್ತಾರೆ- ಉಸ್ಮಾನ್(ರ) ಯಾವುದಾದರೂ ಗೋರಿಯ ಬಳಿ ನಿಂತರೆ ಅವರ ಗಡ್ಡವು ಕಣ್ಣೀರಿನಿಂದ ಒದ್ದೆಯಾಗುವಷ್ಟು ಅಳುತ್ತಿದ್ದರು. ಅವರೊಂದಿಗೆ, "ಸ್ವರ್ಗ-ನರಕಗಳ ನೆನಪಾದಾಗ ಅಳದ ತಾವು ಗೋರಿಯ ನೆನಪಾದಾಗ ಏಕೆ ಅಳುತ್ತೀರಿ" ಎಂದು ಕೇಳಿದಾಗ ಅವರು ಹೀಗೆಂದರು- ನಾನು ಪ್ರವಾದಿ(ಸ) ಹೀಗೆ ಹೇಳುವುದನ್ನು ಕೇಳಿದ್ದೇನೆ: ಗೋರಿಯು ಪರಲೋಕದ ಹಂತಗಳ ಪೈಕಿ ಪ್ರಥಮ ಹಂತವಾಗಿದೆ. ಮನುಷ್ಯನಿಗೆ ಇಲ್ಲಿ ಮುಕ್ತಿ ದೊರಕಿತೆಂದರೆ ಅದರ ನಂತರದ ಹಂತಗಳು ಬಹಳ ಸುಲಭವಾಗಿರುವುದು. ಇಲ್ಲಿ ಮುಕ್ತಿ ದೊರಕದಿದ್ದರೆ ಅನಂತರದ ಹಂತಗಳು ಅವನ ಮಟ್ಟಿಗೆ ಕಠಿಣತರವಾಗಿರುವುದು. ಅಲ್ಲದೆ ಪ್ರವಾದಿ(ಸ) ಹೀಗೂ ಹೇಳುವುದನ್ನು ನಾನು ಕೇಳಿದ್ದೇನೆ- ನಾನು ನೋಡಿದ ಭಯಾನಕ ದೃಶ್ಯಗಳ ಪೈಕಿ ಗೋರಿಯ ದೃಶ್ಯ ಅತ್ಯಂತ ಘೋರವಾದುದು.

ಹಾನೀ ಹೇಳುತ್ತಾರೆ- ಹ. ಉಸ್ಮಾನ್(ರ) ಒಂದು ಗೋರಿಯ ಬಳಿ ನಿಂತುಕೊಂಡು ಈ ಕವಿತೆ ಹಾಡುವುದನ್ನು ನಾನು ಕಂಡೆ- ಕವಿತೆಯ ಅರ್ಥ ಹೀಗಿದೆ: ಉಸ್ಮಾನ್! ನೀನು ಗೋರಿಯ ಸಂಕಷ್ಟದಿಂದ ಪಾರಾದೆಯೆಂದಾದರೆ ಒಂದು ದೊಡ್ಡ ಗಂಡಾಂತರದಿಂದ

ಪಾರಾದಂತೆ. ಇಲ್ಲಿ ನಿನಗೆ ಮುಕ್ತಿ ದೊರೆಯದಿದ್ದರೆ ನಿನಗೆ ಮೋಕ್ಷ ಸಿಗಲಾರದೆಂದು ನನ್ನ ಭಾವನೆ. *[ತಿರ್ಮಿದಿ]*

ಟಿಪ್ಪಣಿ: ಗೋರಿಯೆಂದರೆ ಬರ್ಝಖ್‌ನ ಜೀವನವಾಗಿದೆ. ಅರ್ಥಾತ್ ಮಾನವನ ಮರಣ ಮತ್ತು ಪರಲೋಕದ ಮಧ್ಯೆಯಿರುವ ಕಾಲಾವಧಿ. ಮರಣವು ಎಲ್ಲೇ ಬರಲಿ, ಯಾವ ಅವಸ್ಥೆಯಲ್ಲೇ ಬರಲಿ, ಮರಣ ಹೊಂದಿದವನೊಂದಿಗೆ ಮೂರು ಪ್ರಶ್ನೆಗಳನ್ನು ಕೇಳಲಾಗುವುದು-

1) ನಿನ್ನ ಪ್ರಭು ಯಾರು? ಭೂಲೋಕದಲ್ಲಿ ನೀನು ಯಾರನ್ನು ಪ್ರಭುವಾಗಿ ಅಂಗೀಕರಿಸಿದೆ?
2) ನಿನ್ನ ಪ್ರವಾದಿ ಯಾರು? ನೀನು ಅವರನ್ನು ಬಲ್ಲೆಯಾ?
3) ನಿನ್ನ ಧರ್ಮ ಯಾವುದು? ನೀನು ಯಾವ ಜೀವನ ವಿಧಾನದಂತೆ ಜೀವನ ಸಾಗಿಸಿದೆ?-

ಈ ಮೂರು ಪ್ರಶ್ನೆಗಳಿಗೆ ಸರಿಯಾದ ಉತ್ತರ ನೀಡಿದವನು ವಿಜಯಿಯಾದನು. ಅದರಲ್ಲಿ ವಿಫಲನಾದವನು ಪರಾಜಯಗೊಂಡನು. ಅಲ್ಲಾಹನನ್ನು ಮಾತಿನಲ್ಲೂ ಕೃತಿಯಲ್ಲೂ ಪ್ರಭುವೆಂದು ಒಪ್ಪಿಕೊಂಡವನು, ತನ್ನ ಪ್ರವಾದಿಯನ್ನು ನಂಬಿ ಅವರನ್ನು ಅನುಸರಿಸಿದವನು ಮತ್ತು ದೇವದತ್ತ ಜೀವನ ಕ್ರಮವನ್ನು ತನ್ನದಾಗಿಸಿದವನು ಮಾತ್ರ ಈ ಸಂಕ್ಷಿಪ್ತ ಪ್ರಶ್ನೆಗಳಿಗೆ ಉತ್ತರ ನೀಡಬಲ್ಲನು. ಇದೊಂದು ಅತ್ಯಂತ ಕಷ್ಟದಾಯಕ ಘಟ್ಟವಾಗಿದ್ದು ಅದರಲ್ಲಿ ಪ್ರತಿಯೊಬ್ಬನೂ ಹಾದು ಹೋಗಬೇಕಾಗಿದೆ. ಅದಕ್ಕಾಗಿ ಸಿದ್ಧತೆ ನಡೆಸಬೇಕಾಗಿದೆ. ಅನ್ಯಥಾ. ಮನುಷ್ಯನು ಪ್ರತಿಯೊಂದು ಪ್ರಶ್ನೆಗೂ 'ಅಯ್ಯೋ ನನಗೆ ತಿಳಿದಿಲ್ಲ' ಎಂದೇ ಹೇಳುವನು. ಈ ಸಂಕ್ಷಿಪ್ತ ಪ್ರಶ್ನೆಗಳಿಗೆ ಉತ್ತರಿಸಲಾಗದವನು ಸುದೀರ್ಘ ಪ್ರಶ್ನೆಗಳಿಗೆ ಹೇಗೆ ತಾನೆ ಉತ್ತರಿಸಿಯಾನು!

ಒಂದು ಹದೀಸ್‌ನ ಕೊನೆಯ ವಾಕ್ಯ ಹೀಗಿದೆ- ಗೋರಿಯು ಮನುಷ್ಯನಿಗೆ ಒಂದೋ ಸ್ವರ್ಗದ ಉದ್ಯಾನಗಳ ಪೈಕಿ ಒಂದು ಉದ್ಯಾನವಾಗಿರುವುದು ಅಥವಾ ನರಕದ ಅಗ್ನಿ ಕುಂಡಗಳ ಪೈಕಿ ಒಂದು ಕುಂಡವಾಗಿರುವುದು. ಅರ್ಥಾತ್ ಗೋರಿಯ ಪ್ರಶ್ನೆಗಳು ಮತ್ತು ಅವುಗಳ ಉತ್ತರಗಳು ಮಾನವನ ಕಟ್ಟಕಡೆಯ ನೆಲೆ-ಸ್ವರ್ಗವೋ ನರಕವೋ- ಎಂಬುದನ್ನು ನಿರ್ಣಯಿಸುತ್ತದೆ.

ಕಿಯಾಮತ್ ಹಠಾತ್ತನೆ ಬಂದು ಬಿಡುವುದು

(389) قَالَ رَسُوْلُ اللهِ صَلَّى اللهُ عَلَيْهِ وَسَلَّمَ لَتَقُوْمُ السَّاعَةُ وَثَوْبُهُمَا بَيْنَهُمَا لَا يَبَايِعَانِهِ
وَلَا يَطْوِيَانِهِ، وَلَتَقُوْمُ السَّاعَةُ وَقَدِ انْصَرَفَ بِلَبَنِ لِقْحَتِهِ لَا يَطْعَمُهُ، وَلَتَقُوْمُ
السَّاعَةُ يَلُوْطُ حَوْضَهُ لَا يَسْقِيْهِ، وَلَتَقُوْمُ السَّاعَةُ وَقَدْ رَفَعَ لُقْمَتَهُ إِلَى فِيْهِ
لَا يَطْعَمُهَا (مسند احمد — ابوہریرہؓ)

ಪ್ರವಾದಿ(ಸ) ಹೇಳಿದರು- ಇಬ್ಬರು ಬಟ್ಟೆಯ ಕ್ರಯ ವಿಕ್ರಯ ಮಾಡುತ್ತಿರುವರು. ಬಟ್ಟೆ ಅವರ ನಡುವೆಯಿರುವುದು. ಅಷ್ಟರಲ್ಲಿ ಕಿಯಾಮತ್ (ಪ್ರಳಯ) ಬಂದು ಬಿಡುವುದು.

ಅವರಿಬ್ಬರೂ ಬಟ್ಟೆಯ ವ್ಯಾಪಾರ ಮಾಡಲಾಗದ ಸ್ಥಿತಿಯಲ್ಲಿರುವರು. ಎಷ್ಟೆಂದರೆ ಬಟ್ಟೆಯನ್ನು ಮಡಚಿಡಲೂ ಅವರಿಂದ ಸಾಧ್ಯವಾಗದು. ಒಬ್ಬ ವ್ಯಕ್ತಿಯು ಒಂಟೆಯ ಹಾಲು ಕರೆದು ಮನೆಯೊಳಗೆ ಕೊಂಡು ಹೋಗುವನು. ಅಷ್ಟರಲ್ಲಿ ಕಿಯಾಮತ್ ಬರುವುದು. ಅವನಿಗೆ ಅದನ್ನು ಕುಡಿಯುವ ಅವಕಾಶ ಕೂಡಾ ಸಿಗಲಾರದು. ಇನ್ನೊಬ್ಬನು ನೀರಿನ ಕೊಳ ತೋಡುತ್ತಿರುವನು. ಅಷ್ಟರಲ್ಲಿ ಕಿಯಾಮತ್ ಬಂದು ಬಿಡುವುದು. ಅವನು ತನ್ನ ಜಾನುವಾರುಗಳಿಗೆ ನೀರು ಕುಡಿಸಲಾರನು. ಮನುಷ್ಯನು ಆಹಾರದ ತುತ್ತನ್ನು ಬಾಯಿಗೆ ಹಾಕಲು ಹೋಗುವನು. ಅಷ್ಟರಲ್ಲಿ ಕಿಯಾಮತ್ ಬಂದು ಬಿಡುವುದು, ಅವನು ಅದನ್ನು ತಿನ್ನಲಾರನು.

[ಮುಸ್ನದ್ ಅಹ್ಮದ್. ವರದಿ: ಅಬೂ ಹುರೈರಾ(ರ)]

ಹಶ್ರ್‌ನ ಮೈದಾನದಲ್ಲಿ ವಿಚಾರಣೆ

(390) عَنْ أَنَسِ بْنِ مَالِكٍ قَالَ بَيْنَا رَسُولُ اللهِ صَلَّى اللهُ عَلَيْهِ وَسَلَّمَ جَالِسٌ إِذْ رَأَيْنَاهُ ضَحِكَ حَتَّى بَدَتْ ثَنَايَاهُ، فَقَالَ لَهُ عُمَرُ مَا أَضْحَكَكَ يَا رَسُولَ اللهِ بِأَبِي أَنْتَ وَأُمِّي؟ قَالَ رَجُلَانِ مِنْ أُمَّتِي جَثَيَا بَيْنَ يَدَيْ رَبِّ الْعِزَّةِ، فَقَالَ أَحَدُهُمَا يَا رَبِّ خُذْ لِي مَظْلِمَتِي مِنْ أَخِي فَقَالَ اللهُ كَيْفَ تَصْنَعُ بِأَخِيكَ وَلَمْ يَبْقَ مِنْ حَسَنَاتِهِ شَيْءٌ؟ قَالَ يَا رَبِّ فَلْيَحْمِلْ مِنْ أَوْزَارِي، وَفَاضَتْ عَيْنَا رَسُولِ اللهِ صَلَّى اللهُ عَلَيْهِ وَسَلَّمَ بِالْبُكَاءِ ثُمَّ قَالَ إِنَّ ذَلِكَ لَيَوْمٌ عَظِيمٌ يَحْتَاجُ النَّاسُ أَنْ يُحْمَلَ عَنْهُمْ مِنْ أَوْزَارِهِمْ (المنذري وحاكم)

ಅನಸ್ ಬಿನ್ ಮಾಲಿಕ್(ಸ) ಹೇಳುತ್ತಾರೆ- ಪ್ರವಾದಿ(ಸ) ಮಸ್ಜಿದುನ್ನಬವಿಯಲ್ಲಿ ಕುಳಿತಿದ್ದರು. ಅವರು ಒಮ್ಮೆಲೆ ತಮ್ಮ ಹಲ್ಲುಗಳು ಗೋಚರಿಸುವವರೆಗೂ ನಕ್ಕರು. ಹ. ಉಮರ್(ರ) ಪ್ರವಾದಿಯವರಲ್ಲಿ(ಸ) ಅದರ ಕಾರಣ ಕೇಳಿದರು. ಆಗ ಪ್ರವಾದಿ(ಸ) ಹೀಗೆಂದರು- ನನ್ನ ಸಮುದಾಯದ ಇಬ್ಬರು ವ್ಯಕ್ತಿಗಳು ಪ್ರತಾಪಶಾಲಿಯಾದ ಅಲ್ಲಾಹನ ಬಳಿಗೆ ಹೋದರು. ಅವರಲ್ಲೊಬ್ಬನು ಹೇಳಿದನು- ನನ್ನ ಪ್ರಭೂ! ಈ ವ್ಯಕ್ತಿಯಿಂದ ನನ್ನ ಹಕ್ಕು ಕೊಡಿಸಿರಿ. (ಸಹೋದರನಾಗಿಯೂ ಇವನು ನನ್ನ ಹಕ್ಕನ್ನು ಕಸಿದಿದ್ದನು) ಆಗ ಅಲ್ಲಾಹನು ಅವನೊಂದಿಗೆ- ಈ ವ್ಯಕ್ತಿಯ ಕರ್ಮಪತ್ರದಲ್ಲಿ ಒಂದಾದರೂ ಪುಣ್ಯವಿಲ್ಲ. ಹಾಗಿರುವಾಗ ನೀನು ನಿನ್ನ ಹಕ್ಕನ್ನು ಹೇಗೆ ಪಡೆಯುವೆ ಎಂದು ಕೇಳುವನು. ಆ ವ್ಯಕ್ತಿ

ಹೇಳುವನು- "ನನ್ನ ಪ್ರಭೂ! ಅವನ ಬಳಿ ಪುಣ್ಯಗಳಿಲ್ಲದಿದ್ದರೆ ನನ್ನ ಪಾಪಗಳನ್ನು ಅವನ ಲೆಕ್ಕಕ್ಕೆ ಹಾಕಿ ಬಿಡು. ಇದರಿಂದ ನನ್ನ ಶೋಷಣೆಯ ಸ್ವಲ್ಪವಾದರೂ ಪ್ರತಿಫಲ ದೊರಕಿ ದಂತಾಗುವುದು." ಇಷ್ಟು ಹೇಳಿ ಪ್ರವಾದಿ(ಸ) ಅಳತೊಡಗಿದರು. ತರುವಾಯ ಹೀಗೆಂದರು- ನಿಸ್ಸಂದೇಹವಾಗಿಯೂ ಅದೊಂದು ಭಯಾನಕ ದಿನವಾಗಿರುವುದು. ಅಂದು ತಮ್ಮ ಮೇಲಿಂದ ಪಾಪಗಳ ಭಾರ ಸರಿದು ಹೋಗಲಿ ಎಂದು ಆ ಜನರು ಆಗ್ರಹಿಸುವರು.

[ಅಲ್ ಮುಂದಿರೀ- ಹಾಕಿಮ್]

ಟಿಪ್ಪಣಿ: ಈ ಹದೀಸ್‌ನಲ್ಲಿ ವಿವರಿಸಲಾಗಿರುವ ಘಟನೆಯು ಅಲ್ಲಾಹನ ದಾಸರ ಹಕ್ಕುಗಳ ಕುರಿತಾಗಿದೆ. ಅದರ ಮಹತ್ವದ ಕುರಿತು ಅನೇಕ ಹದೀಸ್‌ಗಳು ಈ ಹಿಂದೆ ಬಂದಿವೆ.

ನಿಷ್ಠುರ ನ್ಯಾಯ

(391) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ مَنْ ضَرَبَ مَمْلُوْكَهُ سَوْطًا ظُلْمًا اُقْتُصَّ مِنْهُ يَوْمَ الْقِيَامَةِ (معجم طبرانی – ابو ہریرہ رض)

ಪ್ರವಾದಿ(ಸ) ಹೇಳಿದರು- ಭೂಲೋಕದಲ್ಲಿ ತನ್ನ ಮನೆಯ (ಖಾಯಂ) ಸೇವಕನಿಗೆ ಅನ್ಯಾಯವಾಗಿ ಒಂದು ಕೊರಡೆಯೇಟು ಬಾರಿಸಿದ್ದರೂ ನಿರ್ಣಾಯಕ ದಿನದಂದು ಮಾಲಿಕನಿಂದ ಪ್ರತೀಕಾರ ಪಡೆಯಲಾಗುವುದು.

[ಮುಅ್‌ಜಮ್ ತಬ್ರಾನೀ- ವರದಿ: ಅಬೂ ಹುರೈರಾ(ರ)]

---

(392) عَنْ اَبِيْ هُرَيْرَةَ اَنَّ رَسُوْلَ اللّٰهِ صَلَّى اللّٰهُ عَلَيْهِ وَسَلَّمَ قَالَ لَتُؤَدُّنَّ الْحُقُوْقَ اِلٰى اَهْلِهَا يَوْمَ الْقِيَامَةِ حَتّٰى يُقَادَ لِلشَّاةِ الْجَلْحَاءِ مِنَ الشَّاةِ الْقَرْنَاءِ (مسلم وترمذی)

ಅಬೂ ಹುರೈರಾ(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು- ಭೂಲೋಕದಲ್ಲಿ ಯಾರ ಹಕ್ಕುಗಳು ಕಸಿಯಲ್ಪಟ್ಟಿರುವುದೋ ನಿರ್ಣಾಯಕ ದಿನದಂದು ಅವರ ಹಕ್ಕುಗಳನ್ನು ಕೊಡಿಸ ಲಾಗುವುದು. ಒಂದು ಕೋಡಿಲ್ಲದ ಆಡಿನ ಪ್ರತೀಕಾರವನ್ನು ಕೂಡಾ ಕೋಡಿರುವ ಆಡಿನಿಂದ ಪಡೆಯಲಾಗುವುದು.

[ಮುಸ್ಲಿಮ್- ತಿರ್ಮಿದಿ]

ಟಿಪ್ಪಣಿ: ಅಂದರೆ ಆ ದಿನ ಸಂಪೂರ್ಣ ನ್ಯಾಯ ಪಾಲಿಸಲಾಗುವುದು. ಭೂಲೋಕದಲ್ಲಿ ಒಂದು ಸಾಮಾನ್ಯ ಹಕ್ಕನ್ನಾದರೂ ಯಾರಾದರೂ ಕಬಳಿಸಿದ್ದರೆ ಅಕ್ರಮಿಯಿಂದ ಅದನ್ನು ಉಗುಳಿಸಲಾಗುವುದು. ಆಡಿನ ಪ್ರಸ್ತಾಪವನ್ನು ಉಪಮೆಯಾಗಿ ಮಾಡಲಾಗಿದೆ.

ಜೀವನದ ಸಂಪೂರ್ಣ ವಿಚಾರಣೆ

(393) قَالَ رَسُوْلُ اللهِ صَلَّى اللهُ عَلَيْهِ وَسَلَّمَ لَا تَزُوْلُ قَدَمَا عَبْدٍ حَتّٰى يُسْأَلَ عَنْ خَمْسٍ
عَنْ عُمُرِهٖ فِيْمَا اَفْنَاهُ، وَعَنْ عِلْمِهٖ فِيْمَا فَعَلَ، وَعَنْ مَالِهٖ مِنْ اَيْنَ اكْتَسَبَهٗ، وَفِيْ مَا
اَنْفَقَهٗ، وَعَنْ جِسْمِهٖ فِيْمَا اَبْلَاهُ (ترمذی — ابوہریرہ اسلمیؓ)

ಪ್ರವಾದಿ(ಸ) ಹೇಳಿದ್ದಾರೆ- ನಿರ್ಣಾಯಕ ದಿನದಂದು ಮನುಷ್ಯನು ಐದು ಪ್ರಶ್ನೆಗಳಿಗೆ ಉತ್ತರಿಸದೆ ಅಲ್ಲಾಹನ ನ್ಯಾಯಾಲಯದಿಂದ ಮುಂದೆ ಸರಿಯಲಾರನು. ಅವನೊಂದಿಗೆ ಹೀಗೆ ಕೇಳಲಾಗುವುದು..... 1. ನಿನ್ನ ಆಯುಷ್ಯವನ್ನು ಹೇಗೆ ಕಳೆದಿರುವಿ. 2. ಧರ್ಮದ ಜ್ಞಾನ ಗಳಿಸಿದ್ದರೆ ಅದನ್ನು ಎಲ್ಲಿಯವರೆಗೆ ಕಾರ್ಯರೂಪಕ್ಕೆ ತಂದಿರುವಿ. 3. ಸಂಪತ್ತನ್ನು ಯಾವ ಮೂಲಗಳಿಂದ ಗಳಿಸಿರುವಿ. 4. ಗಳಿಸಿರುವ ಸಂಪತ್ತನ್ನು ಯಾವ ರೀತಿ ಖರ್ಚು ಮಾಡಿರುವಿ. 5. ನಿನ್ನ ಶರೀರವನ್ನು ಯಾವ ಕಾರ್ಯಗಳಲ್ಲಿ ಸವೆಸಿರುವಿ.

[ತಿರ್ಮಿದಿ: ವರದಿ- ಅಬೂ ಹುರೈರಾ ಅಸ್ಲಮಿ]

ಶಿಫಾರಸಿಗೆ ಯಾರು ಅರ್ಹರು?

(394) رَوٰى اَبُوْهُرَيْرَةَ حَدِيْثًا فِي الشَّفَاعَةِ عَنِ النَّبِيِّ صَلَّى اللهُ عَلَيْهِ وَسَلَّمَ قَالَ فِيْهِ
وَشَفَاعَتِيْ لِمَنْ شَهِدَ اَنْ لَّا اِلٰهَ اِلَّا اللهُ وَاَنَّ مُحَمَّدًا رَّسُوْلُ اللهِ يُصَدِّقُ لِسَانُهٗ
قَلْبَهٗ وَقَلْبُهٗ لِسَانَهٗ (مسند احمد)

ಅಬೂ ಹುರೈರಾ(ರ) ಶಫಾಅತ್‌ನ ಹದೀಸಿನಲ್ಲಿ ಹೀಗೆ ವರದಿ ಮಾಡುತ್ತಾರೆ: ಪ್ರವಾದಿ(ಸ) ಹೇಳಿದರು- ಅಲ್ಲಾಹನ ಹೊರತು ಆರಾಧ್ಯರಾರೂ ಇಲ್ಲ ಮತ್ತು ಮುಹಮ್ಮದ್(ಸ) ಅಲ್ಲಾಹನ ಸಂದೇಶವಾಹಕರಾಗಿದ್ದಾರೆ ಎಂದು ಸಾಕ್ಷ್ಯ ನುಡಿದಿರುವ ಹಾಗೂ ತಮ್ಮ

ನಾಲಗೆಯು ಹೃದಯವನ್ನೂ ಹೃದಯವು ನಾಲಗೆಯನ್ನೂ ದೃಢೀಕರಿಸಿರುವ ರೀತಿಯಲ್ಲಿ ಸಾಕ್ಷ್ಯ ನುಡಿದಿರುವ ಜನರ ಪರವಾಗಿ ನನ್ನ ಶಿಫಾರಸು (ಪ್ರಾರ್ಥನೆ ಮತ್ತು ನಿವೇದನೆ) ಇರುವುದು.

[ಮುಸ್ನದ್ ಅಹ್ಮದ್]

ಟಿಪ್ಪಣಿ: ಪ್ರಾಮಾಣಿಕವಾಗಿ ತೌಹೀದ್ ಮತ್ತು ರಿಸಾಲತ್ (ಏಕದೇವತ್ವ ಮತ್ತು ಪ್ರವಾದಿತ್ವ) ಅಂಗೀಕರಿಸಿ ಅದನ್ನು ಘೋಷಿಸಿದವರು. ಕಾಪಟ್ಯವಿಲ್ಲದ ಹಾಗೂ ಮಾತು-ಕೃತಿಗಳಲ್ಲಿ ವಿರೋಧಾಭಾಸ ವಿಲ್ಲದವರು.

---

(395) قَالَ النَّبِيُّ صَلَّى اللهُ عَلَيْهِ وَسَلَّمَ أَسْعَدُ النَّاسِ بِشَفَاعَتِي يَوْمَ الْقِيَامَةِ مَنْ قَالَ لَا إِلٰهَ إِلَّا اللهُ خَالِصًا مِنْ قَلْبِهِ أَوْ نَفْسِهِ وَفِي رِوَايَةٍ مُسْتَيْقِنًا بِهَا قَلْبُهُ (رواه البخاري)

ಪ್ರವಾದಿ(ಸ) ಹೇಳಿದರು- ನಿರ್ಣಾಯಕ ದಿನದಂದು ನನ್ನ ಶಿಫಾರಸು, 'ಲಾ ಇಲಾಹ ಇಲ್ಲಲ್ಲಾಹ್' (ಅಲ್ಲಾಹನ ಹೊರತು ಆರಾಧ್ಯರಾರೂ ಇಲ್ಲ) ಎಂದು ಮನಸಾರೆ ಹೇಳಿದವನಿಗಿರುವುದು. ಇನ್ನೊಂದು ಹದೀಸ್‌ನಲ್ಲಿ - ಹೃದಯದಲ್ಲಿ 'ಅಲ್ಲಾಹನ ಹೊರತು ಆರಾಧ್ಯರಾರೂ ಇಲ್ಲ'ವೆಂಬ ದೃಢವಾದ ನಂಬಿಕೆ ಇರುವವನು ಎಂದಿದೆ.

[ಬುಖಾರಿ- ವರದಿ: ಅಬೂ ಹುರೈರಾ(ರ)]

ಟಿಪ್ಪಣಿ: ಪ್ರವಾದಿಯವರ(ಸ) ಈ ನುಡಿಯು ಅತ್ಯಂತ ಸಂಕ್ಷಿಪ್ತವಾಗಿದ್ದರೂ ಅರ್ಥದ ದೃಷ್ಟಿಯಿಂದ ಸಮಗ್ರವಾಗಿದೆ. ತಾತ್ಪರ್ಯವೇನೆಂದರೆ ಏಕದೇವತ್ವ, ಪ್ರವಾದಿತ್ವ, ಪರಲೋಕ ಹಾಗೂ ಅವುಗಳ ಬೇಡಿಕೆಗಳನ್ನು ನಂಬದವರಿಗೆ, ನಂಬಿದರೂ ಕೇವಲ ಬಾಯಿಮಾತಿನಲ್ಲಿ ನಂಬಿದವರಿಗೆ ಪ್ರವಾದಿಯವರ(ಸ) ಶಿಫಾರಸು ಸಿಗಲಾರದು. ಪ್ರವಾದಿಯವರು(ಸ) ಇಸ್ಲಾಮಿನ ಸತ್ಯತೆಯ ಮೇಲೆ ದೃಢವಿಶ್ವಾಸ ವಿರಿಸಿ ಅದರ ಬೇಡಿಕೆಗಳನ್ನು ಪೂರೈಸುವವರಿಗೆ, ದೇವಸಂಪ್ರೀತಿಯನ್ನು ಗಳಿಸಲು ಗರಿಷ್ಠ ಪ್ರಯತ್ನಿಸಿ ಸ್ವರ್ಗದಲ್ಲಿ ಪ್ರವೇಶ ಪಡೆಯ ಬಯಸುವವರಿಗೆ ಶಿಫಾರಸು ಮಾಡುವರು. ಆದರೂ ಕುಂದು ಕೊರತೆಗಳು ಉಳಿದಿದ್ದವರ ಪರವಾಗಿ ಅವುಗಳನ್ನು ತೊಳೆದು ಸ್ವರ್ಗದಲ್ಲಿ ಸ್ಥಳ ನೀಡಲಿಕ್ಕಾಗಿ ಪ್ರವಾದಿ(ಸ) ಪ್ರಾರ್ಥಿಸುವರು.

---

(396) قَالَ رَسُولُ اللّٰهِ صَلَّى اللّٰهُ عَلَيْهِ وَسَلَّمَ يَا مَعْشَرَ قُرَيْشٍ اِشْتَرُوْا اَنْفُسَكُمْ لَا
اُغْنِيْ عَنْكُمْ مِنَ اللّٰهِ شَيْئًا وَيَا بَنِيْ عَبْدِ مَنَافٍ لَا اُغْنِيْ عَنْكُمْ مِنَ اللّٰهِ شَيْئًا ، يَا عَبَّاسَ ابْنَ
عَبْدِ الْمُطَّلِبِ لَا اُغْنِيْ عَنْكَ مِنَ اللّٰهِ شَيْئًا ، وَيَا صَفِيَّةُ عَمَّةَ رَسُوْلِ اللّٰهِ لَا اُغْنِيْ
عَنْكِ مِنَ اللّٰهِ شَيْئًا ، .... وَيَا فَاطِمَةُ بِنْتَ مُحَمَّدٍ سَلِيْنِيْ مَا شِئْتِ مِنْ مَالِيْ لَا اُغْنِيْ
عَنْكِ مِنَ اللّٰهِ شَيْئًا ، (بخاری ومسلم ۔ ابوہریرہ رض)

ಪ್ರವಾದಿ(ಸ) ಹೇಳಿದರು- ಕುರೈಶರೇ! ನಿಮ್ಮನ್ನು ನೀವು ನರಕಾಗ್ನಿಯಿಂದ ಪಾರುಗೊಳಿಸುವ ಬಗ್ಗೆ ಚಿಂತಿಸಿರಿ. ನಾನು ನಿಮ್ಮನ್ನು ಅಲ್ಲಾಹನ ಹಿಡಿತದಿಂಧ ರಕ್ಷಿಸಲಾರೆ. ಓ ಅಬ್ದುಮನಾಫ್‌ರ ಕುಟುಂಬದವರೇ! ನಾನು ನಿಮ್ಮ ಮೇಲೆ ಅಲ್ಲಾಹನ ಯಾತನೆ ಎರಗುವುದನ್ನು ತಪ್ಪಿಸಲಾರೆ. ಓ ಅಬ್ಬಾಸ್ ಬಿನ್ ಅಬ್ದುಲ್ ಮುತ್ತಲಿಬ್(ತಮ್ಮ ಚಿಕ್ಕಪ್ಪ)ನವರೇ! ನಾನು ಅಲ್ಲಾಹನ ಬಳಿ ನಿಮ್ಮ ಪರವಾಗಿ ಏನೂ ಮಾಡಲಾರೆ. ಓ ಸಫಿಯ್ಯಾ!(ತಮ್ಮ ಅತ್ತೆ) ನಾನು ನಿಮ್ಮ ಮೇಲಿನಿಂದ ಅಲ್ಲಾಹನ ಯಾತನೆಯನ್ನು ಸ್ವಲ್ಪವೂ ಸರಿಸಲಾರೆ. ಓ ನನ್ನ ಪುತ್ರಿ ಫಾತಿಮಾ! ನಾನು ನಿನಗೆ ನನ್ನ ಸಂಪತ್ತಿನಿಂದ ಎಷ್ಟು ಬೇಕಾದರೂ ನೀಡಬಲ್ಲೆ. ಆದರೆ ಅಲ್ಲಾಹನ ಯಾತನೆಯನ್ನು ತಡೆಯಲಾರೆ. ಆದುದರಿಂದ ನೀನು ನಿನ್ನನ್ನು ರಕ್ಷಿಸುವ ಬಗ್ಗೆ ಚಿಂತಿಸು. (ಅಲ್ಲಿ ಈಮಾನ್ ಮತ್ತು ಸತ್ಕರ್ಮಗಳು ಮಾತ್ರ ಪ್ರಯೋಜನಕ್ಕೆ ಬರುವುವು.)

[ಬುಖಾರಿ, ಮುಸ್ಲಿಮ್- ವರದಿ: ಅಬೂ ಹುರೈರಾ(ರ)]

ಅಂಗಾಂಗಗಳ ಸಾಕ್ಷ್ಯ

(397) عَنْ أَنَسٍ قَالَ كُنَّا عِنْدَ رَسُوْلِ اللّٰهِ صَلَّى اللّٰهُ عَلَيْهِ وَسَلَّمَ فَضَحِكَ، فَقَالَ هَلْ
تَدْرُوْنَ مِمَّ أَضْحَكُ؟ قُلْنَا اللّٰهُ وَرَسُوْلُهُ أَعْلَمُ، قَالَ مِنْ مُخَاطَبَةِ الْعَبْدِ رَبَّهُ
فَيَقُوْلُ يَا رَبِّ أَلَمْ تُجِرْنِيْ مِنَ الظُّلْمِ؟ يَقُوْلُ بَلٰى، فَيَقُوْلُ إِنِّيْ لَا أُجِيْزُ الْيَوْمَ عَلٰى
نَفْسِيْ شَاهِدًا إِلَّا مِنِّيْ، فَيَقُوْلُ كَفٰى بِنَفْسِكَ الْيَوْمَ حَسِيْبًا وَالْكِرَامِ الْكَاتِبِيْنَ شُهُوْدًا
قَالَ فَيُخْتَمُ عَلٰى فِيْهِ وَيَقُوْلُ لِأَرْكَانِهِ انْطِقِيْ، فَتَنْطِقُ بِأَعْمَالِهِ ثُمَّ يُخَلّٰى بَيْنَهُ
وَبَيْنَ الْكَلَامِ، فَيَقُوْلُ بُعْدًا لَكُنَّ وَسُحْقًا فَعَنْكُنَّ كُنْتُ أُنَاضِلُ (صحيح مسلم)

ಅನಸ್ ಬಿನ್ ಮಾಲಿಕ್(ರ) ಹೇಳುತ್ತಾರೆ- ನಾವು ಪ್ರವಾದಿಯವರ(ಸ) ಬಳಿ ಕುಳಿತಿದ್ದೆವು. ಅವರು ಒಮ್ಮೆಲೆ ನಕ್ಕರು. ತರುವಾಯ, ನಾನೇಕೆ ನಕ್ಕೆನೆಂದು ನೀವು ಬಲ್ಲಿರಾ ಎಂದು ಕೇಳಿದರು. ನಾವು ಹೇಳಿದೆವು- ಅಲ್ಲಾಹ್ ಮತ್ತು ಪ್ರವಾದಿವರ್ಯರೇ ಹೆಚ್ಚು ಬಲ್ಲರು. ಪ್ರವಾದಿ(ಸ) ಹೇಳಿದರು- ನನಗೆ ನಗು ಬಂದದ್ದೇಕೆಂದರೆ ನಿರ್ಣಾಯಕ ದಿನದಂದು ಒಬ್ಬ ಅಪರಾಧಿಯು ಅಲ್ಲಾಹನೊಂದಿಗೆ, ಓ ಪ್ರಭೂ! ಇಂದು ನನ್ನ ಮೇಲೆ ಅಕ್ರಮವಾಗ ಲಾರದಷ್ಟೆ ಎಂದು ಕೇಳುವನು. ಅಲ್ಲಾಹನು ಹೇಳುವನು- ಇಂದು ನಿನ್ನ ಮೇಲೆ ಅಕ್ರಮ ವಾಗದು. ಆಗ ಅವನು ಹೇಳುವನು- ಇಂದು ನನ್ನ ಪರವಾಗಿ ಬೇರೆ ಯಾರನ್ನೂ ಸಾಕ್ಷಿಗಳಾಗಿ ನಾನು ಒಪ್ಪಲಾರೆ. ನನ್ನ ಅಂಗಾಂಗಗಳಿಂದಲೇ ಸಾಕ್ಷಿ ಪಡೆಯಬೇಕು. ಅಲ್ಲಾಹನು ಹೇಳುವನು- ಇಂದು ನಿನ್ನ ವಿಚಾರಣೆ ನಡೆಸಲು ನೀನೇ ಸಾಕು. ನಿನ್ನ ಕರ್ಮಪತ್ರಗಳನ್ನು ಬರೆಯುವ ದೂತರ ಸಾಕ್ಷ್ಯವೇ ಸಾಕು. [ಪ್ರವಾದಿ(ಸ) ಹೇಳುತ್ತಾರೆ] ಅನಂತರ ಅವನ ನಾಲಗೆಗೆ ಮುದ್ರೆ ಹಾಕಲಾಗುವುದು. ಇತರ ಅಂಗಾಂಗಗಳಿಗೆ, ನೀವು ಇವನ ಕರ್ಮಗಳ ಬಗ್ಗೆ ಸಾಕ್ಷಿ ಹೇಳಿರಿ ಎಂದು ಅಪ್ಪಣೆ ಕೊಡಲಾಗುವುದು. ಆಗ ಅವನ ಅಂಗಾಂಗಗಳು ಅವನ ಒಂದೊಂದು ಕರ್ಮದ ಬಗ್ಗೆ ಸಾಕ್ಷಿ ಹೇಳುವುವು. ಅನಂತರ ಅವನ ನಾಲಗೆಯ ಮುದ್ರೆಯನ್ನು ತೆಗೆಯಲಾಗುವುದು. ಅವನಿಗೆ ಮಾತನಾಡುವ ಶಕ್ತಿ ಮರಳಿ ಬರುವುದು. ಆಗ ಅವನು ತನ್ನ ಅಂಗಾಂಗಗಳನ್ನು ಶಪಿಸುತ್ತಾ ನಿಮ್ಮ ಮೇಲೆ ಅಲ್ಲಾಹನ ಶಾಪವಿರಲಿ. ನಿಮಗೆ ಅಲ್ಲಾಹನ ವತಿಯಿಂದ ಛೀಮಾರಿ ಇರಲಿ. ನಾನಂತೂ ಭೂಲೋಕದಲ್ಲಿ ನಿಮ್ಮ ಪರವಾಗಿ ವಾದಿಸುತ್ತಿದ್ದೆ. ಆದರೆ ಇಂದು ನೀವೇ ನನ್ನ ವಿರುದ್ಧ ಸಾಕ್ಷಿ ಹೇಳಿದಿರಲ್ಲ. *[ಮುಸ್ಲಿಮ್]*

ಟಿಪ್ಪಣಿ: ನಾನು ನಿಮ್ಮನ್ನು ಅಲ್ಲಾಹನ ಯಾತನೆಯಿಂದ ಪಾರುಗೊಳಿಸಲಿಕ್ಕಾಗಿ ಅಲ್ಲಾಹನೊಂದಿಗೆ ವಾದಿಸುತ್ತಿದ್ದೆ. ಆದರೆ ನೀವು ಇಂದು ನಿಮ್ಮನ್ನೇ ಸಿಲುಕಿಸಿಕೊಂಡಿರಿ.

ಭೂಮಿಯು ಸಾಕ್ಷ್ಯ

(398) عَنْ اَبِیْ ھُرَیْرَةَ قَالَ قَرَءَ رَسُوْلُ اللّٰہِ صَلَّی اللّٰہُ عَلَیْہِ وَسَلَّمَ ھٰذِہِ الْاٰیَةَ یَوْمَئِذٍ
تُحَدِّثُ اَخْبَارَھَا " قَالَ اَتَدْرُوْنَ مَا اَخْبَارُھَا؟ قَالُوْا اللّٰہُ وَرَسُوْلُہٗ اَعْلَمُ
قَالَ فَاِنَّ اَخْبَارَھَا اَنْ تَشْھَدَ عَلٰی عَبْدٍ وَاَمَةٍ بِمَا عَمِلَ عَلٰی ظَھْرِھَا اَلْقَوْلُ عَمِلَ کَذَا
وَکَذَا اَلْیَوْمَ کَذَا وَکَذَا (ترمذی)

ಅಬೂ ಹುರೈರಾ(ರ) ಹೇಳುತ್ತಾರೆ- ಪ್ರವಾದಿಯವರು(ಸ) "ಭೂಮಿಯು ತನ್ನ ವೃತ್ತಾಂತವನ್ನು ವಿವರಿಸುವುದು (ಅಝ್ಝುಲ್‌ಝುಲಾಲ್) ಎಂಬ ಆಯತ್ ಪಠಿಸಿ ಜನರೊಡನೆ, ಭೂಮಿಯು ತನ್ನ ವೃತ್ತಾಂತವನ್ನು ವಿವರಿಸುವುದು ಎಂದರೇನು ಎಂದು ಕೇಳಿದರು. ಜನರು ಹೇಳಿದರು- ಅಲ್ಲಾಹ್ ಮತ್ತು ಆತನ ಸಂದೇಶವಾಹಕರೇ ಚೆನ್ನಾಗಿ ಬಲ್ಲರು. ಪ್ರವಾದಿ(ಸ) ಹೇಳಿದರು- ನಿರ್ಣಾಯಕ ದಿನದಂದು ಭೂಮಿಯು ಹೀಗೆ ಸಾಕ್ಷಿ ಹೇಳುವುದು- ನನ್ನ ಬೆನ್ನಿನ ಮೇಲೆ ನಿನ್ನ ಈ ದಾಸ ಮತ್ತು ದಾಸಿ ಇಂತಹ ಸಮಯದಲ್ಲಿ ಇಂತಹ (ಒಳ್ಳೆಯ ಅಥವಾ ಕೆಟ್ಟ) ಕೆಲಸ ಮಾಡಿದ್ದಾರೆ." *[ತಿರ್ಮಿದಿ]*

ಅತ್ಯಂತ ಕಡಿಮೆ ಶಿಕ್ಷೆ

(399) قَالَ رَسُوْلُ اللّٰہِ صَلَّی اللّٰہُ عَلَیْہِ وَسَلَّمَ اِنَّ اَھْوَنَ اَھْلِ النَّارِ عَذَابًا رَجُلٌ
فِیْ اَخْمَصِ قَدَمَیْہِ جَمْرَتَانِ یَغْلِیْ مِنْھُمَا دِمَاغُہٗ کَمَا یَغْلِی الْمِرْجَلُ بِالْقُمْقُمِ
(بخاری ومسلم ـــ نعمان بن بشیرؓ)

ಪ್ರವಾದಿ(ಸ) ಹೇಳಿದರು - ನರಕದಲ್ಲಿ ಅತ್ಯಂತ ಕಡಿಮೆ ಹಾಗೂ ಸಾದಾ ಶಿಕ್ಷೆ ಹೇಗಿರುವುದೆಂದರೆ: ಮನುಷ್ಯನ ಎರಡೂ ಪಾದಗಳಡಿಯಲ್ಲಿ ಎರಡು ಬೆಂಕಿಯ ಕಿಡಿಗಳನ್ನಿಡಲಾಗುವುದು. ಅದರಿಂದ ಅವನ ಮೆದುಳು ಒಲೆಯಲ್ಲಿಟ್ಟ ಹಂಡೆ ಕುದಿಯುವಂತೆ ಕುದಿಯುವುದು. *[ಬುಖಾರಿ- ಮುಸ್ಲಿಮ್: ವರದಿ- ನುಅ್‌ಮಾನ್ ಬಿನ್ ಬಶೀರ್(ರ)]*

---

(400) قَالَ النَّبِيُّ صَلَّى اللّٰهُ عَلَيْهِ وَسَلَّمَ مَنْ يَدْخُلِ الْجَنَّةَ يَنْعَمُ وَلَا يَبْأَسُ لَا يَبْلَى ثِيَابُهُ وَلَا يَفْنٰى شَبَابُهُ ، فِي الْجَنَّةِ مَا لَا عَيْنٌ رَأَتْ وَلَا اُذُنٌ سَمِعَتْ وَلَا خَطَرَ عَلٰى قَلْبِ بَشَرٍ (صحیح مسلم ـــــ ابوہریرہ رض)

ಪ್ರವಾದಿ(ಸ) ಹೇಳಿದರು- ಸ್ವರ್ಗದಲ್ಲಿ ಪ್ರವೇಶಿಸಿದವರು ಸದಾ ಸುಖವಾಗಿರುವರು. ಅವರಿಗೆಂದೂ ಹಸಿವು-ಬಡತನ ಬರಲಾರದು. ಅವರ ಬಟ್ಟೆ ಬರೆಗಳು ಎಂದೂ ಹಳತಾಗದು. ಅವರ ಯೌವನ ಎಂದೂ ಕೊನೆಗೊಳ್ಳಲಾರದು. ಸ್ವರ್ಗದಲ್ಲಿರುವ ಅನುಗ್ರಹಗಳನ್ನು ಯಾವ ಕಣ್ಣೂ ಕಂಡಿಲ್ಲ. ಯಾವ ಕಿವಿಯೂ ಕೇಳಿಲ್ಲ. ಯಾವ ಮನುಷ್ಯನ ಕಲ್ಪನೆಗೂ ಅದು ಎಟಕಿಲ್ಲ. *[ಮುಸ್ಲಿಮ್: ವರದಿ- ಅಬೂ ಹುರೈರಾ(ರ)]*

---

(401)

قَالَ النَّبِيُّ صَلَّى اللّٰهُ عَلَيْهِ وَسَلَّمَ إِذَا دَخَلَ اَهْلُ الْجَنَّةِ الْجَنَّةَ يُنَادِي مُنَادٍ : إِنَّ لَكُمْ اَنْ تَصِحُّوا فَلَا تَسْقَمُوا اَبَدًا ، وَإِنَّ لَكُمْ اَنْ تَحْيَوْا فَلَا تَمُوتُوا اَبَدًا ، وَإِنَّ لَكُمْ اَنْ تَشِبُّوا فَلَا تَهْرَمُوا اَبَدًا ، وَإِنَّ لَكُمْ اَنْ تَنْعَمُوا فَلَا تَبْأَسُوا اَبَدًا ، وَذَالِكَ قَوْلُ اللّٰهِ عَزَّ وَجَلَّ " وَنُودُوا اَنْ تِلْكُمُ الْجَنَّةُ اُورِثْتُمُوهَا بِمَا كُنْتُمْ تَعْمَلُونَ (مسلم وترمذی ـ ابوسعید خدری رض وابوہریرہ رض)

ಪ್ರವಾದಿ(ಸ) ಹೇಳಿದರು - ಸ್ವರ್ಗವಾಸಿಗಳು ಸ್ವರ್ಗಕ್ಕೆ ತಲಪಿದ ಬಳಿಕ ಓರ್ವ ಹರಿಕಾರನು (ದೇವಚರ) ಹೀಗೆ ಘೋಷಿಸುವನು- ಸ್ವರ್ಗವಾಸಿಗಳೇ! ಇನ್ನು ನಿಮಗೆಂದೂ ರೋಗ ಬರಲಾರದು. ನೀವು ಸದಾ ಆರೋಗ್ಯದಿಂದಿರುವಿರಿ. ನಿಮಗೆಂದೂ ಮರಣ ಬರಲಾರದು. ನೀವು ಸದಾ ಜೀವಂತವಾಗಿರುವಿರಿ. ನೀವು ಸದಾ ಯೌವನಾವಸ್ಥೆಯಲ್ಲಿರುವಿರಿ. ನೀವು ಸದಾ ಸುಖವಾಗಿರುವಿರಿ. ನಿಮಗೆಂದೂ ವೃದ್ಧಾಪ್ಯ ಬರಲಾರದು. ನಿಮಗೆಂದೂ ಹಸಿವು-

ಬಡತನ ಬರಲಾರದು. ಇದೆಲ್ಲವೂ ಅಲ್ಲಾಹನ ಈ ಹೇಳಿಕೆಗನುಸಾರವಾಗಿರುವುದು - "ಇದುವೇ ನಿಮಗೆ ವಾಗ್ದಾನ ಮಾಡಲಾಗಿದ್ದ ಸ್ವರ್ಗ. ನೀವು ಮಾಡುತ್ತಿದ್ದ ಕರ್ಮಗಳ ಪ್ರತಿಫಲವಾಗಿ ನೀವು ಅದರ ವಾರೀಸುದಾರರಾಗಿರುತ್ತೀರಿ." .

[ಮುಸ್ಲಿಮ್, ತಿರ್ಮಿದಿ - ವರದಿ: ಅಬೂ ಸಈದ್ ಖುದ್ರೀ ಮತ್ತು ಅಬೂ ಹುರೈರಾ(ರ)]

---

(402) عَنْ أَبِي سَعِيدٍ الْخُدْرِيِّ أَنَّ رَسُولَ اللّٰهِ صَلَّى اللّٰهُ عَلَيْهِ وَسَلَّمَ قَالَ إِنَّ اللّٰهَ عَزَّ وَجَلَّ يَقُولُ لِأَهْلِ الْجَنَّةِ يَا أَهْلَ الْجَنَّةِ فَيَقُولُونَ لَبَّيْكَ رَبَّنَا وَسَعْدَيْكَ وَالْخَيْرُ فِي يَدَيْكَ فَيَقُولُ هَلْ رَضِيتُمْ؟ فَيَقُولُونَ وَمَا لَنَا لَا نَرْضَى رَبَّنَا وَقَدْ أَعْطَيْتَنَا مَا لَمْ تُعْطِ أَحَدًا مِنْ خَلْقِكَ، فَيَقُولُ أَلَا أُعْطِيكُمْ أَفْضَلَ مِنْ ذٰلِكَ؟ فَيَقُولُونَ وَأَيُّ شَيْءٍ أَفْضَلُ مِنْ ذٰلِكَ؟ فَيَقُولُ أُحِلُّ عَلَيْكُمْ رِضْوَانِي فَلَا أَسْخَطُ عَلَيْكُمْ بَعْدَهُ أَبَدًا (بخاری، مسلم، ترمذی)

ಅಬೂ ಸಈದ್ ಖುದ್ರೀ(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು- ಅಲ್ಲಾಹನು ಸ್ವರ್ಗವಾಸಿಗಳೊಂದಿಗೆ ಹೇಳುವನು, ಓ ಸ್ವರ್ಗವಾಸಿಗಳೇ! ಆಗ ಅವರು ಹೇಳುವರು - ನಮ್ಮ ಪ್ರಭೂ! ನಾವಿದೋ ಹಾಜರಿದ್ದೇವೆ. ಒಳಿತು ಸೌಭಾಗ್ಯಗಳೆಲ್ಲವೂ ನಿನ್ನ ವಶದಲ್ಲೇ ಇವೆ. ಏನಪ್ಪಣೆ! ಆಗ ಅಲ್ಲಾಹನು ಕೇಳುವನು- ನಿಮ್ಮ ಕರ್ಮಗಳಿಗೆ ಪ್ರತಿಫಲ ಪಡೆದು ನೀವು ಸಂತುಷ್ಟರಾಗಿರುವಿರಾ? ಅವರು ಉತ್ತರಿಸುವರು- ಓ ನಮ್ಮ ಪ್ರಭೂ! ಯಾರಿಗೂ ನೀಡಿರದಂತಹ ಅನುಗ್ರಹಗಳನ್ನು ನೀನು ನಮಗೆ ದಯಪಾಲಿಸಿರುವಾಗ ನಾವು ಸಂತುಷ್ಟರಾಗದಿರುವುದಾದರೂ ಹೇಗೆ? ಅಲ್ಲಾಹನು ಕೇಳುವನು- ನಾನು ಅದಕ್ಕಿಂತ ಉನ್ನತವೂ ಉತ್ತಮವೂ ಆದ ವಸ್ತುವನ್ನು ನೀಡಲೇ? ಅವರು ಕೇಳುವರು- ಇದಕ್ಕಿಂತಲೂ ಉತ್ತಮ ವಸ್ತು ಯಾವುದು? ಅಲ್ಲಾಹನು ಹೇಳುವನು: ನಾನು ನಿಮ್ಮಿಂದ ಸದಾ ಸಂತುಷ್ಟನಾಗಿರುವೆನು. ಇನ್ನು ನಿಮ್ಮೊಂದಿಗೆ ಎಂದೂ ಕೋಪಗೊಳ್ಳಲಾರೆ. *[ಬುಖಾರಿ, ಮುಸ್ಲಿಮ್, ತಿರ್ಮಿದಿ]*

ಸ್ವರ್ಗವು ಅಲಕ್ಷ್ಯದ ತಾಣವಲ್ಲ

(403) قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ مَنْ خَافَ اَدْلَجَ، وَمَنْ اَدْلَجَ بَلَغَ الْمَنْزِلَ،
اَلَا اِنَّ سِلْعَةَ اللّٰهِ غَالِيَةٌ، اَلَا اِنَّ سِلْعَةَ اللّٰهِ الْجَنَّةُ (ترمذی — ابوہریرہؓ)

ಪ್ರವಾದಿ(ಸ) ಹೇಳಿದರು- ತಾನು ರಸ್ತೆಯಲ್ಲೇ ಉಳಿದು ಬಿಡುವೆ, ತಂಪಾದ ಸಮಯದಲ್ಲಿ ಕ್ಷೇಮದೊಂದಿಗೆ ಗುರಿ ಮುಟ್ಟಲಾರೆನೆಂದು ಹೆದರುವ ಯಾತ್ರಿಕನು ತನ್ನ ರಾತ್ರಿಯ ಭಾಗದಲ್ಲೇ ನಿದ್ರೆಯನ್ನು ಬಲಿಕೊಟ್ಟು ಪ್ರಥಮ ಪ್ರಯಾಣವನ್ನು ಆರಂಭಿಸಿ ತಂಪಾದ ಸಮಯದಲ್ಲಿ ತನ್ನ ಗುರಿಮುಟ್ಟುತ್ತಾನೆ. ಅಲ್ಲಾಹನ ಸರಕಿನ ಗಿರಾಕಿಗಳೇ! ಅಲ್ಲಾಹನ ಸರಕು ಅತ್ಯಂತ ಬೆಲೆ ಬಾಳುವ ಸರಕಾಗಿದೆ. ಕೇಳಿರಿ! ಅಲ್ಲಾಹನ ಸರಕು ಸ್ವರ್ಗವಾಗಿದೆ.

[ತಿರ್ಮಿದಿ- ವರದಿ: ಅಬೂ ಹುರೈರಾ(ರ)]

ಟಿಪ್ಪಣಿ: ಪ್ರವಾದಿಯವರು(ಸ) ಈ ಮೂರು ವಾಕ್ಯಗಳಲ್ಲಿ ಎರಡು ಪ್ರಮುಖ ವಿಷಯಗಳತ್ತ ಸತ್ಯವಿಶ್ವಾಸಿಗಳ ಗಮನ ಸೆಳೆದಿದ್ದಾರೆ. ಮೊದಲನೆಯದಾಗಿ ಮೂಮಿನನ ನೈಜ ಸ್ಥಳ ಸ್ವರ್ಗವಾಗಿದೆ. ಅವನು ಭೂಲೋಕಕ್ಕೆ ಸಂಪಾದನೆ ಮಾಡಲು ಬಂದಿದ್ದಾನೆ. ಇಲ್ಲಿ ಸಂಪಾದನೆ ಮಾಡಿ ತನ್ನ ನೈಜ ಸ್ಥಳಕ್ಕೆ ಈ ಯಾತ್ರಿಕ ಮರಳುತ್ತಾನೆ. ಇಲ್ಲಿನ ಸಂಪಾದನೆ ಅಲ್ಲಿ ಅವನ ಪ್ರಯೋಜನಕ್ಕೆ ಬರುವುದು. ಪ್ರವಾದಿ ಯವರು(ಸ), ಸತ್ಯವಿಶ್ವಾಸಿಗಳು ಈ ಲೋಕವನ್ನೇ ತಮ್ಮ ನೈಜ ಸ್ಥಳವೆಂದು ಪರಿಗಣಿಸಬಾರದು, ಪ್ರಯಾಣದ ಮಧ್ಯೆ ಮಲಗಬಾರದು, ಅನ್ಯಥಾ ಗುರಿ ಮುಟ್ಟಲಾರಿರಿ ಎಂದು ಎಚ್ಚರಿಸುತ್ತಿದ್ದಾರೆ.

ಎರಡನೆಯದಾಗಿ, ಪ್ರವಾದಿಯವರು(ಸ) ನಮ್ಮ ಮತ್ತು ಅಲ್ಲಾಹನ ನಡುವೆ ಆಗಿರುವಂತಹ ಕರಾರನ್ನು ನಮ್ಮ ಮುಂದಿಡುತ್ತಿದ್ದಾರೆ. ನಾವು ಪ್ರಜ್ಞಾಪೂರ್ವಕವಾಗಿ ಇಸ್ಲಾಮ್ ಸ್ವೀಕರಿಸಿರುತ್ತೇವೆ. ನಾವು ಪವಿತ್ರ ವಚನವನ್ನು ಉಚ್ಚರಿಸುವ ಮೂಲಕ, ಪ್ರಭೂ! ನಮ್ಮನ್ನು ನಿನಗೆ ಅರ್ಪಿಸಿದ್ದೇವೆ ಎಂದು ಹೇಳುತ್ತೇವೆ. ಮಾತ್ರವಲ್ಲ, ನಾವು ನಮ್ಮ ಜೀವ-ಸೊತ್ತು ಮತ್ತು ಎಲ್ಲ ಶಕ್ತಿ ಸಾಮರ್ಥ್ಯಗಳನ್ನು ಸ್ವರ್ಗದ ಬದಲಿಗೆ ನಿನಗೆ ಮಾರಿ ಬಿಟ್ಟಿದ್ದೇವೆ ಎಂದು ಹೇಳುತ್ತೇವೆ. ಆಗ ಆ ಪ್ರಭುವೂ ಹೀಗೆ ವಾಗ್ದಾನ ಮಾಡುತ್ತಾನೆ- ನಾವು ನಿಮ್ಮನ್ನು ಸ್ವರ್ಗದಲ್ಲಿ ನೆಲೆಗೊಳಿಸುವೆವು. ಆದರೆ ನೀವು ನಿಮ್ಮ ವ್ಯವಹಾರದಲ್ಲಿ ಸತ್ಯವಾದಿಗಳೋ ಸುಳ್ಳುಗಾರರೋ ಎಂಬುದನ್ನು ನಾವು ಖಂಡಿತ ಪರೀಕ್ಷಿಸುವೆವು. ನೀವು ಸತ್ಯವಾದಿ ಗಳಾಗಿದ್ದರೆ, ನಮ್ಮ ಹೇಳಿಕೆಗನುಸಾರ ನಿಮ್ಮ ಸೊತ್ತನ್ನು ನೀಡಿರುವಿರಾದರೆ ಮತ್ತು ನಿಮ್ಮ ಜೀವವನ್ನು ಅರ್ಪಿಸಿರುವಿರಾದರೆ ನಿಮ್ಮ ವ್ಯವಹಾರ ಪೂರ್ಣಗೊಂಡಿದೆಯೆಂದರ್ಥ. ನಾವು ನಿಮ್ಮನ್ನು ಖಂಡಿತ ಶಾಂತಿಪೂರ್ಣ ಮತ್ತು ಶಾಶ್ವತ ಭವನದಲ್ಲಿ ವಾಸಗೊಳಿಸುವೆವು. ನಮಗಿಂತ ಉತ್ತಮ ವಚನಪಾಲಕರು ಯಾರಿದ್ದಾರೆ? ನಮಗಿಂತ ಉತ್ತಮ ಸತ್ಯ ಹೇಳುವವರು ಯಾರಿದ್ದಾರೆ-

ಅಲ್ಲಾಹನಿಗಿಂತ ಅಧಿಕ ಸತ್ಯ ಹೇಳುವವರು ಯಾರಾದರೂ ಇದ್ದಾರೆಯೇ? ನಮ್ಮ ನಾಯಕರು ಗಳಾದ ಸಹಾಬಿಗಳ(ರ) ಚರಿತ್ರೆ ನಮ್ಮ ಮುಂದಿದೆ. ಅವರು ಸ್ವರ್ಗದ ಬದಲಿಗೆ ತಮ್ಮ ಸರ್ವಸ್ವವನ್ನೂ ಅಲ್ಲಾಹನ ಕೈಯಲ್ಲಿ ಮಾರಿ ಬಿಟ್ಟಾಗ, ಅಲ್ಲಾಹನು ಅವರನ್ನು ಇಪ್ಪತ್ತು ಇಪ್ಪತ್ತೆರಡು ವರ್ಷಗಳ ಕಾಲ ವಿವಿಧ ರೀತಿಯಲ್ಲಿ ಪರೀಕ್ಷಿಸಿ ನೋಡಿದನು. ಅವರು ತಮ್ಮ ಕರಾರನ್ನು ಪಾಲಿಸುವಲ್ಲಿ

ಪ್ರಾಮಾಣಿಕರಾಗಿದ್ದರೆಂದು ತಿಳಿದಾಗ ಹಿ.ಶ. 9ರಲ್ಲಿ ನಡೆದ ಕೊನೆಯ ಪರೀಕ್ಷೆ - ತಬೂಕ್ ಯುದ್ಧ-ಯ ನಂತರ ಹೀಗೆಂದು ಘೋಷಿಸಿದನು.

'ವಾಸ್ತವದಲ್ಲಿ ಅಲ್ಲಾಹನು ಸತ್ಯವಿಶ್ವಾಸಿಗಳಿಂದ ಅವರ ತನು-ಧನಗಳನ್ನು ಸ್ವರ್ಗದ ಬದಲಿಗೆ ಖರೀದಿಸಿರುತ್ತಾನೆ. ಅವರು ಅಲ್ಲಾಹನ-ಮಾರ್ಗದಲ್ಲಿ ಹೋರಾಡುತ್ತಾರೆ, ವಧಿಸುತ್ತಾರೆ ಮತ್ತು ವಧಿಸಲ್ಪಡುತ್ತಾರೆ. ತೌರಾತ್, ಇಂಜೀಲ್ ಮತ್ತು ಕುರ್‌ಆನ್‌ನಲ್ಲಿ ಅವರೊಡನೆ (ಮಾಡಲಾದ ಸ್ವರ್ಗದ ವಾಗ್ದಾನವು) ಅಲ್ಲಾಹನ ಹೊಣೆಯಲ್ಲಿರುವ ದೃಢ ವಾಗ್ದಾನವಾಗಿದೆ. ಅಲ್ಲಾಹನಿಗಿಂತ ಮಿಗಿಲಾಗಿ ತನ್ನ ವಾಗ್ದಾನವನ್ನು ಪೂರೈಸುವವರು ಯಾರಿದ್ದಾರೆ? ಆದುದರಿಂದ ನೀವು ಆತನೊಂದಿಗೆ ಮಾಡಿಕೊಂಡಿರುವ ವ್ಯವಹಾರಕ್ಕಾಗಿ ಸಂತೋಷ ಪಡಿರಿ. ಇದುವೇ ಹಿರಿಯ ವಿಜಯವಾಗಿದೆ.'

(ಪವಿತ್ರ ಕುರ್‌ಆನ್, 9:111)

ಹ. ಆಯಿಶಾ(ರ) ಮತ್ತು ಇಬ್ನು ಝುಬೈರ್‌ರ ಮಧ್ಯೆ ವಿರಸ

(404) إِنَّ عَائِشَةَ حُدِّثَتْ أَنَّ عَبْدَ اللهِ بْنَ الزُّبَيْرِ رض قَالَ فِي بَيْعٍ أَوْ عَطَاءٍ
أَعْطَتْهُ عَائِشَةُ رض وَاللهِ لَتَنْتَهِيَنَّ عَائِشَةُ رض أَوْ لَأَحْجُرَنَّ عَلَيْهَا قَالَتْ أَهُوَ قَالَ هٰذَا؟
قَالُوا نَعَمْ، قَالَتْ هُوَ لِلّٰهِ عَلَيَّ نَذْرٌ أَنْ لَا أُكَلِّمَ ابْنَ الزُّبَيْرِ أَبَدًا فَاسْتَشْفَعَ ابْنُ الزُّبَيْرِ
إِلَيْهَا حِينَ طَالَتِ الْهِجْرَةُ فَقَالَتْ لَا وَاللهِ لَا أُشَفِّعُ فِيهِ أَبَدًا وَلَا أَتَحَنَّثُ إِلَى نَذْرِي
فَلَمَّا طَالَ عَلَى ابْنِ الزُّبَيْرِ كَلَّمَ الْمِسْوَرَ بْنَ مَخْرَمَةَ وَعَبْدَ الرَّحْمٰنِ بْنَ الْأَسْوَدِ بْنِ
يَغُوثَ وَقَالَ لَهُمَا أَنْشُدُكُمَا اللهَ لَمَا أَدْخَلْتُمَانِي عَلَى عَائِشَةَ فَإِنَّهَا لَا يَحِلُّ لَهَا أَنْ تَنْذِرَ
قَطِيعَتِي، فَأَقْبَلَ بِهِ الْمِسْوَرُ وَعَبْدُ الرَّحْمٰنِ حَتَّى اسْتَأْذَنَا عَلَى عَائِشَةَ رض فَقَالَا السَّلَامُ
عَلَيْكِ وَرَحْمَةُ اللهِ وَبَرَكَاتُهُ أَنَدْخُلُ؟ قَالَتْ عَائِشَةُ ادْخُلُوا، قَالُوا كُلُّنَا؟ قَالَتْ
نَعَمْ، ادْخُلُوا كُلُّكُمْ وَلَا تَعْلَمُ أَنَّ مَعَهُمَا ابْنَ الزُّبَيْرِ، فَلَمَّا دَخَلُوا دَخَلَ ابْنُ الزُّبَيْرِ الْحِجَابَ،
فَاعْتَنَقَ عَائِشَةَ وَطَفِقَ يُنَاشِدُهَا وَيَبْكِي، وَطَفِقَ الْمِسْوَرُ وَعَبْدُ الرَّحْمٰنِ يُنَاشِدَانِهَا
إِلَّا كَلَّمَتْهُ وَقَبِلَتْ مِنْهُ، وَيَقُولَانِ إِنَّ النَّبِيَّ صَلَّى اللهُ عَلَيْهِ وَسَلَّمَ نَهَى عَمَّا قَدْ عَلِمْتِ
مِنَ الْهِجْرَةِ وَلَا يَحِلُّ لِمُسْلِمٍ أَنْ يَهْجُرَ أَخَاهُ فَوْقَ ثَلَاثِ لَيَالٍ، فَلَمَّا أَكْثَرُوا عَلَى
عَائِشَةَ مِنَ التَّذْكِرَةِ وَالتَّحْرِيجِ طَفِقَتْ تُذَكِّرُهُمَا وَتَبْكِي وَتَقُولُ إِنِّي نَذَرْتُ
وَالنَّذْرُ شَدِيدٌ فَلَمْ يَزَالَا بِهَا حَتَّى كَلَّمَتِ ابْنَ الزُّبَيْرِ رض وَأَعْتَقَتْ فِي نَذْرِهَا
أَرْبَعِينَ رَقَبَةً وَكَانَتْ تَذْكُرُ نَذْرَهَا بَعْدَ ذٰلِكَ فَتَبْكِي حَتَّى تَبُلَّ دُمُوعُهَا خِمَارَهَا
(بخاري: عوف ابن مالك)

ಹ. ಆಯಿಶಾರೊಂದಿಗೆ(ರ) ಜನರು ಹೋಗಿ ಹೀಗೆಂದರು- ತಾವು ಮಾರಿರುವ ಅಥವಾ ಯಾರಿಗೋ ದಾನ ಮಾಡಿರುವ ವಸ್ತುವಿನ ಬಗ್ಗೆ ಇಬ್ನು ಝುಬೈರ್ (ಮಾತೃ ಸೋದರಿ) ಹೇಳುತ್ತಾರೆ- ಒಂದು ವೇಳೆ ಚಿಕ್ಕಮ್ಮ ಕೇಳದಿದ್ದರೆ ನಾನು ಅವರ ಮೇಲೆ ನಿಷೇಧ ಹೇರುವೆನು (ಅಂದರೆ ಅವರಿಗೆ ಬೈತುಲ್‌ಮಾಲ್‌ನಿಂದ ಏನೆಲ್ಲ ಸಿಗುತ್ತದೋ ಅದನ್ನು ತಡೆಹಿಡಿಯುವೆನು ಮತ್ತು ಅವರ ಖರ್ಚನ್ನು ಮಾತ್ರ ನೋಡುವೆನು). ಆಗ ಹ. ಆಯಿಶಾ(ರ), "ಅವನು ಹಾಗೆ ಹೇಳಿದನೇ?" ಎಂದು ಕೇಳಿದರು. ಜನರು ಹೌದೆಂದು ಉತ್ತರಿಸಿದರು. ಆಗ ಹ. ಆಯಿಶಾ(ರ) ಹೇಳಿದರು- "ಅಲ್ಲಾಹನಾಣೆ! ನಾನು ಇನ್ನೆಂದೂ ಇಬ್ನುಝುಬೈರ್‌ನೊಡನೆ ಮಾತಾಡಲಾರೆ." ಹೀಗೆ ಅವರು ಇಬ್ನು ಝುಬೈರ್‌ರೊಂದಿಗೆ ಸಂಬಂಧ ಕಡಿದುಕೊಂಡರು. ಈ ಸಂಬಂಧ ಕಡಿತವು ದೀರ್ಘವಾಗುತ್ತಾ ಹೋದಾಗ ಇಬ್ನು ಝುಬೈರ್‌ರು(ರ) ಜನರನ್ನು ಮಧ್ಯಸ್ಥಿಕೆದಾರರಾಗಿ ಮಾಡಿ ಕಳಿಸಿದರು. ಆದರೆ ಹ. ಆಯಿಶಾ(ರ) ಒಡಂಬಡಲಿಲ್ಲ. "ಇಬ್ನು ಝುಬೈರ್‌ನ ಪರವಾಗಿ ಯಾರ ಮಧ್ಯಸ್ಥಿಕೆಯನ್ನೂ ಒಪ್ಪಲಾರೆ ಮತ್ತು ನನ್ನ ಆಣೆಯನ್ನೂ ಮುರಿಯಲಾರೆ" ಎಂದು ಬಿಟ್ಟರು. ಈ ಪರಿಸ್ಥಿತಿಯು ಇಬ್ನು ಝುಬೈರ್‌ರನ್ನು(ರ) ಬಹಳ ಪೇಚಿಗೆ ಸಿಲುಕಿಸಿತು. ಈ ಸಲ ಅವರು ಮಿಸ್ವರ್ ಬಿನ್ ಮಹ್‌ರ್ಝುಮ ಮತ್ತು ಅಬ್ದುರ್ರಹ್ಮಾನ್ ಬಿನ್ ಅಸ್ವದ್‌ರೊಡನೆ ಆಣೆ ಹಾಕಿ, "ನನ್ನನ್ನು ಹೇಗಾದರೂ ಮಾಡಿ ಆಯಿಶಾರ(ರ) ಬಳಿಗೆ ತಲುಪಿಸುವ ವ್ಯವಸ್ಥೆ ಮಾಡಿರಿ, ಅವರು ನನ್ನೊಂದಿಗೆ ಸಂಬಂಧ ಕಡಿದುಕೊಂಡಿದ್ದಾರೆ ಮತ್ತು ಆ ಕುರಿತು ಆಣೆ ಹಾಕಿದ್ದಾರೆ" ಎಂದರು. ಮಿಸ್ವರ್ ಮತ್ತು ಅಬ್ದುರ್ರಹ್ಮಾನರು ಅವರನ್ನು ಕರೆದುಕೊಂಡು ಹ. ಆಯಿಶಾರ(ರ) ಬಳಿಗೆ ಹೋದರು. ಬಾಗಿಲು ತಟ್ಟಿ ಸಲಾಮ್ ಹೇಳಿದ ಬಳಿಕ, "ನಾವು ಒಳಗೆ ಬರಬಹುದೇ?" ಎಂದು ಕೇಳಿದರು. ಹ. ಆಯಿಶಾ(ರ), 'ಬನ್ನಿರಿ' ಎಂದರು. ಅವರಿಬ್ಬರೂ ಪುನಃ, "ನಾವೆಲ್ಲರೂ ಬರಬಹುದೇ?" ಎಂದು ಕೇಳಿದರು. ಹ. ಆಯಿಶಾ, "ನೀವೆಲ್ಲರೂ ಬರಬಹುದು" ಎಂದುತ್ತರಿಸಿದರು. ಅವರೊಂದಿಗೆ ಇಬ್ನುಝುಬೈರ್ ಇದ್ದಾರೆಂದು ಹ. ಆಯಿಶಾರಿಗೆ(ರ) ತಿಳಿದಿರಲಿಲ್ಲ. ಇವರು ಮನೆಯೊಳಗೆ ಪ್ರವೇಶಿಸಿದಂತೆ ಇಬ್ನು ಝುಬೈರ್ ಅವರು ಹ. ಆಯಿಶಾ ಕುಳಿತಿದ್ದಲ್ಲಿಗೆ ಹೋಗಿ ಹ. ಆಯಿಶಾರನ್ನು ಬಿಗಿದಪ್ಪಿ ಅಳತೊಡಗಿದರು. ತನ್ನ ತಪ್ಪನ್ನು ಮನ್ನಿಸಬೇಕೆಂದು ಆಣೆ ಹಾಕಿ ವಿನಂತಿಸುತ್ತಿದ್ದಂತೆ ಅತ್ತ ಮಿಸ್ವರ್ ಮತ್ತು ಅಬ್ದುರ್ರಹ್ಮಾನ್ ಅವರು ಆಣೆ ಹಾಕುತ್ತಾ, "ತಾವು ಇಬ್ನು ಝುಬೈರ್‌ರ ತಪ್ಪನ್ನು ಮನ್ನಿಸಿ ಅವರೊಂದಿಗೆ ಮಾತಾಡಲು ಆರಂಭಿಸಿರಿ" ಎಂದು ವಿನಂತಿಸ ತೊಡಗಿದರು. ಒಬ್ಬ ಮುಸ್ಲಿಮನು ಮೂರು ದಿನಕ್ಕಿಂತ ಹೆಚ್ಚು ಸಂಬಂಧ ಕಡಿದುಕೊಳ್ಳುವುದು ಧರ್ಮಸಮ್ಮತವಲ್ಲವೆಂಬ ಪ್ರವಾದಿ ವಚನವನ್ನು ಅವರಿಬ್ಬರೂ ಹ. ಆಯಿಶಾರಿಗೆ(ರ) ನೆನಪಿಸಿದರು. ಈ ರೀತಿ ಜನರು ಹ. ಆಯಿಶಾರ(ರ) ಮೇಲೆ ಒತ್ತಡ ಹೇರಿ, ತಾವು ಪಾಪ ಕಾರ್ಯ ಮಾಡುತ್ತಿದ್ದೀರೆಂದು ಅವರನ್ನು ಎಚ್ಚರಿಸಿದಾಗ ಅವರು ಅಳುತ್ತಾ, "ನಾನು ಆಣೆ ಹಾಕಿದ್ದೇನೆ. ಆಣೆ ಹಾಕುವ ವಿಷಯ ಅತ್ಯಂತ ಕಠಿಣವಾಗಿದೆ" ಎಂದರು. ಒಟ್ಟಿನಲ್ಲಿ ಇಬ್ಬರೂ ಹ. ಆಯಿಶಾರಿಗೆ(ರ) ವಸ್ತುಸ್ಥಿತಿಯನ್ನು ನಿರಂತರ ಮನವರಿಕೆ ಮಾಡಿದಾಗ, ಕೊನೆಯಲ್ಲಿ ಅವರು ತಮ್ಮ ಆಣೆಯನ್ನು

ಮುರಿದು ಇಬ್ನು ಝುಬೈರ್‌ರೊಂದಿಗೆ ಮಾತನಾಡಲಾರಂಭಿಸಿದರು. (ಪ್ರಾಯಶ್ಚಿತ್ತವಾಗಿ) ನಲ್ವತ್ತು ಗುಲಾಮರನ್ನು ಸ್ವತಂತ್ರಗೊಳಿಸಿದರು. ಅನಂತರ ಜೀವಮಾನದಲ್ಲಿಡೀ ಅವರಿಗೆ ಈ ತಪ್ಪಿನ ನೆನಪಾದಾಗಲೆಲ್ಲ ಅವರ ಶಾಲು ಕಣ್ಣೀರಿನಿಂದ ಒದ್ದೆಯಾಗುವಷ್ಟು ಅಳುತ್ತಿದ್ದರು.
[ಬುಖಾರಿ - ವರದಿ: ಔಫ್ ಬಿನ್ ಮಾಲಿಕ್(ರ)]

ಅಲ್ಲಾಹ್ ಮತ್ತು ಪ್ರವಾದಿಯನ್ನು ಪ್ರೀತಿಸುವುದು

(405) إِنَّ رَجُلاً قَالَ يَا رَسُولَ اللهِ مَتَى السَّاعَةُ؟ قَالَ وَيْلَكَ وَمَا
أَعْدَدْتَ لَهَا؟ قَالَ مَا أَعْدَدْتُ لَهَا إِلَّا أَنِّي أُحِبُّ اللهَ وَرَسُولَهُ قَالَ أَنْتَ
مَعَ مَنْ أَحْبَبْتَ، قَالَ أَنَسٌ فَمَا رَأَيْتُ الْمُسْلِمِينَ فَرِحُوا بِشَيْءٍ بَعْدَ الْإِسْلَامِ
فَرَحَهُمْ بِهَا. (بخاری، مسلم، انسؓ)

ಪ್ರವಾದಿಯವರ(ಸ) ಬಳಿಗೆ ಒಬ್ಬ ವ್ಯಕ್ತಿ ಬಂದು ಕಿಯಾಮತ್(ಅಂತ್ಯ ದಿನ) ಯಾವಾಗ ಬರುವುದೆಂದು ಕೇಳಿದನು. ಪ್ರವಾದಿ(ಸ) ಅವನೊಡನೆ ಕೇಳಿದರು- ನಿನಗೇನಾಗಿದೆ, ನೀನು ಅದಕ್ಕೇನಾದರೂ ಸಿದ್ಧತೆ ಮಾಡಿರುವೆಯಾ? ಅವನು ಹೇಳಿದನು- ನಾನು ಅದಕ್ಕೆ ಹೆಚ್ಚಿನ ಸಿದ್ಧತೆಯನ್ನೇನೂ ಮಾಡಿಲ್ಲ. ಆದರೆ ನಾನು ಅಲ್ಲಾಹ್ ಮತ್ತು ಅವನ ಪ್ರವಾದಿಯನ್ನು ಪ್ರೀತಿಸುತ್ತೇನೆ. ಆಗ ಪ್ರವಾದಿ(ಸ) ಹೇಳಿದರು- ಮನುಷ್ಯನು ಯಾರನ್ನು ಪ್ರೀತಿಸುತ್ತಾನೋ ಅವರ ಸಾಮೀಪ್ಯವೇ ಅವನಿಗೆ ಲಭಿಸುವುದು ಹ. ಅನಸ್(ರ) ಹೇಳುತ್ತಾರೆ- ಇಸ್ಲಾಮ್ ಸ್ವೀಕರಿಸಿದ ನಂತರ ಜನರಿಗೆ ಪ್ರವಾದಿಯವರ(ಸ) ಈ ಮಾತಿನಿಂದಾದಷ್ಟು ಸಂತೋಷ ಬೇರೆ ಯಾವುದರಿಂದಲೂ ಆಗಲಿಲ್ಲ. *[ಬುಖಾರಿ, ಮುಸ್ಲಿಮ್- ವರದಿ: ಅನಸ್(ರ)]*

ಟಿಪ್ಪಣಿ: ಪ್ರವಾದಿಯವರ(ಸ) ಸಂಗಾತಿಗಳು ಕರ್ಮರಂಗದಲ್ಲಿ ಎಷ್ಟು ಮುಂದಿದ್ದರು ಎಂಬುದಕ್ಕೆ ಕುರ್‌ಆನ್ ಸಾಕ್ಷಿಯಾಗಿದೆ. ಆದರೂ ಅವರು ತಮ್ಮ ಬಗ್ಗೆ ಚಿಂತಾಕುಲರಾಗಿರುತ್ತಿದ್ದರು. ಪ್ರವಾದಿಯವರ(ಸ) ಈ ಮಾತಿನಿಂದ ಅವರಿಗೆ ಸಂತೋಷವಾಗಿರಲೇಬೇಕು. ಅಂತಹ ಮಂದಿಯೊಂದಿಗೆ ಮಾತ್ರ ಇಂತಹ ಮಾತನ್ನು ಹೇಳಲಾಗುತ್ತದೆ.

ಸಣ್ಣ ಪಾಪಗಳು

(406) عَنْ اَنَسٍ قَالَ اِنَّكُمْ لَتَعْمَلُوْنَ اَعْمَالًا هِيَ اَدَقُّ فِيْ اَعْيُنِكُمْ مِنَ الشَّعْرِ كُنَّا نَعُدُّهَا عَلٰى عَهْدِ رَسُوْلِ اللّٰهِ صَلَّى اللّٰهُ عَلَيْهِ وَسَلَّمَ مِنَ الْمُوْبِقَاتِ يَعْنِي الْمُهْلِكَاتِ (بخاری)

ಹ. ಅನಸ್(ರ) (ತಮ್ಮ ಕಾಲದ ಜನರೊಂದಿಗೆ) ಹೇಳುತ್ತಾರೆ- ನೀವು ನಿಮ್ಮ ದೃಷ್ಟಿಯಲ್ಲಿ ಕೂದಲೆಳೆಗಿಂತಲೂ ಹಗುರವಾದ(ತುಚ್ಛವಾದ) ಅನೇಕ ಕೆಲಸಗಳನ್ನು ಮಾಡುತ್ತೀರಿ. ಆದರೆ ನಾವು ಪ್ರವಾದಿಯವರ(ಸ) ಕಾಲದಲ್ಲಿ ಅವುಗಳನ್ನು ಧರ್ಮ ಮತ್ತು ಈಮಾನಿಗೆ ಅಪಾಯಕಾರಿಯೆಂದು ಪರಿಗಣಿಸುತ್ತಿದ್ದೆವು. *[ಬುಖಾರಿ]*

ಟಿಪ್ಪಣಿ: ಮನುಷ್ಯನು ಸಣ್ಣ ಪಾಪಗಳನ್ನು 'ಹಗುರ'ವಾಗಿ ಭಾವಿಸಿದರೆ ಅವನು ಒಂದು ದಿನ ದೊಡ್ಡ ಪಾಪವನ್ನು ಮಾಡಿಯೂ ಅದನ್ನು ಹಗುರವೆಂದು ಭಾವಿಸುವನು ಎಂದು ಅದರ ಅರ್ಥ-

---

ಹುತಾತ್ಮನ ಪ್ರತಿಫಲ

(407) عَنْ اَبِيْ قَتَادَةَ عَنْ رَسُوْلِ اللّٰهِ صَلَّى اللّٰهُ عَلَيْهِ وَسَلَّمَ اَنَّهُ قَامَ فِيْهِمْ فَذَكَرَ لَهُمْ اَنَّ الْجِهَادَ وَالْاِيْمَانَ بِاللّٰهِ اَفْضَلُ الْاَعْمَالِ فَقَامَ رَجُلٌ فَقَالَ يَا رَسُوْلَ اللّٰهِ اَرَاَيْتَ اِنْ قُتِلْتُ فِيْ سَبِيْلِ اللّٰهِ تُكَفَّرُ عَنِّيْ خَطَايَايَ؟ فَقَالَ لَهُ رَسُوْلُ اللّٰهِ صَلَّى اللّٰهُ عَلَيْهِ وَسَلَّمَ نَعَمْ اِنْ قُتِلْتَ فِيْ سَبِيْلِ اللّٰهِ وَاَنْتَ صَابِرٌ مُحْتَسِبٌ مُقْبِلٌ غَيْرُ مُدْبِرٍ ثُمَّ قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ كَيْفَ قُلْتَ؟ اَرَاَيْتَ اِنْ قُتِلْتُ فِيْ سَبِيْلِ اللّٰهِ اَتُكَفَّرُ عَنِّيْ خَطَايَايَ فَقَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ نَعَمْ وَاَنْتَ صَابِرٌ مُحْتَسِبٌ مُقْبِلٌ غَيْرُ مُدْبِرٍ اِلَّا الدَّيْنَ فَاِنَّ جِبْرِيْلَ قَالَ لِيْ ذٰلِكَ (مسلم)

ಅಬೂಕತಾದ(ರ) ಪ್ರವಾದಿಯವರ(ಸ) ಕುರಿತು ಹೀಗೆನ್ನುತ್ತಾರೆ- ಪ್ರವಾದಿವರ್ಯರು(ಸ) ತಮ್ಮ ಉಪನ್ಯಾಸದಲ್ಲಿ, ಅಲ್ಲಾಹನ ಮೇಲೆ ಭರವಸೆ ಇಡುವುದು ಹಾಗೂ ಅವನ ಮಾರ್ಗದಲ್ಲಿ ಜಿಹಾದ್ ಮಾಡುವುದು ಅತ್ಯುತ್ತಮ ಕರ್ಮವೆಂದು ವರ್ಣಿಸಿದರು. ಆಗ ಒಬ್ಬ

ವ್ಯಕ್ತಿ ಎದ್ದು ನಿಂತು, ಅಲ್ಲಾಹನ ಸಂದೇಶವಾಹಕರೇ! ನಾನು ಅಲ್ಲಾಹನ ಮಾರ್ಗದಲ್ಲಿ ನನ್ನ ಪ್ರಾಣವನ್ನು ಅರ್ಪಿಸಿದರೆ ನನ್ನ ಗತ ಪಾಪಗಳೆಲ್ಲ ಕ್ಷಮಿಸಲ್ಪಡುವುದೇ ಎಂದು ಕೇಳಿದನು. ಪ್ರವಾದಿ(ಸ) ಹೇಳಿದರು- ಹೌದು! ನೀನು ಅಲ್ಲಾಹನ ಮಾರ್ಗದಲ್ಲಿ ಹೋರಾಡುವಾಗ ಪಲಾಯನ ಮಾಡದೆ ಶತ್ರುಗಳ ವಿರುದ್ಧ ಸ್ಥಿರಚಿತ್ತತೆಯನ್ನು ಪ್ರದರ್ಶಿಸಿದರೆ ಮತ್ತು ಅಲ್ಲಾಹನಿಂದ ಪುಣ್ಯ ಗಳಿಸುವ ಉದ್ದೇಶದಿಂದ ಹೋರಾಡುವಾಗ ವಧಿಸಲ್ಪಟ್ಟರೆ ನಿನ್ನ ಎಲ್ಲ ಪಾಪಗಳೂ ಕ್ಷಮಿಸಲ್ಪಡುವುವು. ಸ್ವಲ್ಪ ಹೊತ್ತಿನ ಬಳಿಕ ಪ್ರವಾದಿ(ಸ), ಅವನೊಂದಿಗೆ, ನೀನೀಗ ಕೇಳಿದ ಪ್ರಶ್ನೆ ಯಾವುದು ಎಂದು ಕೇಳಿದರು. ಅವನು ಹೀಗೆಂದನು- ಅಲ್ಲಾಹನ ಮಾರ್ಗದಲ್ಲಿ ಹೋರಾಡುತ್ತಾ ನಾನು ವಧಿಸಲ್ಪಟ್ಟರೆ ನನ್ನ ಗತ ಪಾಪಗಳೆಲ್ಲ ಕ್ಷಮಿಸಲ್ಪಡುವುದೇ ಎಂದು ನಾನು ಕೇಳಿದ್ದೆ. ಪ್ರವಾದಿ(ಸ) ಹೇಳಿದರು- ಹೌದು. ನೀನು ವೈರಿಗಳ ವಿರುದ್ಧ ಪಲಾಯನ ಮಾಡದೆ ಸ್ಥಿರವಾಗಿ ನಿಂತು ಅಲ್ಲಾಹನಿಂದ ಪುಣ್ಯ ಗಳಿಸುವ ಉದ್ದೇಶದಿಂದ ಹೋರಾಡಿದರೆ ನಿನ್ನ ಎಲ್ಲ ಪಾಪಗಳೂ ಕ್ಷಮಿಸಲ್ಪಡುವುವು. ಆದರೆ ನಿನ್ನ ಮೇಲೆ ಯಾರದಾದರೂ ಸಾಲವಿದ್ದರೆ ಅದು ಕ್ಷಮಿಸಲ್ಪಡಲಾರದು. ನನಗೆ ಜಿಬ್ರೀಲ್(ಅ) ಈಗಷ್ಟೆ ಅದನ್ನು ತಿಳಿಸಿದರು. [ಮುಸ್ಲಿಮ್]

ಟಿಪ್ಪಣಿ: ಪರಲೋಕದ ದೃಢ ನಂಬಿಕೆ ಒಬ್ಬನ ಮನಸ್ಸಿನಲ್ಲಿ ಮನೆ ಮಾಡಿಕೊಂಡಿತೆಂದರೆ ತನ್ನ ಗತ ಪಾಪಗಳು ಹೇಗೆ ಕ್ಷಮಿಸಲ್ಪಡುವುದು ಎಂಬ ಚಿಂತೆ ಮನುಷ್ಯನನ್ನು ಸದಾ ಕಾಡುತ್ತಿರುತ್ತದೆ.

ಈ ಹದೀಸ್‌ನಿಂದ ಜಿಹಾದ್ ಮತ್ತು ಹುತಾತ್ಮತೆಯ ಪುಣ್ಯದ ಜೊತೆಗೆ ಮನುಷ್ಯರ ಹಕ್ಕುಗಳ ಮಹತ್ವವೂ ಸ್ಪಷ್ಟವಾಗುತ್ತದೆ. ಒಬ್ಬನು ಸಾಲವನ್ನು ಮರು ಪಾವತಿ ಮಾಡುವ ಸ್ಥಿತಿಯಲ್ಲಿದ್ದೂ ಪಾವತಿಸದೆ ಅದನ್ನು ಮನ್ನಾ ಮಾಡಿಸದೆ ಇದ್ದಲ್ಲಿ ಅವನು ತನ್ನ ಪ್ರಾಣವನ್ನೇ ಅಲ್ಲಾಹನ ಮಾರ್ಗದಲ್ಲಿ ಅರ್ಪಿಸಿದರೂ ಸಾಲದ ಹೊಣೆಯಿಂದ ಪಾರಾಗುವಂತಿಲ್ಲ.

ನಮಾಝ್‌ನ ಆಧಿಕ್ಯ

(408) عَنْ رَبِيعَةَ بْنِ كَعْبٍ قَالَ كُنْتُ أَبِيتُ مَعَ رَسُولِ اللهِ ﷺ
فَأَتَيْتُهُ بِوَضُوئِهِ وَحَاجَتِهِ، فَقَالَ سَلْنِي فَقُلْتُ أَسْأَلُكَ مُرَافَقَتَكَ فِي الْجَنَّةِ، فَقَالَ
أَوَغَيْرَ ذَالِكَ؟ قُلْتُ هُوَ ذَاكَ قَالَ فَأَعِنِّي عَلَى نَفْسِكَ بِكَثْرَةِ السُّجُودِ (مسلم)

ರಬೀಅ ಬಿನ್ ಕಅಬ್ (ಪ್ರವಾದಿಯವರ(ಸ) ಸೇವಕ) ಹೇಳುತ್ತಾರೆ- ನಾನು ರಾತ್ರೆ ಹೊತ್ತು ಪ್ರವಾದಿವರ್ಯರ(ಸ) ಜೊತೆಯಲ್ಲಿರುತ್ತಿದ್ದೆ. ಅವರಿಗೆ ವುಝೂವಿಗೆ ನೀರು ತರುತ್ತಿದ್ದೆ. ಮತ್ತಿತರ ಅಗತ್ಯದ ವ್ಯವಸ್ಥೆಗಳನ್ನು ಮಾಡುತ್ತಿದ್ದೆ. ಒಂದು ದಿನ ಅವರು, 'ನೀನೇನಾದರೂ

ಕೇಳು' ಎಂದರು. ನಾನು ಹೇಳಿದೆ- ನಾನು ತಮ್ಮೊಂದಿಗೆ ಸ್ವರ್ಗದಲ್ಲಿರಬೇಕೆಂದು ಬಯಸುತ್ತೇನೆ. ಪ್ರವಾದಿ(ಸ) ಹೇಳಿದ್ದರು- ಇನ್ನೂ ಏನಾದರೂ ಕೇಳು. ನಾನು ಹೇಳಿದೆ, ಇನ್ನೇನೂ ಬೇಡ. ಆಗ ಪ್ರವಾದಿ(ಸ) ಹೇಳಿದರು- ನೀನು ಸ್ವರ್ಗದಲ್ಲಿ ನನ್ನೊಂದಿಗೆ ಇರಬೇಕೆಂದು ಬಯಸುವೆಯಾದರೆ ಹೆಚ್ಚು ಹೆಚ್ಚು ನಮಾಝ್ ಮಾಡುವ ಮೂಲಕ ನನಗೆ ಸಹಾಯ ಮಾಡು. [ಮುಸ್ಲಿಮ್]

ಟಿಪ್ಪಣಿ: ಸ್ವರ್ಗದಲ್ಲಿ ನನ್ನ ಜೊತೆಯಲ್ಲಿರಬೇಕೆಂದು ಬಯಸುವುದಾದರೆ ಪೂರ್ಣ ಉತ್ಸುಕತೆಯಿಂದ ಅಲ್ಲಾಹನ ದಾಸ್ಯ ನಿರ್ವಹಿಸು. ಹೆಚ್ಚು ಹೆಚ್ಚು ನಮಾಝ್ ಮಾಡು. ಅದರ ಹೊರತು ಸ್ವರ್ಗದಲ್ಲಿ ನನ್ನ ಜೊತೆಯಲ್ಲಿರಲು ಸಾಧ್ಯವಿಲ್ಲ.

ಇಸ್ಲಾಮ್ ಸ್ವೀಕಾರಕ್ಕೆ ಮುಂಚಿನ ಪಾಪಗಳು

(409) عَنْ عَمْرِو بْنِ الْعَاصِ قَالَ لَمَّا جَعَلَ اللّٰهُ فِي قَلْبِي الْإِسْلَامَ أَتَيْتُ النَّبِيَّ صَلَّى اللّٰهُ عَلَيْهِ وَسَلَّمَ فَقُلْتُ اُبْسُطْ يَمِينَكَ فَلْأُبَايِعُكَ فَبَسَطَ يَمِينَهُ فَقَبَضْتُ يَدِي فَقَالَ مَا لَكَ يَا عَمْرُو فَقُلْتُ أُرِيدُ أَنْ أَشْتَرِطَ فَقَالَ تَشْتَرِطُ مَاذَا؟ فَقُلْتُ أَنْ يُغْفَرَ لِي قَالَ أَمَا عَلِمْتَ أَنَّ الْإِسْلَامَ يَهْدِمُ مَا كَانَ قَبْلَهُ (بخاری)

ಅಮ್ರ್ ಬಿನ್ ಆಸ್(ರ) ಹೇಳುತ್ತಾರೆ- ಅಲ್ಲಾಹನು ನನ್ನ ಹೃದಯದಲ್ಲಿ ಇಸ್ಲಾಮ್ ಸ್ವೀಕರಿಸುವ ಭಾವನೆಯನ್ನುಂಟು ಮಾಡಿದಾಗ ನಾನು ಪ್ರವಾದಿಯವರ(ಸ) ಬಳಿಗೆ ಹೋಗಿ, ತಾವು ತಮ್ಮ ಕೈಯನ್ನು ಮುಂದೆ ಚಾಚಿರಿ, ನಾನು ತಮ್ಮ ಕೈಯಲ್ಲಿ ಬೈಅತ್(ಕರಾರು) ಮಾಡುತ್ತೇನೆ ಎಂದೆ. (ಅರ್ಥಾತ್ ಇನ್ನು ಏಕೈಕನಾದ ಅಲ್ಲಾಹನ ದಾಸ್ಯ-ಆರಾಧನೆಯನ್ನು ಮಾಡುವೆನೆಂಬ ಕರಾರು ಮಾಡುತ್ತೇನೆ). ಪ್ರವಾದಿಯವರು(ಸ) ತಮ್ಮ ಕೈಯನ್ನು ಮುಂದೆ ಚಾಚಿದಾಗ ನಾನು ನನ್ನ ಕೈಯನ್ನು ಹಿಂದಕ್ಕೆಳೆದೆ. ಪ್ರವಾದಿ(ಸ) ಕೇಳಿದರು- ಓ ಅಮ್ರ್! ನೀವೇಕೆ ನಿಮ್ಮ ಕೈಯನ್ನು ಹಿಂದಕ್ಕೆಳೆದಿರಿ? ನಾನು ಹೇಳಿದೆ- ನಾನೊಂದು ಶರತ್ತು ಹಾಕ ಬಯಸುತ್ತೇನೆ. ಅದೇನೆಂದು ಪ್ರವಾದಿ(ಸ) ಕೇಳಿದರು. ನಾನು ಹೇಳಿದೆ- ನನ್ನ ಗತಪಾಪಗಳೆಲ್ಲ ಕ್ಷಮಿಸಲ್ಪಡ ಬೇಕೆಂಬುದೇ ನನ್ನ ಶರತ್ತು. ಆಗ ಪ್ರವಾದಿ(ಸ) ಹೇಳಿದರು - "ಓ ಅಮ್ರ್! ಒಬ್ಬನು ಇಸ್ಲಾಮ್ ಸ್ವೀಕರಿಸುವುದಕ್ಕಿಂತ ಮುಂಚಿನ ಎಲ್ಲ ಪಾಪಗಳನ್ನು ಇಸ್ಲಾಮ್ ಅಳಿಸುತ್ತದೆಂದು ನಿಮಗೆ ತಿಳಿಯದೆ?" [ಬುಖಾರಿ]

ಟಿಪ್ಪಣಿ: ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಕುರ್‌ಆನ್ ಮತ್ತು ಪ್ರವಾದಿಯವರ(ಸ) ಪ್ರಚಾರವು ಮುಸ್ಲಿಮೇತರ ಬಾಂಧವರಲ್ಲಿ ಯಾವ ರೀತಿ ನಡೆಯುತ್ತಿತ್ತೆಂದರೆ ಮನುಷ್ಯನಿಗೆ ತನ್ನ ಮೋಕ್ಷದ ಚಿಂತೆ ಕಾಡುತ್ತಿತ್ತು. ಅವನಿಗೆ ತನ್ನ ಮಾತೃಧರ್ಮವು ಯಾವುದೇ ಪ್ರಯೋಜನಕ್ಕೆ ಬರಲಾರದೆಂದು ದೃಢವಾಗಿ ಮನವರಿಕೆಯಾಗುತ್ತಿತ್ತು. ಈ ಲೋಕದ ಜೀವನದ ನಂತರ ಇನ್ನೊಂದು ಜೀವನ ಬರಲಿದ್ದು ಅದಕ್ಕಾಗಿ ಚಿಂತಾಕ್ರಾಂತನಾಗಿರಬೇಕಾದುದು ಅಗತ್ಯವೆಂದು ಅವನು ಭಾವಿಸುತ್ತಿದ್ದನು.

ಶಿಕ್ಷೆಗೆ ಯಾರು ಅರ್ಹರು?

(410) عَنْ عَبْدِ اللّٰهِ بْنِ عُمَرَ رض قَالَ كُنَّا مَعَ النَّبِيِّ صَلَّى اللّٰهُ عَلَيْهِ وَسَلَّمَ فِي بَعْضِ غَزَوَاتِهِ
فَمَرَّ بِقَوْمٍ فَقَالَ مَنِ الْقَوْمُ؟ قَالُوْا نَحْنُ الْمُسْلِمُوْنَ وَامْرَأَةٌ تَحْضِبُ بِقِدْرِهَا وَمَعَهَا
ابْنٌ لَهَا فَإِذَا ارْتَفَعَ وَهَجٌ تَنَحَّتْ بِهِ فَأَتَتِ النَّبِيَّ صَلَّى اللّٰهُ عَلَيْهِ وَسَلَّمَ فَقَالَتْ أَنْتَ رَسُوْلُ اللّٰهِ
صَلَّى اللّٰهُ عَلَيْهِ وَسَلَّمَ؟ قَالَ نَعَمْ، قَالَتْ بِأَبِيْ أَنْتَ وَأُمِّيْ أَلَيْسَ اللّٰهُ أَرْحَمَ الرَّاحِمِيْنَ؟ قَالَ بَلٰى
قَالَتْ أَلَيْسَ اللّٰهُ أَرْحَمَ بِعِبَادِهِ مِنَ الْأُمِّ بِوَلَدِهَا، قَالَ بَلٰى، قَالَتْ إِنَّ الْأُمَّ لَا تُلْقِيْ وَلَدَهَا فِي
النَّارِ، فَأَكَبَّ رَسُوْلُ اللّٰهِ صَلَّى اللّٰهُ عَلَيْهِ وَسَلَّمَ يَبْكِيْ ثُمَّ رَفَعَ رَأْسَهُ إِلَيْهَا فَقَالَ إِنَّ اللّٰهَ لَا يُعَذِّبُ
مِنْ عِبَادِهِ إِلَّا الْمَارِدَ الْمُتَمَرِّدَ الَّذِيْ يَتَمَرَّدُ عَلَى اللّٰهِ وَأَبٰى أَنْ يَقُوْلَ لَا إِلٰهَ إِلَّا اللّٰهُ رشكاة

ಅಬ್ದುಲ್ಲಾ ಬಿನ್ ಉಮರ್(ರ) ಹೇಳುತ್ತಾರೆ- ಪ್ರವಾದಿಯವರೊಂದಿಗೆ(ಸ) ನಾವು ಒಂದು ಪ್ರಯಾಣದಲ್ಲಿದ್ದೆವು. ಪ್ರವಾದಿ(ಸ) ಕೆಲವು ಜನರ ಬಳಿಯಿಂದ ಹೋಗುತ್ತಿರುವಾಗ, ನೀವು ಯಾರು ಎಂದು ಕೇಳಿದರು. ಅವರು, ನಾವು ಮುಸ್ಲಿಮರು ಎಂದರು. ಅಲ್ಲಿ ಒಬ್ಬ ಸ್ತ್ರೀ ಅನ್ನ ಬೇಯಿಸುತ್ತಿದ್ದಳು. ಆಕೆ ಕಟ್ಟಿಗೆ ಹಾಕುತ್ತಾ ಬೆಂಕಿ ಉರಿಸುತ್ತಿದ್ದಳು. ಆಕೆಯ ಮಡಿಲಲ್ಲಿ ಒಂದು ಮಗು ಇತ್ತು. ಬೆಂಕಿಯ ಜ್ವಾಲೆ ಹೆಚ್ಚುತ್ತಿರುವಾಗ ಆಕೆ ಮಗುವನ್ನು ಅದರಿಂದ ದೂರ ಸರಿಸುತ್ತಿದ್ದಳು. ತರುವಾಯ ಆಕೆ ಪ್ರವಾದಿಯವರ(ಸ) ಬಳಿ ಬಂದು, 'ತಾವು ಅಲ್ಲಾಹನ ಸಂದೇಶವಾಹಕರೇ' ಎಂದು ಕೇಳಿದಳು. ಪ್ರವಾದಿ(ಸ) ಹೌದೆಂದರು. ಆಗ ಆ ಸ್ತ್ರೀ, 'ನನ್ನ ತಂದೆ-ತಾಯಿಗಳು ತಮಗೆ ಅರ್ಪಿತ' ಎನ್ನುತ್ತಾ ಅಲ್ಲಾಹನು ಸರ್ವ ಕರುಣಾಳುಗಳಿಗಿಂತ ಕರುಣಾಳುವಲ್ಲವೇ ಎಂದು ಕೇಳಿದಳು. ಪ್ರವಾದಿ(ಸ) ಹೌದು! ಖಂಡಿತವಾಗಿಯೂ! ಎಂದು ಉತ್ತರಿಸಿದರು. ಆಗ ಆಕೆ ಹೇಳಿದಳು- ಅಲ್ಲಾಹನು ತನ್ನ ದಾಸರ ಮೇಲೆ ಒಂದು

ತಾಯಿಯು ತನ್ನ ಮಗುವಿನ ಮೇಲೆ ತೋರುವುದಕ್ಕಿಂತ ಹೆಚ್ಚು ದಯೆ ತೋರುವುದಿಲ್ಲವೇ ಎಂದು ಪ್ರಶ್ನಿಸಿದಳು.

ಪ್ರವಾದಿ(ಸ) ಹೇಳಿದರು- ಹೌದು! ಅವನು ತಾಯಿಗಿಂತ ಹೆಚ್ಚು ತನ್ನ ದಾಸರ ಮೇಲೆ ದಯೆ ತೋರುವವನಾಗಿದ್ದಾನೆ... ಆಗ ಆ ಸ್ತ್ರೀ ಹೇಳಿದಳು- ಆದರೆ ತಾಯಿಯು ತನ್ನ ಮಗುವನ್ನು ಬೆಂಕಿಗೆ ಹಾಕಲು ಇಷ್ಟಪಡುವುದಿಲ್ಲವಲ್ಲ ಎಂದಳು. ಅವಳ ಮಾತನ್ನು ಕೇಳಿ ಪ್ರವಾದಿ(ಸ) ತಲೆ ತಗ್ಗಿಸಿ ಅಳತೊಡಗಿದರು. ಸ್ವಲ್ಪ ಹೊತ್ತಿನ ಬಳಿಕ ತಲೆಯೆತ್ತಿ ಆಕೆಗೆ ಹೀಗೆಂದರು- ಅಲ್ಲಾಹನು ಶಿಕ್ಷೆ ನೀಡಲಾರ. ಆದರೆ ದೇವನ ಏಕತ್ವವನ್ನು(ತೌಹೀದ್) ಅಂಗೀಕರಿಸಲು ನಿರಾಕರಿಸುವ ಗರ್ವಿಷ್ಠನನ್ನು ಹೊರತು! *[ಮಿಶ್ಕಾತ್]*

ಟಿಪ್ಪಣಿ: ಆ ಸ್ತ್ರೀ, ಮುಸ್ಲಿಮಳಾಗಿದ್ದು ಅಲ್ಲಾಹನ ದಯೆ, ಕರುಣೆ ಮತ್ತಿತರ ಗುಣಗಳನ್ನು ಅರಿತವಳಾಗಿದ್ದಳೆಂಬುದು ವ್ಯಕ್ತ. ಹಾಗಿರುವಾಗ ಆಕೆ ಈ ಪ್ರಶ್ನೆಗಳನ್ನೇಕೆ ಹಾಕಿದಳು? ಏಕೆಂದರೆ ಆಕೆಯ ಹೃದಯದಲ್ಲಿ ಪರಲೋಕದ ಚಿಂತೆ ಮನೆ ಮಾಡಿತ್ತು. ಆಕೆ ಎಲ್ಲವನ್ನೂ ಮಾಡಿಯೂ ಅಲ್ಲಾಹನ ಸ್ವರ್ಗ ಪಡೆಯಲು ಅಷ್ಟು ಸಾಲದು ಎಂದು ಅರಿತಿದ್ದಳು. ಆಕೆಗೆ ನರಕದ ಭೀತಿ ಹುಟ್ಟಿತ್ತು. ಪ್ರವಾದಿ(ಸ) ಆಕೆಗೆ ನೀಡಿದ ಉತ್ತರ ಹೀಗಿತ್ತು- ಅಲ್ಲಾಹನ ದಾಸಿಯೇ! ಯಾರು ತನ್ನ ಮುಂದೆ ಧರ್ಮ ಬಂದಿದ್ದು ಅದನ್ನು ಅಂಗೀಕರಿಸಲು ನಿರಾಕರಿಸುವವನು ನರಕಕ್ಕೆ ಹೋಗುವನು. ನೀನು ಮುಸ್ಲಿಮಳಾಗಿರುವಾಗ ಅವನು ನಿನ್ನನ್ನು ಏಕೆ ನರಕಕ್ಕೆ ಹಾಕುವನು? ಇಸ್ಲಾಮ್ ಸ್ವೀಕರಿಸಿ ಅದರ ಬೇಡಿಕೆಗಳನ್ನು ಪೂರೈಸುವವರನ್ನು ಅಲ್ಲಾಹನು ನರಕಕ್ಕೆ ಕಳಿಸಲಾರನು. ಇಂತಹ ಚಿಂತಾಕ್ರಾಂತ ಮುಸ್ಲಿಮರ ಮಟ್ಟಿಗೆ ಪ್ರವಾದಿ ವರ್ಯರದು(ಸ) ಯುಕ್ತಿಪೂರ್ಣ ಉತ್ತರವಾಗಿದೆ.

ಗುಲಾಮರ ಮೇಲೆ ಅತಿರೇಕ

(411) عَنْ عَائِشَةَ قَالَتْ جَاءَ رَجُلٌ إِلَى النَّبِيِّ صلى الله عليه وسلم فَقَالَ يَا رَسُولَ اللهِ
إِنَّ لِي مَمْلُوكِينَ يَكْذِبُونَنِي وَيَخُونُونَنِي وَيَعْصُونَنِي وَأَشْتُمُهُمْ وَأَضْرِبُهُمْ، فَكَيْفَ أَنَا مِنْهُمْ؟
فَقَالَ رَسُولُ اللهِ صلى الله عليه وسلم إِذَا كَانَ يَوْمُ الْقِيَامَةِ يُحْسَبُ مَا خَانُوكَ وَعَصَوْكَ وَ
كَذَبُوكَ فَإِنْ كَانَ عِقَابُكَ إِيَّاهُمْ بِقَدْرِ ذُنُوبِهِمْ كَانَ كَفَافًا لَا لَكَ وَلَا عَلَيْكَ وَإِنْ كَانَ
عِقَابُكَ إِيَّاهُمْ فَوْقَ ذُنُوبِهِمْ اقْتُصَّ لَهُمْ مِنْكَ الْفَضْلُ، فَتَنَحَّى الرَّجُلُ وَجَعَلَ يَهْتِفُ وَيَبْكِي،
فَقَالَ لَهُ رَسُولُ اللهِ صلى الله عليه وسلم أَمَا تَقْرَأُ قَوْلَ اللهِ تَعَالَى وَنَضَعُ الْمَوَازِينَ الْقِسْطَ
لِيَوْمِ الْقِيَامَةِ فَلَا تُظْلَمُ نَفْسٌ شَيْئًا وَإِنْ كَانَ مِثْلَ حَبَّةٍ مِنْ خَرْدَلٍ أَتَيْنَا بِهَا وَكَفَى بِنَا
حَاسِبِينَ، فَقَالَ الرَّجُلُ مَا أَجِدُ لِي وَلِهَؤُلَاءِ شَيْئًا خَيْرًا مِنْ مُفَارَقَتِهِمْ أُشْهِدُكَ
أَنَّهُمْ كُلَّهُمْ أَحْرَارٌ (ترمذی)

ಆಯಿಶಾ(ರ) ಹೇಳುತ್ತಾರೆ- ಪ್ರವಾದಿಯವರ(ಸ) ಬಳಿಗೆ ಒಬ್ಬ ವ್ಯಕ್ತಿ ಬಂದು, ಅಲ್ಲಾಹನ ಸಂದೇಶವಾಹಕರೇ! ನನ್ನ ಕೆಲವು ಗುಲಾಮರು ನನ್ನೊಂದಿಗೆ ಸುಳ್ಳು ಹೇಳುತ್ತಾರೆ, ಅಮಾನತ್ತಿನಲ್ಲಿ ವಂಚನೆ ಮಾಡುತ್ತಾರೆ ಮತ್ತು ನನ್ನ ಆಜ್ಞೆಗಳನ್ನು ಉಲ್ಲಂಘಿಸುತ್ತಾರೆ, ನಾನು ಅವರನ್ನು ಬೈಯುತ್ತೇನೆ ಮತ್ತು ಹೊಡೆಯುತ್ತೇನೆ. ಇದರಿಂದ ನನಗೆ ಏನಾಗಬಹುದು ಎಂದು ಕೇಳಿದರು.

ಪ್ರವಾದಿ(ಸ) ಹೇಳಿದರು- ಕಿಯಾಮತ್ (ಅಂತ್ಯ) ದಿನ ಬಂದಾಗ ಅವರ ಸುಳ್ಳು, ವಂಚನೆ ಮತ್ತು ಆಜ್ಞೋಲ್ಲಂಘನೆಗಳ ಹಾಗೂ ನೀನು ನೀಡಿದ ಶಿಕ್ಷೆಗಳ ವಿಚಾರಣೆ ನಡೆಸಲಾಗುವುದು. ನಿನ್ನ ಶಿಕ್ಷೆಯು ಅವರ ಅಪರಾಧಗಳಿಗಿಂತ ಕಡಿಮೆಯಾದರೆ ಅದು ನಿನ್ನ ಮಟ್ಟಿಗೆ ಅನುಗ್ರಹವಾಗಿರುವುದು. ಆದರೆ ನಿನ್ನ ಶಿಕ್ಷೆ ಅವರ ಅಪರಾಧಗಳಿಗಿಂತ ಹೆಚ್ಚೆಂದು ಕಂಡುಬಂದರೆ ಆ ಹೆಚ್ಚುವರಿ ಪ್ರಮಾಣದ ಪ್ರತೀಕಾರವನ್ನು ನಿನ್ನಿಂದ ಪಡೆಯಲಾಗುವುದು- ಇದನ್ನು ಕೇಳಿ ಆ ವ್ಯಕ್ತಿ ಒಂದು ಮೂಲೆಯಲ್ಲಿ ಕುಳಿತು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದನು. ತರುವಾಯ ಪ್ರವಾದಿಯವರು(ಸ) ಅವನನ್ನುದ್ದೇಶಿಸಿ ಹೀಗೆಂದರು- ನೀನು ಅಲ್ಲಾಹನು ಕುರ್‌ಆನಿನಲ್ಲಿ ಹೇಳಿರುವ ಈ ಮಾತನ್ನು ಕೇಳಲಿಲ್ಲವೇ? "ನಾವು ನಿರ್ಣಾಯಕ ದಿನದಂದು ನ್ಯಾಯದ ತಕ್ಕಡಿಯಲ್ಲಿ ಪ್ರತಿಯೊಬ್ಬನ ಕರ್ಮವನ್ನು ತೂಗುವೆವು. ಯಾರ ತೂಕದಲ್ಲೂ ಯಾವುದೇ ಅನ್ಯಾಯವಾಗದು. ಅಣುಗಾತ್ರದಷ್ಟು ಕೆಟ್ಟ ಅಥವಾ ಉತ್ತಮ ಕರ್ಮ ಯಾರದೇ

ಕರ್ಮಪತ್ರದಲ್ಲಿದ್ದರೆ ನಾವು ಅದನ್ನು ಮುಂದೆ ತರುವೆವು. ಲೆಕ್ಕ ಪಡೆಯಲು ನಾವೇ ಸಾಕು." ಆಗ ಆ ವ್ಯಕ್ತಿ ಹೇಳಿದನು- "ಈಗ ನಾನು ಆ ಗುಲಾಮರಿಂದ ಬೇರ್ಪಡುವುದೇ ನನ್ನ ಪಾಲಿಗೆ ಉತ್ತಮವೆಂದು ಭಾವಿಸುತ್ತೇನೆ. ಅಲ್ಲಾಹನ ಸಂದೇಶವಾಹಕರೇ! ತಾವು ಸಾಕ್ಷಿಯಾಗಿರಿ. ನಾನು ಅವರೆಲ್ಲರನ್ನೂ ಸ್ವತಂತ್ರಗೊಳಿಸಿದ್ದೇನೆ." *[ತಿರ್ಮಿದಿ]*

ಟಿಪ್ಪಣಿ: ಈ ಲೋಕದಲ್ಲಿ ಬಹಳಷ್ಟು ಮಂದಿ ತಮ್ಮ ಗುಲಾಮರನ್ನೂ ಸೇವಕರನ್ನೂ ಹೊಡೆಯುತ್ತಾರೆ. ಹಾಗಿರುವಾಗ ಈ ವ್ಯಕ್ತಿ ಪ್ರವಾದಿಯವರ(ಸ) ಬಳಿಗೆ ಬಂದುದೇಕೆ ಮತ್ತು ನನಗೆ ಇದರಿಂದ ಏನಾಗಬಹುದು ಎಂದು ಕೇಳಿದ್ದೇಕೆ? ಒಂದು ವೇಳೆ ಆ ವ್ಯಕ್ತಿಯ ಮನಸ್ಸಿನಲ್ಲಿ ಪರಲೋಕದ ಚಿಂತೆಯಿಲ್ಲದಿರುತ್ತಿದ್ದರೆ ಈ ಪ್ರಶ್ನೆಯೇ ಅವನ ಮನಸ್ಸಿನಲ್ಲಿ ಮೂಡುತ್ತಿರಲಿಲ್ಲ. ಇನ್ನು ಅವನು ಪ್ರವಾದಿಯವರ(ಸ) ಮಾತನ್ನು ಕೇಳಿ ಬಿಕ್ಕಿ ಬಿಕ್ಕಿ ಅಳುವುದನ್ನು ಗಮನಿಸಿರಿ. ಅತ್ತ ಬಳಿಕ ಅವನು ತನ್ನ ಗುಲಾಮರನ್ನು ಸ್ವತಂತ್ರಗೊಳಿಸುತ್ತಾನೆ. ಅವರ ಮೇಲೆ ತಾನು ಮಾಡುತ್ತಿದ್ದ ಅತಿರೇಕಗಳಿಗೆ ತನ್ನ ಈ ಕರ್ಮವು ಪ್ರಾಯಶ್ಚಿತ್ತವಾಗಲೆಂದು ಅವನು ಭಾವಿಸುತ್ತಾನೆ.

ಖುಬೈಬ್‌ರ(ರ) ಕುರಿತು ವೈರಿಯ ಸಾಕ್ಷ್ಯ

(412) عَنْ اَبِىْ هُرَيْرَةَ رض .... فَلَبِثَ عِنْدَهُمْ اَسِيْرًا حَتّٰى اَجْمَعُوْا عَلٰى قَتْلِهٖ فَاسْتَعَارَ مِنْ بَعْضِ بَنَاتِ الْحَارِثِ مُوْسٰى يَسْتَحِدُّ بِهَا فَاَعَارَتْهُ، فَدَرَجَ بُنَىٌّ لَهَا وَهِىَ غَافِلَةٌ حَتّٰى اَتَاهُ فَوَجَدَتْهُ مُجْلِسَهٗ عَلٰى فَخِذِهٖ وَالْمُوْسٰى بِيَدِهٖ فَفَزِعَتْ فَزْعَةً عَرَفَهَا خُبَيْبٌ فَقَالَ اَتَخْشَيْنَ اَنْ اَقْتُلَهٗ مَا كُنْتُ اَفْعَلُ ذَالِكَ قَالَتْ وَاللّٰهِ مَا رَاَيْتُ اَسِيْرًا خَيْرًا مِنْ خُبَيْبٍ (بخارى)

ಅಬೂ ಹುರೈರಾ(ರ) ವರದಿ ಮಾಡುತ್ತಾರೆ- ...ಖುಬೈಬ್(ರ), ಹಾರಿಸ ಗೋತ್ರದವರಲ್ಲಿ ಸೆರೆಯಾಳಾಗಿದ್ದರು. ಅವರು ಅವರನ್ನು ವಧಿಸುವ ತೀರ್ಮಾನ ಮಾಡಿದರು. (ಏಕೆಂದರೆ ಖುಬೈಬ್‌ರು(ರ) ಬದ್ರ್ ಯುದ್ಧದಲ್ಲಿ ಹಾರಿಸರನ್ನು ವಧಿಸಿದ್ದರು) ಖುಬೈಬ್‌ರಿಗೆ(ರ) ಇದು ಗೊತ್ತಾದಾಗ ತನ್ನ ನಾಭಿಯ ಕೆಳಗಿನ ರೋಮವನ್ನು ಕೀಳಲಿಕ್ಕಾಗಿ ಹಾರಿಸರ ಓರ್ವ ಪುತ್ರಿಯೊಂದಿಗೆ ಅಲಗು ತರಿಸಿದರು. ಆಕೆ ಅಲಗು ತಂದು ಕೊಟ್ಟಳು. ಅಷ್ಟರಲ್ಲಿ ಆಕೆಯ ಮಗು ಅವರ ಬಳಿಗೆ ಹೋಯಿತು. ಆಕೆ ಯಾವುದೋ ಕೆಲಸದಲ್ಲಿ ನಿರತಳಾಗಿದ್ದಳು. ಮಗು ಹೋಗುವುದನ್ನು ಅವಳು ಗಮನಿಸಿರಲಿಲ್ಲ. ಖುಬೈಬರು ಆ ಮಗುವನ್ನು ಪ್ರೀತಿಯಿಂದ ತನ್ನ ತೊಡೆಯ ಮೇಲೆ ಕುಳ್ಳಿರಿಸಿದರು. ಅವಳು ಅದನ್ನು ಕಂಡಾಗ, ಈ ಕೈದಿಯು ತನ್ನ ಮಗುವನ್ನು

ಕೊಂದು ಹಾಕುವನೆಂದು ಹೆದರಿದಳು. ಹ. ಖುಬೈಬ್‌ರಿಗೆ ಇದು ತಿಳಿಯಿತು. ಅವರು ಹೀಗೆಂದರು- ನಾನೀ ಮಗುವನ್ನು ಕೊಂದು ಹಾಕಿ ಬಿಡುವೆನೆಂದು ಹೆದರುತ್ತೀಯಾ? ಖಂಡಿತ ಇಲ್ಲ. (ಯಾಕೆಂದರೆ ಇಸ್ಲಾಮ್ ಮಕ್ಕಳನ್ನು ವಧಿಸುವುದನ್ನು ನಿಷೇಧಿಸಿದೆ.) ಆ ಸ್ತ್ರೀ ಹೇಳುತ್ತಾಳೆ- ನಾನು ಖುಬೈಬ್‌ರಿಗಿಂತ ಉತ್ತಮ ಚಾರಿತ್ರ್ಯವಂತ ಕೈದಿಯನ್ನು ಕಂಡಿಲ್ಲ.

[ಬುಖಾರಿ]

ಟಿಪ್ಪಣಿ: ಇದು ಸುದೀರ್ಘ ಹದೀಸೊಂದರ ಒಂದು ಭಾಗವಾಗಿದ್ದು ಅದರಲ್ಲಿ ಹ. ಖುಬೈಬ್‌ರ(ರ) ಸೆರೆ ಮತ್ತು ಅವರನ್ನು ವಧಿಸುವ ಘಟನೆಯನ್ನು ವಿವರಿಸಲಾಗಿದೆ. ತನ್ನನ್ನು ಬೆಳಿಗ್ಗೆ ಅಥವಾ ಸಂಜೆ ವಧಿಸಲಾದೀತೆಂದು ಖುಬೈಬ್‌ರಿಗೆ ಚೆನ್ನಾಗಿ ತಿಳಿದಿತ್ತು. ಇಂತಹ ಸನ್ನಿವೇಶದಲ್ಲಿ ವೈರಿಯ ಮಗು ಹತ್ತಿರ ಬಂದಾಗ ಅದನ್ನು ಬಹಳ ಸುಲಭದಲ್ಲಿ ಕೊಲ್ಲಬಹುದಾಗಿತ್ತು. ಆದರೆ ಅವರು ಅದರ ತಾಯಿಗೆ ತಾನು ಅದನ್ನು ಕೊಲ್ಲಲಾರೆ- ಹೆದರಬೇಡ. ಏಕೆಂದರೆ ತಾನು ಯಾವ ಧರ್ಮವನ್ನು ನಂಬುತ್ತಿದ್ದೇನೋ ಅದು ವೈರಿಗಳ ಮಕ್ಕಳನ್ನು ವಧಿಸಲು ಅನುಮತಿಸುವುದಿಲ್ಲ ಎಂದು ಸಾಂತ್ವನ ನೀಡುತ್ತಾರೆ. ತಾನು ಖುಬೈಬ್‌ರಂತಹ ಉತ್ತಮ ಚಾರಿತ್ರ್ಯವಂತ ಕೈದಿಯನ್ನು ನೋಡಿಲ್ಲ ಎಂದು ಆ ಸ್ತ್ರೀಯೂ ಸತ್ಯವನ್ನೇ ಹೇಳಿದ್ದಾಳೆ. ಹ. ಖುಬೈಬ್‌ರನ್ನು ಜನರು ವಧಿಸಲು ಕೊಂಡು ಹೋಗುವಾಗ ಅವರು ರೋದಿಸಲಿಲ್ಲ, ಗಾಬರಿಗೊಳ್ಳಲಿಲ್ಲ. ಅವರು ಇಷ್ಟೇ ಹೇಳಿದರು- "ನನ್ನನ್ನು ಈಮಾನ್ ಮತ್ತು ಇಸ್ಲಾಮ್‌ನ ಸ್ಥಿತಿಯಲ್ಲಿ ವಧಿಸಲಾಗುವುದಾದರೆ ಯಾವ ಮಗ್ಗುಲಿನಿಂದ ಜೀವ ತೆರುತ್ತಿದ್ದೇನೆ ಎಂಬ ಚಿಂತೆ ನನಗಿಲ್ಲ. ನನ್ನೊಂದಿಗೆ ಏನೆಲ್ಲ ನಡೆಯುತ್ತಿದೆಯೋ ಅದು ಅಲ್ಲಾಹನ ಸಂಪ್ರೀತಿಗಾಗಿ ಮತ್ತು ಅವನ ಧರ್ಮಕ್ಕಾಗಿ ನಡೆಯುತ್ತಿದೆ. ನನ್ನ ಶರೀರವನ್ನು ಎಷ್ಟು ತುಂಡು ಮಾಡಲಾದೀತೆಂಬ ಚಿಂತೆಯೂ ನನಗಿಲ್ಲ."

ಸುಫ್ಫದವರ ಸ್ಥಿತಿ

(413) عَنْ اَبِىْ هُرَيْرَةَ ؓ قَالَ لَقَدْ رَأَيْتُ سَبْعِيْنَ مِنْ اَهْلِ الصُّفَّةِ مَا مِنْهُمْ
رَجُلٌ عَلَيْهِ رِدَاءٌ، اِمَّا اِزَارٌ وَاِمَّا كِسَاءٌ قَدْ رَبَطُوْا فِىْ اَعْنَاقِهِمْ، فَمِنْهَا مَا يَبْلُغُ نِصْفَ السَّاقَيْنِ
وَمِنْهَا مَا يَبْلُغُ الْكَعْبَيْنِ فَيَجْمَعُهٗ بِيَدِهٖ كَرَاهِيَةَ اَنْ تُبْدُوَ عَوْرَتُهٗ ‹ (بخارى)

ಹ. ಅಬೂ ಹುರೈರಾ(ರ) ಹೇಳುತ್ತಾರೆ- ಸುಫ್ಫ(ಮೊಗಸಾಲೆ)ದವರ ಪೈಕಿ ಎಪ್ಪತ್ತು ಮಂದಿಗೆ (ಇಡೀ ಶರೀರವನ್ನು ಮುಚ್ಚಲು) ಚದ್ದರವಿರಲಿಲ್ಲ. ಕೇವಲ ಒಂದು ಲುಂಗಿ ಅಥವಾ ಕಂಬಳಿಯಿದ್ದು ಅದನ್ನು ಅವರು ಕುತ್ತಿಗೆಗೆ ಕಟ್ಟುತ್ತಿದ್ದರು. ಅದು ಕೆಲವರ ಹಿಮ್ಮಡಿಯವರೆಗೆ ತಲಪುತ್ತಿದ್ದರೆ ಇನ್ನು ಕೆಲವರ ಮಣಿಗಂಟಿನ ವರೆಗೆ ತಲಪುತ್ತಿತ್ತು. ತಮ್ಮ ಲಜ್ಜಾಂಗಗಳು ಪ್ರಕಟವಾಗದಿರಲೆಂದು ಅವರು ಅದನ್ನು ತಮ್ಮ ಕೈಗಳಿಂದ ಸಾವರಿಸಿ ಹಿಡಿಯುತ್ತಿದ್ದರು.

[ಬುಖಾರಿ]

ಹ. ಮುಸ್‌ಅಬ್ ಬಿನ್ ಉಮೈರರ(ರ) ಪರಿಸ್ಥಿತಿ

(414) عَنْ خَبَّابِ بْنِ الْأَرَتِّ قَالَ هَاجَرْنَا مَعَ رَسُوْلِ اللّٰهِ صَلَّى اللّٰهُ عَلَيْهِ وَسَلَّمَ
نَلْتَمِسُ وَجْهَ اللّٰهِ تَعَالٰى فَوَقَعَ اَجْرُنَا عَلَى اللّٰهِ، فَمِنَّا مَنْ مَاتَ لَمْ يَاْكُلْ مِنْ اَجْرِهٖ شَيْئًا،
مِنْهُمْ مُصْعَبُ بْنُ عُمَيْرٍ، قُتِلَ يَوْمَ اُحُدٍ وَتَرَكَ نَمِرَةً. فَكُنَّا اِذَا غَطَّيْنَا رَاسَهٗ بَدَتْ
رِجْلَاهُ وَاِذَا غَطَّيْنَا رِجْلَيْهِ بَدَا رَاْسُهٗ، فَاَمَرَنَا رَسُوْلُ اللّٰهِ صَلَّى اللّٰهُ عَلَيْهِ وَسَلَّمَ
اَنْ نُغَطِّيَ رَاْسَهٗ وَنَجْعَلَ عَلٰى رِجْلَيْهِ شَيْئًا مِّنَ الْاِذْخِرِ، وَمِنَّا مَنْ اَيْنَعَتْ لَهٗ
ثَمَرَتُهٗ فَهُوَ يَهْدِبُهَا. (بخاری مسلم)

ಖಬ್ಬಾಬ್ ಬಿನ್ ಅರತ್(ರ) ಹೇಳುತ್ತಾರೆ- ನಾವು ಅಲ್ಲಾಹನ ಸಂಪ್ರೀತಿಗಾಗಿ ಮಕ್ಕಾದಿಂದ ಪ್ರವಾದಿಯವರೊಂದಿಗೆ(ಸ) ಮದೀನಾಕ್ಕೆ ವಲಸೆ ಹೋದೆವು. ನಮ್ಮಲ್ಲಿ ಕೆಲವರು ಮರಣ ಹೊಂದಿದರು. ಅವರಿಗೆ ಲೌಕಿಕ ಸುಖ ಸೌಕರ್ಯಗಳೊಂದೂ ಲಭ್ಯವಾಗಲಿಲ್ಲ. ಅಂತಹವರ ಪೈಕಿ ಮುಸ್‌ಅಬ್ ಬಿನ್ ಉಮೈರ್(ರ) ಒಬ್ಬರು. ಅವರು ಉಹುದ್ ಯುದ್ಧದಲ್ಲಿ ಹುತಾತ್ಮರಾದರು. ಅವರ ಶರೀರದಲ್ಲಿ ಒಂದು ದಪ್ಪ ಕಂಬಳಿಯ ಹೊರತು ಇನ್ನೇನೂ ಇರಲಿಲ್ಲ. ಅವರಿಗೆ ಕಫನ್ ಆಗಿ ಅದನ್ನೇ ತೊಡಿಸಲಾಯಿತು. ಆದರೆ ಅದರಿಂದ ಅವರ ತಲೆ ಮುಚ್ಚಿದರೆ ಕಾಲು ತೆರೆಯುತ್ತಿತ್ತು. ಕಾಲು ಮುಚ್ಚಿದರೆ ತಲೆ ತೆರೆಯುತ್ತಿತ್ತು. ಆಗ ಪ್ರವಾದಿಯವರು(ಸ) ಹೀಗೆಂದರು- ಕಂಬಳಿಯಿಂದ ತಲೆಯ ಭಾಗವನ್ನು ಮುಚ್ಚಿರಿ ಮತ್ತು ಕಾಲಿನ ಭಾಗವನ್ನು 'ಇದ್‌ಖಿರ್'(ಒಂದು ಬಗೆಯ ಹುಲ್ಲು)ನಿಂದ ಮುಚ್ಚಿರಿ. ಅಲ್ಲಾಹನಿಗಾಗಿ ಹಿಜ್ರತ್ ಮಾಡುವವರ ಪೈಕಿ ಕೆಲವರಿಗೆ ಧರ್ಮಕ್ಕಾಗಿ ತ್ಯಾಗ ಮಾಡಿದುದರ ಪ್ರತಿಫಲ ಈ ಲೋಕದಲ್ಲೂ ಸಿಕ್ಕಿತು. ಅವರು ಅದರಿಂದ ಪ್ರಯೋಜನ ಪಡೆಯುತ್ತಿದ್ದಾರೆ. *[ಬುಖಾರಿ, ಮುಸ್ಲಿಮ್]*

ಟಿಪ್ಪಣಿ: ಹ. ಮುಸ್‌ಅಬ್ ಬಿನ್ ಉಮೈರ್(ರ) ಮಕ್ಕಾದ ಅತ್ಯಂತ ಸಂಪನ್ನ ಕುಟುಂಬದ ಕಣ್ಮಣಿಯಾಗಿದ್ದರು. ಅವರ ಜೀವನ ಐಶಾರಾಮದ ಜೀವನವಾಗಿತ್ತು. ಸವಾರಿಗಾಗಿ ಅತ್ಯುತ್ತಮ ಕುದುರೆಗಳಿದ್ದು ಬೆಳಗ್ಗಿನ ಸವಾರಿಗೆ ಬೇರೆ, ಸಂಜೆಯ ಸವಾರಿಗೆ ಬೇರೆಯಾಗಿರುತ್ತಿತ್ತು. ಅವರು ಅತ್ಯಂತ ಬೆಲೆಬಾಳುವ ಬಟ್ಟೆ ಧರಿಸುತ್ತಿದ್ದರು. ದಿನಕ್ಕೆ ಅನೇಕ ಬಾರಿ ಬಟ್ಟೆ ಬದಲಾಯಿಸುತ್ತಿದ್ದರು. ಆದರೆ ಪ್ರವಾದಿವರ್ಯರ(ಸ) ಸಂದೇಶದ ಸತ್ಯತೆಯನ್ನು ಅವರು ಮನಗಂಡಾಗ ಅದನ್ನು ಸ್ವೀಕರಿಸಲು ಹಿಂದೆ ಮುಂದೆ ನೋಡಲಿಲ್ಲ. ಅದರ ಪರಿಣಾಮವೇನಾಗಬಹುದೆಂಬುದನ್ನು ಯೋಚಿಸಲಿಲ್ಲ. ಯಾಕೆಂದರೆ ಇಸ್ಲಾಮ್ ಸ್ವೀಕರಿಸುವವರ ಮೇಲೆ ಏನೆಲ್ಲ ಎರಗುತ್ತದೆಂಬುದು ಅವರ ಕಣ್ಣ ಮುಂದೆ ಇತ್ತು.- ಅವರ ಹಿಂದಿನ

ಜೀವನ ಮತ್ತು ಇಸ್ಲಾಮ್ ಸ್ವೀಕರಿಸಿದ ನಂತರದ ಜೀವನವನ್ನು ಜ್ಞಾಪಿಸಿ ಪ್ರವಾದಿ(ಸ) ಅವರ ಕಣ್ಣುಗಳಿಂದ ಅಶ್ರುಧಾರೆ ಹರಿಯುತ್ತಿತ್ತು. ಆದರೆ ಮುಸ್‌ಅಬ್‌ರಿಗೆ ತಮ್ಮ ಗತಕಾಲದ ಜೀವನದ ನೆನಪಾಗಲಿ. ಅವರ ಬಾಯಿಯಿಂದ ಒಂದು ನಿರಾಶೆಯ ಮಾತಾಗಲಿ ಎಂದೂ ಹೊರಡಲಿಲ್ಲ.

ಬಡತನದಲ್ಲೂ ಅತಿಥಿ ಸತ್ಕಾರ

(415) جَاءَ رَجُلٌ إِلَى النَّبِيِّ صَلَّى اللهُ عَلَيْهِ وَسَلَّمَ فَقَالَ إِنِّي مَجْهُودٌ، فَأَرْسَلَ إِلَى بَعْضِ نِسَائِهِ فَقَالَتْ وَالَّذِي بَعَثَكَ بِالْحَقِّ مَا عِنْدِي إِلَّا مَاءٌ ثُمَّ أَرْسَلَ إِلَى أُخْرَى، فَقَالَتْ مِثْلَ ذٰلِكَ حَتّٰى قُلْنَ كُلُّهُنَّ مِثْلَ ذٰلِكَ، لَا وَالَّذِي بَعَثَكَ بِالْحَقِّ مَا عِنْدِي إِلَّا مَاءٌ، فَقَالَ مَنْ يُضِيفُ هٰذِهِ اللَّيْلَةَ؟ فَقَالَ رَجُلٌ مِنَ الْأَنْصَارِ أَنَا يَا رَسُولَ اللهِ فَانْطَلَقَ بِهِ إِلَى رَحْلِهِ فَقَالَ لِامْرَأَتِهِ أَكْرِمِي ضَيْفَ رَسُولِ اللهِ صَلَّى اللهُ عَلَيْهِ وَسَلَّمَ وَفِي رِوَايَةٍ قَالَ لِامْرَأَتِهِ هَلْ عِنْدَكِ شَيْءٌ؟ قَالَتْ لَا إِلَّا قُوتُ صِبْيَانِنَا قَالَ فَعَلِّلِيهِمْ بِشَيْءٍ وَإِذَا أَرَادُوا الْعَشَاءَ فَنَوِّمِيهِمْ، وَإِذَا دَخَلَ ضَيْفُنَا فَأَطْفِئِي السِّرَاجَ وَأَرِيهِ أَنَّا نَأْكُلُ فَقَعَدُوا وَأَكَلَ الضَّيْفُ وَبَاتَا طَاوِيَيْنِ فَلَمَّا أَصْبَحَ غَدَا عَلَى النَّبِيِّ صَلَّى اللهُ عَلَيْهِ وَسَلَّمَ فَقَالَ لَقَدْ عَجِبَ اللهُ مِنْ صَنِيعِكُمَا بِضَيْفِكُمَا اللَّيْلَةَ۔ (بخاری ومسلم ۔ ابوہریرہ رض)

ಪ್ರವಾದಿಯವರ(ಸ) ಬಳಿಗೆ ಒಬ್ಬ ವ್ಯಕ್ತಿ ಬಂದು, 'ನಾನು ಹಸಿವು-ಬಡತನದಿಂದ ಕಂಗಾಲಾಗಿದ್ದೇನೆ' ಎಂದರು. ಆಗ ಪ್ರವಾದಿ(ಸ) ಒಬ್ಬರನ್ನು ತಮ್ಮ ಓರ್ವ ಪತ್ನಿಯ ಬಳಿಗೆ ಕಳಿಸಿದರು. ಅವರು, ಇಲ್ಲಿ ನೀರಿನ ಹೊರತು ಇನ್ನೇನೂ ಇಲ್ಲವೆಂದು ಹೇಳಿ ಕಳಿಸಿದರು. ಅವರು ಇನ್ನೋರ್ವ ಪತ್ನಿಯ ಬಳಿಗೆ ಕಳಿಸಿದರು. ಅಲ್ಲಿಂದಲೂ ಇದೇ ಉತ್ತರ ಬಂತು. ಹೀಗೆ ಎಲ್ಲ ಪತ್ನಿಯರಿಂದಲೂ "ತಮ್ಮನ್ನು ಸತ್ಯದೊಂದಿಗೆ ಪ್ರವಾದಿಯಾಗಿ ಕಳಿಸಿದವನಾಣೆ! ನಮ್ಮ ಬಳಿ ನೀರಿನ ಹೊರತು ಬೇರೇನೂ ಇಲ್ಲ ಎಂಬ ಒಂದೇ ಉತ್ತರ ಬಂತು. ಕೊನೆಗೆ ಪ್ರವಾದಿಯವರು(ಸ) ಜನರೊಡನೆ, ಇಂದು ರಾತ್ರೆ ಈ ಅತಿಥಿಗೆ ಯಾರು ಉಣಿಸುತ್ತಾರೆ ಎಂದು ಕೇಳಿದರು. ಆಗ ಅನ್ಸಾರರ(ಮದೀನಾದವರ) ಪೈಕಿ ಒಬ್ಬರು- ಅಲ್ಲಾಹನ ಸಂದೇಶವಾಹಕರೇ!

ನಾನು ಉಣಿಸುವೆನು ಎಂದರು. ತರುವಾಯ ಅತಿಥಿಯನ್ನು ತಮ್ಮ ಮನೆಗೆ ಕರೆದೊಯ್ದು ತಮ್ಮ ಪತ್ನಿಯೊಂದಿಗೆ ಇವರು ಪ್ರವಾದಿವರ್ಯರ(ಸ) ಅತಿಥಿ. ಇವರನ್ನು ಸತ್ಕರಿಸಲು ನಿನ್ನ ಬಳಿ ಏನಿದೆ ಎಂದು ಕೇಳಿದರು. ಅವರು ಹೀಗೆಂದರು- "ಏನೂ ಇಲ್ಲ. ಕೇವಲ ಮಕ್ಕಳ ಆಹಾರವಿದೆ. ಅವರು ಇನ್ನೂ ಊಟ ಮಾಡಿಲ್ಲ." ಆ ಅನ್ಸಾರನು, ಮಕ್ಕಳಿಗೇನಾದರೂ ಕೊಟ್ಟು ಪುಸಲಾಯಿಸು. ಅವರು ಊಟ ಕೇಳಿದರೆ ಬೆನ್ನು ತಟ್ಟಿ ಅವರನ್ನು ಮಲಗಿಸು ಮತ್ತು ಅತಿಥಿ ಊಟ ಮಾಡಲೆಂದು ಒಳಗೆ ಬರುವಾಗ ದೀಪ ನಂದಿಸಿ, ನಾವೂ ಅತಿಥಿಯ ಜೊತೆ ಊಟ ಮಾಡುತ್ತಿದ್ದೇವೆ ಎಂಬಂತೆ ನಟಿಸಬೇಕು ಎಂದರು. ಅಂತೆಯೇ ಮೂವರೂ ಊಟ ಮಾಡಲು ಕುಳಿತರು. ಅತಿಥಿಯು ಹೊಟ್ಟೆ ತುಂಬ ತಿಂದರು. ಆದರೆ ಈ ಇಬ್ಬರು ಹಸಿವೆ ಯಿಂದಲೇ ರಾತ್ರಿ ಕಳೆದರು. ಬೆಳಿಗ್ಗೆ ಪ್ರವಾದಿಯವರ(ಸ) ಬಳಿಗೆ ಹೋದಾಗ ಪ್ರವಾದಿ(ಸ) ಹೇಳಿದರು- ನೀವಿಬ್ಬರೂ ಅತಿಥಿಯೊಂದಿಗೆ ವ್ಯವಹರಿಸಿದ ರೀತಿಯನ್ನು ಅಲ್ಲಾಹನು ತುಂಬಾ ಮೆಚ್ಚಿರುವನು. *[ಬುಖಾರಿ, ಮುಸ್ಲಿಮ್- ವರದಿ: ಅಬೂ ಹುರೈರಾ(ರ)]*

ಟಿಪ್ಪಣಿ: ಬಂದ ವ್ಯಕ್ತಿ ಹಸಿವಿನಿಂದ ಕಂಗಾಲಾಗಿದ್ದ. ಆದುದರಿಂದ ಅವನಿಗೆ ಮಕ್ಕಳಿಗಿಂತ ಅಧಿಕ ಪ್ರಾಶಸ್ತ್ಯ ನೀಡಲಾಯಿತು. ಏಕೆಂದರೆ ಮಕ್ಕಳಿಗೆ ಸ್ವಲ್ಪ ಕೊಟ್ಟು ಪುಸಲಾಯಿಸಲಾಗಿತ್ತು. ಹೊಟ್ಟೆ ತುಂಬ ಊಟ ಮಾಡದಿದ್ದರೆ ಬೆಳಗಾಗುವುದರೊಳಗೆ ಮಕ್ಕಳೇನೂ ಸಾಯುತ್ತಿರಲಿಲ್ಲ. ಆದುದರಿಂದ ಅತಿಥಿಗೆ ಪ್ರಾಶಸ್ತ್ಯ ನೀಡಬೇಕಾದುದು ಅಗತ್ಯವಾಗಿತ್ತು. ಆದರೆ ತ್ಯಾಗ ಬಲಿದಾನಗಳನ್ನು ಮಾಡುವ ಗುಣವಿರುವವರು ಮಾತ್ರ ಇಂತಹ ಕಾರ್ಯ ಮಾಡಬಲ್ಲರು. ಈ ನಿಟ್ಟಿನಲ್ಲಿ ಮೇಲಿನ ಘಟನೆಯು ತ್ಯಾಗದ ಅತ್ಯುತ್ತಮ ಮಾದರಿಯಾಗಿದೆ. ಮನುಷ್ಯನ ಬಳಿ ತನ್ನ ಅಗತ್ಯದಷ್ಟು ಮಾತ್ರ ಊಟವಿದೆ. ಆದರೂ ತನಗಿಂತ ಹೆಚ್ಚು ಅಗತ್ಯವಿರುವವರ ಬಗ್ಗೆ ಚಿಂತಿಸುತ್ತಾರೆ. ಸ್ವತಃ ಹಸಿವಿನಿಂದಿದ್ದು ಬಡ ಹಸಿದವನಿಗೆ ಉಣಬಡಿಸುತ್ತಾರೆ.

ಅಲ್ಲಾಹನ ಮಾರ್ಗದ ವೆಚ್ಚ ಮತ್ತು ದಿಕ್ರ್

(416) إِنَّ فُقَرَاءَ الْمُهَاجِرِينَ أَتَوْا رَسُولَ اللّٰهِ صَلَّى اللّٰهُ عَلَيْهِ وَسَلَّمَ فَقَالُوا ذَهَبَ أَهْلُ
الدُّثُورِ بِالدَّرَجَاتِ الْعُلٰى، وَالنَّعِيمِ الْمُقِيمِ فَقَالَ وَمَا ذَاكَ؟ فَقَالُوا يُصَلُّونَ كَمَا نُصَلِّي
وَيَصُومُونَ كَمَا نَصُومُ وَيَتَصَدَّقُونَ وَلَا نَتَصَدَّقُ وَيَعْتِقُونَ وَلَا نَعْتِقُ، فَقَالَ رَسُولُ
اللّٰهِ صَلَّى اللّٰهُ عَلَيْهِ وَسَلَّمَ أَفَلَا أُعَلِّمُكُمْ شَيْئًا تُدْرِكُونَ بِهِ مَنْ سَبَقَكُمْ وَتَسْبِقُونَ بِهِ مَنْ بَعْدَكُمْ
وَلَا يَكُونُ أَحَدٌ أَفْضَلَ مِنْكُمْ إِلَّا مَنْ صَنَعَ مِثْلَ مَا صَنَعْتُمْ؟ قَالُوا بَلٰى يَا رَسُولَ اللّٰهِ قَالَ
تُسَبِّحُونَ وَتُكَبِّرُونَ وَتَحْمَدُونَ دُبُرَ كُلِّ صَلٰوةٍ ثَلَاثًا وَثَلَاثِينَ مَرَّةً فَرَجَعَ فُقَرَاءُ
الْمُهَاجِرِينَ إِلٰى رَسُولِ اللّٰهِ صَلَّى اللّٰهُ عَلَيْهِ وَسَلَّمَ فَقَالُوا سَمِعَ إِخْوَانُنَا أَهْلُ الْأَمْوَالِ بِمَا فَعَلْنَا فَفَعَلُوا
مِثْلَهُ فَقَالَ رَسُولُ اللّٰهِ صَلَّى اللّٰهُ عَلَيْهِ وَسَلَّمَ ذٰلِكَ فَضْلُ اللّٰهِ يُؤْتِيهِ مَنْ يَشَاءُ

(مسلم - ابوہریرہ رض)

ಮಕ್ಕಾದಿಂದ ಹಿಜ್ರತ್ ಮಾಡಿ ಬಂದವರ ಪೈಕಿ ಬಡವರಾಗಿದ್ದ (ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಲು ಅಶಕ್ತರಾಗಿದ್ದ) ಕೆಲವರು ಪ್ರವಾದಿಯವರ(ಸ) ಬಳಿ ಬಂದು, ಶಾಶ್ವತವಾಗಿ ಉಳಿಯುವ ಐಶ್ವರ್ಯ ಮತ್ತು ಉನ್ನತ ಸ್ಥಾನಮಾನಗಳು ಸಿರಿವಂತರಿಗೆ ಸಿಕ್ಕಿವೆ (ನಾವು ವಂಚಿತರಾಗಿದ್ದೇವೆ) ಎಂದರು. ಪ್ರವಾದಿ(ಸ) 'ಅದು ಹೇಗೆ' ಎಂದು ಕೇಳಿದರು. ಆಗ ಅವರು ಹೇಳಿದರು- ನಾವು ನಮಾಝ್ ಮಾಡುತ್ತೇವೆ. ಅವರೂ ಮಾಡುತ್ತಾರೆ. ನಾವು ಉಪವಾಸ ಆಚರಿಸುತ್ತೇವೆ. ಅವರೂ ಆಚರಿಸುತ್ತಾರೆ (ಪುಣ್ಯದ ಈ ಕಾರ್ಯಗಳಲ್ಲಿ ನಾವೂ ಅವರೂ ಸಮಾನರು) ಆದರೆ ಅವರು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುತ್ತಾರೆ. ನಾವು ಅದರಿಂದ ವಂಚಿತರಾಗಿದ್ದೇವೆ. ಅವರು ಗುಲಾಮರನ್ನು ವಿಮೋಚಿಸುತ್ತಾರೆ. ಅದಕ್ಕಾಗಿ ಅವರು ಹಣ ಖರ್ಚು ಮಾಡುತ್ತಾರೆ. ನಾವು ಅದರಿಂದಲೂ ವಂಚಿತರಾಗಿದ್ದೇವೆ. ಪ್ರವಾದಿಯವರು(ಸ) ಅವರ ಈ ಮಾತುಗಳನ್ನು ಕೇಳಿ ಹೀಗೆಂದರು- ನೀವು ಒಳಿತಿನ ಮಾರ್ಗದಲ್ಲಿ ಮುಂದೆ ಸಾಗುವವರನ್ನು ಹೋಗಿ ಸೇರಬಲ್ಲ ಮತ್ತು ನಿಮ್ಮ ಹಿಂದೆ ಬರುವವರಿಗಿಂತ ಮುಂದೆ ಆಗಬಲ್ಲಂತಹ ಒಂದು ವಿಷಯವನ್ನು ಹೇಳಿ ಕೊಡಲೇ? ನಿಮ್ಮಂತೆ ಮಾಡುವವರು ಮಾತ್ರ ನಿಮಗಿಂತ ಶ್ರೇಷ್ಠರಾಗಿರುವರು. ಆಗ ಆ ಜನರು, ಅಲ್ಲಾಹನ ಸಂದೇಶವಾಹಕರೇ! 'ಖಂಡಿತ ಹೇಳಿರಿ' ಎಂದರು. ಪ್ರವಾದಿ(ಸ) ಹೇಳಿದರು- ನೀವು ಪ್ರತಿ ಫರ್ಝ್ ನಮಾಝ್‌ನ

ಬಳಿಕ 33 ಬಾರಿ ಸುಬ್ಹಾನಲ್ಲಾಹ್, 33 ಬಾರಿ ಅಲ್‌ಹಮ್ದುಲಿಲ್ಲಾಹ್ ಮತ್ತು 33 ಬಾರಿ ಅಲ್ಲಾಹು ಅಕ್ಬರ್ ಎಂದು ಹೇಳಿರಿ. (ಈ ಮಂದಿ ಹೋದರು. ಅದೇ ರೀತಿಯಲ್ಲಿ ಹೇಳ ತೊಡಗಿದರು.) ಪ್ರವಾದಿಯವರು(ಸ) ಮುಹಾಜಿರರಿಗೆ (ಮಕ್ಕಾದಿಂದ ಬಂದವರಿಗೆ) ಇದನ್ನು ಕಲಿಸಿದ್ದಾರೆ ಎಂದು ಸಿರಿವಂತರಿಗೆ ತಿಳಿದಾಗ ಅವರೂ ಈ ತಸ್ಬೀಹ್‌ಗಳನ್ನು ಪಠಿಸ ತೊಡಗಿದರು. ಇದನ್ನು ನೋಡಿ ಮುಹಾಜಿರರು ಪುನಃ ಪ್ರವಾದಿವರ್ಯರ(ಸ) ಬಳಿಗೆ ಬಂದು, 'ನಮ್ಮಿಂದ ಕೇಳಿದ ತಸ್ಬೀಹ್‌ಗಳನ್ನು ಸಿರಿವಂತ ಸಹೋದರರೂ ಪಠಿಸತೊಡಗಿದ್ದಾರೆ' ಎಂದರು. ಆಗ ಪ್ರವಾದಿ(ಸ) ಹೇಳಿದರು- ಇದು ಅಲ್ಲಾಹನ ಅನುಗ್ರಹವಾಗಿದ್ದು ಅದನ್ನು ಅಲ್ಲಾಹನು ಯಾರಿಗೆ ಇಚ್ಛಿಸುತ್ತಾನೋ ಅವರಿಗೆ ದಯಪಾಲಿಸುತ್ತಾನೆ.

[ಮುಸ್ಲಿಮ್- ವರದಿ: ಅಬೂ ಹುರೈರಾ(ರ)]

ಟಿಪ್ಪಣಿ: ಈ ಹದೀಸ್‌ನಿಂದ ಪ್ರವಾದಿಯವರ(ಸ) ಸಂಘಟನೆಯ ಕಾರ್ಯಕರ್ತರಲ್ಲಿ ಧರ್ಮದ ಹಾದಿಯಲ್ಲಿ ಮುನ್ನಡೆಯುವ ಮತ್ತು ಪರಲೋಕದಲ್ಲಿ ಉನ್ನತ ಸ್ಥಾನ ಪಡೆಯುವ ಹಂಬಲ ಎಷ್ಟು ತೀವ್ರವಾಗಿತ್ತು ಎಂದು ತಿಳಿಯುತ್ತದೆ. ಇನ್ನು ಹಣ ಖರ್ಚು ಮಾಡುವ ಶಕ್ತಿಯಿಲ್ಲದವರು ದಿಕ್ರ್, ದುಆ ಮತ್ತಿತರ ಪುಣ್ಯಗಳನ್ನು ಮಾಡಿದರೆ ಸ್ವರ್ಗದಿಂದ ವಂಚಿತರಾಗಲಾರರು ಎಂದೂ ತಿಳಿದು ಬರುತ್ತದೆ. ಅದೇ ರೀತಿಯಲ್ಲಿ ಗುಲಾಮರನ್ನು ವಿಮೋಚನೆಗೊಳಿಸಿ ಅವರನ್ನು ಮಾನವತೆಯ ಮಟ್ಟಕ್ಕೇರಿಸುವುದು ಮತ್ತು ಅವರಿಗೆ ಸಮಾಜದಲ್ಲಿ ಸಮಾನ ಸ್ಥಾನಮಾನ ನೀಡುವುದು ಬಹಳ ಪುಣ್ಯದಾಯಕವೆಂದೂ ಇದರಿಂದ ತಿಳಿದುಬರುತ್ತದೆ.

ಈ ಹದೀಸ್‌ನಲ್ಲಿ 'ಅಲ್ಲಾಹು ಅಕ್ಬರ್' 33 ಬಾರಿ ಪಠಿಸಬೇಕೆಂದಿದೆ. ಆದರೆ ಇನ್ನು ಕೆಲವು ಹದೀಸ್‌ಗಳಲ್ಲಿ 34 ಬಾರಿ ಪಠಿಸಬೇಕೆಂದು ಬಂದಿದೆ. ನಮ್ಮ ಹಿರಿಯರು ಅದನ್ನೇ ಅನುಸರಿಸಿದ್ದಾರೆ. ಇನ್ನು ಕೆಲವು ಹದೀಸ್‌ಗಳಲ್ಲಿ ಈ ಮೂರು ದಿಕ್ರ್‌ಗಳನ್ನು ತಲಾ 10 ಬಾರಿ ಪಠಿಸಬೇಕೆಂಬ ಆದೇಶವಿದೆ.

ಇಬ್ನು ಉಮರ್(ರ) ಮತ್ತು ತಹಜ್ಜುದ್

(417) عَنْ سَالِمِ بْنِ عَبْدِ اللّٰهِ بْنِ عُمَرَ عَنْ أَبِيْهِ أَنَّ النَّبِيَّ صَلَّى اللّٰهُ عَلَيْهِ وَسَلَّمَ قَالَ
نِعْمَ الرَّجُلُ عَبْدُ اللّٰهِ لَوْ كَانَ يُصَلِّي مِنَ اللَّيْلِ قَالَ سَالِمٌ فَكَانَ عَبْدُ اللّٰهِ بَعْدَ ذٰلِكَ
لَا يَنَامُ مِنَ اللَّيْلِ إِلَّا قَلِيْلًا (بخاری، مسلم)

ಸಾಲಿಮ್(ರ) ತಮ್ಮ ತಂದೆ ಅಬ್ದುಲ್ಲಾ ಬಿನ್ ಉಮರ್‌ರಿಂದ(ರ) ವರದಿ ಮಾಡುತ್ತಾರೆ: ಪ್ರವಾದಿ(ಸ) ಹೇಳಿದರು- ಅಬ್ದುಲ್ಲಾ ಬಹಳ ಒಳ್ಳೆಯ ವ್ಯಕ್ತಿ. ಅವರು ತಹಜ್ಜುದ್ ನಮಾಝ್‌ಗಾಗಿ ಏಳುತ್ತಿದ್ದರೆ ಎಷ್ಟು ಚೆನ್ನಾಗಿತ್ತು! ಸಾಲಿಮ್(ರ) ಹೇಳುತ್ತಾರೆ- ಪ್ರವಾದಿ

ಯವರು(ಸ) ಹಾಗೆ ಹೇಳಿದ ನಂತರ, ರಾತ್ರಿ ಸ್ವಲ್ಪವೇ ಹೊತ್ತು ಮಲಗುವುದು ನನ್ನ ತಂದೆ (ಅಬ್ದುಲ್ಲಾ ಬಿನ್ ಉಮರ್)ಯವರ ರೂಢಿಯಾಯಿತು.

[ಬುಖಾರಿ, ಮುಸ್ಲಿಮ್]

ಪ್ರವಾದಿ(ಸ) ಅವರ ಅತ್ಯಂತ ಕಠಿಣ ದಿನ

(418) عَنْ عَائِشَةَ اَنَّهَا قَالَتْ لِلنَّبِيِّ صَلَّى اللّٰهُ عَلَيْهِ وَسَلَّمَ هَلْ اَتَىٰ عَلَيْكَ يَوْمٌ كَانَ
اَشَدَّ مِنْ يَوْمِ اُحُدٍ؟ قَالَ قَدْ لَقِيْتُ مِنْ قَوْمِكِ وَكَانَ اَشَدَّ مَا لَقِيْتُهُ يَوْمَ الْعَقَبَةِ اِذْ
عَرَضْتُ نَفْسِيْ عَلَىٰ ابْنِ عَبْدِ يَالِيْلَ بْنِ عَبْدِ كُلَالٍ، فَلَمْ يُجِبْنِيْ اِلَىٰ مَا اَرَدْتُ، فَانْطَلَقْتُ
وَاَنَا مَهْمُوْمٌ ــــ عَلَىٰ وَجْهِيْ فَلَمْ اَسْتَفِقْ اِلَّا بِقَرْنِ الثَّعَالِبِ، فَرَفَعْتُ رَاْسِيْ
فَنَظَرْتُ، فَاِذَا فِيْهَا جِبْرِيْلُ عَلَيْهِ السَّلَامُ فَنَادَانِيْ، فَقَالَ اِنَّ اللّٰهَ تَعَالَىٰ سَمِعَ قَوْلَ قَوْمِكَ لَكَ
وَمَا رَدُّوْا عَلَيْكَ وَقَدْ بَعَثَ اِلَيْكَ مَلَكَ الْجِبَالِ لِتَاْمُرَهُ بِمَا شِئْتَ فِيْهِمْ، فَنَادَانِيْ مَلَكُ
الْجِبَالِ فَسَلَّمَ عَلَيَّ ثُمَّ قَالَ يَا مُحَمَّدُ اِنَّ اللّٰهَ قَدْ سَمِعَ قَوْلَ قَوْمِكَ لَكَ وَاَنَا مَلَكُ الْجِبَالِ
وَقَدْ بَعَثَنِيْ رَبِّيْ اِلَيْكَ لِتَاْمُرَنِيْ بِاَمْرِكَ فَمَا شِئْتَ؟ اِنْ شِئْتَ عَلَيْهِمُ الْاَخْشَبَيْنِ،
فَقَالَ النَّبِيُّ صَلَّى اللّٰهُ عَلَيْهِ وَسَلَّمَ بَلْ اَرْجُوْ اَنْ يُخْرِجَ اللّٰهُ مِنْ اَصْلَابِهِمْ مَنْ يَعْبُدُ اللّٰهَ
وَحْدَهُ لَا يُشْرِكُ بِهٖ شَيْئًا (بخاری، مسلم)

ಹ. ಆಯಿಶಾ(ರ) ಪ್ರವಾದಿಯವರಲ್ಲಿ(ಸ) ಹೀಗೆ ಪ್ರಶ್ನಿಸಿದರು- ಉಹುದ್‌ನ ದಿನಕ್ಕಿಂತ ಕಠಿಣ ದಿನ ತಮ್ಮ ಮೇಲೆ ಎಂದಾದರೂ ಬಂದಿದೆಯೇ? ಪ್ರವಾದಿ(ಸ) ಹೇಳಿದರು- ಆಯಿಶಾ! ನಿನ್ನ ಕುರೈಶ್ ಜನಾಂಗದಿಂದ ನನಗೆ ತುಂಬಾ ತೊಂದರೆಯಾಗಿದೆ. ನನ್ನ ಮೇಲೆ ಗತಿಸಿದ ಅತ್ಯಂತ ಕಠಿಣ ದಿನ ಅಕಬಾದ ದಿನವಾಗಿತ್ತು. ನಾನು ಅಬ್ದು ಯಾಲೀಲ್ ಬಿನ್ ಕುಲಾಲ್‌ನ ಮುಂದೆ ಹೋದೆ. ಆದರೆ ನಾನು ಬಯಸಿದ್ದನ್ನು ಅಂಗೀಕರಿಸಲು ಅವನು ನಿರಾಕರಿಸಿದನು. ಆಗ ನಾನು ತುಂಬಾ ಬೇಸರಗೊಂಡು ಅಲ್ಲಿಂದ ನಡೆದೆ. ಕರ್ನುಸ್ಸಅಲಿಬ್‌ಗೆ ತಲುಪಿದಾಗ

ನನ್ನ ದುಃಖ ಸ್ವಲ್ಪ ಹಗುರವಾಯಿತು. ನಾನು ಆಕಾಶದೆಡೆಗೆ ನೋಡಿದಾಗ ಮೇಲೆ ಜಿಬ್ರೀಲ್(ಅ) ನನ್ನನ್ನು ಕೂಗಿ ಕರೆದು ಹೀಗೆಂದರು- ತಮ್ಮ ಜನಾಂಗವು ತಮ್ಮೊಡನೆ ಆಡಿದ ಮಾತುಗಳನ್ನು ಮತ್ತು ತಮ್ಮ ಕರೆಗೆ ಅವರು ಪ್ರತಿಕ್ರಿಯಿಸಿದ ರೀತಿಯನ್ನು ಅಲ್ಲಾಹನು ಕೇಳಿರುವನು. ತಮ್ಮ ಬಳಿಗೆ ಪರ್ವತಗಳ ವ್ಯವಸ್ಥೆಯನ್ನು ನೋಡಿಕೊಳ್ಳುವ ದೇವಚರರನ್ನು ಅವನು ಕಳಿಸಿದ್ದಾನೆ. ತಾವು ತಮಗಿಷ್ಟ ಬಂದ ಅಪ್ಪಣೆಯನ್ನು ನೀಡಬಹುದು. ಸತ್ಯನಿಷೇಧಿಗಳ ಬಗ್ಗೆ ಅವನು ತನ್ನ ಆಜ್ಞೆಯನ್ನು ಜಾರಿಗೊಳಿಸುವನು. ತರುವಾಯ ಪರ್ವತದ ದೇವಚರನು ನನ್ನನ್ನು ಕೂಗಿ ಕರೆದು ಸಲಾಮ್ ಹೇಳಿದರು. ಅನಂತರ ಹೀಗೆಂದರು- ಓ ಮುಹಮ್ಮದ್! ತಮ್ಮ ಜನಾಂಗವು ತಮ್ಮೊಡನೆ ಆಡಿದ ಮಾತುಗಳನ್ನು ಅಲ್ಲಾಹನು ಕೇಳಿದನು. ನಾನು ಪರ್ವತಗಳ ವ್ಯವಸ್ಥೆಗಳನ್ನು ನೋಡಿಕೊಳ್ಳಲಿಕ್ಕಾಗಿ ನಿಯುಕ್ತನಾದವನು. ನನ್ನ ಪ್ರಭು ನನ್ನನ್ನು ತಮ್ಮ ಬಳಿಗೆ ತಮ್ಮ ಅಪ್ಪಣೆಯನ್ನು ಪಾಲಿಸಲಿಕ್ಕಾಗಿ ಕಳಿಸಿರುವನು. ತಾವೇನು ಬಯಸುತ್ತೀರೋ ಹೇಳಿರಿ! ತಾವು ಬಯಸಿದರೆ ಎರಡು ಬದಿಯಲ್ಲಿರುವ ಪರ್ವತಗಳನ್ನು ಢಿಕ್ಕಿ ಹೊಡೆಸಿ ಈ ಜನರನ್ನು ಪುಡಿ ಪುಡಿ ಮಾಡಬಲ್ಲೆ. ಆಗ ಪ್ರವಾದಿ(ಸ) ಹೇಳಿದರು- ಬೇಡ, ಇವರ ಸಂತಾನಗಳಲ್ಲಿ ಅಲ್ಲಾಹನನ್ನು ಮಾತ್ರ ಆರಾಧಿಸುವ ಮತ್ತು ಅವನೊಂದಿಗೆ ಯಾರನ್ನೂ ಭಾಗೀದಾರರನ್ನಾಗಿ ಮಾಡದ ಜನರು ಬರಬಹುದೆಂದು ನಾನು ನಿರೀಕ್ಷಿಸುತ್ತೇನೆ. *[ಬುಖಾರಿ, ಮುಸ್ಲಿಮ್]*

ವಿರೋಧಿಗಳಿಗಾಗಿ ಪ್ರಾರ್ಥನೆ

(419) عَنِ ابْنِ مَسْعُوْدٍ قَالَ كَأَنِّيْ أَنْظُرُ إِلَى رَسُوْلِ اللهِ صَلَّى اللهُ عَلَيْهِ وَسَلَّمَ يَحْكِيْ نَبِيًّا مِنَ الْأَنْبِيَاءِ صَلَوَاتُ اللهِ وَسَلَامُهُ عَلَيْهِمْ، ضَرَبَهُ قَوْمُهُ فَأَدْمَوْهُ وَهُوَ يَمْسَحُ الدَّمَ عَنْ وَجْهِهِ وَيَقُوْلُ، اَللّٰهُمَّ اغْفِرْ لِقَوْمِيْ فَإِنَّهُمْ لَا يَعْلَمُوْنَ. (بخاری، مسلم)

ಅಬ್ದುಲ್ಲಾ ಬಿನ್ ಮಸ್‌ವೂದ್(ರ) ಹೇಳುತ್ತಾರೆ- ಪ್ರವಾದಿಯವರು(ಸ) ಒಬ್ಬ ಪ್ರವಾದಿಯ ಸ್ಥಿತಿಯನ್ನು ವಿವರಿಸುತ್ತಿದ್ದರು. ಅದು ನನ್ನ ಕಣ್ಣ ಮುಂದಿದೆ:

ಪ್ರವಾದಿ(ಸ) ಹೇಳಿದರು- ಅಲ್ಲಾಹನ ಧರ್ಮದ ಕಡೆಗೆ ಆಹ್ವಾನಿಸಿದುದಕ್ಕಾಗಿ ಆ ಪ್ರವಾದಿಯನ್ನು ಅವರ ಜನಾಂಗದವರು ರಕ್ತ ಹರಿಯುವ ವರೆಗೆ ಥಳಿಸಿದರು. ಅವರು ತಮ್ಮ ಮುಖದಿಂದ ರಕ್ತವನ್ನು ಒರೆಸುತ್ತಾ ಈ ರೀತಿ ಹೇಳುತ್ತಿದ್ದರು- ಅಲ್ಲಾಹನೇ! ನನ್ನ ಜನಾಂಗದ ಈ ತಪ್ಪನ್ನು ಕ್ಷಮಿಸು (ಅವರ ಮೇಲೆ ಈಗಲೇ ಯಾತನೆ ಎರಗಿಸಬೇಡ) ಯಾಕೆಂದರೆ ಈ ಜನರು ತಿಳಿಗೇಡಿಗಳು, ಅವರಿಗೆ ವಸ್ತುಸ್ಥಿತಿಯ ಅರಿವಿಲ್ಲ. *[ಬುಖಾರಿ, ಮುಸ್ಲಿಮ್]*

ನವ ಮುಸ್ಲಿಮರ ತರಬೇತಿ

(420) عَنْ اَنَسٍ قَالَ مَا سُئِلَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ عَلَى الْاِسْلَامِ شَيْئًا اِلَّا اَعْطَاهُ، وَلَقَدْ جَاءَهُ رَجُلٌ فَاَعْطَاهُ غَنَمًا بَيْنَ جَبَلَيْنِ فَرَجَعَ اِلٰى قَوْمِهٖ، فَقَالَ يَا قَوْمِ اَسْلِمُوْا فَاِنَّ مُحَمَّدًا يُعْطِيْ عَطَاءَ مَنْ لَا يَخْشَى الْفَقْرَ، وَاِنْ كَانَ الرَّجُلُ لَيُسْلِمُ مَا يُرِيْدُ اِلَّا الدُّنْيَا فَمَا يَلْبَثُ اِلَّا يَسِيْرًا حَتّٰى يَكُوْنَ الْاِسْلَامُ اَحَبَّ اِلَيْهِ مِنَ الدُّنْيَا وَمَا عَلَيْهَا ۔ (مسلم)

ಅನಸ್(ರ) ಹೇಳುತ್ತಾರೆ- ಇಸ್ಲಾಮಿಗೆ ಹತ್ತಿರಗೊಳಿಸುವುದಕ್ಕಾಗಿ ಪ್ರವಾದಿ(ಸ) ಜನರಿಗೆ ಏನಾದರೂ ಕೊಡುತ್ತಿದ್ದರು. ಪ್ರವಾದಿಯವರಲ್ಲಿ(ಸ) ಏನು ಬೇಡಲಾಗುತ್ತಿತ್ತೋ, ಅದನ್ನು ಅವರು ಅಪೇಕ್ಷಿತನಿಗೆ ಖಂಡಿತ ನೀಡುತ್ತಿದ್ದರು. ಒಮ್ಮೆ ಒಬ್ಬ ವ್ಯಕ್ತಿ ಅವರ ಬಳಿಗೆ ಬಂದನು. ಅವನಿಗೆ ಎರಡು ಗುಡ್ಡಗಳ ನಡುವೆ ಮೇಯುತ್ತಿದ್ದ ಎಲ್ಲ ಆಡುಗಳನ್ನು ಪ್ರವಾದಿ(ಸ) ನೀಡಿದರು. ಅವನು ಅವುಗಳೊಂದಿಗೆ ತನ್ನ ಗೋತ್ರದವರ ಬಳಿಗೆ ಹೋಗಿ ಹೀಗೆಂದನು: "ಜನರೇ! ಇಸ್ಲಾಮ್ ಸ್ವೀಕರಿಸಿಕೊಳ್ಳಿರಿ. ಯಾಕೆಂದರೆ ಮುಹಮ್ಮದ್(ಸ) ಹಸಿವು-ಬಡತನಗಳಿಗೆ ಹೆದರದ ವ್ಯಕ್ತಿಯಂತೆ ದಾನ ಮಾಡುತ್ತಾರೆ."

ಹ.ಅನಸ್(ರ) ಹೇಳುತ್ತಾರೆ- ಮನುಷ್ಯನು ಕೇವಲ ಲೌಕಿಕ ಉದ್ದೇಶಗಳಿಗಾಗಿ ಇಸ್ಲಾಮ್ ಸ್ವೀಕರಿಸುತ್ತಿದ್ದನು. ಆದರೆ ಹೆಚ್ಚು ಸಮಯ ಹೋಗುತ್ತಿರಲಿಲ್ಲ. (ಪ್ರವಾದಿಯವರ(ಸ) ಶಿಕ್ಷಣ ತರಬೇತಿಗಳಿಂದಾಗಿ) ಇಸ್ಲಾಮ್ ಅವನ ಮನದಾಳಕ್ಕೆ ಇಳಿಯುತ್ತಿತ್ತು ಮತ್ತು ಅದು ಲೋಕದ ಎಲ್ಲ ವಸ್ತುಗಳಿಗಿಂತಲೂ ಅವನ ದೃಷ್ಟಿಯಲ್ಲಿ ಹೆಚ್ಚು ಪ್ರಿಯವಾಗುತ್ತಿತ್ತು. [ಮುಸ್ಲಿಮ್]

ಊಟದಲ್ಲಿ ಪಾಲು

(421) عَنْ عَبْدِ الرَّحْمٰنِ بْنِ اَبِيْ بَكْرِ نِ الصِّدِّيْقِ اَنَّ اَصْحَابَ الصُّفَّةِ كَانُوْا اُنَاسًا فُقَرَاءَ وَاَنَّ النَّبِيَّ صَلَّى اللّٰهُ عَلَيْهِ وَسَلَّمَ قَالَ مَرَّةً، مَنْ كَانَ عِنْدَهُ طَعَامُ اثْنَيْنِ فَلْيَذْهَبْ بِثَالِثٍ، وَمَنْ كَانَ عِنْدَهُ طَعَامُ اَرْبَعَةٍ فَلْيَذْهَبْ بِخَامِسٍ، بِسَادِسٍ اَوْكَمَا قَالَ، وَاَنَّ اَبَا بَكْرٍ جَاءَ بِثَلَاثَةٍ وَانْطَلَقَ النَّبِيُّ صَلَّى اللّٰهُ عَلَيْهِ وَسَلَّمَ بِعَشَرَةٍ ۔ (بخاری، مسلم)

ಹ. ಅಬೂಬಕರ್ ಸಿದ್ದೀಕ್‌ರ(ರ) ಪುತ್ರ ಅಬ್ದುರ್ರಹ್ಮಾನ್(ರ) ಹೀಗೆ ವರದಿ ಮಾಡುತ್ತಾರೆ: ಸುಪ್ಫದವರು ಬಹಳ ಬಡವರಾಗಿದ್ದರು. ಒಮ್ಮೆ ಪ್ರವಾದಿ(ಸ) ಹೇಳಿದರು- ಯಾರ ಮನೆಯಲ್ಲಿ ಇಬ್ಬರ ಊಟ ಇದೆಯೋ ಅವನು ಮೂರನೆಯ ಒಬ್ಬನನ್ನು ಕರೆದು ಕೊಂಡು ಹೋಗಲಿ. ಯಾರ ಬಳಿ ನಾಲ್ಕರ ಊಟ ಇದೆಯೋ ಅವನು ಐದನೆಯ ಮತ್ತು ಆರನೆಯವನನ್ನು ಕರೆದುಕೊಂಡು ಹೋಗಲಿ. ಹಾಗೆ ನನ್ನ ತಂದೆ ಅಬೂಬಕರ್(ರ) ತಮ್ಮೊಂದಿಗೆ ಮೂವರನ್ನು ಮನೆಗೆ ಕರೆದುಕೊಂಡು ಬಂದರು. ಆದರೆ ಪ್ರವಾದಿ(ಸ) ತಮ್ಮೊಂದಿಗೆ ಹತ್ತು ಮಂದಿಯನ್ನು ಕರೆದು ಕೊಂಡು ಹೋದರು. *[ಬುಖಾರಿ, ಮುಸ್ಲಿಮ್]*

ಜನರೊಂದಿಗೆ ಅನುಕಂಪ

(422) عَنْ جَرِيرِ بْنِ عَبْدِ اللهِ قَالَ كُنَّا فِي صَدْرِ النَّهَارِ عِنْدَ رَسُولِ اللهِ صَلَّى اللهُ عَلَيْهِ وَسَلَّمَ فَجَاءَهُ
قَوْمٌ عُرَاةٌ مُجْتَابِي النِّمَارِ أَوِ الْعَبَاءِ مُتَقَلِّدِي السُّيُوفِ عَامَّتُهُمْ مِنْ مُضَرَ بَلْ كُلُّهُمْ مِنْ مُضَرَ، فَتَمَعَّرَ
وَجْهُ رَسُولِ اللهِ صَلَّى اللهُ عَلَيْهِ وَسَلَّمَ لِمَا رَأَى بِهِمْ مِنَ الْفَاقَةِ، فَدَخَلَ ثُمَّ خَرَجَ، فَأَمَرَ بِلَالًا فَأَذَّنَ وَأَقَامَ
فَصَلَّى ثُمَّ خَطَبَ فَقَالَ، يَا أَيُّهَا النَّاسُ اتَّقُوا رَبَّكُمُ الَّذِي خَلَقَكُمْ مِنْ نَفْسٍ وَاحِدَةٍ إِلَى آخِرِ الْآيَةِ
إِنَّ اللهَ كَانَ عَلَيْكُمْ رَقِيبًا (النساء آيت:١) وَالْآيَةُ الْأُخْرَى الَّتِي فِي آخِرِ الْحَشْرِ يَا أَيُّهَا الَّذِينَ آمَنُوا اتَّقُوا اللهَ
وَلْتَنْظُرْ نَفْسٌ مَا قَدَّمَتْ لِغَدٍ (سوره حشر آيت:١٨) تَصَدَّقَ رَجُلٌ مِنْ دِينَارِهِ، مِنْ دِرْهَمِهِ،
مِنْ ثَوْبِهِ، مِنْ صَاعِ تَمْرِهِ، حَتَّى قَالَ وَلَوْ بِشِقِّ تَمْرَةٍ، فَجَاءَ رَجُلٌ مِنَ الْأَنْصَارِ بِصُرَّةٍ كَادَتْ
كَفُّهُ تَعْجِزُ عَنْهَا بَلْ قَدْ عَجَزَتْ، ثُمَّ تَتَابَعَ النَّاسُ حَتَّى رَأَيْتُ كَوْمَيْنِ مِنْ طَعَامٍ وَثِيَابٍ حَتَّى
رَأَيْتُ وَجْهَ رَسُولِ اللهِ صَلَّى اللهُ عَلَيْهِ وَسَلَّمَ يَتَهَلَّلُ كَأَنَّهُ مُذْهَبَةٌ فَقَالَ رَسُولُ اللهِ صَلَّى اللهُ عَلَيْهِ وَسَلَّمَ
مَنْ سَنَّ فِي الْإِسْلَامِ سُنَّةً حَسَنَةً فَلَهُ أَجْرُ مَنْ عَمِلَ بِهَا بَعْدَهُ مِنْ غَيْرِ أَنْ يَنْقُصَ مِنْ أُجُورِهِمْ
شَيْءٌ، وَمَنْ سَنَّ فِي الْإِسْلَامِ سُنَّةً سَيِّئَةً كَانَ عَلَيْهِ وِزْرُهَا وَوِزْرُ مَنْ عَمِلَ بِهَا مِنْ
بَعْدِهِ مِنْ غَيْرِ أَنْ يَنْقُصَ مِنْ أَوْزَارِهِمْ شَيْءٌ، (مسلم)

ಜರೀರ್ ಬಿನ್ ಅಬ್ದುಲ್ಲಾ(ರ) ಹೇಳುತ್ತಾರೆ- ನಾವು ಪ್ರವಾದಿವರ್ಯರ(ಸ) ಸನ್ನಿಧಿಯಲ್ಲಿ ಬೆಳಗ್ಗಿನ ಸಮಯ ಕುಳಿತುಕೊಂಡಿದ್ದೆವು. ಅಷ್ಟರಲ್ಲಿ ಕೆಲವರು ಖಡ್ಗ ಹಿಡಿದುಕೊಂಡು ದಪ್ಪ ಕಂಬಳಿ ಹೊದ್ದುಕೊಂಡು ಬಂದರು. ಅವರ ಶರೀರದ ಹೆಚ್ಚಿನ ಭಾಗ ತೆರೆದಿತ್ತು. ಅವರಲ್ಲಿ ಹೆಚ್ಚಿನವರು ಮುದರ್ ಗೋತ್ರದವರಾಗಿದ್ದರು. ಅವರ ದಾರಿದ್ರ್ಯವನ್ನು ನೋಡಿ ಪ್ರವಾದಿ ವರ್ಯರ(ಸ) ಮುಖ ಬೇಸರದಿಂದ ಕಳೆಗುಂದಿತು. ತರುವಾಯ ಅವರು ಮನೆಗೆ ಹೋಗಿ ಹೊರ ಬಂದರು. ಬಿಲಾಲ್‌ರನ್ನು(ರ) ಕರೆದು ಅದಾನ್ ಹೇಳುವಂತೆ ಆಜ್ಞಾಪಿಸಿದರು. (ನಮಾಝ್‌ನ ಸಮಯವಾಗಿತ್ತು) ಬಿಲಾಲ್ ಅದಾನ್ ಹೇಳಿದರು. ತರುವಾಯ ಇಕಾಮತ್ ಹೇಳಿದರು. ಪ್ರವಾದಿ(ಸ) ನಮಾಝ್ ಮಾಡಿಸಿದರು. ನಮಾಝ್‌ನ ಬಳಿಕ ಉಪನ್ಯಾಸ ನೀಡುತ್ತಾ ಸೂರಃ ಅನ್ನಿಸಾದ ಮೊದಲ ಆಯತ್ ಮತ್ತು ಸೂರಃ ಅಲ್ ಹಶ್ರ್‌ನ ಕೊನೆಯ ರುಕೂಅ್‌ನ ಮೊದಲ ಆಯತ್ ಪಠಿಸಿದರು. ಅನಂತರ ಹೀಗೆಂದರು- "ಜನರು ಅಲ್ಲಾಹನ ಮಾರ್ಗದಲ್ಲಿ ದಾನ ಧರ್ಮ ಮಾಡಬೇಕು." "ಒಬ್ಬನ ಬಳಿ ಅರ್ಧ ಖರ್ಜೂರವಿದ್ದರೆ ಅವನು ಅದನ್ನೇ ನೀಡಲಿ."

ಉಪನ್ಯಾಸ ಕೇಳಿದ ಬಳಿಕ ಒಬ್ಬನು ತನ್ನ ಕೈಯಲ್ಲಿ ಒಂದು ಚೀಲ ಹಿಡಿದುಕೊಂಡು ಬಂದನು. ಅದು ಕೈಯಲ್ಲಿ ನಿಲ್ಲುತ್ತಿರಲಿಲ್ಲ. ತರುವಾಯ ಜನರು ಒಬ್ಬರ ನಂತರ ಒಬ್ಬರಂತೆ ದಾನ ನೀಡಲು ಆರಂಭಿಸಿದರು. ಎಷ್ಟೆಂದರೆ ನಾನು ಆಹಾರ ಮತ್ತು ವಸ್ತ್ರಗಳ ಎರಡು ರಾಶಿಗಳನ್ನು ನೋಡಿದೆ. ಜನರು ಈ ರೀತಿ ದಾನ ಮಾಡುವುದನ್ನು ಕಂಡು ಪ್ರವಾದಿ ಯವರ(ಸ) ಮುಖ ಸ್ವರ್ಣ ಮಿಶ್ರಿತ ನೀರು ಚಿಮುಕಿಸಿದಂತೆ ಅರಳಿತು. ತರುವಾಯ ಪ್ರವಾದಿ(ಸ) ಹೇಳಿದರು- "ಯಾರು ಇಸ್ಲಾಮಿನಲ್ಲಿ ಯಾವುದಾದರೂ ಉತ್ತಮ ಸಂಪ್ರದಾಯ ವನ್ನು ಜಾರಿಗೆ ತಂದನೋ ಅವನಿಗೆ ಅದರ ಪುಣ್ಯ ಫಲ ಲಭಿಸುವುದು. ಯಾರು ಈ ಉತ್ತಮ ಸಂಪ್ರದಾಯದಂತೆ ಅನಂತರ ನಡೆಯುವರೋ ಅವರ ಪುಣ್ಯ ಫಲವೂ ಅವನಿಗೆ ಲಭಿಸುವುದು. ಆದರೆ ಅವರ ಪುಣ್ಯಫಲದಲ್ಲಿ ಏನೂ ಕಡಿತವಾಗದು. ಅದೇ ರೀತಿ ಯಾರು ಇಸ್ಲಾಮಿನಲ್ಲಿ ಯಾವುದಾದರೂ ಕೆಟ್ಟ ಸಂಪ್ರದಾಯವನ್ನು ಜಾರಿಗೊಳಿಸುತ್ತಾನೋ ಅದರ ಪಾಪ ಅವನ ಮೇಲಿರುವುದು. ಅನಂತರ ಯಾರು ಆ ಸಂಪ್ರದಾಯದಂತೆ ನಡೆಯುವರೋ ಅವರ ಪಾಪಗಳನ್ನೂ ಅವನ ಕರ್ಮಪತ್ರದಲ್ಲಿ ಬರೆಯಲಾಗುವುದು. ಆದರೆ ಅವರ ಪಾಪಗಳಲ್ಲಿ ಏನೂ ಕಡಿತವುಂಟಾಗದು." *[ಮುಸ್ಲಿಮ್]*

ನಮಾಝ್‌ನ ಶಿಷ್ಟಾಚಾರದ ಶಿಕ್ಷಣ

(423) عَنْ مُعَاوِيَةَ بْنِ الْحَكَمِ السُّلَمِيِّ قَالَ، بَيْنَمَا اَنَا اُصَلِّيْ مَعَ رَسُوْلِ اللّٰهِ صَلَّى اللّٰهُ عَلَيْهِ وَسَلَّمَ اِذْ عَطَسَ رَجُلٌ مِنَ الْقَوْمِ فَقُلْتُ يَرْحَمُكَ اللّٰهُ فَرَمَانِي الْقَوْمُ بِاَبْصَارِهِمْ، فَقُلْتُ وَاثُكْلَ اُمِّيَاهُ مَاشَأْنُكُمْ تَنْظُرُوْنَ اِلَيَّ؟ فَلَمَّا رَاَيْتُهُمْ يُصَمِّتُوْنَنِيْ لٰكِنِّيْ سَكَتُّ، فَلَمَّا صَلّٰى رَسُوْلُ اللّٰهِ صَلَّى اللّٰهُ عَلَيْهِ وَسَلَّمَ فَبِاَبِيْ هُوَ وَاُمِّيْ مَارَاَيْتُ مُعَلِّمًا قَبْلَهٗ وَلَا بَعْدَهٗ اَحْسَنَ تَعْلِيْمًا مِنْهُ، مَاكَهَرَنِيْ وَلَاضَرَبَنِيْ وَلَا شَتَمَنِيْ، قَالَ اِنَّ هٰذِهِ الصَّلٰوةَ لَايَصْلُحُ فِيْهَا شَيْءٌ مِنْ كَلَامِ النَّاسِ اِنَّمَا هِيَ التَّسْبِيْحُ وَالتَّكْبِيْرُ وَقِرَاءَةُ الْقُرْاٰنِ۔ (مسلم)

ಮುಆವಿಯಾ ಬಿನ್ ಹಕಮ್ ಸುಲಮೀ(ರ) ಹೇಳುತ್ತಾರೆ- ಪ್ರವಾದಿಯವರ(ಸ) ಜೊತೆಯಲ್ಲಿ ನಾನು ನಮಾಝ್ ಮಾಡುತ್ತಿದ್ದೆ. ಅಷ್ಟರಲ್ಲಿ ಒಬ್ಬನಿಗೆ ಸೀನು ಬಂತು. ನಾನು ನಮಾಝ್‌ನಲ್ಲೇ 'ಯರ್ಹಮುಕಲ್ಲಾಹ್' ಎಂದು ಹೇಳಿದೆ. ಜನರು ನನ್ನನ್ನು ದುರುಗುಟ್ಟಿ ನೋಡಿದರು. ನಾನು 'ಅಲ್ಲಾಹನು ನಿಮಗೆ ದೀರ್ಘಾಯುಷ್ಯ ನೀಡಲಿ. ನೀವೇಕೆ ನನ್ನನ್ನು ನೋಡುತ್ತಿದ್ದೀರಿ' ಎಂದು ಕೇಳಿದೆ. ಅವರು ನನಗೆ ಮೌನವಾಗಿರುವಂತೆ ಸನ್ನೆ ಮಾಡಿದರು. ನಾನು ಸುಮ್ಮನಾದೆ. ಪ್ರವಾದಿ(ಸ) ನಮಾಝ್ ಮುಗಿಸಿದರು- ನನ್ನ ತಂದೆ ತಾಯಿಗಳು ಪ್ರವಾದಿಯವರಿಗೆ(ಸ) ಅರ್ಪಿತ. ಅವರಿಗಿಂತ ಉತ್ತಮ ಶಿಕ್ಷಣ-ತರಬೇತಿ ನೀಡುವವರನ್ನು ನಾನು ಮುಂಚೆಯೂ ಕಂಡಿಲ್ಲ. ಅನಂತರವೂ ಕಂಡಿಲ್ಲ- ಅವರು ನನ್ನನ್ನು ಜರೆಯಲೂ ಇಲ್ಲ, ಹೊಡೆಯಲೂ ಇಲ್ಲ, ಬೈಯಲೂ ಇಲ್ಲ. ಇಷ್ಟು ಮಾತ್ರ ಹೇಳಿದರು- ಇದು ನಮಾಝ್. ಇದರಲ್ಲಿ ಮಾತುಕತೆ ಸಲ್ಲದು. ನಮಾಝ್ ಎಂದರೆ ಅಲ್ಲಾಹನ ಪಾವಿತ್ರ್ಯವನ್ನು ವರ್ಣಿಸುವುದು, ಅವನ ಮೇಲ್ಮೆಯನ್ನು ಕೊಂಡಾಡುವುದು ಮತ್ತು ಕುರ್‌ಆನ್ ಪಠಿಸುವುದಾಗಿದೆ. *[ಮುಸ್ಲಿಮ್]*

ಬೋಧನೆಯ ವಿಧಾನ

(424) عَنْ عَائِشَةَ قَالَتْ، كَانَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ اِذَا اَمَرَهُمْ اَمَرَهُمْ مِنَ الْاَعْمَالِ بِمَا يُطِيْقُوْنَ۔ (بخاری)

ಆಯಿಶಾ(ಸ) ಹೇಳುತ್ತಾರೆ- ಪ್ರವಾದಿಯವರು(ಸ) ಜನರಿಗೆ ಅವರ ಶಕ್ತ್ಯಾನುಸಾರವಾಗಿ ಮಾಡಬಲ್ಲಂತಹ ಕಾರ್ಯಗಳನ್ನು ಮಾತ್ರ ಆದೇಶಿಸುತ್ತಿದ್ದರು. *[ಬುಖಾರಿ]*

ಧರ್ಮದಲ್ಲಿ ಸೌಲಭ್ಯ

(425) بَالَ أَعْرَابِيٌّ فِي الْمَسْجِدِ، فَقَامَ النَّاسُ إِلَيْهِ لِيَقَعُوا فِيهِ، فَقَالَ النَّبِيُّ ﷺ دَعُوهُ وَأَرِيقُوا عَلَى بَوْلِهِ سَجْلًا مِنْ مَاءٍ أَوْ ذَنُوبًا مِنْ مَاءٍ، فَإِنَّمَا بُعِثْتُمْ مُيَسِّرِينَ وَلَمْ تُبْعَثُوا مُعَسِّرِينَ۔ (بخاری۔ ابوہریرہؓ)

ಒಬ್ಬ ಗ್ರಾಮೀಣ ಅರಬನು ಮಸೀದಿಯಲ್ಲಿ ಮೂತ್ರ ಶಂಕೆ ಮಾಡಿದನು. ಆಗ ಜನರು ಅವನನ್ನು ಹೊಡೆಯಲಿಕ್ಕಾಗಿ ಧಾವಿಸಿದರು. ಪ್ರವಾದಿ(ಸ) ಜನರೊಡನೆ ಹೇಳಿದರು- ಅವನನ್ನು ಬಿಟ್ಟು ಬಿಡಿರಿ, ಅವನ ಮೂತ್ರದ ಮೇಲೆ ಒಂದು ಬಾಲ್ದಿ ನೀರು ಹಾಯಿಸಿರಿ. ನೀವು ಜನರನ್ನು ಧರ್ಮದ ಕಡೆಗೆ ಸೆಳೆಯಲಿಕ್ಕಾಗಿ ಮತ್ತು ಧರ್ಮವನ್ನು ಅವರಿಗೆ ಸುಲಭಗೊಳಿಸಲಿಕ್ಕಾಗಿ ನಿಯುಕ್ತರಾಗಿರುವಿರಿ. ಅಲ್ಲಾಹನು(ನಿಮ್ಮ ಯುಕ್ತಿ ಹೀನ ವರ್ತನೆಯಿಂದ) ಜನರು ಧರ್ಮದ ಕಡೆಗೆ ಬರುವುದು ಕಷ್ಟಕರವಾಗುವಂತೆ ಮಾಡಲು ನಿಮ್ಮನ್ನು ನಿಯುಕ್ತಗೊಳಿಸಲಿಲ್ಲ.

[ಬುಖಾರಿ- ವರದಿ: ಅಬೂ ಹುರೈರಾ(ರ)]

ಭಾವನೆಗಳಿಗೆ ಮನ್ನಣೆ

(426) عَنْ مَالِكِ بْنِ الْحُوَيْرِثِ قَالَ: أَتَيْنَا النَّبِيَّ ﷺ وَنَحْنُ شَبَبَةٌ مُتَقَارِبُونَ، فَأَقَمْنَا عِنْدَهُ عِشْرِينَ لَيْلَةً، وَكَانَ رَسُولُ اللّٰهِ ﷺ رَحِيمًا رَفِيقًا، فَظَنَّ أَنَّا قَدِ اشْتَقْنَا أَهْلَنَا، فَسَأَلَ عَمَّنْ تَرَكْنَا مِنْ أَهْلِنَا، فَأَخْبَرْنَاهُ، فَقَالَ ارْجِعُوا إِلَى أَهْلِيكُمْ فَأَقِيمُوا فِيهِمْ وَعَلِّمُوهُمْ وَمُرُوهُمْ وَصَلُّوا صَلَاةَ كَذَا حِينَ كَذَا وَصَلَاةَ كَذَا فِي حِينِ كَذَا، (وَفِي رِوَايَةٍ وَصَلُّوا كَمَا رَأَيْتُمُونِي أُصَلِّي) فَإِذَا حَضَرَتِ الصَّلٰوةُ فَلْيُؤَذِّنْ لَكُمْ أَحَدُكُمْ وَلْيَؤُمَّكُمْ أَكْبَرُكُمْ۔

(بخاری، مسلم)

ಮಾಲಿಕ್ ಬಿನ್ ಹುವೈರಿಸ್(ರ) ಹೇಳುತ್ತಾರೆ- ನಾವು ಕೆಲವು ಸಮವಯಸ್ಕ ಯುವಕರು ಧರ್ಮದ ಶಿಕ್ಷಣ ಪಡೆಯಲಿಕ್ಕಾಗಿ ಪ್ರವಾದಿಯವರ(ಸ) ಬಳಿಗೆ ಹೋದೆವು. ಅಲ್ಲಿ ನಾವು ಇಪ್ಪತ್ತು ದಿನಗಳ ವರೆಗೆ ತಂಗಿದೆವು. ಪ್ರವಾದಿ(ಸ) ಅತ್ಯಂತ ಕರುಣಾಳು ಹಾಗೂ ಮೃದು ನೀತಿ ಅನುಸರಿಸುವವರಾಗಿದ್ದರು. ನಾವು ನಮ್ಮ ಮನೆಗಳಿಗೆ ಮರಳ ಬಯಸುತ್ತೇವೆ ಎಂದಾಗ- ಪ್ರವಾದಿ(ಸ) ಹೇಳಿದರು- ನೀವು ನಿಮ್ಮ ಪತ್ನಿ ಮಕ್ಕಳೆಡೆಗೆ ಮರಳಿರಿ. ನೀವು ಕಲಿತದ್ದನ್ನು ಅವರಿಗೂ ಕಲಿಸಿರಿ. ಉತ್ತಮ ವಿಷಯಗಳನ್ನು ತಿಳಿಸಿರಿ. ಇಂತಹ ನಮಾಝುನ್ನು ಇಂತಹ ಸಮಯದಲ್ಲಿ ನಿರ್ವಹಿಸಿರಿ. (ಇನ್ನೊಂದು ವರದಿಯಲ್ಲಿ ನಾನು ನಮಾಝ್ ನಿರ್ವಹಿಸುವುದನ್ನು ಕಂಡಂತೆ ನೀವೂ ನಿರ್ವಹಿಸಿರಿ ಎಂದಿದೆ) ನಮಾಝ್‌ನ ಸಮಯವಾದಾಗ ನಿಮ್ಮ ಪೈಕಿ ಒಬ್ಬನು ಅದಾನ್ ಹೇಳಬೇಕು. ನಿಮ್ಮ ಪೈಕಿ ವಿದ್ಯೆ ಮತ್ತು ಚಾರಿತ್ರ್ಯದಲ್ಲಿ ಉತ್ತಮನಾಗಿರುವವನು ಇಮಾಮತ್ (ನಮಾಝ್‌ನ ನಾಯಕತ್ವ) ಮಾಡಬೇಕು. *[ಬುಖಾರಿ, ಮುಸ್ಲಿಮ್]*

ಅಲ್ಲಾಹನ ಆದೇಶಗಳು: ಅವರ ದೃಷ್ಟಿಯಲ್ಲಿ

(427) عَنْ اُمَيْمَةَ بِنْتِ رُقَيْقَةَ قَالَتْ بَايَعْتُ النَّبِيَّ صَلَّى اللّٰهُ عَلَيْهِ وَسَلَّمَ فِيْ نِسْوَةٍ فَقَالَ
فِيْمَا اسْتَطَعْتُنَّ وَاَطَقْتُنَّ، قُلْتُ اللّٰهُ وَرَسُوْلُهٗ اَرْحَمُ بِنَا مِنَّا بِاَنْفُسِنَا (مشكوة المصابيح)

ಹ. ಉಮೈಮಾ(ರ) ಹೇಳುತ್ತಾರೆ- ನಾನು ಕೆಲವು ಸ್ತ್ರೀಯರೊಂದಿಗೆ ಪ್ರವಾದಿಯವರ(ಸ) ಮುಂದೆ ಧರ್ಮದ ಆದೇಶಗಳಂತೆ ನಡೆಯುತ್ತೇನೆಂಬ ಪ್ರತಿಜ್ಞೆ ಮಾಡಿದೆ. ಪ್ರವಾದಿ(ಸ) ನಮ್ಮೊಂದಿಗೆ ಕರಾರು ಮಾಡುತ್ತಿದ್ದಾಗ ಹೇಳಿದರು- ನಿಮಗೆ ಸಾಧ್ಯವಿರುವಷ್ಟು ಮತ್ತು ನಿಮ್ಮ ಶಕ್ತ್ಯಾನುಸಾರ ಅವುಗಳಂತೆ ನಡೆಯಿರಿ. ಉಮೈಮಾ(ರ) ಹೇಳುತ್ತಾರೆ- ನಾವು ನಮ್ಮ ಮೇಲೆ ಎಷ್ಟು ಕರುಣಾಳುಗಳೋ ಅದಕ್ಕಿಂತಲೂ ಹೆಚ್ಚು ಅಲ್ಲಾಹನೂ ಅವನ ಪ್ರವಾದಿಯೂ(ಸ) ನಮ್ಮ ಮೇಲೆ ಕರುಣೆಯುಳ್ಳವರಾಗಿದ್ದಾರೆ. *[ಮಿಶ್ಕಾತ್]*

ಟಿಪ್ಪಣಿ: ಹ. ಉಮೈಮಾರ ಮಾತಿನ ತಾತ್ಪರ್ಯವೇನೆಂದರೆ ಅಲ್ಲಾಹ್ ಮತ್ತು ಅವನ ಪ್ರವಾದಿ(ಸ) ನಮ್ಮ ಮೇಲೆ ನಮಗಿಂತಲೂ ಅಧಿಕ ಹಿತ ಚಿಂತನೆ ಮತ್ತು ಕರುಣೆಯುಳ್ಳವರಾಗಿದ್ದಾರೆ. ಅವರ ವತಿಯಿಂದ ಬಂದಿರುವ ಆದೇಶಗಳು ನಮ್ಮ ಶಕ್ತಿ- ಸಾಮರ್ಥ್ಯಗಳಿಗೆ ಮೀರಿರಲು ಸಾಧ್ಯವಿಲ್ಲ. ಆದುದರಿಂದ ಈ ಶರ್ತಗಳ ಅಗತ್ಯವೇನಿದೆ?

ಸಹಾಬಿಗಳಾದ ಸ್ತ್ರೀ-ಪುರುಷರು ಆಲೋಚಿಸುವ ರೀತಿಯಿದು! ಹ. ಅಬ್ದುಲ್ಲಾ ಬಿನ್ ಮಸ್‌ವೂದ್(ರ) ಸರಿಯಾಗಿಯೇ ಹೇಳಿದ್ದಾರೆ- "ಇವರು ಅತ್ಯಂತ ಗಹನವಾದ ಜ್ಞಾನ ಹೊಂದಿದ ವ್ಯಕ್ತಿಗಳಾಗಿದ್ದರು."

ಕಾಪಟ್ಯವೆಂದರೇನು?

(428) عَنْ مُحَمَّدِ بْنِ زَيْدٍ اَنَّ اُنَاسًا قَالُوا لِجَدِّهٖ عَبْدِ اللّٰهِ بْنِ عُمَرَ اِنَّا نَدْخُلُ عَلٰى سُلْطَانِنَا فَنَقُوْلُ بِخِلَافِ مَا نَتَكَلَّمُ اِذَا خَرَجْنَا مِنْ عِنْدِهٖ، فَقَالَ كُنَّا نَعُدُّ هٰذَا نِفَاقًا عَلٰى عَهْدِ رَسُوْلِ اللّٰهِ صَلَّى اللّٰهُ عَلَيْهِ وَسَلَّمَ (بخاری)

ಮುಹಮ್ಮದ್ ಬಿನ್ ಝೈದ್(ರ) ಹೇಳುತ್ತಾರೆ- ಕೆಲವು ಮಂದಿ ನನ್ನ ಅಜ್ಜ ಅಬ್ದುಲ್ಲಾ ಬಿನ್ ಉಮರ್‌ರ(ರ) ಬಳಿಗೆ ಬಂದು ಹೇಳಿದರು- ಸುಲ್ತಾನ(ಖಲೀಫಾ)ರ ಮುಂದೆ ನಾವು ಒಂದು ವಿಷಯ ಹೇಳುತ್ತೇವೆ. ಅಲ್ಲಿಂದ ಹೋದ ನಂತರ ಬೇರೆಯೇ ವಿಷಯ ಹೇಳುತ್ತೇವೆ. (ಇದರ ಬಗ್ಗೆ ತಮ್ಮ ಅಭಿಪ್ರಾಯವೇನು?) ಅಬ್ದುಲ್ಲಾ ಬಿನ್ ಉಮರ್(ರ) ಹೀಗೆ ಉತ್ತರಿಸಿದರು- ಪ್ರವಾದಿಯವರ(ಸ) ಕಾಲದಲ್ಲಿ ನಾವಿದನ್ನು ಮುನಾಫಿಕತ್(ಕಾಪಟ್ಯ) ಎಂದು ಪರಿಗಣಿಸುತ್ತಿದ್ದೆವು. *[ಬುಖಾರಿ]*

ಟಿಪ್ಪಣಿ: ಸುಲ್ತಾನರೆಂದರೆ ಬನೂ ಉಮಯ್ಯಾರ ಆಡಳಿತಾಧಿಕಾರಿಗಳಾಗಿದ್ದವರು. ಹ. ಅಬ್ದುಲ್ಲಾ ಬಿನ್ ಉಮರ್(ರ) ಉಮವಿ ಆಡಳಿತದ ಕಾಲದವರೆಗೂ ಜೀವಿಸಿದ್ದರು. ಉಮವಿ ಆಡಳಿತವು ಖಿಲಾಫತೆ ರಾಶಿದಃ(ಸತ್ಯ ಸಂಧರಾದ ಖಲೀಫರ ಆಡಳಿತ) ಆಗಿರಲಿಲ್ಲ.

ಸಹಾಬಿಗಳ(ರ) ಆದರ್ಶ ಪಾಲಿಸಿರಿ

(429) عَنِ ابْنِ مَسْعُوْدٍ قَالَ، مَنْ كَانَ مُسْتَنًّا فَلْيَسْتَنَّ بِمَنْ قَدْ مَاتَ، فَاِنَّ الْحَيَّ لَا تُؤْمَنُ عَلَيْهِ الْفِتْنَةُ، اُولٰئِكَ اَصْحَابُ مُحَمَّدٍ صَلَّى اللّٰهُ عَلَيْهِ وَسَلَّمَ، كَانُوْا اَفْضَلَ هٰذِهِ الْاُمَّةِ اَبَرَّهَا قُلُوْبًا وَاَعْمَقَهَا عِلْمًا وَاَقَلَّهَا تَكَلُّفًا، اِخْتَارَهُمُ اللّٰهُ لِصُحْبَةِ نَبِيِّهٖ وَلِاِقَامَةِ دِيْنِهٖ، فَاعْرِفُوْا لَهُمْ فَضْلَهُمْ، وَاتَّبِعُوْهُمْ عَلٰى اٰثَرِهِمْ، وَتَمَسَّكُوْا بِمَا اسْتَطَعْتُمْ مِنْ اَخْلَاقِهِمْ وَسِيَرِهِمْ، فَاِنَّهُمْ كَانُوْا عَلَى الْهُدَى الْمُسْتَقِيْمِ (مشکوٰۃ المصابیح)

ಹ. ಇಬ್ನು ಮಸ್‌ವೂದ್(ರ) ಹೇಳುತ್ತಾರೆ- ಸನ್ಮಾರ್ಗದಲ್ಲಿ ನಡೆಯ ಬಯಸುವವರು ಈಗಾಗಲೇ ಮರಣ ಹೊಂದಿದವರ ಮಾರ್ಗವನ್ನು ಅವಲಂಬಿಸಬೇಕು. ಏಕೆಂದರೆ ಜೀವಿಸಿರುವ ತನಕ ಮಾನವನು ಪರೀಕ್ಷೆಗಳಿಗೆ ಗುರಿಯಾಗುವ ಹಾಗೂ ಸತ್ಯ ಧರ್ಮದಿಂದ ಸರಿದು ಹೋಗುವ ಅಪಾಯವಿರುತ್ತದೆ. ನಾನು ಸೂಚಿಸುವ ಆ ಮರಣ ಹೊಂದಿದ ವ್ಯಕ್ತಿಗಳೆಂದರೆ ಪ್ರವಾದಿಯವರ(ಸ) ಸಂಗಾತಿಗಳಾಗಿದ್ದಾರೆ. ಆ ಮಂದಿ ಸಮುದಾಯದ ಅತ್ಯುತ್ತಮ ವ್ಯಕ್ತಿಗಳಾಗಿದ್ದರು. ಅವರ ಮನಸ್ಸಿನಲ್ಲಿ ಅಲ್ಲಾಹನ ಆಜ್ಞಾನುಸರಣೆ ಮನೆ ಮಾಡಿ ಕೊಂಡಿತ್ತು. ಅವರು ಧರ್ಮದ ಅಗಾಧ ಜ್ಞಾನ ಹೊಂದಿದವರಾಗಿದ್ದರು. ಅವರು ಡಂಬಾಚಾರಿ ಗಳಾಗಿರಲಿಲ್ಲ. ಅವರನ್ನು ಅಲ್ಲಾಹನು ತನ್ನ ಪ್ರವಾದಿಯ ಬೆಂಬಲಕ್ಕೆ ಹಾಗೂ ತನ್ನ ಧರ್ಮದ ಸಂಸ್ಥಾಪನೆಗಾಗಿ ಆಯ್ಕೆ ಮಾಡಿದ್ದನು. ಆದುದರಿಂದ ಮುಸ್ಲಿಮರೇ! ಅವರ ಸ್ಥಾನಮಾನವನ್ನರಿಯಿರಿ. ಅವರ ಹಿಂದೆ ನಡೆಯಿರಿ. ಅವರ ಶೀಲ-ಚಾರಿತ್ರ್ಯವನ್ನು ನಿಮ್ಮ ಶಕ್ತ್ಯಾನುಸಾರ ಭದ್ರವಾಗಿ ಹಿಡಿಯಿರಿ. ಏಕೆಂದರೆ ಆ ಮಂದಿ ಅಲ್ಲಾಹನು ತೋರಿಸಿದ ಸನ್ಮಾರ್ಗದಲ್ಲಿ ನಡೆಯುವವರಾಗಿದ್ದರು. *[ಮಿಶ್ಕಾತ್]*

ಟಿಪ್ಪಣಿ: ಹ. ಅಬ್ದುಲ್ಲಾ ಬಿನ್ ಮಸ್‌ವೂದ್(ರ) ದೀರ್ಘಾಯುಷ್ಯ ಪಡೆದಿದ್ದರು. ಅವರ ಜೀವಿತ ಕಾಲದಲ್ಲೇ ಅನೇಕ ಸಹಾಬಿಗಳು ಮರಣ ಹೊಂದಿದ್ದರು. ಪ್ರವಾದಿತ್ವದ ಕಾಲವು ಹಿಂದೆ ಸರಿದಂತೆ ಜನರಲ್ಲಿ ಕೆಡುಕುಗಳು ಹುಟ್ಟುತ್ತಿದ್ದುದನ್ನು ಅವರು ಕಂಡಿದ್ದರು. ವಿಭಿನ್ನ ವರ್ಗದ ಜನರು ವಿಭಿನ್ನ ಜನರನ್ನು ತಮ್ಮ ನಾಯಕರಾಗಿ ಮಾಡಿಕೊಳ್ಳುತ್ತಿದ್ದರು. ಆದುದರಿಂದ ಪ್ರವಾದಿಯವರ(ಸ) ಸಂಗಾತಿ ಗಳನ್ನು ತಮ್ಮ ನಾಯಕರಾಗಿ ಮಾಡಿಕೊಳ್ಳುವಂತೆ ಮತ್ತು ಅವರ ಶೀಲ-ಚಾರಿತ್ರ್ಯಗಳನ್ನು ಅಳವಡಿಸಿಕೊಳ್ಳು ವಂತೆ ಅವರು ಜನರಿಗೆ ಕರೆ ನೀಡಿದರು.

ಸಂಘಟಿತ ನಮಾಝ್‌ಗಾಗಿ ಇಡುವ ಹೆಜ್ಜೆ

(430) عَنْ اُبَيِّ بْنِ كَعْبٍ قَالَ: كَانَ رَجُلٌ مِنَ الْاَنْصَارِ لَا اَعْلَمُ اَحَدًا اَبْعَدَ مِنَ الْمَسْجِدِ مِنْهُ، كَانَتْ لَا تُخْطِئُهُ صَلٰوةٌ، فَقِيْلَ لَهُ لَوِ اشْتَرَيْتَ حِمَارًا تَرْكَبُهُ فِي الظَّلْمَاءِ وَفِي الرَّمْضَاءِ، فَقَالَ مَا يَسُرُّنِيْ اَنَّ مَنْزِلِيْ اِلٰى جَنْبِ الْمَسْجِدِ، اِنِّيْ اُرِيْدُ اَنْ يُكْتَبَ لِيْ مَمْشَايَ اِلَى الْمَسْجِدِ وَرُجُوْعِيْ اِذَا رَجَعْتُ اِلٰى اَهْلِيْ، فَقَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ قَدْ جَمَعَ اللّٰهُ لَكَ ذٰلِكَ كُلَّهُ (ترغيب بحوالہ صحيح مسلم)

ಉಬಯ್ಯ್ ಬಿನ್ ಕಅಬ್(ರ) ಹೇಳುತ್ತಾರೆ- ಓರ್ವ ಅನ್ಸಾರಿ(ಮದೀನಾದ ನಿವಾಸಿ)ಯ ಮನೆಯು ಮಸ್ಜಿದುನ್ನಬವಿಯಿಂದ ಬಹಳ ದೂರದಲ್ಲಿತ್ತು. ಅವರ ಮನೆಯಷ್ಟು ದೂರ ಯಾರ ಮನೆಯೂ ಇರಲಿಲ್ಲ. ಆದರೂ ಅವರಿಂದ ಯಾವ ನಮಾಝ್ ಕೂಡ ಬಿಟ್ಟು ಹೋಗುತ್ತಿರಲಿಲ್ಲ. ಅವರೊಂದಿಗೆ, ನೀವು ಕತ್ತಲೆ ಮತ್ತು ಬಿಸಿಲಿನ ಸವಾರಿಗಾಗಿ ಒಂದು ಕತ್ತೆಯನ್ನಾದರೂ ಖರೀದಿಸಿದ್ದರೆ ಚೆನ್ನಾಗಿತ್ತಲ್ಲವೆ ಎಂದು ಹೇಳಲಾದಾಗ ಅವರು ಹೀಗೆಂದರು- ನನ್ನ ಮನೆಯು ಮಸ್ಜಿದುನ್ನಬವಿಗೆ ಹತ್ತಿರವಾಗಿರುವುದು ನನಗಿಷ್ಟವಿಲ್ಲ. ಮಸೀದಿಯ ವರೆಗೆ ಕಾಲ್ನಡಿಗೆಯಲ್ಲಿ ಬಂದು ಮನೆಗೆ ಕಾಲ್ನಡಿಗೆಯಲ್ಲೇ ಮರಳುವುದರ ಪುಣ್ಯವು ನನ್ನ ಲೆಕ್ಕಪತ್ರದಲ್ಲಿ ಬರೆಯಲ್ಪಡಬೇಕೆಂದು ನಾನು ಬಯಸುತ್ತೇನೆ. ಆಗ ಪ್ರವಾದಿ(ಸ) ಹೀಗೆಂದರು- ನಿಮಗಾಗಿ ಇದೆಲ್ಲವನ್ನೂ ಬರೆಯಲಾಯಿತು. *[ತರ್ಗೀಬ್‌ನಲ್ಲಿ- ಮುಸ್ಲಿಮ್‌ನಿಂದ]*

ಫಜ್ರ್ ಮತ್ತು ಇಶಾ ನಮಾಝ್ - ಸಹಾಬಿಗಳ ದೃಷ್ಟಿಯಲ್ಲಿ

(431) عَنِ ابْنِ عُمَرَ رض قَالَ كُنَّا إِذَا فَقَدْنَا الرَّجُلَ فِي الْفَجْرِ وَالْعِشَاءِ أَسَأْنَا بِهِ الظَّنَّ (ترغيب بحواله صحيح ابن خزيمه)

ಹ. ಅಬ್ದುಲ್ಲಾ ಬಿನ್ ಉಮರ್(ರ) ಹೇಳುತ್ತಾರೆ: ನಾವು ಯಾರನ್ನಾದರೂ ಫಜ್ರ್ ಮತ್ತು ಇಶಾದ ಸಾಮೂಹಿಕ ನಮಾಝ್‌ನಲ್ಲಿ ಕಾಣದಿದ್ದರೆ ಅವರ ಬಗ್ಗೆ ಕೆಟ್ಟ ಭಾವನೆ ತಾಳುತ್ತಿದ್ದೆವು. *[ತರ್ಗೀಬ್- ಇಬ್ನು ಖುಝೈಮರಿಂದ]*

ಟಿಪ್ಪಣಿ: ಅಂತಹ ವ್ಯಕ್ತಿಗಳ ಕುರಿತು ಅವರು ಮುನಾಫಿಕ್ ಆಗಿ ಬಿಟ್ಟರೋ ಎಂಬ ಭಾವನೆ ನಮ್ಮಲ್ಲಿ ಮೂಡುತ್ತಿತ್ತು. ಮುನಾಫಿಕರು ಹೆಚ್ಚಾಗಿ ಫಜ್ರ್ ಮತ್ತು ಇಶಾ ನಮಾಝ್‌ಗಳಿಗೆ ಬರುತ್ತಿರಲಿಲ್ಲ. ಆ ಕಾಲದಲ್ಲಿ ವಿದ್ಯುದ್ದೀಪಗಳಿರಲಿಲ್ಲವಷ್ಟೆ. ತಪ್ಪಿಸಿಕೊಳ್ಳಲು ಸಾಕಷ್ಟು ಅವಕಾಶಗಳಿರುತ್ತಿದ್ದುವು. ಆದುದರಿಂದ ಹೃದಯದಲ್ಲಿ ಈಮಾನ್ ಇಲ್ಲದ ಈ ಕಪಟವಿಶ್ವಾಸಿಗಳು ಫಜ್ರ್ ಮತ್ತು ಇಶಾ ನಮಾಝ್‌ಗೆ ಬರುತ್ತಿರಲಿಲ್ಲ. ಹಗಲಿನ ನಮಾಝ್‌ಗಳಿಗೆ ಮಾತ್ರ ಮಸೀದಿಯಲ್ಲಿ ಹಾಜರಿರುತ್ತಿದ್ದರು. ಅವರ ಚಿತ್ರಣವನ್ನು ಕುರ್‌ಆನ್ ಹೀಗೆ ವಿವರಿಸಿದೆ- "ಅವರು ನಮಾಝ್‌ಗೆ ಆಲಸ್ಯದೊಂದಿಗೆ ಬರುತ್ತಾರೆ." *[ಅತ್ತೌಬಃ 54]*

❖ ❖ ❖

ಪ್ರವಾದಿವರ್ಯರ(ಸ) ಸಂಗಾತಿಗಳ ಜೀವನ

ಹಗಲಿನ ಯೋಧರು, ರಾತ್ರಿಯ ಆರಾಧಕರು

(432) عَنْ قَتَادَةَ قَالَ، سُئِلَ ابْنُ عُمَرَ هَلْ كَانَ أَصْحَابُ رَسُوْلِ اللهِ صَلَّى اللهُ عَلَيْهِ وَسَلَّمَ
يَضْحَكُوْنَ؟ قَالَ نَعَمْ، وَالْإِيْمَانُ فِيْ قُلُوْبِهِمْ أَعْظَمُ مِنَ الْجَبَلِ، وَقَالَ بِلَالُ بْنُ سَعْدٍ
أَدْرَكْتُهُمْ يَشْتَدُّوْنَ بَيْنَ الْأَغْرَاضِ وَيَضْحَكُ بَعْضُهُمْ إِلَى بَعْضٍ، فَإِذَا كَانَ اللَّيْلُ كَانُوْا
رُهْبَانًا (مشكوة المصابيح)

ಕತಾದ(ತಾಬಈ) ಹೇಳುತ್ತಾರೆ- ಓರ್ವರು ಹ.ಅಬ್ದುಲ್ಲಾ ಬಿನ್ ಉಮರ್‌ರೊಂದಿಗೆ(ರ), ಪ್ರವಾದಿಯವರ(ಸ) ಸಂಗಾತಿಗಳು ನಗುತ್ತಾರೆಯೇ ಎಂದು ಕೇಳಿದರು. ಆಗ ಅವರು ಹೀಗೆಂದರು- ಹೌದು! ಅವರು ನಗುತ್ತಲೂ ಇದ್ದರು. ಅವರ ಹೃದಯಗಳಲ್ಲಿ ಸತ್ಯವಿಶ್ವಾಸವು ಬೆಟ್ಟದಂತೆ, ಮಾತ್ರವಲ್ಲ ಅದಕ್ಕಿಂತಲೂ ಹೆಚ್ಚು ಬಲಿಷ್ಠವಾಗಿರುತ್ತಿತ್ತು. ಅದನ್ನು ಯಾರಿಂದಲೂ ಅಲುಗಾಡಿಸಲು ಸಾಧ್ಯವಾಗುತ್ತಿರಲಿಲ್ಲ. ಬಿಲಾಲ್ ಬಿನ್ ಸಅದ್ (ತಾಬಈ) ಹೇಳುತ್ತಾರೆ- ನಾನು ಸಹಾಬಿಗಳನ್ನು ಹಗಲಿನಲ್ಲಿ ಓಟದ ಸ್ಪರ್ಧೆಯಲ್ಲಿ ಕಂಡಿದ್ದೇನೆ. ಅವರು ಪರಸ್ಪರ ತಮಾಷೆಯಾಡುತ್ತಿರುವುದನ್ನು ಕಂಡಿದ್ದೇನೆ. ಆದರೆ ರಾತ್ರಿಯಾದಾಗ ಅವರು ಬೈರಾಗಿಗಳಾಗಿ ಬಿಡುತ್ತಿದ್ದರು. *[ಮಿಶ್ಕಾತ್]*

ಟಿಪ್ಪಣಿ: ಸಾಮಾನ್ಯವಾಗಿ 'ದೇವ ಮಾನವರು' ನಗಬಾರದೆಂದು ಭಾವಿಸಲಾಗುತ್ತದೆ. ಅವರು ಈಜಾಟ, ಬಾಣ ಎಸೆತ ಹಾಗೂ ಇಂತಹ ಇನ್ನಿತರ ಯಾವುದೇ ಕೆಲಸಗಳನ್ನು ಮಾಡದೆ ಎಲ್ಲೋ ಮೂಲೆಯಲ್ಲಿ ಕುಳಿತು ದೇವನಾಮವನ್ನು ಜಪಿಸುತ್ತಿರಬೇಕೆಂದೂ ಭಾವಿಸಲಾಗುತ್ತದೆ. ಆದುದರಿಂದಲೇ ಇಬ್ನು ಉಮರ್‌ರವರೊಂದಿಗೆ ಕೇಳಿದ ಪ್ರಶ್ನೆಗಳಿಗೆ ಅವರು ಹೀಗೆ ಉತ್ತರಿಸಿದರು- "ನಗುನಗುತ್ತಾ ಮಾತನಾಡುವುದು, ಓಟದ ಸ್ಪರ್ಧೆಯಲ್ಲಿ ಭಾಗವಹಿಸುವುದು, ಬಾಣ ಎಸೆತದ ಅಭ್ಯಾಸವೇ ಮೊದಲಾದವು ಲೌಕಿಕ ಕಾರ್ಯಗಳಾಗಿರದೆ, ಅವೂ ಅಪ್ಪಟ ಧಾರ್ಮಿಕ ಕಾರ್ಯಗಳಾಗಿವೆ." ಆದುದರಿಂದಲೇ ಪ್ರವಾದಿಯವರ(ಸ) ಸಂಗಾತಿಗಳು ಈ ಎಲ್ಲ ಕಾರ್ಯಗಳನ್ನು ಮಾಡುತ್ತಿದ್ದರು. ಆದರೆ ರಾತ್ರಿಯ ಅಂಧಕಾರದಲ್ಲಿ ಅವರು ತಮ್ಮ ಪ್ರಭುವಿನೊಡನೆ ಪ್ರಾರ್ಥಿಸುತ್ತಿದ್ದರು. ಐಚ್ಛಿಕ ನಮಾಝ್‌ಗಳನ್ನೂ ಕುರ್‌ಆನ್ ಪಾರಾಯಣವನ್ನೂ ಮಾಡುತ್ತಿದ್ದರು. ಹಗಲಿನ ಈ ಯೋಧರು ರಾತ್ರಿಯಲ್ಲಿ ಜಾಗರಣೆ ಮಾಡಿಕೊಂಡು ಆರಾಧನಾ ನಿರತರಾಗಿರುತ್ತಿದ್ದರು.

ಸತ್ಯದ ಬಗ್ಗೆ ನಿಷ್ಠುರತೆ

(433) عَنْ عَبْدِ الرَّحْمٰنِ قَالَ لَمْ يَكُنْ أَصْحَابُ رَسُوْلِ اللّٰهِ صَلَّى اللّٰهُ عَلَيْهِ وَسَلَّمَ مُتَحَزِّقِيْنَ وَلَا مُتَمَاوِتِيْنَ، وَكَانُوْا يَتَنَاشَدُوْنَ الشِّعْرَ فِيْ مَجَالِسِهِمْ، وَيَذْكُرُوْنَ أَمْرَ جَاهِلِيَّتِهِمْ فَإِذَا أُرِيْدَ أَحَدٌ مِنْهُمْ عَلٰى شَيْءٍ مِنْ أَمْرِ اللّٰهِ دَارَتْ حَمَالِيْقُ عَيْنَيْهِ كَأَنَّهُ مَجْنُوْنٌ (الادب المفرد امام بخاری)

ಅಬ್ದುರ್ರಹ್ಮಾನ್(ರ) ಹೇಳುತ್ತಾರೆ- ಪ್ರವಾದಿಯವರ(ಸ) ಸಂಗಾತಿಗಳು ಸಂಕುಚಿತ ಹೃದಯಿಗಳೋ ಸಂಕುಚಿತ ಮನೋಭಾವದವರೋ ಆಗಿರಲಿಲ್ಲ. ಅವರು ತಮ್ಮ ಸಭೆಗಳಲ್ಲಿ ಕವಿಗೋಷ್ಠಿಗಳನ್ನು ಏರ್ಪಡಿಸುತ್ತಿದ್ದರು. ತಮ್ಮ ಅಜ್ಞಾನ ಕಾಲದ ಜೀವನ ಮತ್ತು ಅದರ ಘಟನೆಗಳನ್ನು ಹೇಳಿಕೊಳ್ಳುತ್ತಿದ್ದರು. ಆದರೆ ಅಲ್ಲಾಹನ ಧರ್ಮದ ವಿಷಯದಲ್ಲಿ ಅವರೊಂದಿಗೆ ಯಾರಾದರೂ ಅನುಚಿತ ಬೇಡಿಕೆ ಸಲ್ಲಿಸಿದರೆ ಅವರ ಕಣ್ಣು ಗುಂಡಿಗಳು ಕೋಪದಿಂದ ಕುಣಿದಾಡುತ್ತಿದ್ದು ಅವರು ಹುಚ್ಚರೋ ಎಂಬಂತೆ ಭಾಸವಾಗುತ್ತಿತ್ತು.

[ಅಲ್ ಅದಬುಲ್ ಮುಫ್ರದ್- ಇಮಾಮ್ ಬುಖಾರಿ]

ಟಿಪ್ಪಣಿ: ಅಂದರೆ ಸಹಾಬಿಗಳು ಇತರ ಧರ್ಮಗಳ ಪುರೋಹಿತರು ಹಾಗೂ ನಾಯಕರಂತೆ ಯಾರೊಂದಿಗೂ ಮಾತಾಡದ, ಯಾರನ್ನೂ ಭೇಟಿಯಾಗದ, ಸದಾ ತಲೆತಗ್ಗಿಸಿ ಜಪ ಮಾಡುತ್ತಿರುವವರಂತೆ ತಮ್ಮನ್ನು ಮಾಡಿಕೊಂಡಿರಲಿಲ್ಲ. ಬದಲಾಗಿ ಅವರು ಅತ್ಯಂತ ಕುಶಾಗ್ರಮತಿಗಳಾಗಿದ್ದು ಎಲ್ಲರೊಂದಿಗೂ ಬೆರೆಯುತ್ತಿದ್ದರು. ಸಂದರ್ಭ ಬಂದರೆ ಕವಿತೆಗಳನ್ನು ಹಾಡುತ್ತಿದ್ದರು. ಇಸ್ಲಾಮಿಗಿಂತ ಮುಂಚಿನ ಕಾಲದ ಕೆಡುಕುಗಳ ಮತ್ತು ರೀತಿ ನೀತಿಗಳ ಪ್ರಸ್ತಾಪ ಮಾಡುತ್ತಿದ್ದರು. ಆದರೆ ಅವರಲ್ಲಿ ಎದ್ದು ತೋರುವ ಒಂದು ವಿಶಿಷ್ಟ ಗುಣವೆಂದರೆ ಅವರಲ್ಲಿ ಧರ್ಮದ ಬಗ್ಗೆ ಪ್ರೀತಿ ಆದರಗಳಿದ್ದುವು. ಯಾರಾದರೂ ಅವರೊಂದಿಗೆ ಸತ್ಯಕ್ಕೆ ಎದುರಾಗಿ ಏನಾದರೂ ಮಾಡಲು ಹೇಳಿದರೆ ಆಗ ಅವರ ಕೋಪ ನೆತ್ತಿಗೇರಿ ಅವರು ಹುಚ್ಚರಂತಾಗುತ್ತಿದ್ದರು.

---

(434) عَنْ بَكْرِ بْنِ عَبْدِ اللّٰهِ قَالَ كَانَ أَصْحَابُ النَّبِيِّ صَلَّى اللّٰهُ عَلَيْهِ وَسَلَّمَ يَتَبَادَحُوْنَ بِالْبِطِّيْخِ، فَإِذَا كَانَتِ الْحَقَائِقُ كَانُوْا هُمُ الرِّجَالَ (الادب المفرد امام بخاری)

ಬಕ್‌ರ್ ಬಿನ್ ಅಬ್ದುಲ್ಲಾ(ರ) ಹೇಳುತ್ತಾರೆ- ಪ್ರವಾದಿಯವರ(ಸ) ಸಂಗಾತಿಗಳು ಕಲ್ಲಂಗಡಿ ಹಣ್ಣಿನ ಸಿಪ್ಪೆಯನ್ನು ಪರಸ್ಪರರ ಮೇಲೆ ಎಸೆಯುತ್ತಿದ್ದರು. ಆದರೆ ಇಸ್ಲಾಮಿನ ರಕ್ಷಣೆಯ ಸಂದರ್ಭ ಬಂದಾಗ ಅವರು ಅತ್ಯಂತ ಗಂಭೀರರೂ ಶೂರರೂ ಆಗಿರುತ್ತಿದ್ದರು.

[ಅಲ್ ಅದಬುಲ್ ಮುಫ್ರದ್- ಇಮಾಮ್ ಬುಖಾರಿ]

ಟಿಪ್ಪಣಿ: ಇನ್ನೊಂದು ಹದೀಸಿನ ತಾತ್ಪರ್ಯವೇನೆಂದರೆ- ಸಹಾಬಿಗಳು ಪರಸ್ಪರ ತಮಾಷೆ ಆಡುತ್ತಿದ್ದರು. ಅಷ್ಟೇ ಅಲ್ಲ, ಅವರು ಕಲ್ಲಂಗಡಿ ಹಣ್ಣಿನ ಸಿಪ್ಪೆಯನ್ನು ಪರಸ್ಪರರ ಮೇಲೆ ಎಸೆಯುತ್ತಿದ್ದರು.

ಪ್ರವಾದಿಯ(ಸ) ಅನುಕರಣೆ

(435) قَالَ ابْنُ الْحَنْظَلِيَّةِ قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ نِعْمَ الرَّجُلُ خُرَيْمٌ الْأَسَيْدِيُّ لَوْلَا طُوْلُ جُمَّتِهِ وَإِسْبَالُ إِزَارِهِ، فَبَلَغَ ذٰلِكَ خُرَيْمًا، فَأَخَذَ شَفْرَةً فَقَطَعَ بِهَا جُمَّتَهُ إِلَى أُذُنَيْهِ وَرَفَعَ إِزَارَهُ إِلَى أَنْصَافِ سَاقَيْهِ (رياض الصالحين)

ಇಬ್ನು ಹನ್ಝಲಿಯ್ಯ(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು- ಖುರೈಮ್ ಉಸೈದೀ, ಅವರ ತಲೆಯಲ್ಲಿ ಉದ್ದವಾದ ಕೂದಲು ಇಲ್ಲದಿರುತ್ತಿದ್ದರೆ ಮತ್ತು ಅವರ ಲುಂಗಿ ಮಣಿಗಂಟಿನ ಕೆಳಗಿಲ್ಲದಿರುತ್ತಿದ್ದರೆ ಅವರು ಬಹಳ ಉತ್ತಮ ವ್ಯಕ್ತಿಯಾಗಿದ್ದಾರೆ. ಖುರೈಮ್‌ರಿಗೆ ಪ್ರವಾದಿಯವರ(ಸ) ಈ ವಿಮರ್ಶೆಯ ಸುದ್ದಿ ತಿಳಿದ ಕೂಡಲೇ ಅವರು ತಮ್ಮ ಅಲಗನ್ನು ಹಿಡಿದರು, ತಮ್ಮ ಬೆಳೆದ ಕೂದಲನ್ನು ಕಿವಿಯ ವರೆಗೆ ಕತ್ತರಿಸಿದರು ಮತ್ತು ತಮ್ಮ ಲುಂಗಿಯನ್ನು ಹಿಮ್ಮಡಿಯ ಅರ್ಧಭಾಗದ ವರೆಗೆ ಎತ್ತಿ ಕಟ್ಟಿದರು.

[ರಿಯಾದುಸ್ಸಾಲಿಹೀನ್]

ಟಿಪ್ಪಣಿ: ಕೆಲವೊಮ್ಮೆ ತರಬೇತಿಗೆ ಇಂತಹ ವಿಧಾನವನ್ನು ಬಳಸಲಾಗುತ್ತದೆ. ಇದರಿಂದ ಸಹಾಬಿಗಳು ಪ್ರವಾದಿಯವರನ್ನು(ಸ) ಹೇಗೆ ಅನುಕರಿಸುತ್ತಿದ್ದರು ಎಂಬುದರ ಕಡೆಗೆ ಬೆಳಕು ಬೀಳುತ್ತದೆ.

---

(436) عَنْ جَابِرٍ قَالَ، أَتَى رَسُوْلُ اللهِ صَلَّى اللهُ عَلَيْهِ وَسَلَّمَ بَنِيْ عَمْرِوبْنِ عَوْفٍ يَوْمَ الْأَرْبَعَاءِ فَذَكَرَ الْحَدِيْثَ إِلَى أَنْ قَالَ يَا مَعْشَرَ الْأَنْصَارِ، قَالُوْا لَبَّيْكَ يَا رَسُوْلَ اللهِ، فَقَالَ كُنْتُمْ فِي الْجَاهِلِيَّةِ إِذْ لَا تَعْبُدُوْنَ اللهَ تَحْمِلُوْنَ الْكَلَّ وَتَفْعَلُوْنَ فِيْ أَمْوَالِكُمُ الْمَعْرُوْفَ، وَتَفْعَلُوْنَ إِلَى ابْنِ السَّبِيْلِ، حَتّٰى مَنَّ اللهُ عَلَيْكُمْ بِالْإِسْلَامِ وَنَبِيِّهِ، إِذَا أَنْتُمْ تُحَصِّنُوْنَ أَمْوَالَكُمْ، فِيْمَا يَأْكُلُ ابْنُ آدَمَ أَجْرٌ وَفِيْ مَا يَأْكُلُ السَّبُعُ وَالطَّيْرُ أَجْرٌ، قَالَ فَرَجَعَ الْقَوْمُ فَمَا مِنْهُمْ أَحَدٌ إِلَّا هَدَمَ مِنْ حَدِيْقَتِهِ ثَلَاثِيْنَ بَابًا،

(المنذری بحوالہ مستدرک حاکم)

ಜಾಬಿರ್(ರ) ಹೇಳುತ್ತಾರೆ- ಪ್ರವಾದಿಯವರು(ಸ) ಅಮ್ರ್ ಬಿನ್ ಔಫ್ ಗೋತ್ರದ ಕೇರಿಗೆ ಹೋದರು. ಅಂದು ಬುಧವಾರವಾಗಿತ್ತು. ಅಲ್ಲಿ ಪ್ರವಾದಿಯವರು(ಸ), 'ಅನ್ಸಾರ್‌ಗಳೇ!' ಎಂದು ಕೂಗಿ ಕರೆದರು. ಆಗ ಅವರು, 'ಅಲ್ಲಾಹನ ಸಂದೇಶವಾಹಕರೇ! ನಾವಿದೋ ಹಾಜರಿದ್ದೇವೆ. ಅಪ್ಪಣೆಯಾಗಲಿ' ಎಂದರು. ಪ್ರವಾದಿ(ಸ) ಹೇಳಿದರು- ನೀವು ಅಲ್ಲಾಹನ ಆರಾಧನೆ ಮಾಡದಿದ್ದ ಅಜ್ಞಾನ ಕಾಲದಲ್ಲಿ, ದುರ್ಬಲರ ಮತ್ತು ಅಸಹಾಯಕರ ಹೊರೆ ಹೊರುತ್ತಿದ್ದಿರಿ. ಬಡವರಿಗೆ ನಿಮ್ಮ ಸಂಪತ್ತಿನಿಂದ ಏನಾದರೂ ಕೊಡುತ್ತಿದ್ದಿರಿ ಮತ್ತು ಪ್ರಯಾಣಿಕರಿಗೆ ಸಹಾಯ ಮಾಡುತ್ತಿದ್ದಿರಿ. ಆದರೆ ಅಲ್ಲಾಹನು ನಿಮಗೆ ಇಸ್ಲಾಮಿನ ಮತ್ತು ಅವನ ಪ್ರವಾದಿಯ ಮೇಲೆ ವಿಶ್ವಾಸವಿರಿಸುವ ಸೌಭಾಗ್ಯ ನೀಡಿರುವಾಗ, ಈಗ ನೀವು ನಿಮ್ಮ ತೋಟಗಳನ್ನು ರಕ್ಷಿಸಲಿಕ್ಕಾಗಿ ಅವುಗಳ ಸುತ್ತಲೂ ಆವರಣ ಗೋಡೆಗಳನ್ನು ಕಟ್ಟುತ್ತೀರಿ. ನೆನಪಿಡಿರಿ! ಯಾರಾದರೂ ನಿಮ್ಮ ತೋಟದ ಫಲಗಳನ್ನು ತಿಂದರೆ ಅದಕ್ಕೂ ನಿಮಗೆ ಪುಣ್ಯ ಸಿಗುವುದು. ವನ್ಯ ಮೃಗಗಳು ಅಥವಾ ಪಕ್ಷಿಗಳು ತಿಂದರೂ ನಿಮಗೆ ಅದಕ್ಕಾಗಿ ಪುಣ್ಯ ಸಿಗುವುದು. ವರದಿಗಾರ ಹೇಳುತ್ತಾರೆ- ಪ್ರವಾದಿಯವರ(ಸ) ಈ ಮಾತನ್ನು ಕೇಳಿ ಜನರು ತಮ್ಮ ತೋಟಗಳ ಸುತ್ತ ಕಟ್ಟಿದ ದ್ವಾರಗಳನ್ನು ಕೆಡವಿ ಹಾಕಿದರು. ಹೀಗೆ ಮೂವತ್ತು ದ್ವಾರಗಳನ್ನು ಕೆಡವಲಾಗಿತ್ತು.

ಪ್ರವಾದಿಯ(ಸ) ಅನುಸರಣೆ

(437) عَنِ ابْنِ عُمَرَ قَالَ، كَانَ رَسُولُ اللهِ صَلَّى اللهُ عَلَيْهِ وَسَلَّمَ يُعْطِينِي الْعَطَاءَ، فَأَقُولُ أَعْطِهِ مَنْ هُوَ إِلَيْهِ أَفْقَرُ مِنِّي، قَالَ فَقَالَ خُذْهُ، إِذَا جَاءَكَ مِنْ هٰذَا الْمَالِ شَيْءٌ وَأَنْتَ غَيْرُ مُشْرِفٍ وَلَا سَائِلٍ فَخُذْهُ فَتَمَوَّلْهُ، فَإِنْ شِئْتَ فَكُلْهُ، وَإِنْ شِئْتَ تَصَدَّقْ بِهِ، وَمَا لَا، فَلَا تُتْبِعْهُ نَفْسَكَ، قَالَ سَالِمُ بْنُ عَبْدِ اللهِ فَلِأَجْلِ ذٰلِكَ كَانَ عَبْدُ اللهِ لَا يَسْأَلُ أَحَدًا شَيْئًا وَلَا يَرُدُّ شَيْئًا أُعْطِيَهُ

(بخاری، مسلم)

ಹ. ಇಬ್ನು ಉಮರ್ ಹೇಳುತ್ತಾರೆ- ಪ್ರವಾದಿಯವರು(ಸ) ಬೈತುಲ್ ಮಾಲ್‌ನಿಂದ ನನಗೇನಾದರೂ ನೀಡುವಾಗ, ನನಗಿಂತ ಹೆಚ್ಚು ಅಪೇಕ್ಷಿತರಿಗೆ ನೀಡಿರೆಂದು ನಾನು ಹೇಳುತ್ತಿದ್ದೆ. (ಒಮ್ಮೆ) ಪ್ರವಾದಿ(ಸ) ಹೇಳಿದರು- ನಿಮಗೆ ಕೊಡಲಾಗುವುದನ್ನು ಸ್ವೀಕರಿಸಿ ನಿಮ್ಮ ಸ್ವಾಧೀನದಲ್ಲಿರಿಸಿ ಕೊಳ್ಳಿರಿ. ನಿಮ್ಮ ಬಳಿಗೆ ಸಂಪತ್ತೇನಾದರೂ ನೀವು ಅಪೇಕ್ಷಿಸದೆ ಬಂದರೆ ಅದನ್ನು ಪಡೆದು ನಿಮ್ಮ ವಶವಿರಿಸಿಕೊಳ್ಳಿರಿ. ಅನಂತರ, ಬೇಕಾದರೆ ಅದರಿಂದ ತಿನ್ನಿರಿ ಅಥವಾ ದಾನ ಮಾಡಿಬಿಡಿರಿ. ನಿಮಗೆ ಸಿಗದಿರುವ ಸಂಪತ್ತಿನ ಬಗ್ಗೆ ಆಸೆ ಪಡದಿರಿ.

ಹ. ಇಬ್ನು ಉಮರ್‌ರ ಪುತ್ರ ಸಾಲಿಮ್ ಹೇಳುತ್ತಾರೆ- ಆದುದರಿಂದಲೇ ತಂದೆಯವರು ಯಾರಿಂದಲೂ ಏನನ್ನೂ ಕೇಳುತ್ತಿರಲಿಲ್ಲ. ಯಾರಾದರೂ ಅಪೇಕ್ಷಿಸದೆ ಏನಾದರೂ ಕೊಟ್ಟರೆ ಪಡೆದುಕೊಳ್ಳುತ್ತಿದ್ದರು, ಮರಳಿಸುತ್ತಿರಲಿಲ್ಲ. *[ಬುಖಾರಿ, ಮುಸ್ಲಿಮ್]*

ಟಿಪ್ಪಣಿ: ಈ ಹದೀಸ್‌ನಿಂದ ಈ ಕೆಳಗಿನ ವಿಧಿಗಳು ಹೊರಡುತ್ತವೆ -

1. ಅಪೇಕ್ಷಿಸದೆ ಮತ್ತು ಆಸೆ ಪಡದೆ ಯಾರಾದರೂ ಏನಾದರೂ ಕೊಟ್ಟರೆ ಅದನ್ನು ನಿರಾಕರಿಸಬಾರದು.

2. ಒಂದು ವೇಳೆ ಒಬ್ಬನು ಏನಾದರೂ ಕೊಟ್ಟರೆ ಅದರ ನಂತರ ಅವನಿಂದ ಏನಾದರೂ ಬೇಡಿಕೆ ಬರಬಹುದೆಂಬ ಆಶಂಕೆಯುಂಟಾದರೆ ಅಥವಾ ಅಂತಹ ನಿರೀಕ್ಷೆಯಿದ್ದರೆ ಆಗ ಅದನ್ನು ಸ್ವೀಕರಿಸಬಾರದು.

ಮಕ್ಕಳಿಗೆ ಸಲಾಮ್

(438) عَنْ أَنَسٍ أَنَّهُ مَرَّ عَلَى صِبْيَانٍ، فَسَلَّمَ عَلَيْهِمْ وَقَالَ كَانَ النَّبِيُّ صَلَّى اللهُ عَلَيْهِ وَسَلَّمَ يَفْعَلُهُ (بخاری، مسلم)

ಹ.ಅನಸ್(ರ) ಅವರು ಕೆಲವು ಮಕ್ಕಳ ಬಳಿಯಿಂದ ಸಾಗುತ್ತಿದ್ದಾಗ ಅವರಿಗೆ ಸಲಾಮ್ ಹೇಳಿದರು ಮತ್ತು ಪ್ರವಾದಿವರ್ಯರು(ಸ) ಮಕ್ಕಳಿಗೆ ಸಲಾಮ್ ಹೇಳುತ್ತಿದ್ದರೆಂದೂ ಹೇಳಿದರು. *[ಬುಖಾರಿ, ಮುಸ್ಲಿಮ್]*

ಪ್ರವಾದಿಯವರ(ಸ) ಪ್ರಾಮಾಣಿಕ ಅನುಕರಣೆ

(439) عَنِ ابْنِ عُمَرَ أَنَّهُ كَانَ يَأْتِي شَجَرَةً بَيْنَ مَكَّةَ وَالْمَدِينَةِ فَيَقِيلُ تَحْتَهَا وَيُخْبِرُ أَنَّ رَسُولَ اللهِ صَلَّى اللهُ عَلَيْهِ وَسَلَّمَ يَفْعَلُ ذٰلِكَ (المنذری بحوالہ مسند بزاز)

ಹ. ಅಬ್ದುಲ್ಲಾ ಬಿನ್ ಉಮರ್(ರ)- ಮಕ್ಕಾ ಮತ್ತು ಮದೀನಾದ ಮಧ್ಯೆ ಒಂದು ಮರದ ಕೆಳಗೆ ವಿಶ್ರಾಂತಿಗಾಗಿ ಮಲಗುತ್ತಿದ್ದರು (ಇದು ಅವರ ನಿತ್ಯದ ಪರಿಪಾಠವಾಗಿತ್ತು) ಮತ್ತು ಪ್ರವಾದಿ(ಸ) ಈ ಮರದ ಕೆಳಗೆ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು ಎಂದು ಹೇಳುತ್ತಿದ್ದರು. *[ಅಲ್ ಮುಂದಿರಿ- ಬಝ್ಝಾರ್‌ನಿಂದ]*

ಟಿಪ್ಪಣಿ: ಪ್ರವಾದಿಯವರು(ಸ) ಆ ಮರದ ಕೆಳಗೆ ಮಧ್ಯಾಹ್ನದ ಹೊತ್ತು ತಲಪುತ್ತಿದ್ದರೆ ಸ್ವಲ್ಪ ಹೊತ್ತು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಆದರೆ ಹ. ಇಬ್ನು ಉಮರ್‌ರು(ರ) ರಾತ್ರಿ-ಹಗಲುಗಳಲ್ಲಿ ಯಾವುದೇ ಹೊತ್ತು ಅಲ್ಲಿಗೆ ತಲಪಿದರೂ ಸ್ವಲ್ಪ ಹೊತ್ತು ಆ ಮರದ ಕೆಳಗೆ ಮಲಗುತ್ತಿದ್ದರು ಮತ್ತು ಪ್ರವಾದಿ(ಸ) ಈ ಸ್ಥಳದಲ್ಲಿ ಮಲಗುತ್ತಿದ್ದರೆಂದು ಹೇಳುತ್ತಿದ್ದರು. ಅವರು ವಿಷಯವನ್ನು ಗ್ರಹಿಸುತ್ತಿರಲಿಲ್ಲ ಮತ್ತು ಅನುಕರಣೆಯ ಅರ್ಥ ಅವರಿಗೆ ತಿಳಿದಿರಲಿಲ್ಲವೆಂದು ಇದರರ್ಥವಲ್ಲ. ಬದಲಾಗಿ ಅವರು ಪ್ರವಾದಿ ಪ್ರೇಮದಿಂದ ಹಾಗೆ ಮಾಡುತ್ತಿದ್ದರು. ಪ್ರೇಮವೆಂದರೆ ಎಲ್ಲರೂ ತಿಳಿದಿರುವಂತೆ ಬುದ್ಧಿಗೂ ಮೀರಿದ ವಿಷಯವಾಗಿದೆ. ಮುಸ್ನದ್ ಅಹ್ಮದ್‌ನ ಒಂದು ಹದೀಸ್‌ನ ಅನುವಾದ ಹೀಗಿದೆ- ಸುಪ್ರಸಿದ್ಧ ತಾಬಈ ಮುಜಾಹಿದ್ ಹೇಳುತ್ತಾರೆ- ನಾವು ಒಂದು ಪ್ರಯಾಣದಲ್ಲಿ ಇಬ್ನು ಉಮರ್‌ರ(ರ) ಜೊತೆಗಿದ್ದೆವು. ಒಂದು ಸ್ಥಳಕ್ಕೆ ತಲಪಿದಾಗ ಅಲ್ಲಿಂದ ಸರಿದು ಇನ್ನೊಂದು ಬದಿಗೆ ಹೋದರು. ನಾವು ಅದರ ಕಾರಣ ಕೇಳಿದಾಗ- ಪ್ರವಾದಿ(ಸ) ಹಾಗೆಯೇ ಮಾಡಿದ್ದರು. ನಾನೂ ಹಾಗೇ ಮಾಡಿದೆ ಎಂದರು. ಅದೇ ಗ್ರಂಥದ ಇನ್ನೊಂದು ಹದೀಸ್ ಹೀಗಿದೆ- ಪ್ರಸಿದ್ಧ ತಾಬಈ ಇಬ್ನು ಸೀರೀನ್ ಹೇಳುತ್ತಾರೆ- ನಾನು ಅಬ್ದುಲ್ಲಾ

ಬಿನ್ ಉಮರ್‌ರ(ರ) ಜೊತೆಯಲ್ಲಿ ಅರಫಾತ್‌ನಲ್ಲಿದ್ದೆ. ಅವರು ಝುವಾಲ್‌ನ (ಸೂರ್ಯ ಇಳಿಮುಖವಾದ) ನಂತರ ಮಸ್ಜಿದ್ ನಮಿರಕ್ಕೆ ಹೋದರು. ನಾನೂ ಅವರೊಂದಿಗೆ ಹೋದೆ. ಇಮಾಮರು ಬಂದಾಗ ಅವರೊಂದಿಗೆ ಝುಹರ್ ಮತ್ತು ಅಸರ್ ನಮಾಝ್ ನಿರ್ವಹಿಸಿದರು. ತರುವಾಯ ಮುಝ್ದಲಿಫಕ್ಕೆ ತಲಪಿ ಅಲ್ಲಿ ಒಂದು ಕಡೆ ತಮ್ಮ ಒಂಟೆಯನ್ನು ಕೂರಿಸಿದರು. ನಾವೂ ನಮ್ಮ ಸವಾರಿಗಳನ್ನು ಕೂರಿಸಿದೆವು. ಅವರು ಬಹುಶಃ ಇಲ್ಲಿ ನಮಾಝ್ ಮಾಡಬಯಸಿದ್ದರೆಂದು ನಾವು ಭಾವಿಸಿದೆವು. ಆದರೆ ಅವರ ಒಂಟೆಯ ಕಡಿವಾಣ ಹಿಡಿದಿದ್ದ ಅವರ ಸೇವಕನು ಹೀಗೆಂದರು- ಅವರ ಇಚ್ಛೆ ಇಲ್ಲಿ ನಮಾಝ್ ಮಾಡುವುದಲ್ಲ. ಬದಲಾಗಿ ಅವರಿಗೆ ಪ್ರವಾದಿವರ್ಯರು(ಸ) ತಮ್ಮ ಹಜ್ಜ್ ಯಾತ್ರೆಯಲ್ಲಿ ಇಲ್ಲಿ ತಮ್ಮ ಒಂಟೆಯನ್ನು ಕೂರಿಸಿ ಮಲವಿಸರ್ಜನೆಗಾಗಿ ಹೋಗಿದ್ದುದು ನೆನಪಾಯಿತು. ಆದುದರಿಂದ ಅವರು (ಮಲ ವಿಸರ್ಜನೆಯ ಅಗತ್ಯ ಬಂದಿರದಿದ್ದರೂ) ಪ್ರವಾದಿವರ್ಯರ(ಸ) ಮೇಲಿನ ಪ್ರೇಮದಿಂದಾಗಿ ಹಾಗೆ ಮಾಡಿದ್ದರು.

ಪ್ರಾಮಾಣಿಕ ಪ್ರೇಮ

(440) عَنْ عُرْوَةَ بْنِ عَبْدِ اللهِ بْنِ قُشَيْرٍ قَالَ حَدَّثَنِيْ مُعَاوِيَةُ بْنُ قُرَّةَ عَنْ اَبِيْهِ قَالَ، اَتَيْتُ رَسُوْلَ اللهِ صَلَّى اللهُ عَلَيْهِ وَسَلَّمَ فِيْ رَهْطٍ مِنْ مُزَيْنَةَ فَبَايَعْنَاهُ وَاِنَّهُ لَمُطْلَقُ الْاَزْرَارِ، فَاَدْخَلْتُ يَدِيْ فِيْ جَيْبِ قَمِيْصِهٖ فَمَسِسْتُ الْخَاتَمَ، قَالَ عُرْوَةُ فَمَا رَاَيْتُ مُعَاوِيَةَ وَلَا ابْنَهٗ قَطُّ فِيْ شِتَاءٍ وَلَا صَيْفٍ اِلَّا مُطْلَقِي الْاَزْرَارِ (ابن ماجه)

ಉರ್ವಾ ಬಿನ್ ಅಬ್ದುಲ್ಲಾ ಬಿನ್ ಕುಶೈರ್(ರ) ಹೇಳುತ್ತಾರೆ- ನನಗೆ ಮುಆವಿಯರು(ರ) ತಮ್ಮ ತಂದೆ ಕುರ್ರಾ(ರ) ಹೀಗೆ ಹೇಳಿದುದಾಗಿ ವಿವರಿಸುತ್ತಾರೆ- ನಾನು (ಕುರ್ರಾ) ಪ್ರವಾದಿಯವರ(ಸ) ಬಳಿಗೆ ಮುಝೈನ ಗೋತ್ರದ ಒಂದು ತಂಡದೊಂದಿಗೆ ಹೋದೆ. ನಾವು ಪ್ರವಾದಿ ವರ್ಯರ(ಸ) ಕೈಯಲ್ಲಿ ಬೈಅತ್ ಮಾಡಿದೆವು. ಆಗ ಪ್ರವಾದಿಯವರ(ಸ) ಅಂಗಿಯ ಗುಂಡಿಗಳು ತೆರೆದಿದ್ದುವು. ನಾನು ನನ್ನ ಕೈಯನ್ನು ಪ್ರವಾದಿವರ್ಯರ(ಸ) ಅಂಗಿಯೊಳಗೆ ಹಾಕಿ ಪ್ರವಾದಿತ್ವದ ಮುದ್ರೆಯನ್ನು ಮುಟ್ಟಿದೆ. ಉರ್ವಾ ಹೇಳುತ್ತಾರೆ- ಆದುದರಿಂದಲೇ ಮುಆವಿಯ ಮತ್ತು ಕುರ್ರಾ (ತಂದೆ ಮತ್ತು ಮಗ) ಇಬ್ಬರೂ ಸದಾ ಚಳಿಗಾಲದಲ್ಲೂ ಬೇಸಿಗೆಯಲ್ಲೂ ತಮ್ಮ ಅಂಗಿ ಗುಂಡಿಗಳನ್ನು ತೆರೆದಿಟ್ಟಿರುವುದನ್ನು ನಾನು ನೋಡಿದ್ದೇನೆ. *[ಇಬ್ನು ಮಾಜಃ]*

ಟಿಪ್ಪಣಿ: ಈ ಹದೀಸ್‌ನಿಂದ ಪ್ರವಾದಿಯವರ(ಸ) ಸಂಗಾತಿಗಳು ಅವರನ್ನು ಎಷ್ಟು ಪ್ರೀತಿಸುತ್ತಿದ್ದರೆಂದು ತಿಳಿದುಬರುತ್ತದೆ. ಅವರಿಗೆ ತರ್ಕಶಾಸ್ತ್ರವಾಗಲಿ, ತತ್ವ ಶಾಸ್ತ್ರವಾಗಲಿ ತಿಳಿದಿರಲಿಲ್ಲ. ಅವರ ಪ್ರೀತಿಯ ನಾಯಕ ಏನು ಮಾಡುತ್ತಾರೆಂಬುದೇ ಅವರಿಗೆ ಬೇಕಾಗಿತ್ತು. ಅನ್ಯಥಾ ಮಾನವನ ಅಂಗಿ ಗುಂಡಿ ಕೆಲವೊಮ್ಮೆ ತೆರೆದಿರುತ್ತದೆ, ಕೆಲವೊಮ್ಮೆ ಮುಚ್ಚಿರುತ್ತದೆ ಎಂಬುದನ್ನು ಅವರು

ಅರಿತಿದ್ದರು. ಆದರೆ ಅವರ ಪ್ರೀತಿಗೆ ಸಾಟಿಯಿರಲಿಲ್ಲ. ಅಬ್ದುಲ್ಲಾ ಬಿನ್ ಉಮರ್‌ರ(ರ) ಇಂತಹದೇ ಒಂದು ಘಟನೆಯನ್ನು ಹಾಫಿಝ್ ಮುಂದಿರೀಯವರು ಇಬ್ನು ಖುಝೈಮಾರಿಂದ ಉದ್ಧರಿಸಿ ವಿವರಿಸಿದ್ದಾರೆ- ಅಬ್ದುಲ್ಲಾ ಬಿನ್ ಉಮರ್(ರ) ನಮಾಝ್ ಮಾಡುತ್ತಿದ್ದಾಗ ಅಂಗಿ ಗುಂಡಿಗಳು ತೆರೆದಿದ್ದುದನ್ನು ನಾನು ನೋಡಿದ್ದೇನೆಂದು ಝೈದ್ ಬಿನ್ ಅಸ್ಲಮ್ ಹೇಳಿದ್ದಾರೆ.

ಅಬ್ದುಲ್ಲಾ ಬಿನ್ ಉಮರ್‌ರೊಂದಿಗೆ(ರ) ಕೇಳಿದಾಗ, ಪ್ರವಾದಿವರ್ಯರು(ಸ) ಅದೇ ಸ್ಥಿತಿಯಲ್ಲಿ ನಮಾಝ್ ಮಾಡುವುದನ್ನು ನಾನು ನೋಡಿದ್ದೇನೆಂದು ಅವರು ಹೇಳಿದರು.

ಸಹ ಪ್ರಯಾಣಿಕನ ಸೇವೆ

(441) عَنْ اَنَسِ بْنِ مَالِكٍ قَالَ خَرَجْتُ مَعَ جَرِيْرِبْنِ عَبْدِ اللهِ الْبَجَلِيِّ فِيْ سَفَرٍ، فَكَانَ يَخْدُمُنِيْ، فَقُلْتُ لَا تَفْعَلْ، فَقَالَ اِنِّيْ قَدْ رَاَيْتُ الْاَنْصَارَ تَصْنَعُ بِرَسُوْلِ اللهِ شَيْئًا، فَاٰلَيْتُ اَنْ لَا اَصْحَبَ اَحَدًا مِنْهُمْ اِلَّا خَدَمْتُهٗ (بخاری ومسلم)

ಹ. ಅನಸ್ ಬಿನ್ ಮಾಲಿಕ್(ರ) ಹೇಳುತ್ತಾರೆ- ನಾನು ಹ. ಜರೀರ್‌ರೊಂದಿಗೆ ಒಂದು ಪ್ರಯಾಣಕ್ಕೆ ಹೊರಟೆ. ಪ್ರಯಾಣದಲ್ಲಿ ಅವರು ನನ್ನ ಸೇವೆಗೈಯುತ್ತಿದ್ದರು. ನಾನು ಅವರನ್ನು ತಡೆದೆ. ಆದರೆ ಅವರು ಒಪ್ಪದೆ ಹೀಗೆಂದರು- ನಾನು ಅನ್ಸಾರ್‌ಗಳನ್ನು (ಮದೀನಾ ವಾಸಿಗಳು) ಪ್ರವಾದಿವರ್ಯರ(ಸ) ಸೇವೆ ಮಾಡುತ್ತಿರುವುದಾಗಿ ಕಂಡಿದ್ದೇನೆ. ಆಗ ಇನ್ನು ಮುಂದೆ ಅನ್ಸಾರ್‌ಗಳ ಪೈಕಿ ಯಾರೊಂದಿಗೆ ಪ್ರಯಾಣ ಮಾಡಿದರೂ ಅವರ ಸೇವೆಗೈಯುವೆನೆಂದು ಶಪಥ ಮಾಡಿದ್ದೇನೆ. *[ಬುಖಾರಿ, ಮುಸ್ಲಿಮ್]*

ಕೈದಿಯೊಂದಿಗೆ ಉತ್ತಮ ವರ್ತನೆ

(442) عَنْ اَبِيْ عَزِيْزِبْنِ عُمَيْرٍ اَخِيْ مُصْعَبِ بْنِ عُمَيْرٍ قَالَ، كُنْتُ فِي الْاُسَارٰى يَوْمَ بَدْرٍ، فَقَالَ رَسُوْلُ اللهِ صَلَّى اللهُ عَلَيْهِ وَسَلَّمَ اِسْتَوْصُوْا بِالْاُسَارٰى خَيْرًا، وَكُنْتُ فِيْ نَفَرٍ مِنَ الْاَنْصَارِ، فَكَانُوْا اِذَا قَدَّمُوْا غَدَاءَهُمْ اَوْ عَشَاءَهُمْ اَكَلُوا التَّمْرَ وَاَطْعَمُوْنِي الْخُبْزَ بِوَصِيَّةِ رَسُوْلِ اللهِ صَلَّى اللهُ عَلَيْهِ وَسَلَّمَ (معجم طبرانی)

ಹ. ಮುಸ್‌ಅಬ್ ಬಿನ್ ಉಮೈರ್‌ರ(ರ) ಸಹೋದರ ಅಬೂ ಅಝೀಝ್ ಬಿನ್ ಉಮೈರ್ ಹೇಳುತ್ತಾರೆ- ಬದ್ರ್ ಯುದ್ಧದಲ್ಲಿ ನಾನೂ ಮುಸ್ಲಿಮರ ಸೆರೆಯಾಳಾಗಿದ್ದೆ. ಆಗ ಪ್ರವಾದಿ ಯವರು(ಸ) ಕೈದಿಗಳೊಂದಿಗೆ ನಯವಾಗಿ ವರ್ತಿಸುವಂತೆ ಮುಸ್ಲಿಮರಿಗೆ ಆದೇಶಿಸಿದ್ದರು. ಅವರು ಸ್ವತಃ ಖರ್ಜೂರ ತಿಂದು ದಿನ ದೂಡುತ್ತಿದ್ದರು. ಆದರೆ ನಮಗೆ ರೊಟ್ಟಿಗಳನ್ನು ನೀಡುತ್ತಿದ್ದರು. ಏಕೆಂದರೆ ಪ್ರವಾದಿವರ್ಯರು(ಸ) ಕೈದಿಗಳೊಂದಿಗೆ ಉತ್ತಮ ರೀತಿಯಲ್ಲಿ ವ್ಯವಹರಿಸಬೇಕೆಂದು ಅವರಿಗೆ ಆದೇಶಿಸಿದ್ದರು. *[ತಬ್ರಾನಿ]*

ಟಿಪ್ಪಣಿ: ಇದು ಒಬ್ಬ ಮುಸ್ಲಿಮೇತರ ಕೈದಿಯ ಸಾಕ್ಷ್ಯವಾಗಿದೆ. ಇದನ್ನು ಅವರು ಇಸ್ಲಾಮ್ ಸ್ವೀಕರಿಸಿದ ನಂತರ ವಿವರಿಸುತ್ತಾರೆ. ಈ ಹದೀಸ್‌ನಿಂದ ತಿಳಿದು ಬರುವ ಇನ್ನೊಂದು ವಿಷಯವೇನೆಂದರೆ ಮುಸ್ಲಿಮರು ತಮ್ಮ ಮುಸ್ಲಿಮೇತರ ಸೆರೆಯಾಳುಗಳೊಂದಿಗೆ ಕುಳಿತು ಊಟ ಮಾಡುತ್ತಿದ್ದರು. ಇದನ್ನು ಇಸ್ಲಾಮಿಗಿಂತ ಮುಂಚಿನ ಕಾಲದಲ್ಲಿ ಊಹಿಸಲಿಕ್ಕೂ ಸಾಧ್ಯವಿರಲಿಲ್ಲ.

ಪ್ರವಾದಿವರ್ಯರ(ಸ) ಅನುಸರಣೆಯ ಮಹತ್ವ

(443) عَنْ جَابِرٍ أَنَّ رَسُوْلَ اللهِ صَلَّى اللهُ عَلَيْهِ وَسَلَّمَ خَرَجَ عَامَ الْفَتْحِ إِلَى مَكَّةَ فِيْ رَمَضَانَ
حَتَّى بَلَغَ كُرَاعَ الْغَمِيْمِ، فَصَامَ وَصَامَ النَّاسُ، ثُمَّ دَعَا بِقَدَحٍ مِنْ مَاءٍ فَرَفَعَهُ حَتَّى
نَظَرَ النَّاسُ إِلَيْهِ ثُمَّ شَرِبَ، فَقِيْلَ لَهُ إِنَّ بَعْضَ النَّاسِ قَدْ صَامَ، فَقَالَ أُولٰئِكَ الْعُصَاةُ

(مسلم)

ಹ. ಜಾಬಿರ್(ರ) ಹೇಳುತ್ತಾರೆ- ಪ್ರವಾದಿಯವರು(ಸ) ಮಕ್ಕಾ ವಿಜಯದ ವರ್ಷ ರಮಝಾನ್ ತಿಂಗಳಲ್ಲಿ ಮಕ್ಕಾದ ಮೇಲೆ ಆಕ್ರಮಣ ಮಾಡಲಿಕ್ಕಾಗಿ ಹೊರಟು ಕುರಾಉಲ್ ಗುಮೈಮ್ ಎಂಬಲ್ಲಿಗೆ ತಲಪಿದರು. ಪ್ರವಾದಿ(ಸ) ಮತ್ತು ಯೋಧರು ಅಂದು ಉಪವಾಸ ಆಚರಿಸಿದ್ದರು. ಪ್ರಸ್ತುತ ಸ್ಥಳಕ್ಕೆ ತಲಪಿದಾಗ ಪ್ರವಾದಿ(ಸ) ನೀರು ತರಿಸಿ ಮೇಲೆತ್ತಿ ಎಲ್ಲರೂ ನೋಡುವ ಹಾಗೆ ಕುಡಿದರು. (ಅರ್ಥಾತ್ ಉಪವಾಸ ಮುರಿದರು) ಆ ಬಳಿಕವೂ ಕೆಲವು ಮಂದಿ ಉಪವಾಸದಿಂದಿದ್ದರು. (ಅಂದರೆ ಅವರು ಉಪವಾಸ ಮುರಿಯಲಿಲ್ಲ) ಈ ವಿಷಯ ತಿಳಿದಾಗ ಪ್ರವಾದಿ(ಸ) 'ಅವರು ಅವಿಧೇಯರು' ಎಂದು ಹೇಳಿದರು. *[ಮುಸ್ಲಿಮ್]*

ಟಿಪ್ಪಣಿ: ಪವಿತ್ರ ಕುರ್‌ಆನಿನಲ್ಲಿ ಪ್ರಯಾಣಿಕರಿಗೆ ಉಪವಾಸ ತೊರೆಯುವ ಅನುಮತಿ ನೀಡಲಾಗಿದೆ. ಪ್ರಸ್ತುತ ಪ್ರಯಾಣವು ರಮಝಾನ್ ತಿಂಗಳಲ್ಲಾಗಿತ್ತು. ಇದೇನೂ ಸಾಮಾನ್ಯ ವ್ಯಾಪಾರದ ಪ್ರಯಾಣವಾಗಿರಲಿಲ್ಲ. ಬದಲಾಗಿ ಮಕ್ಕಾವನ್ನು ಜಯಿಸುವ ಮತ್ತು ವೈರಿಗಳೊಂದಿಗೆ ಹೋರಾಡುವ ಪ್ರಯಾಣವಾಗಿತ್ತು.

ಆದುದರಿಂದ ಪ್ರವಾದಿ(ಸ) ಬೇಕೆಂದೇ ಬಹಿರಂಗವಾಗಿ ಉಪವಾಸ ತೊರೆದರು. ಉಪವಾಸ ತೊರೆಯದಿದ್ದರೆ ಈ ಧರ್ಮಯುದ್ಧದಲ್ಲಿ ಪ್ರತಿಕೂಲ ಪರಿಣಾಮವುಂಟಾಗುವ ಸಾಧ್ಯತೆಯಿತ್ತು. ಜನರು ಪ್ರವಾದಿವರ್ಯರು(ಸ) ಉಪವಾಸ ತೊರೆದದ್ದನ್ನು ನೋಡಿದ ನಂತರವೂ ಉಪವಾಸ ಆಚರಿಸುವುದರಲ್ಲಿ ಅರ್ಥವಿದೆಯೇ?

ಈ ಹದೀಸ್‌ನಿಂದ ಸ್ಪಷ್ಟವಾಗುವುದೇನೆಂದರೆ ಇಲ್ಲಿ ಪ್ರವಾದಿಯ ಅನುಸರಣೆಯೇ ಪ್ರಧಾನ. ಸುನ್ನತ್ (ಪ್ರವಾದಿಚರ್ಯೆ)ನಿಂದ ಸರಿದು ಯಾರು ಎಷ್ಟೇ ಆರಾಧನೆ ಮಾಡಿದರೂ ಅಲ್ಲಾಹನ ಬಳಿ ಅದಕ್ಕೆ ಯಾವುದೇ ಬೆಲೆಯಿಲ್ಲ.

ಅರ್ಪಣಾ ಮನೋಭಾವ

(444) عَنْ أَنَسٍ قَالَ، إِنَّ النَّبِيَّ صَلَّى اللهُ عَلَيْهِ وَسَلَّمَ شَاوَرَ حِينَ بَلَغَنَا إِقْبَالُ أَبِي سُفْيَانَ، فَقَامَ سَعْدُ بْنُ عُبَادَةَ فَقَالَ يَا رَسُولَ اللهِ وَالَّذِي نَفْسِي بِيَدِهِ لَوْ أَمَرْتَنَا أَنْ نُخِيضَهَا الْبَحْرَ لَأَخَضْنَاهَا، وَلَوْ أَمَرْتَنَا أَنْ نَضْرِبَ أَكْبَادَهَا إِلَى بَرْكِ الْغِمَادِ لَفَعَلْنَا (مسلم)

ಹ. ಅನಸ್(ರ) ಹೇಳುತ್ತಾರೆ- ಅಬೂ ಸುಫ್ಯಾನರ ನಲ್ವತ್ತು ತಂಡಗಳ ತುಕುಡಿಯು ಆಧುನಿಕ ಶಸ್ತ್ರಾಸ್ತ್ರ ಮತ್ತು ಆಹಾರ ಸಾಮಗ್ರಿಗಳೊಂದಿಗೆ ಸಿರಿಯಾದಿಂದ ಮಕ್ಕಾಕ್ಕೆ ಹೊರಟಿದೆ ಯೆಂದು ತಿಳಿದಾಗ, ಪ್ರವಾದಿ(ಸ) ಸಹಾಬಿಗಳ ಜೊತೆ ಸಮಾಲೋಚನೆ ನಡೆಸಿದರು. ಆಗ ಸಅದ್ ಬಿನ್ ಉಬಾದ(ರ) ಎದ್ದು ನಿಂತು ಹೀಗೆಂದರು- ತಾವು ನಮಗೆ ಸಮುದ್ರದಲ್ಲಿ ಕುದುರೆಗಳನ್ನು ಓಡಿಸಿರಿ ಎಂಬ ಅಪ್ಪಣೆ ಕೊಟ್ಟರೆ ನಾವು ಹಿಂದುಮುಂದು ನೋಡಲಾರೆವು. ಸಮುದ್ರಕ್ಕೆ ನಮ್ಮ ಕುದುರೆಗಳೊಂದಿಗೆ ಧುಮುಕುವೆವು. ಬರ್ಕುಲ್ ಗುಮಾದ್‌ವರೆಗೆ ಕುದುರೆ ಸವಾರಿ ಮಾಡಿ ಹೋಗಿ ವೈರಿಗಳೊಂದಿಗೆ ಕಾದಾಡಬೇಕೆಂದು ನಮಗೆ ಅಪ್ಪಣೆ ಕೊಟ್ಟರೆ ನಾವು ಅದನ್ನೂ ಪಾಲಿಸುವೆವು. (ನೆಲ- ಜಲಗಳಲ್ಲಿ ಯಾವುದೇ ರೀತಿಯ ಹೋರಾಟವಾದರೂ ನಾವು ತಮ್ಮೊಂದಿಗೆ ಇರುವೆವು ಎಂಬುದು ಇದರ ತಾತ್ಪರ್ಯ) *[ಮುಸ್ಲಿಮ್]*

---

(445) عَنْ طَارِقِ بْنِ شِهَابٍ قَالَ سَمِعْتُ ابْنَ مَسْعُوْدٍ يَقُوْلُ: شَهِدْتُ مِنَ الْمِقْدَادِ بْنِ الْأَسْوَدِ مَشْهَدًا لَأَنْ أَكُوْنَ أَنَا صَاحِبَهُ أَحَبُّ إِلَيَّ مِمَّا عُدِلَ بِهِ أَتَى النَّبِيَّ صَلَّى اللّٰهُ عَلَيْهِ وَسَلَّمَ وَهُوَ يَدْعُوْ عَلَى الْمُشْرِكِيْنَ فَقَالَ لَا نَقُوْلُ لَكَ كَمَا قَالَ قَوْمُ مُوْسٰى اِذْهَبْ أَنْتَ وَلٰكِنْ نُقَاتِلُ عَنْ يَمِيْنِكَ وَعَنْ شِمَالِكَ وَمِنْ بَيْنِ يَدَيْكَ وَمِنْ خَلْفِكَ فَرَأَيْتُ رَسُوْلَ اللّٰهِ صلى الله عليه وسلم أَشْرَقَ وَجْهُهُ وَسَرَّهُ ذَاكَ (مسند احمد)

ತಾರಿಕ್ ಬಿನ್ ಶಿಹಾಬ್ ಹೇಳುತ್ತಾರೆ- ನಾನು ಅಬ್ದುಲ್ಲಾ ಬಿನ್ ಮಸ್‌ವೂದ್(ರ) ಹೀಗೆ ಹೇಳುವುದಾಗಿ ಕೇಳಿದ್ದೇನೆ: "ನಾನು ಮಿಕ್ದಾದ್ ಬಿನ್ ಅಸ್ವದ್‌ರ ಒಂದು ವಿಶೇಷ ಕಾರ್ಯವನ್ನು ನೋಡಿದ್ದೇನೆ. ಇತರೆಲ್ಲ ಕಾರ್ಯಗಳಿಗಿಂತಲೂ ಪ್ರಿಯವಾಗಿರುವ ಆ ಮಹತ್ಕಾರ್ಯವು ನನ್ನಿಂದಾಗುತ್ತಿದ್ದರೆ! ಅದೇನೆಂದರೆ ಪ್ರವಾದಿಯವರು(ಸ) ಮಕ್ಕಾದ ಬಹು ದೇವಾರಾಧಕರೊಂದಿಗೆ ಹೋರಾಡುವ ಕರೆಕೊಟ್ಟಾಗ ಮಿಕ್ದಾದ್ ಮುಂದೆ ಬಂದು ಹೀಗೆಂದರು- ಅಲ್ಲಾಹನ ಸಂದೇಶವಾಹಕರೇ! ಹ. ಮೂಸಾರ(ಅ) ಜನಾಂಗವು ಅವರೊಂದಿಗೆ, ನೀವೂ ನಿಮ್ಮ ಪ್ರಭುವೂ ಹೋಗಿ ವೈರಿಗಳೊಂದಿಗೆ ಕಾದಾಡಿರಿ ಎಂದು ಹೇಳಿದಂತೆ ನಾವು ತಮ್ಮೊಂದಿಗೆ ಖಂಡಿತ ಹೇಳಲಾರೆವು. ನಾವಂತೂ ತಮ್ಮ ಬಲಭಾಗದಲ್ಲೂ ಎಡಭಾಗ ದಲ್ಲೂ ಮುಂದೆಯೂ ಹಿಂದೆಯೂ ನಿಂತು ವೈರಿಗಳೊಂದಿಗೆ ಹೋರಾಡುವೆವು. ಮಿಕ್ದಾದ್‌ರು ಈ ಮಾತನ್ನು ಹೇಳಿದಾಗ ಪ್ರವಾದಿಯವರ(ಸ) ಮುಖ ಸಂತೋಷದಿಂದ ಅರಳಿತು.

[ಮುಸ್ನದ್ ಅಹ್ಮದ್]

ಟಿಪ್ಪಣಿ: ಈ ಹದೀಸ್‌ನಲ್ಲಿ ಬಹುದೇವಾರಾಧಕರೊಂದಿಗೆ ಹೋರಾಟ ನಡೆಸಲು ಕರೆಕೊಟ್ಟ ಪ್ರಸ್ತಾಪವು ಬದ್ರ್ ಯುದ್ಧದ ಸಂದರ್ಭದ ಕುರಿತಾಗಿತ್ತು. ಮೊದಲು ಪ್ರವಾದಿವರ್ಯರಿಗೆ(ಸ) ಅಬೂ ಸುಫ್ಯಾನ್‌ರ ತಂಡಗಳು ಆಧುನಿಕ ಶಸ್ತ್ರಾಸ್ತ್ರ ಮತ್ತು ಆಹಾರ ಸಾಮಗ್ರಿಗಳೊಂದಿಗೆ ಸಿರಿಯಾ ದಿಂದ ಬರುತ್ತಿವೆಯೆಂಬ ಸುದ್ದಿ ಸಿಕ್ಕಿತು. ಅದನ್ನು ತಡೆಯುವ ಕುರಿತು ಸಮಾಲೋಚನೆ ನಡೆಯುತ್ತಿದ್ದಂತೆಯೇ ಪ್ರವಾದಿವರ್ಯರಿಗೆ(ಸ) ಮಕ್ಕಾದ ಮುಶ್ರಿಕರ ಒಂದು ಸಾವಿರದ ಸೇನೆಯು ಇಸ್ಲಾಮ್ ಮತ್ತು ಮುಸ್ಲಿಮರನ್ನು ಅಳಿಸಿ ಹಾಕಲು ಮುಂದೊತ್ತಿ ಬರುತ್ತಿದೆಯೆಂಬ ಹಠಾತ್ ಸುದ್ದಿ ಮುಟ್ಟಿದಾಗ ಸಮಾಲೋಚನೆಯ ದಿಕ್ಕು ಬದಲಾಯಿತು. ಆಗ ಮುಶ್ರಿಕರೊಂದಿಗೆ ಹೋರಾಡುವ ಕುರಿತು ಆಲೋಚಿಸ ಲಾಯಿತು. ಹ. ಮಿಕ್ದಾದ್ ಅದೇ ಸಂದರ್ಭದಲ್ಲಿ ಈ ಭಾಷಣ ಮಾಡಿದ್ದರು. ಅವರು ಹೀಗೆಂದರು- "ನಾವು ಹೇಡಿಗಳಲ್ಲ, ನಾವು ತಮ್ಮ ಎಲ್ಲ ಅಪ್ಪಣೆಗಳನ್ನು ಶಿರಸಾ ಪಾಲಿಸುವೆವು. ಎಲ್ಲ ರೀತಿಯ ತ್ಯಾಗ-ಬಲಿದಾನಗಳನ್ನು ನೀಡಲು ನಾವು ಸಿದ್ಧ! ತಮಗಾಗಿ ನಮ್ಮ ಸರ್ವಸ್ವವೂ ಅರ್ಪಿತ."

ಮದೀನಾದಿಂದ ಪ್ರವಾದಿಯವರು(ಸ) ಮಕ್ಕಾದ ಸೇನೆಯನ್ನು ಎದುರಿಸಲು ಹೊರಟಿದ್ದರು ಎಂಬುದನ್ನು ಈ ಹದೀಸ್ ಸ್ಪಷ್ಟವಾಗಿ ತಿಳಿಸುತ್ತದೆ. ಸೂರಃ ಅನ್‌ಫಾಲ್‌ನ 6 ಮತ್ತು 7ನೇ ಆಯತ್‌ಗಳು ಇದರ ಸುವ್ಯಕ್ತ ಪುರಾವೆಗಳಾಗಿವೆ.

ಸಮಗ್ರ ಮತ್ತು ಸಾರ್ವಕಾಲಿಕ ಸಂದೇಶ

(446) عَنْ أَنَسِ بْنِ مَالِكٍ قَالَ، كَانَ عَبْدُ اللهِ بْنُ رَوَاحَةَ إِذَا لَقِيَ الرَّجُلَ مِنْ أَصْحَابِ رَسُولِ اللهِ صلى الله عليه وسلم، قَالَ تَعَالَ نُؤْمِنْ سَاعَةً، فَقَالَ ذَاتَ يَوْمٍ لِرَجُلٍ، فَغَضِبَ الرَّجُلُ، فَجَاءَ إِلَى النَّبِيِّ صلى الله عليه وسلم فَقَالَ يَا رَسُولَ اللهِ أَلَا تَرَى إِلَى ابْنِ رَوَاحَةَ يَرْغَبُ عَنْ إِيمَانِكَ إِلَى إِيمَانِ سَاعَةٍ؟ فَقَالَ النَّبِيُّ صلى الله عليه وسلم يَرْحَمُ اللهُ ابْنَ رَوَاحَةَ إِنَّهُ يُحِبُّ الْمَجَالِسَ الَّتِي تَتَبَاهَى بِهَا الْمَلَائِكَةُ (مسند احمد)

ಹ. ಅನಸ್ ಬಿನ್ ಮಾಲಿಕ್(ರ) ಹೇಳುತ್ತಾರೆ- ಅಬ್ದುಲ್ಲಾ ಬಿನ್ ರವಾಹರು(ರ) ಸಹಾಬಿಗಳ ಪೈಕಿ ಯಾರಾದರೂ ಸಿಕ್ಕಿದರೆ ಅವರೊಂದಿಗೆ, "ಬನ್ನಿ ನಾವು ಸ್ವಲ್ಪ ಹೊತ್ತು ನಮ್ಮ ಪ್ರಭುವಿನ ಮೇಲೆ ವಿಶ್ವಾಸವಿಡೋಣ" ಎನ್ನುತ್ತಿದ್ದರು. ಒಂದು ದಿನ ಅವರು ಒಬ್ಬರೊಂದಿಗೆ ಇದೇ ಮಾತನ್ನು ಹೇಳಿದಾಗ ಅವರು ಕೋಪಗೊಂಡು ಪ್ರವಾದಿಯವರ(ಸ) ಬಳಿಗೆ ಹೋಗಿ ಹೀಗೆಂದರು: ಅಲ್ಲಾಹನ ಸಂದೇಶವಾಹಕರೇ! ಇಬ್ನು ರವಾಹರನ್ನು ನೋಡಿ! ಅವರು ತಮ್ಮ ವಿಶ್ವಾಸದಿಂದ ಸರಿದು ಸ್ವಲ್ಪ ಹೊತ್ತು ವಿಶ್ವಾಸ ತಾಳಬೇಕೆಂಬ ಕರೆ ಕೊಡುತ್ತಿದ್ದಾರೆ. ಆಗ ಪ್ರವಾದಿ(ಸ) ಹೇಳಿದರು- ಅಲ್ಲಾಹನು ಇಬ್ನು ರವಾಹರನ್ನು ಅನುಗ್ರಹಿಸಲಿ. ಅವರು ನಿಮಗೆ ಮಲಕ್‌ಗಳು ಹೆಮ್ಮೆ ಪಡುವಂತಹ ಧಾರ್ಮಿಕ ಕೂಟದ ಕಡೆಗೆ ಕರೆ ನೀಡುತ್ತಿದ್ದಾರೆ. ಅಂತಹ ಸಭೆಗಳನ್ನು ಇಬ್ನು ರವಾಹ ಬಹಳ ಇಷ್ಟಪಡುತ್ತಾರೆ. *[ಮುಸ್ನದ್ ಅಹ್ಮದ್]*

ಟಿಪ್ಪಣಿ: ಇಬ್ನು ರವಾಹ ಹೇಳಿದ ಮಾತಿನ ಇಂಗಿತವು ಬನ್ನಿ, ಸ್ವಲ್ಪ ಹೊತ್ತು ನಾವು ಕುಳಿತು ಕೊಂಡು ಅಲ್ಲಾಹನ ಉಪಕಾರಗಳನ್ನು ಸ್ಮರಿಸುತ್ತಾ ನಮ್ಮ ವಿಶ್ವಾಸವನ್ನು ಪುನಶ್ಚೇತನಗೊಳಿಸೋಣ ವೆಂದಾಗಿತ್ತು. ಆದರೆ ಆ ವ್ಯಕ್ತಿಗೆ ಇಬ್ನು ರವಾಹರ ಮಾತು ಅರ್ಥವಾಗಲಿಲ್ಲ. ಅವರಿಗೆ ಪ್ರವಾದಿ ಯವರು(ಸ) ಈ ಮಾತಿನ ಅರ್ಥವನ್ನು ಹೇಳಿಕೊಟ್ಟರು. ಅವರು ಪ್ರವಾದಿವರ್ಯರೊಂದಿಗೆ(ಸ) 'ತಮ್ಮ ಸಂದೇಶವು ಸಮಗ್ರವೂ ಸಂಪೂರ್ಣ ಜೀವನಕ್ಕೂ ಆಗಿರುವಾಗ ಇಬ್ನು ರವಾಹರು ಸ್ವಲ್ಪ ಹೊತ್ತಿನ

ಮಟ್ಟಿಗೆ ವಿಶ್ವಾಸವಿರಿಸೋಣವೆಂದು ಕರೆ ಕೊಡುತ್ತಿದ್ದಾರೆ ಎಂದು ದೂರಿಕೊಂಡಿದ್ದರು. ಪ್ರವಾದಿ(ಸ) ಅವರ ಕಾಲದ ಜನರು ಧರ್ಮದ ಕುರಿತು ಎಷ್ಟು ಸ್ಪಷ್ಟ ಕಲ್ಪನೆ ಹೊಂದಿದ್ದರು ಎಂದು ಇದರಿಂದ ತಿಳಿದು ಬರುತ್ತದೆ.

ಧಾರ್ಮಿಕ ಸಭೆಗಳ ಮಹತ್ವ

(447) عَنْ مُعَاوِيَةَ أَنَّ رَسُوْلَ اللّٰهِ صَلَّى اللّٰهُ عَلَيْهِ وَسَلَّمَ خَرَجَ عَلَى حَلْقَةٍ مِنْ أَصْحَابِهِ فَقَالَ مَا أَجْلَسَكُمْ؟ قَالُوْا جَلَسْنَا نَذْكُرُ اللّٰهَ وَنَحْمَدُهُ عَلَى مَا هَدَانَا لِلْإِسْلَامِ وَمَنَّ عَلَيْنَا، قَالَ آللّٰهِ مَا أَجْلَسَكُمْ إِلَّا ذٰلِكَ؟ قَالُوْا آللّٰهِ مَا أَجْلَسَنَا إِلَّا ذٰلِكَ، قَالَ أَمَا إِنِّيْ لَمْ أَسْتَحْلِفْكُمْ تُهْمَةً لَكُمْ، وَلٰكِنَّهُ أَتَانِيْ جِبْرَئِيْلُ فَأَخْبَرَنِيْ أَنَّ اللّٰهَ عَزَّ وَجَلَّ يُبَاهِيْ بِكُمُ الْمَلَائِكَةَ (مسلم، نسائی، ترمذی)

ಮುಆವಿಯಾ(ರ) ವರದಿ ಮಾಡುತ್ತಾರೆ- ಪ್ರವಾದಿಯವರು(ಸ) ಮಸೀದಿಯಲ್ಲಿ ತಮ್ಮ ಸಂಗಾತಿಗಳ ಒಂದು ತಂಡದ ಬಳಿಗೆ ಹೋದರು. 'ನೀವು ಇಲ್ಲಿ ಒಟ್ಟಾಗಿ ಏಕೆ ಕುಳಿತು ಕೊಂಡಿದ್ದೀರಿ ಮತ್ತು ಏನು ಮಾಡುತ್ತಿದ್ದೀರಿ' ಎಂದು ಕೇಳಿದರು. ಸಹಾಬಿಗಳು ಹೇಳಿದರು- ನಾವಿಲ್ಲಿ ಕುಳಿತು ಅಲ್ಲಾಹನನ್ನು ಸ್ಮರಿಸುತ್ತಿದ್ದೇವೆ, ಅವನು ನಮಗೆ ಇಸ್ಲಾಮಿನ ಹಾದಿಯನ್ನು ತೋರಿಸಿ, ಈಮಾನ್‌ನ ಅನುಗ್ರಹ ದಯಪಾಲಿಸುವ ಮೂಲಕ ನಮ್ಮ ಮೇಲೆ ಮಾಡಿದ ಉಪಕಾರಕ್ಕಾಗಿ ಅವನಿಗೆ ಕೃತಜ್ಞತೆ ಸಲ್ಲಿಸುತ್ತಿದ್ದೇವೆ. ಆಗ ಪ್ರವಾದಿ(ಸ) ಕೇಳಿದರು- ಅಲ್ಲಾಹನಾಣೆಗೂ! ನೀವು ಅದಕ್ಕಾಗಿಯೇ ಕುಳಿತಿರುವಿರಾ? ಸಹಾಬಿಗಳು ಹೇಳಿದರು- ಹೌದು! ಅಲ್ಲಾಹನಾಣೆ! ನಾವು ಅದೇ ಉದ್ದೇಶಕ್ಕಾಗಿ ಇಲ್ಲಿ ಕುಳಿತಿದ್ದೇವೆ. ಆಗ ಪ್ರವಾದಿ(ಸ) ಹೇಳಿದರು- ನಾನು ಆಣೆ ಹಾಕಿಸಿದ್ದು ನೀವು ಸುಳ್ಳುಗಾರರೆಂದಲ್ಲ. ಬದಲಾಗಿ ಹ. ಜಿಬ್ರೀಲ್(ಅ) ನನ್ನ ಬಳಿಗೆ ಬಂದು 'ಅಲ್ಲಾಹನು ನಿಮ್ಮ ಬಗ್ಗೆ ಮಲಕ್‌ಗಳ (ದೇವಚರರ) ಸಭೆಯಲ್ಲಿ ಹೆಮ್ಮೆ ಪಡುತ್ತಿದ್ದಾನೆ' ಎಂದು ತಿಳಿಸಿದರು.

[ಮುಸ್ಲಿಮ್, ನಸಾಈ, ತಿರ್ಮಿದಿ]

ಟಿಪ್ಪಣಿ: ಈ ಹದೀಸ್‌ನಲ್ಲಿ 'ದಿಕ್ರ್' ಎಂಬ ಪದ ಬಂದಿದೆ. ಕುರ್‌ಆನ್ ಮತ್ತು ಹದೀಸ್‌ಗಳ ಭಾಷೆಯಲ್ಲಿ ಈ ಪದಕ್ಕೆ ಬಹಳ ವಿಶಾಲ ಅರ್ಥವಿದೆ. ದಿಕ್ರ್ ಮತ್ತು ದುಆ, ಜಪ-ತಪ, ಧರ್ಮವನ್ನು ಕಲಿಸುವುದು ಮತ್ತು ಕಲಿಯುವುದು, ಧಾರ್ಮಿಕ ಸಭೆ ಮತ್ತು ಅದರ ಎಲ್ಲಾ ಕಾರ್ಯಕಲಾಪಗಳು ಈ ಅರ್ಥದಲ್ಲಿ ಒಳಗೊಂಡಿವೆ.

ಮಲಕ್‌ಗಳ ಸಭೆಯಲ್ಲಿ ಹೆಮ್ಮೆಪಡುವುದೆಂದರೆ ಅಲ್ಲಾಹನು ಅವರೊಂದಿಗೆ- ನೋಡಿರಿ! ನನ್ನ ಈ ದಾಸರು ನನ್ನ ಸ್ಮರಣೆಯಲ್ಲಿ ತಲ್ಲೀನರಾಗಿದ್ದಾರೆ. ತಮ್ಮ ಎಲ್ಲ ಚಟುವಟಿಕೆಗಳನ್ನು ಬಿಟ್ಟು ಧಾರ್ಮಿಕ ಕಾರ್ಯದಲ್ಲಿ ನಿರತರಾಗಿದ್ದಾರೆ ಎಂದು ಹೇಳುವುದಾಗಿದೆ.

ಜ್ಞಾನದ ಗಳಿಕೆ ಮತ್ತು ಪ್ರಚಾರದ ಆಸಕ್ತಿ

(448) عَنِ الْبَرَاءِ قَالَ، لَيْسَ كُلُّنَا كَانَ يَسْمَعُ حَدِيْثَ النَّبِيِّ صَلَّى اللّٰهُ عَلَيْهِ وَسَلَّمَ، فَقَدْ كَانَتْ لَنَا ضَيْعَةٌ وَاَشْغَالٌ، وَلٰكِنْ كَانَ النَّاسُ لَا يَكْذِبُوْنَ، فَيُحَدِّثُ الشَّاهِدُ الْغَائِبَ (بيهقي)

ಹ. ಬರಾಅ್(ರ) ಹೇಳುತ್ತಾರೆ- ನಮ್ಮಲ್ಲಿ ಪ್ರತಿದಿನವೂ ಪ್ರವಾದಿಯವರ(ಸ) ಸಭೆಯಲ್ಲಿ ನೇರವಾಗಿ ಧರ್ಮದ ಜ್ಞಾನವನ್ನು ಕಲಿಯಲಿಕ್ಕಾಗಿ ಹಾಜರಾಗಲು ಸಾಧ್ಯವಾಗುತ್ತಿರಲಿಲ್ಲ. ನಮ್ಮ ಬಳಿ ಹೊಲ ಮತ್ತು ತೋಟಗಳಿದ್ದು ನಾವು ಅದರಲ್ಲೇ ತಲ್ಲೀನರಾಗಿರುತ್ತಿದ್ದೆವು. ಆದರೆ ಪ್ರವಾದಿಯವರ(ಸ) ಸಭೆಯಲ್ಲಿ ಹಾಜರಾಗಿರುವವರು ಹಾಜರಾಗದವರಿಗೆ ಸಭೆಯ ಕಾರ್ಯ ಕಲಾಪಗಳನ್ನು ತಿಳಿಸುತ್ತಿದ್ದರು. ಅವರು ತಪ್ಪಾಗಿ ವಿವರಿಸುತ್ತಿರಲಿಲ್ಲ. ಸಂಪೂರ್ಣ ವಿಷಯವನ್ನು ಹಾಜರಿಲ್ಲದವರಿಗೆ ತಿಳಿಸುತ್ತಿದ್ದರು. *[ಬೈಹಕಿ]*

ಸಹಾಬಿಗಳು ಸುಳ್ಳು ಹೇಳುತ್ತಿರಲಿಲ್ಲ

(449) عَنْ قَتَادَةَ اَنَّ اَنَسًا حَدَّثَ بِحَدِيْثٍ، فَقَالَ لَهُ رَجُلٌ اَسَمِعْتَ هٰذَا مِنْ رَسُوْلِ اللّٰهِ صَلَّى اللّٰهُ عَلَيْهِ وَسَلَّمَ؟ قَالَ نَعَمْ، اَوْ حَدَّثَنِيْ مَنْ لَمْ يَكْذِبْ، وَاللّٰهِ مَا كُنَّا نَكْذِبُ، وَلَا نَدْرِيْ مَا الْكَذِبُ (بيهقي)

ಕತಾದ ಹೇಳುತ್ತಾರೆ- ಹ. ಅನಸ್(ರ) ಒಂದು ಹದೀಸ್ ಹೇಳಿದಾಗ ಒಬ್ಬರು, ನೀವಿದನ್ನು ಪ್ರವಾದಿಯವರಿಂದ(ಸ) ಕೇಳಿದ್ದೀರಾ ಎಂದು ಕೇಳಿದರು. ಅವರು ಹೌದೆಂದರು ಅಥವಾ ಹೀಗೆಂದರು- ಇದನ್ನು ನನಗೆ ಸುಳ್ಳು ಹೇಳದ ಒಬ್ಬ ವ್ಯಕ್ತಿ ಹೇಳಿದರು. ಅಲ್ಲಾಹನಾಣೆ! ನಾವು ತಪ್ಪಾಗಿ ಏನೂ ಹೇಳುತ್ತಿರಲಿಲ್ಲ. ನಮಗೆ ಸುಳ್ಳೇನು ತಪ್ಪೇನು ಎಂಬುದೇ ತಿಳಿದಿರಲಿಲ್ಲ. *[ಬೈಹಕಿ]*

ಟಿಪ್ಪಣಿ: ಸಹಾಬಿಗಳು ಹದೀಸ್‌ಗಳನ್ನು ಹೇಳುವಾಗ ಎಷ್ಟು ಜಾಗ್ರತೆ ವಹಿಸುತ್ತಿದ್ದರು ಎಂದು ಈ ಹದೀಸ್‌ನಿಂದ ತಿಳಿಯುತ್ತದೆ.

ನಾಲಗೆಯ ಸಂರಕ್ಷಣೆ

(450) عَنْ اَسْلَمَ مَوْلٰى عُمَرَ قَالَ اِنَّ عُمَرَ دَخَلَ يَوْمًا عَلٰى اَبِىْ بَكْرِنِ الصِّدِّيْقِ وَهُوَ يَجْبِذُ لِسَانَهٗ، فَقَالَ عُمَرُ مَهْ غَفَرَ اللّٰهُ لَكَ، فَقَالَ لَهٗ اَبُوْ بَكْرٍ اِنَّ هٰذَا اَوْرَدَنِىْ الْمَوَارِدَ (مشكٰوة المصابيح)

ಹ. ಅಸ್ಲಮ ಮೌಲಾ ಉಮರ್(ರ) ಹೇಳುತ್ತಾರೆ- ಒಂದು ದಿನ ಹ. ಉಮರ್(ರ) ಅವರು ಹ. ಅಬೂಬಕರ್‌ರ(ರ) ಬಳಿಗೆ ಹೋದರು. ಹ. ಅಬೂಬಕರ್(ರ) ತಮ್ಮ ನಾಲಗೆಯನ್ನು ಕೈಯಿಂದ ಎಳೆಯುತ್ತಿರುವುದನ್ನು ಕಂಡು ಹ. ಉಮರ್(ರ) ಹೇಳಿದರು- ಇದೇನು ಮಾಡುತ್ತಿದ್ದೀರಿ, ಬಿಡಿ, ಅಲ್ಲಾಹನು ನಿಮ್ಮ ತಪ್ಪನ್ನು ಕ್ಷಮಿಸಲಿ. ಹ. ಅಬೂಬಕರ್ ಹೇಳಿದರು- ಇದು ನನ್ನನ್ನು ನಾಶಗೊಳಿಸಿದೆ, ಅದಕ್ಕಾಗಿ ಅದಕ್ಕೆ ಶಿಕ್ಷೆ ನೀಡುತ್ತಿದ್ದೇನೆ. *[ಮಿಶ್ಕಾತ್]*

ಟಿಪ್ಪಣಿ: ಹೆಚ್ಚಿನ ಪಾಪಗಳು ನಾಲಗೆಯಿಂದಲೇ ಸಂಭವಿಸುತ್ತವೆ. ಕೆಲವೊಮ್ಮೆ ಗೀಬತ್ (ಪರನಿಂದೆ) ಆಗುತ್ತದೆ. ಇನ್ನು ಕೆಲವೊಮ್ಮೆ ಸಲ್ಲದ ಮಾತು ಬಾಯಿಯಿಂದ ಹೊರಡುತ್ತದೆ. ಒಟ್ಟಿನಲ್ಲಿ ಬಹಳಷ್ಟು ತಪ್ಪುಗಳು ಈ ನಾಲಗೆಯಿಂದಲೇ ಆಗುತ್ತವೆ. ಅನಂತರ ಸತ್ಯವಿಶ್ವಾಸಿ ಪಶ್ಚಾತ್ತಾಪ ಪಡುತ್ತಾನೆ. ಅಂತಹದೇ ಒಂದು ಸ್ಥಿತಿ ಹ. ಅಬೂಬಕರ್‌ರಿಗೆ ಎದುರಾಗಿತ್ತು. ಅದಕ್ಕಾಗಿ ಅವರು ನಾಲಗೆಯನ್ನು ಶಿಕ್ಷಿಸುತ್ತಿದ್ದರು.

---

(451) عَنْ عَائِشَةَ قَالَتْ مَرَّ النَّبِىُّ صلى الله عليه وسلم بِاَبِىْ بَكْرٍ وَهُوَ يَلْعَنُ بَعْضَ رَقِيْقِهٖ، فَالْتَفَتَ اِلَيْهِ، فَقَالَ لَعَّانِيْنَ وَصِدِّيْقِيْنَ؟ كَلَّا وَرَبِّ الْكَعْبَةِ فَاَعْتَقَ اَبُوْبَكْرٍ يَوْمَئِذٍ بَعْضَ رَقِيْقِهٖ، ثُمَّ جَاءَ اِلَى النَّبِىِّ صلى الله عليه وسلم فَقَالَ لَا اَعُوْدُ (مشكٰوة)

ಆಯಿಶಾ(ರ) ಹೇಳುತ್ತಾರೆ- ಒಂದು ದಿನ ಪ್ರವಾದಿಯವರು(ಸ) ಹ. ಅಬೂಬಕರ್‌ರ(ರ) ಬಳಿಗೆ ಹೋದರು. ಆಗ ಅವರು ತಮ್ಮ ಗುಲಾಮರಲ್ಲೊಬ್ಬನನ್ನು ಶಪಿಸುತ್ತಿದ್ದರು.

ಪ್ರವಾದಿಯವರು(ಸ) ಅಬೂಬಕರನ್ನುದ್ದೇಶಿಸಿ ಹೀಗೆಂದರು- ಸತ್ಯಸಂಧನಾಗಿದ್ದೂ ಶಾಪ ಹಾಕುತ್ತೀರಾ? (ಅಂದರೆ ಈ ಕೃತ್ಯವು ನಿಮ್ಮ ಸತ್ಯಸಂಧತೆಗೆ ತಕ್ಕುದಲ್ಲ) ಕಅಬಾ ಭವನದ ಪ್ರಭುವಿನಾಣೆ! ಹೀಗೆ ಸಲ್ಲದು. (ಸತ್ಯಸಂಧತೆಯ ಬಿರುದು ಪಡೆದ ಸತ್ಯವಿಶ್ವಾಸಿ ಶಾಪ ಹಾಕುವುದೆಂದರೇನು) ಅನಂತರ ಅಬೂಬಕರ್(ರ) ಆ ಗುಲಾಮನನ್ನು ಸ್ವತಂತ್ರಗೊಳಿಸಿದರು. ತರುವಾಯ ಪ್ರವಾದಿವರ್ಯರ(ಸ) ಬಳಿಗೆ ಹೋಗಿ, ನಾನು ತೌಬಾ ಮಾಡುತ್ತೇನೆ. ಇನ್ನೆಂದೂ ನನ್ನಿಂದ ಈ ತಪ್ಪು ಸಂಭವಿಸಲಾರದು ಎಂದು ಹೇಳಿದರು. [ಮಿಶ್ಕಾತ್]

ಕ್ಷಮೆ

(452) عَنِ ابْنِ عَبَّاسٍ قَالَ، قَدِمَ عُيَيْنَةُ بْنُ حِصْنٍ فَنَزَلَ عَلَى ابْنِ اَخِيْهِ الْحُرِّ بْنِ قَيْسٍ، وَكَانَ مِنَ النَّفَرِ الَّذِيْنَ يُدْنِيْهِمْ عُمَرُ، وَكَانَ الْقُرَّاءُ اَصْحَابَ مَجْلِسِ عُمَرَ وَمُشَاوَرَتِهٖ كُهُوْلًا كَانُوْا اَوْ شُبَّانًا، فَقَالَ عُيَيْنَةُ لِابْنِ اَخِيْهِ يَا ابْنَ اَخِيْ لَكَ وَجْهٌ عِنْدَ هٰذَا الْاَمِيْرِ فَاسْتَاْذِنْ لِيْ عَلَيْهِ، فَاَذِنَ لَهٗ عُمَرُ، فَلَمَّا دَخَلَ قَالَ هِيْ يَا ابْنَ الْخَطَّابِ فَوَاللّٰهِ مَا تُعْطِيْنَا الْجَزْلَ وَلَا تَحْكُمُ فِيْنَا بِالْعَدْلِ، فَغَضِبَ عُمَرُ حَتّٰى هَمَّ اَنْ يُوْقِعَ بِهٖ، فَقَالَ لَهُ الْحُرُّ يَا اَمِيْرَ الْمُؤْمِنِيْنَ اِنَّ اللّٰهَ تَعَالٰى قَالَ لِنَبِيِّهٖ صلى الله عليه وسلم خُذِ الْعَفْوَ وَاْمُرْ بِالْعُرْفِ وَاَعْرِضْ عَنِ الْجَاهِلِيْنَ، وَاِنَّ هٰذَا مِنَ الْجَاهِلِيْنَ، فَوَاللّٰهِ مَا جَاوَزَهَا عُمَرُ حِيْنَ تَلَاهَا، وَكَانَ وَقَّافًا عِنْدَ كِتَابِ اللّٰهِ (بخاری)

ಇಬ್ನು ಅಬ್ಬಾಸ್(ರ) ಹೇಳುತ್ತಾರೆ: ಉಯೈನ ಬಿನ್ ಹಿಸ್ನ್ ಅವರು ತಮ್ಮ ಭ್ರಾತೃಜ ಹುರ್ರುಬ್ನ್ ಕೈಸ್‌ರಲ್ಲಿಗೆ ಅತಿಥಿಯಾಗಿ ಹೋದರು. ಹುರ್ರುಬ್ನ್ ಕೈಸ್ ಹ. ಉಮರ್‌ರಿಗೆ(ರ) ಬಹಳ ಹತ್ತಿರದವರಾಗಿದ್ದರು. ಕುರ್‌ಆನ್ ಕಲಿತವರಾಗಿದ್ದು ಅವರ ಸಂಗಾತಿಗಳೂ ಸಲಹೆಗಾರರೂ ಆಗಿದ್ದರು. ಅವರಲ್ಲಿ ಯುವಕರೂ ಮಧ್ಯ ವಯಸ್ಕರೂ ಇದ್ದರು. ಉಯೈನರು ಹುರ್‌ರೊಡನೆ ಹೇಳಿದರು: ಸೋದರ ಪುತ್ರಾ! ನೀವು ಹ.ಉಮರ್‌ರಿಗೆ ಹತ್ತಿರದವರಾಗಿರುತ್ತೀರಿ, ನನಗೆ ಅವರನ್ನು ಭೇಟಿಯಾಗ ಬೇಕು. ನನಗಾಗಿ ಅವರಿಂದ ಅನುಮತಿ ಪಡೆಯಿರಿ. ಹಾಗೆ ಅನುಮತಿ ಸಿಕ್ಕಿದ ಬಳಿಕ ಉಯೈನ ಅವರು ಹ.ಉಮರ್‌ರ(ರ) ಬಳಿಗೆ ಹೋದರು. ಮಾತಿನ ಮಧ್ಯೆ ಅವರು ಹೀಗೆಂದರು- ಓ ಖತ್ತಾಬ್‌ರ ಪುತ್ರರೇ! ನೀವು ನಮಗೇನೂ ದೊಡ್ಡ ಕಾಣಿಕೆ

ಕೊಡುವುದಿಲ್ಲ ಮತ್ತು ನ್ಯಾಯದೊಂದಿಗೆ ತೀರ್ಮಾನ ಮಾಡುವುದಿಲ್ಲ. ಇದನ್ನು ಕೇಳಿ ಹ.ಉಮರ್‌ರಿಗೆ ಕೋಪ ಬಂತು. ಅವರು ಅವರನ್ನು ಶಿಕ್ಷಿಸ ಬಯಸಿದರು. ಆಗ ಹುರ್ರ್ ಹೀಗೆಂದರು- ಮುಸ್ಲಿಮರ ನಾಯಕರೇ! ಅಲ್ಲಾಹನು ತನ್ನ ಪ್ರವಾದಿಯನ್ನು ಸಂಬೋಧಿಸಿ ಹೀಗೆಂದಿರುವನು- "ಕ್ಷಮಾಶೀಲರಾಗಿರಿ, ಸರ್ವವಿದಿತ ಒಳಿತುಗಳನ್ನು ಬೋಧಿಸಿರಿ ಮತ್ತು ತಿಳಿಗೇಡಿಗಳೊಡನೆ ಜಗಳಾಡಬೇಡಿರಿ" (ಅಲ್ ಅಲ್‌ರಾಫ್-199) ಮತ್ತು ಈ ವ್ಯಕ್ತಿ ತಿಳಿಗೇಡಿಯಾಗಿದ್ದಾನೆ. ಆದುದರಿಂದ ಇವನ ತಿಳಿಗೇಡಿತನವನ್ನು ಕ್ಷಮಿಸಿರಿ.

ಈ ಆಯತ್ ಕೇಳುತ್ತಲೇ ಹ.ಉಮರ್ ಶಿಕ್ಷೆಯ ಯೋಚನೆಯನ್ನು ಕೈ ಬಿಟ್ಟರು. ಅವರು ಅಲ್ಲಾಹನ ಗ್ರಂಥದಲ್ಲಿ ಸ್ಥಿರವಾಗಿ ನಿಲ್ಲುವವರಾಗಿದ್ದರು (ಅರ್ಥಾತ್ ಅಲ್ಲಾಹನ ಆದೇಶಗಳಿಂದ ಒಂದಿಷ್ಟೂ ತಪ್ಪಿ ನಡೆಯುವವರಾಗಿರಲಿಲ್ಲ.) *[ಬುಖಾರಿ]*

ತಾಳ್ಮೆ ಮತ್ತು ಸಾಂತ್ವನ

(453) عَنْ أَنَسٍ قَالَ، مَاتَ ابْنٌ لِأَبِي طَلْحَةَ مِنْ أُمِّ سُلَيْمٍ، فَقَالَتْ لِأَهْلِهَا لَا تُحَدِّثُوا أَبَا طَلْحَةَ بِابْنِهِ حَتَّى أَكُونَ أَنَا أُحَدِّثُهُ، فَجَاءَ فَقَرَّبَتْ إِلَيْهِ عَشَاءً، فَأَكَلَ وَشَرِبَ ثُمَّ تَصَنَّعَتْ لَهُ أَحْسَنَ مَا كَانَتْ تَصَنَّعُ قَبْلَ ذَلِكَ فَوَقَعَ بِهَا، فَلَمَّا أَنْ رَأَتْ أَنَّهُ قَدْ شَبِعَ وَأَصَابَ مِنْهَا، قَالَتْ يَا أَبَا طَلْحَةَ لَوْ أَنَّ قَوْمًا أَعَارُوا عَارِيَتَهُمْ أَهْلَ بَيْتٍ فَطَلَبُوا عَارِيَتَهُمْ، أَلَهُمْ أَنْ يَمْنَعُوهُمْ ؟ قَالَ لَا، قَالَتْ فَاحْتَسِبْ ابْنَكَ

(رياض الصالحين مسلم)

ಹ. ಅನಸ್(ರ) ಹೇಳುತ್ತಾರೆ- ಅಬೂತಲ್ಹರಿಗೆ ಉಮ್ಮು ಸುಲೈಮ್‌ರಿಂದ ಒಬ್ಬ ಪುತ್ರ ಜನಿಸಿದ್ದನು. (ಅಬೂತಲ್ಹ ಪ್ರಯಾಣದಲ್ಲಿದ್ದಾಗ) ಅವನ ನಿಧನವಾಯಿತು. ಉಮ್ಮು ಸುಲೈಮ್‌ರು ಮನೆಯವರೊಂದಿಗೆ, ನೀವಾರೂ ಮಗುವಿನ ನಿಧನ ವಾರ್ತೆಯನ್ನು ಅಬೂತಲ್ಹರಿಗೆ ನೀಡಬಾರದು ನಾನೇ ನೀಡುತ್ತೇನೆಂದು ತಿಳಿಸಿದರು. ಅಬೂತಲ್ಹ ಬಂದಾಗ ಮೊಟ್ಟ ಮೊದಲು ರಾತ್ರಿಯ ಊಟ ಬಡಿಸಿದರು. ಅವರು ಊಟ ಮಾಡಿ ಅಲ್ಲೇ ಉಳಕೊಂಡರು. ಸ್ವಲ್ಪ ದಣಿವಾರಿದ ಬಳಿಕ ಉಮ್ಮು ಸುಲೈಮ್ ಹೇಳಿದರು- ಅಬೂತಲ್ಹಾ! ಯಾರಾದರೂ ಒಂದು ವಸ್ತುವನ್ನು ಒಬ್ಬನ ಬಳಿ ಜೋಪಾನವಾಗಿಟ್ಟಿದ್ದು ಅದನ್ನು ಅವನು ಮರಳಿ ಕೇಳಿದರೆ

ನೀಡಲು ನಿರಾಕರಿಸುವ ಹಕ್ಕು ಅವನಿಗೆ ಇದೆಯೇ? ಅಬೂತಲ್ಹ ಹೇಳಿದರು- ಇಲ್ಲ, ಅವನು ನಿರಾಕರಿಸುವಂತಿಲ್ಲ. ಆಗ ಉಮ್ಮು ಸುಲೈಮ್ ಹೇಳಿದರು- ಈ ಮಗುವನ್ನು ಕೊಂಡು ಹೋಗಿ ದಫನ ಮಾಡಿರಿ. ಅದು ಅಲ್ಲಾಹನ ಅಮಾನತ್ತಾಗಿತ್ತು. ಅಲ್ಲಾಹನು ಅದನ್ನು ಮರಳಿ ಪಡೆದನು. ಪರಲೋಕದಲ್ಲಿ ಪುಣ್ಯ ಲಭಿಸಬೇಕಾದರೆ ನೀವು ತಾಳ್ಮೆ ವಹಿಸಬೇಕು.

[ರಿಯಾದುಸ್ಸಾಲಿಹೀನ್- ಮುಸ್ಲಿಮ್]

ಟಿಪ್ಪಣಿ: ಅಬೂತಲ್ಹ ಮನೆಗೆ ಬಂದ ಕೂಡಲೇ ಮಗುವಿನ ಯೋಗ ಕ್ಷೇಮ ವಿಚಾರಿಸಿದರು. ಉಮ್ಮು ಸುಲೈಮ್ ಅವರು ಅರ್ಥಗರ್ಭಿತ ಉತ್ತರ ನೀಡಿದರು. ಅದು ಬಹಳ ಸಮಾಧಾನದ ಪರಿಸ್ಥಿತಿಯಲ್ಲಿದೆ ಎಂದು ಅವರು ಹೇಳಿದರು. ಆ ಕಾಲದ ಮುಸ್ಲಿಮ್ ಮಹಿಳೆಯರು ಹೇಗಿರುತ್ತಿದ್ದ ರೆಂಬುದನ್ನು ಗಮನಿಸಿ.

ಸಭೆಯ ಮರ್ಯಾದೆಗಳು

(454) عَنْ جَابِرِ بْنِ سَمُرَةَ قَالَ، كُنَّا إِذَا أَتَيْنَا النَّبِيَّ صلى الله عليه وسلم جَلَسَ أَحَدُنَا حَيْثُ يَنْتَهِي (ابوداود)

ಜಾಬಿರ್ ಬಿನ್ ಸಮುರಃ ಹೇಳುತ್ತಾರೆ- ನಾವು ಪ್ರವಾದಿಯವರ(ಸ) ಸಭೆಗೆ ಹೋದಾಗ ಸಾಮಾನ್ಯವಾಗಿ ಎಲ್ಲರಿಗಿಂತಲೂ ಕೊನೆಯಲ್ಲಿ ಕುಳಿತುಕೊಳ್ಳುವುದು ನಮ್ಮಲ್ಲಿ ಪ್ರತಿಯೊಬ್ಬರ ರೂಢಿಯಾಗಿತ್ತು. (ತಡವಾಗಿ ಬರುವ ಮತ್ತು ಜನರ ಹೆಗಲ ಮೇಲಿನಿಂದ ಹಾದುಕೊಂಡು ಮುಂದೆ ಸಾಗಿ ಪ್ರವಾದಿಯವರ(ಸ) ಹತ್ತಿರ ತಲಪುವ ಪ್ರಯತ್ನವನ್ನು ಯಾರೂ ಮಾಡುತ್ತಿರಲಿಲ್ಲ.)

[ಅಬೂ ದಾವೂದ್]

ವಚನ ಪಾಲನೆ

(455) عَنْ عَبْدِ اللهِ بْنِ مَسْعُوْدٍ أَنَّ النَّبِيَّ صلى الله عليه وسلم قَالَ خَيْرُ الْقُرُوْنِ قَرْنِيْ، ثُمَّ الَّذِيْنَ يَلُوْنَهُمْ، ثُمَّ الَّذِيْنَ يَلُوْنَهُمْ ثَلَاثًا أَوْ أَرْبَعًا، ثُمَّ يَجِيْئُ قَوْمٌ تَسْبِقُ شَهَادَةُ أَحَدِهِمْ يَمِيْنَهُ وَيَمِيْنُهُ شَهَادَتَهُ، قَالَ وَكَانَ أَصْحَابُنَا يَضْرِبُوْنَنَا وَنَحْنُ صِبْيَانٌ عَلَى الشَّهَادَةِ وَالْعَهْدِ (مسند احمد)

ಅಬ್ದುಲ್ಲಾ ಬಿನ್ ಮಸ್‌ವೂದ್(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು- ನನ್ನ ಕಾಲದವರು ಅತ್ಯುತ್ತಮ ಜನರಾಗಿದ್ದಾರೆ. (ಅಂದರೆ ಸಹಾಬಿಗಳು) ನನ್ನ ಕಾಲದ ನಂತರ ಬರುವವರೂ ಉತ್ತಮರಾಗಿರುವರು. (ಅರ್ಥಾತ್ ಸಹಾಬಿಗಳಿಂದ ತರಬೇತಿ ಪಡೆದ ತಾಬಿಈಗಳು) ಆ ಬಳಿಕ ಉತ್ತಮರು ಅವರ ನಂತರದವರಾಗಿರುವರು. (ಅರ್ಥಾತ್ ತಾಬಿಈಗಳ ಒಡನಾಟದಲ್ಲಿರುವ ತಬಅವುತ್ತಾಬಿಈಗಳು) ಅನಂತರ ಬರುವವರು- ಅವರ ಸಾಕ್ಷ್ಯವು ಆಣೆಯನ್ನೂ ಮೀರಿಸುವುದು ಮತ್ತು ಆಣೆಯು ಸಾಕ್ಷ್ಯವನ್ನೂ ಮೀರಿಸುವುದು. (ಅರ್ಥಾತ್ ಅವರು ಸುಳ್ಳು ಸಾಕ್ಷ್ಯ ನುಡಿಯುವರು, ಸುಳ್ಳು ಆಣೆ ಹಾಕುವರು. ಅವರ ದೃಷ್ಟಿಯಲ್ಲಿ ಸಾಕ್ಷಿ ಮತ್ತು ವಾಗ್ದಾನಗಳಿಗೆ ಬೆಲೆಯೇ ಇರಲಾರದು).

ಅಬ್ದುಲ್ಲಾ ಬಿನ್ ಮಸ್‌ವೂದ್(ರ) ಹೇಳುತ್ತಾರೆ: ಮಕ್ಕಳಾದ ನಾವು ಸುಳ್ಳು ಆಣೆ ಹಾಕಿದರೆ ಮತ್ತು ವಚನ ಪಾಲನೆ ಮಾಡದಿದ್ದರೆ ನಮ್ಮ ಹಿರಿಯರು ನಮಗೆ ಹೊಡೆಯುತ್ತಿದ್ದರು.

[ಮುಸ್ನದ್ ಅಹ್ಮದ್]

ಸಾಮಾನ್ಯ ಕಟ್ಟಡ

(456) عَنْ عَبْدِ الرَّحْمٰنِ قَالَ دَخَلْتُ عَلٰى اُمِّ طَلْقٍ، فَقُلْتُ مَا اَقْصَرَ سَقْفَ بَيْتِكِ هٰذَا، فَقَالَتْ يَا بُنَيَّ اِنَّ اَمِيْرَ الْمُؤْمِنِيْنَ عُمَرَ بْنَ الْخَطَّابِ كَتَبَ اِلٰى عُمَّالِهٖ اَنْ لَا تُطِيْلُوْا بِنَاءَكُمْ فَاِنَّهٗ مِنْ شَرِّ اَيَّامِكُمْ (الادب المفرد امام بخاریؒ)

ಅಬ್ದುರ್ರಹ್ಮಾನ್ ಹೇಳುತ್ತಾರೆ- ನಾನು ಉಮ್ಮುತಲ್ಕಿರ ಮನೆಗೆ ಹೋದೆ. ಅವರ ಮನೆಯ ಮಾಡು ಬಹಳ ತಗ್ಗಾಗಿತ್ತು. ನಾನು ಹೇಳಿದೆ- ನಿಮ್ಮ ಮನೆಯ ಮಾಡು ಎಷ್ಟು ತಗ್ಗು! ಆಗ ಅವರು ಹೇಳಿದರು- ಅಮೀರುಲ್ ಮುಅ್‌ಮಿನೀನ್ ಉಮರ್ ಬಿನ್ ಖತ್ತಾಬ್(ರ) ತಮ್ಮ ಸರಕಾರದ ಉನ್ನತ ಅಧಿಕಾರಿಗಳಿಗೆ (ರಾಜ್ಯಪಾಲರು ಮುಂತಾದವರಿಗೆ)- ನೀವು ನಿಮ್ಮ ಕಟ್ಟಡಗಳನ್ನು ಉನ್ನತವಾಗಿ ಕಟ್ಟಬಾರದು. ಹಾಗೆ ಮಾಡಿದರೆ ಅದು ಕೆಟ್ಟ ಕಾಲವಾಗಿರುವುದು- ಎಂದು ಲಿಖಿತ ಆದೇಶ ನೀಡಿದ್ದರು. *[ಅಲ್ ಅದಬುಲ್ ಮುಫ್ರದ್, ಬುಖಾರಿ]*

ಟಿಪ್ಪಣಿ: ಸಂಪತ್ತಿನ ಪ್ರದರ್ಶನವು ಉನ್ನತ ಕಟ್ಟಡಗಳ ರೂಪದಲ್ಲಾದರೆ ಅದು ಈ ಸಮುದಾಯವು ಲೋಕಾರಾಧನೆಯೆಡೆಗೆ ಸಾಗುತ್ತಿದೆಯೆಂಬುದರ ಸಂಕೇತವಾಗಿದೆ. ಲೋಕಾರಾಧನೆಯ ತೀವ್ರತೆ ಹೆಚ್ಚಿದಂತೆ ಧರ್ಮದ ಬಗ್ಗೆ ಅಭಿಮಾನ ಮತ್ತು ದೇವೋಪಾಸನೆಯ ಸ್ಫೂರ್ತಿ ದುರ್ಬಲವಾಗುವುದು. ಅದರ ಪರಿಣಾಮವಾಗಿ ಅಲ್ಲಾಹನು ಸಮುದಾಯವನ್ನು ತನ್ನ ಸಹಾಯದಿಂದ ವಂಚಿತಗೊಳಿಸುವನು. ಅದರ

ಅಂತಿಮ ಬಿಂದು ಮಿಥ್ಯದ ದಾಸ್ಯವಾಗಿರುವುದು. ಈ ಸಮುದಾಯ ಇಂದು ಅದನ್ನೇ ಅನುಭವಿಸುತ್ತಿಲ್ಲವೇ? ಹ.ಉಮರ್(ರ) ಸಮುದಾಯವನ್ನು ಇದೇ ಅಧೋಗತಿಯಿಂದ ತಡೆಯಲಿಕ್ಕಾಗಿ ಪ್ರಯತ್ನಿಸಿದ್ದರು.

ಪ್ರಾಣಿ ದಯೆ

(457) عَنْ أَنَسٍ قَالَ، كُنَّا إِذَا نَزَلْنَا مَنْزِلًا لَا نُسَبِّحُ حَتَّى نَحُلَّ الرِّحَالَ (ابوداود)

ಹ. ಅನಸ್(ರ) ಹೇಳುತ್ತಾರೆ- ನಾವು ಪ್ರಯಾಣದ ವೇಳೆ ಎಲ್ಲಾದರೂ ತಂಗಿದರೆ ನಮ್ಮ ಜಾನುವಾರುಗಳ ಮೇಲಿನಿಂದ ಹೊರೆಗಳನ್ನು ಇಳಿಸುವ ವರೆಗೆ ದಿಕ್ರ್- ತಸ್ಬೀಹ್ (ಜಪ-ತಪ) ಮತ್ತು ನಮಾಝ್‌ಗಳಲ್ಲಿ ತಲ್ಲೀನರಾಗುತ್ತಿರಲಿಲ್ಲ. *[ಅಬೂ ದಾವೂದ್]*

ಟಿಪ್ಪಣಿ: ಇದು ಪ್ರಾಣಿಗಳ ಮೇಲೆ ದಯೆ ತೋರಬೇಕೆಂದು ಇಸ್ಲಾಮ್ ತನ್ನ ಅನುಯಾಯಿಗಳಿಗೆ ನೀಡಿದ ಶಿಕ್ಷಣದ ಫಲವಾಗಿದೆ.

ಅತಿಥಿ ಸತ್ಕಾರ

(458) عَنْ شِهَابِ بْنِ عَبَّادٍ اَنَّهُ سَمِعَ بَعْضَ وَفْدِ عَبْدِ الْقَيْسِ وَهُمْ يَقُوْلُوْنَ ، قَدِمْنَا عَلٰى رَسُوْلِ اللّٰهِ صلى الله عليه وسلم فَاشْتَدَّ فَرَحُهُمْ ، فَلَمَّا انْتَهَيْنَا اِلَى الْقَوْمِ اَوْسَعُوْا لَنَا ، فَقَعَدْنَا ، فَرَحَّبَ النَّبِيُّ صَلَّى اللّٰهُ عَلَيْهِ وَسَلَّمَ وَدَعَا لَنَا ثُمَّ نَظَرَ اِلَيْنَا ، فَقَالَ مَنْ سَيِّدُكُمْ وَزَعِيْمُكُمْ ؟ فَاَشَرْنَا جَمِيْعًا اِلَى الْمُنْذِرِ بْنِ عَائِذٍ ، فَقَالَ النَّبِيُّ صلى الله عليه وسلم اَهٰذَا الْاَشَجُّ ؟ فَكَانَ اَوَّلَ يَوْمٍ وُضِعَ عَلَيْهِ الْاِسْمُ لِضَرْبَةٍ كَانَتْ بِوَجْهِهِ بِحَافِرِ حِمَارٍ ، قُلْنَا نَعَمْ يَا رَسُوْلَ اللّٰهِ ، فَتَخَلَّفَ بَعْدَ الْقَوْمِ ، فَعَقَلَ رَوَاحِلَهُمْ وَضَمَّ مَتَاعَهُمْ ثُمَّ اَخْرَجَ عَيْبَتَهُ ، فَاَلْقٰى عَنْهُ ثِيَابَ السَّفَرِ وَلَبِسَ مِنْ صَالِحِ ثِيَابِهِ ثُمَّ اَقْبَلَ اِلَى النَّبِيِّ صلى الله عليه وسلم ، وَقَدْ بَسَطَ النَّبِيُّ صلى الله عليه وسلم رِجْلَهُ وَاتَّكَاَ ، فَلَمَّا دَنَا مِنْهُ الْاَشَجُّ اَوْسَعَ الْقَوْمُ لَهُ وَقَالُوْا هٰهُنَا يَا اَشَجُّ ، فَقَعَدَ عَنْ يَمِيْنِ رَسُوْلِ اللّٰهِ صلى الله عليه وسلم ، فَرَحَّبَ بِهِ وَاَلْطَفَهُ وَسَاَلَهُ عَنْ بِلَادِهِمْ وَسَمّٰى لَهُمْ قَرْيَةً قَرْيَةً الصَّفَا وَالْمُشَقَّرِ وَغَيْرِ ذٰلِكَ مِنْ قُرٰى هَجَرَ ، فَقَالَ بِاَبِيْ وَاُمِّيْ يَا رَسُوْلَ اللّٰهِ ، لَاَنْتَ اَعْلَمُ بِاَسْمَاءِ قُرَانَا مِنَّا ، فَقَالَ اِنِّيْ وَطِئْتُ بِلَادَكُمْ وَفُسِحَ لِيْ فِيْهَا ، قَالَ يَا مَعْشَرَ الْاَنْصَارِ اَكْرِمُوْا اِخْوَانَكُمْ ، فَاِنَّهُمْ اَشْبَاهُكُمْ فِي الْاِسْلَامِ اَشْبَهُ شَيْءٍ اَشْعَارًا وَاَبْشَارًا ، اَسْلَمُوْا طَائِعِيْنَ غَيْرَ مُكْرَهِيْنَ وَلَا مَوْتُوْرِيْنَ ، اِذْ اَبٰى قَوْمٌ اَنْ يُسْلِمُوْا حَتّٰى قُتِلُوْا ، قَالَ فَلَمَّا اَصْبَحُوْا ، قَالَ كَيْفَ رَاَيْتُمْ كَرَامَةَ اِخْوَانِكُمْ لَكُمْ وَضِيَافَتَهُمْ اِيَّاكُمْ ؟ قَالُوْا خَيْرُ اِخْوَانٍ ، اَلَانُوْا فُرُشَنَا وَاَطَابُوْا مَطْعَمَنَا وَبَاتُوْا وَاَصْبَحُوْا يُعَلِّمُوْنَا كِتَابَ رَبِّنَا تَبَارَكَ وَتَعَالٰى وَسُنَّةَ نَبِيِّنَا صلى الله عليه وسلم فَاَعْجَبَ النَّبِيَّ صلى الله عليه وسلم وَفَرِحَ (مسند احمد)

ಶಿಹಾಬ್ ಬಿನ್ ಅಬ್ಬಾದ್ ಹೇಳುತ್ತಾರೆ- ಪ್ರವಾದಿಯವರನ್ನು(ಸ) ಭೇಟಿಯಾಗಲು ಬಂದಿದ್ದ ಅಬ್ದುಲ್ ಕೈಸ್ ಗೋತ್ರದ ನಿಯೋಗದ ಕೆಲವರು ಹೀಗೆಂದರು- ನಾವು ಮದೀನಾಕ್ಕೆ ತಲಪಿದಾಗ ಜನರು ಬಹಳ ಆನಂದ ತುಂದಿಲರಾದರು. ಅವರು ನಮಗೆ ಒಳ್ಳೆಯ ಸ್ಥಳಗಳನ್ನು ನೀಡಿದರು. ಉತ್ತಮ ಸತ್ಕಾರ ಮಾಡಿದರು. ಪ್ರವಾದಿವರ್ಯರೂ ನಮ್ಮನ್ನು ಸ್ವಾಗತಿಸಿ ನಮಗಾಗಿ ಪ್ರಾರ್ಥಿಸಿದರು. ಅವರು ನಮ್ಮನ್ನು ನೋಡಿ ನಿಮ್ಮ ನಾಯಕ ಯಾರು ಎಂದು ಕೇಳಿದರು. ನಾವು ಮುಂದಿರ್ ಬಿನ್ ಆಇದ್‌ರನ್ನು ತೋರಿಸುತ್ತಾ- ಇವರೇ ನಮ್ಮ ನಾಯಕ ಎಂದೆವು. ಪ್ರವಾದಿ(ಸ) ಕೇಳಿದರು- 'ಈ ಅಶಜ್ಜ್ (ಅಂದರೆ ಮುಖದ ಮೇಲೆ ಗಾಯದ ಕಲೆಯಿರುವವ) ನಿಮ್ಮ ನಾಯಕನೇ?' ನಾವು, 'ಹೌದು, ಅವರೇ ನಮ್ಮ ನಾಯಕ' ಎಂದೆವು. ಮುಂದಿರ್‌ರ ಮುಖವನ್ನೊಮ್ಮೆ ಕತ್ತೆ ತುಳಿದಿತ್ತು. ಅದರಿಂದಾಗಿ ಅವರ ಮುಖದಲ್ಲಿ ಗಾಯವಾಗಿತ್ತು. ಪ್ರವಾದಿಯವರು(ಸ) ಅದಕ್ಕಾಗಿಯೇ ಅವರನ್ನು 'ಅಶಜ್ಜ್' ಎಂದು ಕರೆದಿದ್ದರು. ಅದಕ್ಕೆ ಮುಂಚೆ ನಾವೆಂದೂ ಅವರನ್ನು ಅಶಜ್ಜ್ ಎಂದು ಕರೆಯುತ್ತಿರಲಿಲ್ಲ.

ನಿಯೋಗದ ಇತರ ಜನರು ಪ್ರವಾದಿಯವರನ್ನು(ಸ) ಭೇಟಿ ಮಾಡುವ ತವಕದಿಂದ ಮೊದಲೇ ತಲಪಿದ್ದರು. ಅವರು ತಮ್ಮ ಸಾಮಾನುಗಳನ್ನು ಸರಿಯಾಗಿಡಲಿಲ್ಲ. ಜಾನುವಾರುಗಳನ್ನು ಕಟ್ಟಿರಲಿಲ್ಲ. ಬಟ್ಟೆ ಬದಲಾಯಿಸಲೂ ಇಲ್ಲ. ಆದರೆ ಮುಂದಿರ್ ಮೊದಲು ಎಲ್ಲ ಜಾನುವಾರುಗಳನ್ನು ಗೂಟಕ್ಕೆ ಕಟ್ಟಿದರು. ಎಲ್ಲ ಸಾಮಾನು ಸರಂಜಾಮುಗಳನ್ನು ಓರಣವಾಗಿಟ್ಟರು. ತರುವಾಯ ಚೀಲದಿಂದ ಶುಭ್ರ ಬಟ್ಟೆ ತೆಗೆದು ಧರಿಸಿದರು. ಅನಂತರ ಪ್ರವಾದಿವರ್ಯರನ್ನು(ಸ) ಭೇಟಿಯಾಗಲು ಹೋದರು.

ಮುಂದಿರ್ ಬರುವ ಸಮಯದಲ್ಲಿ ಪ್ರವಾದಿವರ್ಯರು(ಸ) ಕಾಲು ಚಾಚಿ ಒರಗಿ ಕುಳಿತಿದ್ದರು. ಆ ಜನರು ಅವರಿಗೆ ಸ್ಥಳಾವಕಾಶ ನೀಡಲು ಮುದುಡುತ್ತಾ, ಇಲ್ಲಿ ಬನ್ನಿ ಎಂದರು. ಅವರು ಪ್ರವಾದಿವರ್ಯರ(ಸ) ಬಲಭಾಗದಲ್ಲಿ ಕುಳಿತರು. ಪ್ರವಾದಿವರ್ಯರು(ಸ) ಅವರನ್ನು ಸ್ವಾಗತಿಸಿದರು. ಆತ್ಮೀಯವಾಗಿ ಮಾತಾಡಿದರು. ಅವರ ದೇಶದ ಒಂದೊಂದು ಗ್ರಾಮದ ಹೆಸರೆತ್ತಿ ಕೇಳಿದರು. ಸಫಾ, ಮುಶಕ್ಕರ್ ಮತ್ತಿತರ ಗ್ರಾಮಗಳು. ಮುಂದಿರ್ ಹೇಳಿದರು- ನನ್ನ ತಂದೆ ತಾಯಿಗಳು ತಮಗೆ ಅರ್ಪಿತ! ಅಲ್ಲಾಹನ ಸಂದೇಶವಾಹಕರೇ, ತಮಗೆ ನಮ್ಮ ಪ್ರದೇಶಗಳ ಪರಿಚಯ ನಮಗಿಂತಲೂ ಹೆಚ್ಚಿರುವಂತೆ ಕಾಣುತ್ತದೆ. ಪ್ರವಾದಿ(ಸ) ಹೇಳಿದರು- ಹೌದು! ನಾನು (ವ್ಯಾಪಾರ ನಿಮಿತ್ತ) ನಿಮ್ಮ ದೇಶಕ್ಕೆ ಹೋಗಿದ್ದೇನೆ. ಅಲ್ಲಿನ ಜನರು ನನ್ನನ್ನು ಬಹಳ ಆದರದಿಂದ ನೋಡಿ ಕೊಂಡಿದ್ದಾರೆ.

ತರುವಾಯ ಪ್ರವಾದಿಯವರು(ಸ) ಅನ್ಸಾರರೊಡನೆ ಹೀಗೆಂದರು- ನಿಮ್ಮ ಈ ಸಹೋದರರನ್ನು ಚೆನ್ನಾಗಿ ನೋಡಿ ಕೊಳ್ಳಿರಿ. ಇವರು ಇಸ್ಲಾಮ್ ಸ್ವೀಕರಿಸುವುದರಲ್ಲಿ ನಿಮಗೆ ಸಮಾನರಾಗಿರುವರು. ರೂಪ ವಿನ್ಯಾಸಗಳಲ್ಲೂ ನಿಮ್ಮನ್ನು ಹೋಲುತ್ತಾರೆ. ಇತರರು ಇಸ್ಲಾಮ್ ಸ್ವೀಕರಿಸಲು ನಿರಾಕರಿಸಿ, ಕೊನೆಗೆ ರಣರಂಗದಲ್ಲಿ ವಧಿಸಲ್ಪಟ್ಟಿರುವಾಗ ಈ ಮಂದಿ ಯಾವುದೇ ಒತ್ತಡ ಬಲಾತ್ಕಾರವಿಲ್ಲದೆ ಇಸ್ಲಾಮ್ ಸ್ವೀಕರಿಸಿದ್ದಾರೆ.

ಮರುದಿನ ಪ್ರವಾದಿ(ಸ) ಅವರು ಈ ಜನರೊಂದಿಗೆ ಕೇಳಿದರು- ನಿಮ್ಮ ಅನ್ಸಾರ್ ಸಹೋದರರು ನಿಮ್ಮನ್ನು ಹೇಗೆ ಸತ್ಕರಿಸಿದರು? ಅವರು ಹೇಳಿದರು- ಅನ್ಸಾರರು ನಮ್ಮ ಅತ್ಯುತ್ತಮ ಸಹೋದರರಾಗಿದ್ದಾರೆ. ಅವರು ನಮಗೆ ಸುಖದಾಯಕ ಹಾಸಿಗೆಗಳನ್ನು ನೀಡಿದರು. ಅತ್ಯುತ್ತಮ ಊಟ ಬಡಿಸಿದರು. ರಾತ್ರಿ ಮತ್ತು ಬೆಳಿಗ್ಗೆ ನಮಗೆ ಅಲ್ಲಾಹನ ಗ್ರಂಥ ಮತ್ತು ಪ್ರವಾದಿಯ ಜೀವನ ವಿಧಾನವನ್ನು ಕಲಿಸಿದರು. ಇದನ್ನು ಕೇಳಿ ಪ್ರವಾದಿ(ಸ) ಬಹಳ ಸಂತೋಷಗೊಂಡರು. [ಮುಸ್ನದ್ ಅಹ್ಮದ್]

ಸಾಮೂಹಿಕ ಹೊಣೆಗಾರಿಕೆ

(459) عَنْ أَبِي قِلَابَةَ أَنَّ نَاسًا مِنْ أَصْحَابِ النَّبِيِّ صلى الله عليه وسلم قَدِمُوا يُثْنُونَ عَلَى صَاحِبٍ لَهُمْ خَيْرًا، قَالُوا مَا رَأَيْنَا مِثْلَ فُلَانٍ هٰذَا قَطُّ، مَا كَانَ فِي مَسِيرٍ إِلَّا كَانَ فِي قِرَاءَةٍ، وَلَا نَزَلْنَا فِي مَنْزِلٍ إِلَّا كَانَ فِي صَلَاةٍ، قَالَ فَمَنْ كَانَ يَكْفِيهِ ضَيْعَتَهُ حَتَّى ذَكَرَ وَمَنْ كَانَ يَعْلِفُ جَمَلَهُ أَوْ دَابَّتَهُ؟ قَالُوا نَحْنُ، قَالَ فَكُلُّكُمْ خَيْرٌ مِنْهُ۔

(ابوداؤد)

ಹ. ಅಬೂ ಕಿಲಾಬ ಹೇಳುತ್ತಾರೆ- ಸಹಾಬಿಗಳ ಪೈಕಿ ಕೆಲವರು ಒಮ್ಮೆ ಪ್ರವಾದಿಯವರ(ಸ) ಬಳಿ ತಮ್ಮ ಒಬ್ಬ ಸಂಗಾತಿಯ ಗುಣಗಾನವನ್ನು ಈ ರೀತಿ ಮಾಡಿದರು: ನಮ್ಮ ಆ ಸಂಗಾತಿಯಂತಹ ಮನುಷ್ಯನನ್ನು ನಾವೆಂದೂ ನೋಡಿಲ್ಲ. ಪ್ರಯಾಣದಲ್ಲಿ ಅವರು ಕುರ್‌ಆನ್ ಪಾರಾಯಣ ಮಾಡುತ್ತಾ ಇರುತ್ತಾರೆ. ಎಲ್ಲಾದರೂ ತಂಗಿದರೆ ಅವರು ನಮಾಝ್‌ನಲ್ಲಿ ತಲ್ಲೀನರಾಗಿರುತ್ತಿದ್ದರು. ಪ್ರವಾದಿ(ಸ) ಕೇಳಿದರು- ಅವನ ಸಾಮಾನುಗಳನ್ನು ಯಾರು ರಕ್ಷಿಸುತ್ತಾರೆ ಮತ್ತು ಅವನ ಒಂಟೆಗಳಿಗೆ ಯಾರು ಮೇವು ಹಾಕುತ್ತಾರೆ? ನಾವು ಹೇಳಿದೆವು- ಅವರ ಸಾಮಾನುಗಳನ್ನು ನಾವು ಸಂರಕ್ಷಿಸುತ್ತೇವೆ ಮತ್ತು ಅವರ ಒಂಟೆಗಳಿಗೆ ಮೇವನ್ನೂ ನಾವೇ ಹಾಕುತ್ತೇವೆ. ಆಗ ಪ್ರವಾದಿ(ಸ) ಹೇಳಿದರು- ಹಾಗಾದರೆ ಆ ಕುರ್‌ಆನ್ ಪಾರಾಯಣ ಮಾಡುವ ಮತ್ತು ಆರಾಧನೆಯಲ್ಲಿ ತಲ್ಲೀನನಾಗಿರುವವನಿಗಿಂತ ನೀವೇ ಉತ್ತಮರು. [ಅಬೂ ದಾವೂದ್]

ಟಿಪ್ಪಣಿ: ಸಾಮೂಹಿಕ ಕಾರ್ಯಗಳಲ್ಲಿ ಎಲ್ಲರೂ ಪಾಲ್ಗೊಳ್ಳಬೇಕು. ಏಕೆಂದರೆ ಹೊಣೆಗಾರಿಕೆ ಎಲ್ಲರಿಗೂ ಇದೆ. ತನ್ನ ಹೊಣೆಗಾರಿಕೆಯನ್ನು ನಿರ್ವಹಿಸದವನು ಒಳ್ಳೆಯ ವ್ಯಕ್ತಿಯಾಗಿರಲು ಸಾಧ್ಯವಿಲ್ಲ. ಅವನು ತಸ್ಬೀಹ್ ಮಾಡುವುದರಲ್ಲೂ ನಮಾಝ್ ಮಾಡುವುದರಲ್ಲೂ ಎಷ್ಟೇ ಮುಂದಿರುವ ವ್ಯಕ್ತಿಯಾದರೂ ಸರಿ.

ಸಾಮೂಹಿಕ ಭೋಜನದ ಶಿಷ್ಟಾಚಾರಗಳು

(460) عَنْ جَبَلَةَ بْنِ سُحَيْمٍ قَالَ، أَصَابَنَا عَامُ سَنَةٍ مَعَ ابْنِ الزُّبَيْرِ فَرُزِقْنَا تَمْرًا، فَكَانَ عَبْدُ اللهِ بْنُ عُمَرَ يَمُرُّ بِنَا وَنَحْنُ نَأْكُلُ، فَيَقُولُ لَا تُقَارِنُوا، فَإِنَّ النَّبِيَّ صَلَّى اللهُ عَلَيْهِ وَسَلَّمَ نَهَى عَنِ الْقِرَانِ، ثُمَّ يَقُولُ إِلَّا أَنْ يَسْتَأْذِنَ الرَّجُلُ أَخَاهُ (بخاری، مسلم)

ಜಬಲ ಬಿನ್ ಸುಹೈಮ್ ಹೇಳುತ್ತಾರೆ- ನಾವು ಅಬ್ದುಲ್ಲಾ ಬಿನ್ ಝುಬೈರ್‌ರ(ರ) ಬೆಂಬಲಿಗರಾಗಿದ್ದೆವು. ಅದೇ ಸಂದರ್ಭದಲ್ಲಿ ನಾವು ಬರಗಾಲಕ್ಕೆ ತುತ್ತಾದೆವು. ನಮಗೆ ಸ್ವಲ್ಪ ಖರ್ಜೂರ ಸಿಕ್ಕಿತು. ನಾವು ಅದನ್ನು ತಿನ್ನುತ್ತಾ ಇದ್ದಾಗ ಅಲ್ಲಿಂದ ಅಬ್ದುಲ್ಲಾ ಬಿನ್ ಉಮರ್(ರ) ಹಾದು ಹೋದರು. ಅವರು ಹೇಳಿದರು- ನಿಮ್ಮ ಪೈಕಿ ಯಾರೂ ಎರಡು ಖರ್ಜೂರಗಳನ್ನು ಒಟ್ಟಿಗೆ ಹೆಕ್ಕಿ ತಿನ್ನಬಾರದು. ಹಾಗೆ ತಿನ್ನುವುದರಿಂದ ಪ್ರವಾದಿ(ಸ) ತಡೆದಿರುವರು. *[ಬುಖಾರಿ, ಮುಸ್ಲಿಮ್]*

ಟಿಪ್ಪಣಿ: ತಾತ್ಪರ್ಯವೇನೆಂದರೆ ಬರಗಾಲ ಬಾಧಿತ ಸಮಯದಲ್ಲಿ ಸ್ವಲ್ಪ ಆಹಾರವಿದ್ದು ಸಾಮೂಹಿಕವಾಗಿ ಉಣ್ಣುವಾಗ ಯಾರಲ್ಲೂ ತನಗೆ ಹೆಚ್ಚು ದಕ್ಕಬೇಕು ಎಂಬ ದುರ್ಭಾವನೆ ಬರಬಾರದು. ಅದು ಸ್ವಾರ್ಥವಾಗಿದ್ದು ಇಸ್ಲಾಮೀ ಸಹೋದರತೆ ಮತ್ತು ತ್ಯಾಗ ಮನೋಭಾವಕ್ಕೆ ಸರಿ ಹೊಂದುವಂತಹದ್ದಲ್ಲ. ಇನ್ನು ಯಾರಾದರೂ ಸಸಂತೋಷ ಒಪ್ಪಿಗೆ ನೀಡಿದರೆ ಆಗ ತಿನ್ನಬಹುದು.

---

(461) عَنْ أَبِي مُوسَى الْأَشْعَرِيِّ قَالَ، قَالَ رَسُولُ اللهِ صَلَّى اللهُ عَلَيْهِ وَسَلَّمَ إِنَّ الْأَشْعَرِيِّينَ إِذَا أَرْمَلُوا فِي الْغَزْوِ أَوْ قَلَّ طَعَامُ عِيَالِهِمْ بِالْمَدِينَةِ جَمَعُوا مَا كَانَ عِنْدَهُمْ فِي ثَوْبٍ وَاحِدٍ ثُمَّ اقْتَسَمُوهُ بَيْنَهُمْ فِي إِنَاءٍ وَاحِدٍ بِالسَّوِيَّةِ، فَهُمْ مِنِّي وَأَنَا مِنْهُمْ۔ (بخاری، مسلم)

ಅಬೂ ಮೂಸಾ ಅಶ್‌ಅರೀ(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು- ಅಶ್‌ಅರ್ ಗೋತ್ರದವರು ಜಿಹಾದ್‌ಗೆ ತೆರಳಿದಾಗ, ಅವರ ಬಳಿ ಆಹಾರವೂ ಕಡಿಮೆಯಿರುವಾಗ ಅಥವಾ ಮದೀನಾದಲ್ಲಿ ಅವರ ಬಳಿ ಆಹಾರ ಧಾನ್ಯದ ಕೊರತೆಯೂ ಇರುವಾಗ ಯಾರ ಬಳಿ ಏನೆಲ್ಲ ಇರುತ್ತಿತ್ತೋ ಅದನ್ನು ತಂದು ಒಂದು ಕಡೆ ಹಾಕುತ್ತಿದ್ದರು. ತರುವಾಯ ಅದನ್ನು ಸಮಾನವಾಗಿ ಹಂಚಿ ತಿನ್ನುತ್ತಿದ್ದರು.

ಪ್ರವಾದಿಯವರು(ಸ) ಅವರ ಗುಣಗಾನ ಮಾಡುತ್ತಾ, 'ಅವರು ನನ್ನವರು ಮತ್ತು ನಾನು ಅವರವನು' ಎಂದು ಹೇಳುತ್ತಾರೆ. *[ಬುಖಾರಿ, ಮುಸ್ಲಿಮ್]*

ಟಿಪ್ಪಣಿ: ಕೆಲವರ ಬಳಿ ಹೆಚ್ಚು ಆಹಾರವಿರಬಹುದು. ಇನ್ನು ಕೆಲವರ ಬಳಿ ಸ್ವಲ್ಪ ಆಹಾರವಿರಬಹುದು. ಮತ್ತೆ ಕೆಲವರ ಬಳಿ ಇನ್ನೂ ಕಡಿಮೆಯಿರಬಹುದು. ಕೆಲವರ ಬಳಿ ಏನೂ ಇರಲಿಕ್ಕಿಲ್ಲವೆಂಬುದು ವ್ಯಕ್ತ. ಅಂತಹ ಸಂದರ್ಭದಲ್ಲಿ ಸಮಾನವಾಗಿ ಹಂಚಿ ತಿನ್ನುವುದು ತ್ಯಾಗ ಮನೋಭಾವವಾಗಿದೆ.

ಸಂಘಟನೆಯ ಶಿಸ್ತು

(462) قَالَ كَعْبُ بْنُ مَالِكٍ، نَهٰى رَسُوْلُ اللّٰهِ صلى الله عليه وسلم عَنْ كَلَامِنَا
اَيُّهَا الثَّلَاثَةُ مِنْ بَيْنِ مَنْ تَخَلَّفَ عَنْهُ، قَالَ فَاجْتَنَبَنَا النَّاسُ اَوْ قَالَ تَغَيَّرُوْا لَنَا حَتّٰى
تَنَكَّرَتْ لِيْ فِيْ نَفْسِيَ الْاَرْضُ، فَمَا هِيَ بِالْاَرْضِ الَّتِيْ اَعْرِفُ، فَلَبِثْنَا عَلٰى ذٰلِكَ خَمْسِيْنَ لَيْلَةً،
فَاَمَّا صَاحِبَايَ فَاسْتَكَانَا وَقَعَدَا فِيْ بُيُوْتِهِمَا يَبْكِيَانِ وَاَمَّا اَنَا، فَكُنْتُ اَشَبَّ الْقَوْمِ
وَاَجْلَدَهُمْ، فَكُنْتُ اَخْرُجُ فَاَشْهَدُ الصَّلٰوةَ مَعَ الْمُسْلِمِيْنَ وَاَطُوْفُ فِي الْاَسْوَاقِ
وَلَا يُكَلِّمُنِيْ اَحَدٌ، وَاٰتِيْ رَسُوْلَ اللّٰهِ فَاُسَلِّمُ عَلَيْهِ وَهُوَ فِيْ مَجْلِسِهٖ بَعْدَ الصَّلٰوةِ
فَاَقُوْلُ فِيْ نَفْسِيْ هَلْ حَرَّكَ شَفَتَيْهِ اَمْ لَا؟ ثُمَّ اُصَلِّيْ قَرِيْبًا مِنْهُ وَاُسَارِقُهُ النَّظَرَ،
فَاِذَا اَقْبَلْتُ عَلٰى صَلَاتِيْ نَظَرَ اِلَيَّ، وَاِذَا الْتَفَتُّ نَحْوَهٗ اَعْرَضَ عَنِّيْ، حَتّٰى اِذَا طَالَ
ذٰلِكَ عَلَيَّ مِنْ جَفْوَةِ الْمُسْلِمِيْنَ، مَشَيْتُ حَتّٰى تَسَوَّرْتُ جِدَارَ حَائِطِ اَبِيْ قَتَادَةَ
وَهُوَ ابْنُ عَمِّيْ وَاَحَبُّ النَّاسِ اِلَيَّ فَسَلَّمْتُ عَلَيْهِ، فَوَاللّٰهِ مَا رَدَّ عَلَيَّ السَّلَامَ، فَقُلْتُ
لَهٗ يَا اَبَا قَتَادَةَ اَنْشُدُكَ بِاللّٰهِ هَلْ تَعْلَمُنِيْ اُحِبُّ اللّٰهَ وَرَسُوْلَهٗ؟ فَسَكَتَ، فَعُدْتُّ
فَنَاشَدْتُّهٗ فَقَالَ اَللّٰهُ وَرَسُوْلُهٗ اَعْلَمُ، فَفَاضَتْ عَيْنَايَ، وَتَوَلَّيْتُ حَتّٰى تَسَوَّرْتُ
الْجِدَارَ (بخاری، مسلم بہ روایت عبد اللہ بن کعب بن مالکؓ)

ಹ. ಕಅಬ್ ಬಿನ್ ಮಾಲಿಕ್(ರ) ಹೇಳುತ್ತಾರೆ- ಪ್ರವಾದಿಯವರು(ಸ) ನಮ್ಮೊಡನೆ (ಅಂದರೆ ನನ್ನೊಡನೆ, ಹಿಲಾಲ್ ಬಿನ್ ಉಮಯ್ಯಾ ಮತ್ತು ಮುರಾರ ಬಿನ್ ರಬೀಅ್ ರೊಡನೆ) ಯಾರೂ ಮಾತನಾಡಬಾರದೆಂದು ಸಹಾಬಿಗಳಿಗೆ ಕಟ್ಟಾಜ್ಞೆ ವಿಧಿಸಿದ್ದರು. ಯಾಕೆಂದರೆ ನಾವು ತಬೂಕ್ ಯುದ್ಧಕ್ಕೆ ನಮ್ಮ ಆಲಸ್ಯದಿಂದಾಗಿ ಹೋಗಿರಲಿಲ್ಲ. ಹಾಗೆ ಜನರು ನಮ್ಮೊಂದಿಗಿನ ಒಡನಾಟವನ್ನು ಬಿಟ್ಟುಬಿಟ್ಟರು. ನಮ್ಮ ಗುರುತೇ ಅವರಿಗಿಲ್ಲವೆಂಬಂತೆ ಅವರು ಬದಲಾಗಿ ಬಿಟ್ಟರು. ಮದೀನಾದ ಇಡೀ ಭೂಭಾಗವೇ ನಮಗೆ ಪರಕೀಯವಾಗಿ ಬಿಟ್ಟಿತು. ಅದು ಈಗ ನಮ್ಮ ಪರಿಚಯದ ಮದೀನಾ ಆಗಿರಲಿಲ್ಲ. ಅದೇ ಸ್ಥಿತಿಯಲ್ಲಿ ಐವತ್ತು ದಿನಗಳನ್ನು ನಾವು ಕಳೆದೆವು.

ನನ್ನ ಇಬ್ಬರು ಸಂಗಾತಿಗಳಾದ ಹಿಲಾಲ್ ಮತ್ತು ಮುರಾರರ ಮೇಲೆ ಈ ಬಹಿಷ್ಕಾರವು ಬಹಳಷ್ಟು ಪರಿಣಾಮ ಬೀರಿತು. ಅವರಿಬ್ಬರೂ ದುಃಖಿತರಾಗಿ ಕಣ್ಣೀರಿಳಿಸುತ್ತಾ ತಮ್ಮ ಮನೆಗಳಲ್ಲೇ ಉಳಿದು ಬಿಟ್ಟರು. ನಾನು ಯುವಕನಾಗಿದ್ದೆ. ನನ್ನ ಮನಸ್ಸು ಗಟ್ಟಿಯಾಗಿತ್ತು. ಆದುದರಿಂದ ನಾನು ಮನೆಯಿಂದ ಹೊರಟು ಬಂದು ಮುಸ್ಲಿಮರೊಂದಿಗೆ ಸಾಮೂಹಿಕ ನಮಾಝ್‌ನಲ್ಲಿ ಭಾಗವಹಿಸುತ್ತಿದ್ದೆ. ಪೇಟೆಗಳಲ್ಲೂ ಸಂಚರಿಸುತ್ತಿದ್ದೆ. ಆದರೆ ಯಾರೂ ನನ್ನೊಡನೆ ಮಾತಾಡುತ್ತಿರಲಿಲ್ಲ. ಪ್ರವಾದಿ(ಸ) ನಮಾಝ್ ಮುಗಿಸಿ ತಮ್ಮ ಸ್ಥಳದಲ್ಲಿ ಕುಳಿತಾಗ ಅವರ ಬಳಿಗೆ ಹೋಗಿ ಸಲಾಮ್ ಹೇಳುತ್ತಿದ್ದೆ. ಅನಂತರ ಅವರು ನನ್ನ ಸಲಾಮಿಗೆ ಉತ್ತರಿಸಿದ್ದಾರೋ ಇಲ್ಲವೋ ಎಂದು ಮನದಲ್ಲೇ ಯೋಚಿಸುತ್ತಿದ್ದೆ. ನಾನು ಅವರ ಬಳಿಯಲ್ಲಿ ನಮಾಝ್ ಮಾಡುತ್ತಿದ್ದೆ. ಅವರು ನನ್ನತ್ತ ನೋಡುತ್ತಿದ್ದರು. ನಮಾಝ್ ಮುಗಿದ ನಂತರ ನಾನು ಅವರನ್ನು ನೋಡಿದಾಗ ಅವರು ಮುಖ ತಿರುಗಿಸುತ್ತಿದ್ದರು. ಈ ರೀತಿ ಮುಸ್ಲಿಮರು ದೀರ್ಘಕಾಲ ನನ್ನಿಂದ ಮುಖ ತಿರುಗಿಸಿದಾಗ ಅದು ನನ್ನನ್ನು ತುಂಬಾ ನೋಯಿಸಿತು. ಆಗ ನಾನು ಅಬೂಕತಾದರ(ರ) ತೋಟದ ಗೋಡೆ ಹಾರಿ ಅವರ ಬಳಿ ಹೋದೆ. (ಅವರ ಬಾಗಿಲು ಮುಚ್ಚಿದ್ದುದರಿಂದ ನಾನು ಗೋಡೆ ಹಾರಿದ್ದೆ.) ಅವರು ನನ್ನ ಚಿಕ್ಕಪ್ಪನ ಪುತ್ರನೂ ನನ್ನ ಆಪ್ತ ಮಿತ್ರನೂ ಆಗಿದ್ದರು. ನಾನು ಅವರಿಗೆ ಸಲಾಮ್ ಹೇಳಿದೆ. ಆದರೆ ಅವರು ಉತ್ತರಿಸಲಿಲ್ಲ. ಅನಂತರ ಎರಡನೆ ಬಾರಿ ಆಣೆ ಹಾಕಿ ಸಲಾಮ್ ಹೇಳಿದೆ. ಆದರೂ ಅವರು ಮೌನವಾಗಿದ್ದರು. ಪುನಃ ಮೂರನೇ ಬಾರಿ ಹೀಗೆಂದೆ- "ಅಬೂಕತಾದ! ಅಲ್ಲಾಹನ ಆಣೆ ಹಾಕಿ ನಾನು ನಿಮ್ಮೊಂದಿಗೆ ಕೇಳುತ್ತೇನೆ. ನನಗೆ ಅಲ್ಲಾಹನ ಮತ್ತು ಅವನ ಪ್ರವಾದಿಯ ಮೇಲೆ ಪ್ರೀತಿಯಿದೆಯೆಂಬುದು ನಿಮಗೆ ತಿಳಿಯದೇ?" ಆಗ ಅವರು ಹೇಳಿದರು- "ಅದನ್ನು ಅಲ್ಲಾಹ್ ಮತ್ತು ಅವನ ಪ್ರವಾದಿಯವರೇ ಬಲ್ಲರು" (ನಿಮಗೆ ಅಲ್ಲಾಹ್ ಮತ್ತು ಅವನ ಪ್ರವಾದಿಯವರ ಮೇಲೆ ಪ್ರೀತಿಯಿದೆಯೇ ಎಂಬುದಕ್ಕೆ ಅವರಿಂದಲೇ ಪುರಾವೆ ಕೇಳಿರಿ) ಆಗ ನನ್ನ ಕಣ್ಣುಗಳಿಂದ ಅಶ್ರುಧಾರೆ ಹರಿಯಿತು. ನಾನು ಗೋಡೆ ಹಾರಿ ಹೊರ ಬಂದೆ.

[ಬುಖಾರಿ, ಮುಸ್ಲಿಮ್]

ಟಿಪ್ಪಣಿ: ಇದು ಸಂಘಟನೆಯ ಶಿಸ್ತುಪಾಲನೆಯ ಉನ್ನತ ಮಾದರಿಯಾಗಿದೆ. ಅಲ್ಲಾಹನ ಆಜ್ಞೆಯ (ಸೂರಃ ಅತ್ತೌಬಃ-118) ಪ್ರಕಾರ ಕಅಬ್ ಬಿನ್ ಮಾಲಿಕ್ ಮತ್ತು ಅವರ ಇಬ್ಬರು ಸಂಗಾತಿಗಳ ಬಹಿಷ್ಕಾರ ಘೋಷಣೆಯಾದಾಗ ಇಡೀ ಮದೀನಾ ಪಟ್ಟಣವು ಅವರಿಗೆ ಪರಕೀಯ ನಗರವಾಗಿ ಬಿಟ್ಟಿತು. ಕಅಬ್‌ರ ಆಪ್ತಮಿತ್ರ ಅಬೂಕತಾದ ಕೂಡಾ ಏಕಾಂತದಲ್ಲಿ ಅಲ್ಲಾಹನ ಆಣೆಯನ್ನು ಕೇಳಿಯೂ ಸಲಾಮಿಗೆ ಉತ್ತರಿಸಲು ಸಿದ್ಧರಾಗಲಿಲ್ಲ. ಹೆಚ್ಚಿನ ವಿವರಗಳಿಗೆ ಕುರ್‌ಆನ್ ವ್ಯಾಖ್ಯಾನ ಭಾಗ-1 ನೋಡಿರಿ.

ಪ್ರವಾದಿಯ(ಸ) ಅನುಸರಣೆ ಮತ್ತು ತುಷ್ಟೀಕರಣ

(463)

(٤٦٣) عن خالد بن الوليد قال: كان بيني وبين عمار بن ياسر كلام، فأغلظت له في القول، فانطلق عمار يشكوني إلى رسول الله صلى الله عليه وسلم، فجاء خالد وهو يشكوني إلى النبي صلى الله عليه وسلم، قال فجعل يغلظ له ولا يزيده إلا غلظة والنبي صلى الله عليه وسلم ساكت لا يتكلم، فبكى عمار وقال يا رسول الله ألا تراه؟ فرفع النبي صلى الله عليه وسلم رأسه وقال من عادى عمارا عاداه الله، ومن أبغض عمارا أبغضه الله (مشكوٰة)

ಹ. ಖಾಲಿದ್ ಬಿನ್ ವಲೀದ್(ರ) ಹೇಳುತ್ತಾರೆ- ನನಗೂ ಅಮ್ಮಾರ್‌ರಿಗೂ ಜಗಳವಾಯಿತು. ನಾನು ಕಟು ಮಾತುಗಳನ್ನಾಡಿದೆ. ಅಮ್ಮಾರ್ ಪ್ರವಾದಿಯವರ(ಸ) ಬಳಿಗೆ ನನ್ನ ಬಗ್ಗೆ ದೂರು ನೀಡಲು ಹೋದರು. ನಾನೂ ಅಮ್ಮಾರ್‌ರ ಬಗ್ಗೆ ದೂರು ನೀಡಲು ಹೋದೆ. ಪ್ರವಾದಿಯವರ(ಸ) ಮುಂದೆಯೂ ನಾನು ಅಮ್ಮಾರ್‌ರನ್ನು ಬೈಯುತ್ತಾ ಇದ್ದೆ. ನನ್ನ ಬೈಗುಳ ಹೆಚ್ಚಾಗುತ್ತಲೇ ಹೋಯಿತು. ಪ್ರವಾದಿ(ಸ) ಮೌನವಾಗಿದ್ದರು. ಏನೂ ಮಾತಾಡಲಿಲ್ಲ. ಇದರಿಂದಾಗಿ ಅಮ್ಮಾರ್ ಅಳತೊಡಗಿದರು. ಅವರು ಪ್ರವಾದಿವರ್ಯ ರೊಡನೆ, ಅಲ್ಲಾಹನ ಸಂದೇಶವಾಹಕರೇ! ಇವರು ಬೈಯುವುದನ್ನು ತಾವು ನೋಡುವುದಿಲ್ಲವೆ? ಎಂದು ಹೇಳಿದರು. ಆಗ ಪ್ರವಾದಿ(ಸ) ತಲೆಯೆತ್ತಿ ಹೀಗೆಂದರು- ಯಾರು ಅಮ್ಮಾರ್ ರೊಂದಿಗೆ ವೈರ ಕಟ್ಟಿಕೊಳ್ಳುತ್ತಾನೋ ಅಲ್ಲಾಹನು ಅವನ ವೈರಿಯಾಗುವನು. ಯಾರು ಅಮ್ಮಾರ್‌ರನ್ನು ದ್ವೇಷಿಸುವನೋ ಅವನನ್ನು ಅಲ್ಲಾಹ್ ದ್ವೇಷಿಸುವನು.

ಖಾಲಿದ್ ಹೇಳುತ್ತಾರೆ- ಪ್ರವಾದಿವರ್ಯರ(ಸ) ಈ ಮಾತು ಕೇಳಿ ನಾನು ಹೊರಗೆ

ಬಂದಾಗ ನನ್ನ ಅತಿ ದೊಡ್ಡ ಆಗ್ರಹ ಅಮ್ಮಾರ್ ಹೇಗಾದರೂ ನನ್ನಿಂದ ಪ್ರಸನ್ನರಾಗಿ ನನ್ನ ತಪ್ಪನ್ನು ಮನ್ನಿಸಲಿ ಎಂದಾಗಿತ್ತು. ಹಾಗೆಯೇ ನಾನು ಅವರನ್ನು ಒಲಿಸಿದೆ. ಅವರಲ್ಲಿ ಕ್ಷಮಾಪಣೆ ಮಾಡಿದೆ. ಅವರು ನನ್ನನ್ನು ಕ್ಷಮಿಸಿ, ನನ್ನಿಂದ ಪ್ರಸನ್ನರಾದರು.
[ಮಿಶ್ಕಾತ್]

ಔದಾರ್ಯ

(464) عَنْ عَبْدِ اللهِ بْنِ الزُّبَيْرِ قَالَ مَا رَأَيْتُ اِمْرَأَتَيْنِ اَجْوَدَيْنِ مِنْ عَائِشَةَ وَاَسْمَاءَ، وَجُوْدُهُمَا مُخْتَلِفٌ، اَمَّا عَائِشَةُ فَكَانَتْ تَجْمَعُ الشَّيْئَ اِلَى الشَّيْئِ، حَتّٰى اِذَا كَانَ اجْتَمَعَ عِنْدَهَا قَسَمَتْ، وَاَمَّا اَسْمَاءُ فَكَانَتْ لَا تُمْسِكُ شَيْئًا لِغَدٍ (الادب المفرد امام بخاری)

ಅಬ್ದುಲ್ಲಾ ಬಿನ್ ಝುಬೈರ್(ರ) ಹೇಳುತ್ತಾರೆ- ನಾನು ನನ್ನ ಮಾತೃ ಸಹೋದರಿ ಆಯಿಶಾ(ರ) ಮತ್ತು ನನ್ನ ತಾಯಿ ಅಸ್ಮಾರಿಗಿಂತ(ರ) ದೊಡ್ಡ ಉದಾರಿಗಳಾಗಿ ಯಾವ ಹೆಂಗಸನ್ನೂ ನೋಡಿಲ್ಲ. ಆದರೆ ಅವರ ಔದಾರ್ಯಗಳ ರೂಪ ವಿಭಿನ್ನವಾಗಿತ್ತು. ಆಯಿಶಾರು ದಿನಾಲೂ ಸ್ವಲ್ಪ ಸ್ವಲ್ಪ ಶೇಖರಿಸಿಟ್ಟು, ಸಾಕಷ್ಟು ಪ್ರಮಾಣದಲ್ಲಿ ಶೇಖರವಾದಾಗ ಅದನ್ನು ಬಡವರಲ್ಲಿ ವಿತರಿಸುತ್ತಿದ್ದರು. ನನ್ನ ತಾಯಿ ಅಸ್ಮಾರು ತಮಗೆ ದೊರಕಿದ್ದನ್ನು ಪ್ರತಿದಿನ ಬಡವರಿಗೆ ತಲಪಿಸುತ್ತಿದ್ದರು. ಏನೂ ಉಳಿಸುತ್ತಿರಲಿಲ್ಲ.
[ಅಲ್ ಅದಬುಲ್ ಮುಫ್ರದ್ ಇಮಾಮ್ ಬುಖಾರಿ]

---

(465) اِنَّ رَجُلًا مِنَ الْاَنْصَارِ كَانَ يُصَلِّيْ فِيْ حَائِطٍ لَّهٗ بِالْقُفِّ - وَادٍ مِنْ اَوْدِيَةِ الْمَدِيْنَةِ وَالنَّخْلُ قَدْ ذُلِّلَتْ وَهِيَ مُطَوَّقَةٌ بِثَمَرِهَا، فَنَظَرَ اِلَيْهَا فَاَعْجَبَتْهُ ثُمَّ رَجَعَ اِلٰى صَلَاتِهٖ فَاِذَا هُوَ لَا يَدْرِیْ كَمْ صَلّٰى، فَقَالَ لَقَدْ اَصَابَتْنِيْ فِيْ مَالِيْ هٰذَا فِتْنَةٌ، فَجَاءَ عُثْمَانَ وَهُوَ يَوْمَئِذٍ خَلِيْفَةٌ، فَذَكَرَ ذٰلِكَ لَهٗ وَقَالَ هُوَ صَدَقَةٌ فَاجْعَلْهُ فِيْ سَبِيْلِ الْخَيْرِ، فَبَاعَهٗ بِخَمْسِيْنَ اَلْفًا فَسُمِّيَ ذٰلِكَ الْخَمْسِيْنَ (موطا امام مالک رح)

ಒಬ್ಬ ಅನ್ಸಾರ್ (ಮದೀನದ ನಿವಾಸಿ) ತನ್ನ ತೋಟದಲ್ಲಿ ನಮಾಝ್ ಮಾಡುತ್ತಿದ್ದರು. ಆ ತೋಟವು ಮದೀನಾದ ಪ್ರಸಿದ್ಧ ಕಣಿವೆ 'ಕುಫ್ಫ್' ಎಂಬಲ್ಲಿತ್ತು. ಅದು ಅತ್ಯಂತ ಸಮೃದ್ಧ ನೆರಳು ನೀಡುವಂತಹ ಹಾಗೂ ಫಲಭರಿತ ತೋಟವಾಗಿತ್ತು. ಅವರು ನಮಾಝ್ ಮಾಡುತ್ತಿದ್ದಂತೆ ಅವರ ದೃಷ್ಟಿ ಆ ಹಣ್ಣುಗಳ ಕಡೆಗೆ ಬಿತ್ತು. ಅವರಿಗೆ ಸಂತೋಷವಾಯಿತು. ಪುನಃ ಅವರು ನಮಾಝ್‌ನ ಕಡೆಗೆ ಗಮನ ಹರಿಸಿದರು. ತಾನು ಎಷ್ಟು ರಕಅತ್ ನಿರ್ವಹಿಸಿದೆನೆಂದು ಅವರಿಗೆ ಮರೆತು ಹೋಯಿತು. ಅವರು, ಈ ಸಂಪತ್ತು ನನ್ನ ಪಾಲಿಗೆ ಪರೀಕ್ಷೆಯಾಗಿಬಿಟ್ಟಿದೆ. ಆದುದರಿಂದ ಅದನ್ನು ಇನ್ನು ನನ್ನಲ್ಲಿಡಬಾರದು ಎಂದು ಮನದಲ್ಲೇ ಭಾವಿಸಿಕೊಂಡರು. ಹಾಗೆ ಅವರು ಅಂದಿನ ಖಲೀಫರಾಗಿದ್ದ ಹ. ಉಸ್ಮಾನ್‌ರ(ರ) ಬಳಿಗೆ ಹೋಗಿ ಸಂಪೂರ್ಣ ವೃತ್ತಾಂತವನ್ನು ವಿವರಿಸಿದರು. ತರುವಾಯ ಈ ತೋಟವನ್ನು ನಾನು ದಾನ ಮಾಡಿದೆ. ಅದನ್ನು ಸತ್ಕಾರ್ಯಗಳಿಗೆ ಉಪಯೋಗಿಸಿರಿ ಎಂದರು. ಖಲೀಫರು ಅದನ್ನು ಐವತ್ತು ಸಾವಿರ ದಿರ್ಹಮ್‌ಗಳಿಗೆ ಖರೀದಿಸಿದರು ಮತ್ತು ಅದಕ್ಕೆ 'ಅಲ್‌ಖಮ್ಸೂನ್' ಎಂದು ಹೆಸರಿಟ್ಟರು.

[ಮುವತ್ತಾ ಇಮಾಮ್ ಮಾಲಿಕ್]

---

(466) عَنْ اَنَسٍ قَالَ، كَانَ اَبُوْطَلْحَةَ اَكْثَرَ الْاَنْصَارِ مَالًا مِنْ نَخْلٍ، وَكَانَ اَحَبَّ
اَمْوَالِهِ اِلَيْهِ بَيْرُحَاءَ، وَكَانَتْ مُسْتَقْبِلَةَ الْمَسْجِدِ، وَكَانَ رَسُوْلُ اللّٰهِ صلى الله عليه وسلم
يَدْخُلُهَا يَشْرَبُ مِنْ مَاءٍ فِيْهَا طَيِّبٍ، قَالَ اَنَسٌ فَلَمَّا نَزَلَتْ هٰذِهِ الْآيَةُ لَنْ تَنَالُوا الْبِرَّ
حَتّٰى تُنْفِقُوْا مِمَّا تُحِبُّوْنَ، قَامَ اَبُوْطَلْحَةَ اِلٰى رَسُوْلِ اللّٰهِ صلى الله عليه وسلم، فَقَالَ
يَا رَسُوْلَ اللّٰهِ اِنَّ اللّٰهَ تَبَارَكَ وَتَعَالٰى يَقُوْلُ لَنْ تَنَالُوا الْبِرَّ حَتّٰى تُنْفِقُوْا مِمَّا تُحِبُّوْنَ،
وَاِنَّ اَحَبَّ اَمْوَالِيْ اِلَيَّ بَيْرُحَاءَ، وَاِنَّهَا صَدَقَةٌ اَرْجُوْا بِرَّهَا وَذُخْرَهَا عِنْدَ اللّٰهِ،
فَضَعْهَا يَا رَسُوْلَ اللّٰهِ حَيْثُ اَرَاكَ اللّٰهُ، قَالَ فَقَالَ رَسُوْلُ اللّٰهِ صلى الله عليه وسلم
بَخٍ، ذٰلِكَ مَالٌ رَابِحٌ، ذٰلِكَ مَالٌ رَابِحٌ (بخاری، مسلم)

ಹ. ಅನಸ್(ರ) ಹೇಳುತ್ತಾರೆ- ಅಬೂತಲ್ಹರ ಬಳಿ ಅತಿ ಹೆಚ್ಚು ಖರ್ಜೂರದ ತೋಟಗಳಿದ್ದುವು. ಬೈರುಹಾ ಎಂಬಲ್ಲಿನ ತೋಟವು ಅತ್ಯಂತ ಸಮೃದ್ಧವೂ ಅವರಿಗೆ ಅತ್ಯಂತ ಪ್ರಿಯವಾದುದೂ ಆಗಿತ್ತು. ಅದು ಮಸ್ಜಿದುನ್ನಬವಿಯ ಎದುರು ಭಾಗದಲ್ಲಿತ್ತು. ಪ್ರವಾದಿ(ಸ)

ತೋಟಕ್ಕೆ ಹೋಗಿ ಅದರ ಬಾವಿಯ ಶುದ್ಧ ನೀರು ಕುಡಿಯುತ್ತಿದ್ದರು. ಹ. ಅನಸ್ ಹೇಳುತ್ತಾರೆ- "ನೀವು ನಿಮಗೆ ಪ್ರಿಯವಾದ ವಸ್ತುವನ್ನು ಅಲ್ಲಾಹನ ಮಾರ್ಗದಲ್ಲಿ ವ್ಯಯಿಸುವ ವರೆಗೆ ನೀವು ಅಲ್ಲಾಹನ ವಿಧೇಯ ದಾಸರಾಗಲಾರಿರಿ" *(ಆಲಿ ಇಮ್ರಾನ್: 92)* ಎಂಬ ಆಯತ್ ಅವತೀರ್ಣವಾದಾಗ ಅಬೂತಲ್ಹರು ಪ್ರವಾದಿವರ್ಯರ(ಸ) ಬಳಿಗೆ ಹೋಗಿ ಹೀಗೆಂದರು- "ಅಲ್ಲಾಹನು- ಲನ್‌ತನಾಲುಲ್ ಬಿರ್‍ರ... ಎಂದು ಹೇಳಿದ್ದಾನೆ. ಬೈರುಹಾದ ತೋಟವು ನನ್ನ ಅತ್ಯಂತ ಪ್ರಿಯವಾದ ತೋಟವಾಗಿದೆ. ನಾನು ಅದನ್ನು ಅಲ್ಲಾಹನ ಮಾರ್ಗದಲ್ಲಿ ದಾನ ಮಾಡಿದೆ. ಅದು ಅಲ್ಲಾಹನ ಬಳಿ ನನಗೆ ನೆರವಾದೀತೆಂದು ಭಾವಿಸುತ್ತೇನೆ. ಅಲ್ಲಾಹನು ತಮ್ಮೊಂದಿಗೆ ಎಲ್ಲಿ ಖರ್ಚು ಮಾಡಬೇಕೆಂದು ಆದೇಶಿಸಿರುವನೋ ಅಲ್ಲಿ ಖರ್ಚು ಮಾಡಿರಿ." ಪ್ರವಾದಿ(ಸ) ಹೇಳಿದರು- ಭೇಷ್! ನೀವು ಬಹಳ ಉತ್ತಮ ಕೆಲಸ ಮಾಡಿದಿರಿ. ಇದು ಲಾಭದಾಯಕ ವ್ಯಾಪಾರವಾಗಿದೆ. ಬಹಳ ಲಾಭದ ವ್ಯವಹಾರವಾಗಿದೆ.

[ಬುಖಾರಿ, ಮುಸ್ಲಿಮ್]

---

(467) عَنْ قَيْسِ بْنِ سِلْعٍ نِ الْاَنْصَارِيِّ اَنَّ اِخْوَتَهٗ شَكَوْهُ اِلٰى رَسُوْلِ اللّٰهِ
صلى الله عليه وسلم فَقَالُوْا اِنَّهٗ يُبَذِّرُ مَالَهٗ وَيَنْبَسِطُ فِيْهِ، قُلْتُ يَا رَسُوْلَ اللّٰهِ آخُذُ
نَصِيْبِيْ مِنَ التَّمْرَةِ فَاُنْفِقُهٗ فِيْ سَبِيْلِ اللّٰهِ وَعَلٰى مَنْ صَحِبَنِيْ، فَضَرَبَ رَسُوْلُ اللّٰهِ صلى الله عليه وسلم
صَدْرَهٗ وَقَالَ اَنْفِقْ يُنْفِقِ اللّٰهُ عَلَيْكَ ثَلَاثَ مَرَّاتٍ، فَلَمَّا كَانَ بَعْدَ ذٰلِكَ خَرَجْتُ فِيْ
سَبِيْلِ اللّٰهِ وَمَعِيْ رَاحِلَةٌ وَاَنَا اَكْثَرُ اَهْلِ بَيْتِيَ الْيَوْمَ وَاَيْسَرُهٗ (المنذري بحواله الطبراني)

ಹ. ಕೈಸ್ ಬಿನ್ ಸಿಲಅ್ ಅನ್ಸಾರಿ(ರ) ಹೇಳುತ್ತಾರೆ- ನನ್ನ ಸಹೋದರರು ಪ್ರವಾದಿಯವರ(ಸ) ಬಳಿಗೆ ಹೋಗಿ (ಉತ್ಪ್ರೇಕ್ಷಿತ ಶೈಲಿಯಲ್ಲಿ) ಕೈಸ್ ತನ್ನ ಸಂಪತ್ತನ್ನು ಹೊಳೆ ನೀರಿನಂತೆ ವ್ಯಯಿಸುತ್ತಾರೆ (ಹಾಗಾದರೆ ಅವರೇನು ತಿನ್ನುವರು, ಅವರು ದರಿದ್ರರಾಗಿ ಬಿಡಲಾರರೇ?) ಎಂದು ದೂರಿದರು. ನಾನು ಹೇಳಿದೆ- 'ಅಲ್ಲಾಹನ ಸಂದೇಶವಾಹಕರೇ! ನಾನು ನನ್ನ ಪಾಲಿನ ಖರ್ಜೂರವನ್ನು ಅಲ್ಲಾಹನ ಮಾರ್ಗದಲ್ಲಿ ದಾನ ಮಾಡುತ್ತೇನೆ ಮತ್ತು 'ನನ್ನ ಸಂಗಾತಿಗಳಿಗೆ ಖರ್ಚು ಮಾಡುತ್ತೇನೆ.' ಪ್ರವಾದಿ(ಸ) ನನ್ನನ್ನು ಅಭಿನಂದಿಸುವ ರೀತಿಯಲ್ಲಿ ತಮ್ಮ ಕೈಯಿಂದ ನನ್ನ ಎದೆಯ ಮೇಲೆ ತಡವಿದರು ಮತ್ತು, "ನೀವು ಖರ್ಚು ಮಾಡಿರಿ, ಅಲ್ಲಾಹನು ನಿಮಗೆ ನೀಡುವನು" ಎಂದು ಮೂರು ಸಲ ಹೇಳಿದರು. ಅನಂತರ ನಾನು ನನ್ನ ಖಾಸಗಿ ಒಂಟೆಯ ಮೇಲೆ ಸವಾರಿ ಮಾಡಿ ಜಿಹಾದ್‌ಗೆ ಹೋಗುತ್ತೇನೆ. ಇಂದು ನಮ್ಮ ಕುಟುಂಬದವರ ಪೈಕಿ ನಾನೇ ಅತಿ ದೊಡ್ಡ ಶ್ರೀಮಂತನೂ ಸುಖಿಯೂ ಆಗಿರುವೆನು. (ದೇವ

ಮಾರ್ಗದಲ್ಲಿ ಖರ್ಚು ಮಾಡುವುದರಿಂದ ನಾನು ದರಿದ್ರನಾಗಲಿಲ್ಲ. ಬದಲಾಗಿ ದೇವ ಮಾರ್ಗದಲ್ಲಿ ಖರ್ಚು ಮಾಡಿದುದರ ಫಲವಾಗಿ ಮತ್ತು ಪ್ರವಾದಿಯವರ(ಸ) ಪ್ರಾರ್ಥನೆಯಿಂದಾಗಿ ನಾನು ಸುಖೀ ಜೀವನ ನಡೆಸುತ್ತಿದ್ದೇನೆ.) *[ಅಲ್ ಮುಂದಿರೀ- ತಬ್ರಾನಿಯಿಂದ]*

---

(468) عَنْ اَنَسٍ قَالَ، قَالَ الْمُهَاجِرُوْنَ لِلنَّبِيِّ صلى الله عليه وسلم ذَهَبَ الْاَنْصَارُ بِالْاَجْرِ كُلِّهِ، مَا رَأَيْنَا قَوْمًا اَحْسَنَ بَذْلًا لِكَثِيْرٍ وَلَا اَحْسَنَ مُوَاسَاةً فِيْ قَلِيْلٍ مِنْهُمْ، وَلَقَدْ كَفَوْنَا الْمَؤُنَةَ، قَالَ اَلَيْسَ تُثْنُوْنَ عَلَيْهِمْ بِهِ وَتَدْعُوْنَ لَهُمْ؟ قَالُوْا بَلٰى، قَالَ فَذَاكَ بِذَاكَ (ابوداود، نسائی)

ಹ. ಅನಸ್(ರ) ಹೇಳುತ್ತಾರೆ, ಮುಹಾಜಿರರು ಪ್ರವಾದಿಯವರಲ್ಲಿ(ಸ) ಹೀಗೆಂದರು- ನಮ್ಮ ಅನ್ಸಾರ್ ಸಹೋದರರು ಪುಣ್ಯವನ್ನೆಲ್ಲ ದೋಚಿ ಬಿಟ್ಟರು. ನಾವು ಅವರಂತಹ ಜನರನ್ನು ನೋಡಿಲ್ಲ. ಅವರ ಬಳಿ ಮಿಗತೆಯಿದ್ದುದನ್ನು ದೇವ ಮಾರ್ಗದಲ್ಲಿ ಚೆನ್ನಾಗಿ ಖರ್ಚು ಮಾಡುತ್ತಾರೆ. ಕಡಿಮೆಯಿದ್ದರೆ ಅದರಿಂದಲೂ ಬಡವರಿಗೆ ಆರ್ಥಿಕ ನೆರವು ನೀಡಲು ಹಿಂಜರಿಯುವುದಿಲ್ಲ. ಆ ಸ್ವಲ್ಪದರಲ್ಲಿ ಅವರನ್ನೂ ಸೇರಿಸಿಕೊಳ್ಳುತ್ತಾರೆ. ನಮ್ಮ ಖರ್ಚಿನ ಭಾರವನ್ನೂ ಅವರೇ ವಹಿಸಿಕೊಂಡಿದ್ದಾರೆ. ಪ್ರವಾದಿ(ಸ) ಕೇಳಿದರು- ಅವರ ಈ ಉಪಕಾರಕ್ಕಾಗಿ ನೀವು ಅವರಿಗೆ ಕೃತಜ್ಞತೆ ಸಲ್ಲಿಸುವುದಿಲ್ಲವೆ? ಅವರಿಗಾಗಿ ನೀವು ಪ್ರಾರ್ಥಿಸುವುದಿಲ್ಲವೇ? ಆಗ ಜನರು ಹೇಳಿದರು- ಹೌದು. ನಾವು ಅವರಿಗೆ ಕೃತಜ್ಞರಾಗಿದ್ದೇವೆ. ಅವರಿಗಾಗಿ ಪ್ರಾರ್ಥಿಸುತ್ತೇವೆ. ಪ್ರವಾದಿ(ಸ) ಹೇಳಿದರು- ಪುಣ್ಯಕ್ಕೆ ನೀವೂ ಅರ್ಹರಾಗಿದ್ದೀರಿ. ಅವರೂ ಅರ್ಹರಾಗಿದ್ದಾರೆ. ಅವರು ನಿಮ್ಮ ಮೇಲೆ ಔದಾರ್ಯ ತೋರಿದರು. ನೀವು ಅವರಿಗಾಗಿ ಪ್ರಾರ್ಥಿಸಿದಿರಿ.

[ಅಬೂ ದಾವೂದ್, ನಸಾಈ]

ಸಾಮೂಹಿಕ ಬಾಧ್ಯತೆ

(469) عَنْ عَبْدِ اللهِ بْنِ دِيْنَارٍ عَنْ عَبْدِ اللهِ بْنِ عُمَرَ اَنَّ رَجُلاً مِنَ الْاَعْرَابِ لَقِيَهُ بِطَرِيْقِ مَكَّةَ فَسَلَّمَ عَلَيْهِ عَبْدُ اللهِ بْنُ عُمَرَ وَحَمَلَهُ عَلٰى حِمَارٍ كَانَ يَرْكَبُهُ وَاَعْطَاهُ عِمَامَةً كَانَتْ عَلٰى رَأْسِهِ، قَالَ ابْنُ دِيْنَارٍ فَقُلْنَا لَهُ اَصْلَحَكَ اللهُ اِنَّهُمُ الْاَعْرَابُ، وَهُمْ يَرْضَوْنَ بِالْيَسِيْرِ، فَقَالَ عَبْدُ اللهِ بْنُ عُمَرَ اِنَّ اَبَا هٰذَا كَانَ وُدًّا لِعُمَرَ بْنِ الْخَطَّابِ وَاِنِّيْ سَمِعْتُ رَسُوْلَ اللهِ صَلَّى اللهُ عَلَيْهِ وَسَلَّمَ يَقُوْلُ اِنَّ اَبَرَّ الْبِرِّ صِلَةُ الْوَلَدِ اَهْلَ وُدِّ اَبِيْهِ

(مسلم)

ಅಬ್ದುಲ್ಲಾ ಬಿನ್ ಉಮರ್‌ರ(ರ) ಕುರಿತು ಅಬ್ದುಲ್ಲಾ ಬಿನ್ ದೀನಾರ್ ಹೇಳುತ್ತಾರೆ- ಅವರು ಹಜ್ಜ್ ಯಾತ್ರೆಗೆ ಹೋಗುತ್ತಿದ್ದಾಗ ಮಕ್ಕಾದ ದಾರಿಯಲ್ಲಿ ಗ್ರಾಮೀಣ ಅರಬ ನೊಬ್ಬನು ಅವರನ್ನು ಭೇಟಿಯಾದನು. ಅಬ್ದುಲ್ಲಾ ಬಿನ್ ಉಮರ್(ರ) ಆ ವ್ಯಕ್ತಿಗೆ ಸಲಾಮ್ ಹೇಳಿದರು. ಅವರು ಪ್ರಯಾಣಿಸುತ್ತಿದ್ದ ಅವರ ಹೇಸರಗತ್ತೆಯನ್ನು ಅವನಿಗೆ ನೀಡಿದರು. ತನ್ನ ತಲೆಯ ಮುಂಡಾಸು ಬಿಚ್ಚಿ ಅವನಿಗೆ ತೊಡಿಸಿದರು. ಆಗ ನಾನು ಹೇಳಿದೆ- ಅಲ್ಲಾಹನು ನಿಮ್ಮನ್ನು ಅನುಗ್ರಹಿಸಲಿ. ಗ್ರಾಮೀಣರಾದ ಈ ಮಂದಿಗೆ ಸ್ವಲ್ಪ ಕೊಟ್ಟರೂ ಅವರು ಸಂತೃಪ್ತರಾಗುತ್ತಾರೆ. (ಇಷ್ಟು ಹೆಚ್ಚು ಕೊಡುವ ಅಗತ್ಯವಿರಲಿಲ್ಲ.) ಆಗ ಅವರು ಹೇಳಿದರು- ಇವನ ತಂದೆ ನನ್ನ ತಂದೆ ಹ. ಉಮರ್‌ರ(ರ) ಸ್ನೇಹಿತರಾಗಿದ್ದರು. ಪ್ರವಾದಿ(ಸ) ಹೀಗೆ ಹೇಳಿರುವುದಾಗಿ ನಾನು ಕೇಳಿದ್ದೇನೆ- ಮಗನು ತನ್ನ ತಂದೆಯ ಸ್ನೇಹಿತರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸುವುದು ಅತಿ ದೊಡ್ಡ ಪುಣ್ಯವಾಗಿದೆ. *[ಮುಸ್ಲಿಮ್]*

ತಬ್ಲೀಗಿಗಳ ಚಿಂತೆ

(470) قَالَ الْحَسَنُ الْبَصْرِيُّ لَقَدْ عَهِدْتُّ الْمُسْلِمِيْنَ وَاِنَّ الرَّجُلَ مِنْهُمْ لَيُصْبِحُ فَيَقُوْلُ يَا اَهْلِيَهْ يَا اَهْلِيَهْ يَتِيْمَكُمْ يَتِيْمَكُمْ (صحيفة الحق)

ಹ. ಹಸನ್ ಬಸರೀ(ರ) ಹೇಳುತ್ತಾರೆ- ಮುಸ್ಲಿಮರು (ಅಂದರೆ ಪ್ರವಾದಿಯ ಸಂಗಾತಿಗಳು) ಬೆಳಿಗ್ಗೆ ತಮ್ಮ ಮನೆ ಮಂದಿಯೊಂದಿಗೆ ಈ ರೀತಿ ಹೇಳುವುದನ್ನು ನಾನು ಕಂಡಿದ್ದೇನೆ: ಓ ನನ್ನ ಮನೆಯವರೇ! ಓ ನನ್ನ ಮನೆಯವರೇ! ನಿಮ್ಮ ತಬ್ಬಲಿಗಳಿಗೆ ಮೊದಲು ಉಣಿಸಿರಿ. ತಬ್ಬಲಿಗಳ ಬಗ್ಗೆ ಅತಿ ಹೆಚ್ಚು ಗಮನ ಹರಿಸಿರಿ. *[ಸಹೀಫತುಲ್ ಹಕ್]*

ಗುಲಾಮರೊಂದಿಗೆ ಸದ್ವರ್ತನೆ

(471) عَنْ اَبِيْ مَسْعُوْدِنِ الْبَدْرِيِّ قَالَ، كُنْتُ اَضْرِبُ غُلَامًا لِيْ بِالسَّوْطِ، فَسَمِعْتُ
صَوْتًا مِنْ خَلْفِيْ "اِعْلَمْ اَبَا مَسْعُوْدٍ، فَلَمْ اَفْهَمِ الصَّوْتَ مِنَ الْغَضَبِ، فَلَمَّا دَنَا مِنِّيْ اِذَا
هُوَ رَسُوْلُ اللّٰهِ صلى الله عليه وسلم فَاِذَا هُوَ يَقُوْلُ "اِعْلَمْ اَبَا مَسْعُوْدٍ اَنَّ اللّٰهَ عَزَّوَجَلَّ
اَقْدَرُ عَلَيْكَ مِنْكَ عَلٰى هٰذَا الْغُلَامِ" فَقُلْتُ لَا اَضْرِبُ مَمْلُوْكًا بَعْدَهٗ اَبَدًا ' وَفِيْ رِوَايَةٍ
فَقُلْتُ هُوَ حُرٌّ لِوَجْهِ اللّٰهِ تَعَالٰى (مسلم، ابوداود، ترمذى)

ಹ. ಅಬೂ ಮಸ್‌ವೂದ್ ಬದ್ರೀ ಹೇಳುತ್ತಾರೆ- ನಾನು ನನ್ನ ಗುಲಾಮನೊಬ್ಬನಿಗೆ ಛಡಿಯೇಟು ಬಾರಿಸುತ್ತಿದ್ದೆ. ಆಗ ನನ್ನ ಹಿಂದಿನಿಂದ ದೂರದಲ್ಲಿ ಯಾರೋ ಕೂಗಿ ಹೇಳುತ್ತಿದ್ದರು- "ಓ ಅಬೂ ಮಸ್‌ವೂದ್ ಜಾಗ್ರತೆ!" ಅದು ಯಾರ ಸ್ವರವೆಂದು ಕೋಪ ದಿಂದಾಗಿ ನನಗೆ ತಿಳಿಯಲಿಲ್ಲ. ಕೂಗಿ ಕರೆಯುವವರು ಹತ್ತಿರ ಬಂದಾಗ, ಅದು ಪ್ರವಾದಿಯವ ರೆಂದು(ಸ) ತಿಳಿಯಿತು. ಅವರು ಹೀಗೆ ಹೇಳುತ್ತಿದ್ದರು- "ಅಬೂ ಮಸ್‌ವೂದ್! ಈ ಗುಲಾಮನ ಮೇಲೆ ನಿಮಗೆಷ್ಟು ಅಧಿಕಾರವಿದೆಯೋ ಅದಕ್ಕಿಂತ ಬಹಳಷ್ಟು ಹೆಚ್ಚು ಅಧಿಕಾರ ಅಲ್ಲಾಹನಿಗೆ ನಿಮ್ಮ ಮೇಲಿದೆಯೆಂಬುದು ನೆನಪಿರಲಿ. (ಇಷ್ಟೊಂದು ನಿಷ್ಕರುಣೆಯಿಂದ ಅವನಿಗೇಕೆ ಹೊಡೆಯುತ್ತಿರುವಿರಿ. ನಿಮಗೆ ಅಲ್ಲಾಹನ ಭಯವಿಲ್ಲವೇ?)" ನಾನು ಹೇಳಿದೆ- ಅಲ್ಲಾಹನ ಸಂದೇಶವಾಹಕರೇ! ಇನ್ನು ಮುಂದೆ ನಾನು ಯಾವ ಗುಲಾಮನನ್ನೂ ಹೊಡೆಯಲಾರೆ. ಇನ್ನೊಂದು ಹದೀಸ್‌ನಲ್ಲಿ ಹೀಗಿದೆ- ಅಬೂ ಮಸ್‌ವೂದ್ ಹೇಳಿದರು: ಅಲ್ಲಾಹನ ಸಂಪ್ರೀತಿ ಗೋಸ್ಕರ ಈ ಗುಲಾಮನನ್ನು ಸ್ವತಂತ್ರಗೊಳಿಸಿದ್ದೇನೆ.

[ಮುಸ್ಲಿಮ್, ಅಬೂ ದಾವೂದ್, ತಿರ್ಮಿದಿ]

ಟಿಪ್ಪಣಿ: ಗುಲಾಮನನ್ನು ಸ್ವತಂತ್ರಗೊಳಿಸುವುದೆಂದರೆ ಅವನನ್ನು ಮಾನವನ ಮಟ್ಟಕ್ಕೆ ಏರಿಸುವುದಾಗಿದೆ. ಅವನಿಗೆ ತನ್ನ ಸಮಾನ ಸ್ಥಾನ ನೀಡುವುದಾಗಿದೆ. ಇಸ್ಲಾಮ್‌ಗಿಂತ ಮುಂಚೆ ಗುಲಾಮರನ್ನು ಮಾನವರೆಂದೇ ಪರಿಗಣಿಸಲಾಗುತ್ತಿರಲಿಲ್ಲ.

ತ್ಯಾಗ

(472) عَنِ ابْنِ عُمَرَ قَالَ، أُهْدِيَ لِرَجُلٍ مِنْ أَصْحَابِ رَسُوْلِ اللّٰهِ صلى الله عليه وسلم رَأْسُ شَاةٍ، فَقَالَ فُلَانٌ أَحْوَجُ إِلَيْهِ مِنِّيْ، فَبَعَثَ بِهٖ إِلَيْهِ، فَبَعَثَ ذٰلِكَ الْإِنْسَانُ إِلٰى آخَرَ، فَلَمْ يَزَلْ يَبْعَثُ بِهٖ وَاحِدٌ إِلٰى آخَرَ حَتّٰى رَجَعَ إِلَى الْأَوَّلِ بَعْدَ أَنْ تَدَاوَلَتْهُ سَبْعَةٌ (صحيفة الحق)

ಅಬ್ದುಲ್ಲಾ ಬಿನ್ ಉಮರ್(ರ) ಹೇಳುತ್ತಾರೆ: ಪ್ರವಾದಿಯವರ(ಸ) ಸಂಗಾತಿಗಳ ಪೈಕಿ ಒಬ್ಬರಿಗೆ ಆಡಿನ ತಲೆಯೊಂದನ್ನು ಕಾಣಿಕೆಯಾಗಿ ನೀಡಲಾಯಿತು. ಆಗ ಅವರು ಹೇಳಿದರು- ನನ್ನ ಇಂತಹ ಒಬ್ಬ ಸಂಗಾತಿ ಅದಕ್ಕೆ ನನಗಿಂತ ಹೆಚ್ಚು ಅರ್ಹರಾಗಿದ್ದಾರೆ. ಆಗ ಆ ದಾನಿಯು ಅದನ್ನು ಅವರ ಬಳಿಗೆ ಕಳಿಸಿದರು. ಅವರು ತನ್ನ ಇನ್ನೋರ್ವ ಸಂಗಾತಿಯನ್ನು ತೋರಿಸಿ, ಅವರಿಗೆ ಕೊಡಿರಿ, ಅವರು ನನಗಿಂತ ಅರ್ಹರಾಗಿದ್ದಾರೆ ಎಂದರು. ಈ ರೀತಿ ಆ ಆಡಿನ ತಲೆಯು ಏಳು ಮಂದಿಯ ಬಳಿಗೆ ಹೋಗಿ ಕೊನೆಗೆ ಮೊದಲನೆಯ ವ್ಯಕ್ತಿಯ ಬಳಿಗೇ ಮರಳಿ ಬಂತು. *[ಸಹೀಫತುಲ್‌ಹಕ್]*

ಹಲಾಲ್ ತುತ್ತು

(473) عَنْ عَائِشَةَ قَالَتْ، كَانَ لِأَبِيْ بَكْرٍ الصِّدِّيْقِ غُلَامٌ يُخْرِجُ لَهُ الْخَرَاجَ وَكَانَ أَبُوْ بَكْرٍ يَأْكُلُ مِنْهُ فَجَاءَ يَوْمًا بِشَيْءٍ، فَأَكَلَ مِنْهُ أَبُوْ بَكْرٍ، فَقَالَ لَهُ الْغُلَامُ تَدْرِيْ مَا هٰذَا؟ فَقَالَ أَبُوْ بَكْرٍ وَمَا هُوَ؟ فَقَالَ كُنْتُ تَكَهَّنْتُ لِإِنْسَانٍ فِي الْجَاهِلِيَّةِ وَمَا أُحْسِنُ الْكَهَانَةَ إِلَّا أَنِّيْ خَدَعْتُهُ، فَلَقِيَنِيْ فَأَعْطَانِيْ لِذٰلِكَ هٰذَا الَّذِيْ أَكَلْتَ مِنْهُ فَأَدْخَلَ أَبُوْ بَكْرٍ يَدَهُ فَقَاءَ كُلَّ شَيْءٍ فِيْ بَطْنِهِ (بخاری)

ಹ. ಆಯಿಶಾ(ರ) ಹೇಳುತ್ತಾರೆ- ನನ್ನ ತಂದೆ ಹ. ಅಬೂಬಕರ್‌ರಿಗೆ(ರ) ಒಬ್ಬ ಗುಲಾಮನಿದ್ದ. ಅವನು ಸಂಪಾದನೆ ಮಾಡಿ ಒಂದು ಮೊತ್ತವನ್ನು ತಂದು ಅವರಿಗೆ ಕೊಡುತ್ತಿದ್ದನು. ಅದನ್ನು ಅವರು ಖರ್ಚು ಮಾಡುತ್ತಿದ್ದರು. ಒಂದು ದಿನ ಅವನು ತಂದೆಯವರಿಗೆ ಏನೋ ತಿನ್ನುವ ವಸ್ತುವೊಂದನ್ನು ತಂದು ಕೊಟ್ಟನು. ಅವರು ಅದನ್ನು ತಿಂದರು. ತಿಂದಾದ ಬಳಿಕ ಆ ಗುಲಾಮನು ತಂದೆಯವರೊಂದಿಗೆ, ನೀವು ತಿಂದ ವಸ್ತು ಏನೆಂದು ತಿಳಿದಿದೆಯೇ ಎಂದು ಕೇಳಿದನು. ಅವರು, ನಿನಗೆ ಅದು ಎಲ್ಲಿಂದ ಸಿಕ್ಕಿತು, ಹೇಳು ಎಂದರು. ಆಗ ಅವನು ಹೀಗೆಂದನು- ನಾನು ಇಸ್ಲಾಮ್ ಸ್ವೀಕರಿಸುವುದಕ್ಕೆ ಮುಂಚೆ ಜ್ಯೋತಿಷಿಯಂತೆ ನಟಿಸುತ್ತಿದ್ದೆ. ಜ್ಯೋತಿಷ್ಯ ವಿದ್ಯೆ ನನಗೆ ತಿಳಿದಿರಲಿಲ್ಲ. ನಾನು ಒಬ್ಬನಿಗೆ ಅವನ ಭವಿಷ್ಯ (ನಿನ್ನ ವಿಧಿಯಲ್ಲಿ ಹೀಗೆ ಬರೆದಿದೆಯೆಂದು) ಹೇಳಿದೆ. ನಾನು ಅವನನ್ನು ಮೋಸಗೊಳಿಸಿದ್ದೆ. ಈಗ ಅವನು ನನಗೆ ಸಿಕ್ಕಿ ನನ್ನ ಪ್ರತಿಫಲವನ್ನು ನನಗೆ ನೀಡಿದನು. ಅದನ್ನೇ ನೀವು ತಿಂದಿರಿ. ಇದನ್ನು ಕೇಳಿದ ಕೂಡಲೇ ಹ. ಅಬೂಬಕರ್‌ರು(ರ) ಗಂಟಲಿಗೆ ಕೈ ಹಾಕಿ ಹೊಟ್ಟೆಯಲ್ಲಿದ್ದುದನ್ನೆಲ್ಲ ವಾಂತಿ ಮಾಡಿಬಿಟ್ಟರು. *[ಬುಖಾರಿ]*

ಉತ್ತಮ ವ್ಯವಹಾರ

(474) عَنْ عَبْدِ اللهِ بْنِ الزُّبَيْرِ قَالَ، لَمَّا وَقَفَ الزُّبَيْرُ يَوْمَ الْجَمَلِ دَعَانِي ،
فَقُمْتُ إِلَى جَنْبِهِ، فَقَالَ يَا بُنَيَّ إِنَّهُ لَا يُقْتَلُ الْيَوْمَ إِلَّا ظَالِمٌ أَوْ مَظْلُومٌ وَإِنِّي لَا أُرَانِي
إِلَّا سَأُقْتَلُ الْيَوْمَ مَظْلُومًا، وَإِنَّ مِنْ أَكْبَرِ هَمِّي لَدَيْنِي، أَفَتَرَى دَيْنَنَا يُبْقِي مِنْ مَالِنَا شَيْئًا؟
ثُمَّ قَالَ يَا بُنَيَّ بِعْ مَالَنَا وَاقْضِ دَيْنِي.......... قَالَ وَإِنَّمَا كَانَ دَيْنُهُ الَّذِي
كَانَ عَلَيْهِ أَنَّ الرَّجُلَ كَانَ يَأْتِيهِ بِالْمَالِ فَيَسْتَوْدِعُهُ إِيَّاهُ فَيَقُولُ الزُّبَيْرُ لَا، وَلَكِنْ
هُوَ سَلَفٌ، أَخْشَى عَلَيْهِ الضَّيْعَةَ (بخاري)

ಅಬ್ದುಲ್ಲಾ ಬಿನ್ ಝುಬೈರ್(ರ) ಹೇಳುತ್ತಾರೆ- ನನ್ನ ತಂದೆ ಹ. ಝುಬೈರ್(ರ) ಅವರು ಜಮಲ್ ಯುದ್ಧದ ಸಂದರ್ಭದಲ್ಲಿ ನನ್ನನ್ನು ತನ್ನ ಬಳಿಗೆ ಕರೆದು ಹೀಗೆಂದರು- ಪ್ರಿಯ ಪುತ್ರಾ! ಇಂದು ಮನುಷ್ಯನು ಅಕ್ರಮಿಯೆಂಬ ನೆಲೆಯಲ್ಲಿ ಕೊಲ್ಲಲ್ಪಡುವನು ಅಥವಾ ಮರ್ದಿತನೆಂಬ ನೆಲೆಯಲ್ಲಿ ವಧಿಸಲ್ಪಡುವನು. ನನ್ನ ಬಗ್ಗೆ ನಾನು ಮರ್ದಿತನ ನೆಲೆಯಲ್ಲಿ

ಕೊಲ್ಲಲ್ಪಡುವೆನೆಂದು ಭಾವಿಸುತ್ತೇನೆ. ಇಂದು ನನಗೆ ಜನರ ಸಾಲ ತೀರಿಸುವ ಬಗ್ಗೆ ಚಿಂತೆ ಕಾಡುತ್ತಿದೆ. ಸಾಲ ಸಂದಾಯ ಮಾಡಿದ ಬಳಿಕ ನಮ್ಮ ಬಳಿ ಏನಾದರೂ ಸಂಪತ್ತು ಇರಬಹುದೆಂದು ನೀನು ಭಾವಿಸುತ್ತೀಯಾ? ಅನಂತರ ಅವರು, ಪ್ರಿಯ ಪುತ್ರಾ! ನಮ್ಮ ಆಸ್ತಿಯನ್ನು ಮಾರಿ ಸಾಲ ಸಂದಾಯ ಮಾಡಬೇಕು... ಎಂದರು.

ಅಬ್ದುಲ್ಲಾ ಬಿನ್ ಝುಬೈರ್ ಹೇಳುತ್ತಾರೆ- ತಂದೆಯ ಮೇಲಿದ್ದ ಸಾಲದ ಭಾರವು ತನ್ನ ಮತ್ತು ತನ್ನ ಮನೆಯವರಿಗಾಗಿ ಇದ್ದುದಲ್ಲ. ಬದಲಾಗಿ, ಜನರು ಅವರನ್ನು ನಂಬಿ ತಮ್ಮ ಹಣವನ್ನು ಅವರ ಬಳಿ ಅಮಾನತ್ತಾಗಿಡುವಂತೆ ಕೊಡುತ್ತಿದ್ದರು. ಆಗ ತಂದೆಯವರು ಅವರೊಂದಿಗೆ ಹೀಗೆ ಹೇಳುತ್ತಿದ್ದರು- ಈ ಹಣವನ್ನು ಅಮಾನತ್ತಾಗಿ ನನ್ನ ಬಳಿ ಇಡಬೇಡಿರಿ. ಅದು ಅಳಿದು ಹೋಗದಂತಾಗಲು ಅದನ್ನು ನನ್ನ ಬಳಿ ಸಾಲದ ರೂಪದಲ್ಲಿಡಿರಿ. ಅಮಾನತ್ತಾಗಿಟ್ಟು ಅದು ಅಳಿದು ಹೋದರೆ ನೀವು ಕಾನೂನು ಕ್ರಮ ಕೈಗೊಳ್ಳುವಂತಿಲ್ಲ. ಆದುದರಿಂದ ಅದು ಅಳಿದು ಹೋಗಿ ನಿಮಗೆ ನಷ್ಟವಾಗದಂತಿರಲು ಅದನ್ನು ಸಾಲವೆಂದು ಪರಿಗಣಿಸಿರಿ. *[ಬುಖಾರಿ]*

ಸಾಲಗಾರನೊಂದಿಗೆ ಮೃದು ವರ್ತನೆ

(475) عَنْ اَبِيْ قَتَادَةَ اَنَّهُ طَلَبَ غَرِيْمًا لَهُ فَتَوَارَى عَنْهُ ثُمَّ وَجَدَهُ فَقَالَ اِنَّهُ مُعْسِرٌ، قَالَ آللّٰهِ؟ قَالَ آللّٰهِ، فَاِنِّيْ سَمِعْتُ رَسُوْلَ اللّٰهِ صلى الله عليه وسلم يَقُوْلُ مَنْ سَرَّهُ اَنْ يُنْجِيَهُ اللّٰهُ مِنْ كُرَبِ يَوْمِ الْقِيٰمَةِ فَلْيُنَفِّسْ عَنْ مُعْسِرٍ اَوْ يَضَعْ عَنْهُ (مسلم)

ಅಬೂ ಕತಾದ(ರ) ತನ್ನ ಒಬ್ಬ ಸಾಲಗಾರನಿಗೆ ಕರೆ ಕಳಿಸಿದಾಗ ಅವನು ಎಲ್ಲೋ ಅಡಗಿ ಬಿಟ್ಟನು. ಅನಂತರ ಅವರಿಗೆ ಅವನು ಸಿಕ್ಕಿದನು. ಅವರು ತನ್ನ ಸಾಲ ಮರು ಪಾವತಿ ಮಾಡುವಂತೆ ಕೇಳಿ ಕೊಂಡಾಗ- ಅವನು, ಕೈಯಲ್ಲಿ ಚಿಕ್ಕಾಸೂ ಇಲ್ಲ, ಸಾಲ ಮರು ಪಾವತಿ ಮಾಡುವ ಸ್ಥಿತಿಯಲ್ಲಿ ನಾನಿಲ್ಲವೆಂದನು. ಅವರು ಕೇಳಿದರು- ಅಲ್ಲಾಹನಾಣೆಗೂ ನೀನು ಮರು ಪಾವತಿ ಮಾಡುವ ಸ್ಥಿತಿಯಲ್ಲಿಲ್ಲವೇ? ಅವನು ಹೇಳಿದನು - ಅಲ್ಲಾಹನಾಣೆ! ನಾನು ಮರು ಪಾವತಿ ಮಾಡುವ ಸ್ಥಿತಿಯಲ್ಲಿಲ್ಲ. ಆಗ ಅಬೂಕತಾದ ಹೀಗೆಂದರು- ಯಾರಿಗಾದರೂ ನಿರ್ಣಾಯಕ ದಿನದಂದು ಎಲ್ಲ ಚಿಂತೆಯಿಂದ ಮುಕ್ತಿ ದೊರೆಯಬೇಕೆಂಬ ಆಸೆಯಿದ್ದರೆ ಅವನು ಬಡ ಅಸಹಾಯಕ ಸಾಲಗಾರನಿಗೆ ಇನ್ನಷ್ಟು ಅವಧಿ ನೀಡಲಿ ಅಥವಾ ಸಾಲವನ್ನು ಮನ್ನಾ ಮಾಡಲಿ ಎಂದು ಪ್ರವಾದಿ(ಸ) ಹೇಳಿರುವುದಾಗಿ ಕೇಳಿದ್ದೇನೆ. *[ಮುಸ್ಲಿಮ್]*

ಟಿಪ್ಪಣಿ: ಈ ಹದೀಸ್‌ನಲ್ಲಿ ಅಬೂ ಕತಾದರು ಹೆಚ್ಚಿನ ಅವಧಿ ನೀಡಿದರೋ ಅಥವಾ ಮನ್ನಾ ಮಾಡಿದರೋ ಎಂಬುದು ವ್ಯಕ್ತವಾಗುವುದಿಲ್ಲ. ಆದರೆ ಹದೀಸ್‌ನ ಶೈಲಿಯನ್ನು ನೋಡುವಾಗ ಅವರು ತನ್ನ ಸಾಲವನ್ನು ಮಾಫಿ ಮಾಡಿದರೆಂದು ಭಾಸವಾಗುತ್ತದೆ.

ಧರ್ಮ ಸಂಸ್ಥಾಪನೆಯ ಮಾರ್ಗದಲ್ಲಿ

(476) عَنْ عَبْدِ اللهِ بْنِ شَقِيْقٍ قَالَ: اَقَمْتُ مَعَ اَبِيْ هُرَيْرَةَ بِالْمَدِيْنَةِ سَنَةً، فَقَالَ لِيْ ذَاتَ يَوْمٍ وَنَحْنُ عِنْدَ حُجْرَةِ عَائِشَةَ: لَقَدْ رَاَيْتُنَا وَمَا لَنَا ثِيَابٌ اِلَّا الْاَبْرَادُ الْمُفَتَّقَةُ وَاِنَّهُ لَيَاْتِيْ عَلٰى اَحَدِنَا الْاَيَّامُ مَا يَجِدُ طَعَامًا يُقِيْمُ بِهِ صُلْبَهُ، حَتّٰى اِنْ كَانَ اَحَدُنَا لَيَاْخُذُ الْحَجَرَ فَيَشُدُّ بِهِ عَلٰى اَخْمَصِ بَطْنِهِ ثُمَّ يَشُدُّهُ بِثَوْبِهِ لِيُقِيْمَ صُلْبَهُ (مسند احمد)

ಅಬ್ದುಲ್ಲಾ ಬಿನ್ ಶಕೀಕ್ ಹೇಳುತ್ತಾರೆ- ನಾನು ಮದೀನಾದಲ್ಲಿ ಒಂದು ವರ್ಷ ಕಾಲ ಹ. ಅಬೂ ಹುರೈರಾರ(ರ) ಜೊತೆಗಿದ್ದೆ. ಒಂದು ದಿನ ನಾವು ಹ. ಆಯಿಶಾರ(ರ) ನಿವಾಸದ ಬಳಿ ಕುಳಿತಿದ್ದೆವು. ಅವರು ಹೇಳಿದರು, ನಮ್ಮ ಮೈ ಮೇಲೆ ದಪ್ಪ ಕಂಬಳಿಯಲ್ಲದೆ ಬೇರೆ ಯಾವ ಮೃದು ಬಟ್ಟೆಯೂ ಇಲ್ಲದಂತಹ ಪರಿಸ್ಥಿತಿಯಿತ್ತು. ಅನೇಕ ದಿನಗಳವರೆಗೆ ಹೊಟ್ಟೆಯನ್ನು ನೇರಗೊಳಿಸುವಷ್ಟು ಊಟ ಕೂಡಾ ಸಿಗುತ್ತಿರಲಿಲ್ಲ. ನಾವು ಕಲ್ಲುಗಳನ್ನೆತ್ತಿ ನಮ್ಮ ಹೊಟ್ಟೆಯ ಮೇಲಿಟ್ಟು ಹೊಟ್ಟೆಯು ನೇರವಾಗಿರಲು ಅದನ್ನು ಬಟ್ಟೆಯಿಂದ ಕಟ್ಟುತ್ತಿದ್ದೆವು. *[ಮುಸ್ನದ್ ಅಹ್ಮದ್]*

ಟಿಪ್ಪಣಿ: ಮುಸ್ಲಿಮ್‌ನಲ್ಲಿ ಉಲ್ಲೇಖವಾಗಿರುವ ಹ. ಜಾಬಿರ್‌ರ(ರ) ಹದೀಸ್‌ನ ವರದಿ ಹೀಗಿದೆ: ಅಬೂ ಉಬೈದಾರ(ರ) ನೇತೃತ್ವದಲ್ಲಿ ನಾವು ಜಿಹಾದ್‌ಗೆ ಹೋಗಿದ್ದಾಗ ಪ್ರತಿ ದಿನ ಅವರು ನಮಗೆ ಒಂದು ಖರ್ಜೂರವನ್ನು ನೀಡುತ್ತಿದ್ದರು. ನಾವು ಮಕ್ಕಳಂತೆ ಬಹಳ ಹೊತ್ತಿನ ವರೆಗೆ ಆ ಖರ್ಜೂರವನ್ನು ಚೀಪುತ್ತಾ ನೀರು ಕುಡಿಯುತ್ತಿದ್ದೆವು. ಮರಗಳ ಎಲೆಗಳನ್ನು ಉದುರಿಸಿ ಅವುಗಳನ್ನು ನೀರಿನಲ್ಲಿ ಅದ್ದಿ ತಿನ್ನುತ್ತಿದ್ದೆವು.

ಸಈದ್ ಬಿನ್ ಅಬುಲ್ ಆಸ್(ರ) ಹೇಳುತ್ತಾರೆ- ಜಿಹಾದ್‌ನ ಯಾತ್ರೆಯಲ್ಲಿ ನಮ್ಮ ಬಳಿ ಮುಳ್ಳು ಕಂಟಿಗಳ ಮತ್ತು ಬಬೂಲ್‌ನ ಎಲೆಗಳ ಹೊರತು ಇನ್ನೇನೂ ಇರುತ್ತಿರಲಿಲ್ಲ. ಅದರಿಂದಲೇ ನಾವು ದಿನ ದೂಡುತ್ತಿದ್ದೆವು. (ಅಲ್ಲಾಹನ ಮಾರ್ಗದಲ್ಲಿ ಇಂತಹ ಸಂದರ್ಭಗಳೂ ಬರುತ್ತವೆ.) (ಮುತ್ತಫಕುನ್ ಅಲೈಹಿ)

---

(477) عَنْ عُمَرَ قَالَ نَظَرَ رَسُوْلُ اللّٰهِ صلى الله عليه وسلم إِلَى مُصْعَبِ بْنِ عُمَيْرٍ مُقْبِلًا عَلَيْهِ إِهَابُ كَبْشٍ قَدْ تَنَطَّقَ بِهِ فَقَالَ النَّبِيُّ صلى الله عليه وسلم اُنْظُرُوْا إِلَى هٰذَا الَّذِيْ نَوَّرَ اللّٰهُ قَلْبَهُ، لَقَدْ رَأَيْتُهُ بَيْنَ أَبَوَيْنِ يَغْذُوَانِهِ بِأَطْيَبِ الطَّعَامِ وَالشَّرَابِ وَلَقَدْ رَأَيْتُ عَلَيْهِ حُلَّةً شَرَاهَا أَوْ شُرِيَتْ بِمِائَتَيْ دِرْهَمٍ فَدَعَاهُ حُبُّ اللّٰهِ وَحُبُّ رَسُوْلِهِ إِلَى مَا تَرَوْنَ (المنذری بحوالہ طبرانی)

ಹ. ಉಮರ್(ರ) ಹೇಳುತ್ತಾರೆ- ಪ್ರವಾದಿಯವರ(ಸ) ಬಳಿಗೆ ಒಮ್ಮೆ ಮುಸ್‌ಅಬ್ ಬಿನ್ ಉಮೈರ್(ರ) ಬರುತ್ತಿದ್ದರು. ಅವರು ಆಡಿನ ತೊಗಲೊಂದನ್ನು ಲುಂಗಿಯಾಗಿ ಉಟ್ಟುಕೊಂಡಿದ್ದರು. ಇದನ್ನು ಕಂಡು ಪ್ರವಾದಿಯವರ(ಸ) ಹೃದಯ ತುಂಬಿ ಬಂತು ಮತ್ತು ಅವರು ಹೀಗೆಂದರು- ಅಲ್ಲಾಹನು ಇಸ್ಲಾಮಿನ ಪ್ರಕಾಶದಿಂದ ಹೃದಯವನ್ನು ಬೆಳಗಿಸಿದಂತಹ ಈ ವ್ಯಕ್ತಿಯನ್ನು ನೋಡಿರಿ. ಅವರು ಇಸ್ಲಾಮ್ ಸ್ವೀಕರಿಸುವುದಕ್ಕಿಂತ ಮುಂಚೆಯೂ ನಾನು ಅವರನ್ನು ನೋಡಿದ್ದೇನೆ. ಅಂದು ಅವರ ಹೆತ್ತವರು ಅವರಿಗೆ ಅತ್ಯುತ್ತಮ ಆಹಾರ ನೀಡುತ್ತಿದ್ದರು. ಅವರು ಇನ್ನೂರು ದಿರ್ಹಮ್ ಬೆಲೆ ಬಾಳುವ ಉಡುಪು ಧರಿಸುವುದನ್ನು ನೋಡಿದ್ದೇನೆ. ಆದರೆ ಇಂದು ಅಲ್ಲಾಹ್ ಮತ್ತು ಅವನ ಪ್ರವಾದಿಯ ಪ್ರೇಮದಿಂದಾಗಿ ಅವರನ್ನು ಈ ಸ್ಥಿತಿಯಲ್ಲಿ ನೋಡುತ್ತಿದ್ದೀರಿ.

[ಅಲ್‌ಮುಂದಿರಿ- ತಬ್ರಾನಿಯಿಂದ ಉದ್ಧರಿತ]

ಟಿಪ್ಪಣಿ: ಹ. ಮುಸ್‌ಅಬ್ ಬಿನ್ ಉಮೈರ್(ರ) ಇಸ್ಲಾಮಿನ ಅನುಗ್ರಹ ಪಡೆದು ಸಂತುಷ್ಟರಾಗಿದ್ದಾರೆ. ಹಿಂದಿನ ಐಶಾರಾಮದ ಅವರ ಜೀವನವು ತಪ್ಪಿಯೂ ಅವರ ನೆನಪಿಗೆ ಬರುವುದಿಲ್ಲ. ವಸ್ತುತಃ ಪ್ರವಾದಿಯವರ(ಸ) ಸಂಗಾತಿಗಳು ಅವರ ಈ ಸ್ಥಿತಿಯನ್ನು ಕಂಡು ಮರುಗುತ್ತಿದ್ದರು!

ಬಲಿದಾನಗಳ ಪ್ರಥಮ ಪುರಸ್ಕಾರ

(478) عَنْ عَبْدِ اللهِ بْنِ عَمْرٍو قَالَ، إِنَّ النَّبِيَّ صلى الله عليه وسلم خَرَجَ يَوْمَ بَدْرٍ
فِي ثَلَاثِمِائَةٍ وَخَمْسَةَ عَشَرَ وَقَالَ اَللّٰهُمَّ إِنَّهُمْ حُفَاةٌ فَاحْمِلْهُمْ، اَللّٰهُمَّ إِنَّهُمْ عُرَاةٌ فَاكْسُهُمْ،
اَللّٰهُمَّ إِنَّهُمْ جِيَاعٌ فَأَشْبِعْهُمْ، فَفَتَحَ اللهُ لَهُمْ، فَانْقَلَبُوا وَمَا مِنْهُمْ رَجُلٌ إِلَّا وَقَدْ
رَجَعَ بِجَمَلٍ أَوْ جَمَلَيْنِ وَاكْتَسَوْا وَشَبِعُوا (ابو داود)

ಹ. ಅಬ್ದುಲ್ಲಾ ಬಿನ್ ಅಮ್ರ್ ಬಿನ್ ಆಸ್(ರ) ಹೇಳುತ್ತಾರೆ- ಪ್ರವಾದಿಯವರು(ಸ) ಬದ್ರ್ ಯುದ್ಧದ ವೇಳೆ ಮುನ್ನೂರ ಹದಿನೈದು ಮಂದಿ ಸಹಾಬಿಗಳೊಂದಿಗೆ ಹೊರಟರು. ಆ ಸಂದರ್ಭದಲ್ಲಿ ಪ್ರವಾದಿ(ಸ) ಹೀಗೆ ಪ್ರಾರ್ಥಿಸಿದರು- ಓ ಅಲ್ಲಾಹ್! ಇವರು ಕಾಲ್ನಡಿಗೆಯಲ್ಲಿ ಪ್ರಯಾಣಿಸುತ್ತಿದ್ದಾರೆ. ಇವರಿಗೆ ಸವಾರಿಗಳನ್ನು ನೀಡು. ಓ ಅಲ್ಲಾಹ್! ಇವರ ಮೈ ಮೇಲೆ ಬಟ್ಟೆಯಿಲ್ಲ. ಇವರಿಗೆ ಬಟ್ಟೆ ತೊಡಿಸು. ಓ ಅಲ್ಲಾಹ್! ಇವರು ಹಸಿದವರಾಗಿದ್ದಾರೆ. ಇವರಿಗೆ ಹೊಟ್ಟೆ ತುಂಬಾ ಉಣಿಸು. [ಪ್ರವಾದಿಯವರ(ಸ) ಪ್ರಾರ್ಥನೆಯ ಫಲವಾಗಿ] ಅಲ್ಲಾಹನು ಸತ್ಯವಿಶ್ವಾಸಿಗಳಿಗೆ ವಿಜಯ ನೀಡಿದನು. ಅವರು ಮದೀನಾಕ್ಕೆ ಮರಳುವಾಗ, ಅವರ ಪೈಕಿ ಪ್ರತಿಯೊಬ್ಬನ ಬಳಿಯಲ್ಲೂ ಒಂದೆರಡು ಒಂಟೆಗಳು, ಪ್ರತಿಯೊಬ್ಬನಿಗೂ ಉಡುಪು ಮತ್ತು ಆಹಾರ ಪದಾರ್ಥಗಳು ಲಭಿಸಿದುವು. *[ಅಬೂ ದಾವೂದ್]*

ಟಿಪ್ಪಣಿ: ಬದ್ರ್‌ನಲ್ಲಿ ಸಿಕ್ಕಿದ ಈ ಪುರಸ್ಕಾರವು ಪ್ರಥಮ ಕಂತಾಗಿತ್ತು. ಆ ಬಳಿಕ ನಿರಂತರ ಪುರಸ್ಕಾರಗಳು ಸಿಗುತ್ತಲೇ ಇದ್ದುವು. ಇನ್ನು ಪರಲೋಕದಲ್ಲಿ ಸಿಗುವ ಪುರಸ್ಕಾರಗಳನ್ನು ಅಂದಾಜಿಸಲು ಈ ಲೋಕದಲ್ಲಿ ಸಾಧ್ಯವಿಲ್ಲ. ಅವರ ಪ್ರಭು ತಬೂಕ್‌ನಲ್ಲಿ ನೀಡಿದ್ದ ಕೊನೆಯ ಪರೀಕ್ಷೆಯಲ್ಲಿ ಅವರು ಉತ್ತೀರ್ಣರಾದ ಬಳಿಕ ಸೂರಃ ಅತ್ತೌಬಾದ 111ನೆಯ ಆಯತ್‌ನಲ್ಲಿ ಹೀಗೆ ಪ್ರಸ್ತಾಪಿಸಿದ್ದಾನೆ-

"ಖಂಡಿತವಾಗಿಯೂ ಅಲ್ಲಾಹನು (ಈಗ) ಸತ್ಯವಿಶ್ವಾಸಿಗಳಿಂದ ಅವರ ಜೀವ-ಸೊತ್ತುಗಳನ್ನು ಸ್ವರ್ಗದ ಬದಲಿಗೆ ಖರೀದಿಸಿದ್ದಾನೆ. (ಏಕೆಂದರೆ ಅವರು ತಮ್ಮ ವ್ಯಾಪಾರದಲ್ಲಿ ಸತ್ಯಸಂಧರಾಗಿರುವರು. ಎಲ್ಲ ಪರೀಕ್ಷೆಗಳಲ್ಲೂ ಉತ್ತೀರ್ಣರಾಗಿರುವರು. ಜೀವಕ್ಕಿಂತ ಪ್ರಿಯವಾದ ವಸ್ತು ಬೇರೊಂದಿಲ್ಲ. ಈ ಜನರು ವರ್ಷಗಟ್ಟಲೆ ತಮ್ಮ ಜೀವಗಳನ್ನು ಪಣಕ್ಕೊಡ್ಡಿ) ಧರ್ಮದ ವಿರೋಧಿಗಳೊಂದಿಗೆ ಹೋರಾಡುತ್ತಿದ್ದರು. ಅವರನ್ನು ವಧಿಸುತ್ತಲೂ ಇದ್ದರು. ವಧಿಸಲ್ಪಡುತ್ತಲೂ ಇದ್ದರು. (ಆದರೆ ಹಿಂದಡಿಯಿಡಲಿಲ್ಲ) ಅವರೊಂದಿಗೆ ಮಾಡಿರುವ ಸ್ವರ್ಗದ ವಾಗ್ದಾನವು ಖಚಿತ ವಾಗ್ದಾನವಾಗಿದ್ದು ಅದನ್ನು ಪೂರೈಸುವುದನ್ನು ಅಲ್ಲಾಹನು ತನ್ನ ಮೇಲೆ ಕಡ್ಡಾಯಗೊಳಿಸಿರುವನು. ಈ ವಾಗ್ದಾನದ ಪ್ರಸ್ತಾಪವು ತೌರಾತ್‌ನಲ್ಲೂ ಇಂಜೀಲ್‌ನಲ್ಲೂ ಇದೆ. ಈಗ ಕುರ್‌ಆನಿನಲ್ಲೂ ಇದೆ. ಅಲ್ಲಾಹನಿಗಿಂತ ಉತ್ತಮ ವಚನ ಪಾಲಕನು ಯಾರಿರಬಹುದು. ಆದುದರಿಂದ ಸತ್ಯವಿಶ್ವಾಸಿಗಳೇ! ನಿಮ್ಮ ಜೀವ-

ಸೊತ್ತುಗಳ ವಿಕ್ರಯಕ್ಕಾಗಿ ಸಂತೋಷ ಪಡಿರಿ. ಖರೀದಿದಾರನು ಅದನ್ನು ಸ್ವರ್ಗದ ಬದಲಿಗೆ ಖರೀದಿಸಿರುವನು. ಈಗ ವ್ಯಾಪಾರ ಪೂರ್ಣಗೊಂಡಿದೆ."

ಅಲ್ಲಾಹನ ಸಂಪ್ರೀತಿಯೇ ಪರಮ ಗುರಿ

(479) عَنْ عَمْرِو بْنِ الْعَاصِ قَالَ: أَرْسَلَ إِلَيَّ رَسُوْلُ اللّٰهِ صلى الله عليه وسلم
أَنِ اجْمَعْ عَلَيْكَ سِلَاحَكَ وَثِيَابَكَ ثُمَّ ائْتِنِيْ، قَالَ فَأَتَيْتُهُ وَهُوَ يَتَوَضَّأُ، فَقَالَ يَا عَمْرُو
إِنِّيْ أَرْسَلْتُ إِلَيْكَ لِأَبْعَثَكَ فِيْ وَجْهٍ يُسَلِّمُكَ اللّٰهُ وَيُغْنِمُكَ وَأَرْغَبُ لَكَ رَغْبَةً مِّنَ
الْمَالِ، فَقُلْتُ يَا رَسُوْلَ اللّٰهِ مَا كَانَتْ هِجْرَتِيْ لِلْمَالِ، وَمَا كَانَتْ إِلَّا لِلّٰهِ وَلِرَسُوْلِهٖ
قَالَ نِعْمَ الْمَالُ الصَّالِحُ لِلرَّجُلِ الصَّالِحِ (مشكوة)

ಹ. ಅಮ್ರ್ ಬಿನ್ ಆಸ್(ರ) ಹೇಳುತ್ತಾರೆ- ಪ್ರವಾದಿಯವರು(ಸ), ನಾನು ಶಸ್ತ್ರಾಸ್ತ್ರದೊಂದಿಗೆ ಯುದ್ಧ ಕವಚ ಹಾಕಿ ಅವರ ಸನ್ನಿಧಿಗೆ ಹೋಗಬೇಕೆಂದು ನನಗೆ ಕರೆ ಕಳಿಸಿದರು. ನಾನು ಶಸ್ತ್ರಸಜ್ಜಿತನಾಗಿ ಅವರ ಬಳಿಗೆ ಹೋದಾಗ ಅವರು ವುಝೂ ಮಾಡುತ್ತಿದ್ದರು. ಪ್ರವಾದಿ(ಸ) ಹೇಳಿದರು- ನಾನು ನಿಮ್ಮನ್ನು ಒಂದು ಸೇನಾ ಕಾರ್ಯಾಚರಣೆಗೆ ಕಳಿಸುತ್ತಿದ್ದೇನೆ. ಈ ಕಾರ್ಯಾಚರಣೆಯಿಂದ ಸುರಕ್ಷಿತವಾಗಿ ಅಲ್ಲಾಹನು ನಿಮ್ಮನ್ನು ಮರಳಿಸುವನು. ನೀವು ಸಮರಾರ್ಜಿತದೊಂದಿಗೆ ಮರಳಿ ಬರುವಿರಿ. ಸಮರಾರ್ಜಿತದ ಒಂದು ಮೊತ್ತವನ್ನು ನಾನು ನಿಮಗೆ ಪುರಸ್ಕಾರದ ರೂಪದಲ್ಲಿ ನೀಡುವೆನು. ಆಗ ನಾನು ಕೇಳಿದೆ- ಅಲ್ಲಾಹನ ಸಂದೇಶವಾಹಕರೇ! ಸಂಪತ್ತು ಗಳಿಸಲಿಕ್ಕಾಗಿ ನಾನು ಹಿಜ್ರತ್ ಮಾಡಿರಲಿಲ್ಲ. ನಾನಂತೂ ಅಲ್ಲಾಹ್ ಮತ್ತು ಆತನ ಪ್ರವಾದಿವರ್ಯರಿಗಾಗಿ(ಸ) ಹಿಜ್ರತ್ ಮಾಡಿದೆ. ಪ್ರವಾದಿ(ಸ) ಹೇಳಿದರು- ಒಳ್ಳೆಯ ಸೊತ್ತು ಉತ್ತಮ ವ್ಯಕ್ತಿಗೆ ಅತ್ಯುತ್ತಮ ಸೊತ್ತಾಗಿದೆ. *[ಮಿಶ್ಕಾತ್]*

ಟಿಪ್ಪಣಿ: ಈ ಸೊತ್ತನ್ನು ಪಡೆಯುವುದರಿಂದ ನಿಮ್ಮ ಪರಲೋಕದ ಪುಣ್ಯವೇನೂ ವಂಚಿತವಾಗದು. ಇದು ಅಪ್ಪಟ ಶುದ್ಧ ಹಾಗೂ ಹಲಾಲ್ ವಸ್ತುವಾಗಿದೆ. ಆದುದರಿಂದ ಈ ವಿಷಯದಲ್ಲಿ ನೀವೇನೂ ಸಂದೇಹಕ್ಕೊಳಗಾಗಬೇಕಾಗಿಲ್ಲ.

ಇದು ಕೇವಲ ಹ. ಅಮ್ರ್ ಬಿನ್ ಆಸ್‌ರ(ರ) ಸ್ಥಿತಿಯಲ್ಲ. ಸಹಾಬಿಗಳ ಆ ಪಾವನ ಸಮೂಹದ ಪ್ರತಿಯೊಬ್ಬ ಸದಸ್ಯನೂ ಹೀಗೆಯೇ ಇದ್ದನು. ಅವರು ಅದನ್ನೇ ಹೇಳುತ್ತಲೂ ಇದ್ದರು. ಅವರು ಮಾಡಿದ ಕಾರ್ಯವೆಲ್ಲವೂ ಅಲ್ಲಾಹನ ಸಂಪ್ರೀತಿಗಾಗಿತ್ತು. ಅವರು ಮಾಡಿದ ತ್ಯಾಗಗಳೂ ಅಲ್ಲಾಹನಿಗಾಗಿತ್ತು. ಬೇರಾವುದೇ ಉದ್ದೇಶ ಅವರ ಮುಂದಿರಲಿಲ್ಲ. ಪ್ರತಿಯೊಂದು ಕರ್ಮದ ಪ್ರೇರಕವು ಪರಲೋಕದ

ಪುರಸ್ಕಾರವಾಗಿತ್ತು. ಹಾಗಲ್ಲದಿರುತ್ತಿದ್ದರೆ (ಭವ್ಯ ಪುರಸ್ಕಾರಗಳಿಂದ ಕೂಡಿದ) ಅಲ್ಲಾಹನ ಸಹಾಯ ಖಂಡಿತ ಬರುತ್ತಿರಲಿಲ್ಲ. ಇದರಿಂದಾಗಿಯೇ ಆಡಳಿತಾಧಿಕಾರ ದೊರಕಿಯೂ ಅವರು ದಾರಿ ತಪ್ಪಲಿಲ್ಲ. ಸಿರಿತನದಲ್ಲೂ ಅವರು ಬಡತನದ ಜೀವನ ಸಾಗಿಸಿದರು. ಇಮಾಮ್ ಮಾಲಿಕ್ ಅವರು ಮುವತ್ತಾ ಎಂಬ ತನ್ನ ಗ್ರಂಥದಲ್ಲಿ ಹ. ಅನಸ್‌ರ(ರ) ಹೇಳಿಕೆಯನ್ನು ಹೀಗೆ ಉಲ್ಲೇಖಿಸಿದ್ದಾರೆ- ಹ.ಉಮರ್‌ರ(ರ) ಅಂಗಿಯ ಎರಡೂ ಭುಜಗಳಲ್ಲಿ ಒಂದರ ಮೇಲೆ ಒಂದರಂತೆ ಹೊಲಿಯಲಾದ ಮೂರು ಮೂರು ತೇಪೆಗಳನ್ನು ನಾನು ಅವರ ಖಿಲಾಫತ್‌ನ ಕಾಲದಲ್ಲಿ ಕಂಡಿದ್ದೇನೆ. (ಅಂದರೆ ಒಂದು ಹರಿದಾಗ ಇನ್ನೊಂದು, ಅದು ಹರಿದಾಗ ಮತ್ತೊಂದು ತೇಪೆ ಹಾಕಲಾಗುತ್ತಿತ್ತು)

ಮುಸ್ಲಿಮರ ಔನ್ನತ್ಯದ ರಹಸ್ಯ ಮತ್ತು ಹ. ಉಮರ್‌ರ(ರ) ಆದರ್ಶ

(480) عَنْ طَارِقٍ قَالَ خَرَجَ عُمَرُ رضی اللہ عنہ إِلَى الشَّامِ وَمَعَنَا أَبُوْ عُبَيْدَةَ، فَأَتَوْا عَلَى مَخَاضَةٍ وَعُمَرُ عَلَى نَاقَةٍ لَهُ، فَنَزَلَ وَخَلَعَ خُفَّيْهِ وَوَضَعَهُمَا عَلَى عَاتِقِهِ وَأَخَذَ بِزِمَامِ نَاقَتِهِ فَخَاضَ، فَقَالَ أَبُوْ عُبَيْدَةَ إِنَّكَ تَفْعَلُ هٰذَا؟ مَا يَسُرُّنِيْ أَنَّ أَهْلَ الْبَلَدِ اِسْتَشْرَفُوْكَ، فَقَالَ أَوَّهْ، وَلَوْ يَقُلْ ذَا غَيْرُكَ أَبَا عُبَيْدَةَ جَعَلْتُهُ نَكَالًا لِأُمَّةِ مُحَمَّدٍ، إِنَّا كُنَّا أَذَلَّ قَوْمٍ فَأَعَزَّنَا اللّٰهُ بِالْإِسْلَامِ، فَمَهْمَا نَطْلُبِ الْعِزَّ بِغَيْرِ مَا أَعَزَّنَا اللّٰهُ أَذَلَّنَا اللّٰهُ (المنذری بحوالہ مستدرک حاکم)

ತಾರಿಕ್ ಹೇಳುತ್ತಾರೆ- ಹ. ಉಮರ್(ರ) ಖಲೀಫರೆಂಬ ನೆಲೆಯಲ್ಲಿ ಒಂಟೆಯ ಮೇಲೆ ಸವಾರಿ ಮಾಡುತ್ತಾ ಸಿರಿಯಾ ದೇಶಕ್ಕೆ ಅಧಿಕೃತ ಭೇಟಿಗಾಗಿ ಹೊರಟರು. ದಾರಿ ಮಧ್ಯೆ ಒಂದು ಸ್ಥಳದಲ್ಲಿ ಒಂದು ನದಿಯನ್ನು ದಾಟಬೇಕಾಗಿತ್ತು. (ಅದರಲ್ಲಿ ನೀರು ಕಡಿಮೆಯಿತ್ತು) ಹ. ಉಮರ್(ರ) ಒಂಟೆಯಿಂದ ಇಳಿದು ತಮ್ಮ ಚರ್ಮದ ಪಾದರಕ್ಷೆಯನ್ನು ಕಳಚಿ ಹೆಗಲ ಮೇಲಿಟ್ಟು, ಒಂಟೆಯ ಮೂಗುದಾರ ಹಿಡಿದು ನದಿಗಿಳಿದರು. ಆಗ ಹ. ಅಬೂ ಉಬೈದಾ(ರ) ಹೀಗೆಂದರು- ತಾವು ಅಮೀರುಲ್ ಮುಅ್‌ಮಿನೀನ್ ಮತ್ತು ಖಲೀಫಾ (ಮುಸ್ಲಿಮರ ನಾಯಕ ಮತ್ತು ಆಡಳಿತಗಾರ) ಆಗಿದ್ದುಕೊಂಡು ಹೀಗೆ ಮಾಡುವುದೇ? ನಗರ ವಾಸಿಗಳಾದ ಕ್ರೈಸ್ತರು ತಮ್ಮನ್ನು ಈ ಅವಸ್ಥೆಯಲ್ಲಿ ನೋಡುವುದು ನನಗೆ ಸರಿ ಕಾಣುವುದಿಲ್ಲ. (ಅಂದರೆ ನೀವು ಒಂಟೆಯ ಬದಲು ಅತಿ ವೇಗವಾಗಿ ಓಡುವ ಕುದುರೆಯೊಂದರ ಮೇಲಿದ್ದರೆ ಒಳ್ಳೆಯದು. ಕ್ರೈಸ್ತ ಬಾಂಧವರು ತಮ್ಮನ್ನು ಬಡವನೆಂದು ಭಾವಿಸಿಯಾರು.) ಹ. ಉಮರ್(ರ) ಹೇಳಿದರು- ಆಹ್! ಅಬೂ ಉಬೈದಾ! ನೀವೇನು ಹೇಳುತ್ತೀರಿ? ಈ ರೀತಿ ನೀವು ಯೋಚಿಸುತ್ತೀರಾ? ಬೇರೆ ಯಾರಾದರೂ ಈ ಮಾತನ್ನು ಹೇಳುತ್ತಿದ್ದರೆ ನಾನು ಅವರಿಗೆ ಕಠಿಣ ಶಿಕ್ಷೆ ನೀಡುತ್ತಿದ್ದೆ. (ನಾನು ನಿಮ್ಮ ಉನ್ನತ ಸ್ಥಾನವನ್ನು ಬಲ್ಲೆ. ಇಂತಹ ಮಾತು ಬಹುಶಃ ಆಲೋಚಿಸದೆಯೇ ನಿಮ್ಮ ಬಾಯಿಯಿಂದ ಹೊರಟಿರಬೇಕು.) ನೋಡಿ! ಅಬೂ ಉಬೈದಾ! ನಾವು ಅತ್ಯಂತ ನಿಕೃಷ್ಟ ಜನರಾಗಿದ್ದೆವು. ಅಲ್ಲಾಹನು ಇಸ್ಲಾಮಿನ ಮೂಲಕ ನಮಗೆ ಔನ್ನತ್ಯ ದಯಪಾಲಿಸಿದನು. ಆದುದರಿಂದ ನಾವು ಇಸ್ಲಾಮಿನ ಹೊರತಾದ ಯಾವುದೇ ವಸ್ತುವಿನ ಮೂಲಕ ಔನ್ನತ್ಯವನ್ನು ಬಯಸಿದರೆ ಅಲ್ಲಾಹನು ನಮ್ಮನ್ನು ಅಧೋಗತಿಗಿಳಿಸುವನು. (ಅರ್ಥಾತ್, ಔನ್ನತ್ಯವನ್ನು

ನಮ್ಮಿಂದ ಕಸಿದು ಕೊಳ್ಳುವನು. ಕುಫ್ರ್-ಶಿರ್ಕ್‌ಗಳ ದಾಸ್ಯ ನಮ್ಮ ಹಣೆಬರಹವಾಗಿರುವುದು.)

[ಅಲ್ ಮುಂದಿರಿ- ಮುಸ್ತದ್ರಕ್ ಹಾಕಿಮ್‌ನಿಂದ]

ಪರಲೋಕ ಚಿಂತೆ ಮತ್ತು ಪ್ರಭುವಿನ ಭೇಟಿಯ ಆಸಕ್ತಿ

ಸಹಾಬಿಗಳ ಆದರ್ಶ ಜೀವನದ ಕುರಿತ ಅನೇಕ ಹದೀಸ್‌ಗಳನ್ನು ನೀವು ಓದಿದ್ದೀರಿ. ಅವುಗಳನ್ನು ಓದಿ ಆ ಮಹಾನುಭಾವರು ಎಂತೆಂತಹ ಕಠಿಣ ಪರೀಕ್ಷೆಗಳನ್ನೆದುರಿಸಿರಬಹುದು ಎಂಬುದನ್ನು ಅಂದಾಜಿಸಿರಬಹುದು. ಸಂಕಷ್ಟಗಳ ಸರಮಾಲೆಗಳಿಗೂ ಅವರನ್ನು ಕೊಂಕಿಸಲು ಸಾಧ್ಯವಾಗದ ಮತ್ತು ಅತ್ಯಂತ ಕಠಿಣ ಪರಿಸ್ಥಿತಿಯಲ್ಲೂ ಅವರನ್ನು ಸ್ಥಿರವಾಗಿ ನಿಲ್ಲಿಸುವಂತೆ ಮಾಡಿದ ವಸ್ತು ಯಾವುದು ಎಂಬುದೇ ಮುಖ್ಯ ಪ್ರಶ್ನೆ. ಅತಿ ದೊಡ್ಡ ಪೆಟ್ಟು ಆರ್ಥಿಕ ಪೆಟ್ಟೆಂದು ನೀವು ಬಲ್ಲಿರಿ. ಅದರಲ್ಲೂ ಅವರ ಪಾದಗಳು ವಿಚಲಿತವಾಗಲಿಲ್ಲ. ಅದೇ ರೀತಿ ಇನ್ನೊಂದು ಪ್ರಶ್ನೆಯೇನೆಂದರೆ ರಾಜಕೀಯ ಅಧಿಕಾರ ದೊರೆತ ಬಳಿಕವೂ ಲೌಕಿಕತೆಗೆ ಬಲಿ ಬೀಳದಂತೆ ಅವರನ್ನು ತಡೆದುದು ಯಾವುದು? ಇಂತಹ ಪ್ರಶ್ನೆಗಳಿಗೆ, ಮುಂದೆ ಬರಲಿರುವ ಹದೀಸ್‌ಗಳು ಉತ್ತರಿಸಲಿವೆ-

---

(481) عَنْ أَسْمَاءَ بِنْتِ أَبِي بَكْرٍ قَالَتْ: قَامَ رَسُوْلُ اللّٰهِ صلى الله عليه وسلم خَطِيْبًا، فَذَكَرَ فِتْنَةَ الْقَبْرِ الَّتِي يُفْتَتَنُ فِيْهَا الْمَرْءُ، فَلَمَّا ذَكَرَ ذٰلِكَ ضَجَّ الْمُسْلِمُوْنَ ضَجَّةً

(بخاری)

ಹ. ಅಸ್ಮಾ ಬಿಂತಿ ಅಬೂಬಕರ್(ರ) ಹೇಳುತ್ತಾರೆ- ಒಂದು ದಿನ ಪ್ರವಾದಿಯವರು(ಸ), ಪ್ರವಚನದಲ್ಲಿ ಗೋರಿಯೊಳಗಿನ ಪರೀಕ್ಷೆಯ ವಿಷಯ ವಿವರಿಸಿದಾಗ ಮುಸ್ಲಿಮರು ಬಿಕ್ಕಿ ಬಿಕ್ಕಿ ಅತ್ತರು. *[ಬುಖಾರಿ]*

ಟಿಪ್ಪಣಿ: ಗೋರಿಯು ಪರಲೋಕದ ಪ್ರಥಮ ಹಂತವಾಗಿದೆ. ಗೋರಿಯೊಳಗಿನ ಮೂರು ಪ್ರಶ್ನೆಗಳಿಗೆ ಸರಿಯಾದ ಉತ್ತರ ನೀಡಲಾದೀತೇ ಎಂಬ ಚಿಂತೆಯು ಅವರನ್ನು ಕಾಡುತ್ತಿತ್ತು. ಅದಕ್ಕಾಗಿ ಅವರು ಅತ್ತಿದ್ದರು.

---

(482) عَنْ عَائِشَةَ اَنَّهَا ذَكَرَتِ النَّارَ فَبَكَتْ، فَقَالَ رَسُوْلُ اللهِ صلى الله عليه وسلم مَا يُبْكِيْكِ؟ قَالَتْ ذَكَرْتُ النَّارَ فَبَكَيْتُ، فَهَلْ تَذْكُرُوْنَ اَهْلِيْكُمْ يَوْمَ الْقِيَامَةِ؟ قَالَ اَمَّا فِيْ ثَلَاثَةِ مَوَاطِنَ فَلَا يَذْكُرُ اَحَدٌ اَحَدًا، عِنْدَ الْمِيْزَانِ حَتّٰى يَعْلَمَ اَيَخِفُّ مِيْزَانُهُ اَمْ يَثْقُلُ، وَعِنْدَ الْكِتَابِ حِيْنَ يُقَالُ هَاؤُمُ اقْرَءُوْا كِتَابِيَهْ حَتّٰى يَعْلَمَ اَيْنَ يَقَعُ كِتَابُهُ فِيْ يَمِيْنِهِ اَمْ فِيْ شِمَالِهِ مِنْ وَرَاءِ ظَهْرِهِ، وَعِنْدَ الصِّرَاطِ اِذَا وُضِعَ بَيْنَ ظَهْرَيْ جَهَنَّمَ (ابوداؤد)

ಹ. ಆಯಿಶಾರಿಗೆ(ರ) ನರಕದ ನೆನಪಾದಾಗ ಅತ್ತು ಬಿಟ್ಟರು. ಪ್ರವಾದಿ(ಸ) ಕೇಳಿದರು- ನೀನು ಅತ್ತದ್ದೇಕೆ? ಅವರು ಹೇಳಿದರು- ನರಕದ ನೆನಪಾದಾಗ ಅಳು ಬಂತು. ಪ್ರವಾದಿ ವರ್ಯರೇ(ಸ) ತಾವು ನಿರ್ಣಾಯಕ ದಿನದಂದು ತಮ್ಮ ಪತ್ನಿಯರನ್ನು ನೆನಪಿಸುವಿರಾ? ಪ್ರವಾದಿ(ಸ) ಹೇಳಿದರು- ಮೂರು ಸಂದರ್ಭಗಳಲ್ಲಿ ಯಾರೂ ಯಾರನ್ನೂ ನೆನಪಿಸಲಾರರು.

1. ಕರ್ಮಗಳನ್ನು ತೂಗುವ ಸಂದರ್ಭ. ಅಂದು ಪ್ರತಿಯೊಬ್ಬನೂ ತನ್ನ ಕರ್ಮದ ತಟ್ಟೆ ಭಾರವಾಗಿರುವುದೋ ಹಗುರವಾಗಿರುವುದೋ ಎಂಬ ಚಿಂತೆಯಲ್ಲಿರುವನು.

2. ಕರ್ಮಪತ್ರದ ಪರಿಣಾಮವನ್ನು ಕೈಯಲ್ಲಿ ಹಿಡಿಸುವಾಗ. ಅದನ್ನು ಬಲಗೈಯಲ್ಲಿ ನೀಡಲಾಗುವುದೋ ಅಥವಾ ಬೆನ್ನ ಹಿಂದಿನಿಂದ ಎಡಗೈಯಲ್ಲಿ ನೀಡಲಾಗುವುದೋ ಎಂಬ ಚಿಂತೆಯಲ್ಲಿರುವನು.

3. ನರಕದ ಮೇಲೆ ಸಿರಾತ್ ಸೇತುವೆ ಇಡಲಾಗಿ ಮಾನವನು ಅದರಿಂದ ದಾಟುವ ಸಂದರ್ಭ. *[ಅಬೂ ದಾವೂದ್]*

---

(483) عَنْ عَدِيٍّ قَالَ كَانَ الرَّجُلُ مِنْ اَصْحَابِ مُحَمَّدٍ صلى الله عليه وسلم اِذَا زُكِّيَ قَالَ، اَللّٰهُمَّ لَا تُؤَاخِذْنِيْ بِمَا يَقُوْلُوْنَ وَاغْفِرْ لِيْ مَا لَا يَعْلَمُوْنَ

(الادب المفرد امام بخاریؒ)

ಹ. ಅದಿಯ್ಯ್(ರ) ಹೇಳುತ್ತಾರೆ- ಪ್ರವಾದಿಯವರ(ಸ) ಸಂಗಾತಿಗಳನ್ನು ಯಾರಾದರೂ ಹೊಗಳಿದರೆ ಅವರು ಹೀಗೆ ಹೇಳುತ್ತಿದ್ದರು- ಓ ಅಲ್ಲಾಹ್! ಇವರು ನನ್ನ ಯಾವ ಗುಣಗಳನ್ನು

ಹೊಗಳುತ್ತಾರೋ (ಅವು ನನ್ನಲ್ಲಿಲ್ಲ) ಅದರ ಆಧಾರದಲ್ಲಿ ನನ್ನನ್ನು ಹಿಡಿಯಬೇಡ ಮತ್ತು ನನ್ನ ಯಾವ ದೋಷಗಳನ್ನು ಇವರು ತಿಳಿದಿಲ್ಲವೋ ಅವುಗಳನ್ನು ಕ್ಷಮಿಸಿ ಬಿಡು.

[ಅಲ್ ಅದಬುಲ್ ಮುಫ್ರದ್- ಇಮಾಮ್ ಬುಖಾರಿ]

---

(484) عَنْ عَبْدِ اللّٰہِ بْنِ مَسْعُوْدٍ قَالَ ، لَمَّا نَزَلَتْ اَلَّذِیْنَ آمَنُوْا وَلَمْ یَلْبِسُوْا اِیْمَانَہُمْ بِظُلْمٍ اُوْلٰئِکَ لَہُمُ الْاَمْنُ وَہُمْ مُّہْتَدُوْنَ " شَقَّ ذٰلِکَ عَلٰی اَصْحَابِ رَسُوْلِ اللّٰہِ وَقَالُوْا اَیُّنَا لَمْ یَظْلِمْ نَفْسَہٗ ؟ فَقَالَ رَسُوْلُ اللّٰہِ صلی اللہ علیہ وسلم لَیْسَ کَمَا تَظُنُّوْنَ ، اِنَّمَا ہُوَ کَمَا قَالَ لُقْمَانُ لِابْنِہٖ یَا بُنَیَّ لَا تُشْرِکْ بِاللّٰہِ اِنَّ الشِّرْکَ لَظُلْمٌ عَظِیْمٌ " (مسند احمد)

ಹ. ಅಬ್ದುಲ್ಲಾ ಬಿನ್ ಮಸ್‌ವೂದ್(ರ) ಹೇಳುತ್ತಾರೆ- ಸೂರಃ ಅನ್‌ಆಮ್‌ನ 82ನೆಯ ಆಯತ್ ಅವತೀರ್ಣಗೊಂಡಾಗ ಪ್ರವಾದಿಯವರ(ಸ) ಸಂಗಾತಿಗಳು ಕಳವಳಗೊಂಡು, ತಮ್ಮ ಮೇಲೆ ತಾವೇ ಅಕ್ರಮವೆಸಗದವರು ನಮ್ಮಲ್ಲಿ ಯಾರಿದ್ದಾರೆ ಎಂದು ಕೇಳಿದರು. (ಅರ್ಥಾತ್, ಪಾಪ ಸಂಭವಿಸದ ಯಾರೂ ಇಲ್ಲದಿರುವಾಗ ಮೋಕ್ಷ ಹೇಗೆ ಲಭಿಸೀತು?) ಪ್ರವಾದಿ(ಸ) ಹೇಳಿದರು- ಈ ಆಯತ್‌ನ ಬಗ್ಗೆ ನೀವು ಗ್ರಹಿಸಿದ ಅರ್ಥ ಸರಿಯಲ್ಲ. ಈ ಆಯತ್‌ನಲ್ಲಿ ಅಕ್ರಮವೆಂದರೆ ಪಾಪವಲ್ಲ. ಬದಲಾಗಿ ಶಿರ್ಕ್(ಬಹು ದೇವಾರಾಧನೆ) ಅನ್ನು ಇಲ್ಲಿ ಅಕ್ರಮ ವೆಂದು ಹೇಳಲಾಗಿದೆ. ಸೂರಃ ಲುಕ್ಮಾನ್‌ನ 13ನೆಯ ಆಯತ್‌ನಲ್ಲಿ ಹ. ಲುಕ್ಮಾನ್ ಅವರು ತನ್ನ ಪುತ್ರನಿಗೆ ಉಪದೇಶ ಮಾಡುತ್ತಾ, ಶಿರ್ಕ್ ಮಹಾ ಅಕ್ರಮವಾಗಿದೆಯೆಂದು ಹೇಳಿದ್ದರು.

[ಅಹ್ಮದ್]

ಟಿಪ್ಪಣಿ: ಆಯತ್‌ನ ಅರ್ಥ ಹೀಗಿದೆ- "ಸತ್ಯವಿಶ್ವಾಸ ಸ್ವೀಕಾರ ಮಾಡಿದವರು ಮತ್ತು ತಮ್ಮ ಈಮಾನನ್ನು ಅಕ್ರಮ(ಶಿರ್ಕ್)ದೊಂದಿಗೆ ಕಲಬೆರಕೆ ಮಾಡದವರು ಅಲ್ಲಾಹನ ಶಿಕ್ಷೆಯಿಂದ ಪಾರಾಗುವರು. ಅವರೇ ಸನ್ಮಾರ್ಗಿಗಳೂ ವಿಜಯಿಗಳೂ ಆಗಿರುವರು." ಸಹಾಬಿಗಳಲ್ಲಿ ಪರಲೋಕದ ಚಿಂತೆ ಯಾವ ಮಟ್ಟದಲ್ಲಿತ್ತೆಂಬುದನ್ನು ಈ ಹದೀಸ್ ತೋರಿಸುತ್ತದೆ.

---

(485) عَنْ اُمِّ الدَّرْدَاءِ عَنْ اَبِی الدَّرْدَاءِ قَالَتْ ، قُلْتُ لَہٗ مَا لَکَ لَا تَطْلُبُ کَمَا یَطْلُبُ فُلَانٌ وَفُلَانٌ ؟ قَالَ اِنِّیْ سَمِعْتُ رَسُوْلَ اللّٰہِ صلی اللہ علیہ وسلم یَقُوْلُ اِنَّ وَرَاءَکُمْ عَقَبَۃً کَئُوْدًا لَا یَجُوْزُہَا الْمُثْقَلُوْنَ ، فَاَنَا اُحِبُّ اَنْ اَتَخَفَّفَ لِتِلْکَ الْعَقَبَۃِ

(المنذری بحوالہ طبرانی)

ಹ. ಉಮ್ಮುದರ್ದಾ(ರ) ಹೇಳುತ್ತಾರೆ- ನಾನು ನನ್ನ ಪತಿ ಅಬೂ ದರ್ದಾರೊಡನೆ ಇಂತಿಂತಹ ಜನರು ಸಂಪಾದನೆ ಮಾಡಲು ಪ್ರಯತ್ನಿಸುವಂತೆ ನೀವೇಕೆ ಪ್ರಯತ್ನಿಸುವುದಿಲ್ಲ ಎಂದು ಕೇಳಿದೆ. ಅವರು ಹೀಗೆ ಉತ್ತರಿಸಿದರು- ನಾನು ಪ್ರವಾದಿ(ಸ) ಈ ರೀತಿ ಹೇಳುವುದಾಗಿ ಕೇಳಿದ್ದೇನೆ: ಪರಲೋಕದ ದಾರಿ ಹಿಡಿದಿರುವ ಯಾತ್ರಿಕರೇ! ನಿಮ್ಮ ಮುಂದೆ ಬಹಳ ಕಠಿಣತರವಾದ ಉನ್ನತ ಬೆಟ್ಟವೊಂದಿದೆ. ಹೊರೆ ಹೊತ್ತಿರುವ ಯಾತ್ರಿಕರಿಗೆ ಅದನ್ನು ಏರಲು ಸಾಧ್ಯವಿಲ್ಲ. ಈ ಲೋಕದಿಂದ ಹಗುರವಾಗಿ ನಿರ್ಗಮಿಸುವ ಮೂಲಕ, ಆ ಉನ್ನತ ಬೆಟ್ಟವನ್ನು ದಾಟಲು ನನಗೆ ಸುಲಭವಾದೀತೆಂದು ನಾನು ಭಾವಿಸುತ್ತೇನೆ.

[ಅಲ್‌ಮುಂದಿರಿ- ತಬ್ರಾನಿಯಿಂದ]

---

(486) عَنْ رَبِيْعَةَ بْنِ كَعْبٍ قَالَ، كُنْتُ اَخْدُمُ النَّبِيَّ صلى الله عليه وسلم نَهَارِيْ،
فَاِذَا كَانَ اللَّيْلُ اَوَيْتُ اِلٰى رَسُوْلِ اللهِ صلى الله عليه وسلم فَبِتُّ فَلَا اَزَالُ اَسْمَعُهُ يَقُوْلُ
سُبْحَانَ اللهِ سُبْحَانَ اللهِ سُبْحَانَ رَبِّيْ، حَتّٰى اَمَلَّ اَوْ تَغْلِبَنِيْ عَيْنِيْ فَاَنَامُ، فَقَالَ يَوْمًا يَا رَبِيْعَةُ سَلْنِيْ
فَاُعْطِيَكَ، فَقُلْتُ اَنْظِرْنِيْ حَتّٰى اَنْظُرَ، وَتَذَكَّرْتُ اَنَّ الدُّنْيَا فَانِيَةٌ مُنْقَطِعَةٌ، فَقُلْتُ يَا رَسُوْلَ
اللهِ اَسْاَلُكَ اَنْ تَدْعُوَ اللهَ اَنْ يُنَجِّيَنِيْ مِنَ النَّارِ وَيُدْخِلَنِي الْجَنَّةَ، فَسَكَتَ رَسُوْلُ اللهِ
صلى الله عليه وسلم ثُمَّ قَالَ مَنْ اَمَرَكَ بِهٰذَا؟ فَقُلْتُ مَا اَمَرَنِيْ بِهِ اَحَدٌ وَلٰكِنِّيْ عَلِمْتُ
اَنَّ الدُّنْيَا مُنْقَطِعَةٌ فَانِيَةٌ وَاَنْتَ مِنَ اللهِ بِالْمَكَانِ الَّذِيْ اَنْتَ مِنْهُ، فَاَحْبَبْتُ اَنْ
تَدْعُوَ اللهَ لِيْ، قَالَ اِنِّيْ فَاعِلٌ فَاَعِنِّيْ عَلٰى نَفْسِكَ بِكَثْرَةِ السُّجُوْدِ (المنذري)

ರಬೀಅ ಬಿನ್ ಕಅಬ್(ರ) ಹೇಳುತ್ತಾರೆ- ನಾನು ಹಗಲಿಡೀ ಪ್ರವಾದಿವರ್ಯರ(ಸ) ಸೇವೆ ಮಾಡುತ್ತಿದ್ದೆ. ರಾತ್ರೆಯಲ್ಲೂ ಅವರ ಬಳಿಗೆ ಹೋಗಿ ಅಲ್ಲೇ ಮಲಗುತ್ತಿದ್ದೆ. ನಾನು ಅವರ ಬಾಯಿಯಿಂದ ನಿರಂತರ ಸುಬ್ಹಾನಲ್ಲಾಹ್, ಸುಬ್ಹಾನಲ್ಲಾಹ್, ಸುಬ್ಹಾನರಬ್ಬೀ ಎಂಬ ಪದಗಳನ್ನು ಕೇಳುತ್ತಿದ್ದೆ. ಕೊನೆಗೂ ನಾನು ಆಯಾಸದಿಂದ ತೂಕಡಿಸಿ ನಿದ್ರೆ ಹೋಗುತ್ತಿದ್ದೆ. ಒಂದು ದಿನ ಪ್ರವಾದಿಯವರು(ಸ), ರಬೀಅ! ನನ್ನೊಡನೆ ಏನಾದರೂ ಕೇಳಿರಿ, ನಾನು ಕೊಡುವೆನು ಎಂದರು. ನಾನು ಹೇಳಿದೆ: 'ಏನು ಕೇಳಬೇಕೆಂದು ಆಲೋಚಿಸಲು ನನಗೆ ಸ್ವಲ್ಪ ಕಾಲಾವಕಾಶ ಕೊಡಿ.' ತರುವಾಯ ನನಗೆ ತೋಚಿತು, ಈ ಲೋಕವು ನಶ್ವರ ತಾಣ, ಇದರಲ್ಲಿ ನನಗೇನೂ ಕೇಳಲಿಕ್ಕಿಲ್ಲ. ಆದುದರಿಂದ ನಾನು ಹೇಳಿದೆ- 'ಅಲ್ಲಾಹನ ಸಂದೇಶವಾಹಕರೇ!

ಅಲ್ಲಾಹನು ನನ್ನನ್ನು ನರಕದಿಂದ ಪಾರುಗೊಳಿಸಿ ಸ್ವರ್ಗದಲ್ಲಿ ನೆಲೆಗೊಳಿಸುವಂತೆ ಪ್ರಾರ್ಥಿಸಿರಿ'. ಪ್ರವಾದಿ(ಸ) ನನ್ನ ಮಾತು ಕೇಳಿ ಸ್ವಲ್ಪ ಹೊತ್ತು ಮೌನವಾದರು. ತರುವಾಯ, ನಿಮಗೆ ಇದನ್ನು ಯಾರು ಹೇಳಿಕೊಟ್ಟರು ಎಂದು ಕೇಳಿದರು. ನಾನು ಹೇಳಿದೆ- ಯಾರೂ ಹೇಳಿ ಕೊಡಲಿಲ್ಲ. ಬದಲಾಗಿ ಈ ಲೋಕವು ನಶ್ವರವಾಗಿದ್ದು, ನಾಶವಾಗುವ ವಸ್ತುವಾಗಿದೆ. ಅದರಲ್ಲಿ ನನಗೆ ಬೇಡಲಿಕ್ಕೇನಿದೆ ಎಂದು ನನಗೆ ತೋಚಿತು. ತಾವು ಅಲ್ಲಾಹನ ಅತ್ಯಂತ ಆಪ್ತ ದಾಸರಾಗಿರುವಿರೆಂದು ನನಗೇ ತಿಳಿದಿದೆ. ಆದುದರಿಂದ ಪರಲೋಕ ಮೋಕ್ಷದ ಪ್ರಸ್ತಾಪವನ್ನು ತಮ್ಮ ಮುಂದಿಟ್ಟು ತಾವು ನನಗಾಗಿ ಪ್ರಾರ್ಥಿಸಬೇಕೆಂದು ನಾನು ಬಯಸಿದೆ. ಆಗ ಪ್ರವಾದಿ(ಸ) ಹೇಳಿದರು- ನಾನು ಖಂಡಿತ ನಿಮಗಾಗಿ ಪ್ರಾರ್ಥಿಸುವೆನು. ನೀವು ಹೆಚ್ಚು ಸಜ್ದಾಗಳನ್ನು (ನಫಿಲ್ ನಮಾಝ್) ಮಾಡುವ ಮೂಲಕ ಈ ಕಾರ್ಯದಲ್ಲಿ ನನಗೆ ನೆರವಾಗಿರಿ. *[ಅಲ್ ಮುಂದಿರಿ]*

---

(487) عَنْ أَنَسٍ قَالَ، انْطَلَقَ رَسُوْلُ اللهِ صلى الله عليه وسلم وَأَصْحَابُهُ حَتّٰى سَبَقُوا الْمُشْرِكِيْنَ إِلٰى بَدْرٍ، وَجَاءَ الْمُشْرِكُوْنَ، فَقَالَ رَسُوْلُ اللهِ صلى الله عليه وسلم لَا يَتَقَدَّمَنَّ أَحَدٌ مِنْكُمْ إِلٰى شَيْءٍ حَتّٰى أَكُوْنَ أَنَا دُوْنَهُ، فَدَنَا الْمُشْرِكُوْنَ فَقَالَ رَسُوْلُ اللهِ صلى الله عليه وسلم قُوْمُوْا إِلٰى جَنَّةٍ عَرْضُهَا السَّمَاوَاتُ وَالْأَرْضُ، قَالَ عُمَيْرُ بْنُ الْحُمَامِ يَا رَسُوْلَ اللهِ جَنَّةٌ عَرْضُهَا السَّمَاوَاتُ وَالْأَرْضُ؟ قَالَ نَعَمْ. قَالَ بَخٍ بَخٍ. فَقَالَ رَسُوْلُ اللهِ مَا يَحْمِلُكَ عَلٰى قَوْلِكَ بَخٍ بَخٍ؟ فَقَالَ لَا يَا رَسُوْلَ اللهِ إِلَّا رَجَاءَ أَنْ أَكُوْنَ مِنْ أَهْلِهَا، قَالَ فَإِنَّكَ مِنْ أَهْلِهَا، فَأَخْرَجَ تَمَرَاتٍ مِنْ قَرَنِهِ، فَجَعَلَ يَأْكُلُ مِنْهُنَّ، ثُمَّ قَالَ إِنْ أَنَا حَيِيْتُ حَتّٰى آكُلَ تَمَرَاتِيْ هٰذِهٖ إِنَّهَا الْحَيَاةُ طَوِيْلَةٌ فَرَمٰى بِمَا كَانَ مَعَهُ مِنَ التَّمَرَاتِ، ثُمَّ قَاتَلَهُمْ حَتّٰى قُتِلَ رَضِيَ اللهُ عَنْهُ (مسلم)

ಹ. ಅನಸ್ ಹೇಳುತ್ತಾರೆ: ಪ್ರವಾದಿ(ಸ) ಮತ್ತು ಅವರ ಸಂಗಾತಿಗಳು ಮದೀನಾ ದಿಂದ ಹೊರಟು ಮಕ್ಕಾದ ಬಹುದೇವಾರಾಧಕರಿಗಿಂತ ಮುಂಚೆ ಬದ್ರ್‌ಗೆ ತಲಪಿದರು. ಅಲ್ಲಿ ಅವರು ತಮ್ಮ ಯೋಧ ಸಂಗಾತಿಗಳೊಡನೆ, ಎಚ್ಚರಿಕೆ! ನೀವು ಯಾರೂ ಮುಂದಡಿಯಿಡಬಾರದು.

ನಾನು ಮುಂದೆ ಹೋಗುವೆನು. ನೀವು ನನ್ನನ್ನು ಹಿಂಬಾಲಿಸಿರಿ. ಮಕ್ಕಾದ ಬಹುದೇವಾರಾಧಕ ಸೈನ್ಯದ ಹತ್ತಿರ ತಲಪಿದಾಗ ಪ್ರವಾದಿ(ಸ) ಹೇಳಿದರು- ಭೂಮಿ-ಆಕಾಶಗಳಷ್ಟು ವಿಶಾಲವಾದ ಆ ಸ್ವರ್ಗವನ್ನು ಗಳಿಸಲು ಧಾವಿಸಿರಿ. ಆಗ ಉಮೈರ್(ರ) ಕೇಳಿದರು, ಸ್ವರ್ಗದ ವೈಶಾಲ್ಯ ಭೂಮಿ- ಆಕಾಶಗಳಿಗೆ ಸಮಾನವಾಗಿದೆಯೇ? ಪ್ರವಾದಿ(ಸ) ಅವರು ಹೌದೆಂದಾಗ ಉಮೈರ್ ಭೇಷ್! ಎಂದರು. ಆಗ ಪ್ರವಾದಿ(ಸ) ಕೇಳಿದರು- ನೀವು ಭೇಷ್ ಎಂದೇಕೆ ಹೇಳಿದಿರಿ? ಉಮೈರ್ ಹೇಳಿದರು- ಏಕೆಂದರೆ ನನಗೆ ಸ್ವರ್ಗಕ್ಕೆ ಹೋಗುವ ಅಭಿಲಾಷೆಯಿದೆ. ಪ್ರವಾದಿ(ಸ) ಹೇಳಿದರು- ನೀವು ಸ್ವರ್ಗಕ್ಕೆ ಹೋಗುವಿರಿ. ತರುವಾಯ ಉಮೈರ್ ಗೊಂಚಲಿನಿಂದ ಖರ್ಜೂರವನ್ನು ತಿನ್ನಲಾರಂಭಿಸಿದರು. ಆಗಲೇ ಅವರಿಗೆ ತೋಚಿತು- "ಖರ್ಜೂರ ತಿಂದು ಮುಗಿಸಲು ಇನ್ನೂ ಸಮಯ ಬೇಕಾಗುವುದು. ಈಗ ಯುದ್ಧ ಆರಂಭವಾಗಿರುವಾಗ ನಾನೇಕೆ ಖರ್ಜೂರ ತಿನ್ನುವುದರಲ್ಲಿ ನನ್ನ ಸಮಯ ಹಾಳು ಮಾಡಬೇಕು." ಹಾಗೆ ಭಾವಿಸಿ ಅವರು ಕೈಯಲ್ಲಿದ್ದ ಖರ್ಜೂರಗಳನ್ನು ಅತ್ತ ಬಿಸಾಡಿ ಮುಶ್ರಿಕರೊಂದಿಗೆ ಹೋರಾಡ ತೊಡಗಿದರು. ಅನೇಕರನ್ನು ವಧಿಸಿ ಕೊನೆಗೆ ಹುತಾತ್ಮರಾದರು. ಅಲ್ಲಾಹನು ಅವರಿಂದ ಸಂತುಷ್ಟನಾಗಲಿ!

[ಮುಸ್ಲಿಮ್]

ಟಿಪ್ಪಣಿ: ಈ ಹದೀಸ್‌ನಿಂದ ತಿಳಿದು ಬರುವುದೇನೆಂದರೆ ಪ್ರವಾದಿಯವರು(ಸ) ಬದ್ರ್ ಯುದ್ಧದಲ್ಲಿ ತಮ್ಮ ಸೇನೆಯ ನೇತೃತ್ವ ವಹಿಸಿದ್ದರು. ಅವರು ಚಪ್ಪರದೊಳಗೆ ನೆರಳಲ್ಲಿ ಕುಳಿತುಕೊಂಡು ವಿಜಯಕ್ಕಾಗಿ ಪ್ರಾರ್ಥನೆ ಮಾಡುತ್ತಿದ್ದಾಗ ಸಹಾಬಿಗಳು ನಾಯಕನಿಲ್ಲದೆ ಹೋರಾಡುತ್ತಿದ್ದರೆಂಬುದು ಸರಿಯಲ್ಲ. ಬದಲಾಗಿ ಪ್ರವಾದಿ(ಸ) ತಮ್ಮ ಸೇನೆಯ ನಾಯಕತ್ವವನ್ನು ತಾವೇ ವಹಿಸಿದ್ದರು.

(488) عَنْ أَنَسٍ قَالَ، غَابَ عَمِّيْ أَنَسُ بْنُ النَّضْرِ عَنْ قِتَالِ بَدْرٍ، فَقَالَ يَا رَسُوْلَ اللّٰهِ
غِبْتُ عَنْ أَوَّلِ قِتَالٍ قَاتَلْتَ الْمُشْرِكِيْنَ، لَئِنْ أَشْهَدَنِي اللّٰهُ قِتَالَ الْمُشْرِكِيْنَ لَيَرَيَنَّ اللّٰهُ
مَا أَصْنَعُ، فَلَمَّا كَانَ يَوْمُ أُحُدٍ وَانْكَشَفَ الْمُسْلِمُوْنَ قَالَ، اَللّٰهُمَّ إِنِّيْ أَعْتَذِرُ إِلَيْكَ مِمَّا
صَنَعَ هٰؤُلَاءِ وَأَبْرَأُ إِلَيْكَ مِمَّا صَنَعَ هٰؤُلَاءِ يَعْنِي الْمُشْرِكِيْنَ، ثُمَّ تَقَدَّمَ وَاسْتَقْبَلَهُ سَعْدُ
بْنُ مُعَاذٍ فَقَالَ يَا سَعْدَ بْنَ مُعَاذٍ الْجَنَّةَ وَرَبِّ النَّضْرِ، إِنِّيْ أَجِدُ رِيْحَهَا دُوْنَ
أُحُدٍ، قَالَ سَعْدٌ فَمَا اسْتَطَعْتُ يَا رَسُوْلَ اللّٰهِ أَصْنَعُ مَا صَنَعَ، قَالَ أَنَسٌ فَوَجَدْنَا
بِهِ بِضْعًا وَثَمَانِيْنَ ضَرْبَةً بِسَيْفٍ أَوْ طَعْنَةً بِرُمْحٍ أَوْ رَمْيَةً بِسَهْمٍ، وَوَجَدْنَاهُ قَدْ
قُتِلَ وَقَدْ مَثَّلَ بِهِ الْمُشْرِكُوْنَ فَمَا عَرَفَهُ أَحَدٌ إِلَّا أُخْتُهُ بِبَنَانِهِ، فَقَالَ كُنَّا نَرٰى
أَوْ نَظُنُّ أَنَّ هٰذِهِ الْآيَةَ نَزَلَتْ فِيْهِ وَفِيْ أَشْبَاهِهِ "مِنَ الْمُؤْمِنِيْنَ رِجَالٌ صَدَقُوْا مَا
عَاهَدُوا اللّٰهَ عَلَيْهِ الخ (بخاری، مسلم، نسائی)

ಹ. ಅನಸ್(ರ) ಹೇಳುತ್ತಾರೆ- ನನ್ನ ಪಿತೃ ಸಹೋದರ ಅನಸ್ ಬಿನ್ ನದ್ರ್ ಮದೀನಾದಲ್ಲಿರದ ಕಾರಣ ಅವರಿಗೆ ಬದ್ರ್‌ಯುದ್ಧದಲ್ಲಿ ಭಾಗವಹಿಸಲು ಸಾಧ್ಯವಾಗಿರಲಿಲ್ಲ. (ಅದರಿಂದ ಅವರಿಗೆ ತುಂಬಾ ಬೇಸರವಾಗಿತ್ತು) ಅವರು ಹೇಳಿದರು- ಅಲ್ಲಾಹನ ಸಂದೇಶ ವಾಹಕರೇ! ಇಸ್ಲಾಮ್ ಮತ್ತು ಕುಫ್ರ್‌ನ ನಡುವೆ ನಡೆದ ಪ್ರಥಮ ಯುದ್ಧದಲ್ಲಿ ಭಾಗವಹಿಸಲು ನನಗೆ ಸಾಧ್ಯವಾಗಲಿಲ್ಲ. ಇನ್ನೊಮ್ಮೆ ಮುಶ್ರಿಕರೊಂದಿಗೆ ಯುದ್ಧ ನಡೆದರೆ ಮತ್ತು ಅದರಲ್ಲಿ ಭಾಗವಹಿಸಲು ಅಲ್ಲಾಹನು ನನಗೆ ಅವಕಾಶಕೊಟ್ಟರೆ ನಾನೇನು ಮಾಡುವೆನೆಂದು ಅಲ್ಲಾಹನು ನೋಡಿಕೊಳ್ಳುವನು. ಅನಂತರ ಉಹುದ್ ಯುದ್ಧ ಸಂಭವಿಸಿತು. ಮುಸ್ಲಿಮರು ಗಾಬರಿಗೊಂಡು ಓಡತೊಡಗಿದಾಗ ಅನಸ್ ಬಿನ್ ನದ್ರ್ ಹೇಳಿದರು- ಓ ಅಲ್ಲಾಹ್! ಮುಸ್ಲಿಮರು ಮಾಡಿದ ಈ ಕೃತ್ಯಕ್ಕಾಗಿ ನಾನು ನಿನ್ನೊಡನೆ ಕ್ಷಮೆ ಯಾಚಿಸುತ್ತೇನೆ. ಮುಶ್ರಿಕರು ಮಾಡಿರುವ ಕೃತ್ಯಕ್ಕೂ ನನಗೂ ಯಾವುದೇ ಸಂಬಂಧವಿಲ್ಲವೆಂದು ಘೋಷಿಸುತ್ತೇನೆ. ತರುವಾಯ ಅನಸ್ ಬಿನ್ ನದ್ರ್ ಮುಂದೆ ಸಾಗಿದರು. ಸಅದ್ ಬಿನ್ ಮುಆದ್‌ರನ್ನು ಭೇಟಿಯಾದಾಗ ಹೀಗೆಂದರು-

ಓ ಸಅದ್! ಸಹಾಯ ಮಾಡುವ ಪ್ರಭುವಿನಾಣೆ! ನಾನು ಸ್ವರ್ಗದ ಕಡೆಗೆ ಹೋಗುತ್ತಾ ಇದ್ದೇನೆ. ಉಹುದ್ ಬೆಟ್ಟದ ಆಚೆ ನಾನು ಸ್ವರ್ಗದ ಸುವಾಸನೆಯನ್ನು ಅನುಭವಿಸುತ್ತಿದ್ದೇನೆ.

ವರದಿಗಾರ ಅನಸ್ ಬಿನ್ ಮಾಲಿಕ್(ರ) ಹೇಳುತ್ತಾರೆ- ನಾವು ಪಿತೃಸಹೋದರ ಅನಸ್‌ರ ಮೈಮೇಲೆ ಖಡ್ಗ, ಭರ್ಜಿ ಮತ್ತು ಬಾಣಗಳಿಂದಾದ 80ಕ್ಕೂ ಅಧಿಕ ಗಾಯಗಳನ್ನು ನೋಡಿದೆವು. ಅವರು ಮುಶ್ರಿಕರಿಂದ ವಧಿಸಲ್ಪಟ್ಟಿದ್ದರು. ಗುರುತಿಸಲು ಸಾಧ್ಯವಾಗದಷ್ಟು ನಿಷ್ಕರುಣೆಯಿಂದ ಮುಶ್ರಿಕರು ಅವರನ್ನು ವಧಿಸಿದ್ದರು. ಅವರ ಸಹೋದರಿಯು ಅವರ ಕೈ ಬೆರಳುಗಳನ್ನು ನೋಡಿ ಅವರನ್ನು ಗುರುತಿಸಿದರು. (ವರದಿಗಾರ) ಅನಸ್(ರ) ಹೇಳುತ್ತಾರೆ- ಸೂರಃ ಅಲ್ ಅಹ್‌ಝಾಬ್‌ನ 23ನೇ ಆಯತ್ ಇವರಂತಹ ಹುತಾತ್ಮರಿಗೆ ಅನ್ವಯವಾಗುತ್ತದೆಂದು ನಾವು ಭಾವಿಸುತ್ತೇವೆ. *[ಬುಖಾರಿ, ಮುಸ್ಲಿಮ್, ನಸಾಈ]*

ಟಿಪ್ಪಣಿ: ಆಯತ್‌ನ ಅನುವಾದ ಹೀಗಿದೆ: ಇವರು ಅಲ್ಲಾಹನೊಂದಿಗೆ ಪ್ರಾಮಾಣಿಕ ದಾಸ್ಯ-ಅನುಸರಣೆಯ ಕರಾರು ಮಾಡಿಕೊಂಡಿದ್ದ ಸತ್ಯವಿಶ್ವಾಸಿಗಳಾಗಿದ್ದಾರೆ. ಇವರ ಪೈಕಿ ಕೆಲವರಂತೂ ತಮ್ಮ ಹರಕೆಯನ್ನು ಪೂರ್ತಿಗೊಳಿಸಿದರು. (ಅಲ್ಲಾಹನ ಮಾರ್ಗದಲ್ಲಿ ಜೀವ ತೆತ್ತರು) ಇನ್ನು ಕೆಲವರು ತಮ್ಮ ಜೀವದ ಹರಕೆಯನ್ನು ಪೂರೈಸಲು ಆತುರದಿಂದ ನಿರೀಕ್ಷಿಸುವವರಾಗಿದ್ದಾರೆ. ಇವರು ತಮ್ಮ ಕರಾರಿನಲ್ಲಿ ಸ್ವಲ್ಪವೂ ಬದಲಾವಣೆ ಮಾಡಿಲ್ಲ.

(489) عن شداد بن الهاد أن رجلا من الأعراب جاء إلى النبي صلى الله عليه وسلم
فآمن به واتبعه ثم قال إني أهاجر معك، فأوصى به النبي صلى الله عليه وسلم بعض
أصحابه، فلما كانت غزاة غنم النبي صلى الله عليه وسلم فقسم وقسم له، فأعطى أصحابه
ما قسم له وكان يرعى ظهرهم فلما جاء دفعوه إليه، فقال ما هذا؟ قالوا قسم قسمه
لك النبي صلى الله عليه وسلم فأخذه، فجاء به إلى النبي صلى الله عليه وسلم فقال ما
هذا؟ قال قسمته لك، فقال ما على هذا اتبعتك، ولكن اتبعتك على أن أرمى إلى ههنا
وأشار إلى حلقه بسهم، فأموت فأدخل الجنة، فقال إن تصدق الله يصدقك، فلبثوا
قليلا ثم نهضوا إلى قتال العدو، فأتي به إلى النبي صلى الله عليه وسلم يحمل قد
أصابه سهم حيث أشار، فقال النبي صلى الله عليه وسلم أهو هو؟ قالوا نعم، قال
صدق الله فصدقه، ثم كفنه النبي صلى الله عليه وسلم في جبته التي عليه ثم
قدمه فصلى عليه وكان مما ظهر من صلاته اللهم هذا عبدك خرج مهاجرا
في سبيلك فقتل شهيدا، أنا شهيد على ذلك (نسائي)

ಶದ್ದಾದ್ ಬಿನ್ ಹಾದ್(ರ) ಹೇಳುತ್ತಾರೆ- ಒಬ್ಬ ಗ್ರಾಮೀಣ ಅರಬನು ಪ್ರವಾದಿಯವರ(ಸ) ಸನ್ನಿಧಿಯಲ್ಲಿ ಹಾಜರಾಗಿ ಸತ್ಯವಿಶ್ವಾಸ ಸ್ವೀಕರಿಸಿದನು. 'ನಾನು ಹಿಜ್ರತ್ ಮಾಡಿ ಬಂದು ತಮ್ಮ ಜೊತೆಯಲ್ಲಿ ಇಲ್ಲೇ ನೆಲೆಸುವೆನೆಂದು ಹೇಳಿದನು.' ಆಗ ಪ್ರವಾದಿಯವರು(ಸ) ಸಹಾಬಿಗಳಿಗೆ ಅವನ ಕುರಿತು, 'ಅವನ ಬಗ್ಗೆ ನಿಗಾ ವಹಿಸಿರಿ ಮತ್ತು ಅವನೊಂದಿಗೆ ಉತ್ತಮವಾಗಿ ವರ್ತಿಸಿರಿ' ಎಂದು ಉಪದೇಶಿಸಿದರು. ತರುವಾಯ ಅವನು ಯುದ್ಧದಲ್ಲಿ ಭಾಗವಹಿಸಿದನು. ಸಮರಾರ್ಜಿತದಲ್ಲಿ ಅವನಿಗೂ ಪಾಲು ಬಂತು. (ವಿತರಣೆಯ ಹೊತ್ತು ಅವನು ಇರಲಿಲ್ಲ) ಅವನು ಒಂಟೆ ಮೇಯಿಸಲು ಹೋಗಿದ್ದನು. ಪ್ರವಾದಿಯವರು(ಸ) ಅವನ ಪಾಲನ್ನು ಜನರಿಗೆ ನೀಡಿ ಅದನ್ನು ಆತನಿಗೆ ತಲಪಿಸುವಂತೆ ಆದೇಶಿಸಿದರು. ಅವನು ಬಂದಾಗ ಜನರು ಅವನ ಪಾಲನ್ನು ಅವನಿಗೆ ನೀಡಿದರು. ಅವನು ಅದೇನೆಂದು ಕೇಳಿದನು. ಅವರು,

ಇದು ಪ್ರವಾದಿ(ಸ) ನಿನಗೆ ನೀಡಿದ ಸಮರಾರ್ಜಿತದ ಪಾಲು ಎಂದರು. ಅವನು ಅದನ್ನು ತೆಗೆದುಕೊಂಡು ಪ್ರವಾದಿವರ್ಯರ ಬಳಿಗೆ ಹೋಗಿ, 'ಅಲ್ಲಾಹನ ಸಂದೇಶವಾಹಕರೇ! ಇದೇನು' ಎಂದು ಕೇಳಿದನು. ಪ್ರವಾದಿ(ಸ) ಹೇಳಿದರು- 'ನಾನು ನೀಡಿರುವ ನಿನ್ನ ಪಾಲು'. ಅವನು ಹೇಳಿದನು- 'ನಾನು ಇದಕ್ಕಾಗಿ ತಮ್ಮೊಂದಿಗೆ ಸೇರಿರಲಿಲ್ಲ. ನನ್ನ ಗಂಟಲಿಗೆ ವೈರಿಗಳ ಬಾಣ ತಾಗಿ ನಾನು ಸ್ವರ್ಗಕ್ಕೆ ಸೇರಲೆಂದು ಜಿಹಾದ್‌ನಲ್ಲಿ ಭಾಗವಹಿಸಿದ್ದೆ.' ಆಗ ಪ್ರವಾದಿ(ಸ) ಹೇಳಿದರು- 'ನಿನ್ನ ಆಸೆ ಸತ್ಯವೆಂದಾದರೆ ಅಲ್ಲಾಹನು ಅದನ್ನು ಪೂರ್ತಿಗೊಳಿಸುವನು.' ಅದರ ಕೆಲವೇ ದಿನಗಳ ಬಳಿಕ ಒಂದು ಯುದ್ಧ ನಡೆಯಿತು, ಜನರೂ ಹೋದರು. ಇವನೂ ಹೋದನು. ಜನರು ಅವನ ಮೃತದೇಹವನ್ನು ಎತ್ತಿ ಪ್ರವಾದಿಯವರ(ಸ) ಬಳಿಗೆ ತಂದರು. ಅವನ ಗಂಟಲಲ್ಲಿ ವೈರಿಗಳ ಬಾಣ ನಾಟಿತ್ತು. ಪ್ರವಾದಿ(ಸ) ಕೇಳಿದರು- ಇದು ಹುತಾತ್ಮನಾಗಲು ಆಸೆ ಪಡುತ್ತಿದ್ದ ಅದೇ ವ್ಯಕ್ತಿ ತಾನೆ! ಜನರು ಹೌದೆಂದರು. ಆಗ ಪ್ರವಾದಿ(ಸ) ಹೇಳಿದರು- ಇವನು ಅಲ್ಲಾಹನಲ್ಲಿ ಪ್ರಾಮಾಣಿಕ ಅಭಿಲಾಷೆ ಹೊತ್ತಿದ್ದ. ಅಲ್ಲಾಹನು ಅದನ್ನು ಪೂರ್ತಿಗೊಳಿಸಿದನು. ತರುವಾಯ ಪ್ರವಾದಿಯವರು(ಸ) ಅವನಿಗೆ ತಮ್ಮ ನಿಲುವಂಗಿಯ ಕಫನ್ ತೊಡಿಸಿ ಜನಾಝಾ ನಮಾಝ್ ಮಾಡಿ ಹೀಗೆ ಪ್ರಾರ್ಥಿಸಿದರು- ಓ ಅಲ್ಲಾಹ್! ಇವನು ನಿನ್ನ ದಾಸ. ನಿನ್ನ ಮಾರ್ಗದಲ್ಲಿ ತನ್ನ ಮನೆಮಾರುಗಳನ್ನು ಬಿಟ್ಟು ಬಂದವ. ನಿನ್ನ ಮಾರ್ಗದಲ್ಲಿ ಹುತಾತ್ಮನಾದ. ನಾನು ಅದಕ್ಕೆ ಸಾಕ್ಷಿಯಾಗಿದ್ದೇನೆ. *[ನಸಾಈ]*

ನಮಾಝ್- ಪ್ರವಚನಗಳಲ್ಲಿ ಸಂತುಲಿತತೆ

(490) عَنْ جَابِرِ بْنِ سَمُرَةَ قَالَ كُنْتُ أُصَلِّي مَعَ النَّبِيِّ صلى الله عليه وسلم فَكَانَتْ
صَلٰوتُهُ قَصْدًا وَخُطْبَتُهُ قَصْدًا (مسلم)

ಜಾಬಿರ್ ಬಿನ್ ಸಮುರಃ(ರ) ಹೇಳುತ್ತಾರೆ- ನಾನು ಪ್ರವಾದಿಯವರ(ಸ) ಜೊತೆಯಲ್ಲಿ ನಮಾಝ್ ಮಾಡುತ್ತಿದ್ದೆ. ಅವರ ನಮಾಝ್ ಸಂತುಲಿತವಾಗಿರುತ್ತಿತ್ತು. ಅವರ ಪ್ರವಚನವೂ ಸಂತುಲಿತವಾಗಿರುತ್ತಿತ್ತು. (ಅದು ದೀರ್ಘವೂ ಆಗಿರುತ್ತಿರಲಿಲ್ಲ. ಸಂಕ್ಷಿಪ್ತವೂ ಆಗಿರುತ್ತಿರಲಿಲ್ಲ. ಅವರ ಭಾಷಣ, ಪ್ರವಚನಗಳೂ ಹಾಗೆಯೇ ಇರುತ್ತಿದ್ದುವು. ಅವರು ಸುದೀರ್ಘ ಭಾಷಣ ಮಾಡುತ್ತಿರಲಿಲ್ಲ.) *[ಮುಸ್ಲಿಮ್]*

ನಮಾಝ್‌ನಲ್ಲಿ ಹಿಂಬಾಲಕರ ಪರಿಗಣನೆ

(491) قَالَ رَسُوْلُ اللّٰهِ صلى الله عليه وسلم إِنِّيْ لَأَقُوْمُ إِلَى الصَّلٰوةِ وَأُرِيْدُ أَنْ أُطَوِّلَ فِيْهَا فَأَسْمَعُ بُكَاءَ الصَّبِيِّ فَأَتَجَوَّزُ فِيْ صَلٰوتِيْ كَرَاهِيَةَ أَنْ أَشُقَّ عَلٰى أُمِّهِ (بخاری — ابوقتادہ)

ಪ್ರವಾದಿ(ಸ) ಹೇಳಿದರು- ನಾನು ನಮಾಝ್ ಮಾಡಲು ನಿಂತಾಗ ದೀರ್ಘ ನಮಾಝ್ ಮಾಡಬೇಕೆಂಬ ಇಚ್ಛೆಯಾಗುತ್ತದೆ. ಆದರೆ ಹಿಂದಿನಿಂದ ಮಗು ಅಳುವುದು ಕೇಳಿದೊಡನೆ ನಮಾಝನ್ನು ಸಂಕ್ಷಿಪ್ತಗೊಳಿಸುತ್ತೇನೆ. ಏಕೆಂದರೆ ನಮಾಝ್ ದೀರ್ಘಗೊಳಿಸಿ ಮಗುವಿನ ತಾಯಿಗೆ ತೊಂದರೆ ಕೊಡಲು ನಾನು ಬಯಸುವುದಿಲ್ಲ.

[ಬುಖಾರಿ- ವರದಿ: ಅಬೂಕತಾದ(ರ)]

ಟಿಪ್ಪಣಿ: ಪ್ರವಾದಿಯವರ(ಸ) ಕಾಲದಲ್ಲಿ ಸ್ತ್ರೀಯರು ಮಸೀದಿಗೆ ಬಂದು ಜಮಾಅತ್ ಸಹಿತ ನಮಾಝ್ ಮಾಡುತ್ತಿದ್ದರು. ಅವರಲ್ಲಿ ಮಕ್ಕಳಿರುವ ಸ್ತ್ರೀಯರೂ ಇರುತ್ತಿದ್ದರು. ಅವರು ಮಕ್ಕಳನ್ನು ಜೊತೆಯಲ್ಲಿ ಒಯ್ಯುತ್ತಿದ್ದರು. ಮನೆಯಲ್ಲಿ ಮಕ್ಕಳನ್ನೇ ಬಿಟ್ಟು ಬರುವಂತಿಲ್ಲ ತಾನೇ.

ಈ ಹದೀಸ್‌ನಲ್ಲಿ ನಮಾಝ್ ಮಾಡುವವರ ಸ್ಥಿತಿಯನ್ನು ಪರಿಗಣಿಸದೆ ಸುದೀರ್ಘ ನಮಾಝ್ ಮಾಡುವ ಇಮಾಮರುಗಳಿಗೆ ಪಾಠವಿದೆ.

ಫರ್ಝ್ ನಮಾಝ್‌ಗಾಗಿ ವ್ಯವಸ್ಥೆ

(492) كَانَ رَسُوْلُ اللّٰهِ صلى الله عليه وسلم إِذَا كَانَ فِيْ سَفَرٍ فَعَرَّسَ بِلَيْلٍ اِضْطَجَعَ عَلٰى يَمِيْنِهِ، وَإِذَا عَرَّسَ قُبَيْلَ الصُّبْحِ نَصَبَ ذِرَاعَهُ وَوَضَعَ رَأْسَهُ عَلٰى كَفِّهِ (مسلم — ابوقتادہ)

ಪ್ರವಾದಿಯವರು(ಸ) ಪ್ರಯಾಣದಲ್ಲಿ ಎಲ್ಲಾದರೂ ತಂಗುವಾಗ ಹೆಚ್ಚು ರಾತ್ರಿಯಾಗಿದ್ದರೆ, ತಮ್ಮ ಎಡ ಕೈಯ ಮೇಲೆ ತಲೆಯಿಟ್ಟು ಮಲಗುತ್ತಿದ್ದರು. ಸೂರ್ಯೋದಯಕ್ಕಿಂತ ಸ್ವಲ್ಪ ಮುಂಚೆ ತಂಗುತ್ತಿದ್ದರೆ ತಮ್ಮ ಕೈಯನ್ನು ನೇರವಾಗಿಟ್ಟು ಅಂಗೈಯಲ್ಲಿ ತಲೆಯಿರಿಸುತ್ತಿದ್ದರು.

[ಬುಖಾರಿ- ಅಬೂ ಕತಾದ(ರ)]

ಟಿಪ್ಪಣಿ: ಕೈ ನೇರವಾಗಿಟ್ಟು ತಲೆಯನ್ನು ಕೈಯಲ್ಲಿಡುವುದೇಕೆಂದರೆ ರಾತ್ರಿಯಿಡೀ ಪ್ರಯಾಣಿಸಿದ್ದು ಇನ್ನು ಬೆಳಗಾಗಲು ಸ್ವಲ್ಪವೇ ಸಮಯವಿರುತ್ತಿತ್ತು. ಆ ಹೊತ್ತಿನಲ್ಲಿ ಯಾವ ಮಗ್ಗುಲಿಗೆ ಒರಗಿದರೂ ನಿದ್ದೆ ಹತ್ತಿ ಫಜ್ರ್ ನಮಾಝ್ ಕಝಾ ಆಗುವ ಸಂಭವವಿರುತ್ತಿತ್ತು. ಆದುದರಿಂದ ನಿದ್ದೆ ಬರುವ ಸಂಭವವೇ ಇಲ್ಲದಂತಹ ಭಂಗಿಯಲ್ಲಿ ಒರಗಿ ಕೊಳ್ಳುತ್ತಿದ್ದರು.

ಪ್ರವಾದಿಯವರ(ಸ) ನಮಾಝ್

(493) عَنْ أُمِّ سَلَمَةَ قَالَتْ كَانَ رَسُوْلُ اللّٰهِ صلى الله عليه وسلم يُقَطِّعُ قِرَاءَتَهُ يَقُوْلُ اَلْحَمْدُ لِلّٰهِ رَبِّ الْعٰلَمِيْنَ ثُمَّ يَقِفُ، ثُمَّ يَقُوْلُ الرَّحْمٰنِ الرَّحِيْمِ (ترمذی بروایت لیث)

ಪ್ರವಾದಿಯವರ(ಸ) ಪತ್ನಿ ಉಮ್ಮು ಸಲಮ ಹೇಳುತ್ತಾರೆ: ಪ್ರವಾದಿವರ್ಯರು(ಸ) ನಮಾಝ್‌ನಲ್ಲಿ ಕುರ್‌ಆನನ್ನು ತಡೆ ತಡೆದು ಪಠಿಸುತ್ತಿದ್ದರು. 'ಅಲ್‌ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್' ಎಂದು ಹೇಳಿ ಸ್ವಲ್ಪ ತಡೆದು 'ಅರ್ರಹ್ಮಾನಿರ್ರಹೀಮ್' ಪಠಿಸುತ್ತಿದ್ದರು.

[ತಿರ್ಮಿದಿ- ವರದಿ: ಲೈಸ್]

(494) عَنْ يَعْلٰى أَنَّهُ سَأَلَ أُمَّ سَلَمَةَ عَنْ قِرَاءَةِ النَّبِيِّ صلى الله عليه وسلم فَإِذَا هِيَ تَنْعَتُ قِرَاءَةً مُفَسَّرَةً حَرْفًا حَرْفًا (ترمذی)

ಯಅ್‌ಲಾ(ರ) ಹೇಳುತ್ತಾರೆ- ನಾನು ಉಮ್ಮು ಸಲಮರೊಂದಿಗೆ, ಪ್ರವಾದಿವರ್ಯರು(ಸ) ಹೇಗೆ ಕುರ್‌ಆನ್ ಪಠಿಸುತ್ತಿದ್ದರು ಎಂದು ಕೇಳಿದೆ. ಅವರು ಹೇಳಿದರು- ಪ್ರವಾದಿಯವರ(ಸ) ಕಿರಾಅತ್ (ಪಾರಾಯಣ) ಸ್ಪಷ್ಟವಾಗಿರುತ್ತಿತ್ತು. ಪ್ರತಿಯೊಂದು ಪದವೂ ಸ್ಪಷ್ಟವಾಗಿ ಕೇಳುತ್ತಿತ್ತು.

[ತಿರ್ಮಿದಿ]

ಆಧ್ಯಾತ್ಮಿಕ ಆಹಾರ

(495) قَالَ النَّبِيُّ صلى الله عليه وسلم حُبِّبَ إِلَيَّ مِنَ الدُّنْيَا النِّسَاءُ وَالطِّيْبُ وَجُعِلَتْ قُرَّةُ عَيْنِيْ فِي الصَّلٰوةِ (نسائی ـــ انس رض)

ಪ್ರವಾದಿ(ಸ) ಹೇಳಿದರು- ಈ ಲೋಕದಲ್ಲಿ ನನಗೆ ಎರಡು ವಸ್ತುಗಳು ಅತ್ಯಂತ ಪ್ರಿಯವಾಗಿವೆ- ನನ್ನ ಪತ್ನಿಯರು ಮತ್ತು ಸುಗಂಧ. ನಮಾಝ್ ನನ್ನ ಕಣ್ಣಿನ ತಂಪು ಮತ್ತು ಮನಸ್ಸಿಗೆ ಮುದ ನೀಡುವ ವಸ್ತುವಾಗಿದೆ. *[ನಸಾಈ- ವರದಿ: ಅನಸ್(ರ)]*

ಟಿಪ್ಪಣಿ: ನಮಾಝ್ ನನ್ನ ಆಧ್ಯಾತ್ಮಿಕ ಆಹಾರವಾಗಿದೆ. ಏಕೆಂದರೆ ನಮಾಝ್ ಅಲ್ಲಾಹನ ಸ್ಮರಣೆ ಮತ್ತು ಅವನೊಂದಿಗೆ ಸಂಭಾಷಣೆಯಾಗಿದೆ. ಇದೇ ವಾಸ್ತವಿಕತೆಯನ್ನು ಇನ್ನೊಂದು ಹದೀಸ್‌ನಲ್ಲಿ ಈ ರೀತಿ ಹೇಳಲಾಗಿದೆ: ಪ್ರವಾದಿಯವರು(ಸ) ಬಿಲಾಲ್‌ರೊಂದಿಗೆ(ರ) ಹೇಳಿದರು- ಬಿಲಾಲ್! ಅದಾನ್ ಹೇಳಿ ನಮಗೆ ಮುದ ನೀಡಿರಿ.

ಭಯಭಕ್ತಿ

(496) عَنْ مُطَرِّفِ بْنِ عَبْدِ اللّٰهِ الشِّخِّيْرِ قَالَ اَتَيْتُ النَّبِيَّ صلى الله عليه وسلم وَهُوَ يُصَلِّيْ وَلِجَوْفِهٖ اَزِيْزٌ كَاَزِيْزِ الْمِرْجَلِ (مشكوٰة)

ಮುತರ್‍ರಿಫ್ ಬಿನ್ ಅಬ್ದುಲ್ಲಾ ಶಿಖ್ಖೀರ್ ಹೇಳುತ್ತಾರೆ- ನಾನು ಪ್ರವಾದಿಯವರ(ಸ) ಬಳಿಗೆ ಹೋದಾಗ ಅವರು ನಮಾಝ್ ಮಾಡುತ್ತಿದ್ದರು. ಅವರ ಎದೆಯಿಂದ ಹಂಡೆ ಕುದಿಯುವಂತಹ ಶಬ್ದ ಹೊರಡುತ್ತಿತ್ತು. *[ಮಿಶ್ಕಾತ್]*

ಪ್ರವಾದಿವರ್ಯರ(ಸ) ತಹಜ್ಜುದ್

(497) عَنْ زِيَادٍ قَالَ سَمِعْتُ الْمُغِيْرَةَ رضى الله عنه يَقُوْلُ اِنْ كَانَ النَّبِيُّ صلى الله عليه وسلم لَيَقُوْمُ لِيُصَلِّيْ حَتّٰى تَرِمَ قَدَمَاهُ اَوْ سَاقَاهُ فَيُقَالُ لَهٗ، فَيَقُوْلُ اَفَلَا اَكُوْنُ عَبْدًا شَكُوْرًا (بخارى)

ಝಿಯಾದ್(ರ) ಹೇಳುತ್ತಾರೆ- ಮುಗೀರಃ ಹೀಗೆ ಹೇಳುವುದನ್ನು ಕೇಳಿದ್ದೇನೆ. ಪ್ರವಾದಿಯವರು(ಸ) ತಹಜ್ಜುದ್ ನಮಾಝನ್ನು ದೀರ್ಘವಾಗಿ ನಿರ್ವಹಿಸುತ್ತಿದ್ದರು. ಅದರಿಂದಾಗಿ ಅವರ ಕಾಲುಗಳು ಬಾತು ಹೋಗುತ್ತಿದ್ದುವು. ಈ ಕುರಿತು ಜನರು ಪ್ರವಾದಿವರ್ಯರೊಡನೆ ತಾವೇಕೆ ಇಷ್ಟು ಪರಿಶ್ರಮ ಪಡುತ್ತೀರಿ ಎಂದು ಕೇಳಿದಾಗ, ನಾನು ಅಲ್ಲಾಹನ ಕೃತಜ್ಞ ದಾಸನಾಗಬೇಡವೇ ಎಂದು ಉತ್ತರಿಸುತ್ತಿದ್ದರು.

[ಬುಖಾರಿ]

ಟಿಪ್ಪಣಿ: ತಾತ್ಪರ್ಯವೇನೆಂದರೆ ಅಲ್ಲಾಹನು ನನಗೆ ಮಾನವರ ಪೈಕಿ ಅತ್ಯುನ್ನತ ಪದವಿ-ಪ್ರವಾದಿತ್ವ-ನೀಡಿ ಗೌರವಿಸಿರುವಾಗ ನಾನು ಅವನಿಗೆ ಆದಷ್ಟು ಹೆಚ್ಚು ಕೃತಜ್ಞತೆ ಸಲ್ಲಿಸಬೇಕಾಗಿದೆ.

---

(498) قَالَتْ عَائِشَةُ رضى الله عنها لَا تَدَعْ قِيَامَ اللَّيْلِ، فَاِنَّ رَسُوْلَ اللّٰهِ صلى الله عليه وسلم كَانَ لَا يَدَعُهٗ، وَكَانَ اِذَا مَرِضَ اَوْ كَسِلَ صَلّٰى قَاعِدًا (ابوداؤد — عبد بن ابى قيس)

ಹ. ಆಯಿಶಾ(ರ) ಅಬ್ದು ಬಿನ್ ಅಬೀ ಕೈಸ್‌ರಿಗೆ ಹೀಗೆ ಉಪದೇಶಿಸಿದರು- ನೋಡು, ತಹಜ್ಜುದ್ ನಮಾಝನ್ನೆಂದೂ ಬಿಡಬೇಡ. ಏಕೆಂದರೆ ಪ್ರವಾದಿ(ಸ) ತಹಜ್ಜುದ್ ನಮಾಝನ್ನು

ಎಂದೂ ಉಪೇಕ್ಷಿಸುತ್ತಿರಲಿಲ್ಲ. ಅನಾರೋಗ್ಯ ಅಥವಾ ಆಯಾಸ ಉಂಟಾದರೆ ಕುಳಿತುಕೊಂಡು ನಿರ್ವಹಿಸುತ್ತಿದ್ದರು. *[ಅಬೂ ದಾವೂದ್- ವರದಿ: ಅಬ್ದು ಬಿನ್ ಅಬೀ ಕೈಸ್]*

ಕುರ್‌ಆನ್‌ನ ಬೋಧನೆಗಳ ಪ್ರತ್ಯಕ್ಷ ಮಾದರಿ

(499) عَنْ عَائِشَةَ قَالَتْ كَانَ خُلُقُ نَبِيِّ اللهِ الْقُرْآنَ (مسلم)

ಹ. ಆಯಿಶಾ(ರ) ಹೇಳುತ್ತಾರೆ- ಪ್ರವಾದಿಯವರ(ಸ) ಚಾರಿತ್ರ್ಯವು ಕುರ್‌ಆನ್ ಆಗಿತ್ತು.

[ಮುಸ್ಲಿಮ್]

ಟಿಪ್ಪಣಿ: ಕುರ್‌ಆನಿನಲ್ಲಿ ಯಾವ ಉನ್ನತ ಚಾರಿತ್ರ್ಯಗಳ ಬೋಧನೆ ನೀಡಲಾಗಿದೆಯೋ ಅವೆಲ್ಲವೂ ಪ್ರವಾದಿವರ್ಯರಲ್ಲಿದ್ದುವು. ಅವರು ಅದರ ಅತ್ಯುತ್ತಮ ಮಾದರಿಯಾಗಿದ್ದರು.

---

(500) عَنْ عَبْدِ اللهِ بْنِ عَمْرِو بْنِ الْعَاصِ قَالَ لَمْ يَكُنْ رَسُولُ اللهِ صَلَّى اللهُ عَلَيْهِ وَسَلَّمَ فَاحِشًا وَلَا مُتَفَحِّشًا (بخاری ومسلم)

ಅಬ್ದುಲ್ಲಾ ಬಿನ್ ಅಮ್ರ್ ಬಿನ್ ಆಸ್(ರ) ಹೇಳುತ್ತಾರೆ- ಪ್ರವಾದಿಯವರ(ಸ) ಸ್ವಭಾವದಲ್ಲಿ ಅಶ್ಲೀಲತೆಯಿರಲಿಲ್ಲ. ಅವರೆಂದೂ ಅಶ್ಲೀಲ ಮಾತನ್ನಾಡುತ್ತಿರಲಿಲ್ಲ.

[ಬುಖಾರಿ, ಮುಸ್ಲಿಮ್]

ಸೇವಕರೊಂದಿಗೆ ಪ್ರವಾದಿಯವರ(ಸ) ವರ್ತನೆ

(501) عَنْ أَنَسٍ قَالَ لَقَدْ خَدَمْتُ رَسُولَ اللهِ عَشْرَ سِنِينَ، فَمَا قَالَ لِي قَطُّ أُفٍّ، وَلَا قَالَ لِشَيْءٍ فَعَلْتُهُ لِمَ فَعَلْتَهُ؟ وَلَا لِشَيْءٍ لَمْ أَفْعَلْهُ أَلَا فَعَلْتَ كَذَا (بخاری ومسلم)

ಹ. ಅನಸ್(ರ) ಹೇಳುತ್ತಾರೆ-ನಾನು ಹತ್ತು ವರ್ಷಗಳ ಕಾಲ ಪ್ರವಾದಿವರ್ಯರ(ಸ) ಸೇವೆಗೈಯುತ್ತಿದ್ದೆ. ಆದರೆ ಈ ಅವಧಿಯಲ್ಲಿ ಅವರು ಎಂದೂ ನನ್ನನ್ನು ಆಕ್ಷೇಪಿಸಿದ್ದಿಲ್ಲ. ನನ್ನಿಂದ ಏನಾದರೂ ತಪ್ಪು ಸಂಭವಿಸಿದರೆ, ನೀನೇಕೆ ಈ ತಪ್ಪು ಮಾಡಿದೆ ಎಂದು ಕೇಳಿದ್ದಿಲ್ಲ ಮತ್ತು ನಾನು ಮಾಡಬೇಕಾದ ಕೆಲಸವನ್ನು ಮಾಡದಿದ್ದರೆ, 'ನೀನೇಕೆ ಆ ಕೆಲಸ ಮಾಡಿಲ್ಲ' ಎಂದು ಒಮ್ಮೆಯೂ ಕೇಳಿದ್ದಿಲ್ಲ. *[ಬುಖಾರಿ, ಮುಸ್ಲಿಮ್]*

ಪ್ರವಾದಿಯವರ(ಸ) ಹಾಸ್ಯ ಪ್ರಜ್ಞೆ

(502) عَنْ أَنَسٍ قَالَ إِنَّ رَجُلاً مِنْ أَهْلِ الْبَادِيَةِ كَانَ إِسْمُهُ زَاهِرَ بْنَ حَرَامٍ،
وَكَانَ يُهْدِي لِلنَّبِيِّ صلى الله عليه وسلم مِنَ الْبَادِيَةِ، فَيُجَهِّزُهُ رَسُولُ اللهِ صلى الله عليه وسلم
إِذَا أَرَادَ أَنْ يَخْرُجَ، فَقَالَ النَّبِيُّ صلى الله عليه وسلم إِنَّ زَاهِرًا بَادِيَتُنَا وَنَحْنُ حَاضِرُوْهُ،
وَكَانَ النَّبِيُّ صلى الله عليه وسلم يُحِبُّهُ، وَكَانَ دَمِيمًا، فَأَتَى النَّبِيُّ صلى الله عليه وسلم
يَوْمًا وَهُوَ يَبِيعُ مَتَاعَهُ فَاحْتَضَنَهُ مِنْ خَلْفِهِ وَهُوَ لَا يُبْصِرُهُ، فَقَالَ أَرْسِلْنِي مَنْ
هٰذَا؟ فَالْتَفَتَ فَعَرَفَ النَّبِيَّ صلى الله عليه وسلم فَجَعَلَ لَا يَأْلُوْ مَا أَلْزَقَ ظَهْرَهُ بِصَدْرِ
النَّبِيِّ صلى الله عليه وسلم حِيْنَ عَرَفَهُ، وَجَعَلَ النَّبِيُّ صلى الله عليه وسلم يَقُوْلُ مَنْ
يَشْتَرِي الْعَبْدَ؟ فَقَالَ لِلنَّبِيِّ صلى الله عليه وسلم إِذًا وَاللهِ تَجِدُنِي كَاسِدًا، فَقَالَ النَّبِيُّ
صلى الله عليه وسلم لٰكِنْ عِنْدَ اللهِ لَسْتَ بِكَاسِدٍ (مشكوٰة)

ಹ. ಅನಸ್(ರ) ಹೇಳುತ್ತಾರೆ- ಝಾಹಿರ್ ಬಿನ್ ಹರಾಮ್(ರ) ಎಂಬ ಒಬ್ಬ ಗ್ರಾಮೀಣ ಅರಬರಿದ್ದರು. ಅವರು ಹಳ್ಳಿಯ ವಸ್ತುಗಳನ್ನು ಪ್ರವಾದಿಯವರಿಗೆ(ಸ) ಕಾಣಿಕೆಯಾಗಿ ತರುತ್ತಿದ್ದರು. ಅವರು ತಮ್ಮ ಗ್ರಾಮಕ್ಕೆ ಮರಳುವಾಗ ಪ್ರವಾದಿಯವರೂ(ಸ) ಮದೀನಾದ ಕೆಲವು ವಸ್ತುಗಳನ್ನು ಅವರಿಗೆ ಕಾಣಿಕೆಯ ರೂಪದಲ್ಲಿ ಕೊಟ್ಟು ಕಳಿಸುತ್ತಿದ್ದರು. ಪ್ರವಾದಿ(ಸ) ಹೇಳುತ್ತಿದ್ದರು - ಝಾಹಿರ್ ನಮ್ಮ ಹಳ್ಳಿಯ ಮಿತ್ರ ಮತ್ತು ನಾವು ಅವರ ನಗರದ ಮಿತ್ರರು. ಪ್ರವಾದಿವರ್ಯರು(ಸ) ಅವರನ್ನು ಬಹಳ ಪ್ರೀತಿಸುತ್ತಿದ್ದರು. ಅವರೊಬ್ಬ ಕುರೂಪಿ ವ್ಯಕ್ತಿಯಾಗಿದ್ದರು. ಒಂದು ದಿನ ಅವರು ಮದೀನಾದಲ್ಲಿ ತನ್ನ ಹಳ್ಳಿಯ ವಸ್ತುಗಳನ್ನು ಮಾರುತ್ತಿದ್ದಾಗ ಪ್ರವಾದಿಯವರು(ಸ) ಹಿಂದಿನಿಂದ ಬಂದು ಅವರನ್ನು ತಮ್ಮ ಮಡಿಲಲ್ಲಿ ಕುಳ್ಳಿರಿಸಿದರು. ಅವರಿಗೆ ಪ್ರವಾದಿವರ್ಯರು(ಸ) ಕಾಣಿಸುತ್ತಿರಲಿಲ್ಲ. ಅವರು, 'ಯಾರದು, ನನ್ನನ್ನು ಬಿಟ್ಟು ಬಿಡಿರಿ' ಎಂದರು. ತರುವಾಯ ತಿರುಗಿ ನೋಡಿದಾಗ ಪ್ರವಾದಿವರ್ಯರನ್ನು(ಸ) ಕಂಡರು. ಆಗ ತಮ್ಮ ಬೆನ್ನನ್ನು ಪ್ರವಾದಿವರ್ಯರ(ಸ) ಎದೆಗೆ ಇನ್ನಷ್ಟು ತಾಗಿಸಿಡಲು ಪ್ರಯತ್ನಿಸಿದರು.

ಆ ಸಂದರ್ಭದಲ್ಲಿ ಪ್ರವಾದಿವರ್ಯರು, ಈ ಗುಲಾಮನನ್ನು ಯಾರು ಖರೀದಿಸುತ್ತಾರೆ ಎಂದು ಕೇಳಿದರು (ಅವರು ಗುಲಾಮರಾಗಿರಲಿಲ್ಲ. ಇಥಿಯೋಪಿಯದ ಗುಲಾಮರಂತೆ ಅವರು ಕಪ್ಪು ಬಣ್ಣದವರಾಗಿದ್ದರು). ಝಾಹಿರ್ ಹೇಳಿದರು - ಅಲ್ಲಾಹನ ಸಂದೇಶವಾಹಕರೇ! ತಾವು ನಷ್ಟಕ್ಕೊಳಗಾಗುವಿರಿ. ನನ್ನನ್ನು ಯಾರು ಖರೀದಿಸುತ್ತಾರೆ? ಒಂದು ವೇಳೆ ಯಾರಾದರೂ ಖರೀದಿಸಿದರೂ ಅಲ್ಪ ಬೆಲೆ ನೀಡಬಹುದು. ಆಗ ಪ್ರವಾದಿ(ಸ) ಹೇಳಿದರು- ನೀವು ಲೋಕದವರ ದೃಷ್ಟಿಯಲ್ಲಿ ಬೆಲೆಯಿಲ್ಲದವರಾದರೆ ಅಲ್ಲಾಹನ ಬಳಿ ನಿಮಗೆ ಭಾರೀ ಬೆಲೆಯಿದೆ.

[ಮಿಶ್ಕಾತ್]

ಪ್ರವಾದಿಯವರ(ಸ) ಉನ್ನತ ಗುಣ

(503) عَنْ اَنَسٍ قَالَ كُنْتُ اَمْشِىْ مَعَ رَسُوْلِ اللّٰهِ صلى الله عليه وسلم وَعَلَيْهِ بُرْدٌ نَجْرَانِىٌّ غَلِيْظُ الْحَاشِيَةِ، فَاَدْرَكَهٗ اَعْرَابِىٌّ، فَجَذَبَهٗ بِرِدَائِهٖ جَذْبَةً شَدِيْدَةً، فَنَظَرْتُ اِلٰى صَفْحَةِ عُنُقِ رَسُوْلِ اللّٰهِ صلى الله عليه وسلم وَقَدْ اَثَّرَتْ بِهَا حَاشِيَةُ الرِّدَاءِ مِنْ شِدَّةِ جَذْبَتِهٖ، ثُمَّ قَالَ يَا مُحَمَّدُ مُرْ لِىْ مِنْ مَالِ اللّٰهِ الَّذِىْ عِنْدَكَ، فَالْتَفَتَ اِلَيْهِ فَضَحِكَ ثُمَّ اَمَرَ لَهٗ بِعَطَاءٍ. (بخاری ومسلم)

ಹ. ಅನಸ್(ರ) ಹೇಳುತ್ತಾರೆ- ನಾನು ಪ್ರವಾದಿಯವರ(ಸ) ಜೊತೆಯಲ್ಲಿ ನಡೆಯುತ್ತಿದ್ದೆ. ಅವರು ದಪ್ಪ ಅಂಚಿನ ನಜ್ರಾನ್‌ನ ಕಸೂತಿಯ ಚದ್ದರ ಹೊದ್ದುಕೊಂಡಿದ್ದರು. ದಾರಿಯಲ್ಲಿ ಒಬ್ಬ ಗ್ರಾಮೀಣ ಅರಬ ಸಿಕ್ಕಿದನು. ಅವನು ಪ್ರವಾದಿಯವರ(ಸ) ಚದ್ದರವನ್ನು ಜೋರಾಗಿ ಹಿಡಿದೆಳೆದನು. ಇದರಿಂದ ಅವರ ಕುತ್ತಿಗೆಯಲ್ಲಿ ಗೆರೆ ಬಿತ್ತು. ಅವನು ಹೇಳಿದನು-

"ಓ ಮುಹಮ್ಮದ್! ನನಗೆ ಬೈತುಲ್ ಮಾಲ್‌ನಿಂದ ಏನಾದರೂ ಕೊಡಿಸಿರಿ." ಪ್ರವಾದಿ(ಸ) ಅವನ ಕಡೆಗೆ ತಿರುಗಿ ನೋಡುತ್ತಾ (ಕೋಪಗೊಳ್ಳುವ ಬದಲು) ಮುಗುಳ್ನಕ್ಕರು ಮತ್ತು ಅವನಿಗೆ 'ಬೈತುಲ್ ಮಾಲ್'ನಿಂದ ಕೊಡಲು ಆಜ್ಞಾಪಿಸಿದರು.

[ಬುಖಾರಿ, ಮುಸ್ಲಿಮ್]

ಮಕ್ಕಳನ್ನು ಪ್ರೀತಿಸುವುದು

(504) عَنْ عَائِشَةَ قَالَتْ جَاءَ أَعْرَابِيٌّ إِلَى رَسُوْلِ اللّٰهِ صلى الله عليه وسلم فَقَالَ
إِنَّكُمْ تُقَبِّلُوْنَ الصِّبْيَانَ وَمَا نُقَبِّلُهُمْ، فَقَالَ رَسُوْلُ اللّٰهِ صلى الله عليه وسلم أَوَ أَمْلِكُ أَنْ
نَزَعَ اللّٰهُ الرَّحْمَةَ مِنْ قَلْبِكَ (بخاری ومسلم)

ಹ. ಆಯಿಶಾ(ರ) ಹೇಳುತ್ತಾರೆ- ಒಬ್ಬ ಗ್ರಾಮೀಣ ಅರಬನು ಪ್ರವಾದಿಯವರ(ಸ) ಬಳಿಗೆ ಬಂದನು. (ಆಗ ಪ್ರವಾದಿ(ಸ) ಯಾವುದೋ ಮಗುವನ್ನು- ಬಹುಶಃ ಹ. ಹಸನ್- ಮುದ್ದಿಸುತ್ತಿದ್ದರು.) ಅವನು ಹೇಳಿದನು- ತಾವು ಮಕ್ಕಳನ್ನು ಮುದ್ದಿಸುತ್ತೀರಾ? ನಾವಂತೂ ಅವರನ್ನು ಮುದ್ದಿಸುವುದಿಲ್ಲ. ಪ್ರವಾದಿ(ಸ) ಹೇಳಿದರು- ಅಲ್ಲಾಹನು ನಿಮ್ಮ ಹೃದಯದಲ್ಲಿ ಮಕ್ಕಳ ಮೇಲಿನ ಪ್ರೀತಿ-ಕರುಣೆಯನ್ನು ಇರಿಸದಿದ್ದರೆ ನಾನೇನು ಮಾಡಲಿ!

[ಬುಖಾರಿ, ಮುಸ್ಲಿಮ್]

ಮಕ್ಕಳೊಂದಿಗೆ ತಮಾಷೆ

(505) عَنْ أَنَسٍ قَالَ إِنْ كَانَ النَّبِيُّ صلى الله عليه وسلم لَيُخَالِطُنَا حَتَّى يَقُوْلَ لِأَخٍ لِي
صَغِيْرٍ يَا أَبَا عُمَيْرٍ مَا فَعَلَ النُّغَيْرُ، وَكَانَ لَهُ نُغَيْرٌ يَلْعَبُ بِهِ فَمَاتَ (بخاری ومسلم)

ಹ. ಅನಸ್(ರ) ಹೇಳುತ್ತಾರೆ- ಪ್ರವಾದಿಯವರು(ಸ) ನಮ್ಮೊಂದಿಗೆ ಬೆರೆತುಕೊಂಡಿರುತ್ತಿದ್ದರು. (ಗಂಭೀರವಾಗಿ ಪ್ರತ್ಯೇಕ ಇದ್ದು ಬಿಡುತ್ತಿರಲಿಲ್ಲ.) ನನ್ನ ತಮ್ಮ ಉಮೈರ್‌ನೊಂದಿಗೆ ತಮಾಷೆಗಾಗಿ- "ಉಮೈರ್! ನಿನ್ನ ಗುಬ್ಬಚ್ಚಿ ಹೇಗಿದೆ?" ಎಂದು ಕೇಳುತ್ತಿದ್ದರು. ಅವನ ಬಳಿ ಒಂದು ಸಣ್ಣ ಗುಬ್ಬಚ್ಚಿಯಿತ್ತು. ಅದರೊಂದಿಗೆ ಅವನು ಆಟವಾಡುತ್ತಿದ್ದನು. ಅದು ಸತ್ತು ಹೋಗಿತ್ತು. *[ಬುಖಾರಿ, ಮುಸ್ಲಿಮ್]*

ಮಕ್ಕಳನ್ನು ಮುದ್ದಿಸುವುದು

(506) قَالَ اِنَّ النَّبِيَّ صلى الله عليه وسلم اُتِيَ بِصَبِيٍّ فَقَبَّلَهُ فَقَالَ اَمَا اِنَّهُمْ مَبْخَلَةٌ مَجْبَنَةٌ وَاِنَّهُمْ لَمِنْ رَيْحَانِ اللهِ (مشكوٰة)

ಪ್ರವಾದಿಯವರ(ಸ) ಬಳಿಗೆ ಒಂದು ಮಗುವನ್ನು ತರಲಾಯಿತು. ಅವರು ಅದನ್ನು ಮುದ್ದಿಸಿದರು. ತರುವಾಯ, ಈ ಮಕ್ಕಳು ಮನುಷ್ಯನ ಪುಕ್ಕಲುತನ ಮತ್ತು ಲೋಭಕ್ಕೆ ಹೇತುವಾಗುತ್ತಾರೆ. ಇವು ಅಲ್ಲಾಹನ ಕೊಡುಗೆಗಳಾಗಿವೆ ಎಂದರು. [ಮಿಶ್ಕಾತ್]

ಟಿಪ್ಪಣಿ: ಮಕ್ಕಳೊಂದಿಗೆ ಇರುವ ಪ್ರೀತಿಯು ಒಂದು ಸ್ವಾಭಾವಿಕ ಭಾವನೆಯಾಗಿದೆ. ಒಂದು ವೇಳೆ ಸತ್ಯವಿಶ್ವಾಸಿ ಸುಶಿಕ್ಷಿತನಲ್ಲದಿದ್ದರೆ ಅಲ್ಲಾಹನ ಮಾರ್ಗದಲ್ಲಿ ಜೀವ-ಸೊತ್ತುಗಳನ್ನು ತ್ಯಾಗ ಮಾಡಲು ಮಕ್ಕಳ ಮೇಲಿನ ಪ್ರೀತಿ ಅಡ್ಡಿಯಾಗುತ್ತದೆ.

ಹದೀಸ್‌ನ ಕೊನೆಯ ಭಾಗದ ಅರ್ಥವೇನೆಂದರೆ- ಮಕ್ಕಳು ಅಲ್ಲಾಹನ ಅನುಗ್ರಹ ಮತ್ತು ಕೊಡುಗೆಯಾಗಿದ್ದಾರೆ. ಅದಕ್ಕಾಗಿ ಸತ್ಯವಿಶ್ವಾಸಿಯು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಬೇಕು. ಅವರಿಗೆ ಧಾರ್ಮಿಕ ಶಿಕ್ಷಣ, ತರಬೇತಿಗಳನ್ನು ನೀಡುವುದೇ ಅಲ್ಲಾಹನಿಗೆ ಅರ್ಪಿಸುವ ಕೃತಜ್ಞತೆಯಾಗಿದೆ.

ಹಾಸ್ಯ-ವಿನೋದ

(507) عَنْ اَبِيْ هُرَيْرَةَ قَالَ، قَالُوْا يَا رَسُوْلَ اللهِ اِنَّكَ تُدَاعِبُنَا، قَالَ اِنِّيْ لَا اَقُوْلُ اِلَّا حَقًّا. (ترمذی)

ಹ. ಅಬೂ ಹುರೈರಾ(ರ) ಹೇಳುತ್ತಾರೆ- ಜನರು ಆಶ್ಚರ್ಯದೊಂದಿಗೆ ಕೇಳಿದರು: ಅಲ್ಲಾಹನ ಸಂದೇಶವಾಹಕರೇ! ತಾವು ನಮ್ಮೊಂದಿಗೆ ಹಾಸ್ಯ ವಿನೋದದ ಮಾತುಗಳನ್ನಾಡುತ್ತೀರಾ? ಪ್ರವಾದಿ(ಸ) ಹೇಳಿದರು- ಹೌದು! ಆದರೆ ನಾನು ಯಾವುದೇ ತಪ್ಪು ಮತ್ತು ಅಸತ್ಯದ ಮಾತನ್ನಾಡುವುದಿಲ್ಲ. [ತಿರ್ಮಿದಿ]

ಟಿಪ್ಪಣಿ: ಸಾಮಾನ್ಯವಾಗಿ ಧರ್ಮಗುರುಗಳು ತಮ್ಮ ಅಭಿಮಾನಿಗಳ ಸಭೆಗಳಲ್ಲಿ ಮೌನವಾಗಿ ಕುಳಿತಿರುತ್ತಾರೆ. ಹಾಸ್ಯ ವಿನೋದಗಳ ಮಾತುಗಳನ್ನಾಡುವುದಿಲ್ಲ. ಈ ಹದೀಸ್‌ನಿಂದ ಹಾಸ್ಯ ವಿನೋದದ ಮಾತುಗಳು ಪಾವಿತ್ರ್ಯ ಮತ್ತು ಹಿರಿತನಕ್ಕೆ ವಿರುದ್ಧವಲ್ಲವೆಂದು ತಿಳಿದು ಬರುತ್ತದೆ. ಪ್ರವಾದಿಯವರ(ಸ) ಸ್ವಭಾವದ ಎರಡು ಆದರ್ಶಗಳು ಬಹಳ ಪ್ರಸಿದ್ಧವಾಗಿವೆ. ಒಮ್ಮೆ ಪ್ರವಾದಿಯವರು(ಸ) ಓರ್ವ ಮುದುಕಿಯೊಡನೆ, ಮುದುಕಿಯರು ಸ್ವರ್ಗಕ್ಕೆ ಹೋಗಲಾರರು ಎಂದಾಗ ಆಕೆಗೆ ತುಂಬಾ ದುಃಖವಾಯಿತು. ಆಗ ಪ್ರವಾದಿ(ಸ) ಹೇಳಿದರು- 'ಸ್ವರ್ಗಕ್ಕೆ ಎಲ್ಲರೂ ತರುಣಿಯರಾಗಿ ಹೋಗುವರು.' ಯಾರೋ ಒಮ್ಮೆ ಪ್ರವಾದಿವರ್ಯರಲ್ಲಿ ಒಂಟೆ ಕೇಳಿದಾಗ, ನಾನು ನಿನಗೆ ಒಂದು ಒಂಟೆ ಮರಿಯನ್ನು ಕೊಡುತ್ತೇನೆಂದರು.

ಒಂಟೆ ಮರಿಯನ್ನು ತೆಗೆದು ನಾನೇನು ಮಾಡಲಿ ಎಂದು ಅವನು ಕೇಳಿದಾಗ, ಪ್ರವಾದಿ(ಸ) ಹೇಳಿದರು- ಪ್ರತಿಯೊಂದು ಒಂಟೆಯೂ ಇನ್ನೊಂದು ಒಂಟೆಯ ಮರಿಯಾಗಿರುತ್ತದೆ.

ಪ್ರವಾದಿವರ್ಯರು(ಸ) ತಮ್ಮ ಮನೆಯಲ್ಲಿ

(508) عَنِ ابْنِ عَبَّاسٍ قَالَ، قَالَ رَسُوْلُ اللّٰهِ صلى الله عليه وسلم خَيْرُكُمْ خَيْرُكُمْ لِاَهْلِهٖ وَاَنَا خَيْرُكُمْ لِاَهْلِیْ (ابن ماجه)

ಹ. ಇಬ್ನು ಅಬ್ಬಾಸ್(ರ) ಹೇಳುತ್ತಾರೆ- ತನ್ನ ಪತ್ನಿಯರೊಂದಿಗೆ ಉತ್ತಮವಾಗಿ ವರ್ತಿಸುವವನೇ ನಿಮ್ಮಲ್ಲಿ ಅತ್ಯುತ್ತಮನು. ಪತ್ನಿಯರೊಂದಿಗೆ ಉತ್ತಮವಾಗಿ ವರ್ತಿಸುವವರಲ್ಲಿ ನಾನೇ ಅತ್ಯುತ್ತಮನಾಗಿರುವೆನು. *[ಇಬ್ನುಮಾಜಃ]*

(509) عَنِ الْاَسْوَدِ بْنِ يَزِيْدَ قَالَ سَاَلْتُ عَائِشَةَ رض مَا كَانَ النَّبِیُّ صَلَّى اللّٰهُ عَلَيْهِ وَسَلَّمَ يَصْنَعُ فِیْ بَيْتِهٖ؟ قَالَتْ كَانَ يَكُوْنُ فِیْ مِهْنَةِ اَهْلِهٖ، تَعْنِیْ خِدْمَةَ اَهْلِهٖ، فَاِذَا حَضَرَتِ الصَّلٰوةُ خَرَجَ اِلَى الصَّلٰوةِ (بخاری)

ಅಸ್ವದ್ ಬಿನ್ ಯಝೀದ್ ಹೇಳುತ್ತಾರೆ- ಪ್ರವಾದಿ(ಸ) ಅವರು ಮನೆಯಲ್ಲಿರುವಾಗ ಏನು ಮಾಡುತ್ತಿದ್ದರೆಂದು ನಾನು ಹ. ಆಯಿಶಾರೊಂದಿಗೆ(ರ) ಕೇಳಿದೆ. ಅವರು ಹೇಳಿದರು- ಅವರು ಮನೆಯವರ ಕೆಲಸ ಕಾರ್ಯಗಳಲ್ಲಿ ನೆರವಾಗುತ್ತಿದ್ದರು ಮತ್ತು ನಮಾಝ್‌ನ ಸಮಯವಾದಾಗ ನಮಾಝ್‌ಗೆ ಹೊರಡುತ್ತಿದ್ದರು. *[ಬುಖಾರಿ]*

(510) عَنْ عَائِشَةَ قَالَتْ كَانَ رَسُوْلُ اللّٰهِ صلى الله عليه وسلم يَخْصِفُ نَعْلَهٗ وَيَخِيْطُ ثَوْبَهٗ وَيَعْمَلُ فِیْ بَيْتِهٖ كَمَا يَعْمَلُ اَحَدُكُمْ فِیْ بَيْتِهٖ، وَقَالَتْ كَانَ بَشَرًا مِنَ الْبَشَرِ يَفْلِیْ ثَوْبَهٗ وَيَحْلِبُ شَاتَهٗ وَيَخْدِمُ نَفْسَهٗ (ترمذی)

ಹ. ಆಯಿಶಾ(ರ) ಹೇಳುತ್ತಾರೆ- ಪ್ರವಾದಿ(ಸ) ತಮ್ಮ ಪಾದರಕ್ಷೆಗಳನ್ನು ಸರಿಪಡಿಸುತ್ತಿದ್ದರು. ತಮ್ಮ ಬಟ್ಟೆಯನ್ನು ಹೊಲಿಯುತ್ತಿದ್ದರು. ನೀವು ನಿಮ್ಮ ಮನೆಯಲ್ಲಿ ಮಾಡುವಂತಹ ಎಲ್ಲ ಕೆಲಸ ಕಾರ್ಯಗಳನ್ನು ಪ್ರವಾದಿ(ಸ) ತಮ್ಮ ಮನೆಯಲ್ಲಿ ಮಾಡುತ್ತಿದ್ದರು. ಹ. ಆಯಿಶಾ(ರ) ಹೇಳುತ್ತಾರೆ- ಪ್ರವಾದಿ(ಸ) ಮಾನವರ ಪೈಕಿ ಒಬ್ಬ ಮಾನವರಾಗಿದ್ದರು. ತಮ್ಮ ಬಟ್ಟೆಗಳಿಂದ ಹೇನು ಹೆಕ್ಕುತ್ತಿದ್ದರು. ತಮ್ಮ ಆಡಿನ ಹಾಲು ಕರೆಯುತ್ತಿದ್ದರು. ತಮ್ಮ ಇತರ ಕೆಲಸಗಳನ್ನೂ ತಾವೇ ಮಾಡುತ್ತಿದ್ದರು. *[ತಿರ್ಮಿದಿ]*

ಟಿಪ್ಪಣಿ: ಅರೇಬಿಯಾದ ವಾತಾವರಣ ಮತ್ತು ಅಲ್ಲಿನ ಹವಾಮಾನದ ಪ್ರಭಾವದಿಂದಾಗಿ ಅಲ್ಲಿ ಹೇನು ಬಹಳ ಹಬ್ಬುತ್ತಿದ್ದುವು. ವಾಸ್ತವದಲ್ಲಿ ಪ್ರವಾದಿ(ಸ) ಅವರ ಶುಚಿತ್ವಕ್ಕೆ ಸಾಟಿಯಿರಲಿಲ್ಲ.

ಪತ್ನಿಯರ ಭಾವನೆಗಳನ್ನು ಗೌರವಿಸುವುದು

(511) عَنْ عَائِشَةَ قَالَتْ رَأَيْتُ النَّبِيَّ صلى الله عليه وسلم يَسْتُرُنِي بِرِدَائِهِ وَأَنَا أَنْظُرُ إِلَى الْحَبَشَةِ يَلْعَبُونَ فِي الْمَسْجِدِ، حَتَّى أَكُونَ أَنَا الَّذِي أَسْأَمُهُ، فَاقْدُرُوا قَدْرَ الْجَارِيَةِ الْحَدِيثَةِ السِّنِّ الْحَرِيصَةِ عَلَى اللَّهْوِ (بخاری ومسلم)

ಹ. ಆಯಿಶಾ(ರ) ಹೇಳುತ್ತಾರೆ - ಪ್ರವಾದಿಯವರು(ಸ) ತಮ್ಮ ಚದ್ದರವನ್ನು ನನಗೆ ಅಡ್ಡವಾಗಿ ಹಿಡಿಯುತ್ತಿದ್ದರು. ನಾನು ಮಸೀದಿಯಲ್ಲಿ ನಡೆಯುತ್ತಿದ್ದ ಅಬಿಸೀನಿಯದವರ ಕವಾಯತುಗಳನ್ನು ನೋಡುತ್ತಿದ್ದೆ. ನಾನು ದಣಿಯುವ ತನಕ ಅವರು ತಮ್ಮ ಚದ್ದರವನ್ನು ಅಡ್ಡ ಹಿಡಿಯುತ್ತಿದ್ದರು. ಆದುದರಿಂದ ಜನರೇ! ನೀವು ಕನ್ಯೆಯರೊಂದಿಗೆ ವಿವಾಹ ಮಾಡುವುದಾದರೆ ಅವರ ಭಾವನೆಗಳನ್ನು ಗೌರವಿಸಿರಿ. ಕನ್ಯೆಯರು ಆಟ ವಿನೋದಗಳಲ್ಲಿ ಆಸಕ್ತರಾಗಿರುತ್ತಾರೆ. *[ಬುಖಾರಿ, ಮುಸ್ಲಿಮ್]*

ಟಿಪ್ಪಣಿ: ಇದರ ತಾತ್ಪರ್ಯ ಸ್ಪಷ್ಟವಿದೆ. ಸಮುದಾಯದ ಜನರಿಗೆ ಇದರಲ್ಲಿ ಉತ್ತಮ ಪಾಠವಿದೆಯೆಂಬುದನ್ನು ಹ. ಆಯಿಶಾ(ರ) ಸ್ಪಷ್ಟಪಡಿಸಿದ್ದಾರೆ.

ಇಲ್ಲಿ ಪುರುಷರು ಸ್ತ್ರೀಯರನ್ನು ನೋಡುವ ಕುರಿತು ಇರುವ ನಿರ್ಬಂಧವು ಸ್ತ್ರೀಯರಿಗೆ ಪುರುಷರನ್ನು ನೋಡುವ ಕುರಿತು ಇಲ್ಲವೆಂಬುದು ಗಮನಾರ್ಹ.

ವಿಧೇಯ ಪತ್ನಿಯ ನೆನಪು

(512) عَنْ عَائِشَةَ قَالَتْ مَا غِرْتُ عَلَى أَحَدٍ مِنْ نِسَاءِ النَّبِيِّ صلى الله عليه وسلم
مَا غِرْتُ عَلَى خَدِيجَةَ، وَمَا رَأَيْتُهَا قَطُّ، وَلَكِنْ كَانَ يُكْثِرُ ذِكْرَهَا، وَرُبَّمَا ذَبَحَ الشَّاةَ ثُمَّ
يُقَطِّعُهَا أَعْضَاءً ثُمَّ يَبْعَثُهَا فِي صَدَائِقِ خَدِيجَةَ، فَرُبَّمَا قُلْتُ لَهُ كَأَنْ لَمْ يَكُنْ فِي الدُّنْيَا
امْرَأَةٌ إِلَّا خَدِيجَةُ، فَيَقُولُ إِنَّهَا كَانَتْ وَكَانَتْ، وَكَانَ لِي مِنْهَا وَلَدٌ (بخاری ومسلم)

ಹ. ಆಯಿಶಾ(ರ) ಹೇಳುತ್ತಾರೆ- ಪ್ರವಾದಿಯವರಿಗೆ(ಸ) ಹ. ಖದೀಜಾರ(ರ) ಬಗ್ಗೆ ಇರುವಷ್ಟು ಗೌರವ ಭಾವನೆ ಇನ್ನಾವ ಪತ್ನಿಯ ಬಗೆಗೂ ಇರಲಿಲ್ಲ. ನಾನು ಖದೀಜಾರನ್ನು ನೋಡಿರಲಿಲ್ಲ. ಪ್ರವಾದಿ(ಸ) ಖದೀಜಾರ ಬಗ್ಗೆ ಅತ್ಯಧಿಕ ಪ್ರಸ್ತಾಪಿಸುತ್ತಿದ್ದರು. ಪ್ರವಾದಿ(ಸ) ಆಡು ಕೊಯ್ದು ತುಂಡು ಮಾಡಿದ ಬಳಿಕ ಖದೀಜಾರ ಗೆಳತಿಯರ ಮನೆಗೆ ಅದನ್ನು ಕಳಿಸುತ್ತಿದ್ದರು. ನಾನು ಹಲವೊಮ್ಮೆ, 'ಈ ಲೋಕದಲ್ಲಿ ಖದೀಜಾರ(ರ) ಹೊರತು ಬೇರೆ ಹೆಂಗಸರೇ ಇಲ್ಲವೇನೋ' ಎಂದು ಪ್ರವಾದಿವರ್ಯರಲ್ಲಿ ಹೇಳಿದ್ದುಂಟು. ಆಗೆಲ್ಲ ಪ್ರವಾದಿ(ಸ) ಖಂಡಿತವಾಗಿಯೂ ಆಕೆ ಬಹಳ ಒಳ್ಳೆಯ ಮಹಿಳೆ. ಅವರು ಹಾಗಿದ್ದರು, ಹೀಗಿದ್ದರು. ಅಷ್ಟೇ ಅಲ್ಲ, ಆಕೆಯಿಂದಲೇ ನನಗೆ ಮಕ್ಕಳಾಗಿವೆ ಎಂದು ಹೇಳುತ್ತಿದ್ದರು.

[ಬುಖಾರಿ, ಮುಸ್ಲಿಮ್]

ಟಿಪ್ಪಣಿ: ಹ. ಖದೀಜಾ(ರ) ಪ್ರವಾದಿಯವರ(ಸ) ಪ್ರಥಮ ಪತ್ನಿಯಾಗಿದ್ದರು. ಪ್ರವಾದಿತ್ವದ ಆರಂಭ ಘಟ್ಟದಲ್ಲಿ ಧರ್ಮಪ್ರಚಾರದ ವೇಳೆ ಅವರು ಎಲ್ಲ ಪರಿಸ್ಥಿತಿಗಳಲ್ಲೂ ಪ್ರವಾದಿವರ್ಯರ(ಸ) ಬೆಂಬಲಕ್ಕೆ ನಿಂತರು. ಪ್ರಚಾರ ರಂಗದಲ್ಲಿ ಎದುರಾದ ಸಕಲ ಸಂಕಷ್ಟಗಳನ್ನು ನಗುಮುಖದಿಂದ ಎದುರಿಸಿದರು. ಪ್ರವಾದಿತ್ವದ ಆರಂಭದ ದಿನಗಳಲ್ಲಿ ಅವರ ಬಳಿ 25 ಸಾವಿರ ದಿರ್ಹಮ್‌ಗಳಿದ್ದುವೆಂದು ಕೆಲವು ಚರಿತ್ರಕಾರರು ಹೇಳುತ್ತಾರೆ. ಅಂದಿನ 25 ಸಾವಿರ ದಿರ್ಹಮ್‌ಗಳ ಮೌಲ್ಯವೇನಾಗಿರಬಹುದೆಂದು ಊಹಿಸಿರಿ. ಆದರೆ 8-9 ವರ್ಷಗಳಲ್ಲಿ ಅವರು ಈ ಹಣವನ್ನೆಲ್ಲ ಧರ್ಮ ಪ್ರಚಾರಕ್ಕಾಗಿ ವ್ಯಯಿಸಿಬಿಟ್ಟರು. ಇಸ್ಲಾಮ್ ಸ್ವೀಕರಿಸಿದ ತಪ್ಪಿಗಾಗಿ ಮನೆಗಳಿಂದ ಹೊರಹಾಕಲ್ಪಟ್ಟ ಯುವಕರೆಲ್ಲರ ಖರ್ಚನ್ನು ಅವರೇ ನೋಡಿಕೊಳ್ಳುತ್ತಿದ್ದರು. ಆದುದರಿಂದ ಪ್ರವಾದಿ(ಸ) ಇಂತಹ ವಿಧೇಯ ಪತ್ನಿಯನ್ನು ಜೀವಮಾನವಿಡೀ ಮರೆಯದಿದ್ದರೆ ಅದರಲ್ಲಿ ಆಶ್ಚರ್ಯವಿಲ್ಲ.

ಪತ್ನಿಯರ ಹಕ್ಕುಗಳಲ್ಲಿ ಸಮಾನತೆ

(513) عَنْ عَائِشَةَ قَالَتْ كَانَ رَسُوْلُ اللّٰهِ صلى الله عليه وسلم يَقْسِمُ فَيَعْدِلُ وَيَقُوْلُ اَللّٰهُمَّ هٰذَا قَسْمِيْ فِيْ مَا اَمْلِكُ فَلَا تَلُمْنِيْ فِيْمَا تَمْلِكُ وَلَا اَمْلِكُ (ابوداؤد، ترمذی، نسائی)

ಹ. ಆಯಿಶಾ(ರ) ಹೇಳುತ್ತಾರೆ - ಪ್ರವಾದಿಯವರು(ಸ) ತಮ್ಮ ಪತ್ನಿಯರ ಮಧ್ಯೆ ತಮ್ಮ ಸರದಿ ಮತ್ತಿತರ ಹಕ್ಕುಗಳ ಪೂರೈಕೆಯಲ್ಲಿ ಸಂಪೂರ್ಣ ನ್ಯಾಯ ಪಾಲಿಸುತ್ತಿದ್ದರು ಮತ್ತು ತಮ್ಮ ಪ್ರಭುವಿನಲ್ಲಿ ಹೀಗೆ ಬಿನ್ನವಿಸುತ್ತಿದ್ದರು - ಓ ಅಲ್ಲಾಹ್! ನನ್ನ ಶಕ್ತ್ಯಾನುಸಾರ ನ್ಯಾಯಪೂರ್ಣವಾದ ಸಮಾನತೆಯನ್ನು ನಾನು ಪಾಲಿಸುತ್ತಿರುವೆನು. ಆದರೆ ಮಾನಸಿಕ ಒಲವು ಮತ್ತು ಪ್ರೇಮವು ನನ್ನ ಕೈಯಲ್ಲಿಲ್ಲ. ಆದುದರಿಂದ ಯಾವುದೇ ಪತ್ನಿಯೊಂದಿಗೆ ನನ್ನ ಪ್ರೀತಿಯು ಹೆಚ್ಚಾದರೆ ಅದಕ್ಕಾಗಿ ನನ್ನನ್ನು ಹಿಡಿಯಬೇಡ!

[ಅಬೂ ದಾವೂದ್, ತಿರ್ಮಿದಿ, ನಸಾಈ]

ಟಿಪ್ಪಣಿ: ಈ ಹದೀಸ್‌ನಿಂದ ತಿಳಿದು ಬರುವುದೇನೆಂದರೆ ಒಬ್ಬನಿಗೆ ಒಂದಕ್ಕಿಂತ ಹೆಚ್ಚು ಪತ್ನಿಯರಿದ್ದರೆ ಅನ್ನ, ಅರಿವೆ ಮತ್ತಿತರ ವಿಷಯಗಳಲ್ಲಿ ಸಂಪೂರ್ಣ ನ್ಯಾಯ ಪಾಲಿಸಬೇಕು. ಆದರೆ ಒಬ್ಬಳ ಕಡೆಗೆ ಮಾನಸಿಕ ಒಲವು ಹೆಚ್ಚಿದ್ದರೆ ಮತ್ತು ಈ ಹೆಚ್ಚಳದಿಂದಾಗಿ ಮೇಲೆ ಪ್ರಸ್ತಾಪಿಸಿದ ನ್ಯಾಯಪೂರ್ಣ ವಿತರಣೆಯ ಮೇಲೆ ಯಾವುದೇ ಪ್ರಭಾವ ಬೀಳದಿದ್ದರೆ ಅದಕ್ಕಾಗಿ ಪರಲೋಕದಲ್ಲಿ ಅವನಲ್ಲಿ ವಿಚಾರಣೆ ನಡೆಯದು!

ಪತ್ನಿಯ ತಪ್ಪಿನ ವಿಚಾರಣೆ

(514) عَنْ عَائِشَةَ قَالَتْ اِعْتَلَّ بَعِيْرُ صَفِيَّةَ، وَعِنْدَ زَيْنَبَ فَضْلُ ظَهْرٍ، فَقَالَ رَسُوْلُ اللّٰهِ صلى الله عليه وسلم لِزَيْنَبَ اَعْطِيْهَا بَعِيْرًا، فَقَالَتْ اَنَا اُعْطِيْ تِلْكَ الْيَهُوْدِيَّةَ؟ فَغَضِبَ رَسُوْلُ اللّٰهِ صلى الله عليه وسلم فَهَجَرَهَا ذَا الْحِجَّةِ وَالْمُحَرَّمَ وَبَعْضَ صَفَرَ (ابوداؤد)

ಹ. ಆಯಿಶಾ(ರ) ಹೇಳುತ್ತಾರೆ- ಸಫಿಯ್ಯಾರ(ರ) ಒಂಟೆ ಕಾಯಿಲೆ ಬಿತ್ತು. ಝೈನಬ್‌ರ(ರ) ಬಳಿ ಒಂದು ಹೆಚ್ಚುವರಿ ಒಂಟೆಯಿತ್ತು. ಅದಕ್ಕಾಗಿ ಪ್ರವಾದಿಯವರು(ಸ) ಝೈನಬ್‌ರೊಂದಿಗೆ, ಆ ಹೆಚ್ಚಿನ ಒಂಟೆಯನ್ನು ಸಫಿಯ್ಯಾಳಿಗೆ ಕೊಡು ಎಂದರು. ಆಗ ಝೈನಬ್- ನಾನೇಕೆ ಆ ಯಹೂದಿ ಹೆಂಗಸಿಗೆ ನನ್ನ ಒಂಟೆಯನ್ನು ಕೊಡಬೇಕು ಎಂದು ಕೇಳಿಬಿಟ್ಟರು.

ಈ ಮಾತಿನಿಂದ ಪ್ರವಾದಿ(ಸ) ಕುಪಿತರಾದರು ಮತ್ತು ಝೈನಬ್‌ರೊಂದಿಗೆ ದುಲ್‌ಹಜ್ಜ್, ಮುಹರ್ರಮ್ ಮತ್ತು ಸಫರ್ ತಿಂಗಳ ಕೆಲವು ದಿನಗಳ ಕಾಲ ಸಂಬಂಧ ಕಡಿದು ದೂರವಿದ್ದರು. *[ಅಬೂ ದಾವೂದ್]*

ಟಿಪ್ಪಣಿ: ಇದರಿಂದ ತಿಳಿದು ಬರುವುದೇನೆಂದರೆ ಧಾರ್ಮಿಕ ಕಾರಣಗಳಿಗಾಗಿ ಮೂರು ದಿನಕ್ಕಿಂತಲೂ ಅಧಿಕ ಕಾಲ ಸಂಬಂಧ ಮುರಿಯಬಹುದು. ಈ ಹದೀಸ್‌ನಲ್ಲಿ ಸೂಚಿಸಿರುವಂತೆ ಪ್ರವಾದಿವರ್ಯರ(ಸ) ಕೋಪವು ತಮ್ಮ ಸ್ವಂತಕ್ಕಾಗಿರಲಿಲ್ಲ. ಬದಲಾಗಿ ಮುಸ್ಲಿಮಳಾದವಳೊಬ್ಬಳು ಇನ್ನೊಬ್ಬ ಮುಸ್ಲಿಮಳನ್ನು ಯಹೂದಿಯೆಂದು ಮೂದಲಿಸಿದ ಕಾರಣಕ್ಕಾಗಿತ್ತು. ಪ್ರವಾದಿಯ ಪತ್ನಿಯಾಗಿ ಇನ್ನೊಬ್ಬ ಪತ್ನಿಯನ್ನು ಅಸಭ್ಯವಾಗಿ ಮೂದಲಿಸಿದ್ದೇ ತಪ್ಪು.

ಪ್ರವಾದಿಯವರ(ಸ) ಔದಾರ್ಯ

(515) عَنْ جَابِرٍ قَالَ مَا سُئِلَ النَّبِيُّ صلى الله عليه وسلم شَيْئًا قَطُّ فَقَالَ لَا

(بخاری و مسلم)

ಹ. ಜಾಬಿರ್(ರ) ಹೇಳುತ್ತಾರೆ- ಪ್ರವಾದಿ(ಸ) ಎಂದೂ ಯಾವ ಭಿಕ್ಷುಕನಿಗೂ 'ಇಲ್ಲ' ಎಂದು ಹೇಳಿದ್ದಿಲ್ಲ. *[ಬುಖಾರಿ, ಮುಸ್ಲಿಮ್]*

ಟಿಪ್ಪಣಿ: ಪ್ರವಾದಿಯವರ(ಸ) ಬಳಿ ಕೊಡಲಿಕ್ಕೆ ಆ ಸಮಯದಲ್ಲಿ ಏನೂ ಇಲ್ಲದಿದ್ದರೆ ಇನ್ನೊಮ್ಮೆ ಕೊಡುವೆನೆಂದು ವಾಗ್ದಾನ ಮಾಡುತ್ತಿದ್ದರು. ಯಾವ ಭಿಕ್ಷುಕನ ಕೋರಿಕೆಯನ್ನೂ ತಿರಸ್ಕರಿಸುತ್ತಿರಲಿಲ್ಲ.

ಶಿಫಾರಸಿಗೆ ಪ್ರೇರಣೆ

(516) عَنْ أَبِي مُوسَى عَنِ النَّبِيِّ صلى الله عليه وسلم أَنَّهُ كَانَ إِذَا أَتَاهُ السَّائِلُ أَوْ صَاحِبُ الْحَاجَةِ قَالَ اشْفَعُوا فَلْتُؤْجَرُوا، وَيَقْضِي اللّٰهُ عَلَى لِسَانِ رَسُولِهِ مَا شَاءَ

(بخاری و مسلم)

ಹ. ಅಬೂ ಮೂಸಾ ಅಶ್‌ಅರೀಯವರು(ರ) ಪ್ರವಾದಿಯವರ(ಸ) ಕುರಿತು ಹೀಗೆ ವಿವರಿಸುತ್ತಾರೆ- ಪ್ರವಾದಿಯವರ(ಸ) ಬಳಿಗೆ ಯಾರಾದರೂ ಭಿಕ್ಷುಕನು ಬಂದಾಗ ಅವರು ಜನರೊಂದಿಗೆ, "ಅವನಿಗೆ ಸಹಾಯ ಮಾಡುವಂತೆ ಶಿಫಾರಸು ಮಾಡಿರಿ, ಅದಕ್ಕಾಗಿ ನಿಮಗೆ

ಪುಣ್ಯ ಸಿಗುವುದು" ಎಂದು ಹೇಳುತ್ತಿದ್ದರು. ಅಲ್ಲಾಹನು ತನಗಿಷ್ಟ ಬಂದುದನ್ನು ಪ್ರವಾದಿಯ ಬಾಯಿಯ ಮೂಲಕ ತೀರ್ಮಾನಿಸುತ್ತಿದ್ದನು. *[ಬುಖಾರಿ, ಮುಸ್ಲಿಮ್]*

ಟಿಪ್ಪಣಿ: ಈ ಹದೀಸ್‌ನ ಅರ್ಥವೇನೆಂದರೆ ಅಪೇಕ್ಷಿತನೊಬ್ಬನು ಪ್ರವಾದಿಯವರ(ಸ) ಬಳಿಗೆ ಬಂದರೆ ಅವರು ಜನರಿಗೆ ಹೀಗೆ ಆದೇಶಿಸುತ್ತಿದ್ದರು: "ಅವನ ಕುರಿತು ಒಳ್ಳೆಯ ಮಾತನ್ನು ಹೇಳಿರಿ. ಅವನಿಗೆ ಸಹಾಯ ಮಾಡುವಂತೆ ಪರಸ್ಪರ ಪ್ರೇರೇಪಿಸಿರಿ. ಇದು ಪುಣ್ಯ ಕಾರ್ಯವಾಗಿದೆ." ಅನಂತರ ಪ್ರವಾದಿ(ಸ), ಅವನಿಗೆ ಏನನ್ನು ಕೊಡಲು ತೀರ್ಮಾನಿಸುತ್ತಾರೋ ಅದನ್ನು ಕೊಡುತ್ತಿದ್ದರು.

ಪ್ರವಾದಿಯವರ(ಸ) ಮಂದಹಾಸ

(517) عَنْ عَائِشَةَ قَالَتْ مَا رَأَيْتُ رَسُوْلَ اللهِ صلى الله عليه وسلم مُسْتَجْمِعًا قَطُّ ضَاحِكًا حَتَّى تُرَى مِنْهُ لَهَوَاتُهُ، إِنَّمَا كَانَ يَتَبَسَّمُ (بخاری ومسلم)

ಹ. ಆಯಿಶಾ(ರ) ಹೇಳುತ್ತಾರೆ- ನಾನು ಪ್ರವಾದಿಯವರನ್ನು(ಸ) ಅವರ ಅಂಗುಳ ಕಾಣುವಂತೆ ನಗುವುದನ್ನು ಎಂದೂ ಕಂಡಿಲ್ಲ. ಅವರು ಯಾವಾಗಲೂ ಮುಗುಳ್ನಗುತ್ತಿದ್ದರು. (ಗಹಗಹಿಸಿ ನಗುತ್ತಿರಲಿಲ್ಲ) *[ಬುಖಾರಿ, ಮುಸ್ಲಿಮ್]*

ಪ್ರವಾದಿಯವರ(ಸ) ತರಬೇತಿಯ ಶೈಲಿ

(518) عَنْ أَنَسٍ قَالَ كَانَ النَّبِيُّ صلى الله عليه وسلم قَلَّمَا يُوَاجِهُ الرَّجُلَ بِشَيْءٍ يَكْرَهُهُ، فَدَخَلَ عَلَيْهِ يَوْمًا رَجُلٌ وَعَلَيْهِ أَثَرُ صُفْرَةٍ، فَلَمَّا قَامَ قَالَ لِأَصْحَابِهِ لَوْ غَيَّرَ أَوْ نَزَعَ هٰذِهِ الصُّفْرَةَ (الادب المفرد، امام بخاری)

ಹ. ಅನಸ್(ರ) ಹೇಳುತ್ತಾರೆ- ಪ್ರವಾದಿಯವರು(ಸ) (ತಮ್ಮ ಮೃದು ಸ್ವಭಾವ ದಿಂದಾಗಿ) ಯಾರನ್ನೂ ಅವರ ಅಪ್ರಿಯ ಕಾರ್ಯಕ್ಕಾಗಿ ನೇರವಾಗಿ ಟೀಕಿಸುತ್ತಿರಲಿಲ್ಲ. ಒಂದು ದಿನ ಅವರ ಬಳಿಗೆ ಒಬ್ಬ ವ್ಯಕ್ತಿ ಬಂದ. ಅವನ ಬಟ್ಟೆಯಲ್ಲಿ ಯಾವುದೋ ಹಳದಿ ಬಣ್ಣದ ಕಲೆಯಿತ್ತು. (ಬಹುಶಃ ಅವನು ಯಾವುದೋ ಹಳದಿ ವಸ್ತು ಉಪಯೋಗಿಸಿದ್ದು, ಅದರ ಕಲೆಯನ್ನು ಪ್ರವಾದಿ(ಸ) ನೋಡಿರಬೇಕು) ಅವನು ಹೊರಟು ಹೋದ ನಂತರ ಪ್ರವಾದಿ(ಸ) ಅಲ್ಲಿ ನೆರೆದವರೊಂದಿಗೆ, 'ಆ ವ್ಯಕ್ತಿ ತನ್ನ ಹಳದಿ ಬಣ್ಣವನ್ನು ದೂರೀಕರಿಸುತ್ತಿದ್ದರೆ ಎಷ್ಟು ಚೆನ್ನಾಗಿತ್ತು!' ಎಂದರು. *[ಅಲ್ ಅದಬುಲ್ ಮುಫ್ರದ್- ಇಮಾಮ್ ಬುಖಾರಿ]*

ಟಿಪ್ಪಣಿ: ಪ್ರವಾದಿ(ಸ) ಸಭಿಕರೊಂದಿಗೆ ಅವರ ಪೈಕಿ ಯಾರಾದರೂ ಈ ವಿಷಯವನ್ನು ಅವನಿಗೆ ತಿಳಿಸಿ ಅವನನ್ನು ಸರಿಪಡಿಸಬಹುದೆಂಬ ನಿರೀಕ್ಷೆಯಿಂದ ಆ ಮಾತನ್ನು ಹೇಳಿದ್ದರು. ಹದೀಸ್‌ನಲ್ಲಿ ಅದರ ಪ್ರಸ್ತಾಪವಿಲ್ಲದಿದ್ದರೂ ಪ್ರವಾದಿಯವರ(ಸ) ಮಾತನ್ನು ಯಾರಾದರೂ ಅವನಿಗೆ ಖಂಡಿತ ತಿಳಿಸಿರಬಹುದು.

---

(519) عَنْ عَبْدِ اللهِ بْنِ عُمَرَ اَنَّ رَسُوْلَ اللهِ صلى الله عليه وسلم اَتَى فَاطِمَةَ فَوَجَدَ عَلَى بَابِهَا سِتْرًا ، فَلَمْ يَدْخُلْ عَلَيْهَا ، وَقَلَّمَا كَانَ يَدْخُلُ اِلَّا بَدَءَ بِهَا ، قَالَ فَجَاءَ عَلِيٌّ فَرَآهَا مُهْتَمَّةً ، فَقَالَ مَا لَكِ ؟ فَقَالَتْ جَاءَ اِلَيَّ رَسُوْلُ اللهِ صلى الله عليه وسلم فَلَمْ يَدْخُلْ عَلَيَّ . فَاَتَاهُ عَلِيٌّ . فَقَالَ يَا رَسُوْلَ اللهِ اِنَّ فَاطِمَةَ اِشْتَدَّ عَلَيْهَا اَنَّكَ جِئْتَهَا فَلَمْ تَدْخُلْ عَلَيْهَا ، فَقَالَ وَمَا اَنَا وَالدُّنْيَا وَمَا اَنَا وَالرَّقْمَةُ ؟ قَالَ فَذَهَبَ اِلَى فَاطِمَةَ فَاَخْبَرَهَا بِقَوْلِ رَسُوْلِ اللهِ صلى الله عليه وسلم ، فَقَالَتْ فَقُلْ لِرَسُوْلِ اللهِ فَمَا ذَا تَاْمُرُنِيْ بِهِ ؟ فَقَالَ قُلْ لَهَا تُرْسِلُ بِهِ اِلَى بَنِيْ فُلَانٍ (مسند احمد بن حنبل)

ಹ. ಅಬ್ದುಲ್ಲಾ ಬಿನ್ ಉಮರ್(ರ) ಹೇಳುತ್ತಾರೆ- ಒಂದು ದಿನ ಪ್ರವಾದಿಯವರು(ಸ) ತಮ್ಮ ಪುತ್ರಿ ಫಾತಿಮಾರ(ರ) ಮನೆಗೆ ಹೋದರು. ಆದರೆ ಅವರನ್ನು ಭೇಟಿಯಾಗದೆ ಬಾಗಿಲ ಬಳಿಯಿಂದಲೇ ಮರಳಿದರು. ಏಕೆಂದರೆ ಅವರು ಬಾಗಿಲಲ್ಲಿ ಚಿತ್ರವಿರುವ ಬಣ್ಣದ ಪರದೆ ನೇತಾಡುತ್ತಿತ್ತು. ವಸ್ತುತಃ ಪ್ರವಾದಿಯವರು(ಸ) ಪ್ರಯಾಣದಿಂದ ಮರಳಿದಾಗಲೆಲ್ಲಾ ಮೊತ್ತಮೊದಲು ಹ. ಫಾತಿಮಾರನ್ನು(ರ) ಭೇಟಿಯಾಗುತ್ತಿದ್ದರು.

ವರದಿಗಾರ ಅಬ್ದುಲ್ಲಾ ಬಿನ್ ಉಮರ್ ಹೇಳುತ್ತಾರೆ: ಹ. ಅಲೀ(ರ) ಮನೆಗೆ ಬಂದಾಗ ಹ. ಫಾತಿಮಾ ಬೇಸರದಿಂದ ಕುಳಿತಿರುವುದನ್ನು ಕಂಡು ಅದರ ಕಾರಣ ಕೇಳಿದರು. ಫಾತಿಮಾ ಹೇಳಿದರು- "ಪ್ರವಾದಿ(ಸ) ನಮ್ಮಲ್ಲಿಗೆ ಬಂದು ಬಾಗಿಲ ಬಳಿಯಿಂದಲೇ ಮರಳಿ ಹೋಗಿದ್ದಾರೆ." ಇದನ್ನು ಕೇಳಿ ಹ. ಅಲೀ(ರ) ಪ್ರವಾದಿವರ್ಯರ(ಸ) ಬಳಿಗೆ ಹೋಗಿ ಹೀಗೆಂದರು- ಅಲ್ಲಾಹನ ಸಂದೇಶವಾಹಕರೇ! ತಾವು ನಮ್ಮ ಮನೆಗೆ ಬಂದು ಬಾಗಿಲ ಬಳಿಯಿಂದಲೇ ಮರಳಿರುವಿರಿ. ಫಾತಿಮಾಳನ್ನು ಭೇಟಿಯಾಗಲಿಲ್ಲ. ಇದರಿಂದಾಗಿ ಆಕೆ ಬಹಳ ಬೇಸರಗೊಂಡಿದ್ದಾಳೆ. ಆಗ ಪ್ರವಾದಿ(ಸ) ಹೇಳಿದರು- ನನಗೆ ಲೌಕಿಕ ಅಲಂಕಾರಗಳಲ್ಲಿ ಆಸಕ್ತಿಯಿಲ್ಲ. ನನಗೆ ಚಿತ್ರವಿರುವ ಬಣ್ಣದ ಪರದೆಯಿಂದ ಏನಾಗಬೇಕಾಗಿದೆ? ಇದನ್ನು ಕೇಳಿ ಹ. ಅಲೀಯವರು ಫಾತಿಮಾರ ಬಳಿಗೆ ಹೋಗಿ ಪ್ರವಾದಿ(ಸ) ಹೇಳಿದುದನ್ನು ತಿಳಿಸಿದರು. ಆಗ ಫಾತಿಮಾರು ಅಲೀಯವರನ್ನು- ಇನ್ನು ಆ ಪರದೆಯನ್ನು ಏನು ಮಾಡಬೇಕೆಂದು ತಾವು ಪ್ರವಾದಿವರ್ಯರಲ್ಲಿ(ಸ) ಕೇಳಿ ಬನ್ನಿ

ಎಂದು ಹೇಳಿ ಕಳಿಸಿದರು. ಹ. ಅಲೀ ಪ್ರವಾದಿವರ್ಯರ(ಸ) ಬಳಿಗೆ ಹೋಗಿ ಕೇಳಿದಾಗ ಪ್ರವಾದಿ(ಸ) ಹೇಳಿದರು- ಅದನ್ನು ಇಂತಹವರ ಮನೆಗೆ ಕಳಿಸುವಂತೆ ಫಾತಿಮಾಳಿಗೆ ಹೇಳಿರಿ (ಅಲ್ಲಿನ ಸ್ತ್ರೀಯರಿಗೆ ಕುಪ್ಪಸ ಹೊಲಿಸಲಿಕ್ಕಾಗಬಹುದು. ಬಹುಶಃ ಆ ಮನೆಯವರು ಅದರ ಅಪೇಕ್ಷಿತರಾಗಿರಬಹುದು.) *[ಮುಸ್ನದ್ ಅಹ್ಮದ್ ಬಿನ್ ಹಂಬಲ್]*

ಟಿಪ್ಪಣಿ: ಚಿತ್ರವಿರುವ ಪರದೆಯನ್ನು ಬಾಗಿಲಲ್ಲಿ ತೂಗು ಹಾಕುವುದರಲ್ಲಿ ತಪ್ಪೇನೂ ಇಲ್ಲ. ಆದರೆ ಅದರಲ್ಲಿ ಲೌಕಿಕ ಅಲಂಕಾರ-ಶೃಂಗಾರಗಳತ್ತ ಒಲವಿನ ಸೂಚನೆ ಖಂಡಿತ ಇದೆ. ಪ್ರವಾದಿಯವರು(ಸ) ತಮ್ಮ ಕಾಲದ ಸತ್ಯವಿಶ್ವಾಸಿ ಸ್ತ್ರೀ-ಪುರುಷರನ್ನು ಅಂತ್ಯ ದಿನದ ವರೆಗೆ ಬರುವ ಸ್ತ್ರೀ-ಪುರುಷರಿಗೆ ಆದರ್ಶರನ್ನಾಗಿ ಮಾಡಬಯಸಿದ್ದರು. ಆದುದರಿಂದ ಅವರು ಅದರ ಕುರಿತು ತಮ್ಮ ತಿರಸ್ಕಾರ ಭಾವವನ್ನು ಪ್ರದರ್ಶಿಸಿದರು.

ಪ್ರವಾದಿಯವರ(ಸ) ಆಹಾರ ಸೇವನೆ

(520) عَنْ اَبِیْ هُرَيْرَةَ قَالَ مَا عَابَ النَّبِیُّ صلی الله علیه وسلم طَعَامًا قَطُّ، اِنِ اشْتَهَاهُ اَكَلَهُ وَاِنْ كَرِهَهُ تَرَكَهُ (بخاری، مسلم)

ಹ. ಅಬೂ ಹುರೈರಾ(ರ) ಹೇಳುತ್ತಾರೆ- ಪ್ರವಾದಿಯವರು(ಸ) ಎಂದೂ ಯಾವ ಊಟದ ಬಗ್ಗೆಯೂ ಆಕ್ಷೇಪವೆತ್ತುತ್ತಿರಲಿಲ್ಲ. (ಅದರಲ್ಲಿ ಕುಂದು ಕೊರತೆ ಹುಡುಕುತ್ತಿರಲಿಲ್ಲ) ಇಷ್ಟವಿದ್ದರೆ ತಿನ್ನುತ್ತಿದ್ದರು. ಇಲ್ಲವಾದರೆ ಬಿಡುತ್ತಿದ್ದರು. *[ಬುಖಾರಿ, ಮುಸ್ಲಿಮ್]*

(521) عَنْ اَبِیْ اُمَامَةَ قَالَ اِنَّ النَّبِیَّ صلی الله علیه وسلم كَانَ اِذَا رَفَعَ مَائِدَتَهُ قَالَ اَلْحَمْدُ لِلّٰهِ كَثِيْرًا طَيِّبًا مُبَارَكًا فِيْهِ غَيْرَ مَكْفِيٍّ وَلَا مُوَدَّعٍ وَلَا مُسْتَغْنًى عَنْهُ رَبَّنَا (بخاری)

ಅಬೂ ಉಮಾಮ(ರ) ಹೇಳುತ್ತಾರೆ- ಪ್ರವಾದಿ(ಸ) ಊಟ ಮಾಡಿಯಾದ ನಂತರ ಹೀಗೆ ಪ್ರಾರ್ಥಿಸುತ್ತಿದ್ದರು- ಅಲ್ ಹಮ್ದುಲಿಲ್ಲಾಹಿ ಕಸೀರನ್ ತಯ್ಯಿಬನ್ ಮುಬಾರಕನ್ ಫೀಹಿ ಗೈರಿ ಮಕ್ಫಿಯ್ಯಿನ್ ವಲಾ ಮುವದ್ದಿನ್ ವಲಾ ಮುಸ್ತಗ್‌ನನ್ ಅನ್‌ಹು ರಬ್ಬನಾ (ಅರ್ಥ: ಅಲ್ಲಾಹನಿಗೆ ಕೃತಜ್ಞತೆ! ಅತ್ಯಧಿಕ, ಅತ್ಯುತ್ತಮ ಸುಸಮೃದ್ಧ ಕೃತಜ್ಞತೆ! ನಾವು ಸ್ವಯಂ ಸಲ್ಲಿಸುವ, ನಮ್ಮಿಂದ ಎಂದೂ ನಿಂತು ಹೋಗದ, ನಾವು ಎಂದೂ ನಿರಪೇಕ್ಷರಾಗದಂತಹ ಮತ್ತು ನಿರ್ಲಕ್ಷ್ಯರಾಗದಂತಹ ಕೃತಜ್ಞತೆ- ಓ ನಮ್ಮ ಪ್ರಭೂ!) *[ಬುಖಾರಿ]*

ದೀನಭಾವ

(522) عَنْ عَبْدِ اللّٰهِ بْنِ عَمْرٍو قَالَ مَا رُءِیَ رَسُوْلُ اللّٰهِ صلی اللہ علیہ وسلم
یَأْکُلُ مُتَّکِئًا وَلَا یَطَأُ عَقِبَهٗ رَجُلَانِ (ابوداؤد)

ಅಬ್ದುಲ್ಲಾ ಬಿನ್ ಅಮ್ರ್(ರ)ಹೇಳುತ್ತಾರೆ: ಪ್ರವಾದಿ(ಸ), ಅರಸರ ಮತ್ತು ಸಿರಿವಂತರ ಸಂಪ್ರದಾಯದಂತೆ ಒರಗಿ ಕುಳಿತು ಊಟ ಮಾಡುವುದನ್ನು ನಾವು ಯಾರೂ ನೋಡಿಲ್ಲ. (ಸಾಮಾನ್ಯವಾಗಿ ಅವರು ಪದ್ಮಾಸನದಲ್ಲಿ ಕುಳಿತು ಊಟ ಮಾಡುತ್ತಿದ್ದರು.) ಅದೇ ರೀತಿಯಲ್ಲಿ ಪ್ರವಾದಿಯವರ(ಸ) ಹಿಂದೆ ಇಬ್ಬರು ವ್ಯಕ್ತಿಗಳಾದರೂ ನಡೆಯುವುದನ್ನು ಯಾರೂ ಕಂಡಿಲ್ಲ. (ಅರಸರ ಮತ್ತು ಸಿರಿವಂತರ ಸಂಪ್ರದಾಯದಂತೆ ಅವರ ಹಿಂದೆ ಮುಂದೆ, ಸರಿಯಿರಿ-ಸರಿಯಿರಿ ಎಂದು ಹೇಳುವಂತಹ ಅಂಗ ರಕ್ಷಕರೂ ಇರುತ್ತಿರಲಿಲ್ಲ.) *[ಅಬೂ ದಾವೂದ್]*

---

(523) عَنْ قُدَامَةَ بْنِ عَبْدِ اللّٰهِ قَالَ رَأَیْتُ رَسُوْلَ اللّٰهِ صلی اللہ علیہ وسلم
یَرْمِی الْجَمْرَةَ یَوْمَ النَّحْرِ عَلٰی نَاقَةٍ صَهْبَاءَ لَا ضَرْبَ وَلَا طَرْدَ وَلَا إِلَیْکَ إِلَیْکَ
(المنذری بحوالہ صحیح ابن خزیمہ)

ಹ. ಕುದಾಮಃ ಬಿನ್ ಅಬ್ದುಲ್ಲಾ ಹೇಳುತ್ತಾರೆ- ನಾನು ಪ್ರವಾದಿ(ಸ) ಅವರನ್ನು ಕುರ್ಬಾನಿಯ ದಿನದಂದು ಕೇಸರಿ ವರ್ಣದ ಒಂಟೆಯ ಮೇಲೆ ಸವಾರಿ ಮಾಡುತ್ತಾ ಜಮ್ರಾಕ್ಕೆ ಕಲ್ಲೆಸೆಯುವುದನ್ನು ಕಂಡೆ. ಅಲ್ಲಿ ಕಾವಲು ಭಟರ ಆರ್ಭಟವಾಗಲಿ, ಜನರನ್ನು ಓಡಿಸುವುದಾಗಲಿ, ಅತ್ತ ಸರಿಯಿರಿ- ಇತ್ತ ಸರಿಯಿರಿಯೆಂಬ ಘೋಷಣೆಯಾಗಲಿ ಯಾವುದೂ ಇರಲಿಲ್ಲ. *[ಅಲ್‌ಮುಂದಿರಿ- ಇಬ್ನು ಖುಝೈಮ(ರ)ರಿಂದ]*

ಟಿಪ್ಪಣಿ: ಇದು ಹಿ.ಶ. 10ರಲ್ಲಿ ಪ್ರವಾದಿಯವರ(ಸ) ಜೀವನದ ಕೊನೆಯ ಹಜ್ಜ್‌ನ ವೇಳೆ ನಡೆದ ಘಟನೆ. ಆಗ ಇಡೀ ಅರಬ್ ದೇಶವು ಪ್ರವಾದಿಯವರ(ಸ) ಸ್ವಾಧೀನಕ್ಕೆ ಬಂದಿತ್ತು. ಆದರೆ ಅರಸುತನದ ಯಾವ ಆರ್ಭಟವೂ ಅಲ್ಲಿ ಕಾಣುತ್ತಿರಲಿಲ್ಲ!

ರೋಗಿಯ ಸಂದರ್ಶನ

(524) عَنِ ابْنِ عُمَرَ قَالَ كُنَّا جُلُوسًا مَعَ رَسُولِ اللّٰهِ صلى الله عليه وسلم، إِذْ جَاءَهُ رَجُلٌ مِنَ الْأَنْصَارِ فَسَلَّمَ عَلَيْهِ، ثُمَّ أَدْبَرَ الْأَنْصَارِيُّ فَقَالَ رَسُولُ اللّٰهِ صلى الله عليه وسلم يَا أَخَا الْأَنْصَارِ كَيْفَ أَخِي سَعْدُ بْنُ عُبَادَةَ؟ فَقَالَ صَالِحٌ، فَقَالَ رَسُولُ اللّٰهِ صلى الله عليه وسلم مَنْ يَعُودُهُ مِنْكُمْ؟ فَقَامَ وَقُمْنَا مَعَهُ، وَنَحْنُ بِضْعَةَ عَشَرَ، مَا عَلَيْنَا نِعَالٌ وَلَا خِفَافٌ وَلَا قَلَانِسُ وَلَا قُمُصٌ، نَمْشِي فِي تِلْكَ السِّبَاخِ حَتَّى جِئْنَاهُ، فَاسْتَأْخَرَ قَوْمُهُ مِنْ حَوْلِهِ حَتَّى دَنَا رَسُولُ اللّٰهِ صلى الله عليه وسلم وَأَصْحَابُهُ الَّذِينَ مَعَهُ .... (مسلم)

ಹ. ಇಬ್ನು ಉಮರ್(ರ) ಹೇಳುತ್ತಾರೆ- ನಾವು ಪ್ರವಾದಿಯವರ(ಸ) ಬಳಿ ಕುಳಿತಿದ್ದೆವು. ಅಲ್ಲಿಗೆ ಒಬ್ಬ ಅನ್ಸಾರಿ ಬಂದ. ಅವನು ಪ್ರವಾದಿಯವರಿಗೆ(ಸ) ಸಲಾಮ್ ಹೇಳಿ ಮರಳಲುದ್ಯುಕ್ತನಾದ. ಆಗ ಪ್ರವಾದಿಯವರು(ಸ) ಅವನೊಡನೆ, ಸಅದ್ ಬಿನ್ ಉಬಾದ ಹೇಗಿದ್ದಾರೆಂದು ಕೇಳಿದರು (ಅವರು ಕಾಯಿಲೆ ಬಿದ್ದಿದ್ದರು) ಅವರು ಚೆನ್ನಾಗಿದ್ದಾರೆಂದು ಆ ವ್ಯಕ್ತಿ ಹೇಳಿದ. ಆಗ ಪ್ರವಾದಿ(ಸ) ಸಭಿಕರನ್ನುದ್ದೇಶಿಸಿ, ನಿಮ್ಮ ಪೈಕಿ ಯಾರು ಅವರ ರೋಗ ಸಂದರ್ಶನಕ್ಕೆ ಬರುತ್ತಾರೆ! ಎಂದು ಕೇಳಿದಾಗ, ನಾವೂ ಅವರೊಂದಿಗೆ ಎದ್ದೆವು. ನಾವು ಹತ್ತು ಮಂದಿಗಿಂತ ಸ್ವಲ್ಪ ಹೆಚ್ಚಿದ್ದೆವು. ನಮ್ಮ ಕಾಲಿನಲ್ಲಿ ಚಪ್ಪಲಿಯಾಗಲಿ, ಕಾಲ್ಚೀಲವಾಗಲಿ, ತಲೆಯಲ್ಲಿ ಟೊಪ್ಪಿಗೆಯಾಗಲಿ, ಮೈಮೇಲೆ ಅಂಗಿಯಾಗಲಿ ಇರಲಿಲ್ಲ. ಅದೇ ಅವಸ್ಥೆಯಲ್ಲಿ ಬಂಜರು ನೆಲದಲ್ಲಿ ನಡೆಯುತ್ತಾ ನಾವು ಸಅದ್‌ರ ಮನೆಗೆ ತಲಪಿದೆವು. ಅವರ ಬಳಿಯಲ್ಲಿದ್ದ ಸಂದರ್ಶಕರು ದೂರ ಸರಿದರು. ಪ್ರವಾದಿ(ಸ) ಮತ್ತು ಅವರೊಂದಿಗಿದ್ದವರು ಸಅದ್‌ರ ಹತ್ತಿರ ಹೋಗಿ ಕುಶಲ ವಿಚಾರಿಸಿದರು. *[ಮುಸ್ಲಿಮ್]*

ಸಂತಾಪ ಸೂಚನೆ

(525) عَنْ مُعَاذِ بْنِ جَبَلٍ اَنَّهُ مَاتَ لَهُ اِبْنٌ فَكَتَبَ اِلَيْهِ النَّبِيُّ صلى الله عليه وسلم التَّعْزِيَةَ :

بِسْمِ اللّٰهِ الرَّحْمٰنِ الرَّحِيْمِ

مِنْ مُحَمَّدٍ رَّسُوْلِ اللّٰهِ اِلٰى مُعَاذِ بْنِ جَبَلٍ، سَلَامٌ عَلَيْكَ
فَاِنِّيْ اَحْمَدُ اِلَيْكَ اللّٰهَ الَّذِيْ لَا اِلٰهَ اِلَّا هُوَ، اَمَّا بَعْدُ فَاَعْظَمَ اللّٰهُ اَجْرَكَ، وَاَلْهَمَكَ الصَّبْرَ
وَرَزَقَنَا وَاِيَّاكَ الشُّكْرَ، فَاِنَّ اَنْفُسَنَا وَاَمْوَالَنَا وَاَهْلَنَا مِنْ مَوَاهِبِ اللّٰهِ الْهَنِيْئَةِ وَعَوَارِيْهِ
الْمُسْتَوْدَعَةِ، مَتَّعَكَ اللّٰهُ بِهِ فِيْ غِبْطَةٍ وَسُرُوْرٍ، وَقَبَضَهُ مِنْكَ بِاَجْرٍ كَبِيْرٍ، اَلصَّلٰوةُ وَ
الرَّحْمَةُ وَالْهُدٰى اِنِ احْتَسَبْتَهُ، فَاصْبِرْ وَلَا يُحْبِطْ جَزَعُكَ اَجْرَكَ فَتَنْدَمَ، وَاعْلَمْ
اَنَّ الْجَزَعَ لَا يَرُدُّ مَيِّتًا وَلَا يَدْفَعُ حُزْنًا، وَمَا هُوَ نَازِلٌ فَكَاَنْ قَدْ، وَالسَّلَامُ

(معارف الحديث بحوالہ طبرانی)

ಹ. ಮುಆದ್ ಬಿನ್ ಜಬಲ್‌ರ(ರ) ಓರ್ವ ಪುತ್ರ ನಿಧನನಾದನು. ಆಗ ಅವರಿಗೆ ಪ್ರವಾದಿ(ಸ) ಸಂತಾಪ ಸೂಚಕ ಪತ್ರ ಕಳಿಸಿದರು. (ಬಹುಶಃ ಅವರು ಆಗ ಯಮನ್‌ನಲ್ಲಿದ್ದರು) ಅದರ ಅನುವಾದ ಹೀಗಿದೆ:

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ,

ಇದು ಮುಹಮ್ಮದರ‍್ರಸೂಲುಲ್ಲಾಹ್‌ರ ವತಿಯಿಂದ ಮುಆದ್ ಬಿನ್ ಜಬಲ್‌ರಿಗೆ ಬರೆದ ಪತ್ರ. ನಿಮ್ಮ ಮೇಲೆ ಅಲ್ಲಾಹನ ರಕ್ಷಣೆಯಿರಲಿ! ನಾನು ನಿಮ್ಮೊಂದಿಗೆ ಸೇರಿ ಅಲ್ಲಾಹನನ್ನು ಸ್ತುತಿಸುತ್ತೇನೆ. ಆತನಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಆತನಲ್ಲದೆ ಬೇರೆ ಆರಾಧ್ಯರಿಲ್ಲ.

ತರುವಾಯ, ಅಲ್ಲಾಹನು ನಿಮಗೆ ಅಪಾರ ಪುಣ್ಯ ಮತ್ತು ಸಹನೆ ನೀಡಲಿ. ನಮಗೂ ನಿಮಗೂ ಕೃತಜ್ಞತಾರ್ಪಣೆ ಮಾಡುವ ಸೌಭಾಗ್ಯ ನೀಡಲಿ. ನಮ್ಮ ಜೀವ, ಸೊತ್ತು ಮತ್ತು ಪತ್ನಿ ಮಕ್ಕಳೆಲ್ಲ ಅಲ್ಲಾಹನ ಆಕರ್ಷಕ ಕೊಡುಗೆಗಳಾಗಿವೆ. ಅವೆಲ್ಲ ಅಲ್ಲಾಹನು ನಮ್ಮ ಬಳಿಯಿರಿಸಿರುವ ವಿಶ್ವಸ್ಥ ನಿಧಿಯಾಗಿದೆ. ಅಲ್ಲಾಹನು ನಿಮಗೆ ನಿಮ್ಮ ತೀರಿ ಹೋದ

ಮಗನಿಂದ ಸಂತೋಷ ಪಡೆಯುವ ಅವಕಾಶ ನೀಡಿದನು. ಅನಂತರ ಅವನನ್ನು ತನ್ನೆಡೆಗೆ ಕರೆದನು. ಅದಕ್ಕಾಗಿ ತಾಳ್ಮೆ ವಹಿಸುವ ಮೂಲಕ ನೀವು ಅಪಾರ ಪುಣ್ಯಕ್ಕೆ ಅರ್ಹರಾಗುವಿರಿ. ಈ ಆಘಾತಕ್ಕಾಗಿ ನೀವು ತಾಳ್ಮೆ ವಹಿಸಿದರೆ ನಿಮಗೆ ಅಲ್ಲಾಹನ ಸಾಮಿಪ್ಯ, ಅನುಗ್ರಹ ಮತ್ತು ಸನ್ಮಾರ್ಗ ಪ್ರಾಪ್ತವಾಗುವುದು. ಆದುದರಿಂದ ತಾಳ್ಮೆ ವಹಿಸಿರಿ. ನೀವು ಕಳವಳ ಮತ್ತು ಅಸಹನೆ ತೋರಿದರೆ ಪುಣ್ಯದಿಂದ ವಂಚಿತರಾಗುವಿರಿ. ಅನಂತರ ನಿಮಗೆ ಪಶ್ಚಾತ್ತಾಪ ಪಡಬೇಕಾದೀತು. ಕಳವಳ ಮತ್ತು ಅಸಹನೆಯಿಂದಾಗಿ ಸತ್ತವರು ಯಾರೂ ಮರಳಿ ಬರಲಾರರು. ನಿಮ್ಮ ದುಃಖವೂ ದೂರವಾಗದು. ಬರಬೇಕಾದುದೆಲ್ಲ ಬಂದೇ ತೀರುವುದು. ಅದನ್ನು ನೀಗಿಸಲು ಯಾರಿಂದಲೂ ಸಾಧ್ಯವಿಲ್ಲ. ವಸ್ಸಲಾಮ್.

[ಮಆರಿಫುಲ್ ಹದೀಸ್- ತಬ್ರಾನಿಯಿಂದ]

ಸಂತಾಪ ಸೂಚನೆಯ ಇನ್ನೊಂದು ರೂಪ

(526) عَنْ قُرَّةَ بْنِ إِيَاسٍ قَالَ، كَانَ النَّبِيُّ صلى الله عليه وسلم إِذَا جَلَسَ، جَلَسَ إِلَيْهِ نَفَرٌ مِنْ أَصْحَابِهِ، فِيهِمْ رَجُلٌ لَهُ ابْنٌ صَغِيرٌ يَأْتِيهِ مِنْ خَلْفِ ظَهْرِهِ فَيُقْعِدُهُ بَيْنَ يَدَيْهِ، فَهَلَكَ، فَامْتَنَعَ الرَّجُلُ أَنْ يَحْضُرَ الْحَلْقَةَ لِذِكْرِ ابْنِهِ، فَفَقَدَهُ النَّبِيُّ فَقَالَ مَالِيْ لَا أَرَى فُلَانًا، قَالُوا يَا رَسُولَ اللهِ بُنَيُّهُ الَّذِي رَأَيْتَهُ هَلَكَ، فَلَقِيَهُ النَّبِيُّ صلى الله عليه وسلم فَسَأَلَهُ عَنْ بُنَيِّهِ، فَأَخْبَرَهُ أَنَّهُ هَلَكَ، فَعَزَّاهُ عَلَيْهِ ثُمَّ قَالَ يَا فُلَانُ أَيُّمَا كَانَ أَحَبَّ إِلَيْكَ؟ أَنْ تَتَمَتَّعَ بِهِ عُمُرَكَ، أَوْلَا تَأْتِي إِلَى بَابٍ مِنْ أَبْوَابِ الْجَنَّةِ إِلَّا وَجَدْتَهُ قَدْ سَبَقَكَ إِلَيْهِ يَفْتَحُهُ لَكَ، قَالَ يَا نَبِيَّ اللهِ بَلْ يَسْبِقُنِي إِلَى بَابِ الْجَنَّةِ فَيَفْتَحُهَا، لَهُوَ أَحَبُّ إِلَيَّ، قَالَ فَذَاكَ لَكَ (نسائی)

ಹ. ಕುರ್ರಃ ಬಿನ್ ಇಯಾಸ್ ಹೇಳುತ್ತಾರೆ- ಪ್ರವಾದಿ(ಸ) ಮಸ್ಜಿದುನ್ನಬವಿಯಲ್ಲಿ ಕುಳಿತಿರುವಾಗ ಸಹಾಬಿಗಳ ಪೈಕಿ ಕೆಲವರು ಅವರ ಬಳಿ ಬಂದು ಕುಳಿತುಕೊಳ್ಳುತ್ತಿದ್ದರು. ಹಾಗೆ ಕುಳಿತುಕೊಳ್ಳುವವರಲ್ಲಿ ಒಬ್ಬರಿಗೆ ಒಂದು ಪುಟ್ಟ ಮಗುವಿತ್ತು. ಅದು ಪ್ರವಾದಿಯವರ(ಸ) ಬೆನ್ನ ಹಿಂದಿನಿಂದ ಬರುತ್ತಿತ್ತು. ಅವರು ಅದನ್ನು ತಮ್ಮ ಮುಂದೆ ಕುಳ್ಳಿರಿಸುತ್ತಿದ್ದರು. ಒಂದು

ದಿನ ಆ ಮಗು ತೀರಿಕೊಂಡಿತು. ಮಗುವಿನ ತಂದೆ ಅದೇ ದುಃಖದಲ್ಲಿ ಕೆಲವು ದಿನ ಪ್ರವಾದಿ ವರ್ಯರ(ಸ) ಸಭೆಗೆ ಬರಲಿಲ್ಲ. ಪ್ರವಾದಿ(ಸ) ಕೇಳಿದರು- ಆ ವ್ಯಕ್ತಿ ಈಗ ಬರುವುದಿಲ್ಲ, ಕಾರಣವೇನು? ಜನರು ಹೇಳಿದರು- ತಾವು ನೋಡುತ್ತಿದ್ದ ಆ ವ್ಯಕ್ತಿಯ ಪುಟ್ಟ ಮಗು ತೀರಿಕೊಂಡಿದೆ. (ಆದುದರಿಂದಲೇ ಬಹುಶಃ ಅವರು ಬರುವುದಿಲ್ಲ) ಪ್ರವಾದಿ(ಸ) ಆ ವ್ಯಕ್ತಿಯನ್ನು ಭೇಟಿಯಾಗಿ ಮಗುವಿನ ಬಗ್ಗೆ ವಿಚಾರಿಸಿದರು. ಆ ವ್ಯಕ್ತಿ ತನ್ನ ಮಗು ತೀರಿಕೊಂಡಿರುವುದಾಗಿ ತಿಳಿಸಿದರು. ಪ್ರವಾದಿವರ್ಯರು(ಸ) ಅವರಿಗೆ ಸಾಂತ್ವನ ಹೇಳಿದ ನಂತರ ಹೀಗೆ ಕೇಳಿದರು- ಆ ಮಗು ನಿಮ್ಮ ಜೀವಮಾನವಿಡೀ ಬದುಕುವುದು ಅಥವಾ ಅದು ಮೊದಲು ಹೋಗಿ, ನೀವು ಸ್ವರ್ಗದ ಬಾಗಿಲಿಗೆ ತಲಪುವಾಗ, ನಿಮ್ಮನ್ನು ಸ್ವಾಗತಿಸುತ್ತಾ ನಿಮಗಾಗಿ ಸ್ವರ್ಗದ ಬಾಗಿಲನ್ನು ತೆರೆಯುವುದು, ಈ ಪೈಕಿ ನಿಮಗೆ ಯಾವುದು ಇಷ್ಟ? ಆ ವ್ಯಕ್ತಿ ಹೇಳಿದರು- ಅಲ್ಲಾಹನ ಸಂದೇಶವಾಹಕರೇ! ಅದು ಮೊದಲು ಹೋಗಿ ನನಗಾಗಿ ಸ್ವರ್ಗದ ಬಾಗಿಲನ್ನು ತೆರೆಯುವುದೇ ನನಗೆ ಇಷ್ಟ. ಆಗ ಪ್ರವಾದಿ(ಸ) ಹೇಳಿದರು- ನಿಮಗೆ ಹಾಗೆಯೇ ಆಗುವುದು. *[ನಸಾಈ]*

ಸಹ ಯಾತ್ರಿಕರೊಂದಿಗೆ

(527) عَنْ جَابِرٍ قَالَ، كَانَ رَسُوْلُ اللّٰهِ صلى الله عليه وسلم يَتَخَلَّفُ فِي الْمَسِيْرِ فَيُزْجِي الضَّعِيْفَ وَيُرْدِفُ وَيَدْعُوْلَهُمْ (ابوداؤد)

ಹ. ಜಾಬಿರ್(ರ) ಹೇಳುತ್ತಾರೆ- ಪ್ರವಾದಿ(ಸ) ಪ್ರಯಾಣದ ವೇಳೆ ತಮ್ಮ ಸಹ ಯಾತ್ರಿಕರ ಹಿಂದೆ ನಡೆಯುತ್ತಿದ್ದರು. ದುರ್ಬಲರನ್ನು ತಮ್ಮ ವಾಹನದಲ್ಲಿ ಕೂರಿಸುತ್ತಿದ್ದರು ಮತ್ತು ಅವರಿಗಾಗಿ ಪ್ರಾರ್ಥಿಸುತ್ತಿದ್ದರು. *[ಅಬೂ ದಾವೂದ್]*

ಸೈನಿಕರೊಂದಿಗೆ

(528) عَنْ عَبْدِ اللّٰهِ بْنِ مَسْعُوْدٍ قَالَ، كُنَّا يَوْمَ بَدْرٍ كُلُّ ثَلَاثَةٍ عَلٰى بَعِيْرٍ، فَكَانَ اَبُوْلُبَابَةَ وَعَلِيُّ بْنُ اَبِيْ طَالِبٍ زَمِيْلَيْ رَسُوْلِ اللّٰهِ صلى الله عليه وسلم قَالَ فَكَانَتْ اِذَا جَاءَتْ عُقْبَةُ رَسُوْلِ اللّٰهِ صلى الله عليه وسلم قَالَا نَحْنُ نَمْشِيْ عَنْكَ، قَالَ مَا اَنْتُمَا بِاَقْوٰى مِنِّيْ، وَمَا اَنَا اَغْنٰى عَنِ الْاَجْرِ مِنْكُمَا (مشكوٰة)

ಹ. ಅಬ್ದುಲ್ಲಾ ಬಿನ್ ಮಸ್‌ವೂದ್(ರ) ಹೇಳುತ್ತಾರೆ- ಬದ್ರ್ ಯುದ್ಧದ ಸಂದರ್ಭದಲ್ಲಿ ಒಂದು ಒಂಟೆಯ ಮೇಲೆ ಮೂವರು ಸವಾರರಿರುತ್ತಿದ್ದು ಅವರು ಸರದಿಯಂತೆ ಪ್ರಯಾಣಿಸುತ್ತಿದ್ದರು. ಅಬೂ ಲುಬಾಬ ಮತ್ತು ಅಲೀ ಬಿನ್ ಅಬೀತಾಲಿಬ್ ಅವರು ಪ್ರವಾದಿವರ್ಯರ(ಸ) ಒಂಟೆಯ ಮೇಲಿದ್ದರು. ಪ್ರವಾದಿ(ಸ) ನಡೆಯುವ ಸರದಿ ಬಂದಾಗ ಈ ಇಬ್ಬರು ಸಹಾಬಿಗಳು, ತಾವು ಒಂಟೆಯ ಮೇಲೆ ಸವಾರಿ ಮಾಡಿರಿ, ನಾವು ಕಾಲ್ನಡಿಗೆಯಲ್ಲಿ ಬರುತ್ತೇವೆ ಎಂದು ಹೇಳುತ್ತಿದ್ದರು. ಆಗ ಪ್ರವಾದಿ(ಸ) ಹೀಗೆನ್ನುತ್ತಿದ್ದರು- ನೀವಿಬ್ಬರೂ ನನಗಿಂತ ಬಲಶಾಲಿಗಳಲ್ಲ. ಅಲ್ಲಾಹನ ಮಾರ್ಗದಲ್ಲಿ ಕಾಲ್ನಡಿಗೆಯಲ್ಲಿ ಹೋಗುವುದರ ಪುಣ್ಯವನ್ನು ನಿಮಗಿಂತ ಹೆಚ್ಚು ನಾನು ಬಯಸುತ್ತೇನೆ. *[ಮಿಶ್ಕಾತ್]*

ಸಹನೆ

(529) عَنِ ابْنِ مَسْعُوْدٍ قَالَ، تَكَلَّمَ رَجُلٌ مِنَ الْاَنْصَارِ كَلِمَةً فِيْهَا مَوْجِدَةٌ عَلَى النَّبِيِّ صلى الله عليه وسلم، فَلَمْ تَقِرَّ فِيْ نَفْسِيْ اَنْ اَخْبَرْتُ بِهَا النَّبِيَّ صلى الله عليه وسلم فَلَوَدِدْتُ اَنِّي افْتَدَيْتُ مِنْهَا بِكُلِّ اَهْلٍ وَمَالٍ، فَقَالَ قَدْ اٰذَوْا مُوْسٰى عَلَيْهِ السَّلَامُ اَكْثَرَ مِنْ ذٰلِكَ فَصَبَرَ، ثُمَّ اَخْبَرَ اَنَّ نَبِيًّا كَذَّبَهُ قَوْمُهُ وَشَجُّوْهُ حِيْنَ جَاءَهُمْ بِاَمْرِ اللّٰهِ، فَقَالَ وَهُوَ يَمْسَحُ الدَّمَ عَنْ وَجْهِهِ اَللّٰهُمَّ اغْفِرْ لِقَوْمِيْ فَاِنَّهُمْ لَا يَعْلَمُوْنَ (مسند احمد)

ಇಬ್ನು ಮಸ್‌ವೂದ್(ರ) ಹೇಳುತ್ತಾರೆ- ಅನ್ಸಾರಿಗಳ ಪೈಕಿ ಒಬ್ಬನು ಒಂದು ಮಾತು ಹೇಳಿದನು. ಅದರಿಂದ ಅವನ ಮುಖದಲ್ಲಿ ಪ್ರವಾದಿವರ್ಯರ(ಸ) ಕುರಿತು ಕೋಪ ಎದ್ದು ಕಾಣುತ್ತಿತ್ತು. ನನಗೆ ಅದು ಅಸಹನೀಯವಾಯಿತು. ನಾನು ಹೋಗಿ ಪ್ರವಾದಿಯವರಿಗೆ(ಸ) ಈ ವಿಷಯ ತಿಳಿಸಿದೆ. ಅವರಿಗೆ ತುಂಬಾ ಬೇಸರವಾಯಿತು. ನನಗೆ ಆಗ, ಈ ಮಾತನ್ನು ನಾನು ಪ್ರವಾದಿವರ್ಯರಿಗೆ(ಸ) ತಿಳಿಸಬಾರದಿತ್ತು. ಅವರ ಮನಸ್ಸಿಗೆ ನೋವುಂಟು ಮಾಡಬಾರದಾಗಿತ್ತು ಎಂದು ತೋಚಿತು. ಪ್ರವಾದಿ(ಸ) ನನ್ನ ಮಾತನ್ನು ಕೇಳಿ ಹೀಗೆಂದರು- ಮೂಸಾರಿಗೆ(ಅ) ಇದಕ್ಕಿಂತಲೂ ಹೆಚ್ಚು ಕಿರುಕುಳ ಕೊಡಲಾಗಿತ್ತು. ಆದರೆ ಅವರು ತಾಳ್ಮೆ ವಹಿಸಿದರು. (ನಾನು ಪ್ರವಾದಿಯಾಗಿದ್ದೇನೆ. ನಾನೂ ತಾಳ್ಮೆ ವಹಿಸಬೇಕು) ತರುವಾಯ ಅವರು ಹೀಗೆಂದರು- ಓರ್ವ ಪ್ರವಾದಿಯನ್ನು ಅವರ ಜನಾಂಗ ಸುಳ್ಳಾಗಿಸಿತು. ಅವರನ್ನು ಹೊಡೆದು ಗಾಯಗೊಳಿಸಿತು. ಆದರೆ ಆ ಪ್ರವಾದಿ ತನ್ನ ಮುಖದಿಂದ ಸುರಿಯುವ ರಕ್ತವನ್ನು ಒರೆಸುತ್ತಾ ಈ ರೀತಿ ಪ್ರಾರ್ಥಿಸಿದರು- ಓ ಅಲ್ಲಾಹ್! ನನ್ನ ಜನಾಂಗದ ತಪ್ಪನ್ನು ಕ್ಷಮಿಸು. (ಇವರ ಮೇಲೆ ಯಾತನೆ ಎರಗಿಸಬೇಡ. ಇನ್ನಷ್ಟು ಕಾಲಾವಕಾಶ ಕೊಡು. ಇಂದಲ್ಲ ನಾಳೆ ಈ ದುರ್ಜನರು ವಿಶ್ವಾಸ ತಂದು ಸರಿದಾರಿಗೆ ಬರಬಹುದು) ಏಕೆಂದರೆ ಇವರು ನನ್ನ ಸ್ಥಾನ ಮಾನವನ್ನು ಇನ್ನೂ ಅರಿತಿಲ್ಲ.

[ಮುಸ್ನದ್ ಅಹ್ಮದ್]

ಅಪಾಯದ ವೇಳೆ ಮುಂಚೂಣಿಯಲ್ಲಿ

(530) قَالَ الْبَرَاءُ بْنُ عَازِبٍ، كُنَّا وَاللهِ إِذَا احْمَرَّ الْبَأْسُ نَتَّقِي بِهِ، وَإِنَّ الشُّجَاعَ مِنَّا لَلَّذِي يُحَاذِي بِهِ يَعْنِي النَّبِيَّ صلى الله عليه وسلم (بخاری)

ಹ. ಬರಾಅ್ ಬಿನ್ ಆಝಿಬ್ ಹೇಳುತ್ತಾರೆ- ಅಲ್ಲಾಹನಾಣೆ! ಯುದ್ಧವು ಭೀಕರ ರೂಪ ತಾಳಿದಾಗ ನಾವು ಪ್ರವಾದಿಯವರ(ಸ) ಮೂಲಕ ನಮ್ಮನ್ನು ರಕ್ಷಿಸಿಕೊಳ್ಳುತ್ತಿದ್ದೆವು. (ಅರ್ಥಾತ್ ಅವರು ನಮ್ಮ ಮುಂದಿರುತ್ತಿದ್ದರು. ನಾವು ಅವರನ್ನು ನಮಗೆ ಅಡ್ಡವಾಗಿರಿಸುತ್ತಿದ್ದೆವು) ಪ್ರವಾದಿಯವರ(ಸ) ಜೊತೆಯಲ್ಲಿ ವೈರಿಗಳನ್ನು ಎದುರಿಸುವವನೇ ನಮ್ಮ ಪೈಕಿ ಅತ್ಯಂತ ಪರಾಕ್ರಮಿಯೆನಿಸಿಕೊಳ್ಳುತ್ತಿದ್ದನು. *[ಬುಖಾರಿ]*

ದೋಷ ಪ್ರಕಟನೆ

(531) عَنْ عَائِشَةَ قَالَتْ، قَالَ رَسُوْلُ اللّٰهِ صلى الله عليه وسلم مَا أَظُنُّ فُلَانًا وَفُلَانًا يَعْرِفَانِ مِنْ دِيْنِنَا شَيْئًا (بخاری)

ಹ. ಆಯಿಶಾ(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು- ನನ್ನ ಅಭಿಪ್ರಾಯದಲ್ಲಿ ಇಂತಿಂತಹ ವ್ಯಕ್ತಿಗಳು ನಮ್ಮ ಧರ್ಮದ ಬಗ್ಗೆ ಏನೂ ಅರಿತಿಲ್ಲ. *[ಬುಖಾರಿ]*

ಟಿಪ್ಪಣಿ: ಈ ಇಬ್ಬರು ಧರ್ಮವನ್ನು ಕಲಿಯುವುದಿಲ್ಲ. ಧರ್ಮದ ಬೇಡಿಕೆಗಳೇನೆಂಬುದೂ ಅವರಿಗೆ ತಿಳಿದಿಲ್ಲ. ಹ. ಆಯಿಶಾ(ರ) ಆ ವ್ಯಕ್ತಿಗಳ ಹೆಸರು ಹೇಳಲಿಲ್ಲ. ಅವರು ಧರ್ಮದ ಬಗ್ಗೆ ನಿರ್ಲಕ್ಷ್ಯರಾದವ ರೆಂದಷ್ಟೇ ಈ ಹದೀಸ್ ತಿಳಿಸುತ್ತದೆ.

ಹಿತಚಿಂತನೆ ಮತ್ತು ಸಹಾನುಭೂತಿಯೊಂದಿಗೆ ಸಾಮೂಹಿಕ ವಿಷಯಗಳಲ್ಲಿ ಅದರ ನಾಯಕರು ತಮ್ಮ ಸಂಘಟನೆಯ ಕಾರ್ಯಕರ್ತರ ಪೈಕಿ ಯಾರ ವಿರುದ್ಧವಾದರೂ ಅಭಿಪ್ರಾಯ ಪ್ರಕಟಿಸಿದರೆ ಅದು ಪರನಿಂದೆಯಾಗುವುದಿಲ್ಲವೆಂದು ಈ ಹದೀಸ್‌ನಿಂದ ತಿಳಿದು ಬರುತ್ತದೆ.

ಸಂಗಾತಿಗಳೊಂದಿಗೆ ಸಂಬಂಧ

(532) عَنْ عَبْدِ اللّٰهِ بْنِ مَسْعُوْدٍ قَالَ، قَالَ رَسُوْلُ اللّٰهِ صلى الله عليه وسلم لَا يُبَلِّغُنِيْ أَحَدٌ مِنْ أَصْحَابِيْ عَنْ أَحَدٍ شَيْئًا، فَإِنِّيْ أُحِبُّ أَنْ أَخْرُجَ إِلَيْكُمْ وَأَنَا سَلِيْمُ الصَّدْرِ (ابوداؤد)

ಹ. ಅಬ್ದುಲ್ಲಾ ಬಿನ್ ಮಸ್‌ವೂದ್(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು: ನನ್ನ ಸಂಗಾತಿಗಳ ಪೈಕಿ ಯಾರೂ ತನ್ನ ಸಂಗಾತಿಯ ಬಗ್ಗೆ ನನ್ನಲ್ಲೇನೂ ತಿಳಿಸಬಾರದು. ನಾನು ನಿಮ್ಮ ಬಳಿಗೆ ಬೋಧನೆ- ತರಬೇತಿ ನೀಡಲು ಬರುವಾಗ ನನ್ನ ಮನಸ್ಸು ಅಹಿತಕರ ಭಾವನೆಗಳಿಂದ ಮುಕ್ತವಾಗಿರಬೇಕೆಂದು ಬಯಸುತ್ತೇನೆ.

[ಅಬೂ ದಾವೂದ್]

ಟಿಪ್ಪಣಿ: ಸರಿಯಾಗಿ ವಿಷಯವನ್ನು ತಿಳಿಯದೆ ಯಾರ ಬಗ್ಗೆಯೂ ನನ್ನಲ್ಲಿ ದೂರು ಹೇಳಬಾರದು. ಏಕೆಂದರೆ ಎಲ್ಲರೂ ನನ್ನ ಸಂಗಾತಿಗಳೇ ಆಗಿದ್ದಾರೆ. ಯಾರ ಬಗ್ಗೆಯಾದರೂ ನನ್ನಲ್ಲಿ ದೂರು ಹೇಳಿದರೆ ನನ್ನ ಮನಸ್ಸಿನಲ್ಲಿ ಅವರ ಬಗ್ಗೆ ಕೆಟ್ಟ ಭಾವನೆ ಉಂಟಾಗಲೂಬಹುದು. ಚೆನ್ನಾಗಿ ತಿಳಿಯದೆ ಯಾವ ಮಾತನ್ನೂ ಪ್ರಚಾರ ಮಾಡಬಾರದು. ನನಗೂ ತಿಳಿಸಬಾರದು. ಸಾಮೂಹಿಕ ವ್ಯವಸ್ಥೆಯಲ್ಲಿ ಸರಿಯಾದ ವಿಧಾನವೇನೆಂದರೆ ವಿಷಯದ ತನಿಖೆ ನಡೆಸಬೇಕು. ತನಿಖೆಯಿಂದ ಒಬ್ಬನಲ್ಲಿ ಏನಾದರೂ ಕುಂದು

ಕೊರತೆ ಕಂಡು ಬಂದರೆ ಏಕಾಂತದಲ್ಲಿ ಕಳಕಳಿಯಿಂದ ಆ ಕೊರತೆಯನ್ನು ನೀಗಿಸುವಂತೆ ಅವನಲ್ಲಿ ವಿನಂತಿಸಬೇಕು. ವಿನಂತಿ, ಎಚ್ಚರಿಕೆಯ ಬಳಿಕವೂ ಅವನು ತನ್ನನ್ನು ಸುಧಾರಿಸುವತ್ತ ಗಮನ ಹರಿಸದಿದ್ದರೆ, ಅನಂತರ ಅದನ್ನು ಅಲ್ಲಿಗೇ ಬಿಡದೆ ಸಂಘಟನೆಯ ನಾಯಕರ ಗಮನಕ್ಕೆ ತರಬೇಕು.

ಕರುಣೆಯ ವರ್ತನೆ

(533) عَنْ عَائِشَةَ قَالَتْ، مَا ضَرَبَ رَسُوْلُ اللّٰهِ صلى الله عليه وسلم شَيْئًا قَطُّ بِيَدِهٖ وَلَا امْرَءَةً وَلَا خَادِمًا اِلَّا اَنْ يُجَاهِدَ فِيْ سَبِيْلِ اللّٰهِ، وَمَا نِيْلَ مِنْهُ شَيْئٌ فَيَنْتَقِمَ مِنْ صَاحِبِهٖ اِلَّا اَنْ يُنْتَهَكَ شَيْئٌ مِنْ مَحَارِمِ اللّٰهِ فَيَنْتَقِمُ لِلّٰهِ تَعَالٰى (مسلم)

ಹ. ಆಯಿಶಾ(ರ) ಹೇಳುತ್ತಾರೆ: ಪ್ರವಾದಿಯವರು(ಸ) ತಮ್ಮ ಕೈಯಿಂದ ತಮ್ಮ ಪತ್ನಿಯರಿಗಾಗಲಿ, ಸೇವಕರಿಗಾಗಲಿ ಅಥವಾ ಇನ್ನಿತರ ಯಾರಿಗೇ ಆಗಲಿ ಎಂದೂ ಹೊಡೆಯಲಿಲ್ಲ. ಆದರೆ ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡುತ್ತಾ ವಿರೋಧಿಗಳಿಗೆ ಖಂಡಿತ ಹೊಡೆದಿದ್ದಾರೆ. ಪ್ರವಾದಿವರ್ಯರಿಗೆ ಯಾರಾದರೂ ಏನಾದರೂ ತೊಂದರೆ ಕೊಟ್ಟರೆ ಅವರು ಅದಕ್ಕಾಗಿ ಪ್ರತೀಕಾರ ತೀರಿಸಿದುದೂ ಇಲ್ಲ. ಆದರೆ ಯಾರಾದರೂ ಅಲ್ಲಾಹನ ಆಜ್ಞೆಗಳನ್ನು ಉಲ್ಲಂಘಿಸಿದರೆ ಅವರಿಂದ ಅಲ್ಲಾಹನಿಗಾಗಿ ಖಂಡಿತ ಪ್ರತೀಕಾರ ಪಡೆಯುತ್ತಿದ್ದರು (ಅರ್ಥಾತ್ ಶಿಕ್ಷೆ ವಿಧಿಸುತ್ತಿದ್ದರು). *[ಮುಸ್ಲಿಮ್]*

ವ್ಯವಹಾರ

(534) عَنِ الْعَدَّاءِ بْنِ خَالِدِ بْنِ هَوْذَةَ قَالَ، كَتَبَ لِيْ رَسُوْلُ اللّٰهِ صَلَّى اللّٰهُ عَلَيْهِ وَسَلَّمَ كِتَابًا، هٰذَا مَا اشْتَرَى الْعَدَّاءُ بْنُ خَالِدِ بْنِ هَوْذَةَ مِنْ مُحَمَّدٍ رَسُوْلِ اللّٰهِ، اِشْتَرٰى مِنْهُ عَبْدًا اَوْ اَمَةً لَا دَاءَ وَلَا غَائِلَةَ وَلَا خِبْثَةَ، بَيْعُ الْمُسْلِمِ لِلْمُسْلِمِ (ترمذی)

ಅದ್ದಾಅ್ ಬಿನ್ ಖಾಲಿದ್ ಬಿನ್ ಹೌದ(ರ) ಹೇಳುತ್ತಾರೆ- ಪ್ರವಾದಿಯವರು(ಸ) ನನಗಾಗಿ ಒಂದು ಕ್ರಯ ಪತ್ರವನ್ನು ಹೀಗೆ ಬರೆದರು: ಅದ್ದಾಅ್ ಬಿನ್ ಖಾಲಿದ್ ಪ್ರವಾದಿ ಮುಹಮ್ಮದ್‌ರಿಂದ(ಸ) ಒಬ್ಬ ಗುಲಾಮನನ್ನು ಖರೀದಿಸಿದರು. ಅವನಲ್ಲಿ ದೈಹಿಕ

ನ್ಯೂನತೆಯಾಗಲಿ, ನೈತಿಕ ಕೆಡುಕಾಗಲಿ ಇಲ್ಲ. ಈ ವ್ಯವಹಾರದಲ್ಲಿ ಮೋಸವನ್ನೂ ಮಾಡಲಾಗಿಲ್ಲ. ಇದು ಮುಸ್ಲಿಮನೊಬ್ಬನೊಂದಿಗೆ ಇನ್ನೊಬ್ಬ ಮುಸ್ಲಿಮನು ಮಾಡಿದ ವ್ಯವಹಾರವಾಗಿದೆ.
[ತಿರ್ಮಿದಿ]

ಪ್ರವಾದಿತ್ವಕ್ಕೆ ಮುಂಚಿನ ವ್ಯವಹಾರ

(535) عَنِ السَّائِبِ بْنِ اَبِي السَّائِبِ اَنَّهُ قَالَ لِلنَّبِيِّ صلى الله عليه وسلم كُنْتَ شَرِيْكِي فِي الْجَاهِلِيَّةِ، فَكُنْتَ خَيْرَ شَرِيْكٍ لَا تُدَارِيْنِي وَلَا تُمَارِيْنِي (ابوداؤد)

ಹ. ಸಾಇಬ್ ಬಿನ್ ಅಬೂ ಸಾಇಬ್ ಅವರು ಪ್ರವಾದಿಯವರಲ್ಲಿ(ಸ) ಹೇಳಿದರು- ನಾನು ತಮ್ಮೊಂದಿಗೆ ಅಜ್ಞಾನ ಕಾಲದಲ್ಲಿ ಪಾಲುದಾರಿಕೆಯಲ್ಲಿ ವ್ಯಾಪಾರ ಮಾಡುತ್ತಿದ್ದೆ. ತಾವು ಅತ್ಯುತ್ತಮ ಪಾಲುದಾರರಾಗಿದ್ದಿರಿ. (ವ್ಯಾಪಾರದಲ್ಲಿ ಹೆಚ್ಚಾಗಿ ಪಾಲುದಾರರು ಮಾಡುವಂತೆ) ತಾವೆಂದೂ ಮೋಸ ಮಾಡಲಿಲ್ಲ. ನನ್ನೊಂದಿಗೆ ಜಗಳ ಮಾಡಲೂ ಇಲ್ಲ. *[ಅಬೂ ದಾವೂದ್]*

ಟಿಪ್ಪಣಿ: ಇದು ಪ್ರವಾದಿತ್ವಕ್ಕೆ ಮುಂಚಿನ ಅವರ ಉನ್ನತ ಚಾರಿತ್ರ್ಯದ ಕುರಿತು ಒಬ್ಬ ಮುಸ್ಲಿಮೇತರನು ನೀಡಿದ ಸಾಕ್ಷ್ಯ. ಇಸ್ಲಾಮ್ ಸ್ವೀಕರಿಸಿದ ನಂತರ ಇದನ್ನು ಅವರು ಬಹಿರಂಗ ಪಡಿಸಿದರು.

ಪ್ರತೀಕಾರದ ಭಯ

(536) عَنْ اُمِّ سَلَمَةَ اَنَّ النَّبِيَّ صلى الله عليه وسلم كَانَ فِي بَيْتِهَا، فَدَعَا وَصِيْفَةً لَهُ اَوْ لَهَا، فَاَبْطَأَتْ، فَاسْتَبَانَ الْغَضَبُ فِي وَجْهِهِ، فَقَامَتْ اُمُّ سَلَمَةَ اِلَى الْحِجَابِ، فَوَجَدَتِ الْوَصِيْفَةَ تَلْعَبُ وَمَعَهُ سِوَاكٌ فَقَالَ لَوْلَا خَشْيَةُ الْقَوَدِ لَاَوْجَعْتُكِ بِهٰذَا السِّوَاكِ

(الادب المفرد للامام البخاري)

ಹ. ಉಮ್ಮು ಸಲಮ ಹೇಳುತ್ತಾರೆ- ಪ್ರವಾದಿ(ಸ) ತಮ್ಮ ಮನೆಯಲ್ಲಿ ಕುಳಿತಿದ್ದರು. ಅವರು(ಸ) ಸೇವಕಿಯನ್ನು ಕರೆದರು. ಅವಳು ಬರಲು ತಡಮಾಡಿದಳು. ಅವರ ಮುಖದಲ್ಲಿ ಕೋಪದ ಚಿಹ್ನೆ ಗೋಚರಿಸಿತು. ಉಮ್ಮು ಸಲಮ ಪರದೆಯ ಹೊರಗೆ ಇಣುಕಿ ನೋಡಿದರು. ಅವಳು ಆಡುತ್ತಿರುವುದನ್ನು ಕಂಡು ಅವಳನ್ನು ಕರೆದರು. ಆಗ ಪ್ರವಾದಿ(ಸ) ಹೇಳಿದರು-

ನಿರ್ಣಾಯಕ ದಿನದಂದು ನೀನು ಪ್ರತೀಕಾರ ಪಡೆಯುವಿಯೆಂಬ ಭೀತಿ ನನಗಿಲ್ಲದಿರುತ್ತಿದ್ದರೆ, ಈ ಮಿಸ್ವಾಕ್ (ದಂತಮಜ್ಜನದ ದಂಟು)ನಿಂದ ನಿನಗೆ ಹೊಡೆಯುತ್ತಿದ್ದೆ. ಆಗ ಅವರ ಕೈಯಲ್ಲಿ ಮಿಸ್ವಾಕ್ ಇತ್ತು. *[ಅಲ್ ಅದಬುಲ್ ಮುಫ್ರದ್-ಇಮಾಮ್ ಬುಖಾರಿ]*

ಟಿಪ್ಪಣಿ: ಸೇವಕಿ ಬಾರದ ಕಾರಣ ಪ್ರವಾದಿವರ್ಯರಿಗೆ ಉಂಟಾದ ಕೋಪವು ಅವರ ವೈಯಕ್ತಿಕ ವಿಷಯಕ್ಕೆ ಸಂಬಂಧಿಸಿದ್ದಾಗಿತ್ತು. ಆಗ ಅವರು ಶಿಕ್ಷೆ ಕೊಡುತ್ತಿದ್ದರೆ ಅದರ ಬಗ್ಗೆ ವಿಚಾರಣೆ ಎದುರಿಸ ಬೇಕಾದೀತೆಂಬ ಭಯವುಂಟಾಯಿತು. ಅದಕ್ಕಾಗಿ ಅವರು ಶಿಕ್ಷೆ ನೀಡಲಿಲ್ಲ. ಈ ಮುಂಚೆ ಬಂದ ಒಂದು ಹದೀಸ್‌ನಲ್ಲಿ, ಯಾರಾದರೂ ತನ್ನ ಗುಲಾಮನಿಗೆ ಒಂದು ಕೊರಡೆಯೇಟು ಕೊಟ್ಟರೆ ನಿರ್ಣಾಯಕ ದಿನದಂದು ಅವನಿಂದ ಪ್ರತೀಕಾರ ಪಡೆಯಲಾಗುವುದು ಎಂದು ಬಂದಿದೆ. ಪ್ರವಾದಿ(ಸ) ತಮ್ಮ ವೈಯಕ್ತಿಕ ವಿಷಯಗಳಿಗಾಗಿ ಎಂದೂ ಪ್ರತೀಕಾರವೆಸಗಿಲ್ಲವೆಂಬ ಹದೀಸ್ ಕೂಡಾ ಈ ಹಿಂದೆ ಬಂದಿದೆ.

ಜನರ ಹಕ್ಕುಗಳ ಮಹತ್ವ

(537) عَنْ اَبِيْ هُرَيْرَةَ قَالَ، قَالَ رَسُوْلُ اللّٰهِ صلى الله عليه وسلم اَللّٰهُمَّ اِنِّيْ اِتَّخَذْتُ عِنْدَكَ عَهْدًا لَنْ تُخْلِفَنِيْهِ، فَاِنَّمَا اَنَا بَشَرٌ، فَاَيُّ الْمُسْلِمِيْنَ آذَيْتُهُ، شَتَمْتُهُ، لَعَنْتُهُ، جَلَدْتُهُ، فَاجْعَلْهَا لَهُ صَلٰوةً وَّزَكٰوةً وَّقُرْبَةً تُقَرِّبُهُ بِهَا اِلَيْكَ يَوْمَ الْقِيَامَةِ

(بخاری ومسلم)

ಹ. ಅಬೂ ಹುರೈರಾ (ರ) ಹೇಳುತ್ತಾರೆ-ಪ್ರವಾದಿ (ಸ) ತಮ್ಮ ಪ್ರಭುವಿನೊಡನೆ ಈ ರೀತಿ ಬಿನ್ನವಿಸಿದರು - ಓ ಅಲ್ಲಾಹ್! ನಾನು ನಿನ್ನಿಂದ ಒಂದು ವಾಗ್ದಾನ ಪಡೆದಿದ್ದೇನೆ. (ಪ್ರಾರ್ಥನೆ ಸ್ವೀಕರಿಸಲ್ಪಡುವ ವಾಗ್ದಾನ) ಅದನ್ನು ನೀನೆಂದೂ ಉಲ್ಲಂಘಿಸಲಾರೆ. ನಾನು ಮನುಷ್ಯನೇ ಆಗಿದ್ದೇನೆ. ಆದುದರಿಂದ ನಾನು ಯಾವನೇ ಮುಸ್ಲಿಮನಿಗೆ ನೋವಾಗುವಂತಹ ಮಾತನ್ನು ಆಡಿದ್ದರೆ, ಅವನನ್ನು ಬೈದಿದ್ದರೆ, ಶಪಿಸಿದ್ದರೆ, ಅವನಿಗೆ ಹೊಡೆದಿದ್ದರೆ, ನನ್ನ ಆ ಕೃತ್ಯಗಳನ್ನು ನಿರ್ಣಾಯಕ ದಿನದಂದು ಆ ಮರ್ದಿತನ ಮಟ್ಟಿಗೆ ನಿನ್ನ ಕರುಣೆ, ಕ್ಷಮೆ ಮತ್ತು ಸಾಮಿಪ್ಯ ದೊರಕುವ ಸಾಧನವನ್ನಾಗಿ ಮಾಡು. *[ಬುಖಾರಿ, ಮುಸ್ಲಿಮ್]*

ಟಿಪ್ಪಣಿ: ಜನರ ಹಕ್ಕುಗಳಿಗೆ ಮಹತ್ವವಿದೆ. ಪಾಪ ಮುಕ್ತರಾಗಿರುವ ಪ್ರವಾದಿ(ಸ) ಕೂಡಾ ತಮ್ಮ ಪ್ರಭುವಿನಲ್ಲಿ ಯಾಚಿಸುತ್ತಿದ್ದಾರೆ. ಒಂದು ವೇಳೆ ಯಾರಿಗಾದರೂ ನೋವುಂಟು ಮಾಡಿದ್ದರೆ, ಹೊಡೆದಿದ್ದರೆ, ಅವನಲ್ಲಿ ಕ್ಷಮೆ ಯಾಚಿಸಲು ಅವನು ಯಾರೆಂದು ತಿಳಿದಿರದ ಅವಸ್ಥೆಯಲ್ಲಿ ಪ್ರವಾದಿ(ಸ) ಆ ಮರ್ದಿತನ ಪರವಾಗಿ ಹೀಗೆ ಪ್ರಾರ್ಥಿಸುತ್ತಾರೆ- ಓ ಅಲ್ಲಾಹ್! ಅವನ ಮರ್ದಿತಾವಸ್ಥೆಯನ್ನು ಅವನ ಪಾಪವಿಮೋಚನೆ ಮತ್ತು ಅನುಗ್ರಹದ ಹೇತುವಾಗಿಸು.

ಇಲ್ಲಿ ಪ್ರವಾದಿಯವರು(ಸ) ರೋಗಶಯ್ಯೆಯಲ್ಲಿದ್ದಾಗಿನ ಘಟನೆಯೊಂದನ್ನು ವಿವರಿಸುವುದು ಸಂದರ್ಭೋಚಿತವಾಗಬಹುದು- ಪ್ರವಾದಿ(ಸ) ತೀವ್ರ ಜ್ವರಕ್ಕೆ ತುತ್ತಾಗಿದ್ದರು. ತಲೆಯಲ್ಲಿ ತುಂಬಾ ನೋವಿತ್ತು. ನೋವಿನ ತೀವ್ರತೆಯಿಂದಾಗಿ ತಲೆಗೆ ಬಟ್ಟೆಯ ಪಟ್ಟಿ ಕಟ್ಟಲಾಗಿತ್ತು. ಆ ಅವಸ್ಥೆಯಲ್ಲಿ ಪ್ರವಾದಿಯವರು(ಸ) ತಮ್ಮ ಚಿಕ್ಕಪ್ಪನ ಮಗ ಫಝ್ಲ್ ಬಿನ್ ಅಬ್ಬಾಸ್‌ರೊಂದಿಗೆ ಹೇಳುತ್ತಾರೆ-ನನ್ನನ್ನು ಕೊಂಡು ಹೋಗಿ ಮಸೀದಿಯ ಮಿಂಬರ್‌ನಲ್ಲಿ ಕುಳ್ಳಿರಿಸಿ. ನನಗೆ ಜನರೊಂದಿಗೆ ಸ್ವಲ್ಪ ವಿಷಯ ಹೇಳಲಿಕ್ಕಿದೆಯೆಂದು ಘೋಷಿಸಿರಿ. ಜನರು ಪ್ರವಾದಿವರ್ಯರ(ಸ) ಕಾಯಿಲೆಯಿಂದ ಮೊದಲೇ ಕಳವಳ ಗೊಂಡಿದ್ದರು. ಈ ಘೋಷಣೆ ಕೇಳಿ ಮದೀನಾದಿಂದ ಜನರೆಲ್ಲ ಬಂದು ಸೇರಿದ ಬಳಿಕ ಪ್ರವಾದಿ(ಸ) ಅಲ್ಲಾಹನನ್ನು ಸ್ತುತಿಸಿದ ನಂತರ ಹೀಗೆಂದರು:

ನಾನು ನಿಮ್ಮ ನಡುವಿನಿಂದ ಬೇಗನೆ ಹೋಗುವವನಿದ್ದೇನೆ. ಆದುದರಿಂದ ನಾನು ಯಾರ ಬೆನ್ನಿಗಾದರೂ ಛಡಿಯೇಟು ಬಾರಿಸಿದ್ದರೆ, ಮುಹಮ್ಮದ್‌ನ ಬೆನ್ನು ಸಿದ್ಧವಿದೆ. ಅವನು ಪ್ರತೀಕಾರ ತೀರಿಸಬಹುದು. ಯಾರನ್ನಾದರೂ ನಾನು ವಿನಾಕಾರಣ ಬೈದಿದ್ದರೆ, ನಾನು ಇಲ್ಲೇ ಇದ್ದೇನೆ. ಅದರ ಮುಯ್ಯಿ ತೀರಿಸಬಹುದು. ನನ್ನ ಬಳಿ ಯಾರದಾದರೂ ಹಣವಿದ್ದರೆ ಅವನು ನನ್ನಿಂದ ಅದನ್ನು ಪಡೆಯಲಿ ಮತ್ತು ನನ್ನಿಂದ ಹಗೆತನದ (ನಾನು ಮತ್ತೆ ನಷ್ಟ ಪರಿಹಾರ ಕೇಳಿಕೊಳ್ಳುವೆನೆಂಬ) ಭಯವಿರಿಸದಿರಲಿ ಏಕೆಂದರೆ ಇದು ನನ್ನ ಪ್ರವಾದಿತ್ವದ ಸ್ಥಾನಮಾನಕ್ಕೆ ವಿರುದ್ಧವಾಗಿದೆ. ನಿಮ್ಮ ಪೈಕಿ ನನಗೆ ಅತ್ಯಂತ ಪ್ರಿಯನು, ನನ್ನಿಂದ ಈ ಲೋಕದಲ್ಲೇ ತನ್ನ ಹಕ್ಕನ್ನು ಪಡೆಯುವವನಾಗಿದ್ದಾನೆ ಅಥವಾ ಮನಸಾರೆ ಅದನ್ನು ಕ್ಷಮಿಸುವವ ನಾಗಿದ್ದಾನೆ. ಆದರಿಂದಾಗಿ ನಾನು ನನ್ನ ಪ್ರಭುವಿನ ಬಳಿಗೆ ಸಂತೋಷದಿಂದ ಹೋಗಬಲ್ಲೆ.

ಪ್ರವಾದಿವರ್ಯರು(ಸ) ಮುಂದುವರಿಸುತ್ತಾ ಹೀಗೆಂದರು-ಜನರೇ ಯಾರಾದರೂ ಯಾರದಾದರೂ ಹಕ್ಕನ್ನು ಕಬಳಿಸಿದ್ದರೆ, ಅವನು ಹಕ್ಕುದಾರನಿಗೆ ಅದನ್ನು ಮರಳಿಸಲಿ. ಈ ಲೋಕದಲ್ಲಿ ನಿಂದ್ಯನಾಗುವ ನೆಂಬ ಚಿಂತೆ ಬಿಡಲಿ. ಅನ್ಯಥಾ ಪರಲೋಕದ ನಿಂದ್ಯತೆಗೆ ಸಿದ್ಧನಾಗಲಿ. ಅಲ್ಲಿನ ನಿಂದ್ಯತೆಯು ಇಹಲೋಕದ ನಿಂದ್ಯತೆಗಿಂತ ಕಠಿಣವೂ ತೀವ್ರತರವೂ ಆಗಿದೆ.

ಸತ್ಯ ಪ್ರಚಾರಕನ ಆರ್ಥಿಕ ಜೀವನ

(538) عَنْ سَهْلِ بْنِ سَعْدٍ قَالَ مَا رَأَى رَسُوْلُ اللّٰهِ صلى الله عليه وسلم
النَّقِيَّ مِنْ حِيْنِ ابْتَعَثَهُ اللّٰهُ حَتّٰى قَبَضَهُ اللّٰهُ، وَقَالَ مَا رَأَى رَسُوْلُ اللّٰهِ صلى الله عليه وسلم
مُنْخُلًا مِنْ حِيْنِ ابْتَعَثَهُ اللّٰهُ حَتّٰى قَبَضَهُ اللّٰهُ، قِيْلَ كَيْفَ كُنْتُمْ تَأْكُلُوْنَ الشَّعِيْرَ غَيْرَ مَنْخُوْلٍ؟
قَالَ نَطْحَنُهُ وَنَنْفُخُهُ فَيَطِيْرُ مَا طَارَ وَمَا بَقِيَ ثَرَّيْنَاهُ وَأَكَلْنَاهُ (بخاری)

ಹ. ಸಹ್ಲ್ ಬಿನ್ ಸಅದ್(ರ) ಹೇಳುತ್ತಾರೆ: ಪ್ರವಾದಿತ್ವದ ನಂತರ ಜೀವನದಾದ್ಯಂತ ಪ್ರವಾದಿಯವರು(ಸ) ಗೋಧಿ ಹಿಟ್ಟನ್ನು ನೋಡಿರಲಿಲ್ಲ. ಸಹ್ಲ್ ಹೇಳುತ್ತಾರೆ- ಅಲ್ಲಾಹನು ಅವರನ್ನು ಪ್ರವಾದಿಯಾಗಿ ಮಾಡಿದಂದಿನಿಂದ ಅವರ ಕೊನೆಯ ತನಕ ಸೋಸಿದ ಹಿಟ್ಟನ್ನು

ಅವರು ನೋಡಿರಲಿಲ್ಲ. ಗಾಳಿಸದ ಜೋಳದ ಹಿಟ್ಟನ್ನು ನೀವು ಹೇಗೆ ತಿನ್ನುತ್ತೀರಿ ಎಂದು ಕೇಳಲಾದಾಗ, ಸಹ್ಲ್ ಹೇಳಿದರು: ನಾವು ಜೋಳವನ್ನು ಹುಡಿ ಮಾಡಿ ಹಿಟ್ಟಿಗೆ ಊದುತ್ತಿದ್ದೆವು. ಸ್ವಲ್ಪ ಹೊಟ್ಟು ಹಾರಿ ಹೋಗುತ್ತಿತ್ತು. ಅನಂತರ ಅದನ್ನು ನಾದಿ ರೊಟ್ಟಿ ಮಾಡುತ್ತಿದ್ದೆವು. *[ಬುಖಾರಿ]*

ಟಿಪ್ಪಣಿ: ಪ್ರವಾದಿ(ಸ) ಮೈದಾ ಹಿಟ್ಟು ನೋಡಿರಲಿಲ್ಲವೇಕೆ, ಗಾಳಿಸಿದ ಹಿಟ್ಟಿನ ರೊಟ್ಟಿ ಏಕೆ ತಿನ್ನಲಿಲ್ಲ. ಅವರಿಗೆ ಗೋಧಿ ಸಿಗುತ್ತಿರಲಿಲ್ಲವೇ ಎಂಬ ಪ್ರಶ್ನೆಗಳು ಪ್ರಸ್ತುತ. ವಾಸ್ತವದಲ್ಲಿ ಅದೆಲ್ಲವೂ ಸಿಗುತ್ತಿತ್ತು. ಆದರೆ ಪ್ರವಾದಿ(ಸ) ಅದನ್ನು ಇಷ್ಟಪಡಲಿಲ್ಲ. ಸಮುದಾಯಕ್ಕೆ ಸರಳತೆಯನ್ನು ಕಲಿಸುವುದೇ ಅವರ ಉದ್ದೇಶವಾಗಿತ್ತು. ಆಡಂಬರ ಪ್ರಿಯತೆಯಿಂದ ಅವರನ್ನು ರಕ್ಷಿಸಬೇಕಾಗಿತ್ತು. ಅದಕ್ಕಾಗಿ ಅವರು ಹಾಗೆ ಮಾಡಿದರು. ಇಲ್ಲಿ ಇನ್ನೊಂದು ವಿಷಯವೂ ಗಮನಾರ್ಹವಾಗಿದೆ. ಧರ್ಮದ ಸೇವೆಗಾಗಿ ಎದ್ದು ನಿಂತವರಿಗೆ ಬಡತನ-ದಾರಿದ್ರ್ಯದ ಘಟ್ಟಗಳೂ ಬರುತ್ತವೆ. ಅವರು ತಮ್ಮ ಹಿಂದಿನ ಜೀವನದ ಮಟ್ಟವನ್ನು ಇಳಿಸಬೇಕಾಗುತ್ತದೆ. ಹಸಿವು ಬಾಯಾರಿಕೆ ಮತ್ತಿತರ ಪರೀಕ್ಷೆಗಳನ್ನು ಎದುರಿಸಬೇಕಾಗುತ್ತದೆ. ಪ್ರವಾದಿ(ಸ) ಮತ್ತು ಅವರ ಸಂಗಾತಿಗಳಿಗೆ ಅಲ್ಲಾಹನ ಈ ಕಾರ್ಯವಿಧಾನವು ಬದಲಾಗಿಲ್ಲದಿರುವಾಗ ಅಂತ್ಯ ದಿನದ ವರೆಗೆ ಯಾವುದೇ ಸತ್ಯ ಪ್ರಚಾರಕರ ಮಟ್ಟಿಗೂ ಅದು ಖಂಡಿತ ಬದಲಾಗದು.

---

(539) عَنِ النُّعْمَانِ بْنِ بَشِيْرٍ قَالَ: ذَكَرَ عُمَرُ بْنُ الْخَطَّابِ مَا أَصَابَ النَّاسُ مِنَ الدُّنْيَا، فَقَالَ لَقَدْ رَأَيْتُ رَسُوْلَ اللّٰهِ صلى الله عليه وسلم يَظَلُّ الْيَوْمَ يَلْتَوِىْ مَا يَجِدُ دَقَلًا يَمْلَأُ بِهِ بَطْنَهُ (مسلم)

ಹ. ನುಅ್‌ಮಾನ್ ಬಿನ್ ಬಶೀರ್(ರ) ಹೇಳುತ್ತಾರೆ: ಹ. ಉಮರ್(ರ) ಜನರ ಆರ್ಥಿಕ ಸುಸ್ಥಿತಿಯ ಬಗ್ಗೆ ಪ್ರಸ್ತಾಪಿಸುತ್ತಾ ಹೀಗೆಂದರು- ಇಂದು ನಮ್ಮಲ್ಲಿ ಸಂಪತ್ತು ಹೆಚ್ಚಾಗಿದೆ. ಆದರೆ ಹಿಂದೆ ಹಸಿವಿನಿಂದ ಬಳಲುತ್ತಿದ್ದಾಗ ಹೊಟ್ಟೆ ತುಂಬಿಸಲೆಂದು ಕಳಪೆ ಖರ್ಜೂರ ಕೂಡಾ ದಕ್ಕದ ಅವಸ್ಥೆಯಲ್ಲಿ ಪ್ರವಾದಿಯವರನ್ನು(ಸ) ನಾನು ಕಂಡಿದ್ದೇನೆ. *[ಮುಸ್ಲಿಮ್]*

ಟಿಪ್ಪಣಿ: ಈ ಪರಿಸ್ಥಿತಿಯು ಎಲ್ಲ ಕಾಲಗಳ ಸತ್ಯಪ್ರಚಾರಕರಿಗೆ ಬರಬಹುದಾಗಿದೆ.

---

(540) عَنْ أَبِىْ هُرَيْرَةَ قَالَ: إِنْ كَانَ يَمُرُّ بِآلِ رَسُوْلِ اللّٰهِ صلى الله عليه وسلم الْأَهِلَّةُ مَا يُسْرَجُ فِىْ بَيْتِ أَحَدٍ مِنْهُمْ سِرَاجٌ وَلَا يُوْقَدُ فِيْهِ نَارٌ، إِنْ وَجَدُوْا شَيْئًا ادَّهَنُوْا بِهِ (المنذرى جلد ٤)

ಹ. ಅಬೂ ಹುರೈರಾ(ರ) ಹೇಳುತ್ತಾರೆ- ಪ್ರವಾದಿಯವರ(ಸ) ಮನೆಯವರಿಗೆ, ದೀಪ ಹೊತ್ತಿಸದ, ಒಲೆ ಉರಿಸದ ಸ್ಥಿತಿಯಲ್ಲಿ ತಿಂಗಳುಗಳೇ ಕಳೆಯುತ್ತಿದ್ದುವು. ಎಲ್ಲಿಂದಾದರೂ ಸ್ವಲ್ಪ ಎಣ್ಣೆ ಲಭಿಸುತ್ತಿದ್ದರೆ ಅದನ್ನು ತಲೆಗೆ ಹಚ್ಚಿಕೊಳ್ಳುತ್ತಿದ್ದರು. *[ಅಲ್‌ಮುಂದಿರಿ]*

ಟಿಪ್ಪಣಿ: ಇದು ಇಸ್ಲಾಮ್ ಮತ್ತು ಕುಫ್ರ್‌ಗಳ ನಡುವೆ ಸಂಘರ್ಷ ನಡೆಯುತ್ತಿದ್ದ ಕಾಲದ ಸ್ಥಿತಿಯಾಗಿದೆ. ಆಗ ಕೇವಲ ಖರ್ಜೂರ ಮತ್ತು ನೀರಿನಿಂದ ದಿನದೂಡಬೇಕಾಗುತ್ತಿತ್ತು.

---

(541) عَنِ الشِّفَاءِ بِنْتِ عَبْدِ اللهِ قَالَتْ، اَتَيْتُ رَسُوْلَ اللهِ صلى الله عليه وسلم اَسْأَلُهُ، فَجَعَلَ يَعْتَذِرُ اِلَيَّ، وَاَنَا اَلُوْمُهُ، فَحَضَرَتِ الصَّلٰوةُ، فَخَرَجْتُ، فَدَخَلْتُ عَلٰى اِبْنَتِيْ وَهِيَ تَحْتَ شُرَحْبِيْلَ بْنِ حَسَنَةَ، فَوَجَدْتُ شُرَحْبِيْلَ فِي الْبَيْتِ، فَقُلْتُ قَدْ حَضَرَتِ الصَّلٰوةُ وَاَنْتَ فِي الْبَيْتِ؟ وَجَعَلْتُ اَلُوْمُهُ، فَقَالَ يَا خَالَةُ لَا تَلُوْمِيْنِيْ، فَاِنَّهُ كَانَ لِيْ ثَوْبٌ فَاسْتَعَارَهُ النَّبِيُّ صلى الله عليه وسلم، فَقُلْتُ بِاَبِيْ وَاُمِّيْ كُنْتُ اَلُوْمُهُ مُنْذُ الْيَوْمِ وَهٰذِهٖ حَالُهُ وَلَا اَشْعُرُ، فَقَالَ شُرَحْبِيْلُ مَا كَانَ اِلَّا دِرْعٌ رَقَعْنَاهُ (الترغيب والترهيب بحواله الطبراني والبيهقي)

ಶಿಫಾ ಬಿಂತಿ ಅಬ್ದುಲ್ಲಾ(ರ) ಹೇಳುತ್ತಾರೆ- ಏನಾದರೂ ಸಿಗಬಹುದೆಂದು ನಾನು ಪ್ರವಾದಿಯವರ(ಸ) ಬಳಿಗೆ ಹೋದೆ. ಆದರೆ ಪ್ರವಾದಿಯವರು(ಸ) ಏನೂ ಕೊಡಲಿಕ್ಕೆ ಸಾಧ್ಯವಾಗದ ಕಾರಣ ವಿಷಾದಿಸಿದರು. ಇದರಿಂದ ನನಗೆ ಅವರ ಮೇಲೆ ಕೋಪ ಬಂತು. ಅಷ್ಟರಲ್ಲಿ ಸಾಮೂಹಿಕ ನಮಾಝ್‌ನ ಸಮಯವಾಯಿತು. ಪ್ರವಾದಿ(ಸ) ಮಸೀದಿಗೆ ಹೋದರು. ನಾನು ಶುರ್ಜೀಲನ ಪತ್ನಿಯಾದ ನನ್ನ ಮಗಳ ಮನೆಗೆ ಹೋದೆ. ಶುರ್ಜೀಲ್ ಮನೆಯಲ್ಲೇ ಇದ್ದರು. ನಾನು ಕೇಳಿದೆ- ನಮಾಝ್ ಆರಂಭವಾಗಿದೆ? ನೀನು ಮನೆಯಲ್ಲೇ ಇರುವೆಯಾ? ಆಗ ಶುರ್ಜೀಲ್ ಹೇಳಿದರು- ಚೀ! ಅತ್ತೆ ನನ್ನನ್ನು ಜರೆಯಬೇಡಿರಿ. ನಮ್ಮ ಬಳಿ ಒಂದೇ ಬಟ್ಟೆಯಿತ್ತು. ಅದನ್ನು ಪ್ರವಾದಿ(ಸ) ಒತ್ತೆ ಪಡೆದುಕೊಂಡು ಹೋಗಿದ್ದಾರೆ. (ಪ್ರವಾದಿವರ್ಯರ ಬಳಿ ಬಟ್ಟೆಯಿರಲಿಲ್ಲ. ಅವರು ನಮಾಝ್‌ಗೆ ಹೇಗೆ ಹೋಗುವುದು. ಅದಕ್ಕಾಗಿ ನಾನು ಕೊಟ್ಟು ಬಿಟ್ಟೆ.) ಶಿಫಾ ಹೇಳುತ್ತಾರೆ: ನನ್ನ ತಂದೆ ತಾಯಿಗಳು ಪ್ರವಾದಿಯವರಿಗೆ(ಸ) ಅರ್ಪಿತ. ನಾನು ಇಂದು ಅವರ ಮೇಲೆ ರೇಗಿದೆ. ಅವರ ಈ ಅವಸ್ಥೆ ನನಗೆ ತಿಳಿದಿರಲಿಲ್ಲವೆಂದು ನಾನು ಮನಸ್ಸಿನಲ್ಲೇ ಹೇಳಿದೆ. ಶುರ್ಜೀಲ್ ಹೇಳುತ್ತಾರೆ- ನಮ್ಮ ಬಳಿ ಒಂದೇ ಬಟ್ಟೆಯಿತ್ತು. ಅದಕ್ಕೆ ನಾವು ತೇಪೆ ಹಚ್ಚಿದ್ದೆವು. *[ಅಲ್ ಮುಂದಿರೀ- ತಬ್ರಾನಿ ಮತ್ತು ಬೈಹಕಿಯಿಂದ]*

---

(542) عَنْ عَبْدِ اللّٰهِ بْنِ مَسْعُوْدٍ قَالَ، نَامَ رَسُوْلُ اللّٰهِ صلی الله علیه وسلم عَلٰی حَصِیْرٍ، فَقَامَ وَقَدْ اَثَّرَ فِیْ جَنْبِهٖ، فَقُلْنَا یَا رَسُوْلَ اللّٰهِ لَوِ اتَّخَذْنَا لَكَ وِطَاءً، فَقَالَ مَالِیْ وَلِلدُّنْیَا، مَا اَنَا فِی الدُّنْیَا اِلَّا كَرَاكِبٍ اِسْتَظَلَّ تَحْتَ شَجَرَةٍ ثُمَّ رَاحَ وَتَرَكَهَا (ترمذی)

ಹ. ಅಬ್ದುಲ್ಲಾ ಬಿನ್ ಮಸ್‌ವೂದ್ (ರ) ಹೇಳುತ್ತಾರೆ- ಪ್ರವಾದಿ(ಸ) ಒಂದು ಚಾಪೆಯಲ್ಲಿ ಮಲಗಿದರು. ಅವರು ಎದ್ದಾಗ ಚಾಪೆಯ ಅಚ್ಚು ಅವರ ಶರೀರದಲ್ಲಿ ಕಾಣಿಸಿದುವು. ನಾವು ಹೇಳಿದೆವು- ತಮಗಾಗಿ ಒಂದು ಹಾಸಿಗೆಯನ್ನು ನಾವು ತಯಾರಿಸಿದರೆ ಉತ್ತಮವಲ್ಲವೇ? ಪ್ರವಾದಿ(ಸ) ಹೇಳಿದರು- ನನಗೆ ಈ ಲೋಕದಿಂದ ಏನಾಗಬೇಕಾಗಿದೆ? ನಾನು ಈ ಲೋಕದಲ್ಲಿ, ಒಂದು ಮರದ ನೆರಳಿನಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿ ಅನಂತರ ಆ ಮರವನ್ನೂ ಅದರ ನೆರಳನ್ನೂ ಬಿಟ್ಟು ತನ್ನ ಗುರಿಯತ್ತ ಸಾಗುವ ಪ್ರಯಾಣಿಕನಂತಿದ್ದೇನೆ.

[ತಿರ್ಮಿದಿ]

ಟಿಪ್ಪಣಿ: ಇದು ಕುಫ್ರ್ ಮತ್ತು ಇಸ್ಲಾಮಿನ ಸಂಘರ್ಷವು ಕೊನೆಗೊಂಡ ಕಾಲದ ಘಟನೆ. ಅಜ್ಞಾನ ಮತ್ತು ಅದರ ವ್ಯವಸ್ಥೆಯ ದೀಪ ಆರಿ ಹೋಗಿದ್ದ ಕಾಲವಾಗಿತ್ತದು. ಇಸ್ಲಾಮ್ ಮತ್ತು ಮುಸ್ಲಿಮರ ಕೈಗೆ ಸಂಪೂರ್ಣ ಅಧಿಕಾರ ಸಿಕ್ಕಿತ್ತು ಮತ್ತು ಎಲ್ಲೆಲ್ಲೂ ಸುಭಿಕ್ಷೆ ಇತ್ತು.

---

(543) عَنْ اَنَسٍ قَالَ، حَجَّ النَّبِیُّ صلی الله علیه وسلم عَلٰی رَحْلٍ رَثٍّ وَقَطِیْفَةٍ خَلَقَةٍ تُسَاوِیْ اَرْبَعَةَ دَرَاهِمَ اَوْلَا تُسَاوِیْ (ترمذی)

ಹ. ಅನಸ್(ರ) ಹೇಳುತ್ತಾರೆ: ಪ್ರವಾದಿಯವರು(ಸ) ಹಳೆಯ ಜೀನಿನಲ್ಲಿ, ಹರಿದ ಚಾದರದಲ್ಲಿ ಹಜ್ಜ್ ಕರ್ಮ ನಿರ್ವಹಿಸಿದರು. ಅದರ ಬೆಲೆ ನಾಲ್ಕು ದಿರ್ಹಮ್ ಅಥವಾ ಅದಕ್ಕಿಂತಲೂ ಕಡಿಮೆಯಿರಬಹುದು.

[ತಿರ್ಮಿದಿ]

ಟಿಪ್ಪಣಿ: ಇದು ಪ್ರವಾದಿವರ್ಯರ(ಸ) ಕೊನೆಯ ಹಜ್ಜ್‌ನ (ಹಜ್ಜತುಲ್ ವಿದಾಅ್ ಹಿ.ಶ. 10) ಕಾಲದ ಸರಳತೆಯಾಗಿತ್ತು. ಅಂದು ಇಡೀ ದೇಶವು ಇಸ್ಲಾಮಿನ ಅಧೀನಕ್ಕೆ ಬಂದಾಗಿತ್ತು.

---

(544) عَنْ عَمْرِو بْنِ الْحَارِثِ قَالَ، مَا تَرَكَ رَسُوْلُ اللّٰهِ صلی اللہ علیہ وسلم عِنْدَ مَوْتِهٖ دِرْهَمًا وَلَا دِيْنَارًا وَلَا عَبْدًا وَلَا أَمَةً وَلَا شَيْئًا، إِلَّا بَغْلَتَهُ الْبَيْضَاءَ الَّتِيْ يَرْكَبُهَا، وَسِلَاحَهُ وَأَرْضًا جَعَلَهَا لِابْنِ السَّبِيْلِ صَدَقَةً (بخاری)

ಹ. ಅಮ್ರ್ ಬಿನ್ ಹಾರಿಸ್(ರ) ಹೇಳುತ್ತಾರೆ- ಪ್ರವಾದಿ(ಸ) ನಿಧನರಾದಾಗ, ದಿರ್ಹಮ್-ದೀನಾರ್‌ಗಳನ್ನಾಗಲಿ, ದಾಸ-ದಾಸಿಯರನ್ನಾಗಲಿ, ಇನ್ನಿತರ ಯಾವುದೇ ವಸ್ತುವನ್ನಾಗಲಿ ಬಿಟ್ಟು ಹೋಗಲಿಲ್ಲ- ಅವರು ಸವಾರಿ ಮಾಡುತ್ತಿದ್ದ ಬಿಳಿ ಹೇಸರಗತ್ತೆ, ಕೆಲವು ಆಯುಧಗಳು ಮತ್ತು ಸ್ವಲ್ಪ ಭೂಸೊತ್ತಿನ ಹೊರತು. ಅದನ್ನೂ ಅವರು ಅಲ್ಲಾಹನ ಮಾರ್ಗದಲ್ಲಿ ದಾನ ಮಾಡಿದ್ದರು. *[ಬುಖಾರಿ]*

ಧರ್ಮ ಸಂಸ್ಥಾಪನೆಯ ಮಾರ್ಗದಲ್ಲಿ

(545) عَنْ أَنَسٍ قَالَ قَالَ رَسُوْلُ اللّٰهِ صلی اللہ علیہ وسلم لَقَدْ أُخِفْتُ فِي اللّٰهِ وَمَا يُخَافُ أَحَدٌ، وَلَقَدْ أُوْذِيْتُ فِي اللّٰهِ وَمَا يُؤْذٰى أَحَدٌ، وَلَقَدْ أَتَتْ عَلَيَّ ثَلٰثُوْنَ مِنْ بَيْنِ يَوْمٍ وَلَيْلَةٍ وَمَا لِيْ وَلِبِلَالٍ طَعَامٌ يَأْكُلُهُ ذُوْ كَبِدٍ إِلَّا شَيْئٌ يُوَارِيْهِ إِبْطُ بِلَالٍ (ترمذی)

ಹ. ಅನಸ್(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು: ಸಂದೇಶ ಪ್ರಚಾರದ ಮಾರ್ಗದಲ್ಲಿ ನನ್ನನ್ನು ಎಷ್ಟು ಹೆದರಿಸಲಾಗಿತ್ತೋ ಅಷ್ಟು ಯಾರನ್ನೂ ಹೆದರಿಸಲಾಗಿಲ್ಲ. ಈ ಮಾರ್ಗದಲ್ಲಿ ನನಗೆಷ್ಟು ಕಿರುಕುಳ ನೀಡಲಾಗಿತ್ತೋ ಅಷ್ಟು ಯಾರಿಗೂ ನೀಡಲಾಗಿಲ್ಲ. ನನ್ನ ಮತ್ತು ನನ್ನ ಸಂಗಾತಿ ಬಿಲಾಲ್‌ರ ಬಳಿ ತಿನ್ನಲು ಏನೂ ಇಲ್ಲದ ಅವಸ್ಥೆಯಲ್ಲಿ ಮೂವತ್ತು ದಿನ ರಾತ್ರಿಗಳು ಕಳೆದಿವೆ- ಬಿಲಾಲ್ ತಮ್ಮ ಬಗಲಿನಲ್ಲಿ ಬಚ್ಚಿಟ್ಟ ಸ್ವಲ್ಪ ಆಹಾರ ಪದಾರ್ಥದ ಹೊರತು. *[ತಿರ್ಮಿದಿ]*

ಟಿಪ್ಪಣಿ: ಬಹುಶಃ ಇದು ಸಂದೇಶ ಪ್ರಚಾರಾರ್ಥ ಮಾಡಲಾದ ತಾಯಿಫ್‌ನ ಯಾತ್ರೆಯಾಗಿತ್ತು. ಅದರಲ್ಲಿ ತರತರದ ಸಂಕಷ್ಟಗಳು ಎದುರಾಗಿದ್ದುವು. ಈ ಯಾತ್ರೆಯಲ್ಲಿ ಕೆಲವು ಖರ್ಜೂರಗಳಲ್ಲದೆ ಬೇರಾವ ಆಹಾರ ಪದಾರ್ಥಗಳೂ ಇರಲಿಲ್ಲ.

---

(546) عَنْ كَعْبِ بْنِ عُجْرَةَ قَالَ، أَتَيْتُ النَّبِيَّ صلى الله عليه وسلم فَرَأَيْتُهُ مُتَغَيِّرًا،
فَقُلْتُ بِأَبِي أَنْتَ مَالِي أَرَاكَ مُتَغَيِّرًا؟ قَالَ مَا دَخَلَ جَوْفِي مَا يَدْخُلُ جَوْفَ ذَاتِ
كَبِدٍ مُنْذُ ثَلَاثٍ قَالَ فَذَهَبْتُ، فَإِذَا يَهُودِيٌّ يَسْقِيْ إِبِلًا لَهُ فَسَقَيْتُ لَهُ عَلَى كُلِّ
دَلْوٍ بِتَمْرَةٍ، فَجَمَعْتُ تَمْرًا، فَأَتَيْتُ بِهِ النَّبِيَّ صلى الله عليه وسلم، فَقَالَ مِنْ أَيْنَ
لَكَ يَا كَعْبُ؟ فَأَخْبَرْتُهُ، فَقَالَ النَّبِيُّ صلى الله عليه وسلم أَتُحِبُّنِي يَا كَعْبُ ؟
فَقُلْتُ بِأَبِي أَنْتَ نَعَمْ، قَالَ إِنَّ الْفَقْرَ أَسْرَعُ إِلَى مَنْ يُحِبُّنِي مِنَ السَّيْلِ إِلَى مَعَادِنِهِ،
وَإِنَّهُ سَيُصِيبُكَ بَلَاءٌ، فَأَعِدَّ لَهُ تِجْفَافًا (المنذری بحوالہ طبرانی)

ಕಅಬ್ ಬಿನ್ ಉಜ್ರ(ರ) ಹೇಳುತ್ತಾರೆ- ನಾನು ಪ್ರವಾದಿಯವರ(ಸ) ಬಳಿಗೆ ಹೋದೆ. ಅವರ ಮುಖ ಬಾಡಿತ್ತು. ನಾನು ಕೇಳಿದೆ: ನನ್ನ ತಂದೆ ತಾಯಿಗಳು ತಮಗೆ ಅರ್ಪಿತ, ತಮ್ಮ ಮುಖವೇಕೆ ಬಾಡಿದೆ? ಪ್ರವಾದಿ(ಸ) ಹೇಳಿದರು- ಮೂರು ದಿನಗಳಿಂದ ಹೊಟ್ಟೆಗೆ ಒಂದು ಕಾಳೂ ಹೋಗಿಲ್ಲ. (ಕಅಬ್ ಇದನ್ನು ಕೇಳಿ ಕಳವಳಗೊಂಡರು. ಪ್ರವಾದಿವರ್ಯರಿಗೆ(ಸ) ನೀಡಲು ಅವರ ಬಳಿ ಏನೂ ಇರಲಿಲ್ಲ) ಕಅಬ್ ಹೇಳುತ್ತಾರೆ- ಏನಾದರೂ ವ್ಯವಸ್ಥೆ ಮಾಡಲೆಂದು ನಾನು ಅಲ್ಲಿಂದ ಹೊರಟೆ. ಒಬ್ಬ ಯಹೂದಿ ತನ್ನ ಒಂಟೆಗಳಿಗೆ ಕುಡಿಸಲು ನೀರು ಸೇದುತ್ತಿದ್ದ. ನಾನು ಒಂದು ಕೊಡಕ್ಕೆ ಒಂದು ಖರ್ಜೂರ ಮಜೂರಿಯಂತೆ ನೀರು ಸೇದತೊಡಗಿದೆ. ಇದರಿಂದ ತುಂಬಾ ಖರ್ಜೂರ ಸಿಕ್ಕಿದುವು. ನಾನು ಅದನ್ನು ತೆಗೆದುಕೊಂಡು ಪ್ರವಾದಿ ವರ್ಯರ(ಸ) ಬಳಿಗೆ ಹೋಗಿ ಅದನ್ನು ಅವರ ಮುಂದಿರಿಸಿದೆ. ಪ್ರವಾದಿ(ಸ) ಕೇಳಿದರು- ಕಅಬ್! ಇದೆಲ್ಲಿಂದ ದೊರೆಯಿತು? ನಾನು ನಡೆದ ಘಟನೆಯನ್ನು ವಿವರಿಸಿದೆ. ಪ್ರವಾದಿ(ಸ) ಕೇಳಿದರು - ನಿಮಗೆ ನನ್ನೊಂದಿಗೆ ಪ್ರೀತಿಯಿದೆಯೇ? ನಾನು ಹೇಳಿದೆ- ನನ್ನ ತಂದೆ ತಾಯಿಗಳು ತಮಗೆ ಅರ್ಪಿತ. ನಾನು ತಮ್ಮನ್ನು ಪ್ರೀತಿಸುತ್ತೇನೆ. ಆಗ ಪ್ರವಾದಿ(ಸ) ಹೇಳಿದರು- ಯಾರು ನನ್ನನ್ನು ಪ್ರೀತಿಸುತ್ತಾರೋ ಅವರ ಬಳಿಗೆ ಬಡತನವು ನೆರೆ ನೀರು ತಗ್ಗು ಪ್ರದೇಶಗಳಿಗೆ ಹರಿಯುವಂತೆ ರಭಸದಿಂದ ಬರುತ್ತದೆ. ಓ ಕಅಬ್! ಅಗ್ನಿ ಪರೀಕ್ಷೆಗಳನ್ನು ನೀವು ಎದುರಿಸ ಬೇಕಾದೀತು. ಆದುದರಿಂದ ಬಡತನವನ್ನು ಎದುರಿಸಲು ಮತ್ತು ಪರೀಕ್ಷೆಯ ವೇಳೆ ಸ್ಥಿರಚಿತ್ತ ರಾಗಿರಲು ಅಸ್ತ್ರಗಳನ್ನು ಸಿದ್ಧಪಡಿಸಿರಿ. *[ಅಲ್‌ಮುಂದಿರೀ- ತಬ್ರಾನಿಯಿಂದ]*

ಟಿಪ್ಪಣಿ: ಪ್ರವಾದಿ(ಸ) ಅಸ್ತ್ರಗಳನ್ನು ಸಿದ್ಧಪಡಿಸಿರಿ ಎಂದಿರುವುದು, ಅಲ್ಲಾಹನ ಪ್ರೇಮ, ಪರಲೋಕದ ಚಿಂತೆ, ವಿಚಾರಣೆಯ ದಿನದ ಮತ್ತು ನರಕಾಗ್ನಿಯ ಭಯ, ಸ್ವರ್ಗದ ಆಸೆ ಮತ್ತು ಕರುಣಾಳುವಾದ ಅಲ್ಲಾಹನನ್ನು ಭೇಟಿಯಾಗಲಿಕ್ಕಿದೆಯೆಂಬ ತೀವ್ರ ಅಭಿಲಾಷೆ ಇತ್ಯಾದಿಗಳಾಗಿವೆ.

ನವ ಮುಸ್ಲಿಮರಿಗೆ ಕಲಿಸಿದ ದುಆ

(547) عَنْ اَبِيْ مَالِكٍ نِ الْاَشْجَعِيِّ عَنْ اَبِيْهِ قَالَ كَانَ رَجُلٌ اِذَا اَسْلَمَ عَلَّمَهُ النَّبِيُّ صلى الله عليه وسلم الصَّلٰوةَ ثُمَّ اَمَرَهُ اَنْ يَدْعُوَ بِهٰؤُلَاءِ الْكَلِمَاتِ اَللّٰهُمَّ اغْفِرْ لِيْ وَارْحَمْنِيْ وَاهْدِنِيْ وَعَافِنِيْ وَارْزُقْنِيْ (مسلم)

ಅಬೂ ಮಾಲಿಕ್ ಅಶ್‌ಜಈ(ರ) ತಮ್ಮ ತಂದೆಯವರಿಂದ ಹೀಗೆ ಉಲ್ಲೇಖಿಸುತ್ತಾರೆ- ಪ್ರವಾದಿಯವರು(ಸ) ಹೊಸತಾಗಿ ಇಸ್ಲಾಮ್ ಸ್ವೀಕರಿಸಿದವರಿಗೆ ನಮಾಝ್ ಕಲಿಸಿಕೊಡುತ್ತಿದ್ದರು. ತರುವಾಯ ಈ ದುಆ ಹೇಳಿ ಕೊಡುತ್ತಿದ್ದರು: ಅಲ್ಲಾಹುಮ್ಮಗ್‌ಫಿರ್‌ಲೀ, ವರ್‌ಹಮ್‌ನೀ, ವಹ್ದಿನೀ ವಆಫಿನೀ ವರ್‌ಝುಕ್‌ನೀ (ಅರ್ಥಾತ್: ಓ ಅಲ್ಲಾಹ್! ನನ್ನ ಪಾಪಗಳನ್ನು ಕ್ಷಮಿಸು. ನನ್ನ ಮೇಲೆ ಕರುಣೆ ತೋರು. ನನ್ನನ್ನು ನೇರ ಮಾರ್ಗದಲ್ಲಿ ನಡೆಸು. ನನಗೆ ಧಾರ್ಮಿಕ, ನೈತಿಕ, ಶಾರೀರಿಕ ಶಕ್ತಿ ನೀಡು ಮತ್ತು ನನಗೆ ಜೀವನಾಧಾರವನ್ನು ಕರುಣಿಸು.)

[ಮುಸ್ಲಿಮ್]

ಮಲಗುವಾಗಿನ ದುಆ

(548) عَنْ اَبِيْ هُرَيْرَةَ .... ثُمَّ يَقُوْلُ بِاسْمِكَ رَبِّيْ وَضَعْتُ جَنْبِيْ وَبِكَ اَرْفَعُهُ، اِنْ اَمْسَكْتَ نَفْسِيْ فَارْحَمْهَا. وَاِنْ اَرْسَلْتَهَا فَاحْفَظْهَا بِمَا تَحْفَظُ بِهٖ عِبَادَكَ الصَّالِحِيْنَ (بخاری)

ಹ. ಅಬೂ ಹುರೈರಾ(ರ) ಹೇಳುತ್ತಾರೆ (ಪ್ರವಾದಿ(ಸ) ಅವರು ರಾತ್ರೆ ಮಲಗುವಾಗ ತಮ್ಮ ಬಲ ಹಸ್ತವನ್ನು ತಮ್ಮ ಕೆನ್ನೆಯಡಿಯಲ್ಲಿಡುತ್ತಿದ್ದರು)... ಮತ್ತು ಹೀಗೆ ಹೇಳುತ್ತಿದ್ದರು: ನನ್ನ ಪ್ರಭೂ! ನಿನ್ನ ನಾಮದೊಂದಿಗೆ ನಾನು ನನ್ನ ಪಾರ್ಶ್ವವನ್ನು ಹಾಸಿಗೆಯಲ್ಲಿರಿಸಿದೆ.

ನಿನ್ನ ನಾಮದಿಂದಲೇ ಅದನ್ನು ಹಾಸಿಗೆಯಿಂದ ಎತ್ತುವೆನು. ನಾನು ಮಲಗಿರುವಾಗ ನೀನು ನನ್ನ ಪ್ರಾಣ ತೆಗೆಯುವುದಾದರೆ ಅದರ ಮೇಲೆ ಕೃಪೆ ತೋರು. ಇನ್ನು ಜೀವಿಸಲು ಇನ್ನಷ್ಟು ಕಾಲಾವಕಾಶ ನೀಡುವುದಾದರೆ ನಿನ್ನ ಸಜ್ಜನ ದಾಸರನ್ನು ರಕ್ಷಿಸುವಂತೆ ನನ್ನನ್ನು ರಕ್ಷಿಸು. (ಅರ್ಥಾತ್, ನಾನು ಬೆಳಿಗ್ಗೆ ಜೀವಿಸಲಿಕ್ಕಾಗಿ ನಿದ್ದೆಯಿಂದ ಎಚ್ಚರಗೊಂಡರೆ ನನ್ನನ್ನು ರಕ್ಷಣೆ ಯಿಂದ ವಂಚಿತಗೊಳಿಸಬೇಡ. ಮಾನವನು ನಿನ್ನ ರಕ್ಷಣೆ ಮತ್ತು ಕೃಪೆಯಿಂದ ವಂಚಿತ ನಾಗುವಂತಹ ಯಾವುದೇ ಕಾರ್ಯವನ್ನು ನನ್ನಿಂದ ಮಾಡಿಸಬೇಡ ಮತ್ತು ನಿನ್ನ ಸಜ್ಜನ ದಾಸರಿಗೆ ದಯಪಾಲಿಸಿದಂತಹ ಕೆಲಸಗಳನ್ನು ಮಾಡಲು ನನ್ನನ್ನು ಅನುಗ್ರಹಿಸು.)

[ಬುಖಾರಿ]

ಪ್ರವಾದಿಯವರ(ಸ) ಅಭಯ ಯಾಚನೆ

(549) عَنْ اَنَسٍ قَالَ، كَانَ النَّبِيُّ صلى الله عليه وسلم يَقُوْلُ اَللّٰهُمَّ اِنِّيْ اَعُوْذُ بِكَ مِنَ الْهَمِّ وَالْحُزْنِ، وَالْعَجْزِ وَالْكَسَلِ وَضَلَعِ الدَّيْنِ وَغَلَبَةِ الرِّجَالِ (بخاری ومسلم)

ಹ. ಅನಸ್(ರ) ಹೇಳುತ್ತಾರೆ- ಪ್ರವಾದಿ(ಸ) ಈ ರೀತಿ ಪ್ರಾರ್ಥಿಸುತ್ತಿದ್ದರು: 'ಅಲ್ಲಾಹುಮ್ಮ ಇನ್ನೀ ಅಊದುಬಿಕ ಮಿನಲ್ ಹಮ್ಮಿ ವಲ್ ಹಝುನಿ ವಲ್‌ಅಜ್ಝಿ ವಲ್ ಕಸಲಿ, ವದಲಯಿದ್ದೈನಿ ವಗಲಬತಿರ್‍ರಿಜಾಲ್.'

(ಅರ್ಥಾತ್: ಓ ಅಲ್ಲಾಹ್! ನಾನು ಕಳವಳ, ದುಃಖ, ಅವಮಾನ', ಆಲಸ್ಯ, ಸಾಲದ ಹೊರೆ ಮತ್ತು ದುಷ್ಟರ ಆಕ್ರಮಣದಿಂದ ನಿನ್ನ ಅಭಯ ಯಾಚಿಸುತ್ತೇನೆ.)

[ಬುಖಾರಿ, ಮುಸ್ಲಿಮ್]

ಟಿಪ್ಪಣಿ: ಅಲ್ಲಾಹನ ಅಭಯ ಯಾಚಿಸುವುದೆಂದರೆ, ದಾಸನಿಗೆ ತನ್ನ ದೌರ್ಬಲ್ಯ ಮತ್ತು ಅಸಹಾಯಕತೆಯ ಪ್ರಜ್ಞೆಯಿದೆ. ತಾನು ದುರ್ಬಲನಾಗಿರುವುದರಿಂದ ಶಕ್ತಿವಂತ, ಒಡೆಯ ಮತ್ತು ಪ್ರತಾಪಿ ಯಾದ ಅಲ್ಲಾಹನೊಡನೆ ಬರಲಿರುವ ಸಂಕಷ್ಟಗಳಿಂದ ತನ್ನನ್ನು ಪಾರು ಮಾಡಬೇಕೆಂದು ಬಿನ್ನವಿಸುತ್ತಾನೆ. ಕಷ್ಟ-ಕಾರ್ಪಣ್ಯಗಳುಂಟಾಗುವಾಗಿನ ದುಗುಡ, ಅವಮಾನ, ಆಲಸ್ಯ ಇತ್ಯಾದಿಗಳಿಂದ ರಕ್ಷಿಸುವಂತೆ ಬೇಡುತ್ತಾನೆ. ಅದೇ ರೀತಿ ಸಾಲದ ಹೊರೆ ಮತ್ತು ದುಷ್ಟರ ಆಕ್ರಮಣದಿಂದ ಪಾರುಗೊಳಿಸುವಂತೆಯೂ ಕೋರುತ್ತಾನೆ.

---

(550) عَنِ ابْنِ عُمَرَ اَنَّ رَجُلاً مِنَ الْحَبَشَةِ اَتَى النَّبِيَّ صلی اللہ علیہ وسلم فَقَالَ يَا رَسُوْلَ اللّٰهِ صلی اللہ علیہ وسلم فُضِّلْتُمْ عَلَيْنَا بِالْاَلْوَانِ وَالنُّبُوَّةِ ، اَفَرَأَيْتَ اِنْ آمَنْتُ بِمِثْلِ مَا آمَنْتَ بِهٖ وَعَمِلْتُ بِمِثْلِ مَا عَمِلْتَ بِهٖ اِنِّيْ لَكَائِنٌ مَعَكَ فِي الْجَنَّةِ؟ فَقَالَ النَّبِيُّ صلی اللہ علیہ وسلم مَنْ قَالَ لَا اِلٰهَ اِلَّا اللّٰهُ كَانَ لَهٗ بِهَا عَهْدٌ عِنْدَ اللّٰهِ .... فَقَالَ الْحَبَشِيُّ يَا رَسُوْلَ اللّٰهِ وَهَلْ تَرٰى عَيْنِيْ فِي الْجَنَّةِ مِثْلَ مَا تَرٰى عَيْنُكَ؟ فَقَالَ النَّبِيُّ صلی اللہ علیہ وسلم نَعَمْ ، فَبَكَى الْحَبَشِيُّ حَتّٰى فَاضَتْ رُوْحُهٗ ، قَالَ ابْنُ عُمَرَ فَاَنَا رَأَيْتُ رَسُوْلَ اللّٰهِ صلی اللہ علیہ وسلم يُدْلِيْهِ فِيْ حُفْرَتِهٖ (المنذری بحوالہ طبرانی)

ಹ. ಇಬ್ನು ಉಮರ್(ರ) ಹೇಳುತ್ತಾರೆ- ಇಥಿಯೋಪಿಯದವನೊಬ್ಬ ಪ್ರವಾದಿಯವರ(ಸ) ಬಳಿಗೆ ಬಂದು ಹೀಗೆ ಹೇಳಿದನು- ಅಲ್ಲಾಹನ ಸಂದೇಶವಾಹಕರೇ! ಅಲ್ಲಾಹನು ತಮಗೆ ನಮ್ಮ ಮೇಲೆ ವರ್ಣ ಮತ್ತು ಪ್ರವಾದಿತ್ವದಲ್ಲಿ ಶ್ರೇಷ್ಠತೆಯನ್ನು ದಯಪಾಲಿಸಿರುವನು. ಒಂದು ವೇಳೆ ನಾನು ತಾವು ವಿಶ್ವಾಸವಿರಿಸಿದ ವಸ್ತುಗಳಲ್ಲಿ ವಿಶ್ವಾಸವಿರಿಸಿದರೆ ಮತ್ತು ತಾವು ಮಾಡುತ್ತಿರುವಂತಹ ಕರ್ಮಗಳನ್ನು ನಾನೂ ಮಾಡಿದರೆ ನಾನು ತಮ್ಮೊಂದಿಗೆ ಸ್ವರ್ಗದಲ್ಲಿರುವೆನೇ? ಪ್ರವಾದಿ(ಸ) ಹೇಳಿದರು: ಯಾರು 'ಲಾ ಇಲಾಹ ಇಲ್ಲಲ್ಲಾಹ್' (ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲ) ಎಂದು ಹೇಳುವನೋ ಅವನಿಗೆ ಅಲ್ಲಾಹನ ಬಳಿ ಸ್ವರ್ಗದ ವಾಗ್ದಾನವಿದೆ. ಆ ವ್ಯಕ್ತಿ ಪುನಃ ಹೇಳಿದ- ಅಲ್ಲಾಹನ ಸಂದೇಶವಾಹಕರೇ! ಸ್ವರ್ಗದಲ್ಲಿ ತಮ್ಮ ಕಣ್ಣುಗಳು ಯಾವುದನ್ನು ನೋಡುವವೋ ಅದನ್ನೇ ನನ್ನ ಕಣ್ಣುಗಳೂ ಕಾಣಬಲ್ಲವೇ? ಪ್ರವಾದಿ(ಸ) ಹೌದೆಂದರು. ಆಗ ಆ ವ್ಯಕ್ತಿ ಅಳತೊಡಗಿದ. ಹೀಗೆ ಅಳುತ್ತಾ ಇರುವಂತೆಯೇ ಅವನ ಪ್ರಾಣ ಪಕ್ಷಿ ಹಾರಿ ಹೋಯಿತು. ಹ. ಇಬ್ನು ಉಮರ್(ರ) ಹೇಳುತ್ತಾರೆ- ಅವನ ಮೃತ ದೇಹವನ್ನು ಪ್ರವಾದಿವರ್ಯರೇ(ಸ) ಗೋರಿಯಲ್ಲಿಡುವುದನ್ನು ನಾನು ಕಂಡಿದ್ದೇನೆ.

[ಅಲ್ ಮುಂದಿರಿ- ತಬ್ರಾನಿಯಿಂದ]

(ಸಮಾಪ್ತಿ)